ಶ್ರೀನಾಥರ್ಸಿದ್ಧರಾತ್ಯಂತಿಕಸುಖಪದವೀಸಿದ್ಧಿಯಂಮಾೞ್ಕೆಮ್ಮೊಳ್ ॥ 2

ಮ ॥ ಮನಮಂಕಟ್ಟಿಗುಣಂಗಳಿಂತುಳಿದುಪಂಚಾಚಾರದಿಂಪಂಚಬಾ ।
ಣನಬಾಹಾಬಲಮಂಸಮಗ್ರತರಶಿಕ್ಷಾನುಗ್ರಹಪ್ರಾಭವೆ ॥
ತ್ತನವದ್ಯರ್ದ್ದಯೆಗೆಯ್ವರಕ್ಕೆದಯೆಯಿಂಭವ್ಯಾಳಿಗುದ್ವೃತ್ತಪೋ ।
ಧನವಿದ್ಯಾಧನದಿಂಮಹಾಮಹಿಮೆವೆತ್ತಾಚಾರ್ಯರಾಚಾರಮಂ ॥ 3

ಶಾ ॥ ಪಾತ್ರೀಭೂತವಿನೇಯಸಂತತಿಗೆಸಮ್ಯಗ್ದರ್ಶನಜ್ಞಾನಚಾ ।
ರಿತ್ರಂಗಳ್ನಿಜಮಪ್ಪನಂತಸುಖಮಂರಾಗಾದಿಗಳ್ಜನ್ಮಮೃ ॥
ತ್ಯುತ್ರಾಸಂಗಳನೀವುವೆಂದುಸದಸದ್ಭೇದಂಗಳಂಪೇಳ್ವವರ್ ।
ಸೂತ್ರಪ್ರಾಯರಜೇಯರೀಗೆಮಗುಪಾಧ್ಯಾಯರ್ಸ್ವಬೋಧೋಪಾಯಮಂ ॥

ಮ ॥ ತಪಮಂಶೀಲಮನವ್ರತೆಯುದ್ಧಕರಣಗ್ರಾಮಂಗಳಂಗೆಲ್ದು ಚಿ ।
ತ್ತಪದೈಕಾತಿಥಿಮಾಡಿಶಾಂತರಸಮಂಕಾರುಣ್ಯಮಂತಾಳ್ದಿ ತ ॥
ತ್ವಪರಿಜ್ಞಾನಮನಪ್ರಮತ್ತಚರಿತಪ್ರಸ್ಥಾನಮಂಸಾರ್ದ್ದಸಾ ।
ಧುಪದಂಗಳ್ನಮಗೀಗೆಸಾಧುಪದಮಂಕೈವಲ್ಯಮಾಂಗಲ್ಯಮಂ ॥ 5

ಪರಮಬ್ರಹ್ಮಶರೀರಪುಷ್ಟಿಜನಿತಾಂತರ್ದ್ದರ್ಪ್ಪಿಷ್ಟಿಕೈವಲ್ಯಜೋ ।
ಧರಮಾಮೌಕ್ತಿಕಹಾರಯಷ್ಟಿಕವಿತಾವಲ್ಲೀಸುಧಾವೃಷ್ಟಿಸ ॥
ರ್ವ್ವರಸೋತ್ಪಾದನವೀನಸೃಷ್ಟಿಬುಧಸಷ್ಪಾರ್ಕೃಷ್ಟಿಸರ್ವ್ವಾಂಗಸುಂ ।
ದರಿವಿದ್ಯಾನಟನಾಟಕಂನಲಿಗೆಮತ್ಕಾವ್ಯಸ್ಥಲೀರಂಗದೊಳ್ ॥ 6

ಕಂ ॥ ಅನಘರನುಬದ್ಧಕೇವಳ ।
ರೆನಿಸಿದಗೌತಮಸುಧರ್ಮ್ಮಜಂಬೂಗಣಭೃ ॥
ದ್ವಿನುತರೆಮಗೀಗೆಶಾಶ್ವತ ।
ಧನಮೆನಿಸಿದವಿಶ್ರುತಶ್ರುತಾರಾಧನಮಂ ॥ 7

ಶ್ರುತಕೇವಳಿವಿಷ್ಣುವ್ರತಿ ।
ಯುತಿಚಲನಂನಂದಿಪರಮಮುನಿಪದಮಪರಾ ॥
ಜಿತಪಾದಂಗೋವರ್ದ್ಧನ ।
ಯತಿಶ್ರಮಂಭದ್ರಬಾಹುಚರಣಂಶರಣಂ ॥ 8

ದಶಪೂರ್ವ್ವಧರರುಮೇಶಾ ।
ದಶಾಂಗಧಾರಿಗಳುಮೆನಿಪಮುನಿಪದನಖದೀ ॥
ಪ್ತಿಶರಚ್ಚಂದ್ರಿಕೆದರ್ಶ್ಶನ ।
ವಿಶುದ್ಧಿಯಂಮಾಡುಗಘತಮೋವಿಘಟನಮಂ ॥ 9

ಭೂತಬಲಿಪುಷ್ಪದಂತ ।
ಖ್ಯಾತರಜಿನಸೇನವೀರಸೇನಮುನೀಂದ್ರ ॥
ಖ್ಯಾತರಸಮಂತಭದ್ರ ।
ಖ್ಯಾತರಪದಪಾಂಸುಕಿಡಿಸುಗಘಪಾಂಸುಗಳಂ ॥ 10

ಕವಿಪರಮೇಷ್ಠಿಗಳಗುಣ ।
ಸ್ತವನಂಗಳ್ಪೂಜ್ಯಪಾದಯತಿಪತಿಯಗುಣ ॥
ಸ್ತವನಂಗಳೊರ್ಮ್ಮನಾಲಗೆ ।
ಗೆವಂದಮಾನವನವಾಗ್ಮಲಂನಿಂದಪುದೇ ॥ 11

ಚತುರಂಗುಳಚಾರಣಱು|
ದ್ಧಿತಮಗೆಸಮನಿಸಿದುದೆನಿಪತಪದುನ್ನತಿಯಿಂ ||
ಶ್ರುತದಿಂಭೂಮಂಡಲವಿ |
ಶ್ರುತರೆನಿಸಿದರಲ್ತೆಕೊಂಡಕುಂದಾಚಾರ್ಯರ್ || 12

ಅಕಳಂಕಚಂದ್ರವಾಕ್ಚಂ|
ದ್ರಿಕೆಯಿಂಧವಳಿಸೆದಿಗಂಬರಂಶ್ರೀಭವ್ಯ ||
ಪ್ರಕರಚಕೋರಂನಲಿದುದು |
ಮುಕುಳಿತವಾಯ್ತನ್ಯವಾದಿವದನಾಂಭೋಜಂ || 13

ಉ || ಚಾರುಚರಿತ್ರತೀರ್ತ್ಥಜಲದಿಂದಘಕರ್ದ್ದಮಮಂಕಳಲ್ಚಿಸಂ |
ಸಾರಸಮುದ್ರಮಂತ್ರಣಪಯಃಕಣದಿಂದಿಳಿಕೆಯ್ದುದಿವ್ಯಭಾ ||
ಷಾರಸಪೂರ್ಣ್ನಮಂಶ್ರುತಪಯೋಧಿಯನೀಸಿದವರ್ದ್ಧಮಾನಭ |
ಟ್ಟಾರಕರಂವಚಸ್ಸುರಭಿಚಂದನಚರ್ಚ್ಚೆಗಳಿಂದಮರ್ಚ್ಚಿಪೆಂ || 14

ಕಂ || ವಿಮಲಶ್ರುತಂಬಹುಕ್ಕೈವ |
ಲ್ಯವೆಂಬಸಂಕಲ್ಪವನಿತೆನೇರ್ಗ್ಗರಿಯಾಂ ವಿ ||
ಶ್ವಮನಱಿವಮಹಿಮೆಯಿಂವ |
ರ್ದ್ಧಮಾನಜಿನಪತಿಗೆವರ್ದ್ಧಮಾನಮುನೀಂದ್ರಂ || 15

ಮ || ಪುರಿದಂತಾದುವುಪುಷ್ಪವಿನಂಬುವಿನಿವಿಲ್ಲಿಸ್ಸಾರವಾದತ್ತುಸೀ |
ಕರಿವ್ರೋದತ್ತುಮೃಣಾಳತಂತುರಚಿತಜ್ಯಾಲೇಖೆಮೀನಧ್ವಜಂ ||
ಕೊರಗಿತ್ತಗ್ಗದಕಂತುಸೀದಗಱಿಯಂತಾದಂತಪೋರಾಜ್ಯತ |
ತ್ಪರಯೋಗೀಶ್ವರಬಾಲಚಂದ್ರಮುನಿನಾಥಜ್ಞಾನನೇತ್ರಾಗ್ನಿಯಿಂ || 16

ಮ|ಸ್ರ|| ಅರವಿಂದಸ್ಮೇರಮಾಸ್ಯಂತಿಳಿಪೆಹೃದಯಸಂಶುದ್ಧಿಯಂಮಾನಸಂಶಾಂ |
ತರಸಾಧೀನಂಸಮಾಧಾನಮನಱಿಪೆತಪಸ್ತಪ್ತಮುತ್ತಪ್ತಕಾರ್ತ್ತ ||
ಸ್ವರಶೋಭಾಲೀಲೆಯಂಪಾಲಿಸೆತನುನಯನಂಕಾಳ್ಪುರಂಮಾಡೆಕಾರು |
ಣ್ಯರಸಸ್ರೋತಂಗಳಿಂಲೋಕಮನೆಱಗಿಸಿದಂಬಾಲಚಂದ್ರವ್ರತೀಂದ್ರಂ|| 17

ಕಂ || ಪ್ರಚುರಕಲಾಸ್ವಿತರಕುಟಿಲ |
ರಚಕಂಚಲಶ್ಯರ್ದ್ಧಪಕ್ಷವೃತ್ತದೋರ್ದ್ದೋಷಾ ||
ಪಚಯಪ್ರಕಾಶರೆನೆಬಾ |
ಲಚಂದ್ರಮುನಿವರಪ್ರಭಾವಮೇನಚ್ಚರಿಯೋ || 18

ಕಂ ॥ ಮೂವತ್ತಾಱುಂಗುಣದಿಂ ।
ಭಾವಜನಂಕಟ್ಟಿ ವೆಟ್ಟಿವೇಳದವೃಷದಿಂ ॥
ಭಾವಿಪೊಡೆಮೇಘಚಂದ್ರ ।
ತ್ರೈವಿದ್ಯರದೆಂತುಶಾಂತರಸಮಂತಳೆದರ್ ॥ 19

ಮ ॥ ಮುನಿನಾಥಂದಶಧರ್ಮ್ಮಧಾರಿದೃಢಷಟ್ತ್ರಿಂಶದ್ಗುಣಂದಿವ್ಯಬೋ ।
ಧನಿಧಾನಂನಿನಗಿಕ್ಷುಚಾಪಮಳಿನೀಜ್ಯಾಸೂತ್ರಮೋರೊಂದೆಪೂ ॥
ವಿನಬಾಣಂಗಳುಮಯ್ದೆಹೀನನಧಿಕಂಗಾಕ್ಷೇಪಮಂಮಾಳ್ಪುದಾ ।
ವನಯುಂದರ್ಪ್ಪಕಮೇಘಚಂದ್ರಮುನಿಯೊಳ್ಮಾಣ್ನಿಂನದೋರ್ದ್ದರ್ಪ್ಪಮಂ ॥ 20

ಕಂ ॥ ಅಭಿನವಗಣಧರರೆನಿಪ ।
ವೈಭಾಷೆಯಂತಾಳ್ದಿಕುಮತಮಂತೂಳ್ದಿದರಂ ॥
ಶುಭಕೀರ್ತ್ತಿದೇವರಂಸಕ ।
ಲಭುವನಜನಪೂಜ್ಯಪಾದರೆಂನದರೊಳರೇ ॥ 21

ಚ ॥ ಮದನನದರ್ಪ್ಪಮಂಕಿಡಿಸಿಮೋಣದೆತಮ್ಮತಪಃಪ್ರಭಾವದಿಂ ।
ಮದಯುತರಪ್ಪವಾದಿಗಳದರ್ಪ್ಪಮನೋವದಿದಿರ್ಚ್ಛಿತತ್ಸಭಾ ॥
ಸದರಭಿವರ್ಣ್ಣಿಸಂತುತಪದಿಂಶ್ರುತದಿಂಭುವನಪ್ರಸಿದ್ಧಿಗಾ ।
ಸ್ಪದರೆನಿಸಿರ್ದ್ದರೆಂಬೆನಱಿಯೆಂಪೊಗಳಲ್ಶುಭಕೀರ್ತ್ತಿದೇವರಂ ॥ 22

ಉ ॥ ಕೋಡಿಡೆವಾಸುಪೂಜ್ಯಮುನಿಯೊಳ್ಮರುಳಾದಪೆಚಿತ್ತಜನ್ಮನೀಂ ।
ನೋಡಿನಿಜಾಪ್ತವರ್ಗ್ಗದಳವಂಮಳಯಾನಿಳನಸ್ಥಿರಂರಣ ॥
ಕ್ರೀಡೆಗೆನಿಲ್ವನೇಪರಭೃತಂನಿನಗಪ್ಪನೆಯುದ್ಧದೊಳ್ಬಿಗು ।
ತ್ತೋಡದೆಮಾಣ್ಬನೇಮೃಗಧರಂಮಧುಸಂಪ್ರಥನಕ್ಕೆಯೋಗ್ಯನೇ ॥ 23

ಶಾ ॥ ಆನ್ವೋಂದಾದಿಕಥಾತ್ರಯಪ್ರವಣದೊಳ್ವಿದ್ವಜ್ಜನಂಮೆಚ್ಚೆವಿ ।
ದ್ಯಾವಷ್ಟಂಭಮನಪ್ಪುಕೆಯ್ದುಪರವಾದಿಕ್ಷೋಣಿಭೃತ್ಪಕ್ಷಮಂ ॥
ದೇವೇಂದ್ರಂಕಡಿವಂದದಿಂದೆಕಡಿದುಂಸ್ಯಾದ್ವಾದದಿವ್ಯಾಸ್ತ್ರದಿಂ ।
ತ್ರೈವಿದ್ಯಶ್ರುತಕೀರ್ತ್ತಿದಿವ್ಯಮುನಿಪಂವಿಖ್ಯಾತಿಯಂತಾಳ್ದಿದಂ ॥ 24

ಕಂ ॥ ಶ್ರುತಕೀರ್ತ್ತಿತ್ರೈವಿದ್ಯ ।
ವ್ರತಿರಾಘವಪಾಂಡವೀಯಮಂವಿಬುಧಚಕಮ ॥
ತ್ಕೃತಿಯೆನಿಸಿಗತಪ್ರತ್ಯಾ ।
ಗತದಿಂಪೇಳ್ದಮಲಕೀರ್ತ್ತಿಯಂಪ್ರಕಟಿಸಿದಂ ॥ 25

ಗಣಧರರಂಶ್ರುತದೊಳ್ಚಾ ।
ರಣಋಷಿಯರನಮಲಚರಿತದೊಳ್ಯೋಗಿಜನಾ ॥
ಗ್ರಣಿಗೆಣೆಯೆಂನದಮಿಕ್ಕರ ।
ನೆಣೆಯೆಂಬುದೆವೀರಣಂದಿಸಿದ್ಧಾಂತಿಕರೊಳ್ ॥ 26

ಹರಿಹರಹಿರಣ್ಯಗರ್ಭ್ಭರ ।
ನುರುವಣೆಯಿಂಗೆಲ್ದ ಕಾಮನಂದೀಪ್ತತಪೋ ॥
ಭರದಿಂದುರುಪಿದರನೆಬಿ ।
ತ್ತರಿಸದರಾರ್ವ್ವೀರಣಂದಿಸಿದ್ಧಾಂತಿಕರಂ ॥ 27

ಮ॥ ಸ್ರ॥ ಉಪದೇಶಂಗೆಯ್ದು ಕಾವ್ಯಚ್ಛಲದಿನಖಿಲಧರ್ಮ್ಮಂಗಳಂಲೋಕಮಂಧ ।
ರ್ಮ್ಮಪಥಪ್ರಸ್ಥಾನದೊಳ್ಯೋಜಿಸಿಪರಮಪುರಾಣಂಗಳಂಪೇಳ್ದ ಕಲ್ಪಾಂ ॥
ತಪವಿತ್ರಖ್ಯಾತಿಯಂತಾಳ್ದಿದಪರಮಕವಿಜ್ಯೇಷ್ಠರಾದ್ಯರ್ತ್ತದೀಯಾಂ ।
ಘ್ರಿಪಯೋಜಂಗಳ್ಮದೀಯಾಶಯಮಣಿಭವನಕ್ಕ ಕ್ಕೆ ಪುಷ್ಪೋಪಹಾರಂ ॥ 28

ಚ ॥ ಮೃದುಪದಬಂಧಮಂಬಗೆಯಭಾವದಮೆಯ್ಸಿರಿಯಂರಸಪ್ರವಾ ।
ಹದನೆಲೆವೆರ್ಚ್ಚಿನಿಂಬಗೆದುಭಾವಿಸಿಭಾವಿಸಿಮೆಚ್ಚಿಮೆಚ್ಚಿಪೊ ॥
ಣ್ಮಿದಪುಳಕಂಗಳಿಂನಯನದೊಳ್ಕರೆಗಣ್ಮಿದಹರ್ಷಬಾಷ್ಪವ ।
ರ್ಷದಿ ನನುರಾಗಮಂಪಡೆವಸಜ್ಜನಸಂಸ್ತವಮೊಂದೆಸಾಲದೇ ॥ 29

ಕಂ ॥ ವಾರಾಸಿಯುಮಣಿಗಣಮಂ ।
ಕ್ರೂರಕುಳೀರಕ್ಕೆ ಸುಗಿದುಸಾಂಯಾತ್ರಿಕನೇಂ ॥
ತಾರನೆಕೃತಿವೇಳ್ಬಗೆ ।
ದಾರನೆಸತ್ಕವಿನಿಸರ್ಗ್ಗದುರ್ಜ್ಜನಭಯದಿಂ ॥ 30

ಚ ॥ ವಿಕಸಿತಚಂಪಕಕ್ಕೆಳಸಿಬಂದುಣಲೊಲ್ಲದಚಂಚರೀಕನಾ ।
ಸಿಕಮನಶೇಷಮಂಪೆಳಗೆತಿಗ್ಮಕರಂದೆಸೆಗಾಣದಿರ್ಪ್ಪಕೌ ॥
ಶಿಕನಮನಂಗಳಂಸುಕವಿಕಾವ್ಯಮನಾಲಿಸಿಕಾಯ್ವುದುರ್ಜ್ಜನ ।
ಪ್ರಕರದಕರ್ಣ್ಣಕೋಟರಮನೇಕೆಯೊಮಾಡಿದನಬ್ಜವಿಷ್ಟರಂ ॥ 31

ಕಂ ॥ ಪಡೆದಂರಜೋಧಿಕಂವಿಧಿ ।
ವೆಡೆಮಣಿಯಂಫಣಿಯನಮೃತರಸಮಂವಿಷಮಂ ॥
ಕಡಲಂಸುಳಿಯಂಮುಳೆಯಂ ।
ಸಿಡಿಲಂಪಡೆದಂತೆಸುಜನರಂದುರ್ಜ್ಜನರಂ ॥ 32

ಹು ॥ ರಸಮಂಭಾವಮನರ್ತ್ಥಮಂರಚನೆಯಂಕಾವ್ಯಜ್ಞರಾರೈದುಭಾ ।
ವಿಸೆನಾರೀಪದನಾಯಕಾಭ್ಯುದಯಪರ್ಯ್ಯಂತಂಬರಂಕೂಡೆಸೋ ॥
ದಿಸಿನೋಡೀರಘುವಂಶರಾಮಕಥೆಯಂಪತ್ತೆಂಟುಪದ್ಯಂಗಳಿಂ ।
ಪೊಸೆವೆಂಯತ್ನದಿನಾದ್ಯರದ್ಯತನರಾರೇನೆಂದೊಡಂಪೇಳರೇ ॥ 33

ಶಾ ॥ ರಾಗದ್ವೇಷನಿಬಂಧಮಪ್ಪಕೃತಿಯಂನಿರ್ಬ್ಬಂಧದಿಂಬಂಧಮಿಂ ।
ಬಾಗರ್ತ್ಥಂಪೊಸತಾಗೆಪೇಳ್ದಖಿಲಮಂರಾಗಾವಿಳಂಮಾಳ್ಪವಿ ॥
ದ್ಯಾಗರ್ವ್ವಗ್ರಹಪೀಡಿತರ್ಸ್ವಪರಬಾಧಾಹೇತುವಂದುಸ್ತರೋ ।
ದ್ಯೋಗಕ್ಕೆಳಿತರಾಗಿಬಿತ್ತಿಬೆಳೆವಂತಕ್ಕುಂವಿಷೋದ್ಯಾನಮಂ ॥ 34

ಚ ॥ ಪೊಗಳ್ದುಮಹಾತ್ಮರುಜ್ವಳಮೆನಿಪ್ಪಗುಣಂಗಳನುಜ್ವಳಪ್ರಸಿ ।
ದ್ಧಿಗೆಪೊಲನಾಗದುಜ್ವಳಿಸಿದಪ್ರತಿಮಪ್ರತಿಭಾಪ್ರಭಾವಮಂ ॥
ಪೊಗಳ್ದುದುರಾತ್ಮರಂಮೊಗದೊಳಿರ್ದ್ದುಗುಳಂಪೊಜಗಿಕ್ಕಲಾದನಾ ।
ಲಗೆಯುವನೆತ್ತುನಾಲಗೆಯೊಳೋದಿದವಂಕೃತಿಯೊಳ್ಕೃತಾರ್ತ್ಥನೇ ॥ 35

ಉ ॥ ಭೇದಿಸೆಭಾನುಭಾನುತಮಮಂತಱಿಸಂದುಪದಾರ್ತ್ಥಮಂಪರಿ ।
ಚ್ಛೇದಿಸಿಕಾಣ್ಬವೊಲ್ಜನವಿಲೋಚನಮಪ್ರತಿಮಪ್ರಭಾವರ ॥
ಪ್ಪಾದಿಕವೀಶ್ವರರ್ನ್ನಡೆದಪದ್ಧತಿಯಿಂತನಗರ್ತ್ಥಶುದ್ಧಿವೆ ।
ತ್ತಾದೊರೆಯಂಗಮೇಂನಡೆವುದಚ್ಚರಿಯೇಕವಿರಾಜವೀಥಿಯೊಳ್ ॥ 36

ನಾಯಕನನ್ಯನಾಗೆಕೃತಿವಿಶ್ರುತಮಾಗದುದಾತ್ತರಾಘವಂ ।
ನಾಯಕನಾಗೆವಿಶ್ರುತಮೆನಿಪ್ಪುದುವಿಸ್ಮಯಕಾರಿಯಲ್ತುಕಾ ॥
ಳಾಯಸದಿಂವಿನಿರ್ಮ್ಮಿಸಿದಕಂಠಿಕೆಕಾಂಚನಮಾಲೆಯಂತುಮಾ ।
ದೇಯುಮೆನಿಕ್ಕುಮೇವಿಷಯಮೊಪ್ಪದೊಡಾವುದುಮೊಪ್ಪಲಾರ್ಕ್ಕಮೇ ॥ 37

ವು ॥ ವಿಗತಾಷ್ಟಾದಶದೋಷರಪ್ಪಜಿನರುಂಜ್ಞಾನರ್ದ್ಧಿಸಂಪನ್ನರ ।
ಪ್ಪಗಣಾಧೀಶ್ವರರುಂಕ್ರಮಂಗಿಡದೆಮುನ್ನಂಪೇಳ್ದುದಂಶ್ರಾವ್ಯಕಾ ॥
ವ್ಯಗುಣಖ್ಯಾತಿನಿಮಿತ್ತಮಲ್ಲದೆಶುಭಧ್ಯಾನಾರ್ತ್ಥಿಯಿಂಪೇಳಲಾಂ ।
ಬಗೆದಂದೆಂರಘುವಂಶರಾಮಕಥೆವೇಳ್ವಂತನ್ಯಸಾಮಾನ್ಯಮೇ ॥ 38

ರವಿಮಾರಿಟ್ಟೆಳೆದಂವಿಯತ್ತಳಮನಾಶಾಸೀಮೆಯಂದಾಂಟುವಂ ।
ನೆವರಂತಂನಕರಂಗಳಿಂದೆನೆಪೆಱಂಗೇಮೊಗ್ಗೆಮುನ್ನಂಗಣ ॥
ಪ್ರವರಗ್ರಾಗತಮರಾದಿಯಾಗೆಮುನಿಮುಖ್ಯರ್ಪ್ಪೇಳ್ದರೆಂದೆಂದುಮಾ ।
ನವರೆಂಮಂದಿಗರಾಪ್ಪರೇರಚಿಯಿಸಲ್ರಾಮಾನ್ವಯಖ್ಯಾತಿಯಂ ॥ 39

ಕಂ ॥ ವಿಪುಲಾಚಳದೊಳ್ವೀರಜಿ ।
ನಪಾರ್ಶ್ವದೊಳ್ಗೌತಮಂಗಣಾಗ್ರಣಿಮಗಧಾ ॥
ಧಿಪನಱಿಯೆನೆಱೆಯೆಪೇಳ್ದ ।
ನಪೂರ್ವಮೆನೆರಾಮಕಥೆಯನಭಿವರ್ಣಿಸುವೆಂ ॥ 40

ಜಗಮುಂಯುಗಮುಂಮನ್ವಾ ।
ದಿಗಳಂಕಾಲಸ್ವರೂಪಮುಂಜಿನರಂಚ ॥
ಕ್ರಿಗಳಂಹಲಧರಕೃಷ್ಣಾ ।
ದಿಗಳಂ ಶ್ರೀರಾಮಚರಿತದೊಳ್ವರ್ಣಿಸುವೆಂ ॥ 41

ವ ॥ ಅದೆಂತೆನೆ ॥

ಮ॥ಸ್ರ॥ ಕಡೆಪೋಱುತ್ತಿಲ್ಲೆನಿಪ್ಪಾಗಸದನಡುವೆವಾಯುತ್ರಯಂಸುತ್ತೆಪೇಳಾ ।
ರ್ಪ್ಪಡೆವಂನತ್ತರ್ಕಂನನೆಂಬಗ್ಗಳಿಕೆವಡೆದಧಸ್ತಿರ್ಯ್ಯಗೂರ್ಧ್ವತ್ರಿಭೇದಂ ॥
ಬಡೆದಾಱುಂದ್ರವ್ಯದಿಂ ಮೆಯ್ವಡೆದಖಿಲಜಗಂರಜ್ಜುವೀರೇಳಕುದ್ದಂ ।
ಬಡೆದತ್ತಾಸ್ತಂಜಿನಂಕೇವಳವಿಪುಲತುಲಾಕೋಟಿಯಿಂತೂಗೆತಂಸಂ ॥ 42

ಕಂ ॥ ಅನತಿಶಯಮಹಾದಾತ್ರಿಭು ।
ವನಲಕ್ಷ್ಮಿಗೆಮಧ್ಯಮೆನಿಪಮಧ್ಯಮಲೋಕಂ ॥
ಜನಹೃದಯಹಾರಿಗಂಭೀ ।
ರನಾಭಿಮಂಡಲಮೆನಿಸಿ ಜಂಬೂದ್ವೀಪಂ ॥ 43

ವ ॥ ಜಂಬೂದ್ವೀಪದನಟ್ಟನಡುವೆ ॥

ಕಂ ॥ ಮುಟ್ಟಿದುದುಮೊದಲದಿವಮಂ ।
ಮೆಟ್ಟಿದುದೆರಡನೆಯವಜ್ರಿಯಂಮೇಖಲೆಯಿಂ ॥
ದಿಟ್ಟಿಗೆಪೊಲನಾದುದುಪೊಂ ।
ಬೆಟ್ಟಂಜಿನಜನ್ಮಸವನಮಣಿಮಯಪೀಠಂ ॥ 44

ಅಕ್ಷೋಣೀಧರವಲ್ಲಭ ।
ದಕ್ಷಿಣದಿಗ್ಮುಖದೊಳೆಸೆದುಕಿಖಂಡದಪ್ರೋ ॥
ಲೀಕ್ಷಣಸುಖಮೆಯಮಿರ್ಪ್ಪುದು ।
ದಕ್ಷಿಣಭರತತ್ರಿಖಂಡದಾರ್ಯ್ಯಖಂಡಂ ॥ 45

ವ ॥ ಅಲ್ಲಿವರ್ತ್ತಿಸುವುತ್ಸರ್ಪ್ಪಿಣಾವಸರ್ಪ್ಪಿಣಿಯುಗಸ್ವರೂಪನಿರೂಪಣಾವಿವಕ್ಷೆಯಿಂಮು
ಖ್ಯವ್ಯವಹಾರನಯದೊಳುಭಯಾತ್ಮಕಮೆನಿಪ್ಪಕಾಲಸ್ವರೂಪಮೆಂತೆನೆ ॥

ಕಂ ॥ ಜೀವಾಜೀವದ್ರವ್ಯಪ |
ರಾವರ್ತನಹೇತುವರ್ತನಾಲಕ್ಷಣಸ |
ದ್ಭಾವಂನಿತ್ಯಮಮೂರ್ತಂ |
ಕೇವಲಗಮ್ಯಂಸದಾನುಮೇಯಂಕಾಲಂ ॥ 46

ಧಾರಾಹತಿಯಿಂಖಂಡಿಸ |
ಲಾರಂಜಿನನಾಥನುಳಿಯಲುಳಿದರನೇಕಾ ॥
ಕಾರಂಲೋಕಾಕಾರದೊ |
ಳೋರಗಲಮೆನಿಪ್ಪಕಾಲಚಕ್ರಮಮೋಘಂ ॥ 47

ವ್ಯವಹಾರಕಾಲಭೇದಮ |
ನಮರಿವರೆತ್ತಱಿವರಾಪ್ತರಲ್ಲರ್ಜ್ಜನಪ್ಪಂ ॥
ಗವರಲ್ಲವಣುವನಣುದಾಂ |
ಟುವಪ್ರೊತ್ತಂಸಮಯಮೆಂದುಪೇಳ್ವವನಾವಂ ॥ 48

ಸಮಯಸಮೂಹಮಸಂಖ್ಯಾ |
ತಮಾದೊಡಾವಳಿಯೆನಿಕ್ಕುಮಾವಳಿಸಂಖ್ಯಾ ॥
ತಮೆನಿಪ್ಪದಾದೊಡುಚ್ಛ್ವಾ |
ಸಮೆನಿಕ್ಕುಂಸ್ತೋಕಮಕ್ಕುಮೇಳುಚ್ಛ್ವಾಸಂ ॥ 49

ಸ್ತೋಕಂನೆರೆದೇಳಾಗೆಲ |
ವಾಕಾಲಂಮೂವತೆಂಟುವರೆಯೆನಿಪಲವಾ ॥
ನೀಕಂನಾಳಿಕೆತನ್ನಾ |
ಳಿಕಾಯುಗಂಪೊಮ್ಮುಹೂರ್ತಮೆನೆವರ್ತಿಸುಗುಂ ॥ 50

ಸಮಯಂಗುಂದೆಮುಹೂರ್ತದೊ |
ಳಮೋಘಮಂತಮ್ಮುಹೂರ್ತಮಕ್ಕುಂಮೂವ ॥
ತ್ತುಮುಹೂರ್ತಮಾಗೆದಿವಸಂ |
ಕ್ರಮದಿಂಪದಿನಯ್ದುದಿವಸಮಾದೊಡೆಪಕ್ಷಂ ॥ 51

ಮಾಸಂಪಕ್ಷದ್ವಿತಯಂ |
ಮಾಸದ್ವಯಮೊಂದೆಋತುಋತುತ್ರಯಮಯನ ॥
ಸ್ಯಾಸಮಯನದ್ವಯಂಜಿನ |
ಶಾಸನದೊಳ್ವರ್ಷಮಯ್ದುವರ್ಷದೊಳ್ಯುಗಂ ॥ 52

ಎರಡುಯುಗಂದಶವರ್ಷಂ ।
ತರತರದಿಂದಿಂತುದಶಗುಣಂಪೆರ್ಚ್ಚುತ್ತುಂ ॥
ಬರೆಪೆರ್ಚ್ಚುವಕಾಲಕಲಾ ।
ಪರಿಸಂಖ್ಯೆಯನಾವನಱಿವನಾತನೆದೇವಂ ॥ 53

ತವೆಸಾರವೃನಿಂನೆಗಳುಂ ।
ಸವೆಯವುನಾಳಿಗಳುಮದಱಿನೆಲೆನೆಱೆಯದಾಲೆ ॥
ಕ್ಕವಿಡಲ್ಕಬ್ದಂನೆಱೆಯವು ।
ಪವಣಿಸಲೇಂಕಂಡರಾರೊಕಾಲದಕಡೆಯಂ ॥ 54

ಅವಸರ್ಪ್ಪಿಣಿದೊಳ್ಕಾಲ ।
ವ್ಯವಸ್ಥೆಷಡ್ವಿಧಮೆನಿಕ್ಕುಮುತ್ಸರ್ಪ್ಪಿಣಿದಂ ॥
ತೆವ್ರೊಲಲ್ಲಿಮೊದಲಕಾಲಂ ।
ಪ್ರವರ್ತ್ತಿಕುಂಸುಷಮಸುಷಮಮೆಂಬೀಪೆಸರಿಂ ॥ 55

ಎರಡನೆಯಸುಷಮಕಾಲದ ।.
ಪೊರೆಯೊಳ್ಮೂಱನೆಯಸುಷಮದುಷ್ಷಮಕಾಲಂ ॥
ಚರಿಯಿಸುಗುಂನಾಲ್ಕನೆಯದಾ ।
ಪರಿವಿಡಿಯಿಂದಪ್ಪುದಲ್ತೆದುಷ್ಷಮಸುಷಮಂ ॥ 56

ಅನುಸಂಧಾನಂಗಿಡದ ।
ಯ್ದನೆಯದುದುಷ್ಷಮಮೆನಿಪ್ಪಕಾಲಂಬಳಿಕಾ ॥
ಱನೆಯದಱಿದುಷ್ಷಮಂವೆ ।
ತ್ತರ್ನಮಿಂತೀತೆಱನೆರಹಟ್ಟಘಟಿಕಾನ್ಯಾಯಂ ॥ 57

ತನುಭೋಗಾಯುಷ್ಯಂಗಳ್ ।
ಮನುಷ್ಯರೊಳ್ಪೆರ್ಚ್ಚುವಡೆಗುಮುತ್ಸರ್ಪ್ಪಿಣಿದೊಳ್ ॥
ತನುಭೋಗಾಯುಷ್ಯಂಗಳ್ ।
ಮನುಷ್ಯರೊಳ್ಕುಂದುವಡೆಗುಮವಸರ್ಪ್ಪಿಣಿದೊಳ್ ॥ 58

ಎರಡುಯುಗಮೊಂದೆಕಲ್ಪಂ ।
ನಿರಂತರಂಶುಕ್ಲಕೃಷ್ಣಪಕ್ಷಂಗಳವೋಲ್ ॥
ಪರಿವರ್ತ್ತಿಸುಗುಂತತ್ಕ ।
ಲ್ಪರಾಸಿಗಾರದ್ವೊಡಿಲ್ಲಮೊದಲುಂತುದಿಯುಂ ॥ 59

ವ ॥ ಅಂತನಂತಾನಂತಕಲ್ಪಪರಿವರ್ತ್ತನಮನಪ್ಪುಕೆಯ್ದು ಆರ್ಯ್ಯಖಂಡದವಸರ್ಪ್ಪಿಣಿ
ದಮೊದಲಕಾಲದೊಳ್ ॥

ಮ॥ಸ್ರ॥ ಸುರಭೂಜಂಜ್ಯೋತಿರಂಗಂಬೆಳಗೆತಮದಮಾತಿಲ್ಲಚಂದ್ರಾರ್ಕ್ಕರುಂಮೆ ।
ಯ್ಗರೆದಿರ್ಪ್ಪರ್ತ್ತೋರ್ಱುವಾಜುಂಬಯುತುಪಗಲಿರುಳೆಂಬೀವಿಭೇದಂಗಳಿಲ್ಲಾ ॥
ಳರಸೆಂಬೀಪಂಬಲಿಲ್ಲಾಜ್ಜ್ವರಮೆಮನುಜರೆಲ್ಲಂಜರಾತಂಕಮಿಲ್ಲಾ ।
ತುರಮಿಲ್ಲಾಶ್ಚರ್ಯ್ಯಭೂತಂಸುಷಮಸುಷಮಕಾಲಸ್ವಭಾವಪ್ರಭಾವಂ ॥ 60

ಕಂ ॥ ದಂಪತಿಗಳ್ಪುಟ್ಟುವರಾ ।
ರ್ಗ್ಗಂಪೊಲ್ಲಮೆಪುಟ್ಟದನತಿಶಯರೂಪಕಳಾ ॥
ಸಂಪನ್ನತೆನಿಸಿಸುರಗತಿ ।
ಯುಂಪಡೆವರ್ಕ್ಕಡೆಯೊಳುಚಿತಭೂಷಾವೇಷರ್ ॥ 61

ಅಪಮೃತ್ಯುವಿರಹಿತಮೂರ್ತ್ತ ।
ಜಿತಪಳಿತಮಾಯುಷ್ಯಮುದ್ಧಮೂಱುಸಾಸಿರಬ ॥
ಲ್ಲಪಸಾರಿತಮಲಮೂತ್ರಾ ।
ದಿಪುರೀಷಹರೋಷಮಪಘನಂದಂಪತಿಯಾ ॥ 62

ಮಾ ॥ ತ್ರಿದಿವಪನಿತುಕಾಲಕ್ಕೊರ್ಮ್ಮೆಸಂಸಾರಸೌಖ್ಯ ।
ಪ್ರದಮಿನಿದೆಪದಿವ್ಯಾಹಾರಮಂಭೋಜನಾಂಗಂ ॥
ಬದರಫಲಸಮಾನಾಕಾರಮಂಕೊಟ್ಟುದಂಕೊಂ ।
ಡಪಜಬಲದೆಪಾಸಂಬೆತ್ತುಯುಗ್ಮಂಗಳಿರ್ಕ್ಕುಂ ॥ 63

ಕಂ ॥ ಸಿರಿಯುಪ್ಪೊಸಮೊಗದಮೆಯ್ಸಿರಿ ।
ಸಿರಿಯೆನಿಕುಂಪೂಗೊಳಂಗಳಾನೆಲನನಿತುಂ ॥
ಸುರಚಾಪದಬೆಳಸಿನಹರ ।
ವರಿಯೆನಿಕುಂಪಂಚರತ್ನರುಚಿವಲ್ಲರಿಯಿಂ ॥ 64

ಚತುರಂಗುಳಮೆನಿಸಿದತರು ।
ಣತೃಣಗ್ರಾಸದೊಳೆತಣಿದುತಿಳಿನೀರಂಪೀ ॥
ರ್ದ್ದತನುಕ್ರೀಡಾರತಮೃಗ ।
ತತಿಗಳ್ದಂಪತಿಗಳಲ್ಲಿನಲಿಯುತ್ತಿರ್ಕ್ಕುಂ ॥ 65

ಮ ॥ ಕುಸುಮಸ್ರಗ್ವಸನಾನ್ನಪಾನವಿವಿಧಾತೋದ್ಯಪ್ರಕಾಶಪ್ರದೀ ।
ಪಸುಧಾಸದ್ಮವಿಚಿತ್ರಭಾಜನವಿಭೂಷಾನೀಕಮಂಕೊಟ್ಟುಸಂ ॥

ತಸವಂಮಾಡೆದಶಾಂಗಕಲ್ಪತರುಗಳ್ಸ್ವರ್ಗ್ಗಕ್ಕೆಸಂಸಾರಸು ।
ರಸುಖಕ್ಕಗ್ಗಳಮೆನ್ನದಾಪ್ರಥಮಕಾಲಶ್ರೀಯನೇವಂಣಿಸೆಂ ॥ 66

ವ ॥ ಅಂತಾಕಾಲಮುತ್ತಮಭೋಗಭೂಮಿಸ್ಥಿತಿನಾಲ್ಕುಕೋಟಿಕೋಟಿಸಾಗರೋಪಮನ
ನುಕ್ರಮದಿಂಕುಂದುತ್ತುಂಬಂದನಂತರಂಸುಷಮಮೆಂಬೆರಡನೆಯಕಾಲದಮಧ್ಯಮ
ಭೋಗಭೂಮಿಸ್ಥಿತಿಯೊಳ್ ॥

ಕಂ ॥ ತನುನಾಲ್ಸಾಸಿರಬಿಲ್ನಿಡಿ ।
ದನಿಕ್ಕಮಾಯುಷ್ಯಮೆರಡುಪಳಿತೋಪಮಮಂ ॥
ದಿನಮನುಜರಕ್ಷಫಲಮೆನಿ ।
ತೆನಿತುರಸಾಯನಮನೆರಡುದಿವಸಕ್ಕುಣ್ಬರ್ ॥ 67

ವ ॥ ಮತ್ತಮಾಕಾಲಂಮೂಱುಕೋಟಿಕೋಟಿಸಾಗರೋಪಮಂಕಳೆದಿಂಬಳಿಯಂಸುಷ
ಮದುಷ್ಷಮಮೆಂಬಮೂಱನೆಯಕನಿಷ್ಠಭೋಗಭೂಮಿಯಾದುದಂದಿನಮಿಥು
ನಂಗಳ್ ॥

ಕಂ ॥ ಅಳವಿಯಲೆಕ್ಕಂತಂಮೊ ।
ಳ್ಪಳಿತೋಪಮಮಾಗೆದೇಹಮಿರ್ಬ್ಬಾಸಿರಬಿ ॥
ಲ್ಬಳಿಯೆಸುಧಾಸಾರಮನಾ ।
ಮಳಕಫಲಪ್ರತಿಮಮೆಂದಿನಾಂತರಮುಣ್ಬರ್ ॥ 68

ವ ॥ ಮತ್ತಮಾಜಘನ್ಯಭೋಗಭೂಮಿಪ್ರವರ್ತ್ತನಮೆರಡುಕೋಟಿಕೋಟಿಸಾಗರೋಪ
ಮದಕಡೆಯಪಳಿತೋಪಮದೆಂಟನೆಯಭಾಗಮುಳಿಯೆಬಳಿಯಂಕುಳಧರಾವತಾರ
ಮಕ್ಕುಮದೆಂತೆನೆ ॥

ಕಂ ॥ ಅಜ್ಞಾನತ್ರಯರಹಿತ ।
ತ್ರಿಜ್ಞಾನಧರರ್ವ್ವಿದೇಹದಿಂಬಂದಧಿಕ ॥
ಪ್ರಜ್ಞರ್ಪ್ಪುಟ್ಟುವರೀನೆಲ ।
ನಾಜ್ಞಾಮುದ್ರಿತಮೆನಲ್ಚತುರ್ದ್ದಶಮನುಗಳ್ ॥ 69

ವ ॥ ಅಲ್ಲಿಮೊದಲಕುಲಧರಂಪ್ರತಿಶ್ರುತಿಯೆಂಬಂ ॥

ಕಂ ॥ ಬಲವರ್ಪ್ಪಕಾಲಪುರುಷನ ।
ಕಲಧೌತವಿಶಾಲಕರ್ಣ್ಣಕುಂಡಲಯುಗಮಂ ॥
ಗೆಲೆಬಂದುಸೂರ್ಯ್ಯಶಶಿವಂ ।
ಚಲಮಾಸುರಮಾಗೆಗಗನದೆರಡುಂಕೆಲದೊಳ್ ॥ 70

ವ ॥ ಅವಂಕಾಣಲೊಡಮಂದಿನೆಯುಗಳ ಮುತ್ತಾತೆಯುಗಳವೊಗೆದುವೆಂದುಭೀತರಪ್ಪು ದುಂಜ್ಯೋತಿರಂಗಕರುತೇಜೋಭಂಗದಿಂಕಾಣಲಾದುವಿವುಚಂದ್ರಾದಿತ್ಯ ರವಿಮಾನಂ ಗಳೆಂದುಮೊಳವಿಲ್ಲಿಂದಿತ್ತವಿಂತೆತೋರ್ಕ್ಕುಮಿವರ್ಕ್ಕೆಪಚ್ಚದಿರಿ ಮೆಂದವಜಿಮನದ ಸಂಕೆಯಂಕಳೆದನಾತನಿಂಬಳಿಯಲೆರಡನೆಯಕುಳಧರಂಸನ್ಮತಿಯೆಂಬಂ ॥

ಕಂ ॥ ಕಿಸುಸಂಜೆಪೆರ್ಚ್ಚೆಸುರ್ವ್ವಿಸೆ ।
ನಿಸಿತಾರಾನಿಕರಮೊಗೆಯೆಬಳ್ಕುತ್ತುಂಪೆ ॥
ಕ್ಕಸಮುತ್ತರ್ಭಯರಸದಿಂ ।
ದೆಸೆಗೆಟ್ಟರ್ಕ್ಕಂಡದೃಷ್ಟಪೂರ್ವ್ವಮನಾರ್ಯ್ಯರ್ ॥ 71

ವ ॥ ಅಂತುಭಯಸ್ಥರಾದಾರ್ಯ್ಯರಂಸೂರ್ಯ್ಯಕಿರಣಾಸ್ತಮಾನಸಮಯದೊಳ್ತಪ್ತತಪ ನೀಯುಮೆನಿಪ್ಪನಿಷಧನಗದೆನೆಗೆದಕೆಂಪೊಳಪಿನೊಳ್ಪೆಳಂಚಿರಂಜಿಸಿದ ಸಂಜೆಪರೆಯೆ ಕವಿದಕತ್ತಲೆಯೊಡನೆತಾರಾಗ್ರಹನಕ್ಷತ್ರಂ ತಲೆದೋಱುಗುಮಿಲ್ಲಿಂದಿತ್ತಲಹೋರಾ ತ್ರಿಭೇದಮಕ್ಕುಮೆಂದವಜಿಮನೋವಿಷಾದಮಂಕಳೆದ ನಾತನಿಂಬಳಿಯಂಮೂಱನೆ ಯಕುಳಧರಂಕ್ಷೇಮಂಕರನೆಂಬಂಸಿಂಹಶರಭಶಾರ್ದ್ದೂಳವ್ಯಾಳಮೃಗಮಿಥುನಂಗಳ್ ಕಾಲಸ್ವಭಾವದಿಂಋಜುಸ್ವಭಾವಮಂಪತ್ತುವಿಟ್ಟು ವಿಷಮಸ್ವಭಾವಮನಪ್ಪುಕೆ ಯ್ವುದುಂ ॥

ಕಂ ॥ ವಿಪರೀತಮಾದಮೃಗಕುಲ ।
ದುಪದ್ರವಂನಿಮಗೆದಂಡಪಾಣಾದಿಗಂ ॥
ದಪಹರಿಸುಗುಮೆಂದಾರ್ಯ್ಯ ।
ಗ್ಗುಪದೇಶಂಗೆಯ್ದುಕಳೆದನವಜಿದವಳಲಂ ॥ 72

ವ ॥ ಆತನಿಂಬಳಿಯಂನಾಲ್ಕನೆಯಕುಲಧರಂಕ್ಷೇಮಂಧರನೆಂಬನಂಧಕಾರಮಪ್ಪುದುಂಪ್ರ ಜೆಗುಪದ್ರವಂಕ್ಷುದ್ರಮೃಗಯುಗಳಮೊಡರಿಸೆ ॥

ಕಂ ॥ ರವಿರಶ್ಮಿಗಳಿಂಪುಟ್ಟಿದ ।
ರವಿಕಾಂತೋಪಳಕೃಶಾನುವಿಂಕೊರ್ಮ್ಮಿಗಮಂ ॥
ದಿವಸದವಸಾನಸಮಯದೊ ।
ಳವನಂಜೆಸಿವೆಂದುಪಾಯುಮಂಪ್ರಜೆಗಿತ್ತಂ ॥ 73

ವ ॥ ಆತನಿಂಬಳಿಯುಮಯ್ದನೆಯಕುಲಧರಂಸೀಮಂಕರನೆಂಬಂಕಲ್ಪತರುಗಳಲ್ಪಫಲದಂ ಗಳಾಗೆಭೋಗಭೂಮಿಜತ್ತರ್ಮತಮಗೆನೆಱೆಯವೆಂಬಸಂಕಲ್ಪದಿಂ ॥

ಕಂ || ಒರೋರ್ವ್ವರಸುರತರುಗಳ |
ನೋರೋರ್ವ್ವರಿವೆಂಮವೆಂಬುದುಂಪೂರ್ವ್ವಸ್ವೀ ||
ಕಾರವ್ಯವಸ್ಥೆನಿಲೆಸಾ |
ಧಾರಣಸೀಮಾವಿವಾದಮಂಬಾರಿಸಿದಂ || 74

ವ || ಆತನಿಂಬಳಿಯಮಾಱನೆಯಕುಲಧರಂಸೀಮಂಧರನೆಂಬಂ ||

ಕಂ|| ಕಲುಷಾಂಧರ್ಸ್ಸುರತರುಸಂ |
ಕುಲಮೆಂಮುವೃತವಮ್ಮೆಂದುತಂಮೊಳಗಾರ್ಯ್ಯ ||
ರ್ತ್ತಲಿವೊತ್ತೆಗುಟ್ಟಿವೋಯ್ದುವ |
ಬಲವಳಿಕೆಯೊಳಾದತೋಟಿಯಂತೊಲಗಿಸಿದಂ || 75

ವ || ಆತನಿಂಬಳಿಯಮೇೞನೆಯಕುಲಧರಂವಿಮಲವಾಹನನೆಂಬಂ ||

ಕಂ || ಅಡಿದಳಿರ್ಗೆಧರಾವಲಯಂ |
ಕಡುವೆಟ್ಟಿತ್ತಾಗೆನಡೆಯಲಱಿಯದೆಮನುಜ ||
ರ್ನ್ನಡೆಯೆಹಯಾದಿಗಳಿಂದಂ |
ನಡೆಯಿಸಿದಂಕಲಿಸಿವಾಹನಾರೋಹಣಮಂ || 76

ವ || ಆತನಿಂಬಳಿಯಮೆಂಟನೆಯಕುಲಧರಂಚಕ್ಷುಷ್ಮನೆಂಬನಂದಿನಮಿಥುನಂಗ
ಳ್ಸುತಮುಖವಿಲೋಕನದಿನತಿಕುತೂಹಲಮನಪ್ಪುಕೆಯ್ವುದಂ ||

ಮ| ಸ್ರ|| ಯುಗಳಂಗಳ್ಪುಟ್ಟಿಸೀಂತಾಗುಳಿಸಿಪಿತೃಯುಗಂಸತ್ತುಸಗ್ಗಂಗಳೊಳ್ಪು|
ಟ್ಟುಗುಮಿಲ್ಲಿಂಮುಂನಮಿತ್ತಲ್ಕತಿಪಯದಿನದಿಂಮಕ್ಕಳಂನೋಡಿಸಾವೆ ||
ಯ್ದುಗುಮೀಗಳ್ಕರ್ಮ್ಮಭೂಮಿಸ್ಥಿತಿಮೊಗಸಿದುದಿಂಬಾಲಕಾಲೋಕದಿಂದು |
ಬ್ಬೆಗವಿಲ್ಲೆಂದಿಂತುಕಾಲಸ್ಥಿತಿಯನವರ್ಗತಿವ್ಯಕ್ತಮಪ್ಪಂತುಪೇಳ್ದಂ || 77

ವ || ಆತನಿಂಬಳಿಯಮೊಂಬತ್ತನೆಯಕುಲಧರಂಯಶಸ್ವಿಯೆಂಬಂ ||

ಕಂ || ಅವರಿವರೆಂನದೆಮುನ್ನಾ |
ರ್ಯ್ಯರ್ವೆಸರ್ವ್ವೆಸರಾಗೆಪೇೞೆಪೇೞಂದಿನಮಾ ||
ನವರ್ಗೆಪೆಸರಿಟ್ಟುನಾಮ |
ವ್ಯವಸ್ಥೆಯಂಪಡೆದುಮನುಗಳೊಳ್ಪೆಸರ್ವ್ವಡೆದಂ || 73

ವ || ಆತನಿಂಬಳಿಯಂ ಪತ್ತನೆಯಕುಲಧರನಭಿಚಂದ್ರನೆಂಬನಾಕಾಲದೊಳ್ ||

ಕಂ ॥ ಉಡುಪತಿಯುಮನುಡುಗಣಮುಮ ।
ನೆಡೆಯುಡುಗದತೋಱಿತೋಱಿಕಿಱುಗೂಸುಗಳಂ ॥
ನುಡಿಗಲಿಸಿದಂತೊದಳ್ನುಡಿ ।
ಪಡೆವಿನೆಗಂಪಿತೃಯುಗಳ್ಕೆ ಕಣ್ಣಾರ್ಗನ್ವೃತವಮಂ ॥ 79

ವ ॥ ಆತನಿಂಬಳಿಯಂಪನ್ನೊಂದನೆಯಕುಲಧರಂಚಂದ್ರಾಭನೆಂಬಂ ॥

ಮ॥ ಸ್ರ॥ ಇನನಂಶೀತಾಂಶುಮೆಂಮುಂಜಿನಮುಗಿಲತೊಡರ್ಪ್ಪಿಂಜನಂಕಾಣದಾಕಂ ।
ಘನಮಂಕೈಕೊಳ್ವದಂಪೆಳ್ಪನೆಬೆಳಗೆಲೊಡಂತೋಱುಗುಂಕರ್ಮ್ಮಭೂವ ॥
ತ್ರ್ಣನಮತ್ಯಾಸನ್ನವೆಂದಾಸ್ಥಿತಿಯನಱಿಪಿಸಂತೈಸಿಸಂತಾಪವಿಚ್ಛೇ ।
ದನಮಂತಂದಂಯಶಶ್ಚಂದ್ರಿಕೆಗೆನೆಱೆಯಪೆಂಬಂನಮಾಕಾಂತರಾಳಂ ॥ 80

ವ ॥ ಆತನಿಂಬಳಿಯಂಪನ್ನೆರಡನೆಯಕುಲಧರಂಮರುದೇವನೆಂಬಂ ॥

ಕಂ ॥ ಸರಿಸುರಿಯೆಮಿಂಚುಮಿಳ್ಗೆಸೆ ।
ಸುರಚಾಪಂನೆಗೆಯೆಬೆಗಡುಗೊಂಡವರಂಸಂ ॥
ವರಿಸಿಘನಾಗಮಸಮಯ ।
ಸ್ವರೂಪಮಂತಿಳಿಪಿಕಳೆದನವರುಮ್ಮಳಮಂ ॥ 81

ವ ॥ ಆತನಿಂಬಳಿಯಂಪದಿಮೂಱನೆಯಕುಲಧರಂಪ್ರಸೇನಜಿತ್ತೆಂಬನಕಾಲದೊಳ್ ದರಿ
ಯುಂಕುಳಿಯುಂಕುತ್ತರುಂಪೆಟ್ಟುಮುಂಘಟ್ಟಮುಮುಪನದಿಯುಮುಪ ಸಮುದ್ರ
ಮುಂಪುಟ್ಟಿಸಲಿಲಸಂಘಾತದಿನಪಮೃತ್ಯುಪುಟ್ಟಿಮಾನಿಸರಸಹ್ಯಶೋಕಾನಲದಂದಹ್ಯ
ಮಾನಮಾನಸರಾಗೆ ॥

ಕಂ ॥ ತವೆತ್ತೈಲಂದೀಪಂನಂ ।
ದುವಂತೆಗಳಿಯಿಸೆನಿಷೇಕಮಳಿವರ್ಮ್ಮಂನಂ ॥
ಪವನಪ್ರಹಾರದಿಂತೈ ।
ಲವ್ವಳ್ಗೊಡಂನಂದುವಂತೆಪೊಂದುವರೀಗಳ್ ॥ 82

ಬಡಿಕೊಳ್ಕಾಯುಂಪಣ್ಣುಂ ।
ತೊಡಂಬೆಪಱಿದುದಿರ್ವ್ವಮಾಳ್ಕೆಯಿಂಕಿಱಿವಿರಿಯ ॥
ವರ್ಮ್ಮಡಿವರನುಕ್ರಮದಿಂಸಾ ।
ವೇಡರಿಸದೊಡರಿಸುವುದಲ್ತೆಕದಳೀಘಾತಂ ॥ 83

ಉದಯಿಸಿನಡುವಗಲಪ್ಪುದು ।
ಮುದಿತೋದಿತನಾಗಿ ಸೂರ್ಯ್ಯನಸ್ತಮಿಸುವವೋಲ್ ॥
ಉದಯಿಸಿ ಜವ್ವನಮಂತಳೆ ।
ದೊದವಿದಮುಪ್ಪಿನೊಳ್ಕಳೆವರಲ್ಲಿಂಬೞಿಯಂ ॥ 84

ವ ॥ ಎಂದುಕಾಲಸ್ವರೂಪನಿರೂಪಣಂಗೈದವಚಿಕೋಕಪ್ರತ್ಯಾನೀಕಮನಿದಿರ್ಪ್ಪ
ದನೀವೇಳ್ದ ಕುಲಧರಸಂಕುಲಕ್ಕೆ ॥

ಕಂ ॥ ಒಂದುಪಳಿತದದಶಾಂಶದೊ।
ಳೊಂದಂಶಂಮೊದಲಮನುಗೆಪದಿಮೂವರೊಳಂ ॥
ಪಿಂದಣವರ್ಗಳದಶಾಂಶದೊ ।
ಳೊಂದಂಶಂಮುಂದಣವರ್ಗೆ ಪರಮಾಯುಷ್ಯಂ ॥ 85

ಸಾಸಿರಮುಮೆಂಟುನೂಱು ಶ ।
ರಾಸನಮೋರ್ವ್ವಂಗೆ ಪಂಚಶತಹೀನಂಬಱ ॥
ಶಾಸನಮಿರ್ವ್ವರ್ಗ್ಗುೞಿದ ।
ಗ್ಗೊರ್ಗೆಸರಿಕುಂಕ್ರಮದಿನುದ್ದಮಿಪ್ಪತ್ತೈವಿಲ್ ॥ 86

ಮನುಚಂದ್ರಾಭಂಪಾಂಡುರ ।
ತನುತೆಯಶಸ್ವಿಪ್ರಸೇನಜಿಚ್ಚಕ್ಷುಷ್ಮ ॥
ವ್ವರ್ನಜದಳ ಚ್ಛವಿಗಳ್ಕಾಂ ।
ಚನರೋಚಿಷ್ಣುಗಳೆಮಿಕ್ಕಕುಲಧರರೆಲ್ಲಂ ॥ 87

ಮಂತಣಮೇನಾದಿಯುಮ।
ನ್ವಂತರದೊಳಶೀತಿಭಾಗೆಪಲ್ಯದೊಳಾಮ ॥
ನ್ವಂತರದಶಮಾಂಶಂಮ ।
ನ್ವಂತರಮಕ್ಕುಂ ಪ್ರಸೇನಜಿತ್ಪರ್ಯ್ಯಂತಂ ॥ 88

ಕ್ರಮದೈವಱಿಂದಹಾದಂ ।
ಡಮಯ್ವರುಂಮನುಗಳಿಂದಹಾಮಾದಂಡಂ ॥
ಸಮನಿಸೆಹಾಮಾದಿಗ್ದಂ ।
ಡಮಯ್ವರಿಂದಾಯ್ತು ಭರತನಿಂತನುದಂಡಂ ॥ 89

ವ ॥ ತದನಂತರಂಪದಿನಾಲ್ಕನೆಯಕುಲಧರಂನಾಭಿರಾಜನೆಂಬಂಪಂಚವಿಂಶತ್ಯು
ತ್ತರಪಂಚಶತಶರಾಸನೋತ್ಸೇಧನುಂಪೂರ್ವ್ವಕೋಟಿಪರಮಾಯುಷ್ಯನು
ಮೆನಿಸಿ॥

ಕಂ ॥ ಮುಂನಿನಜನ್ಮದಸುಕೃತಮೆ ।
ಸಂನಿದಮಾಯ್ತೆನೆಮತಿಶ್ರುತಾವಧಿಬೋಧಂ ॥
ತಂನೊಡನೆಪುಟ್ಟೆಪುಟ್ಟಿದ ।
ನೇಂನಾಭಿಯಶಸ್ಸನಾಭಿಯೋಕುಲಧರರೊಳ್ ॥ ೯೦

ಶಾ ॥ ಒರ್ಬೊಂದಂ ಕುಡುಗುಂದಱಂಗಸುರಭೂಜಂಪೇಳ್ವುದಂಭೂತಳ ।
ಕ್ಕಾರೇನಂಪಡೆದೆಂತು ಜೀವಿಸುವರೆಂಬೀಕರ್ಮ್ಮಭೂವರ್ತ್ತನ ॥
ಪ್ರಾರಂಭೋಚಿತಜೀವನೋಪಕರಣೋಪಾಯಂಗಳಂತೋಱಿಕೊ ।
ಟ್ಟಾರಾತೀಯುಮನುಪ್ರಧಾನರನುದಾತ್ತಂನಾಭಿಕೇಳ್ಮಾಡಿದಂ ॥ ೯೧

ಕಂ ॥ ಮೊದಲಿಗನವನೀಶ್ವರರೊಳ್ ।
ಪದಿನಾಲ್ಕನೆಯಂಮನುಪ್ರಧಾನರೊಳಿಂಪೂ ॥
ಳ್ಪದಿತೋದಿತಮೆನೆಮಹಿಮಾ ।
ಸ್ಪದನಾದಂನಾಭಿನಾಭಿಖಂಡನಕುಶಳಂ ॥ ೯೨

ಭುವನಜನಜೀವನೋಪಾ ।
ಯವೃತ್ತಿಯಂತೋಱಿಕೊಟ್ಟು ಕೃತಕೃಷಿಕರ್ಮ್ಮ ॥
ವ್ಯವಹೃತಿಯಿಂಕೃತಯುಗಮೆಂ ।
ಬವಿಕಲ್ಪಮನಾದಿಕಾಲದೊಳ್ಪುಟ್ಟಿಸಿದಂ ॥ ೯೩

ಪಿಂಡಿಪಿೞಿದಿಕ್ಷುರಸಮಂ ।
ಕೊಂಡುಪ್ರಯೋಗಿಸುವುಪಾಯಮಂ ತೋಱ್ಪ್ಪುದುಮಾ ॥
ದಂಡಧರವಂಶಮವನೀ ।
ಮಂಡನಮಿಕ್ಷ್ವಾಕುವಂಶಮೆನಿಸಿತ್ತಿಳೆಯೊಳ್ ॥ ೯೪

ಮ ॥ ನಯನಂನೀಲಸರೋಜಮಂಸೆಣಸುಗುಂವಕ್ಷಸ್ಥಳಂವಜ್ರವೇ ।
ದಿಯನಾಳ್ಪ್ಪೆಸುಗುಂಮುಖಂಕಮಳಮಂಕೀಳ್ಮಾಡುಗುಂಕೈಗಳಾ ॥
ನೆಯಕೆಯ್ಯಂನಖಕಾಂತಿಚಂದ್ರಿಕೆಗಳಂಕೀಳ್ಮಾಡುಗುಂಜಾನುಖಾ ।
ಳೆಯಕಂಭಂಗಳನೆಂದೊಡೇವ್ರೊಗಳ್ವೆಶೋಭಾನಾಭಿಯಂನಾಭಿಯಂ ॥ ೯೫

ಕಂ ॥ ಮರುದೇವಿಯೆತಕ್ಕಳ್ನಾ ।
ಭಿರಾಜವಲ್ಲಭೆಯೆನಲ್ಕೆ ವಲ್ಲಭನೆನಿಸಲ್ ॥
ಮರುದೇವಿಗೆತಕ್ಕಂನಾ ।
ಭಿರಾಜನನುರೂಪರಿಂನದಾರ್ದ್ದಂಪತಿಗಳ್ ॥ ೯೬

ಪರಿಚಾರಿಕೆಯರ್ಸ್ಸುರಸುಂ ।
ದರಿಯರ್ಪ್ಪೊಡವಟ್ಟಿಪೂಜಿಪಂ ಪುರುಹೂತಂ ॥
ಪುರುದೇವಂಪೆರ್ಮ್ಮಗನೆನೆ ।
ಮರುದೇವಿಯಮಹಿಮೆ ಬಣ್ಣಿಸಲ್ಬಂದಪುದೇ ॥ 97

ಅವತಂಸಂ ತಂನಗುಣಾ ।
ಸ್ತವನಂಧರೆಗೆನಿಸಿನಾಭಿರಾಜಂಧರಣೀ ॥
ಯುವತಿಗೆಮರುದೇವಿಯೆದ ।
ಲ್ಸವತಿಯೆನಲ್ಸುಖದಿನರಸುಗೆಯ್ವುತ್ತಿರ್ದ್ದಂ ॥ 98

ವ ॥ ಅಂತಿರ್ಪ್ಪುದುಂ ॥

ಕಂ ॥ ಮರುದೇವಿಗೆಪುಟ್ಟಿದಪಂ ।
ಪುರುದೇವಂಬಂದುದಿವದಿನೆಂಬವಧಿಯಿನಾ ॥
ಪುರುಹೂತನಱಿದಯೋಧ್ಯಾ ।
ಪುರಮಂ ನಾಡಾಡಿಯಲ್ಲದಂತಿರೆಪಡೆದಂ ॥ 99

ಶಾ ॥ ನಾಡೊಳ್ಕೋಸಲದೇಶಮೊಂದೆಪುರದೊಳ್ಸಾಕೇತಮೊಂದೀಕ್ಷಣಾ ।
ಕ್ರೀಡಾವಾಸಮೆನಲ್ಪುರಂದರನಲಂಪಿಂನಾಭಿರಾಜಂಗೆಮಂ ॥
ಮಾಡಿಟ್ಟಂಕುರುವಿಟ್ಟುಮನ್ಮಥನೆಬಣ್ಣಂಗೆಯ್ದನೆಂದೆಂದೊಡಾ ।
ನಾಡುಂಬೀಡುಮನೊಂದೆನಾಲಗೆಯೊಳಿಂನೇವಣ್ಣಿಪಂಬಣ್ಣಿಪಂ ॥ 100

ಕಂ ॥ ಬೀಡುಸುಕೃತಕ್ಕೆ ಚೆಲ್ವಿಂ ।
ಗಾಡುಂಬೊಲನಾಶ್ರಯಂಸುಖಕ್ಕೆ ನೆಪೆಱತೇಂ ॥
ನಾಡಾಡಿಯನಾಡಲ್ಲದು ।
ನಾಡೊಳಗುತ್ಕೃಷ್ಟಮಲ್ತೆ ಕೋಸಲದೇಶಂ ॥ 101

ಉ ॥ ಪರ್ವ್ವತಸಾನುಸರ್ವ್ವಮಣಿಯಿಂಪೞಸರ್ವ್ವಫಲದ್ರುಮಂಗಳಿಂ ।
ದುರ್ವ್ವರೆಸರ್ವ್ವಸಸ್ಯದೊದವಿಂತರುಗುಲ್ಮಲತಾವನಸ್ಥಲಂ ॥
ಸರ್ವ್ವಋತುಪ್ರವೇಶದಿನಶೇಷಜನಂಪರಿಪೂರ್ಣ್ಣಲಕ್ಷ್ಮಿಯಿಂ ।
ಸರ್ವ್ವಗುಣಂಗಳಿಂದೆಸೆಯೆ ಸರ್ವ್ವಸುಖಾವಹಮಾಮಹೀತಳಂ ॥ 102

ಮ ॥ ಅಮರ್ದ್ದಂಮುಂದಿಡೆಮಂದಹಾಸವಲರ್ಗ್ಗಣ್ಬೆಳ್ದಿಂಗಳಂಬೀಱೆತೋ ।
ಳಮೊದಲ್ಗೆಯ್ದುಪೊದಳ್ದಪೆರ್ಮ್ಮಲೆಗೊಡಂಗಳ್ಪೊಸಲಾವಣ್ಯತೋ ॥
ಯಮನಾಲೋಕನಪಾತ್ರದಿಂಮಱೆದುಪಾಂಥಶ್ರೇಣಿನೀರಳ್ಕೆಯಂ ।
ಶ್ರಮಮಂತೀರಮೆಯಿಂಪ್ರಪಾಂಗನೆಯರಿಂಕಣ್ಗಾವುದಾದೇಶದೊಳ್ ॥ 103

ಕಂ॥ ತೀವಿದ ತಿಳಿಗೊಳದಿಂಪೊಂ।
ದಾವರೆಗೊಳದಿಂದರಳ್ದನೆಯ್ದಿಲ್ಗೊಳದಿಂ॥
ದಾವಲ್ಗೊಳದಿಂಚೆಲ್ವಿಂ।
ಗಾವಾಸಮೆನಿಪ್ಪವೊಪ್ಪುವಾನಾಡೊಗ್ಗರ್ಗಳ್॥ 104

ಕಳಕಂಠಕ್ಕತನುಗೆ ಬಾ।
ಪಲತಾರೋಹಣವಿಕಾರವಂಗಾಮ್ರಕುಜಾ॥
ವಂಗೆ ಮಧುವಿಕೃತಿಮಾನವ।
ಕುಲಕ್ಕೆ ಕನಸಿನೊಳಮಿಂತಿವಿಲ್ಲಾನಾಡೊಳ್॥ 105

* * * *

ಉ॥ ಕಂಣೆವೆಯಿಕ್ಕವಾಜಿಯುತಜೃಂಭನದಿಂಸಿರಿಕೆಯ್ವೊಲಂಗಳಿಂ।
ಕಂಣೆವೆಯಿಕ್ಕಳಲ್ಲಿಪಥಿಕರ್ಗ್ಗಳಿಸೋಪಬಳಾಜನಂಗಳಿಂ॥
ಕಂಣೆವೆಯಿಕ್ಕರೀಕ್ಷಿಸೆಪುರಂಸುರಲೋಕಮದೇಕೆರಿಕ್ಕಟಿಂ।
ಕಂಣೆವೆಯಿಕ್ಕದೆಂದುನಗುಗುಂನಿಜರತ್ನಗೃಹಾಂಶುಜಾಳದಿಂ॥ 107

ವ॥ ಆಪುರೋಪವನದೊಳಸಮಶರ ಕಿಶೋರಕೇಸರಿಗಜಿರ್ಗಜ್ಜಿಸದಕೃತಕಗಿರಿಗಳಿಲ್ಲ, ಮನೋಜರಾಜವಿಜಯಸಂಕೇತನಶಫರಸಂಚಾರವಿಲ್ಲದಸರೋವರಂಗಳುಮಿಲ್ಲ, ರತಿಪತಿಯಪೂಗಣೆಯದೊಣೆಗೆದಜವಪೂದೋಂಟವಿಲ್ಲ, ಕುಸುಮಶರಕೋಪ ಬಿಯನುದ್ದಮುರಿಪದತಣ್ಪೆಳೆಯಿಲ್ಲ, ರತಿಯಲಾವಣ್ಯರಸಪ್ರವಾಹದಿಂಪಲ್ಲವಿಸದಚೂತವನಮಿಲ್ಲ, ಕಾಮರಾಗರಸಮಂಕಾಳ್ಪರಂಮಾಡದಕೋಕವನಮಿಲ್ಲ, ಕಂದರ್ಪ್ಪದಂಡಶೋಕಮಾವರಿಸದಚಂದನವನಂಗಳಿಲ್ಲ, ಮನೋಜರಾಜನೀರಾಜನದೀಪಕಳಿಕೆಯಂ ಪಳಗದಚಂಪಕವನಮಿಲ್ಲ, ಮಕರಧ್ವಜವಿಜಯಪಂಚಬಾಣಕೃಪಾಣಪಟ್ಟದೊಡನೆಕೊನೆಯಬಿಣ್ಪಿಂತೊನೆದುತೂಗದಪೂಗವನಮಿಲ್ಲ, ಮದನಮೋಹಾಂಧಕಾರಮಂಕೆದಱದತಮಾಲವನಮಿಲ್ಲ, ರತಿಪತಿಯಮಧುಪಾನಗೋಷ್ಠಿಯಂನೆಱೆಯದಸುವರ್ಣ್ಣನವಕರ್ಣ್ಣಿಕಾರಮಿಲ್ಲ, ಮಕರಧ್ವಜವಿಜಯಲಕ್ಷ್ಮೀನಲಿದುನರ್ತ್ತಿಸದವನದವೇದಿಕೆಗಳಿಲ್ಲ, ಮಧುಮಹಾದೇವಿಪಟ್ಟಂಗಟ್ಟದಮಾಧವಿಗಳಿಲ್ಲದಿಲ್ಲ, ಕಂತುದಂತಿಪಿನದಂಬರಿಯದವೇಳಾವನವೀಥಿಗಳಿಲ್ಲ, ಪುಷ್ಪಶರವಶೀಕರಣಮಂತ್ರಮಂಪಠಂಗಟ್ಟದಕೋಗಿಲೆಗಳಿಲ್ಲ, ಸ್ಮರನಬಿರುದಂಬಿನಂಕಮಾಲೆಗಳ ನೋದದಗಿಳಿಗಳಿಲ್ಲ, ಅಂತಃಕರಣಸಮುದ್ಭವಚಾಪಟಂಕೃತಮನಲಂಕರಿಸದಜಳದೇವತಾಕಳಕೂಜಿತಮನುಕರಿಸದೇಶಂಗೆಯ್ಯದಸಾರಸಂಗಳಿಲ್ಲ, ಚಿತ್ತಜನಕೀರ್ತ್ತಿಲತೆಯಬಿತ್ತು ಮೊದಲೆನಿಸದವಿಕಚವಿಚಕಿಲವಲ್ಲರಿಗಳಿಲ್ಲ, ಜಗದ್ವಶೀಕರಣದತಿಲಕಮೆನಿಸದತಿಲಕವನಮಿ

ಲ್ಲ, ಮನೋಭವನಭುಜವಿಜಯಮುಂನಿರಾಕುಳಂಮಾಡಿದವಕುಳವನಮಿಲ್ಲ, ಮನ್ಮಥಂಗೆಪಥಿಕರಂಪಿಸುಣ್ಬೇೞದಮಾರಾವತಂಗಳಿಲ್ಲ, ದರ್ಪಕನೆದೆಲೇಪನಮನುದ್ದಪನಂಮಾಡದರಥಾಂಗಮಿಥುನಂಗಳಿಲ್ಲ, ವನದೇವತೆಗೆಪೇೞಿದಳಿಯನತ್ತಿಸದಸೋಗೆನವಿಲುಗಳಿಲ್ಲ, ಅದಲ್ಲದೆಯುಂ ||

ಉ|| ಪಾರಬನಂಗಳೊಳ್ಕುಸುಮಸಾರಭಸಾರಸಮೀರಮಂದಸಂ |
ಚಾರಮೆಪಾಂಥರಳ್ಕಿರ್ದೆಯನಾರ್ದ್ದಿಸುವಂಗಜಬಾಣಮೋಕ್ಷಹೂಂ ||
ಶಾರಮೆಬಂಡನುಂಡುನನೆಗೊಂಬುಗಳಂಮೊರೆದೇಳ್ವಭೃಂಗರ್ಘೋಂ |
ಕಾರಮೆಮಾಳ್ಪುದಾರಬಗೆಗಂಮದನೋತ್ಸವಹರ್ಷಭಾರಮಂ || 108

* * * *

ಮ|| ಪದಪಂಬೇಱಗುಮಾಪುರೋಪವನದೊಳ್ ಪೆಣ್ದುಂಬಿವಿಂಡಿಂಕೆಱಂ |
ಗಿದನೆಯ್ದಲ್ಕೊಳನಂಚೆವಿಂಡನೊಳಕೊಂಡಂಭೋಜಷಂಡಂತೆಱ ||
ಪ್ಪೆರ್ದಿದೇಳಾವನದೊಡ್ತುಗೊಂಡಕದಳೀಕಾಂಡಂತರಂಗೊಂಡಚೂ |
ತದಸಾಳ್ದಂದನವೀಥಿಸಂಪಗೆಯಜೊಂಪಂಮಾಧವೀಮಂಟಪಂ || 110

ಕಂ|| ವನಜವನರಾಜಿಕೂಜ |
ದ್ವನವಿಹಗವಿರಾಜಿಪುರಬಹಿಃಪುರಕೇಳೀ ||
ವನದೊದವುರತಿಯುಪ್ಪೊಸಜ |
ವ್ವನದೊದವೆನೆನೆಱೆಯೆಪೊಗಳಲಾವಂನೆಱೆವಂ || 111

ಜೇರ್ವಿಡಿದುಕಾಯ್ತುಪಲಸಿಂ |
ನೀರ್ವ್ವೊನಲಂಕಱೆವತೆಂಗುಹೊಂಬಾಳೆಗಳಿಂ ||
ಸೋರ್ವ್ವಡಿಕೆಯಸಸಿವಳಸಿಂ |
ಪೇರ್ವ್ವಲಿವಳ್ಳಿಗಳಸೊಗಯಿಕುಂಪುರವನದೊಳ್ || 112

ವ|| ಅಂತುಕಂತುಗಜವಿಹಾರವೀಥಿಯುಂಸುಕೃತಸುರಭಿಸಂಚಾರಸುಕ್ಷೇತ್ರಮುಂನೇತ್ರಪುತ್ರಿಕಾಪ್ರಾಸಾದನವನಮುಂಲಕ್ಷ್ಮೀಲಾಸ್ಯಮಾಂಗಲ್ಯರಂಗಮುಮೆನಿಪಪುರಬಹಿಃಪುರದಿಂದೊಳಗೆ ||

ಕಂ|| ಬಡಬಾನಳಂಗೆಸೆಡೆದಿಂ |
ಗಡಲೆಕರಬ್ಬೊಕ್ಕುದಮರಕ್ಕೆಳಮಸಂಬೀ ||
ಪಡೆಮಾತಂನೀಗ್ಗಾಗಡಿಗೆ |
ಪಡೆಯುತ್ತುಂಪೊಂನಕೋಂಟೆಯಂಬಳಸಿಕ್ಕುಗಂ || 113

ಕಂ॥ ಚೆಂಬೊನ್ನ ಕೋಂಟೆಪರಿವೇ ।
ಷಂಬೆತ್ತಳನೇಸಱಿಂತೆ ನೀರ್ಗ್ಗಡಿಗೆಯಂ ॥
ತುಂಬಿದ ನೀರ್ಪ್ಪುರ್ಗಗಳವಲ ।
ಪೊಂಬಂಣದಿನಾರಕಂಣುವಮಂಸೆಱೆಗೆಯ್ಗುಂ ॥ 114

ಮಂದರಕಂದರಮೆಂಬೀ ।
ಸಂದೆಗದಿಂವಿಸಱಿಸೂತನಂಕೇಱಿನಿಜ ॥
ಸ್ಯಂದನಮಂಕೋಂಟೆಗೆಭರ ।
ದಿಂದೆಳೆಗುಂಕಳ್ಕ್ಕಿರ್ಕಿೞವಿನನಹಯಂಗಳ್ ॥ 115

ಮುಗಿಲಟ್ಟಳೆಗಳ ಕೆಲದಂ ।
ಬುಗಂಡಿಯಿಂನುಸುಳ್ದು ನಡೆವದಿನಕರನಹಯಂ ॥
ಗಗನಾಧ್ವಖೇದಮಂಪಳ ।
ಯಿಗೆಗಳ ತಣ್ಣೆಲರತೀಟದಿಂತೊಲಗಿಸುಗುಂ ॥ 116

ವ॥ ಅಂತಲಂಘ್ಯಮುಮಭ್ರಂಕಷಮುಂ ವಿವಿಧಾಟ್ಟಾಳಕಮುಮೆನಿಪ್ಪ ಪ್ರಾಕಾರದಿಂ
ದೊಳಗೆ ॥

ಚ॥ ಬರೆದವಿಚಿತ್ರಪತ್ರನಿಚಯಂನಿಜಲೋಚನಚಂದ್ರಿಕಾಪರಂ ।
ಪರೆಗಳಪಟ್ಟುಸೋರ್ವ್ವಶಶಿಕಾಂತದಕೇರ್ಗ್ಗಳನೀರ್ವ್ವನಲ್ಗೆಂ ॥
ಪರೆಯೆ ಕನಲ್ದು ಕರ್ಗ್ಗಿಸುಗಣ್ಪೆ ಹರಿನ್ಮಣಿಭಿತ್ತಿಭಾಗದೊಳ್ ।
ಪುರವನಿತಾಜನಂಬರೆಯುತಿರ್ಪ್ಪದಭಂಗುರಪತ್ರಭಂಗಮಂ ॥ 117

ಮ॥ ಸ್ರ॥ ನಱುಸುಯ್ಗಂಮಾಲೆಗಂಸೋಳ್ಱಿದೆಱಗುವಿನಂತುಂಬಿಗಳ್ಸೋಡಿದರ್ವ್ವ ।
ಯ್ಮಱೆವಂನಂಬಾಹುಮೂಲಂಪೊಗರನುಗುೞ್ವನಂಕಣ್ಮಲಬ್ಬಾರ್ಗಳೆವಿಂಚಂ ॥
ಕಱೆವಂನಂಮಾಲೆಪೂವಂನೆಗಪಿಸೊಗಯಿಕುಂನೀಱಿರೊಳ್ಪುಷ್ಪಚಾಪಂ ।
ಗುಱಿಯೆಂಸ್ತೋಱಲಂಬಂಪೊದೆಗೆದಱಿದಪೊಲ್ಪುಷ್ಪಲಾವೀಕದಂಬಂ ॥ 118

ಚ॥ ಸುರಪನವಜ್ರಮಂಹರಿಯಕೌಸ್ತುಭಮಂಹರನಿಂದುಲೇಖೆಯಂ ।
ವರುಣನಮುತ್ತಿನೆಕ್ಕಸರಮಂಗರುಡಾಂಗದಪಚ್ಚೆಯಂಫಣೀ ॥
ಶ್ವರಫಣರತ್ನಮಂಪಲೆಗೆಬೀಣ್ಮೆದುವಲ್ಲಮೆನಿಪ್ಪರತ್ನದಿಂ ।
ದೆರಡನೆಯಬ್ಧಿರಂತವಸರಂಗೆಲೆವಂದುದುರೋಹಣಾದ್ರಿಯಂ ॥ 119

ಮ॥ ಸ್ರ॥ ವನಜಂಪಂಕಾಂಕಿತಂಗೋವಳ್ಳಿತಿಯುಮೊಲೆಯೊತ್ತಿಂಗೆಪಕ್ಕಾಯ್ತುಗೋವ ।
ರ್ದ್ಧನವಕ್ಷೋಭಾಗಮೌರ್ವ್ವಜ್ವಲನಬಹುಳಧೂಮಾಕುಲಂಮಾಲಮುಂನೀ ॥

ರನಪಾಯಸ್ಥಾನಮೆಂದಾಪುರವರದವಣಿಗ್ವ್ಯಾಟಕಹರ್ಮ್ಯಂಗಳೊಳ್ಮಂ ।
ನಿನಸಂಚಾರಸ್ವಭಾವಂಪರಿಪಡೆಪದಱಿಂಲಕ್ಷ್ಮಿನಿಚ್ಚಿಂತಮಿರ್ದ್ದಳ್ ॥ 120

ಕಂ ॥ ದಿವಿಜವಿಮಾನಂಮಾಡದು ।
ವಿವುವಮಾಡಿದುವೆಂಬಭೇದಮಲ್ಲದೆಚೆಲ್ವಿಂ ॥
ನವರತ್ನರಚನೆಯಿಂಭೇ ।
ದವಿಲ್ಲತತ್ಪುರದಭವನಮೆನಿತನಿತಱೊಳಂ ॥ 121

ಇರುಳುಂಪಗಲುಂಪುರದೊ ।
ಳ್ಪೆಱಸಿರ್ಪ್ಪುವುಪದ್ಮರಾಗಗೃಹದೆಳವಿಸಿಲಿಂ ॥
ಹರಿನೀಳಗೃಹದತಮದು ।
ಬ್ಬರದಿಂಶಶಿಕಾಂತಗೃಹದಚಂದ್ರಾತಪದಿಂ ॥ 122

ಸಿಲ್ಪಿಗಡಕಲ್ಪಪತಿಸಂ ।
ಕಲ್ಪಂರತ್ನೋಪಲಂದಳಂಗಡಶೋಭಾ ॥
ತಳ್ಪಮಿದೆಂನದೆಪೇಱವಿ ।
ಕಲ್ಪಿಸುವೆಂಗಾಂಪನೆನಿಸುಗುಂಕರುಮಾಡಂ ॥ 123

ನೆಲೆಮಾಡದಪೊಸದೇಸಿಯ ।
ನೆಲೆಮಾಡದಕಲ್ಪಸದನಮೆಯ್ದುದಣಿಂಕೇ ॥
ಳ್ನೆಲೆಯಾದುದಿದಱತೆಱದಿಂ ।
ನೆಲೆಯಾದುದೆಸಕಲಜನದಕಣ್ಗಂಮನಕಂ ॥ 124

ಉ ॥ ಬಾಳತೃಣಂಗಳಂದೆಳಸುಗುಂಪಸುರ್ಗಲ್ಗಳಕಾಂತಿಯುಂಮೃಗೀ ।
ಬಾಳಕವಲ್ಲಿಮಾಣಿಕದಕೆಂಪೊಳಪಂಬಿಸಿಲೆಂದುನಟ್ಟಿರುಳ್ ॥
ಪೇಳಿಸುಗುಂರಥಾಂಗಮೆಳಲಿಕ್ಕಿದಮುತ್ತಿನಸೂಸಕಂಗಳಂ ।
ಬಾಳಮೃಣಾಳಮೆಂದುಕರ್ದುಕಲ್ಬಗೆಗುಂಕಳಹಂಸಪೋತಕಂ ॥ 125

ಚ ॥ ಗಿಳಿಗಿಳಿವೆಣ್ಗೆಚೂತಫಲಮಂಕಳಹಂಸೆಗೆಹಂಸನಬ್ಜಕಂ ।
ದಳಮನಿಭಂಕರೇಣುಗೆಲವಂಗದಳಂಗಳನೀವಭಾವಮಂ ॥
ತಳೆದುವಿಳಾಸಮಂಮೆಱೆವರಾಣಿಯವಾಸದಬಳ್ಳಿಮಾಡದು ।
ಜ್ವಲಮಣಿಭಿತ್ತಿಚೆಲ್ವನೊಳಕೊಂಡೊಳಕೊಂಡುದಪೂರ್ವ್ವಭಿತ್ತಿಯುಂ ॥ 126

ಕಂ ॥ ಚರಲಂಮಿಡಿಯಿಪಪುಳಕಾಂ ।
ಕುರಮಂಪುಟ್ಟಿಸುವನೋಡೆತಲೆದೂಗಿಪಸುಂ ॥

ದರವೆನಿಪಕುಸುರಿವೆಸದಿಂ ।
ದರಮನೆವಾಳ್ಪುದುಮಯಂಗ ಮತಿವಿಸ್ಮಯಮಂ ॥ 127

ಮ॥ ನೆರೆದಿರ್ಪರ್ಚ್ಚತುರಾನನರ್ಪ್ಪಲಬರೆಂಬೊಳ್ರಾಜಬಾಧಾಪರಂ ।
ಪರೆಯುಂಕಂಟಕರಾಜಿಯುಂರಜಮುಮೆಂಬೊಳ್ಪೊರ್ದ್ದವೆಂಬೊಳ್ನರಂ ॥
ತರವೊಪ್ಪಂಗಿಡವೆಂದುನಾಭಿಕಮಳಾವಾಸಂಪುರಂನಾಭಿಪಂ ।
ಕರುಹಸ್ಕೀವುದುನೀಲರತ್ನಗೃಹಕಾಂತಿಧ್ವಾಂತದಿಂದೈನ್ಯಮಂ ॥ 128

ವ॥ ಅಂತತಿಶಯವೆನಿಪಯೋಧ್ಯಾಪುರಪತಿ ॥

ಮ॥ ಮನುಚೂಡಾಮಣಿನಾಭಿನಾಭಿಸುತನಾದಿಬ್ರಹ್ಮನಾಬ್ರಹ್ಮನಂ ।
ದನನಾಗ್ರಗ್ಗಂಮಿಗಿಲಾದನಾದಿಭರತಂಷಟ್ಖಂಡಭೂನಾಥನಾ ॥
ಮನುಜೇಂದ್ರಾತ್ಮಜನರ್ಕ್ಕಕೀರ್ತ್ತಿನೆಗಳ್ದಂತದ್ವಂಶಮತ್ಯಂತಮಾ ।
ವನಮತ್ತ್ಯಂನತಮಾಯ್ತುಸದ್ಗುಣಪತಾಕಾವಂಶಮೆಂಬಂನೆಗಂ ॥ 129

ಮ। ಸ್ರ॥ ನೆಲನಂಮರ್ಯ್ಯಾದೆಯಿಂಪಾಲಿಸಿನಿಯಮಿಸಿವರ್ಣ್ನಾಶ್ರಮಾಚಾರಮಂದೋ ।
ಷಲಮಂಮೆಯ್ವೆರ್ಚ್ಚದಂತಿಂದ್ರಿಯಸುಖದೊದವಂತೀರ್ಚ್ಚಸಾಮ್ರಾಜ್ಯದೊಳ್ಮ ॥
ನಲಿದಲ್ಲಿಂದತ್ತಲಾತ್ಯಂತಿಕಸುಖಪದಮಂಪೆತ್ತರಾಜಾಧಿರಾಜ ।
ಪ್ಪಾಲಿಂದಿಕ್ಷ್ವಾಕುವಂಶಂಕುಲನದಿಯವೊಲಾಯ್ತು ವ್ಯವಚ್ಛಿಂನರೂಪಂ ॥ 130

ಕಂ॥ ಜನಿಯಿಸಿನಾಭಿನರೇಂದ್ರನಿ ।
ನನುಕ್ರಮಂಗಿಡದೆಪೆರ್ಚ್ಚವಡೆದಾವಂಶಂ ॥
ಮುನಿಸುವ್ರತಜಿನಪತಿವರ ।
ಮನೂನವಾದತ್ತುದಾತ್ತ ಶಾಖಾಕೀರ್ಣ್ನಂ ॥ 131

ಕ್ಷಿತಿನಾಥಂತನ್ಮುನಿಸು ।
ವ್ರತನಾಥರಕಾಲದಂದುತದ್ವಂಶದೊಳ್ ॥
ಪ್ರತಿಮಂವಿಜಯರಥಂತ ।
ತ್ಸತಿಹೇಮಲತಾಂಗಿ ಹೇಮವರ್ಣ್ನಿಯೆಂಬಳ್ ॥ 132

ವಿಜಿಗೀಷುವೃತ್ತಿಯಿಂಭೂ ।
ಭುಜರಂಪೆಸಕೆಯ್ಸಿಕೊಂಡು ಭೂಮಂಡಲಮಂ ॥
ಭುಜದಂಡದೊಳಿರಿಸಿದನೇ ।
ನಜೇಯಭುಜಬಲನೊವಿಜಯರಥನರನಾಥಂ ॥ 133

ವ॥ ಆ ನರೇಂದ್ರನಂದನಂ ।

ಕಂ ॥ ಜಿತರಿಪುಸುರೇಂದ್ರಮನ್ಯು ।
ಕ್ಷಿತಿಪತಿರಿಪುನೃಪಕುಲಾಂಗನಾಜನಮನ್ಯೂ ॥
ದ್ಗತಬಾಷ್ಪಸಲಿಲಧಾರಾ ।
ಪ್ರತಾನದಿಂಕೀರ್ತಿವಲ್ಲಿಯಂ ಬೆಳೆಯಿಸಿದಂ ॥ 134

ವ ॥ ಅವಿಶದಕೀರ್ತಿಗೆಕೀರ್ತಿಶ್ರೀಯೆಂಬಳರಸಿಯಾಗೆ ॥

ಕಂ ॥ ಅಂದವಡೆದಟಲೆಯೆಮನಸಿಜ ।
ನಂದನನಳವಳವಿಗಳೆದಕೇಸರಿಯಳವಂ ॥
ಪೆಂಡಗುಳೆವಜ್ರಬಾಹುವು ।
ರಂದರರಂಬಿರ್ವ್ವರವರ್ಗ್ಗನಂದನರಾದರ್ ॥ 135

ಕಡಿದುವಿಪಕ್ಷಮನಿಂದ್ರಂ ।
ಕಡಿವಂತೆಕುಲಾದ್ರಿಪಕ್ಷಮಂತೋಳ್ವಲದಿಂ ॥
ಪಡೆದಂಪರಪ್ರತಾಪದ ।
ಪೊಡರ್ಪ್ಪುಕಿಡುವಂತೆವಜ್ರಬಾಹುಕುಮಾರಂ ॥ 136

ಪರಪುರಮನುರಿಪಿಡೆಸೆಗುರಿ ।
ಹರಿವಿನೆಗಂತನ್ನತೇಜಮರಿನೃಪವದನಾಂ ॥
ಬುರುಹಂಕರಾಂಕುವರದಿರೆ ।
ಪುರಂದರಂನೃಪಪುರಂದರಂಪೊಗಳಿಸಿದಂ ॥ 137

ಮಗನೊರ್ವ್ವಂತನಗಿರ್ವ್ವರ್ ।
ರ್ಮ್ಮಗಂಗೆಸುತರಾಗೆಮೂಱುಕಂಣೆನೆಮೂಱುಂ ॥
ಜಗಮಂತನಗೆಜಗಿಸಿದಂ ।
ತ್ರಿಗುಣಿಸೆತಂನೊಳ್ಮನೋರಥಂವಿಜಯರಥಂ ॥ 138

ಚ ॥ ವಿಜಯರಥಂಧರಿತ್ರಿಗೆಮನೋರಥಸಿದ್ಧಿಯನಿತ್ತುವಕ್ತ್ರಪಂ ।
ಕಜವರರಾಜಹಂಸಿವರವಾಗ್ವಧುರಂಜಿಸೆತಂನಕೀರ್ತಿದಿ ॥
ಗ್ಗಜರದನಕ್ಕೆ ಕೀರ್ತಿಮುಖವಾಗೆಜಗಜ್ಜನಕಂಠಭೂಷಣಂ ।
ನಿಜಗುಣನಾಮವಾಗಿರೆವಿರಾಜಿಸಿದಂಕವಿತಾಮನೋಹರಂ ॥ 139

ಗದ್ಯ ॥ ಇದುಪರಮಜಿನಸಮಯಕುಮುದಿನೀಶರಚ್ಚಂದ್ರ ಬಾಲಚಂದ್ರಮುನೀಂದ್ರಚರಣನಖಕಿರಣಚಂದ್ರಿಕಾಚಕೋರಂ ಭಾರತೀಕರ್ಣಪೂರಂ ಶ್ರೀಮದಭಿನವಪಂಪವಿರಚಿತಮಪ್ಪರಾಮಚಂದ್ರಚರಿತಪುರಾಣದೊಳ್ಪೀಠಿಕಾಪ್ರಕರಣಂಪ್ರಥಮಾಶ್ವಾಸಂ ॥

ದ್ವಿತೀಯಾಶ್ವಾಸ ಪ್ರಾರಂಭ.

—:o:—

ಕಂ ॥ ಶ್ರೀಯಂವಿತರಣದೊಳ್ವಾಕ್ ।
ಶ್ರೀಯಂಸಾಜನ್ಯವೃತ್ತಿಯೊಳ್ವಿಮಳಯಶಃ ॥
ಶ್ರೀಯಂಜಿನಪ್ರವಚನ ।
ಶ್ರೀಯದೊಳತಿಶಯಿಸಿನೆಗಳ್ದನಭಿನವಪಂಪಂ ॥ 1

ವ ॥ ಆವಿಜಯರಥನರನಾಥನೊಂದುದಿವಸವೊಡ್ಡೋಲಗಂಗೊಟ್ಟುಯಿರಲಾಸಮಯ
ದೊಳ್ ॥

ಮ ॥ ಸಕಲಕ್ಷತ್ರಕಿರೀಟತಾಡಿತಪದಾಂಭೋಜಾತನಾಸ್ಥಾನವೇ ।
ದಿಕೆಗುತ್ತಾಸಿತಚಿತ್ರವೇತ್ರಲತನೋರ್ವ್ವಂಕಾರ್ಯ್ಯವಿಜ್ಞಾಪನೋ ॥
ತ್ಸುಕಚಿತ್ತಂಧವಳೋತ್ತರೀಯವಸನಂಲಂಬೋದರಂಲಂಬಕೂ ।
ರ್ಚ್ಚಕಳಾಪಂಸಿತಕಂಚುಕಂತ್ವರಿತದಿಂಬಂದಂಪ್ರತೀಹಾರಕಂ ॥ 2

ವ ॥ ಅಂತುಬಂದುವೊಗಸಾಲೆಯೊಳ್ಮೆಯ್ಯಿಕ್ಕಿವೊಗಸುತ್ತಿನಡುಗುಲದಬಿನ್ನಪದಸೆರ
ಗನಧರಪಲ್ಲವಕ್ಕೆತೆಗೆದುದೇವಾನಾಗಪುರವನಾಳ್ವಇಭವಾಹನತನೂಭವನುದಯ
ಸುಂದರಕುಮಾರನರಮನೆಯಬಾಗಿಲೊಳ್ಬಂದುನಿಂದಿರ್ದ್ದಪನೆಂದುಬಿನ್ನವಿಸೆ ಬರ
ವೇಳ್ಕೆಂಬುದುಂ ॥

ಮ॥ಸ್ರ ॥ ದಿವದೊಳ್ಬಿಟ್ಟಿಂಗಳಂಬಿತ್ತರಿಸೆತರಳಮುಕ್ತಾವತಂಸಪ್ರಭಾಪ ।
ಲ್ಲವಮಾಕಾರಂಸ್ಮರಾಕಾರಮಜನಿಮಿಸೆಪೊಕ್ಕಂನೃಪಾವಾಸಮಂಮಾ ॥
ಸವಸಾಂದರ್ಯ್ಯಂಧರಾವಲ್ಲಭಸುಭಗಸಭಾಲೋಕನಾಕರ್ಷ್ಣಣಂಮಾ ।
ಡೆವಿಶಾಲೋರಸ್ಥಳೀನಿಸ್ತುಲಚಳಚಲಿತಸ್ಫಾರಹಾರಂಕುಮಾರಂ ॥ 3

ಕಂ ॥ ಕತಿಪಯಪರಿಜನಪರಿವೃತ ।
ನತಿಲಲಿತಾಕೃತಿಸಿತಾತಪತ್ರದನೆಳಲೊಳ್ ॥
ಸಿತಶತಪತ್ರಚ್ಛಾಯಾಂ ।
ಚಿತಬಾಳಮರಾಳಲೀಲೆಯಂಪಾಲಿಸಿದಂ ॥ 4

ವ ॥ ಅಂತುಬಂದುನೃಪಸಭಾಸದನಮಂಪೊಕ್ಕು ॥

ಕಂ ॥ ಓಲಗಿಸಿವಸ್ತುವಾಹನ ।
ಮಹಾಲೆಯನುತ್ತಂಸಮಣಿಮರೀಚಿಗಂಭೂ ॥

ಪಾಲನಚರಣಸರೋಜ ।
ಕ್ಕೋಲಗಿಸಿದನುದಯಸುಂದರಂತಣ್ಬಿಸಿಲಂ ॥ 5

ವ॥ ಅಂತುವಿನತನಾದನಂತರಂ ಸುರೇಂದ್ರಮನ್ಯುವಜ್ರಬಾಹುಪುರಂದರರೊಳಂವಿನಯವೃ
ತ್ತಿಯಿಂಮೆಱೆದುಸಮುಚಿತಾಸನದೊಳ್ಕುಳ್ಳಿರ್ದು ಮುಕುಳಿತಾಂಜಲಿಪುಟನಾಗಿ ॥

ಮ॥ ಸಕಲಕ್ಷತ್ರಪವಿತ್ರನಿನ್ನಚರಣಾಂಭೋಜಾತಸೇವಾಸಮು ।
ತ್ಸುಕನಸ್ಮತ್ಪಿತೃವೆನ್ನತಂಗಿಯನನಂಗಶ್ರೀನಟೀನಾಟ್ಯವೇ ॥
ದಿಕೆಯಂತನ್ನಮಗಳ್ಗ ಕೋದಯೆಯನಂಗೋನ್ಮಾದೆಯಂವಜ್ರಬಾ ।
ಹುಕುಮಾರಂಗಿಭವಾಹನಂಮದುವೆಮಾಳ್ಪುತ್ಸಾಹದಿಂದಟ್ಟಿದಂ ॥ 6

ವ॥ ಎಂದುಬಿಂನಪಂಗೆಯ್ಯೆ ವಿಜಯರಥಮಹೀನಾಥನುದಯಸುಂದರನಮುಖಾರವಿಂದ
ಮಂನೋಡಿ ॥

ಉ॥ ಕನ್ನಿಕೆವಜ್ರಬಾಹುಗನುರೂಪೆಗಡಂಕುಡುವಂಗಡಂಜಗ ।
ನ್ಮಾನ್ಯನೆನಿಪ್ಪುದಾತ್ತನಿಭವಾಹನವಲ್ಲಭನಿಂತಿದನ್ಯಸಾ ॥
ಮಾನ್ಯಮೆನಂಮಕೊಳ್ಕೊಡೆಗೆತಕ್ಕುಡೆಯಂಸಮಕಟ್ಟಿಕೊಟ್ಟನೆಂ ।
ದುನ್ನತಚಿತ್ತನೊಪ್ಪೆನುಡಿದಂಪ್ರಿಯಮಂವಿಜಯಾಂಗನಾಪ್ರಿಯಂ ॥ 7

ಕಂ॥ ಅಧಿರಾಜಂವದನಾಂಬುಜ ।
ಮಧುವೆನಿಸಿದಮಧುರವಚನದಿಂ ತಣಿಪಿಮನೋ ॥
ಮಧುಕರಮನುದಯಸುಂದರ ।
ನಧಿಕೋತ್ಸವರಸತರಂಗಿತಾಶಯನಾದಂ ॥ 8

ವ॥ ಅಂತಾತನಂಸಂತೋಷಂಬಡಿಸಿ ವಿಜಯರಥಂವಿವಾಹಮಂಗಳೋಪಕರಣಪುರಸ್ಸರ
ಮಾಶೀರ್ವಾದನಿನದಮೊದವೆಮದುವೆಯಂಶುಭದಿನಮುಹೂರ್ತದೊಳ್ವಿಸರ್ಜ್ಜಿ
ಸುವುದುಂ ॥

ಕಂ॥ ಓರಂನರೆನಿಖಿರಾಜಕು ।
ಮಾರಕರೊಡನೇಱೆವಜ್ರಬಾಹುಕುಮಾರಂ ॥
ವಾರಣಮನೇಱಿದಂದಿ ।
ಗ್ವಾರಣಮಂದಿಕ್ಕುಮಾರೇಱುವತೆಱದಿಂ ॥ 9

ಪಟುಪಟಹಶಂಖರುತಿದಿ ।
ಕ್ತಟಮಂತಳ್ಪೊಯ್ಯೆಗಂಡಮಂಡಲತಟದೊಳ್ ॥

ನಟಿಯಿಸೆಮಣಿಕುಂಡಳರುಚಿ ।
ಪಟಳಂನೃಪನನೆಸೆದುನೋಂಕಿದಂವಾರಣಮಂ ॥ 10

ಮ ॥ ಎರಡುಂಪಕ್ಕದೆಪಣ್ಣಿದೋಜೆವಿಡಿಯಂಕಯ್ಗೆಯ್ದುಬಂದೇಱಿಬಿಟಾ ।
ಮರಮಂಕಂನೆಯರಿಕ್ಕೆಲೋಹಖುರವಾಹಂಸುತ್ತಿಕಾಲ್ಗಾಪಿನೊಳ್ ॥
ಬರೆಬಂದಂಧವಳಾತಪತ್ರದಡಿಯೊಳ್ಕಾಲ್ಗೋದುಗಂಧಾಂಧಸಿಂ ।
ಧುರಮಂಮೆಯ್ಗಲಿವಜ್ರಬಾಹುಮಹಿಪಂವಜ್ರಾಯುಧಂಬರ್ಪ್ಪವೋಲ್ ॥ 11

ಕಂ ॥ ಕೆಲಕೆಲದೊಳ್ರಾಜಸುತರ್ ।
ಕೆಲಬರ್ಬ್ಬರೆರಾಜಚಿಹ್ನಪಾಳಿಧ್ವಜಸಂ॥
ಕುಲಮುಂಭಟಕಟಕಮುಮಾ ।
ತಲೆಯೊಳ್ಬರೆವಜ್ರಬಾಹುಪಯಣಂಬಂದಂ ॥ 12

ವ ॥ ಅಂತುಬರುತ್ತುಂ ॥

ಮ ॥ ಮುಗಿಲಂಮುಟ್ಟಿದರತ್ನಕೂಟರುಚಿಯಿಂಜ್ಯೋತಿರ್ವ್ವಿಮಾನಂಗಳಂ ।
ನಗುವಂತುದ್ಧತನಿರ್ಝ್ಝರಪ್ಲವನದಿಂಗಂಗಾಸರಿತ್ಪೂರಮಂ ॥
ನಗುವಂತುನ್ನತಿವೆತ್ತಕಲ್ಪತರುಸಾನೂದ್ಯಾನದಿಂಮೇರುವಂ ।
ನಗುವಂತೊಪ್ಪುವುದಂವಸಂತಗಿರಿಯಂಕಂಡಂಮಹೀಮಂಡನಂ ॥ 13

ವ ॥ ಆವಸಂತಗಿರಿಯೊಳೆಡೆಯಾಡುವವಿದ್ಯಾಧರವಧೂಜನದಸೋರ್ಮ್ಮುಡಿಯಿಂಸೂಸಿದಪೊಂಗೇದಗೆಯಕುತ್ತುಂಗಳಱಿಯತುಱುಂಗಲುಮಂ, ಸಿದ್ಧಕಾಮಿನಿಯರಕಪೋಳಪತ್ರದಿಂಮದನಕೇಳಿಯೊಳುದಿರ್ದ್ದಕತ್ತುರಿಯುಮಂಕನಕಕದಳೀದಳದಪತ್ರಭಂಗಂಗಳುಮಂ, ಕಿಂಪುರುಷದಂಪತಿಗಳಸುರತಕೋಳಾಹಳದಿಂದನಂಗಸಂಗೀತಕಸದನಮೆನಿಸುವೆಳಲತೆಯಜೊಂಪುಗಳುಮಂ, ಕಿಂನರನಿತಂಬಿನಿಯರ್ಕ್ಕಿಂಬೊಂನಸಿಲೆಯಮೇಲೆವಿರಚಿಸಿದಚೆಂನೆಯ್ದಿಲೆಸಳಪಸೆಗಳುಮಂ, ಗಂಧರ್ವ್ವಗಣಿಕೆಯರಬಹಳಪರಿಮಳಕ್ಕೆಳಸಿಬಳಸುವೆಳದುಂಬಿಗಳ ನಾದಕ್ಕೆ ಬೆಚ್ಚಿಬಿಸುಟಕರ್ಣ್ನಪೂರಪಾರಿಜಾತಸ್ತಬಕಂಗಳುಮಂ, ಒರೊಂದೆಡೆಯೊಳ್ಕಿಸುಸಂಜೆಯಂಪಸರಿಸುವಕಿಸುಗಲ್ಲಕೂಟಂಗಳುಮಂ, ಒರೊಂದೆಡೆಯೊಳಂಧಕಾರಮಂಕೆದಱುವಿಂದ್ರನೀಲದೊಡ್ಡುಗಲ್ಲುಮಂ, ಅಲ್ಲಿಗಲ್ಲಿಗೆನಿರ್ದ್ದವಜಳಧೃತಿಯನೊಡರಿಸುವವೈದೂರ್ಯ್ಯಶಿಖರಂಗಳುಮಂ, ಒರೊಂದೆಡೆಯೊಳೆಳವೆಳ್ದಿಂಗಳಂಬಿತ್ತರಿಸುವಚಂದ್ರಕಾಂತಶಿಲಾತಳಂಗಳುಮಂ, ಎಲ್ಲಾದೆಸೆಗಂತಣ್ಣಿಸಿಲನವಟಯಿಸುವವಜ್ರಶಿಲಾತಲಂಗಳುಮಂ, ಪೞಿವೇಱಿಮಾಣಿಕದಪೊಳಪುಮುಟ್ಟೆಕಿಡಿವಿಡುವ ಸೂರ್ಯ್ಯಕಾಂತಶಿಲೆಗಳುಮಂ, ಅತಿಕುತೂಹಳದಿಂನೋಡುತ್ತೆಬರ್ಪ್ಪಸಮಯದೊಳ್ತೊಟ್ಟನೆಕಟ್ಟಿದಿರೊಳ್ ॥

ಮ॥ಸ್ರ॥ ಮನಮಂಮುಟ್ಟಯಿಸ್ಸಮಧ್ಯಂದಿನದಬಿಸಿಲುಬೆಳ್ದಿಂಗಳಂತಾಗೆತಂನಿಂ ।
ತನುವಂಬೇರ್ಕ್ಕೆಯ್ದುಬಾಹ್ಯೇಂದ್ರಿಯಮನುಡಿಗಿಕ್ಕೈಯಿಕ್ಕಿನಿರ್ವ್ವಾಣಸಾಮ್ರಾ ॥
ಜ್ಯನಿವಾಸಕ್ಕೊರ್ವ್ವನಂತರ್ಮ್ಮುಖನಭಿಮುಖನಾದಿತ್ಯಬಿಂಬಕ್ಕೆಯೋಗೀಂ ।
ದ್ರನತಂದ್ರಂನಿರ್ನ್ನಿಮೇಷಂನಗನಿಕಟಪಟದ್ರತ್ನಕೂಟಂಬೋಲಿರ್ದ್ದಂ ॥ 14

ವ॥ ಅಂತಾಮಹಾತಿಥಿನಯನಾತಿಥಿಯಾಗಿರ್ಪ್ಪುದುಂ ॥

ಕಂ॥ ಮುಗಿದುವುಕರಕಮಲಂಗಳ್ ।
ಬಗೆಯಿಂಮುಂಪರಿದುಮುನಿಮುಖಾಂಬುಜಮಂತುಂ ॥
ಬಿಗಳಂತೆಮುಸುಱಿದುವುದಿ ।
ಟ್ಟಿಗಳೀನಭಿನುತನೊವಜ್ರಬಾಹುಕುಮಾರಂ ॥ 15
ದಾರುಣಸಂಸರಣಮಹೋ ।
ರ್ವ್ವೀರುಹಮಂಕೀಳ್ವಬವಸೆಯಿಂದಿರ್ದ್ದಪನೀ ॥
ಧೀರನೆನುತ್ತುಂರಾಜಕು ।
ಮಾರಕನಾಮುನಿಯಬಗೆದಬಗೆಯಂಬಗೆದಂ ॥ 16

ಜಿನಮುಖದರುಶನದಿಂತೊ ।
ಟ್ಟನೆಕತ್ತಲೆಪಿಂಗುವಂತೆಮುನಿಪತಿಮುಖದ ॥
ರ್ಶನದಿಂಚಿತ್ತದಕತ್ತಲೆ ।
ಜನಪತಿಗೋರ್ಮ್ಮೊದಲೆಪಿಂಗಿಪೋದತ್ತಾಗಳ್ ॥ 17

ಏನಯ್ಯಖಳ್ಗಧಾರೆಯು ।
ಜೇನ್ನೆದ್ಯ್ಯಂನಕ್ಕುವಂತೆಸಂಸಾರಸುಖ ॥
ಕ್ಕಾನೆಳೆವೆವಿಷಯಲೋಭದಿ ।
ನೇನಸ್ಸಂತಾನಮೊಂನನೇನಳಲಿಸದೋ ॥ 18

ವ॥ ಎಂನುತಱಿಸಂದುಮನದೆಱಕರಿಂದವಳೋಕಿಸುತ್ತಿರ್ಪ್ಪುದು ಮಾಸಮಯದೊಳುದ
ಯಸುಂದರಂವಜ್ರಬಾಹುಕುಮಾರನ ಮುಖಾರವಿಂದಮನವಲೋಕಿಸುತ್ತಲಿಂ
ತೆಂದಂ ॥

ಉ॥ ಭಾವಮುನೀಂದ್ರರಂಬಿಡದೆನೋಡಿದಪೈಮನಮೊಲ್ದೊಡಂತಪ ।
ಶ್ರೀವಧುಕಾಮಿನೀಜನದವೋಲ್ನಿನಗೀವಳೆಕೂರ್ತ್ತುವಸ್ತ್ರಭೂ ॥
ಷಾವಳಿಯಂಕಚಾವಳಿಯನೀವಧುಗರ್ವ್ವದಗಾಳುವಸ್ತ್ರಭೂ ।
ಷಾವಳಿಯಂಕಚಾವಳಿಯನಿತ್ತರನಲ್ಲದೆಪೊರ್ದ್ದಲೀವಳೇ ॥ 19

ವ॥ ಎಂದುಸರಸಮಂನುಡಿದೊಡರಸನುದಯಸುಂದರಂಗೆಂದನಾಂತಪಂ ಕಯ್ಕೊಂಡೊಡೆ
ನೀನೇಗೆಯ್ವೆಯೆನೆನಿಂನೊಡನೆನಾನುಂತಪಮಂಕಯ್ಕೊಳ್ವೆನೆಂಬುದುಂ॥

ಸ್ರ॥ ಒಡಂಬಡಿಸಿವಾಗ್ವಿಡಂಬನದಿನಾತನಂಬಂಧವಮಂ।
ಪಡಲ್ವಡಿಪವೇಗದಿಂದಿೞಿದುವಾರಣಸ್ಕಂಧದಿಂ॥
ತೊಡರ್ಪ್ಪಱಿದವನ್ಯವಾರಣದಮಾಳ್ಕೆಯಿಂದೇಱಿದಂ।
ತೊಡರ್ಪ್ಪನಿನಿಸಾನುಮಂಬಗೆಯದಾಕುಭೃತ್ಸಾನುವಂ॥ 20

ವ॥ ಆಗಳಾತನಮನದತಱಿಸಲವಂಕಂಡು॥

ಕಂ॥ ನಗೆದಿಟಮಾದೊಡೆನಾಡೆಯು।
ಮಗಿದುಸುಹೃಜ್ಜನಮುಮುದಯಸುಂದರನುಂಕೈ॥
ಮುಗಿದೆಱಗೆಮಣ್ಬೆನಲ್ಲಂ।
ಬಗೆಯದಿರಿಂಪೆಱತನೆಂದುಪಱಿಪಡೆನುಡಿದಂ॥ 21

ಈಮುನಿಯುಮನೀಮನಮುಮ।
ನೀಮೆಯ್ಯುಮನೀಮನುಷ್ಯಗತಿಯುಮನಾಮ್ಮಂ॥
ನೇಮಾತೊಪಡೆದೆನಿಲ್ಲಿಯ।
ಸಾಮಗ್ರಿಯೊಳಪ್ಪುಕೆಯ್ವೆನಘವಿಘಟನಮಂ॥ 22

ವ॥ ಎಂದು ಮನದಪರಿಚ್ಛೇದದೊಳ್ಪೆಱದಿಕ್ಕಿದಂಜಸಂಪರ್ಬ್ಬವಿನಂಜಗತ್ರಯಂನಾಲಗೆ
ಗೆತಂದು ಪರಿಜನಮನೊಡಂಬಡಿಸಿ॥

ಉ॥ ಕರ್ಪ್ಪಿನಬಿಲ್ಲನಿಕ್ಕಿ ಭಯದಿಂಮದನಂಪಱಿದೇಱೆಪುತ್ತ್ರನಾ।
ಪರ್ವ್ವತಮಂನರೇಂದ್ರಸುತನೇಱಿವಿರಾಜಿತಕೇಶಪಾಶಮಂ॥
ಪರ್ವ್ವಿದಮೋಹಪಾಶದೊಡನೋರ್ಮ್ಮಿದಲೊಳ್ಪೆಱದಿಕ್ಕಿದಂಜಸಂ।
ಪರ್ವ್ವವಿನಂಜಗತ್ರಯಮನಾಮುನಿನಾಥರಪಾದಪಾರ್ಶ್ವದೊಳ್॥ 23

ವ॥ ಅಂತು ವಜ್ರಬಾಹುಕುಮಾರಂಗುಣಸಾಗರಭಟ್ಟಾರಕರಚರಣೋಪಾಂತದೊಳ್ತಪ
ಶ್ಚರಣನಿರತನಪ್ಪುದುಂ॥

ಕಂ॥ ಎಂನೊಡವಂದಂತಕನಂ।
ಬೆಂನಟ್ಟಲೊಡಚ್ಚಿದಂ ಜಿತಾತ್ಮಂಸೆಡೆದಂ॥
ದೆಂನಜನಮೞಿಗುಮೆನಗಣೆ।
ಬಂನಂಬಂನಕ್ಕೆ ಪೇಱೆಕೋಱೆರಡೊಳವೇ। 24

ವ ॥ ಎಂದುದಯಸುಂದರಂ ಪರಿಚ್ಛೇದಿಸಿ ತಂನೊಡನೆತಪಕ್ಕೆ ತಱಿಸಂದಿಪ್ಪತ್ತುಮೂವ
ರರಸುಮಕ್ಕಳ್ವೆರಸುತಪೋನಿಧಿಯಸಂನಿಧಿಯೊಳ್ಜಾತರೂಪಧರರಪ್ಪುದುಂ ॥

ಕಂ ॥ ಅಗ್ರಜನೊಳಾದ ಜಿನದೀ ।
ಕ್ಷಾಗ್ರಹಣಮನನುಜಕೇಳ್ದು ತಾನುಂಜಿನದೀ ॥
ಕ್ಷಾಗ್ರಹಣಂಬಡೆದಳ್ ಲ ।
ಬ್ಧಿಗ್ರಹಣದಿಸೊಳ್ಪವಡೆವುದೊಂದಚ್ಚರಿಯೇ ॥ 25

ವ ॥ ಅಂತನಂತಗುಣೋದಯೆನಿಬ್ಬರತಪೋಭರವಂತಳೆದಿರೆತ್ತಲ್ ವಿಜಯರಥಮಹೀ
ನಾಥಂತಂನಮೊಂಮನಪ್ಪವಜ್ರಬಾಹುಕುಮಾರನತಪಃಪ್ರಭಾವಮಂತಿಳಿದು ॥

ಚ ॥ ಮದುವೆಗೆಪೋಪುದೆತ್ತಗಿರಿಕಂದರದೊಳ್ಮುನಿಯುಂ ಮನಸ್ವಿಕ ।
ಟ್ಟಿದಿರೊಳ್ ಕಾಣ್ಬುದೆತ್ತದುವೆ ಕಾರಣಮಾಗಿ ಕಷಂಗಿ ಮೋಹಮಾ ॥
ಕದ ತೊಡಱುಂಬಿದಿರ್ಚ್ಚಿದೆಸೆಯೊಟುವರಂನಿಜಕೀರ್ತ್ತಿಯಂನಿಮಿ ।
ರ್ಚ್ಚಿದನೆನೆ ವಜ್ರಬಾಹುವನೆಗಳ್ತೆಪೊಗಳ್ತೆಗಳುಂಬಮಾಗದೇ ॥ 26

ಕಂ ॥ ಯುವರಾಜಂನವಯೌವನ ।
ನವಯುವವದಿಂ ತನುಗನೊಡ್ಡಿದ್ದ ದೀಕ್ಷೆಗದೇ ॥
ನವಿಚಳನೊಕುಮಾರಂಮೋ ।
ಹವಿಷಾಹಿಯಕಾಳಕೂಟರದಮಂಕೀಳ್ತಂ ॥ 27

ಕಿಱುಗೂಸುವಿಷಯಸುಖಮಂ ।
ತೊಱೆದು ತಪಂಬಟ್ಟನಿಂನೆವರಮುಂ ಪಿಂದಾಂ ॥
ಮಱೆದಿರ್ದ್ದೆನೆಂದುತಂದಂ ।
ತಱಿಸಲವಂತಂನ ಚಿತ್ತದೊಳ್ ವಿಜಯರಥಂ ॥ 28

ವ ॥ ಅಂತುವಿಜಯರಥನರೇಂದ್ರಂ ನಿಜತನೂಜನಪ್ಪಸುರೇಂದ್ರಮನ್ಯುವೆಸುತಂನಮೊ
ಮ್ಮನಪ್ಪ ಪುರಂದರಂಗೆ ನಿಜರಾಜ್ಯಮನಿತ್ತು ನಿರ್ವ್ವಾಣಘೋಷರೆಂಬ ಮುನಿ
ಮುಖ್ಯರ ಸಮೀಪದೊಳ್ ತಪೋರಾಜ್ಯದೊಳ್ನಿಂದ ನಿತ್ತಲಾಪುರಂದರಂ ಸಕಲಸಾ
ಮ್ರಾಜ್ಯಸುಖಸುಧಾರಸದಿಂತಣಿದು ವಿಷಯವೈರಾಗ್ಯತತ್ಪರಂಕ್ಷೇಮಂಕರ ಮು
ಮುಕ್ಷುಗಳ ಸಮಕ್ಷಮದೊಳ್ ದೀಕ್ಷೆಯಂಕಯ್ಕೊಂಡು ನಿಲ್ವುದುಂ ॥

ಕಂ ॥ ಕೀರ್ತ್ತಿಮುಖದಂತೆ ಕೀಲಿಸೆ ।
ಕೀರ್ತ್ತಿ ದಿಶಾದಂತಿದಂತಮಂತಧಪತ್ಯಂ ॥

ಕೀರ್ತ್ತಿಧರನೆಂಬನರಸಂ ।
ಕಾರ್ತ್ತಸ್ವರಕುಧರದಂತು ಯಿಳೆಯಂತಳೆದಂ ॥ 29

ವ ॥ ಆಕೀರ್ತ್ತಿಧರನರೇಂದ್ರನೊಂದುದಿವಸಂಮಣಿಮಾಡದಮೇಲೆಮಣಿಮಯಾಸನದೊ
ಳಾಪ್ತಪರಿಜನಪುರಜನಪರಿವೃತನೊಡ್ಡೋಲಗದೊಳಿರ್ಪ್ಪುದುಮಾಸಮಯದೊಳ್ ॥

ಕಂ ॥ ಇನಮಂಡಲಮಂಸ್ವರ್ಬ್ಭಾ ।
ನುಮಂಗೆಕಡುಗಂದಿಕಂದುಗೊಂಡಿರ್ಪ್ಪುದುಮಾ ॥
ಜನನಾಥನದುಮನಿರ್ವ್ವೇ ।
ಗನಿಮಿತ್ತಮೆನಲ್ವಿರಾಗಮಂಕಯ್ಕೊಂಡಂ ॥ 30

ಜಗಮಂಬೆಳಗುವಚಂಡಾಂ ।
ಶುಗಮಿಾಸ್ಥಿತಿರಾಹುವಿಂದ ಮಾದತ್ತೆನಲೇ ॥
ನುಗಿಬಗಿಮಾಡದೊಕಾಳೋ ।
ರಗಹಸ್ಮದ್ವಿಧರನನ್ಯರಾಜನ್ಯಕಮಂ ॥ 31

ವ ॥ ಎಂದು ವೈರಾಗ್ಯಪರಿಣತಿಯಿಂ ಚತುರುದಧಿವಳಯವಳಯಿತಧರಿತ್ರಿಯಂಜರತ್ತೃ
ಣಮಂಬಗೆವಂತೆಬಗೆಯೆಮಂತ್ರಿಮಂಡಲಮಹಾಸಾಮಂತರತಿಚಕಿತಚಿತ್ತರಾಗಿ ॥

ಹು ॥ ಪರಚಕ್ರಕ್ಕೆಡೆಮಾಡಿಭೂವಳಯಮಂ ಭಂಡಾರಮಂ ಬಾಲವ್ಯ ।
ದ್ಧರನೀಡಾಡಿ ತಪಕ್ಕೆ ಪೋಪುದನಯಂ ಭೂಪಾಳನಿಂನಂಪುರಂ ॥
ದರನೀರಾಜ್ಯಭರಕ್ಕೆ ಯೋಜಿಸಿ ತಪೋರಾಜ್ಯಕ್ಕೆ ಮೆಯ್ತ್ತುಂದನಂ ।
ಶಿರನೀನಾಚರಿಸಲ್ಲದಂಬುಧರಮ ತ್ಸ್ಯನ್ಯಾಯಮೇನಾಗದೇ ॥ 32

ವ ॥ ಅದಱಿನನ್ವಯರಾಜ್ಯರಕ್ಷಣಾರ್ತ್ಥಮಾತ್ಮಜನಂಪಡೆದು ತಪಂಬಡುವುದೆಂದುಮಂ
ತ್ರಿಮಂಡಳಮೊಡಂಬಡಿಸೆ ಕೀರ್ತ್ತಿಧರನೊಡಂಬಟ್ಟು ಪಲವುಕಾಲಮರಸುಗೆಯ್ಯು
ತಿರಲಾಮಹೀವಲ್ಲಭನ ಸಹದೇವಿವೆಸರ ಮಹಾದೇವಿಗೆ ॥

ಕಂ ॥ ಹೀವಕಾಜಾನನದೊಳ್ಕ ।
ಪ್ಪಾನನದೊಳ್ ಬೆಳ್ಪುತೋಱೆ ತೋಱಿದುದಾಚಂ ॥
ದ್ರಾನನೆಗೆ ಗರ್ಭ್ಭಚಿಹ್ನಂ ।
ಮಾನಸದೊಳ್ ತೋಱೆಪೇಱೆಹರ್ಷವಿಷಾದಂ ॥ 33

ಉ ॥ ಸಂತತಿರಾಜ್ಯರಕ್ಷಣೆಗೆಪುಟ್ಟಿದಸಂತಸಮುಂಮಹೀಭುಜಂ ।
ಸಂತತಿಪುಟ್ಟಿಬಿಟ್ಟುಧರೆಯಂತಪದೊಳ್ತುಱಿಸಲ್ಗೆವೆಂಬಚಿಂ ॥
ತಾಂತರಮುಂಮನಕ್ಕೆಬರೆಮಾಡಿದಳಾಕ್ಷಣದೊಳ್ನರೇಂದ್ರಸೀ ।
ಮಂತಿನಿತದ್ವಿರುದ್ಧರಸನಾಟಕರಂಗಮನಂತರಂಗದೊಳ್ ॥ 34

ವ ॥ ಅಂತಾಕೆ ಗೂಢಗರ್ಭ್ಭದಿಂಕೆಲವುದಿವಸಕ್ಕೆ ಮಗನಂಪಡೆವುದುಂಬಡವಂನಿಧಾನಮಂ
ಪಡೆದಂತೆನೆಱರಱಿಯದಂತೆನಡಪುತಿರ್ಪ್ಪುದುಂ ॥

ಕಂ ॥ ಭೇದಿಸಿಸಹದೇವಿಗೆಮಗ ।
ನಾದುದನೋರ್ವ್ವಂಧನಾರ್ತ್ಥಿಮೆಚ್ಚಂಪಡೆವೊಂ ॥
ದಾದರದಿನಱಿಪೆಭೂಪತಿ ।
ಗಾದುದುಬಗೆತೀರ್ದ್ದದೀಗಳೆಂಬನುರಾಗಂ ॥ 35

ಮ ॥ ಮಗನಾದಂಸಹದೇವಿಗೆಂದೊಸಗೆವೇಳ್ದಾತಂಗೆಚೆಂಬೊಂನರಾ ।
ಶಿಗಳಂವಸ್ತ್ರವಿಲೇಪನಾಭರಣಮಂಸಾಲ್ವಂನೆಗಂಕೊಟ್ಟನಾ ॥
ಜಗತೀವಲ್ಲಭನೆಂನಪೂಣ್ಕೆತುದಿಗೆಯ್ದಿತ್ತೆಂದುಸಂಪ್ರೀತಿಕೈ ।
ಮಿಗೆಸಂಸಾರಶರೀರಭೋಗಪರಿನಿರ್ವ್ವೇಗಂತಪಃಪ್ರೀತಿಯಿಂ ॥ 36

ಕಂ ॥ ತೊಟ್ಟಿಲಮಗಂಗೆಪಟ್ಟಂ ।
ಗಟ್ಟಿಜರತ್ತೃಣಸಮಾನಮೆನೆವಸುಮತಿಯಂ ॥
ಬಿಟ್ಟುಜಿನದೀಕ್ಷೆಗೊಂಡಂ ।
ಮುಟ್ಟುವಿನಂಕೀರ್ತ್ತಿದೆಸೆಗಳಂಕೀರ್ತ್ತಿಸಿದಂ ॥ 37

ಉ ॥ ಇತ್ತಸುಕೌಶಲಕ್ಕೊಡೆಯನಾಗಿಸುಕೌಶಲನೆಂಬನಾಮಮಂ ।
ಪೆತ್ತುನಿರಂತರೋಪಚಯದಿಂನವಯೌವನನಾಗಿಮೀಱಿದು ॥
ದ್ವೃತ್ತರಸಿಕ್ಕಿಸುತ್ತಣಕಡಲ್ವರೆಗಂನೆಲನಂನಿಮಿರ್ಚ್ಚಿಭೂ ।
ಪೋತ್ತಮನಿಂತುತಂನಜಸಮಂದೆಸೆಯೆಂತುವರಂನಿಮಿರ್ಚ್ಚಿದಂ ॥ 38

ಕಂ ॥ ಚತುರುದಧಿಮೇಖಳಾಳಂ ।
ಕೃತವಸುಧಾದೇವಿಗಜ್ಜಗಾಪಿನವರ್ದ್ದಿ ॥
ಕೃತಿಗಳೆನೆಸಾರ್ವ್ವಭೌಮೋ ।
ನ್ನತಿಯಂತಳೆದಂಸುಕೌಶಲಕ್ಷಿತಿನಾಥಂ ॥ 39

ವ ॥ ಆಸುಕೌಶಲನಜನನಿಯಪ್ಪಸಹದೇವಿಸಹಚರೀಸಮನ್ವಿತೆಮಣಿಮಾಡದನೆಲೆಯಮ
ಣಿಮಯಾಸನದೊಳ್ಲೀಲೆಯಿಂಕುಳ್ಳಿರ್ಪ್ಪುದುಮೊಂದುದಿವಸಂ ॥

ಕಂ ॥ ಊರಡವಿಯೆಂಬಬಗೆಯಿಂ ।
ತಾರದತಿತ್ವರಿತಮಂದಮಲ್ಲ ನೆಗತಿಯಿಂ ॥
ದೂರಂಯತಿಪತಿಪೊಕ್ಕಂ ।
ತಾರಾಪತಿಯಂತೆಪಡೆದುನಯನೋತ್ಸವಮಂ ॥ 40

ಮುನಿಯಂಕಂಡಾಕ್ಷಣದೊಳ್ ।
ತನೂಭವಂದೀಕ್ಷೆಗೊಳ್ಗುಮೆಂ ಬಾದೇಶಂ ॥
ಮನದೊಳಿರೆಲೋಚನಾತಿಥಿ ।
ಯನತಿಥಿಯಂಕಂಡ:ಕಲುಷಮಂಕಯ್ಕೊಂಡಳ್ ॥ 41

ಗುಣಹೀನೆಧರ್ಮ್ಮಹಾನಿಯು ।
ನೇಿಸದೆಪಾಪಕ್ಕೆ ಮಣಿಯದುಪವಾಸದಪಾ ॥
ರಣೆಯೊಳ್ಪೊಳಲಿಂದತಿದಾ ।
ರುಣಮತಿಪೊಱಮಡಿಸಿಕಳೆದಳಾಯತಿಪತಿಯಂ ॥ 42

ಮ ॥ ಪತಿಮುನ್ನಂತನಗೆಂಬುದಂಬಗೆದಳಿಲ್ಲಿ ಕ್ಷ್ವಾಕುವಂಶಾವನೀ ।
ಪತಿಲೋಕಸ್ತುತನೆಂಬುದಂಬಗೆದಳಿಲ್ಲೀಗಳ್ತಪೋವಾರ್ಗ್ಗವಿ ॥
ಶ್ರುತನೆಂಬುನ್ನತಿಯಂವಿಚಾರಿಸಿದಳಿಲ್ಲೀಕಾಂತೆದುರ್ಮ್ಮೋಹದಿಂ ।
ಮತಿಗೆಟ್ಟಾಯತಿಯಂಪರಾಭವಿಸಿಚಯ್ಯಾವಿಘ್ನಮಂಮಾಡಿದಳ್ ॥ 43

ವ ॥ ಆಗಳದಂಕಂಡುಸುಕೌಶಲನದಾದಿಯಪ್ಪವಸಂತಮಾಲೆ ಕೀರ್ತ್ತಿಧರನರೇಂದ್ರನಪ್ರು
ದನಱಿದು ॥

ಕಂ ॥ ಅಪಮಾನಮಂಸುಕೌಶಲ ।
ನೃಪಾಲಜನಕಂಗೆಪತಿಗೆಕೀರ್ತ್ತಿಧರಕ್ಷ ॥
ತ್ರಪವಿತ್ರಂಗೊಡರಿಸಿದಳ್ ।
ವಿಪರೀತಮಿದೆಂದುನೊಂದುಶೋಕಂಗೆಯ್ದಳ್ ॥ 44

ವ ॥ ಆಗಳ್ ॥

ಮ ॥ ಬಸಿಱಂಮೋದಿಕೊಳುತ್ತುಮಳ್ವನಿಜಧಾತ್ರೀವಕ್ತ್ರಮಂನೋಡಿಬೇ ।
ವಸವಂನಿಂನಮನಕ್ಕೆನಿರ್ಬ್ಬಯದಿನಾವಂತಂದನಾತಂಗೆಸ್ಯೆ ॥
ರಿಸೆನಾನೆಂದುಸುಕೌಶಲಕ್ಷಿತಿಭುಜಂಕಟ್ಟಾಗ್ರಹಂಗೆಯ್ಯೆಸೂ ।
ಚಿಸಿದಳ್ಕಾಂತೆವಸಂತಮಾಲೆನಿಜಶೋಕೋದ್ರೇಕ ವೃತ್ತಾಂತಮಂ ॥ 45

ವ ॥ ಆಗಳದಂನೆಱೆಯೆಕೇಳ್ದು ॥

ಮ ॥ ಪಸುಗೂಸಿಂಗೆನಗಿತ್ತುರಾಜ್ಯಪದಮಂನಿಂದಂತಪೋರಾಜ್ಯದೊ ।
ಳ್ವಸುಧಾವಲ್ಲಭನಃಮುನೀಶ್ವರನಪಾದೋಪಾಂತಮಂಪೊರ್ದ್ದಿಸಾ ॥
ಧಿಸುವೆಂನಿರ್ವ್ವೃತಿಸೌಖ್ಯಮಂವಿಷಯಸೌಖ್ಯಂಮುಖ್ಯಮಲ್ಲೆಂದು ಭಾ ।
ವಿಸಿಬಿಟ್ಟಂಸಿರಿಯಂ ಸುಕೌಶಲನದೇಂವೈರಾಗ್ಯಸಂಪನ್ನನೋ ॥ 46

ಕಂ ॥ ಮುನಿಭೋಜನವಿಘ್ನಂಮ ।
ಜ್ಜನನಿಯಿನಾಯ್ತ್ತಿಂನದೂಸರಿಂತಾಯ್ಗ್ಗೆಸಂ ॥
ಮುನಿವೆನೊಮುನಿಯಪ್ಪಂನೆಗ ।
ಮನಶನವೆನಗೆಂದುಚಿತ್ತದೊಳ್ತಱುಸಂದಂ ॥ 47

ವ ॥ ಅಂತುಪರಿಚ್ಛೇದಿಸಿ ॥

ಕಂ ॥ ಧವಳಾತಪತ್ರವಾರಣ ।
ವಿವಿಧಧ್ವಜಚಾಮರಂಗಳಂರಾಜ್ಯಶ್ರೀ ॥
ಗಿವೆತೊಡವೆಂದವನೊಲ್ಲದೆ ।
ಭುವನೇಶಂರಾಜಭವನಮಂಪೊಱಮಟ್ಟಂ ॥ 48

ವ ॥ ಅಂತುಪೊಱಮಟ್ಟುಪಾದಮಾರ್ಗ್ಗದಿನುಪವನಮನೆಯ್ದಿಕೀರ್ತ್ತಿಧರಭಟ್ಟಾರಕರಂ
ಪ್ರದಕ್ಷಿಣಂಗೆಯ್ದುದೀಕ್ಷಾಪ್ರಸಾದಮೆಂದುವಂದಿಸಿಕುಳ್ಳಿರ್ಪ್ಪುದುಮಾಗಳಖಿಳಪರಿ
ಜನಂಸಂಭ್ರಮಂಬೆರಸುಬಂದು ॥

ಮ ॥ ಎಮಗಿಂನಾರ್ಶ್ಶರಣೆಂದುಮಂಡಳಿಕರುಂಸಾಮಂತರುಂ ಮಂತ್ರಿವ ।
ರ್ಗ್ಗಮುಮಂತಃಪುರಮುಂವಿಳಾಸಿನಿಯರುಂಬಾಯ್ವಿಟ್ಟುಪುಯ್ಯಲ್ಕೆ ಕೋ ॥
ಕಮಿದೇಕೀಕೆಯಗರ್ಬ್ಭದರ್ಬ್ಭಕನೆನಿಂಮಂರಕ್ಷಿಸಲ್ಸಾಲ್ಗುಮೆಂ ।
ದುಮಹಾದೇವಿಗೆಚಿತ್ರಮಾಲೆಗೆವರಂಭೂಪಾಲನೊಟ್ಟೈಸಿದಂ ॥ 49

ಕಂ ॥ ಸ್ತ್ರೀಬಾಲಸಾಧ್ಯಮಿಳೆನಿಂ ।
ಮೀಬಾಹಾಬಲದಿನಾದುದೆನಗಾತೆಱದಿಂ ॥
ದೀಟಾಲೆಯಗರ್ಬ್ಭದೊಳ್ ।
ರ್ಪ್ಪಾಬಾಲನನರಸುಮಾಳ್ಪಿದುನಿಮಗೆಬೆಸಂ ॥ 50

ವ ॥ ಎಂದುಪರಿಜನಮನೊಡಂಬಡಿಸಿಕೀರ್ತ್ತಿಧರಮುಮುಕ್ಷುಗಳಸಮಕ್ಷದೊಳ್
ದೀಕ್ಷೆಯಂಕೆಯ್ಕೊಂಡು ॥

ಕಂ ॥ ಶ್ರುತದಗ್ಗಳಿಕ್ಕೆತಪದುಂ ।
ನತಿಕ್ಕೆತಂನೊಳ್ನೆಗಳ್ತೆವೆತ್ತಿರೆಭೂವಿ ॥

ಶ್ರುತನೆನೆಸುಕೌಶಲವ್ರತಿ ।
ಪತಿತಪದಿಂಶ್ರುತದಿನಾರುಮಂಗೆಲೆವಂದಂ ॥ 51

ವ ॥ ಅಂತವಿಶ್ರಾಂತತಪಶ್ರೀಯುನಪ್ಪುಕೆಯ್ದಿರ್ಪ್ಪಿನಂ ॥

ಕಂ ॥ ಕಡವಲರ್ದುವುವೊಲ್ಗೆಯಪೂ ।
ಗುಡಿನಿಮಿರ್ದುವುಸೋಗೆಕೇಗಿದುವುಕೇದಗೆಜೆ ॥
ಳ್ಗಡಿವ್ರೋದುವುಚಾದಗೆಗಳ್ ।
ಕಡಂಗಿನುಂಗಿದುವುತೋರವನಿಯಂಕಾರೊಳ್ ॥ 52

ವ ॥ ಆಘನಸಮಯಪ್ರವೇಶದೊಳ್ತನ್ಮುನಿಯುಗಳಂವೃಕ್ಷಮೂಲನಿಯೋಗಯೋಗನಿ
ರ್ವ್ವರ್ತ್ತನಾನಂತರಂಯೋಗ್ಯಕಾಲಾಪೇಕ್ಷೆಯಿಂಕಾಂತಾರಭಿಕ್ಷೆಗೆಬರುತಿರೆ ॥

ಉ ॥ ಕಣ್ಬರೆಗೆಟ್ಟುದಿವ್ಯಮುನಿಗಿತ್ತಪಮಾನದಿನಾತ್ತರೌದ್ರದಿಂ ।
ಪೆಣ್ಬುಲಿಯಾಗಿಪುಟ್ಟಸಹದೇವಿಬರುತ್ತಿರೆಕಂಡಶಂಕಿತ ॥
ಕ್ಕರ್ಣ್ಣೊಬ್ಬುಲದೊಳ್ನಿವೃತ್ತಿಪರಿಣಾಮಮೊಡಂಬಡೆಧರ್ಮ್ಮಶುಕ್ಲದೊಳ್ ।
ಜಾಣ್ಬಡೆದಿಕ್ಕಿಕಯ್ಯನುಪಸರ್ಗ್ಗಸಹಿಷ್ಣುಗಳಿರ್ದ್ದರೀರ್ವ್ವರುಂ ॥ 53

ಮ।ಸ್ರ॥ ತನುವಂಬೇರ್ಕ್ಕೆಯ್ದುತಂಮಿಂಮುನಿಪತಿಗಳನುಪ್ರೇಕ್ಷೆಯಂತಾಳ್ದಿಸನ್ಯಾ ।
ಸನಯುಕ್ತಚ್ಚಿರ್ತ್ತದೊಳ್ನಿಚ್ಚಳಮಿರಿಸಿಜಿನಶ್ರೀಪದಾಬ್ಜಂಗಳಂಪಂ ॥
ಚನಮಸ್ಕಾರಂಗಳಂನಾಲಗೆಜಪಿಯಿಸೆಗುಂಪದ್ಗುಹಾರಂಜಿತಕ್ಕಾರ್ಗಂ ।
ಚನಶೈಲದ್ವಂದ್ವಮಿರ್ಪ್ಪಂತಿರೆಶುಭಚರಿತರ್ಪ್ಪೂರ್ಣ್ದುಕೈಯಿಕ್ಕಿನಿಂದರ್ ॥ 54

ವ ॥ ಅಂತುನಿಂದಮುನಿಪತಿಯುಗಳಮಂಕಂಡುಕಡುಮುಳಿದು ।

ಮ।ಸ್ರ॥ ಜಡಿಯುತ್ತುಂಬಾಲಮಂಕಣ್ಣುರಿಯನುಗುಳೆಜಿಹ್ವಾನಲಂಬೇರ್ಚ್ಚೆಬಾಯ್ಬಿ ।
ಟ್ಟೊಡೆವನ್ನಂಗರ್ಜ್ಜಿಸುತ್ತುಂಪವನಜವದೆಮೇಲ್ವಾಯ್ದುಪೊಯ್ದೆತ್ತುಕೈಯೇ ॥
ಬಿಡೆಯಿಂಬಾಯೇಱಬಾಯಿಂದೊಡನೆರುಧಿರಮುಂಖಂಡಮುಂಸೂಸುವನ್ನಂ ।
ಸಿಡಿಲೆಂಬಾಶಂಕೆಯಂಪೆಣ್ಬುಲಿಪಡೆದುಮೃಗೀರಕ್ತಸೇವಾನುರಕ್ತಂ ॥ 55

ವ ॥ ಅಂತುಪುಲಿಮುನೀಂದ್ರಯುಗಳದಮೇಲೆಪಾಯ್ದುಗಿಬಗಿಮಾಳ್ಪುದುಮಾಮಹೋ
ಪಸರ್ಗ್ಗಮಂಸೈರಿಸಿ ॥

ಕಂ ॥ ಘಾತಿಯುಮನಘಾತಿಯುಮಂ ।
ಘಾತಿಸಿಕೀರ್ತ್ತಿಧರಯೋಗಿಮುಕ್ತಿಗೆಸಂದಂ ॥
ಘಾತಿಕ್ಷಯದಿಂಕೈವ ।
ಲ್ಯಾತಿಶಯಂಪೆತ್ತನಾಸುಕೌಶಲಮುನಿಪಂ ॥ 56

ಉ ॥ ಇತ್ತವಿಚಿತ್ರವರಾಲಿಗೆತನೂಭವನಾಗೆಹಿರಣ್ಯಗರ್ಭನಂ ।
ದತ್ತುಧರಿತ್ರಿಗರ್ಭದೊಳೆವಲ್ಲಭನಾಗೆಸಮಸ್ತರಾಜ್ಯಸಂ ॥
ಪತ್ತಿಗೆತತ್ಸುತಂಬಳೆದುಬಾಗದಬೀರದಪೇರ್ಮ್ಮೆಯಿಂದಿಶಾ ।
ಭಿತ್ತಿಯನೆಂಟನೆಯ್ದುತಿರೆಸುತ್ತಿದನಾತ್ಮಯಶೋದುಕೂಲದಿಂ ॥ 57

ಕಂ ॥ ಸರಸಬಿಸಗರ್ಭಗೌರಂ ।
ಪರೆಯಿಜಸಂಪರಪುರಕ್ಕೆ ಗರ್ಭಸ್ರಾವಂ ॥
ದೊರೆಕೊಳೆಹಿರಣ್ಯಗರ್ಭಂ ।
ಧರಿತ್ರಿಯುಂಹರ್ಷಗರ್ಭವೆನೆಪಾಲಿಸಿದಂ ॥ 58

ತದಪತ್ಯಂನಹುಷಂಚತು ।
ರುದಧಿವರಂವಸುಧೆಯಂನಿವಿಷ್ಟಭುಜಾಗ ॥
ರ್ವ್ವದಗುರ್ವ್ವಂಮಾಣ್ದನೆಚತು ।
ರುದಧಿಯೊಳ್ಂದವಾಸಮಿರಿಸಿದಂರಿಪುನೃಪರಂ ॥ 59

ಈಸಕಳಧರೆಯನುಗ್ರಭು ।
ಜಾಸಿಯೊಳಳವಡಿಸಿನಹುಷನಗ್ರಸುತಂಸಂ ॥
ವಾಸಂರಿಪುನೃಪಸುತರಂ ।
ದಾಸೇರಕರೆನೆಪೊಡರ್ಪ್ಪುಗಿಡೆನಡೆಯಿಸಿದಂ ॥ 60

ವ ॥ ತತ್ತನೂಭವಂ ॥

ಕಂ ॥ ಸಂಹರಿಸಿರಿಪುವಮದದ್ವಿಪ ।
ಸಂಹತಿಯಂಬೀರಸಿರಿಗೆವಲ್ಲಭನಾದಂ ॥
ಸಿಂಹಪರಾಕ್ರಮನೆನಿಸಿದ ।
ಸಿಂಹರಥಂಸಾರ್ವ್ವಭೌಮವಿಭವಸನಾಥಂ ॥ 61

ಓರ್ವ್ವನೆಧನ್ವಿಯೆನಲ್ಸಕ ।
ಲೋರ್ವ್ವರೆಯಂಕಾದುತನ್ನಬಾಣದಮೊನೆಯೊಳ್ ॥
ಮಾರ್ವ್ವಲಮಂತವಿಸಿದನೆನೆ ।
ದೋರ್ವ್ವಲಮೇಂಸಿಂಹರಥನೊಳವಿರಥಮಾಯ್ತೋ ॥ 62

ವ ॥ ತತ್ತನಯಂ ॥

ಕಂ ॥ ಸಮರಮುಖದೊಳ್ವಿರೋಧಿ ।
ಪ್ರಮುಖರನೆಯ್ದಿಸೋಲೀಮುಖಂಯಮಮುಖಮಂ ॥
ಕ್ಷಮೆಯುಂತಳೆದಂಬಾಹಾ ।
ಗಮಚತುರಚತುರ್ಮ್ಮುಖಂಚತುರ್ಮ್ಮುಖನೆಂಬಂ ॥ 63

ಭೂಮಂಡಳಮಂತಳೆದಂ ।
ಕ್ಷೇಮಾಸ್ಪದಮಾಗೆನಾಮಮಹಿಮೋನ್ನತಿಯಿಂ ॥
ಹೇಮಾಚಲಮಂಮೆಚ್ಚಂ ।
ಹೇಮರಥಂಸ್ತುತಿಮುಖಂಚತುರ್ಮ್ಮುಖತನಯಂ ॥ 64

ಆರಾಜಸುತಂಕೀರ್ತ್ತಿಸು ।
ಧಾರಸದಿಂತಣ್ಪುವಡೆದುಪರಿಪೂರ್ಣ್ಣಕಳಾ ॥
ಧಾರಂಸಕಳೇಂದುರಥಂ ।
ವೈರಿಮನೋರಥರಥಾಂಗಮಂವಿಘಟಿಸಿದಂ ॥ 65

ವ ॥ ಆಮಹೀಭುಜನತನೂಭವಂ ॥

ಕಂ ॥ ತೇಜಂಪುದುವಿಲ್ಲೆನಿಸಿವಿ ।
ರಾಜಿಸೆಪರರಾಜಮಂಡಳಂತತ್ತನ್ನಿ ॥
ಸ್ತೇಜಂಬೆತ್ತಿರೆಬೆಳಗಿದ ।
ನೀಜಗಮಂಭಾನುವೆಂಬಿನೆಂಭಾನುರಥಂ ॥ 66

ವ ॥ ಮತ್ತಂತದನ್ವಯುದೊಳ್ ಮಯು, ಮಾಂಧಾತ, ವೀರಸೇನ, ಕಮಳಬಂಧು ವಸಂತತಿಲಕ, ಕುಬೇರದತ್ತ, ಮೃಗಾರಿದಮನ, ದ್ವಿಪರಥ, ಹಿರಣ್ಯಕಶಿಪು, ಆರ್ಕ್ಕರಥ, ದಿಳೀಪ, ಪುರೂರವ, ರಘುವೀರಪ್ರಮುಖರೆನಿಬರಾನುಮರಸುಗಳನು ಕ್ರಮದಿಂರಾಜ್ಯಂಗೆಯ್ದು ವಿಷಯವೈರಾಗ್ಯದಿಂಕೆಲಬರಮರಕಾಮಿನೀಕ್ಷಚಗ್ರಹಣಮಂಪಡೆವುದುಂಕೆಲಬರಮೃತಲಕ್ಷ್ಮೀಪಾಣಿಗ್ರಹಣಮಂಪಡೆವುದುಂ ॥

ಕಂ ॥ ಧರಣೀಪ್ರಾಕಾರಂವೀ ।
ರರಸಾರ್ಣ್ಣವಸೇತುದಾನಗುಣಭೂಷಣದಿ ॥
ರ್ಕ್ಕರಿಧರ್ಮ್ಮರತ್ನರೋಹಣ ।
ಗಿರೀಂದ್ರಮಿಕ್ಷ್ವಾಕುವಂಶಮಾಯ್ತುಪ್ರತಿಮಂ ॥ 67

ವ ॥ ಆವಂಶದೊಳ್ವಿನೀತಾಪುರಮನಾಳ್ವನನರಣ್ಯನೆಂಬರಸನಖಿಳರಾಜ ಕುಳಮಣಿಮಕುಟಮಕರಿಕಾವತ್ರವಿಚಿತ್ರಚಿತ್ರಿತಪಾದಪೀಠಂ ॥

ಕಂ ॥ ನೆನೆಯಿಸುವಂಮಾನ್ಯಪುರಾ ।
ತನರಾಜನ್ಯಕಮನತುಳಬಾಹಾಬಲದಿಂ ॥
ದನರಣ್ಯಂಕೃತಪುಣ್ಯಂ ।
ಮನುವಂಶವರೇಣ್ಯನಖಿಳಭುವನಶರಣ್ಯಂ ॥ 68

ಅನರಣ್ಯನೆಂಬಪೆಸರಂ ।
ಜನಪತಿದೇಶದೊಳರಣ್ಯಮಿಲ್ಲೆನೆನಾನಾ ॥
ಜನಪದಮಂಪಡೆದುಜಗ ।
ಜ್ಜನಂಕುಡಲ್ಪಡೆದನುಂತೆಪಡೆದನೆಪೆಸರಂ ॥ 69

ನ್ಯಾಯಾರ್ಜ್ಜಿತವಿತ್ತಂಧ ।
ರ್ಮ್ಮಾಯತ್ತಮೆನಿಪ್ಪರಾಜವೃತ್ತಂತನಗೇ ॥
ಕಾಯತ್ತಮಾಗೆಧರೆಯಿಂ ।
ಜೇಯೆನಿಸಿದನಿಂತುದಾತ್ತಚರಿತರುಮೊಳರೇ ॥ 70

ಆವಸುಧಾವಲ್ಲಭನಮ ।
ನೋವಲ್ಲಭೆರೂಪವತಿಕಳಾವತಿಸತಿಪೃ ॥
ಥ್ವೀವತಿಧೈರ್ಯ್ಯದೊಳಂಪೃ ।
ಥ್ವೀವನಿತೆಗೆಯುವತಿಸವತಿಯೆನೆಪೆಸರ್ವಡೆದಳ್ ॥ 71

ಕಡುಚಲ್ವಿಂರತಿಗೆಗ್ಗಂ ।
ಪಡೆದುವಿಳಾಸಕ್ಕೆ ದೇಸಿವಡೆದವನಿಪನೊಳ್ ॥
ಪಡೆದುಪಿರಿಯರಸಿತನಮಂ ।
ಪಡೆದಳ್ತನಯರೆನನಂತರಥದಶರಥರಂ ॥ 72

ವ ॥ ಆಪೃಥ್ವೀವತಿಮಹಾದೇವಿಯೊಳಖಿಳ ಪೃಥ್ವೀವಲ್ಲಭಂಧರ್ಮ್ಮಾರ್ತ್ಥವಿರುದ್ಧವಾಗ
ದಂತುವಿಷಯಸುಖಮನನುಭವಿಸುತ್ತಿರ್ದ್ದೊಂದುದಿವಸಂ ॥

ಮ ॥ ಭುವನಸ್ತುತ್ಯಪದಂಸಹಸ್ರಕಿರಣಂಸ್ವರ್ಬ್ಭಾನುವಿಂದಂಪರಾ ।
ಭವಮಂಪೊರ್ದ್ದುವವೊಲ್ಸಹಸ್ರಕಿರಣಂಮಾಹಿಷ್ಮತೀವಲ್ಲಭಂ ॥
ಬವರಂಗೆಯ್ದುದಶಾನನಂಗೆರಣದೊಳ್ಸೋಲ್ತೇವದಿಂಕ್ಷತ್ರಪು ।
ತ್ರವರೇಣ್ಯಂಜಿನದೀಕ್ಷೆಗೊಂಡನನರಣ್ಯಂಕೇಳ್ದನಾವಾರ್ತ್ತೆಯಂ ॥

ವ ॥ ಅಂತುಕೇಳ್ದುದುಮತನಗೆ ನಿರ್ವ್ವೇಗಮಾಗೆ ॥

ಕಂ ॥ ಕೆಳೆಯಂಸಹಸ್ರಕಿರಣಂ ।
ತಳೆದಂದೀಕ್ಷೆಯನುಪೇಕ್ಷಿಸಲ್ಪದನಲ್ಲಂ ॥
ದಿಳೆಯನುಪೇಕ್ಷಿಸಿನೆರೆದಾ ।
ಗಳನಂತರಥಂಗೆನುಡಿದನಿಂತನರಣ್ಯಂ ॥ 74

ಮ। ಸ್ರ॥ ಪಡೆದೆಂನಿಂನಂಗಡಂರಕ್ಷಿಸಲಖಿಳಧರಾಚಕ್ರಮಂಪುತ್ರನೀಂಪೆ ।
ಳ್ಗೊಡೆಯಂಕಯ್ಕೊಳ್ಧರಾಭಾರಮನಿೞಿಪೆನಗೆಂದಂಗೆದಂತಾಂಶುಜಾಳಂ ॥
ಕುಡಿಮಿಂಚಂಬೀಱೆಕಯ್ಯಂಮುಗಿದುನುಡಿದನೇಮಾತೊನಿರ್ವ್ವಾಣಮಾರ್ಗ ।
ಕ್ಕೊಡಸಲ್ವೆಂನಿಮ್ಮಚಿತ್ತಕ್ಕೆಡರಿದ ನೆಲನಂದೇವಕಯ್ಕೊಳ್ವೆನಲ್ಲಂ ॥ 75

ವ ॥ ಎಂದುತಂನೊಡನೆತಪಂಬಡಲೊಡಂಬಟ್ಟು ತಱಿಸಂದುನುಡಿವುದುಮೊಂದುತಿಂಗಳ
ಮಗನಪ್ಪದಶರಥಂಗೆಪಟ್ಟಂಗಟ್ಟಿತಾನುಮನಂತರಥನುಮಭಯಘೋಷಭಟ್ಟಾರಕ
ರಪಾದೋಪಾಂತದೊಳ್ ತಪಂಬಟ್ಟು ॥

ಕಂ ॥ ಅನರಣ್ಯಂಮುಕ್ತಿಶ್ರೀ ।
ವನಿತಾವರನಾದನಂದನಂತರಥಂಚಿ ॥
ತ್ತನಿರೋಧದಗ್ಧಕರ್ಮ್ಮೇಂ ।
ಧನಭಾರನನಂತವೀರ್ಯ್ಯಕೇವಳಿಯಾದಂ ॥ 76

ವ ॥ ಆಮಹಾಮಹಿಮೆಯೊಳ್ ॥

ಮ।ಸ್ರ॥ಅಮರೇಂದ್ರೋದ್ಯಾನದಿಂಪೂಮಳೆಗಱೆಯೆಸುರೇಂದ್ರಾಗಮಂರಾಗಮಂಬೀ ।
ಱೆಮರುದ್ಗಂಭೀರಭೇರೀನಿನದಮೊದವೆನಿರ್ವ್ವಾಣಕೈವಲ್ಯಮಾಂಗ ॥
ಲ್ಯಮಹೋತ್ಸಾಹಪ್ರಮೋದಾಮರಕಳಕಳಮಾನಂದಮಂಮಾಡೆರೋಮಾಂ ।
ಚಮನಾನಂದಾಶ್ರುಮಂತಾಳ್ದಿದನಮಳಯಶಂಭಾರತೀಕರ್ಣ್ಣಪೂರಂ ॥ 77

ಗದ್ ॥ ಇದುಪರಮಜಿನಸಮಯಕುಮುದಿನೀಶರಚ್ಚಂದ್ರಬಾಲಚಂದ್ರಮುನೀಂದ್ರಚರಣ
ನಖಕಿರಣಚಂದ್ರಿಕಾಚಕೋರಂಭಾರತೀಕರ್ಣ್ಣಪೂರಂ ಶ್ರೀಮದಭಿನವಪಂಪವಿರ
ಚಿತಮಪ್ಪರಾಮಚಂದ್ರಚರಿತಪುರಾಣದೊಳ್ದಶರಥವಂಶವರ್ಣ್ಣನಂದ್ವಿತೀಯಾಶ್ವಾ
ಸಂ ॥

ತೃತೀಯಾಶ್ವಾಸ ಪ್ರಾರಂಭಃ.

ಕಂ ॥ ಶ್ರೀವನಿತೆವಕ್ಷದೊಳ್ಮು ।
ಕ್ತಾವಳಿಯಂತೆಸೆಯೆತೊಟ್ಟಿಲೊಳ್ಪುಟ್ಟಿತ್ತ ॥
ಲ್ಭೂವಳಯಂಭುಜದೊಳ್ಕೋ ।
ಭಾವಹಮೆನೆಪೆಂಪುವೆತ್ತನಭಿನವಪಂಪಂ ॥ 1

ಎಳನೇಸಱಂತೆಜಗಮಂ ।
ಬೆಳಗಿದನೆಳದಿಂಗಳಂತೆಸಕಳಧರಿತ್ರೀ ॥
ತಳಮನೆಱಗಿಸಿದನೆಳವೆಯೊ ।
ಳಿಳೆಬಂಣಿಸೆದಶರಥಂಭಗೀರಥಚರಿತಂ ॥ 2

ಆವಂಶಜರಗುಣಂಗಳ ।
ನಾವಗಮೊಳ್ಕೊಂಡುತನ್ನವಿಶದಯಶೋಮು ॥
ಕ್ತಾವಳಿಯಂಧರೆಗಿತ್ತುಧ ।
ರಾವಲ್ಲಭನತ್ಯುದಾತ್ತನೆನಿಪೆಸರ್ವಡೆದಂ ॥ 3

ಚಿರಕಾಲದಕಳಿವೂಪೆಂ ।
ಬಿರದೆವಿರಿಂಚಿಯಮುಖಾರವಿಂದಮನುಳಿದಾ ॥
ದರದಿಂದಿರ್ದ್ದಳ್ಸಿತಮಧು ।
ಕರವಧುವಾಗ್ವಧುನರೇಂದ್ರಮುಖಸರಸಿಜದೊಳ್ ॥ 4

ಜಡಧಿಯರತ್ನಂಗಳ್ಪೊಂ ।
ದೊಡವಿನುಪಾಶ್ರಯದಿನೆಸೆವವೋಲ್ದಶರಥನಿಂ ॥
ಜಡಜಜನವಿದ್ಯೆಗಳ್ನೂ ।
ರ್ಮ್ಮಡಿಸಿದುವಾಶ್ರಯವಿಶೇಷಮೇಂಕೇವಲಮೇ ॥ 5

ಅಱುವತ್ತುನಾಲ್ಕುವಿದ್ಯೆಯ ।
ನಱಿದುಂದಶರಥನಚಿತ್ತಮನುರಾಗದಿನೇ ॥
ನೆಱಗಿದುದೊಧರ್ಮ್ಮಶಾಸ್ತ್ರ ।
ಕ್ಕಱಿವುಳ್ಳಂವಿಕಥೆಯೊಳ್ಮನಂನಿಲಿಸುಗುಮೇ ॥ 6

ಓದಿದೊಡೇನರಗಿಳಿಕ ।
ಲ್ತೋದುವವೋಲ್ಧರ್ಮ್ಮಶಾಸ್ತ್ರಮಂದಶರಥನಂ ॥

ತೋಱಿತಿೞಿದವನಿಪತಿಮಱಿ ।
ಯಾದೆಯೊಳೆಸಗುವುದುಧರ್ಮ್ಮಪರನೆನೆಲೋಕಂ ॥ 7

ಕಂ ॥ ಕಾದಳ್ವರ್ಣ್ಣಾಶ್ರಮಧ ।
ರ್ಮ್ಮಾದಿಗಳಂಮೀಱದಂತುನೆಲನಂನೃಪನಾ ॥
ಜ್ಞಾದೇವತೆವೇದಿಕೆಮ ।
ರ್ಯ್ಯಾದೆಯೊಳಂಭೋನಿಧಾನಮಂನಿಲಿಸುವವೋಲ್ ॥ 8

ಚ ॥ ಮನಮೆಳದಾಗೆವೈರಿಗೆಮನೀಷಿಜನಂಮನಮೀಯೆಮಾನಿನೀ ।
ಜನಮಭಿಮಾನಮಂಮುಱಿಯೆಭೂಭುವನಸ್ತವನೀಯಮಾದುದಾ ॥
ತನಬಲಗಯ್ಯೊಳಿರ್ಪ್ಪಜಯಲಕ್ಷ್ಮಿಗಮಾತನಸೊಲ್ಲೊಳಿರ್ಪ್ಪವಾ ।
ಗ್ವನಿತೆಗಮಾಮಹೀಸತಿಗಮಪ್ರತಿಮಂಪರಿಪೂರ್ಣ್ಣಯೌವನಂ ॥ 9

ವ ॥ ಅಂತುದಶರಥನರನಾಥಂನವಯೌವನಲಕ್ಷ್ಮಿಯನಪ್ಪುಕೆಯ್ದುಲಾವಣ್ಯಲಕ್ಷ್ಮೀವಿರಾಜಿತೆಯೆನಿಪ್ಪಪರಾಜಿತೆಯುಂ ಮದನಮೋಹನವಿದ್ಯಾದೇವತೆಯಮಿತ್ರೆಯೆನಿಪ್ಪಸುಮಿತ್ರೆಯುಂ ಕಂತುಸಂತಾಪನದೀಪಕಳಿಕಾಪ್ರಭೆಯೆನಿಪ್ಪಸುಪ್ರಭೆಯುಂ ಓರೊರ್ಮ್ಮೆಪೇರುರದೊಳಿರ್ಪ್ಪಸಿರಿಯಂಗಾಢಾಲಿಂಗನದನೆವದಿಂನೆಲೆಮೊಲೆಯೊಳೊತ್ತೊತ್ತುವಂತೆರ್ದೆವತ್ತುಗೆವೆತ್ತುಸಕಳಭಾಷಿತಸುಧಾಜಲದಿಂ ಸರಸ್ವತಿಯಕಳಾವಲೇಪಮಂಕರ್ಚ್ಚಿಕಳೆವಂತೆಮೊಗಂಬಡೆದುಪ್ರಣಯಕಲಹಕೇಳಿಯಿಂವಿಜಯಶ್ರೀಯನಜನಿಸುವಂತೆತೋಳ್ವೆರಸಿನಪ್ಪುಕೆಯ್ದುತನಗೆಮನೋನಯನವಲ್ಲಭೆಯರೆನಿಸೆ ॥

ಕಂ ॥ ಕುಲವನಿತೆಯರಿಂನೃಪದಾ ।
ನಲೇಖೆಯಿಂದಿಗಿಭಮಮೃತಕಳೆಯಿಂಶಶಿಮೇ ॥
ಖಲೆಯಿಂಮಂದರಶೈಲಂ ।
ವಿಲಾಸಮಂತಳೆದುದೆನೆಬೆಡಂಗಂತಳೆದಂ ॥ 10

ಇನನೆಂತುಬೆರಸಿಸಂಜೆಯೊ ।
ಳನುರಾಗಿಯೆನಿಪ್ಪನಂತೆನೃಪನಾನೃಪನಂ ॥
ದನೆಯರೊಳನುರಾಗದಿನಿ ।
ರ್ದ್ದನವರತಂತೊಳಗಿಬೆಳಗಿದಂಸತ್ಪಥಮಂ ॥ 11

ನೀರೊಳಗಿರ್ದ್ದುಂಪೊರ್ದ್ದದು ।
ನೀರಂನೀರೇಜಮೆಂಬವೋಲಖಿಲಾಶ್ಯಂ ॥

ಗಾರರಸಮಗ್ನನಾಗಿ ।
ದ್ವಾರಳವೆನೆತಳೆದನರಸನಿಂದ್ರಿಯಜಯಮಂ ॥ 12

ಮ।ಸ್ರ॥ ಕುಳಭೂಭೃತ್ಕೂಟದೊಳ್ಮಾಣಿಕದೆಳವಿಸಿಲೆಂತಂತೆದಿಕ್ಕುಂಭಿಕುಂಭ ।
ಸ್ಥಳದೊಳ್ಸಿಂದೂರಮೆಂತಂತಮರನದಿಯೊಳಾರಕ್ತನೀರೇಜಪತ್ರಾ ॥
ವಳಿಯೆಂತಂತಬ್ಧಿಯೊಳ್ವಿದ್ರುಮಸಮುದಯಮೆಂತಂತೆಪರ್ವ್ವಿತ್ತುರಾಗಾ ।
ವಿಳಮಪ್ಪಂತುರ್ವ್ವಿಯೆಲ್ಲಂದಶರಥವಸುಧಾಧೀಶತೇಜಃಪ್ರಕಾಶಂ ॥ 13

ಉ॥ ಖಂಡಿಸಿವೈರಿವಂಶವನಮಂಕಡಿದುದ್ಧತಶಾಖೆಯಂಭುಜಾ ।
ದಂಡಕೃಪಾಣದಿಂಸಮಱಿಕಂಟಕಮಂಸಮೆದಾತಪತ್ರದಿಂ ॥
ಚಂಡಕರಪ್ರತಾಪಮಖಿಳೋರ್ವ್ವರೆಗಿಲ್ಲೆನೆತಣ್ಪುಮಾಡಿದಂ ।
ದಂಡಧರೋತ್ತಮಂದಶರಥಂಸಫಲೀಕೃತಸನ್ಮನೋರಥಂ ॥ 14

ಚ॥ ಅನಿಮಿಷಗಾಯಕರ್ದ್ದಶರಥಕ್ಷಿತಿನಾಯಕನಂಕಮಾಲೆಯಂ ।
ತನತನಗೊಲ್ದುಪಾಡುವೆಡೆಯೊಳ್ಪುಳಕಂಪೊಱಪೊಣ್ಮೆಸೋಲ್ತುಕೇ ॥
ಳ್ವನಿಮಿಷನಾಯಕಂತನಗೆಚಾಮರವಿಕ್ಕುವದೇವಕಾಮಿನೀ ।
ಜನಮಣಿಕಂಕಣಧ್ವನಿಗೊನಲ್ದುವರಂಕಿಸುಗಣ್ಣಿನೋಡುವಂ ॥ 15

ಉ॥ ನೋಡಿರೆಕಿಂನರರ್ದ್ದಶರಥಕ್ಷಿತಿನಾಥನಬೀರದೇಳ್ಗೆಯಂ ।
ಪಾಡೆಮಗುಳ್ದುಕೇಳ್ವಪದದೊಕ್ಕಿವಿಸಾರ್ದ್ದಜಿನುಂಗೆಸಾರಭ ॥
ಕ್ಕಾಡುವತುಂಬಿಗಳ್ದ್ವಿಜನಾಥನದಕ್ಕೆಕನಲ್ದುಮಾಣದೀ ।
ಡಾಡುವನಾನಮೇರುಕುಸುಮಸ್ತಬಕಂಗಳಕರ್ಣ್ಣಪೂರಮಂ ॥ 16

ಕಂ॥ ಬಾಳಬಿಸಿಲಿನತೇಜಮು ।
ನೇಳಿಸೆನೆಲನಂಪಯೋಧಿಪರ್ಯ್ಯಂತಂಬಾಯ್ ॥
ಕೇಳಿಸಿದಶರಥನೊಳ್ಪಿಂ ।
ಪಾಲಿಸಿಸುಖದಿಂದಮರಸುಗೆಯ್ಯುತ್ತಿರ್ದ್ದಂ ॥ 17

ವ॥ ಆನಿಖಿಳರಾಜಕುಲಕಿರೀಟಕೀಲಿತಹರಿನೀಲಮಣಿಮಧಾಳಿಮಾಳಾಪರಿಚುಂಬಿತಚರಣಾರವಿಂದನೊಂದುದಿವಸಮಾಪ್ತಪರಿಜನಂಬೆರಸುಕರುಮಾಡದೇಳನೆಯನೆಲೆಯ ಭೊಗಸಾಲೆಯೊಳಿಕ್ಕಿದಮಣಿಮಯಾಸನಮನಳಂಕರಿಸಿಕರ್ಣ್ಣಪೂರಪಾರಿಜಾತಸ್ತಬಕಪರಿಮಳಕ್ಕೆಳಸಿಬಳಸುವೆಳದುಂಬಿಯಕಳವರಮನಾಲಿಸುತಿರ್ಪ್ಪುದು ಮಾಸಮಯದೊಳ್ ॥

ಮ ॥ ನಯನೋತ್ಸಾಹಮನಿತ್ತುದೇಹರುಚಿಯಿಂದೆಯ್ತಂದನಾಕಾಶಗಂ ।
ಗೆಯನೀವರ್ಮ್ಮನಿಸನೆಂಬಿನಂದಶರಥಕ್ಷೋಣೀಶನಾಸ್ಥಾನಭೂ ॥
ಮಿಯನಾನೀರದಮಾರ್ಗ್ಗದಿಂದಿೞಿದುಸನ್ಮಾರ್ಗ್ಗಕ್ಕೆ ಮೆಯ್ದಾರದಂ ।
ನೆಯುವಂಸಾರದನಾವಕಾಳಗದೊಳಂಕರ್ಣ್ಣಾರದಂನಾರದಂ ॥ 18

ಕಂ ॥ ಬಿಸಸೂತ್ರದಕಟಿಸೂತ್ರಂ ।
ಪೊಸದುಗುಲದಕೋವಣಂಕಮಂಡಲುರಾರಾ ॥
ಜಿಸೆದಂಡಪಾಣಿಪೊಕ್ಕಂ ।
ಕಿಸುರೞ್ಪಂಪಿಸುಣಪಸರಿಗಂನೃಪಸಭೆಯಂ ॥ 19

ವ ॥ ಅಂತಾನಾರದಂನಭೋಮಂಡಲದಿಂಸಭಾಮಂಡಲಕ್ಕವತರಿಸೆ ॥

ಕಂ ॥ ಇದಿರೆರ್ದ್ದಿರ್ಬ್ಬಾಕಾರಮ ।
ನುದಾತ್ತನೇನಿತ್ತುವರ್ಣ್ಣದೇಕಾಂಚನಪೀ ॥
ಠದೊಳಿರಿಸಿಮುಕುಳಿತಾಂಜಳಿ ।
ಸದರ್ಬ್ಭಸಾಕ್ಷತಮನರ್ಗ್ಘ್ಯಪಾದ್ಯಮನಿತ್ತಂ ॥ 20

ಬಂದಬರವಾವುದೀಬರ ।
ವಿಂದಂಚರಿತಾರ್ತ್ಥನಾದೆನಾನೆಲ್ಲಿಂದಂ ॥
ಬಂದಿರೆನೆನೃಪತಿನಾರದ ।
ನೆಂದಂದಶನಾಂಶುಕೆದಱೆಚಂದ್ರಾತಪಮಂ ॥ 21

ವ ॥ ಆನೀಜಂಬೂದ್ವೀಪದಪೂರ್ವ್ವವಿದೇಹದಪುಂಡರೀಕಿಣಿಪುರದಸೀಮಂಧರಸ್ವಾಮಿಗಳ
ಪರಿನಿಷ್ಕ್ರಮಣಕಲ್ಯಾಣವಿಭೂತಿಯಂನೋಡಿಬಂದೆನೆಂದುಸಭೆಯಂಕಣ್ಸನ್ನೆಯಿಂ
ತೊಲಗಿಸಿದಶರಥಂಗೆಕಟ್ಟೇಕಾಂತದೊಳಿಂತೆಂದಂ ॥

ಉ ॥ ಲಂಕೆಗೆಪೋಗಿಶಾಂತಿಜಿನಭಕ್ತಿಯೊಳಾಂಸ್ಮರದಾನದಂತಿವ ।
ಜ್ರಾಂಕುಶದರ್ಶನಸ್ತವನದಿಂಚರಿತಾರ್ತ್ಥನೆನಾದೆನಾಗಿವೀ ॥
ತಾಂಕುಶನಪ್ಪರಾವಣನೊಳಂನೆರೆದೀನುಡಿಗೇಳ್ದನಾಡೆಯುಂ ।
ಶಂಕೆಯೊಳೊಂದಿಬಂದೆನಱಿಪಲ್ವೇಱತೇಂನಿಮಗಾಪ್ರಪಂಚಮಂ ॥ 22

ವ ॥ ಅದೆಂತೆನೆವಿಭೀಷಣಂಸಾಗರಬುದ್ಧಿವೆಸರನೈಮಿತ್ತಿಕನಂಬರಿಸಿರಾವಣನಮರಣಕಾರ
ಣಮಂಬೆಸಗೊಳ್ವುದುಂ ॥

ಕಂ ॥ ಏನುಂತೊದಳಿಲ್ಲದಾವೞಿ ।
ಲಾನಿಕ್ಷಿಪ್ತಾಕ್ಷರಂವಿಭೀಷಣರಣದೊಳ್ ॥

ಜಾನಕಿಯದೂಸರಿಂಲಂ ।
ಕಾ[illegible]ಥಂದಾಶರಥಿಯಕಯ್ಯೊಳೆವಡಿಗುಂ ॥ 23

ವ ॥ ಎನೆವಿಭೀಷಣಂವಿಷಣ್ಣಚಿತ್ತನಾಗಿ ॥

ಕಂ ॥ ಆರಯಲವರುತ್ಪತ್ತಿಗೆ ।
ಕಾರಣಮೆನಿಸಿರ್ದ್ದಜನಕನಂದಶರಥನಂ ॥
ಮಾರಣಮಂಪೊರ್ದ್ದಿಸುವೆಂ ।
ಕಾರಣವಿಘಟನಮೆಕಾರ್ಯ್ಯವಿಘಟನಮಲ್ತೇ ॥ 24

ವ ॥ ಎಂದೊತಱಿಸಂದು ॥

ಚ ॥ ಎನಗಿದಯುಕ್ತಮೆಂಬಗೆಪಾಪನಿಬಂಧನಮೇವುದೆಂಬಿದಂ ।
ನೆನೆಯದೆತಂನಸೋದರನೊಳಪ್ಪವಿಪತ್ತಿಗೆಣಂವಿಭೀಷಣಂ ॥
ಮನದೊಳಳಲ್ದುನಿಂಮನೆಳೆಯಲ್ಬಗೆದಂದನಿದಕ್ಕೆತಕ್ಕುದಂ ।
ನೆನೆದಿರಿನಾನಿದಂತಡೆಯದೇಜನಕಂಗಱಿಪಲ್ಕೆವೋದಪೆಂ ॥ 25

ವ ॥ ಎಂದುನಾರದಂನೀರದಪಥಕ್ಕೆನೆಗೆದುಮಿಥಿಳೆಯನೆಯ್ದಿಜನಕಂಗಮೊಸ್ವರೂಪಮನ
ಱಿಪಿವೋಪುದುಮಿತ್ತಲ್ದಶರಥನಾವಾರ್ತ್ತೆಯೆಲ್ಲಮಂಸಮುದ್ರಹೃದಯನೆಂಬತಂ
ನಮಂತ್ರಿಮುಖ್ಯಂಗಱಿಪುವುದುಮಾತನಿದಕ್ಕೆಕಾಲವಂಚನಮೆಕಾರ್ಯ್ಯಮೆಂದು
ನಿಶ್ಚಯಂಗೆಯ್ದುದಶರಥನಂಕಳಾಟಿಚಿತ್ರಕನುಂತಾನುಮಲ್ಲದವೆಱರಱಿಯದಂತು
ಕರುವಿಡಿಸಿಲಾಕ್ಷಾರಸಾದಿಗಳಿಂಸಪ್ತಧಾತುಗಳಂಪಡೆದುವರ್ಣ್ಣಕ್ರಮಂಗೆಯ್ಯೆ ॥

ಕಂ ॥ ಇದುಭೂಪನರೂಪಿದುಳಿ ।
ಪ್ಪದರೂಪೆನಲಂತುಮಱಿಯಲರಿದೆನಬಗೆಗೊಂ ॥
ಡುದುನಡೆವನುಡಿವತೆಱದಿಂ ।
ಪ್ರದೇಶಸೂಕ್ಷ್ಮವೆಮದೇಂವಿಚಿತ್ರಮೊಚಿತ್ರಂ ॥ 26

ವ ॥ ಅಂತುಪರವಿರ್ದ್ಧಮಂಪ್ರತ್ಯಕ್ಷಮಂಮಾಡಿದಚಿತ್ರಕನಪರಿಣತಿಯಂಮನದಗೊಂಡು
ಲೆಪ್ಪದರಸನಂಕರುಮಾಡದೇಳನೆಯನೆಲೆಯಮೊಗಸಾಲೆಯೊಳಿರಿಸಿಪರಿಜನಮುಂತಾ
ನುಮೋಲಗಿಸುತ್ತಿರೆ ॥

ಕಂ ॥ ಜನಕನಮಂತ್ರೀಕ್ರಮದಿಂ ।
ದನುಷ್ಠಿಸಿಯೆಕಳುಪೆಜನಕನುಂದಶರಥನುಂ ॥
ದಿನಕರನುಂಹಿಮಕರನುಂ ।
ಘನಾಘನಾಂತರಿತರಾದರೆನೆತಲೆಗರೆದರ್ ॥ 27

ವ ॥ ಅಂನೆಗಮಿತ್ತವಿಭೀಷಣಾದೇಶದಿಂಬಂದತೀಕ್ಷ್ಣಪುರುಷರ್ಪುರಮಂಪೊಕ್ಕುಕರುಮಾ
ಡಮಂಪುಗಲ್ಪಡೆಯದೆತಱೆದಿರ್ಪ್ಪುದಂ ॥

ಉ ॥ ಅಟ್ಟಿದಜಟ್ಟಿಗರ್ತ್ತಱೆದುದಕ್ಕೆಕನಲ್ದುವಿಭೀಷಣಂಮುಗಿ ।
ಲ್ಬಟ್ಟೆಯಿನಟ್ಟಿತಿಂಬಜವನಂತಿರೆಯೋಧ್ಯೆಗೆಬಂದುಪೊಕ್ಕುಪೊಂ ॥
ಬೆಟ್ಟಮೆನಿಪ್ಪಪೊಂನಕರುಮಾಡಮನೊಂದಿರುಳಲ್ಲಿಕಂಡುಕ ।
ಣ್ಮುಟ್ಟನೊಳಿರ್ದ್ದಱಲೆಪ್ಪದರಸಂಕೊಲವೇಳ್ದನಸಾರಚೇತನಂ ॥ 28

ವ ॥ ಅಂತುವೇಳ್ವುದುಂ ॥

ಕಂ ॥ ಬೆಸನಂವಿದ್ಯುದ್ವಿಳಸಿತ ।
ವೆಸರವಿಯಕ್ಷರಭಟೋತ್ತಮಂಪಡೆದುಜವಂ ॥
ಮಸಗಿದನೆಸೆಕಾಪಿನವ ।
ರ್ದ್ದಱಸೆಗಿಡೆಪೊಕ್ಕಿಱಿದುಕೊಂಡುತಲೆಯುಂತಂದಂ ॥ 29

ವ ॥ ಆಸಮಯದೊಳ್ ॥

ಕಂ ॥ ಪರಿಜನದಭೂಪನಂತಃ ।
ಪುರದಬಳಾಜನದನೆಗೆದಹಾಹಾರವಮೆ ॥
ಯ್ತ್ತರೆಕಿವಿಗೆಕೇಳ್ದುನಲಿದಂ ।
ಕರುಣಾರಸರಹಿತನಾವನಾಖಚರನವೋಲ್ ॥ 30

ಕೊಲಲೆಂದುಬಂದುಲೆಪ್ಪದ ।
ತಲೆಯಂಕೊಂಡೊಯ್ದನಾವಿಭೀಷಣನಾರುಂ ॥
ಕೊಲಲಾರ್ಪ್ಪರೆಸಾಯದರಂ ।
ಲಲಾಟದೊಳ್ವಿಧಿಯಬರೆದಲಿಪಿಜಲಲಿಪಿಯೇ ॥ 31

ವ ॥ ಅಂತವನತಂದತಲೆಯಂಕಡಲೊಳೀಡಾಡಿಜನಕನುಮನಂತೆಮಾಡಿಮಗುೞೆಲಂಕೆಗೆ
ಪೋಗಿ ॥

ಮ ॥ ಮನದೊಳ್ತಂನನೆಗಳ್ತೆಯಂನೆನೆದುಕಷ್ಟಂಗೆಯ್ದೆನಾನೀದಶಾ ।
ನನಂಕೊಲ್ವವನಾವನೀಕಡಲನಾವಂದಾಂಟುವಂಲಂಕೆಗಾ ॥
ವನೊಬರ್ಪ್ಪಂಗಡಭೂಮಿಗೋಚರನಿದಂನ್ನೈಮಿತ್ತಿಕಂಪೇಳ್ದುದಾ ।
ತನಮಾತಿಂಗವಿಚಾರಿತಂನೆರಳ್ದನೆಂದುದ್ವೇಗಮಂತಾಳ್ದಿದಂ ॥ 32

ಕಂ || ಜಿನಗೃಹಮಂಪ್ರಾಯಶ್ಚಿ |
ತ್ತನಿಮಿತ್ತಂನಿರತಿಶಯಮೆನಲ್ಮಾಡಿಸಿದಂ ||
ತನಗೆಕಷಾಯೋದಯದಿಂ |
ಜನಿಯಿಸೆಪೊಲ್ಲಮೆಯನೊಳ್ಳಿದಂಸ್ವೈರಿಪನೇ || 33

ವ || ಅಂನೆಗಮಿತ್ತ ದಶರಥನಜನಕನಪರಿಜನಂಲೆಪ್ಪದರಸನಪ್ಪುದನಱಿದುಸಂತೋಷಂಬ
ಟ್ಟಿರ್ಪ್ಪುದುಮತ್ತ ದಶರಥನುಂಜನಕನುಂರೂಪಪರಾವರ್ತನದಿನನೇಕದೇಶಂಗಳಂ
ನೋಡುವುದೆತಮಗೆವಿನೋದಮಾಗೆತೊಳಲುತ್ತುಂಬಂದು ||

ಕಂ || ಸಕಲರ್ತುಕವನದಿಂದೀ |
ರ್ಘಿಕೆಯಿಂಪುಷ್ಕರಣಿಯಿಂಸರೋವರದಿಂಕೌ ||
ತುಕಮನವರ್ಕಂಡರ್ಕೌ |
ತುಕಮಂಗಳಪುರಮನುರ್ವ್ವರಾನೂಪುರಮಂ || 34

ಚ || ಮಿಸುಗುವಪೊಂನಕೋಂಟೆಮುಗಿಲಂತುಡುಕುತ್ತಿರೆಪೆಂಪುವೆತ್ತಗ |
ಶ್ವಿಸರುಹಮುಳ್ಳರಲ್ದುಸಿರಿಕಣ್ದೆಱೆದಂತಿರೆಸುತ್ತಲುಂಬನಂ ||
ಕುಸುಮಶರಂಗೆಪೊಕ್ಕ ಪೊಸಜವ್ವನದಂತಿರೆರಾಜಧಾನಿಕ |
ಣ್ಗೆಸದಳಮೊಪ್ಪಿತೋಱಿದುದುಕೌತುಕಮಂಗಳಮಾತ್ತಮಂಗಳಂ || 35

ವ || ಆಪುರದಪೊಱವೊಳಲನೆಯ್ದೆವರ್ಪ್ಪಗಳ್ ||

ಕಂ || ಲಲನಾರತ್ನದೊಳಂಜಯ |
ಲಲನಾರತ್ನದೊಳಮಪ್ಪತೋಳ್ವರಸನನಾ ||
ಕುಲಮಱಿವುವಂತೆಬಲಗ |
ಣ್ಬಲಗಯ್ಕೆತ್ತಿದುವುದಶರಥಂಗೋರ್ಮ್ಮೊದಲೊಳ್ || 36

ವ || ಅಂತೆಯ್ದೆವರ್ಪ್ಪುದುಮಾಪುರದಬಹಿಃಪುರೋದ್ಯಾನಪ್ರದೇಶದೊಳ್ಕನಕಪ್ರಾಕಾರ
ಕಮನೀಯಮುಮಂಬರತಳಚುಂಬಿಚಂಚಧ್ವಜರಾಜಿವಿರಾಜಮಾನಮುಮನೇಕ
ಮಣಿಭವನಭಾಸುರಮುಮೆನಿಸಿಜನಮನೋಹರಂಸ್ವಯಂವರಭೂಮಿ ನಯನಾಭಿ
ರಾಮಮಾದುದಲ್ಲಿ ||

ಕಂ || ಪಳಂಕಿನಚೌಕಂಡಂಗಳ |
ಕೆಳಗಣಚೆಂಬೊನ್ನಮತ್ತವಾರಣದೊಳ್ಕ ||

ಕೊಳ್ಗಿಸಿದರನೇಕದೇಶಂ ।
ಗಳರಾಜತನೂಜರೋೞಿಯಿಂದಿಕ್ಕೆಲದೊಳ್ ॥ 37

ವ ॥ ಆಗಳಲ್ಲಿಗೆ ॥

ಮ ॥ ನಯನಾಕರ್ಷಣವಿದ್ಯೆಗಂಡುವರಿಜಂಕೆಯೊಕ್ಕೊಂಡುದೋಗಂಡಗಾ ।
ಡಿಯನೀತಂಗೆಮನೋಜನೊಪ್ಪಿಸಿದನೋಪೇೞೆಂಬಿನಂಬಂಣಿಸ ॥
ಲ್ಬಯಸಲ್ತಕ್ಕಬೆಡಂಗುಕಣ್ಗೊಳಿಸೆತಂನಂಕಂಡಣಂಕಂನೆಯಾ ।
ಸೆಯನಾರಾಜಕುಮಾರಕತ್ತೊೞ್ತಱಿವಿನಂಪೊಕ್ಕಂಸಭಾಸದ್ಮವಂ ॥ 38

ಚ ॥ ತೊಡವುಗಳೆಡ್ಡಮಾವನಿತಱಿಂತನಗಕ್ಕುಮೆಗಾಡಿಗಾಡಿಮೆ ।
ಯ್ದೊಡವೆನೆಮಾಸಿರೂಪುಗರೆದಿರ್ದ್ದೊಡಮಾತನರೂಪಿದೊಂದುಕ ॥
ಣ್ದೊಡವೆನೆಬೇಱಿದೊಂದುಬಗೆಗಿಕ್ಕಿದಠಕ್ಕೆನೆವಶ್ಯದೊಂದುಕ ।
ಣ್ದೊಡವೆನೆನೋಳ್ಪನೋಟಕರಕಣ್ಗೊಳಗಾದುದುಕಂಣಮಾಸೆವೋಲ್ ॥ 39

ವ ॥ ಅಂತುದಶರಥಂಸ್ವಯಂವರಸಭಾಸದನಮಂಪೊಕ್ಕು ತಾನುಂ ಜನಕನುಮೊಂದುಕಡೆ
ಪಟ್ಟಕಾಂಚನಮಂಚೋಪಾಂತದೊಳ್ನಿಂದುನೋಡುತ್ತುಮಿರೆ ॥

ಕಂ ॥ ಪೆಱಿಮಣಿವೆಸದಸಿವಿಗೆಯ ।
ನೇಱಿಸಿಕುಡುವಿಲ್ಲನೊಡನೆಬರೆಕಂದರ್ಪ್ಪಂ ॥
ನೀಱೆವುಗಿಲ್ವೊರೆಯೊಳ್ಮಿ ।
ಯ್ದೋಱುವಶಶಿಕಳೆಯನಾಡೆಯುಂಗೆಲೆವಂದಳ್ ॥ 40

ಯುವತೀರತ್ನದಕೆಲದೊಳ್ ।
ಧವಳವಿಲೋಚನಮರೀಚಿತಿಂಗಳಸಿರಿಯಂ ॥
ಕವರ್ದುಕೊಳೆಕುಂಚದಪದ ।
ಡವಕೆಯಕನ್ನಡಿಯಕನ್ನೆಯರ್ಕ್ಕಣ್ಗೆಸೆದರ್ ॥ 41

ಚ ॥ ಎಳವೆಱೆಪೊಂನಪುತ್ಥಳಿಗೆರಂನದದೀವಿಗೆತಂನಪುಷ್ಪಕೋ ।
ಮಳತನುಬೇಱೆಬೀಱೆನಯನೋತ್ಸವಮಂನಿಜಲೋಚನಂಗಳು ॥
ತ್ಪಳದಳಧಾಮಮಂಕೆದಱೆಕಣ್ಗೆಸೆದಳ್ಪವರತ್ನಮಾಲಿಕೆಂ ।
ದಳದೊಳನಂಗಪಾಶಮೆನೆಕೈಕೆಮನೋಜನಬಿಯ್ತುಬಯ್ಕೆವೋಲ್ ॥ 42

ವ ॥ ಆಸಮಯದೊಳಖಿಳರಾಜಕುಲದುಭಯವಿಶುದ್ಧಿಯುಮನನ್ವಯಪ್ರಸಿದ್ಧಿಯುಮ
ನಱಿಪಿ ॥

ಕಂ॥ ಕಂಚುಕಿಪರಿವಿಡಿಯಿಂನೃಪ।
ಸಂಚಯಮಂತೋಱೆನಿಂದುದಿಲ್ಲವಳತಟ॥
ತ್ಸಂಚಲನಯನಯುಗಂನಿಜ।
ದಿಂಚಳವೊಂದೆಡೆಯೊಳಂತುಮೇಂನಿಂದಪುದೇ॥ 43

ಉ॥ ಆನೆರೆದಿರ್ದ್ದರಾಜಸುತರಂಪರಿದೆಯ್ದಿಬಳಲ್ದುವಿಶ್ರಮ।
ಸ್ಥಾನಮನಾಮಹೀಭುಜನಮೆಯ್ಸಿರಿಯಂಸೆಱೆಗೆಯ್ವತತ್ಸರೋ॥
ಜಾನನೆತನ್ನಲೋಲನಯನೋತ್ಪಲಮಾಲೆನೃಪಂಗೆಮಾಲೆಯಂ।
ತಾನೊಸೆದಿಕ್ಕಿದಳ್ನಿಖಿಳರಾಜಕುಳಂಮನಮಿಕ್ಕುವೆಂನೆಗಂ॥ 44

ಕಂ॥ ಆರಾಜನ್ಯಕಮಿರೆಕ।
ನ್ಯಾರತ್ನಂರೂಪುಗರೆದೊಡಂನಿಜಪುಣ್ಯಾ॥
ಪ್ರೇರಣೆಯಿಂಕೈಸಾರ್ದ್ದ।
ತ್ತಾರಘುವೀರಂಗೆಪುಣ್ಯದೊಳ್ಪಿರಿದುಂಟೇ॥ 45

ಉ॥ ಎತ್ತಿದುವಾತಪತ್ರಶತಮಿಕ್ಕಿದುವಾಗಳೆಹೇಮಚಾಮರಂ।
ಮುತ್ತಿನಸೇಸೆಯಂತಳಿದರಂಗನೆಯರ್ಗ್ಗಗನಾಂತರಾಳಮಂ॥
ಮುತ್ತಿದುದುತ್ಸವಾನಕರವಂದ್ವಿಜಮಂಗಳಮಂತ್ರನಾದಮು।
ಣ್ಮುತ್ತಿನಿತುಂವಿಭೂತಿಪತಿಗಾದುದುಬಾಲಕಿಸೂಡೆಮಾಲೆಯಂ॥ 46

ವ॥ ಅಂತಾತಂಗೆಕಂನೆಕೈಸಾರ್ದ್ದುದುಂ॥

ಉ॥ ಬಾಲಕಿಮುಗ್ಧೆತಕ್ಕುದೞಿಯಳ್ಪಲರಂಪೆಱಗಿಕ್ಕಿಸೂಡಿದ।
ಮ್ಮಾಲೆಯನಾಕೆಯಂಕಳೆದುಕೊಳ್ವುದುದೇಸೆಗನಂತಗುಳ್ವುದೀ॥
ಕಾಲವಿಳಂಬಮೇವುದೆನುತುಂರಣಬಾಲಕರಾಸಮಸ್ತಭೂ।
ಪಾಲಕಬಾಲಕಕ್ಕದನಕೇಳಿಗೆಮಚ್ಚರಮಂತೊಡರ್ಚ್ಚಿದರ್॥ 47

ಮ॥ ಅನರಣ್ಯಪ್ರಿಯನಂದನಂದಶರಥಂಸಾಕೇತನಾಥಂಶರಾ।
ಸನವಿದ್ಯಾಗುರುವೀರನೆಂದಱಿದುದಿಲ್ಲೇಕಾಕಿಸಾಮಾನ್ಯನೆಂ॥
ದನಿತುಂರಾಜಸಮಾಜವಾಜಿಗುರದೆಯ್ತಂದತ್ತುನೀಳ್ಗ್ಗೆತ್ತುದೆ।
ಳ್ತನದಿಂಕತ್ತರಿವಾರಿಯಂಜಡಜನಂಕೈಗುತ್ತಲೆಳ್ತರ್ಪ್ಪವೋಲ್॥ 48

ವ॥ ಅಂತುರಣಪಟಹಪಟುನಿನದನೊದವೆವಿಳಯಜಳಧಿಯಂತೆನೆಲೆಯಿಂತಳರ್ದ್ದರಾಜ
ಕುಲಮಂಕಂಡುಕೈಕೆಯಜನಕಂಭಯಚಕಿತಚಿತ್ತನಾಗಿ॥

ಚ ॥ ಶುಭಮತಿಪೂಡಿತಂದುರಥಮಂತಡೆಯಲ್ಪದನಲ್ತುಸಾಮದಿಂ ।
ಶುಭನುಸೊಡರ್ಚ್ಚಲಾಂನೆಱೆವೆನೇಱಿಸಿಕ್ಕೈಕೆಯುಮೀವರೂಥಮಂ ॥
ಸಭೆಯಿನಗಲ್ದುಪೋಪುದನೆಕೇಳ್ದಿನಿಸಂನಸುನಕ್ಕುಭೂಭುಜ ।
ಪ್ರಭುನುಡಿದಂಮುಖೇಂದುಕಿರಣಂನಿಮಿರ್ವಂತಿರೆದಂತಕಾಂತಿಗಳ್ ॥ 49

ಉ ॥ ಆನೆಕಲಂಕುವಂತೆಕೊಳನಂಬಿಡದಾನೆಕಲಂಕುವೆಂಕಱು ।
ತ್ತೀನೆರೆದಾಂತರಾಜಕಮನೊಂದಿನಿಸಂನಡೆನೋಳ್ಪುದೆಂದುಪಂ ॥
ಚಾನನದಂತೆಗರ್ಜಿಸಿರಘೂದ್ವಹನೇಱಿವರೂಥಮಂಘನ ।
ಜ್ಯಾನಿನದಂಭಯಂಗೊಳಿಸೆಜೇವೊಡೆದಂನಿಜಚಾಪದಂಡಮಂ ॥ 50

ಚ ॥ ಅತಿಶಯಮಾಗೆತನ್ನಮುಖಚಂದ್ರಬಲಂಮಣಿಮೇಖಲಾರವಂ ।
ಶ್ರುತಿಪಥಮಂಪಳಂಚೆಜಯಡಿಂಡಿಮನಿಸ್ವನದಂತೆಮೇಲುದು ॥
ದ್ಗತಜಯಕೇತುವಂಮಿಗೆಮನೋರಥಸಾರಥಿಕೈಕೆಬಂದುಭೂ ।
ಪತಿಯೊಡನೇಱಿದಳ್ರಥಮನಾರಘುವೀರನವೀರಲಕ್ಷ್ಮಿವೋಲ್ ॥ 51

ವ ॥ ಆಗಳ್ಕಾಲಜಲಧರಂಗಳಂತೆನಿಖಿಳನೃಪಸುತರ್ಸುತ್ತಿಮುತ್ತಿಶರವರ್ಷಮಂಕಱೆ ವುದುಂ ॥

ಕಂ ॥ ತಾಗೆಸರಲ್ಪಾವಿನಪ ।
ಲ್ತಾಗಿದವೋಲ್ಮೂರ್ಛೆವೋಗೆಸಾರಥಿರಥಮಂ ॥
ಬೇಗಂಚೋದಿಸಿದಳ್ವಧು ।
ರಾಗರಸಂದಶರಥಂಗೆನೆಲವೆಚ್ಚರ್ವವೋಲ್ ॥ 52

ವಿಶಾಱದೆಕೀಱದೆನೇಱಂ ।
ತೋಱಿದದೆಸೆಗಾಕೆಗಂಹಯುಕ್ತಚಿತ್ತಂ ।
ಪೇಱಿಲ್ಲೆನೆಪರಿದುದುಜವ ।
ನೇಱಿದರಥಮಿಂತಿದೆನೆರಥಂದಶರಥನಾ ॥ 53

ಚ ॥ ದೆಸೆಮಸುಳ್ವಂನೆಗಂಮಸಗಿರಾಜತನೂಭವರೆಚ್ಚಬಾಣಮಂ ।
ಪೊಸಮಸೆಯಂಬಿನಿಂಕಡಿದುಕತ್ತಲೆಯಂಪದಱಿಟ್ಟಕಣ್ಗಗು ॥
ರ್ವಿಸುವಿನಮಂಡಳಕ್ಕೆಪರಿವೇಷಮದಾಯ್ತೆನೆತೀವ್ರತೇಜಮಂ ।
ಪಸರಿಸಿಕಣ್ಗೆಕುಂಡಳಿತಚಾಪಮುಗುರ್ವಿಸಿದಂಮಹೀಭುಜಂ ॥ 54

ಕೆಲರವರೂಥಮಂಕೆಲರವಾಜಿಗಳಂಕೆಲರುಗ್ರಬಾಣಮಂ ।
ಕೆಲರಕಿರೀಟಮಂಕೆಲರಚಾಪಮನಿಕ್ಕಡಿಮಾಡಿತನ್ನದೋ ॥

ರ್ವ್ವಲದಪೊಡರ್ಪ್ಪುಜೇಯೆನಿಸೆವೊರ್ಪ್ಪಡೆಯಂಕೊಲಲೊಲ್ಲನಿಲ್ಲವೊಯೆ ।
ಗಲಿರಘುವೀರನಾತನಶರಾಸನವಿದ್ಯೆಗಿದಾವವಿಸ್ಮಯಂ ॥ 55

ಕಂ ॥ ಗಱುಯಿಂನೋೞ್ಚಿರ್ದವನೆಕಂ ।
ಗಱುಯಿಂಪೇರ್ವ್ವಟ್ಟೆರಾಜಸುತಸಂದೋಹಂ ॥
ಗಱುಸೋಂಕದವೇಳೆರಳೆಗೆ ।
ಗಱುವೊಡಿದತೆಱದಿನೋಡಿಪೋದತ್ತಾಗಳ್ ॥ 56

ಮ ॥ ಮೃಗರಾಜಂಗಗಿದೋಡುವಾನೆಗಡುಪಂಕೆಯ್ಕೊಂಡುಯೂಥಾಧಿಪಂ ।
ಮಗುಳ್ದುಂಸಿಂಹದವೋಲಿವಾಯ್ವತೆಱದಿಂಹೇಮಪ್ರಭಂರಾಜಸೂ ॥
ನುಗಳಂತಂನೊಡಗೂಡಿಕೊಂಡುಕಱದಂಜ್ಯಾಘಾತಮೇಘಧ್ವನಿ ।
ಸ್ಥಗಿತಾಶಾಮುಖನುನ್ಮುಖಾಂಶುಕಪಳಾವೇಗಂಶರಾಸಾರಮಂ ॥ 57

ವ ॥ ಆಸಮಯದೊಳ್ ॥

ಕಂ ॥ ಇದುಮಾಯಾಬಲಮೊಂದ ।
ಲ್ಲಿದುಕೋಟಾಕೋಟಿರಥಮೆನಲ್ವೈರಿಬಲಂ ॥
ಬೆದಱಿಮನೋಜವದಿಂಪಱಿ ।
ದುದುಪೂರ್ಣ್ಣವಮನೋರಥಂರಥಂದಶರಥನಾ ॥ 58

ವ ॥ ಅಂತುಪಱಿದುನೆರೆದರಾಜನ್ಯಕಮಂಪ ಯಂತೆಪಳಾಯನಶೀಲಮಂಮಾಡೆಹೇಮಪ್ರ
ಭನಂಮುಟ್ಟೆಮಂಮ ॥

ಕಂ ॥ ಕಡುಕೆಯ್ದುಗಂಡಮಾತಂ ।
ನುಡಿವಿದಿರಾದಂತೆಗಂಡನಾಗೆನುತುಂತಾಂ ॥
ಮುಡಿಹಿದೆದಶರಥನೆೞ್ಚಂ ।
ಸಿಡಿಲೊಳ್ಗಿಡಿಗಳವೊಲಂಬನೆಂಬಟ್ಟುವವೋಲ್ ॥ 59

ವ ॥ ಅಂತಿಸುವುದುಂ ॥

ಕಂ ॥ ಉಡಿಯೆಪಳಯಿಗೆವರೂಥಂ ।
ಕೆಡೆಯೆಭುಜಾದಂಡವಜ್ರಮಯಕೋದಂಡಂ ॥
ಕಡಿಖಂಡಮಾಗೆಪರಿಪಡೆ ।
ಪೊಡರ್ಪ್ಪುಹೇಮಪ್ರಭಂಹತಪ್ರಭನಾದಂ ॥ 60

ವ ॥ ಆಸಮಯದೊಳ್ ದಶರಥನಭಯಘೋಷಣೆಯೊಡನೆಜಯಪತಾಕೆನಭಮನಳ್ಳಿಱಿ
ಯೆವೀರ ಸೇಸೆಯೊಡನೆಸ್ವಯಂವರಸೇಸೆಯನಾಂತು ಪೌರಜನದಮನದೊಡನೆಕೌ
ತುಕಮಂಗಳಪುರಮಂಪುಗುವಾಗಳ್ ॥

ಉ ॥ ಓಡಿಸಿದಾತನೀತನಿದಿರಾದವಿರೋಧಿಗಳಂವಿಳಾಸದಿಂ ।
ಱೋಡಿಸಿದಾತನೀತನಸಮಾಯುಧನಂತನಗೊಲ್ದು ಮಾಲೆಯಂ ॥
ಸೂಡಿಸಿದಾತನೀತನವನೀಶ್ವರಕಂನೆಯನೆಂದುತೋಱಿಮಾ ।
ತಾಡಿದುದೊಲ್ದು ನೋಡಿದುದು ಪೌರವಧೂಜನಮಾದಿರಾಜನಂ ॥ 61

ವ ॥ ಅಂತುಪುರಮಂಪೊಕ್ಕು ರಮನೆಗೆಬಿಜಯಂಗೆಯ್ವುದುಂದಶರಥಮಹೀನಾಥನಪ್ಪುದನ
ಱಿದು ॥

ಉ ॥ ನೋಡಿರೆಕಂನೆಯುಂದಶರಥಂಗನುರೂಪೆಯನೀವಸ್ಯೈಪುಕ್ಕೈ ।
ಗೂಡಿದುದೆಂದುತಂನವಿಭವಕ್ಕನುರೂಪಮೆನಲ್ವಿವಾಹಮಂ ॥
ಮಾಡಿದನುತ್ಸವಕ್ಕೆ ಪೆಱರೋರ್ವ್ವರುಮಿಲ್ಲೆನೆಕೊಟ್ಟುಸಂತಸಂ ।
ಮಾಡಿದನಾರೊಳಂಶುಭಮತಿಕ್ಷಿತಿನಾಥನಿದೇನುದಾತ್ತನೋ ॥ 62

ವ ॥ ಆಗಳಾವಿವಾಹಾನಂತರಂ ಕೈಕೆವೆರಸುದಶರಥನಯೋಧ್ಯೆಗೆಜನಕಂಮಿಥಿಳೆಗೆಪೋಗಿ
ಮುಂನಿನಂತೆಸುಖದಿನರಸುಗೆಯ್ಯುತ್ತಿರ್ದ್ದರಿತ್ತಲ್ ದಶರಥನರೇಂದ್ರನೊಂದುದಿವ
ಸಂ ॥

ಕಂ ॥ ಪರಿಮಿತಪರಿಜನಪರಿವೃತ ।
ನರಸಂಬಗೆದರಸಿತೆಱನನೆಸಗಿದಗೆಲವಂ ॥
ತರವೇಳೆವೃದ್ಧಕಂಚುಕಿ ।
ತರೆಬಂದಳ್ಕೈಕೆಬಳಸಿಬರೆಸಹಚರಿಯರ್ ॥ 63

ತರಳಕಟಾಕ್ಷಂಮೋಹನ ।
ಶರಮೆನೆಮೇಖಳೆಯಪಾರಿಹಾರ್ಯ್ಯದಮಣಿನೂ ॥
ಪುರದಮಧುರಸ್ವನಂಮು ।
ಪ್ಪುರಿಗೊಡಿದಮದನಪಾಶಮೆನೆನಡೆತಂದಳ್ ॥ 64

ವ ॥ ಅಂತುಬಂದು ॥

ಕಂ ॥ ತನುಸೋಂಕುಸೋಂಕೆಸಿಂಹಾ ।
ಸನದೊಳ್ತಂನೊಡನೆಕೈಕೆಕುಳ್ಳಿರೆಪುಳಕಂ ॥

ತನಗೆತಲೆದೋಱಿದಶರಥ ।
ಜನಪತಿಕೈವಂದಕಲ್ಪತರುವಂಪೋಲ್ತಂ ॥ 65

ವ ॥ ಅನಂತರಮಾಕೆಯಮುಖಾರವಿಂದಮನಾನಂದವಿಸ್ಫಾರಿತವಿಳೋಚನನಾಗಿನೋಡಿ॥

ಕಂ ॥ ಈಕೆರಥಮೆಸಗೆವೈರಿಪ ।
ತಾಕಿನಿಯಂಗೆಲ್ದೆನೀಕೆಗೆಯ್ದುಪಕೃತಿಗಾ ॥
ನೀಕೆಯಬೇಡಿದುದಂನಿ ।
ರ್ವ್ಯಾಕುಳಮೀಯದೊಡೆಮೆಚ್ಚುಪೊಳ್ಳಾಗಿರದೇ ॥ 66

ವ ॥ ಎಂದುಪರಿಜನದಮೊಗಮಂನೋಡಿ ಕೈಕೆಯಂನಿನ್ನಮೆಚ್ಚಿದುದಂ ಬೇಡಿಕೊಳ್ಳೆಂ
ಬುದುಂ ॥

ಕಂ ॥ ಏನಂಬೇಡುವೆನೆಂದ ।
ಬ್ಜಾನನೆಬಗೆಬೆದಱಿಬಗೆಗೆಬಂದೊಡಮೆಯನೊ ॥
ಲ್ದಾನೆರೆದಾಗಳೆಕೊಡಿಮೆಂ ।
ದಾನೃಪತಿಗೆಕೈಕೆಬೈಕೆಗೊಟ್ಟಳೆಮೆಚ್ಚಂ ॥ 67

ವ ॥ ಅನಂತರಂನಿಜಪ್ರಿಯನನಿಯಮದಿನರ್ಧಾಸನದಿನೆದ್ದು ಪೂರ್ವಾಲೆಯುಮನವನಿಪ
ತಿಯನಯನಕುವಳಯ ಮಾಲೆಯುಮನಾಂತುಬಳಲ್ಕುಡಿಯಚೆಲ್ವಿಂಗೆಮುಡಿಗ
ವಿದಂತೆಸೊಗಯಿಸೆಯುಂ, ಕೊರಲೊಳ್ಕಿದೆಕ್ಕಸರದಕೆಂಬಟ್ಟೆಯತೊಂಗಲನಂ
ಗಜಂಗಮಲತೆಯತಳಿರತೊಂಗಲಂತೆಪೊಳೆಯೆಯುಂ, ಮೇಲುದರಸೆಱಂಗನುಱಿ
ಸೆಱಗೆಯ್ದುಪೊಱಪೊಣ್ಮುವಪರಭಾಗದಶರೀರಕಾಂತಿಲಾವಣ್ಯರಸದತಂದಲನಗುಂ
ದಲೆವಾಡೆಯುಂ, ಘನನಿತಂಬಮಂಬಳಸಿದಮೇಖಲಾವೃತಮಣಿಕಿಂಕಿಣೀಮಧುರ
ಧ್ವನಿಮನುಜಮಕರಧ್ವಜನಮನಮನೊಡನೊಡನೆಕರೆವಂತಡಿಗಡಿಗೆಪೊಣ್ಮೆಯುಂ,
ಮನೋಜರಾಜರಾಜನನೀರಾಜನದೀಪಕಳಿಕೆಯಂತೆನಿಜನಿವಾಸಕ್ಕೆ ಕೈಕೆಬಿಜಯಂ
ಗೆಯ್ವುದುಂ ॥

ಚ ॥ ನೆನೆಯಿಸೆಪೂವಿನಂಬನಪರಾಜಿತೆಕಣ್ಗೆಸುಮಿತ್ರೆಮೈತ್ರಿಯಂ ।
ಜನಿಯಿಸೆಬೀಱೆಸುಪ್ರಭೆತನುಪ್ರಭೆಯಂಗೆಲೆಕೈಕೆಕಂತುರಾ ॥
ಜನಜಯಲಕ್ಷ್ಮಿಯುಂನಿಜಕುಲಾಂಗನೆಯರ್ಪೆಸರ್ವೆತ್ತುನಾಲ್ವಱಿಂ ।
ಜನಪನರಾಜಲೀಲೆಗೆಲೆವಂದುದುಮನ್ಮಥರಾಜಲೀಲೆಯಂ ॥ 68

ವ ॥ ಅಂತುದಶರಥಮಹೀನಾಥನಿಷ್ಟವಿಷಯಸೌಖ್ಯಸಂತುಷ್ಟನಾಗಿರ್ಪುದುಂ॥

ಕಂ ॥ ಅಪರಾಜಿತಾಮಹಾದೇ ।
ವಿಪತಿವ್ರತಶೀಲಗುಣಕಳಾಪರಿಣತಿಯಿಂ ॥
ನೃಪನಮನಂಬಡೆದುಂಧ ।
ರ್ಮ್ಮಪತ್ನಿಯೆನೆಪಡೆದಳಗ್ರಮಹಿಷೀಪದಮಂ ॥ 69

ವ ॥ ಅಂತಾಕಾಂತೆದಶರಥನಮನೋರಥಜನ್ಮಭೂಮಿಯೆನಿಸಿರ್ದ್ದೊಂದುದಿವಸಂ ॥

ಚ ॥ ಋತುಮತಿದೇವಿರಂನದವಿತರ್ದ್ದಿಕೆಯೊಳ್ನೆಲಸಿರ್ದ್ದಮಾಧವೀ ।
ಲತೆಯಪಡಂಗುವೆತ್ತಸೆಳೆಯಂಪಿಡಿದಂಗಜಮೋಹಪಾಶಮಂ ॥
ರತಿಪಿಡಿದಂತೆದೇಸಿವಡೆದಳ್ಪಡೆವಂತುಮದಾಲಸಂಗಳಾ ।
ಯುತನಯನಂಗಳಾತ್ಮರುಚಿಮಂಜರಿಯಿಂಕುಸುಮೋಪಹಾರಮಂ ॥ 70

ಕಂ ॥ ಕಮಳಾನನೆಗೆದರಸ್ಮಿತ ।
ಕುಮುದಾಕ್ಷಿಗೆಕರ್ಣ್ನಿಕಾರಕೋಮಳೆಗೆವಿಚಿ ॥
ತ್ರಮೆಪುಷ್ಪವತಿಗೆನೇತ್ರ ।
ಭ್ರಮರಾಕರ್ಷಣವಿಳಾಸಮೆನೆಸೊಗಯಿಸಿದಳ್ ॥ 71

ವ ॥ ಅನಂತರಂಕೌಸಲ್ಯೆಚತುರ್ತ್ಥಸ್ನಾನಮಾಂಗಲ್ಯಮನಪ್ಪುಕೆಯ್ದು ॥

ಚ ॥ ಮಳಯಜದಣ್ಪುಮಲ್ಲಿಗೆಯಸೋರ್ಮ್ಮುಡಿನೀರ್ಪ್ಪೊಸತಪ್ಪಮೌಕ್ತಿಕಂ ।
ಗಳತೊಡವುಟ್ಟಪಟ್ಟೆಗೆದಂತಮರೀಚಿಗಳೆಂಬಳರ್ತ್ತಟಾ ॥
ಪ್ಪುಳಕಿನಪೆಣ್ಗೆಪಾಸಟಿಯೆನಿಪ್ಪವಿಳಾಸಮನೀಯೆಪುಷ್ಪಕೋ ।
ಮಳೆವಧುಕೊಂಡಬೆಳ್ಪಸದನಂಸೆಱೆಗೊಂಡುದನಂಗನಾಜ್ಞೆಯಂ ॥ 72

ಮ ॥ ಕಡೆಗಣ್ಕಾಮಶರಂಗಳಂಕೆದಱೆಭೃಂಗಾಕೃಷ್ಟಿಯಂಮಾಡೆಸೋ ।
ರ್ಮ್ಮುಡಿಲಾವಣ್ಯರಸಪ್ರವಾಹಭರಮಂತುಂಗಸ್ತನಂತಾಳೆಕೇ ॥
ಸಡಿಗಳ್ಕೇಸರಪಾಂಸುವಂಕೆದಱೆಬಂದಳ್ದೋರ್ಲ್ಲತಾಂದೋಳಮಂ ।
ಪಡೆವಂನಂಮಣಿಪಾರಿಹಾರ್ಯ್ಯರವದಿಂಕರ್ಣ್ಣಾಮೃತಾಸಾರಮಂ ॥ 73

ವ ॥ ಅಂತು ॥

ಕಂ ॥ ಶಶಿಲೇಖೆಬಂದುಪುಗುವಂ ।
ತೆರದ್ಘನಕೂಟಸದನಮಂಲೀಲೆಯಿನಾ ॥
ಶಶಿವದನೆಬಂದುಪೊಕ್ಕಳ್ ।
ಶಶಿಕಾಂತವಿಳಾಸಕಾಂತಶಯ್ಯಾಗೃಹಮಂ ॥ 74

ವ ॥ ಅಂತುಪೊಕ್ಕು ॥

ಕಂ ॥ ಪಳಂಕಿನಪಾವುಗೆಯಿಂದಂ ।
ತೊಳಗುವಹಂಸೋಪಧಾನಕಲ್ಪಿತತಲ್ಪ ॥
ಸ್ಥಳದಿಂರಂಜಿಪರಂನದ ।
ಸೆಳೆಮಂಚದಮೇಲೆಲೀಲೆಯಿಂಕುಳ್ಳಿರ್ದ್ದಳ್ ॥ 75

ವ ॥ ಆಗಳಾಗೃಹಾಧಿದೇವತೆಯಧರಮಣಿಯಂತೆ ಜಲಜಲಿಸುವಮಾಣಿಕದಸೊಡರ್ಗ್ಗುಡಿಗಳುಂ, ಇಕ್ಷುಚಾಪಶರಮೋಕ್ಷಹೂಂಕಾರದಂತೆ ಝೇಂಮುಖರ್ಝುಂಕಾರಮುಖರಂಗಳೆನಿಸುವುಪಹಾರ ಕುಸುಮಂಗಳುಂ, ಸ್ಮರಗುರುಶಿಷ್ಯರಂತೆ ಸಂಮೋಹನಮಂತ್ರಮಂಪದಂಗುಟ್ಟುವಶುಕಶಾರಿಕೆಗಳುಂ, ಸಂಭೋಗರಸತರಂಗಿಣಿಯತೆರೆಯುಲಿಪದಂತೆಮಧುರಮಾದಪಾರಿವದುಲಿಪಂಗಳುಂ, ಮದನಮೋಹನಮೂರ್ಚ್ಛೆಯುಂ ಬೀಱುವಂತೆತಂಡತಂಡದಿಂದಂಚೆವಿಂಡನೆಳಸಿ ಸುೞಿವಬಾಳಮರಾಳಂಗಳುಂ, ಕಾಮಕಾಳೋರಗಲೇಖೆಯಂತೆಮಿಳಿರ್ವ್ವನೀಳಮಣಿಸ್ತಂಭದುನ್ಮುಖ ಮಯೂಖಲೇಖೆಯಂಕರ್ದ್ದಂಕುವದೀಹದನವಿಲ್ಗಳುಂ, ಪಚ್ಚೆಯಜಗಲಿಯಚೆಲ್ವಿಂಗೆಕಣ್ದಿರವಿಯಾದಂತೆತೆರಂಪೊಳೆವದೀಹದಹರಿಣಿಗಳಲೋಚನಪ್ರತಿಬಿಂಬಂಗಳುಂ, ಚಂದ್ರಾತಪಕ್ಕೆತನಿಗಂಪಾದಂತೆ ಚಂದ್ರಕಾಂತದಚಷಕಂಗಳೊಳ್ಮಗಮಗಿಸುವಚಂದನಕರ್ದ್ದಮಮುಂ, ಮಣಿಭಾಜನಂಗಳೊಳ್ಮನಂಗೊಳಿಸುವಕುಸುಮಶರಕೃಶಾನುವಿನುರಿಯುಂಪೊಗೆಯುಮೆಂಬಂತೆಮೋಗೆನೆಗೆವಮಱಿದುಂಬಿಯಬಂಬಲಿಂದೆಸೆವಕುಂಕುಮಪಂಕಮುಂ, ಕಂದರ್ಪ್ಪಘಟಸರ್ಪ್ಪದಂತೆಧೂಪಘಟದಿಂನೆಗೆವಗರುವಿನಪೊಗೆಯುಮತಿರಮಣೀಯಮಾಗೆ ॥

ಕಂ ॥ ಪಳಂಕಿನಶುಕ್ತಿಕೆಯೊಳ್ಕ ।
ಣ್ಗೊಳಿಸುವಕತ್ತುರಿಯಕರ್ದ್ದಮಂಹಿಮಕರಮಂ ॥
ಡಳದಕಱೆಯಂತೆನಯನೋ ।
ತ್ಪಳಮನಲರ್ಚ್ಚಿದುದುಸಾಧಶಯ್ಯಾಗೃಹದೊಳ್ ॥ 76

ಚ ॥ ಉಗಿಬಗಿಮಾಡಿಧೂಪದಕವಲ್ಪೊಗೆಯೊಳ್ತನಿಗಂಪನುಂಡುತಂ ।
ಱಗೆತಣಿದೊಯ್ಯನೊಯ್ಯನಿದಿರುಂಬೞಿಯುಂನೆಗೆಯುತ್ತುಮಿರ್ಪ್ಪತುಂ ॥
ಬಿಗಳೆಸೆಂಮನಕ್ಕೆಹರಲಾತ್ತುರ್ವ್ವತದ್ಗೃಹದೇವತಾಜನಂ ।
ಸೊಗಯಿಸುವಿಂದ್ರನೀಲಮಣಿಮಿಂತಿಱುಕಲ್ಗಳನಾಡುವಂತೆವೋಲ್ ॥ 77

ವ ॥ ಅಂತುಸೊಗಯಿಸುವಸೆಜ್ಜೆವನೆಯೊಳಪರಾಜಿತಾಮಹಾದೇವಿಸರೋವರದೊಳಿರ್ಪ್ಪಜಲದೇವತೆಯಂತೆವಿಳಾಸತಳ್ಪತಳದೊಳಿರ್ಪ್ಪುದು ಮಾಗಳುಪಚರಿತಗರ್ಬ್ಭಾಧಾನಮಂಗಳವಿಧಾನಂ ದಶರಥಮಹೀನಾಥಂ ನಿಜನಿರತಿಶಯರೂಪು ದರ್ಪ್ಪಕನರೂಪದ

ರ್ಪ್ಪವನದಿರ್ಪ್ಪಭೂಷಣಮಯೂಖಲೇಖೆಚಿತ್ರಭಿತ್ತಿಗೆನಿರ್ವ್ವಾಣಲೇಖೆಯೆನಿಸೆಕ
ರಣನಖಕಿರಣದಿನುಪಹಾರಕುಸುಮಂಗಳಂದ್ವಿಗುಣಿಸುತ್ತುಮೊಳಪುಗುವುದುಂ ॥

ಮ ॥ ಮದನಂಜೇವಡೆಗೆಯ್ವವೋಲ್ಕನಕಕಾಂಚೀನಿಸ್ವನಂಪೊಣ್ಮೆಮೇ ।
ಲುದನೊಟ್ಟೈಸಿಕುಚಕಂಕದಕ್ಕದಿಸೆಮುಗ್ಧಾಲೋಕನಂಲಜ್ಜೆಯಂ ॥
ಪದಪಂಮುಂದಿಡೆಮೇರೆದಪ್ಪೆನಿಜಲಾವಣ್ಯಾರ್ಣ್ಣವಂಭೂಭುಜಂ ।
ಗಿದಿರೆರ್ದ್ದಳ್ಸತಿಪುಷ್ಪಚಾಪಚತುರಂಗಂಮಿಾಱುವೇಲೇಳ್ವವೋಲ್ ॥ 78

ವ ॥ ಆಗಳರಸನರಸಿಯುಮನಃಕುಮುದಿನಿಯಂಚತುರಪರಿಹಾಸವಚನಚಂದ್ರಿಕೆಯಿಂದ
ಲರ್ಚ್ಚಿ ॥

ಕಂ ॥ ಮರಕತಮಣಿಮುದ್ರಿಕೆಯಿಂ ।
ನರೇಂದ್ರನಂಗನೆಯಕೋಮಳಾಂಗುಳಿಯನಲಂ ॥
ಕರಿಸುವನೆವದಿಂಮೆಲ್ಲನೆ ।
ಬರೆತೆಗೆದುತ್ಸಂಗತಳ್ಪಮಂದಯೆಗೆಯ್ದಂ ॥ 79

ವ ॥ ಅನಂತರಂ ॥

ಕಂ ॥ ಓರೋರ್ವ್ವರತನುಸೋಂಕಿಂ ।
ದೋರೋರ್ವ್ವರಮೆಯ್ಯೊಳೊಗೆಯೆರೋಮಾಂಚಂಶೃಂ ॥
ಗಾರಸುಧಾರಸವಾರಿಧಿ ।
ತೀರಲತಾದ್ರುಮದಲೊಗೆದಕೊನರೆಂಬಿನೆಗಂ ॥ 80

ವ ॥ ಅಂತುಸೂಳ್ಗೆಬಂದುನಿದ್ರಾಭರನಿಮಿಾಳಿತಲೋಚನೆಯಾಗಿ ॥

ಕಂ ॥ ದಾನದ್ವಿರದನಮಂಪಂ ।
ಚಾನನಮಂಚಂಡಭಾನುವಂಚಂದ್ರಮನಂ ॥
ಮಾನಿನಿನಿಶಾವಸಾನದೊ ।
ಳೇನಾಲ್ಕುಂಶುಭದಮಪ್ಪಕನಸಂಕಂಡಳ್ ॥ 81

ವ ॥ ಆಸಮಯದೊಳ್ನಿಜರಾಜಸದನಸರಸೀಸರೋಜರಜಮನೊಟ್ಟಿಕೊಂಡುಸುಳಿವಸು
ಪ್ರಭಾತಪ್ರಭಂಜನನುಂ ಮದನಮದಕುಂಜರದಮಣಿಯೇಱಂಮಿಾಱುವರಾಜಹಂ
ಸಕೂಜಿತಮುಂ ದಿನಮುಖದರ್ಶ್ಶನಾತುರತೆಯಿಂಬರ್ಪ್ಪಸಂಧ್ಯಾದೇವತೆಯನೂಪು
ರನಿನದಮಂನೆನೆಯಿಸುವಚಂಚರೀಕದಿಂಚರಮು ಮುದಯನಗನಿಕುಂಜಮನೇಱು
ವರವಿಯರಥಚಕ್ರಚೀತ್ಕಾರಮಂಚಲ್ಲವಾಡುವರಥಾಂಗರವಮುಂ ನೆಯ್ದಿಲೊಳಗಿದ
ಸೊಬಗುಸೊಪ್ಪಾಗೆಕಮಳಿನಿಗೆಪುಟ್ಟಿದಟ್ಟಹಾಸಮನುಪಹಾಸೀನಂ ಮೊಳ್ಪಪೊಣರ್ವ
ಕ್ಕಿಯಕಳಕಳಧ್ವನಿಯುಮನುಕೂಲಮಾಗೆ ॥

ಕಂ ॥ ಮಂಗಳಪಾಠಕರವಮುಂ ।
ಮಂಗಳಗಾಯಿನಿಯಗೀತರವಮುಂಪರಿಚ ॥
ರ್ಯ್ಯಾಂಗನೆಯುರನೂಪುರದರ ।
ವಂಗಳುಮಿತ್ತುವುಸುಬಪ್ರಬೋಧಮನಾಗಳ್ ॥ 82

ವ ॥ ಅಂತುಪ್ಪವಡಿಸಿ ॥

ಕಂ ॥ ವ್ಯವಹಾರಮಂಗಳಾಚಾ ।
ರವೆಲ್ಲವಂತೀಕ್ಷ್ವಿರ್ಮುಖ್ಯಮಾಂಗಲ್ಯಮನಾ ॥
ಯುವತಿಜಿನಪೂಜೆಯಂಮಾ ।
ಡಿವಿಚಿತ್ರಮೆನಿಪ್ಪಚಿತ್ರಶಾಲೆಗೆಬಂದಳ್ ॥ 83

ವ ॥ ಅಂತುಬಂದು ಮರಕತಮಣಿವೇದಿಕೆಯನಡುವಣಚೆಂಬೊಂನಪಟ್ಟವಣೆಯಮೇಲೆ ರೋಹಣನಗನಿತಂಬದೊಳ್ಪೊಳೆವ ರತ್ನಶಲಾಕೆಯಂತೆನಿಜಶರೀರಕಾಂತಿಪಸರಿಸೆಕು ಳ್ಳಿರ್ಪ್ಪುದುಮಾಗಳುಭಯಪಾರ್ಶ್ವದೊಳಂಚಾಮರಗ್ರಾಹಿಣಿಯರ್ಕ್ಕಳ್‌ಕಾಕಕಣಿ ಕಂಗಳೆಂದೆಸೆವ ಶರಲ್ಲಕ್ಷ್ಮಿಯಂನೆನೆಯಿಸೆಕುಂ ಚದಪದಪವಕೆಯುಕನ್ನಡಿಯುಪರಿ ಚಾರಕಿಯರ್ಕುಸುಮಶರವಶೀಕರಣಮಂತ್ರಾಧಿದೇವತೆಯರೆನಿಸೆ ॥

ಕಂ ॥ ಕರಕಿಸಲಯರುಚಿಯಿಂದಂ ।
ಬರಭಾಗಂಬಡೆದರಾಗಮಂಬೀಱುವಿನಂ ॥
ಚರಣಮಣಿವೆಳಯಮಂನೂ ।
ಪುರಮಂನೃಪವಧುಗೆತುಡಿಸಿದಳ್‌ಮತ್ತೊರ್ವ್ವಳ್ ॥ 84

ಗೆಲೆವಂದುವಲರ್ದಕಂನೆ ।
ಯ್ದಿಲಪೂಗಳಚೆಲ್ವನೀಗಳೆನೆಕೆಂನೆಗಳಾ ॥
ದಲೆಗೆಯ್ದಿದಚೆಂನೆಯುಕ ।
ಣ್ಮಲರೊಳ್‌ಕಾಡಿಗೆಯನೆಚ್ಚಿದಳ್‌ಮತ್ತೊರ್ವ್ವಳ್ ॥ 85

ಅಂಬುಜದಬೆಂಡನುಣ್ಬೆಳ ।
ದುಂಬಿಯುನೆನೆಯಿಸೆಮನೋಜಗಜಗಮನೆಯುವ ॥
ಕ್ತ್ರಾಂಬುಜದೊಳ್‌ಮತ್ತೊರ್ವ್ವೆ ।
ಳ್ಳಿಂಬಾಧರೆಮೃಗಮದಾಂಬುತಿಳಕಮನಿಟ್ಟಳ್ ॥ 86

ಕಂ ॥ ತೊಳಗುವವತಂಸಮುಕ್ತಾ ।
ಫಲರುಚಿಯೊಳ್ಕೆಲದಕಂನೆಯರನಗೆಗಣ್ಗಳ್ ॥
ಪೊಳೆದುವುಪೊಸವೆಳದಿಂಗಳ ।
ಬಳಸಿಂಗೊಳಗಾದಚಲಚಕೋರಂಗಳವೋಲ್ ॥ 87

ಉ ॥ ಬಂದೆಲೆವೋದಶೋಕೆಯೆರಡೊಳ್ಗುಡಿವೋದತಮಾಳಷಂಡದೊಳ್ ।
ಮಂದಸಮೀರನಿಂಪೊಳೆವವೋಲ್ತಳಮುಂನೆಱೆತೋಳ್ಗಳಂದಮಂ ॥
ಮುಂದಿಡೆಪಿಕ್ಕಿಪಿಕ್ಕಿಪುಡಿಗತ್ತುರಿಯಂತೆಱೆದಳ್ವಿಱಳಲತಾ ।
ಸುಂದರಿಕಾಮಪಾಶದವೊಲಿರ್ದ್ದಲತಾಂಗಿಯಕೇಶಪಾಶದೊಳ್ ॥ 88

ವ ॥ ಅಂತುಕೈಗೆಯ್ದುಮಣಿದರ್ಪ್ಪಣಮನವಳೋಕಿಸುತ್ತಿರ್ಪ್ಪುದುಮಾ ಪ್ರಸ್ತಾವದೊಳ್ ॥

ಉ ॥ ಚಿತ್ರಲಯಪ್ರಗಲ್ಭಹಯವಲ್ಗನದಿಂಮಣಿಕುಂಡಳಾಂಶುಗಳ್ ।
ಚಿತ್ರಿಸೆಗಂಡಭಿತ್ತಿಯನುರಸ್ಥಳರಂಗದೊಳಂಗಹಾರಮಂ ॥
ಸೂತ್ರಿಸೆತಾರಹಾರರುಚಿಮಂಜರಿಗಳ್ನಿಜರೂಪಮಂಗನಾ ।
ನೇತ್ರವಿಕಾಸಮಂಪಡೆಯೆಪೊಕ್ಕನಿಳಾಧಿಪನಾನಿವಾಸಮಂ ॥ 89

ವ ॥ ಅಂತುಪೊಕ್ಕಪರಿಮಿತನಿಜಪರಿಜನಂದಶರಥಮಹೀನಾಯಕನುಚ್ಚೈಶ್ರವದಿನಿೞಿವನಿಳಿಂಪನಾಯಕನಂತೆವಾಹನದಿನಿೞಿದುಬಂದುನಿಜಸತಿಯಂಗಮಂಸೋಂಕಿಕುಳ್ಳಿರ್ಪ್ಪುದುಂ ॥

ಕಂ ॥ ಅರಸಿಸುಲಿಪಲ್ಲಪಸರಿಪ ।
ಮರೀಚಿಮನಸಿಜನಜಸಮಿದೆನೆಲಮರ್ದ್ದಿನಬ ॥
ಲ್ಲರಿಸುರಿದಪುದೆನಲವನೀ ।
ಶ್ವರಂಗಿರುಳ್ತಂನಕಂಡಕನಸಂಪೇಳ್ದಳ್ ॥ 90

ವ ॥ ಆಗಳವನೀಪತಿನಿಜಮನೋವಲ್ಲಭೆಯಶುಭಸ್ವಪ್ನದರ್ಶನಕ್ಕೆಹರ್ಷಚಿತ್ತನಾಗಿ ॥

ಮ ॥ ಸತತಂದಾನಿಮದೇಭದಿಂಸಕಳಭೂಭೃನ್ಮಸ್ತಕನ್ಯಸ್ತಪಾ ।
ದತಳಂಕೇಸರಿಯಿಂಪ್ರತಾಪನಿಳಯಂತಿಗ್ಮಾಂಶುವಿಂಸತ್ಕಳಾ ॥
ಚತುರಂಚಂದ್ರನಿನಾದಪಂನಿನಗೆನೇತ್ರಾನಂದನಂನಂದನಂ ।
ಸತಿನೀನಲ್ಲದರಿಂನಮಸ್ಕನಸಂಕಾಣ್ಬಂತುಮುಂನೋಂತರಾರ್ ॥ 91

ವ ॥ ಎಂದುತತ್ಫಲಸ್ವರೂಪಮಂನಿರೂಪಣಂಮಾಳ್ಪುದುಂ ॥

ಕಂ ॥ ಶ್ರುತಿಪಥಮಂಸಾರ್ತ್ತರೆಘನ ।
ರುತಿರಾಗಮನಪ್ಪುಕೆಯ್ವವೋಲೊಪ್ಪೀಗೆನವಿ ॥
ಲ್ಸುತಲಾಭವಾರ್ತ್ತೆಯಂಕೇ ।
ಳ್ದತನೂದರಿರಾಗರಸತರಂಗಿತೆಯಾದಳ್ ॥ 92

ವ ॥ ಅನಂತರಮವನಿಪತಿಸತಿಗೆಸಮಯೋಚಿತಪರಿಚರ್ಯ್ಯಾಚತುರೆಯರಂನಿಯೋಜಿಸಿ
ಬಿಜಯಂಗೆಯ್ವುದುಂಕತಿಪಯದಿವಸಂಗಳ್ನಿರತಿಶಯಸುಖಸ್ವರೂಪಂಗಳಾಗಿಪೋ
ಗೆ ॥

ಕಂ ॥ ಎಳವಸಿಱೊಳ್ಸತಿಯಮೊಗಂ ।
ಬೆಳರ್ತ್ತುದನ್ವರ್ತ್ಥಮಾಯ್ತುಚಂದ್ರಾನನೆಯೆಂ ॥
ದಿಳಿಪೊಗಳ್ವಮಾತುನೀಳ್ದುದು ।
ಲಳಿತಾಳಕಮಾಳೆಸುಯ್ಗೆಪಾರ್ವ್ವಳಿಗಳವೋಲ್ ॥ 93

ಮಕರಾಂಕದ್ವಿಪಮದಪ ।
ಟ್ಟಿಕೆಯೆನಿಸಿಕಪೋಲಮೂಲಮಂಮುಟ್ಟಿದುವಾ ॥
ಚಕಿತಾಕ್ಷಿಯಪರಿನೀಳಾ ।
ಳಕಂಗಳಾನನಸರೋಜಿನೀಮಧುಪಂಗಳ್ ॥ 94

ತೋರಮೊಲೆಗಳಮೊಗಂಗಳ್ ।
ರಾರಾಜಿಸಿಕಪ್ಪುವೆತ್ತುಮೋಹನಧೂಮೋ ॥
ದ್ಗಾರಿಗಳಂಕಾಂಚನಭೃಂ ।
ಗಾರಿಗಳಂಪೋಲ್ತುವರಸಿಗಂತೆಳವಸಿಱೊಳ್ ॥ 95

ಜಟ್ಟಿದುವೆನಿಪ್ಪಮೊಲೆಗಳ ।
ತೊಟ್ಟುಕಱಂಗುವುದುಮೊಡನೆಸರ್ವ್ವಸ್ವಮುಮಂ ॥
ಕೊಟ್ಟುಕಱಂಗಿದರಹಿತ ।
ಕ್ಕೆಕ್ಕಟ್ಟುವುವಳಿಯೊಡನೆವೈರಿವಂಶಾವಳಿಗಳ್ ॥ 96

ಚ ॥ ಉದರದೊಳಿರ್ಪ್ಪಬಾಲಕನಶೇಷಕಲಾನಿಧಿತಪ್ಪದಪ್ಪನ ।
ಲ್ಲದೊಡೊಗೆದೊಂದೆನಾಳದೊಳೆಹೇಮಸರೋಜಮಮಳ್ಗಳಾಗಿಪು ॥
ಟ್ಟಿದುವವರೊಳ್ಮದಾಳಿನೆಲಸಿರ್ದ್ದಪುವೆಂದೆನೆನೀಳ್ದಬಾಸೆಬೀ ।
ಗಿದವೊಲೆನೀಳಚೂಚುಕಮಿದೇಂಬಗೆಗೊಂಡುವೊಲೋಲನೇತ್ರೆಯಾ ॥ 97

ಕಂ ॥ ಉದರದೊಳ್ಪರ್ವ್ವತನೂಜನ ।
ವದಾನ್ಯತಾಗುಣದವೇರ್ಮ್ಮೆಯಂಪೇಳ್ವವೊಲಾ ॥
ಸುದತಿಗೆನಿರಂತರಂಪಾ ।
ತ್ರದಾನಮಂಮಾಳ್ಪಬಯಕೆಪುಟ್ಟಿತ್ತಾಗಳ್ ॥ 98

ಉಭಯಶ್ರೇಣಿಯಖಚರ ।
ಪ್ರಭುಗಳಸಿಂಹಾಸನಂಗಳೊಳ್ಕುಳ್ಳಿರಲಂ ॥
ದಿಭಗಮನೆಬಯಸಿದಳ್ಸಾ ।
ರ್ವ್ವಭೌಮನೀತನಯನೆಂಬುದಂಸೂಚಿಪವೋಲ್ ॥ 99

ಪರಭೂಪಾಲದ್ವೇಷಾಂ ।
ತರಾಳಕೇಳೀವನಂಗಳಂಕಿೞ್ತ್ತಂತ ॥
ತ್ಪುರಮನುರಿಪುವುದನೀಕ್ಷಿಸ ।
ಲರವಿಂದಾನನೆಗೆಬಯಕೆಯಾಯ್ತ್ತಳವಸಿಱೊಳ್ ॥ 100

ಕುಲಕುಧರಮನೇಱಿದಿಶಾ ।
ವಲೋಕನಂಮಾಡುವಖಿಲಕುಲವಾಹಿನಿಯೊಳ್ ॥
ಜಲಕೇಳಿಯನಾಡುವಬಯ ।
ಕೆಲತಾಕೋಮಳೆಗೆಪುಟ್ಟಿದತ್ತಳವಸಿಱೊಳ್ ॥ 101

ಬಸಿಱಮಗಂಗಿಲ್ಲಿವರಂ ।
ವಸುಧಾತಳಮೇಕಭೋಜ್ಯಮೆಂದಱಿಪುವವೋ ॥
ಲ್ವಸುಧೆಯನಾಲ್ಕುಂಕಡೆಯೊಡೆ ।
ಯಸುರಭಿಮೃತ್ತಿಕೆಯನರ್ತ್ಥಿಯಿಂಸೇವಿಸಿದಳ್ ॥ 102

ಅವನೀಶ್ವರನಾಗಳ್ಪುಂ ।
ಸವನಂಮೊದಲಾಗೆಸಕಲಮಾಂಗಲ್ಯಮಹೋ ॥
ತ್ಸವಮಂಮೆಱೆದಂತಣಿವ ।
ನ್ನವಿತ್ತುವಸುಮತಿಗೆವಸ್ತ್ರಭೂಷಾವಳಿಯಂ ॥ 103

ವ ॥ ಅಂತುನೆಗಳ್ದಮಹೋತ್ಸವಂಗಳೊಡನೆಗರ್ಭವುಂಬಂಧುಜನಹರ್ಷಗರ್ಭವುಂ
ಪರಿಪೂರ್ಣ್ಣವಾಗೆ ॥

ಚ ॥ ಮರಕತರಂಗದೊಳ್ರಮಣಿತೀವಿದಗರ್ಭದಬಿಣ್ಪಿನಿಂನಯಂ ।
ಬೆರಸೆಡೆಯಾಡುವಾಗಳಡಿಯೂಡಿದವೊಲ್ಲಡಿವೆಜ್ಜೆಗಳ್ಮನೋ ॥
ಹರವೆನಿಸಿರ್ದ್ದುವೀಸತಿಯಗರ್ಭದೊಳಿರ್ಪ್ಪತನೂಜನಾದಪಂ ।
ವರನೆನಗೆಂದಿಳಾವಧುಗೆಪಲ್ಲವಿಸಿತ್ತನುರಾಗಮೆಂಬಿನಂ ॥ 104

ಉ ॥ ಹಾರಮನಿಕ್ಕಿಮಿಕ್ಕಕನಕಾಭರಣಂಗಳಬಿಣ್ಪನೇನುಮಂ ।
ಸೈರಿಸದಿರ್ಪ್ಪದೊಪ್ಪದೆವಲಂಕನಕಾದ್ರಿಯಬಿಣ್ಪನಪ್ಪೊಡಂ ॥
ಸೈರಿಸದರ್ಭಕಂಬಳೆಯೆಗರ್ಭಸರೋಜಮೊಳಾವಿನೀಳನೀ ।
ರೇರುಹನೇತ್ರೆತತ್ಕನಕಮಾತ್ರದಬಿಣ್ಪನದೇಕೆಸೈರಿಪಳ್ ॥ 105

ಚ ॥ ತನುತನುವಾದಗರ್ಭಿಣಿಗೆತತ್ಸಮಯೋಚಿತಮಂಗಳಪ್ರಸಾ ।
ಧನಮೆಸೆದತ್ತುಕರ್ಪ್ಪುರದಕಂಠಿಕೆಬಂಗಾರದಸಂಣಮಾಲೆತೆಂ ॥
ಗಿನತಿರುಳೋಲೆತಾವರೆಯನೂಲುಡೆನೂಲ್ಸಿರಿಖಂಡದಣ್ಪುಮು ।
ತ್ತಿನತಿಸರಂಮೃಣಾಳಿಕೆಯಮುದ್ರಿಕೆಪೂವಿನಪಂಜುಗಂಕಣಂ ॥ 106

ಘನಕುಚೆಮೇಳದಂಗನೆಯಮೇಲಿಮಲಂಗಿಸರೋಜಪತ್ರಮೀ ।
ಜನಪವನಂವಿಕಾಸಮನೊಡರ್ಚ್ಚಿಮನಕ್ಕೆಸುಧಾಪ್ರವಾಹಮೆಂ ॥
ಬಿನಮೆರಡುಂಕೆಲಂಬಿಡಿದುಬಾಜಿಪವಾದ್ಯದಿನೋಜೆವೆತ್ತಗಾ ।
ಯನಿಯರಸೋಯೆನಪ್ಪರಸಗೇಯಮನಾಲಿಸುತಿರ್ಪ್ಪಳೊರ್ಮ್ಮೆಯುಂ ॥ 107

ಉ ॥ ಸೋರ್ಮ್ಮುಡಿಮಾಲೆಯಿಂಕದಪುಗಳ್ಮಲಯೋದ್ಭವಪತ್ರಭಂಗದಿಂ ।
ಪೇರ್ಮ್ಮೊಲೆಹಾರದಿಂದೆಸೆಯೆಬಂಬಲಬಾಡಿದರೂಪುಗಾಡಿಯುಂ ॥
ನೂರ್ಮ್ಮಡಿಮಾಡೆಮೇಳದವಳಂಸತಿನಿರ್ಭರಗರ್ಭಭಾರದಿಂ ।
ನೆರ್ಮ್ಮಿನಿವಿರ್ಚ್ಚುವಳ್ಪುರುಳ್ವೋಲ್ಪರಿಹಾಸವಚೋವಿಳಾಸಮಂ ॥ 108

ವ ॥ ಅಂತುವಿವಿಧವಿಳಾಸಂಗಳಿಂದಿವಸಂಗಳಭಿಲಷಿತಫಲಪ್ರಸವಂಗಳಾಗೆಸುಖಪ್ರಸವಸ
ಮಯದೊಳ್ ॥

ಕಂ ॥ ಉರ್ವ್ವರೆಮಣಿಪರ್ವ್ವತಮಂ ।
ಶರ್ವ್ವರಿಪರಿಪೂರ್ಣ್ಣಚಂದ್ರನಂಪಡೆವಂತಂ ॥
ತರ್ವ್ವತ್ತಿಸರ್ವ್ವಲಕ್ಷಣ ।
ಸರ್ವ್ವಗುಣಾನ್ವಿತನೆನಿಪ್ಪಸುತನಂಪಡೆದಳ್ ॥ 109

ಕಂ ॥ ನೀರಜವಾದುದುಮೇದಿನಿ ।
ನೀರಜಮೀತನಚರಿತ್ರಮೆಂದಱಿಪುವವೋಲ್ ॥
ನೀರಚ್ಛಮಾದುದೀವಸು ।
ಧಾರಮಣಂಸ್ವಚ್ಛಹೃದಯನೆಂದಱಿಪುವವೋಲ್ ॥ 110

ಉದಯಿಸಿದತನೂಜನತೇ ।
ಜದೊಳೇನುಂಮಲಿನಭಾವಲಾಂಛನಮಿಲ್ಲೆಂ ॥
ಬುಧನಱಿಪುವಂತೆಪೊಗೆಯಿ ।
ಲ್ಲದೆಪೊಣ್ಮಿತ್ತಗ್ನಿದಕ್ಷಿಣಾವರ್ತ್ತಮುಖಂ ॥ 111

ಈತನಯನೆಸಕಳೋತ್ಸವ ।
ಹೇತುಜಗತ್ತಾಪಶಮನನೆಂದಱಿಪುವವೋಲ್ ॥
ಸೀತಳಸಮೀರನೆಸಗಿ ।
ತ್ತಾತನಜಸದಂತೆವಿಶದಮಾಯ್ತಾಕಾಶಂ ॥ 112

ಎಳವಿಸಿಲುಂಬೆಳ್ದಿಂಗಳು ।
ಮೊಳಸಿದುವೆನೆರಮ್ಯಹರ್ಮ್ಯಶಿಖರಸ್ಥಳಿಯೊಳ್ ॥
ಪೊಳೆದುವುಪೊಂಗಳಸಂಗಳ ।
ಪೊಳ್ಪುಂಕೇತನದುಕೂಲಚೇಲಾಂಚಲಮುಂ ॥ 113

ಅವಿರಳಮೆನೆಪೂವಲಿಪುದಿ ।
ದುವುಗುಡಿಯುಂತೋರಣಂಗಳುಂತಳಿಯುಂತ ॥
ಳ್ತುವುಬದ್ಧವಣಂಬಾಜೆಸ ।
ದುವುಬೀದಿಯೊಳ್ಕೇರಿಕೇರಿಯೊಳ್ಮನೆಮನೆಯೊಳ್ ॥ 114

ಉ ॥ ರಾಗದಬಳ್ಳವಲ್ಲಿಯೆನೆರನ್ನದತೋರಣಮಾಲೆಕೂಡೆಚೆ ।
ಲ್ವಾಗಿರೆದಾನಮೇಘರುತಿಯಂತಿರೆಮಂಗಳತೂರ್ಯನಾದಮಾ ॥
ಶಾಗಜಕರ್ಣ್ಣಪೂರಮೆನೆರಾಗರಸಾಮೃತವಾರ್ದ್ಧಿಘೋಷದಂ ।
ತಾಗಿರೆಪುಣ್ಯಪಾತಕರವಂಪೊಸತಾದುದುರಾಜಮಂದಿರಂ ॥ 115

ದೆಸೆಗೆವಿಳಾಸಮಂಪಡೆಯೆಗೊಂದಣಿಗ್ಗಳಮಾಗಳಾನೃಪಾ ।
ವಾಸದೊಳಾಡಿದತ್ತೆಸೆಯೆಪಾಣಿತಳಂಪಡೆವಂತೆಕುಂಕುಮ ॥
ಸ್ಥಾಸಕಮಂಕುರುಳ್ಕೆದಱುವಂತೆತಮಾಳನವಪ್ರವಾಳಮಂ ।
ಶೇಸಡಿಪಾಸುವಂತೆತಳಿರಂನಗೆಗಣ್ಣುಗಳ್ಕಂತೆನೆಯ್ದಿಲಂ ॥ 116

ಚ॥ ಉದಯಿಪುದುಂತ್ರಿಳೋಕತಿಲಕಂಗೃಹದೇವತೆಯರ್ಪ್ರಸನ್ನವೇ ।
ಷದಿನೊಸೆದಾಡುವಂತೆಮಣಿಭಿತ್ತಿಗಳಂಮಣಿಕುಟ್ಟಿಮಂಗಳಂ ॥
ಪುದಿದುಮನಕ್ಕೆಸಂತಸಮನಿತ್ತುವುನೃತ್ಯರಸಾಮೃತಪ್ರವಾ ।
ಹದೊಳವಗಾಹಮಿರ್ದ್ದಗಣಿಕಾಪ್ರಚಯಪ್ರತಿಬಿಂಬಲಕ್ಷ್ಮಿಗಳ್ ॥ 117

ವ॥ ಆಪ್ರಸ್ತಾವದೊಳ್ ದಶರಥಮಹೀನಾಥಂಸುತಮುಖನಿರೀಕ್ಷಣಭರದಿಂಪಾರಿಜಾತಂ ಕೋರಕಿತಮಾದಂತೆಪುಳಕಿತಶರೀರನಾಗಿ ॥

ಮ॥ ಜಿನಪೂಜೋತ್ಸವಮಂಸುರೇಂದ್ರನಳವಲ್ತೆಂಬನ್ನೆಗಂಮಾಡಿಪೇ ।
ಳ್ಪನಿತಂಪೇಳ್ಪವರ್ಗಿತ್ತುಕಲ್ಪಕುಜಮಂಕೀಳ್ಮಾಡಿಸನ್ಮಾನಭಾ ॥
ಜನರಂಸಜ್ಜನರಂವಿಚಿತ್ರವಸನಸ್ರಗ್ಭೂಷಣಾಲೇಪದಿಂ ।
ಜನಪಂಮಂನಣಿಮಾಡಿತತ್ತನಯಜನ್ಮೋತ್ಸಾಹಮಂಮಾಡಿದಂ ॥ 118

ಚ॥ ದಿವಿಜಕುಜಂಗಳಾರವೆಗಳಾದುವುಸಿದ್ಧರಸಂತಟಾಕಮಾ ।
ದುವುಸುರಧೇನುಪಿಂಡಳಿಯದೊಂದೆಡೆಯೊಳ್ನೆರೆದಿರ್ದ್ದವೆಂಬಿನಂ ॥
ಭುವನಜನಕ್ಕೆಬಾಂಧವಜನಕ್ಕೆಬಿಳಾರ್ತ್ಥಿಜನಕ್ಕೆಹರ್ಷ್ಷದಿಂ ।
ದವಱಿವರೆಂನದಿತ್ತುಮೆಱೆದಂಜನಪಂಸುತಜಾತಕರ್ಮ್ಮವಂ ॥ 119

ವ॥ ಅಂತುಜಾತಕರ್ಮ್ಮೋತ್ಸವಮಂಮಾಡಿದಶಮದಿನದೊಳ್ಪದ್ಮಾಲಂಕೃತವಿಶಾಲವಕ್ಷಸ್ಥಳನಪ್ಪುದಱಿಂಪದ್ಮನುಂಸಕಲಶುಭಲಕ್ಷಣಾಭಿರಾಮನಪ್ಪುದಱಿಂರಾಮಚಂದ್ರನುಮೆಂದಿವುಮೊದಲಾಗೆಸಲವುಮನ್ವರ್ತ್ಥನಾಮಂಗಳನಿಟ್ಟುಕತಿಪಯದಿನಂಗಳೊಳ್ ॥

ಕಂ॥ ರವಿಕಿರಣಂಸೋಂಕದೆಹಾ ।
ಸವಿಳಾಸಂಬಡೆದಕಮಳಮಂನೆನೆಯಿಸುಗುಂ ॥
ನೆವಮಿಲ್ಲದನಗೆಯಿಂದೊ ।
ಪ್ಪುವಾಸ್ಯಮುತ್ತಾನಶಯ್ಯೆಯೊಳ್ಬಾಲಕನಾ ॥ 120

ನಿರಪೇಕ್ಷಕಮೆನಿಸಿಯುಮೇಂ ।
ಪರಿದತ್ತಲೆಪರಿವಸುತನಕಣ್ಬೊಳಪಿಂದಂ ॥
ತೆರೆಮಸಗಿದುದರಸಿಯುಮೋ ।
ಹರಸಂಚಂದ್ರಿಕೆಯಿನಮೃತಜಲರಾಶಿಯವೋಲ್ ॥ 121

ಕಂ ॥ ಹರಿನೀಳೋಪಳವಿರಚಿತ ।
ಮರಳೆಲೆಬಾಲಕನನಿಟಿಲದೊಳ್ನಯನಮನೋ ॥
ಹರಮಾದುದರ್ಧ್ಧಚಂದ್ರೋ ।
ದರದೊಳ್ಕಣ್ಗೊಳಿಸಿತೋರ್ಪ್ಪ ಕರ್ಪ್ಪೆಂಬಿನೆಗಂ ॥ 122

ಅರುಣಮಣಿಕರ್ಣ್ಣಭೂಷಣ ।
ಮರೀಚಿಪಸರಿಸುವರಾಮಚಂದ್ರಶರೀರಂ ॥
ಪರಿಭವಿಸಿದುದೆಳವಿಸಿಲಾ ।
ವರಿಸಿದಕಮನೀಯಪುಂಡರೀಕಶ್ರೀಯಂ ॥ 123

ಅರಸಿಯಮನದೊಳ್ಕೆಂಜೆಡೆ ।
ದೊರೆಕೊಳಿಸುವುದುಚಿತಮೊಡನೆಕಜ್ಜಲರುಚಿಯೊಳ್ ॥
ಪೊರೆದನಯನೋತ್ಪಲಂಗಳ್ ।
ದೊರೆಕೊಂಬುದುಚಿತ್ರಮಲ್ತೆರಾಗೋತ್ಸವಮಂ ॥ 124

ಧಾತ್ರಿಯೊಳನ್ಯರತೇಜೋ ।
ಮಾತ್ರಮನಾಂಸಹಿಸೆನೆಂಬತೆಱದಿಂಪೊಯ್ಯ ॥
ಲ್ಧಾತ್ರಿಯಕಯ್ಯಿಂನಿಮಿರ್ವ್ವಂ ।
ಕ್ಷತ್ರಶಿಖಾಮಣಿಮಣಿಪ್ರದೀಪಾಂಕುರಮಂ ॥ 125

ಕಿವಿಗಿನಿದೆನಿಪ್ಪವೀಣಾ ।
ರವದೊಳನಾದರಮನುಂಟುಮಾಡಿತ್ತುತನೂ ॥
ಭವನತಳನ್ನಡೆಯೊಳ್ಪೊ ।
ಣ್ಮುವಮೃದುಪದಕನಕಕಿಂಕಿಣೀಝುಣಝುಣಿತಂ ॥ 126

ಶ್ರವಣಕ್ಕರ್ತ್ಥವ್ಯಕ್ತಿಯ ।
ನವಟಯಿಸದೆನೆಗಳ್ವವಶ್ಯಮಂತ್ರಾಕ್ಷರದಂ ॥
ತೆವೊಲೆಲ್ಲರುಮಂಸೋಲಿಸಿ ।
ದುವುತೊದಳೊಳ್ಪ್ಪಿದಿದರಾಮಚಂದ್ರನನುಡಿಗಳ್ ॥ 127

ತಿಳಿಗೊಳದೊಳಗೆಡೆಯಾಡುವ ।
ಕಳಹಂಸನಬಾಲಕೇಳಿಪುದುವೆನೆಮಧುಪಾ ॥

ಟಳನೇತ್ರಂಧವಳಾಂಗಂ ।
ಪಳುಕಿನಕುಟ್ಟಿಮದಮೇಲೆದಟ್ಟಡಿಯಿಟ್ಟಂ ॥ 128

ನಡೆಗಲ್ವಂದುಂಬಿಪ್ಪಿಂ ।
ಕೊಡೆನೆಗೆದಪುದುರ್ವ್ವಿಯೆಂದುವಾಸುಗಿಪಲವುಂ ॥
ಪೆಡೆಯುಂಶೇಷನಡೆಪೆಡೆಯೊಳ್ ।
ಪಡೆದಾಂತುಸಹಸ್ರಫಣನೆನಲ್ಪೆಸರ್ವಡೆದಂ ॥ 129

ಮಣಿಯೇಱಂಚೆಂಜೊಂನುಡೆ ।
ವಣಿಯುಲಿಗೆಲೆಗೆಲ್ದನಂಗರುಚಿಯಿಂದೈರಾ ॥
ವಣಿಮಂಕುಮಾರಚೂಡಾ ।
ಮಣಿಲಾಲಾಜಲದೊಳಂಚತುರ್ದ್ಧಾಂತದೊಳಂ ॥ 130

ಅಮೃತಾಂಶುವೆರ್ಚ್ಚೆಪೆರ್ಚ್ಚುವ ।
ಸಮುದ್ರಮೆಂತಂತೆರಾಮಚಂದ್ರಂದಿವಸ ॥
ಕ್ರಮದಿನಭಿವೃದ್ಧಿವೆತ್ತಾ ।
ಕ್ರಮಿಸಿದನತಿಮುಗ್ಧಭಾವಮಂಶೈಶವಮಂ ॥ 131

ವ ॥ ಅಂತುದಾಮಚಂದ್ರನಾದಿತ್ಯನಂತೆನಿತ್ಯೋದಯಮನಪ್ಪುಕೆಯ್ವುದುಂ ॥

ಕಂ ॥ ಬಾಲತ್ವದೊಳುಮುದಾತ್ತಗು ।
ಣಾಲಯನೆನಿಸಿದತನೂಜಮುಖಚಂದ್ರಮನಂ ॥
ಲೀಲೆಯಿನೀಕ್ಷಿಸಿದಶರಥ ।
ನೋಲಾಡಿದನಧಿಕರಾಗರಸವಾರಿಧಿಯೊಳ್ ॥ 132

ವ ॥ ಅಂತುಸಂತೋಷದಪರಮಪದಮನೆಯ್ದಿರ್ಪ್ಪುದು ಮದಲ್ಲದೆಯುಮಾಮಹೀವಲ್ಲಭ ನಮೋಹವಲ್ಲರಿಗಳೇಪೂತುವೆಂಬಂತೆಪುಷ್ಪವತಿಯರಾಗಿನಾಲ್ಕುನೀರಮಿಂದುಪೆಳ್ಪಸ ದನಂಪೊಸದೇಸಿವಿಳಾಸಂಬಡೆಯೆಸೂಳ್ಗೆವಂದು ಶುಭಸ್ವಪ್ನದರ್ಶನಾನಂತರಂಕೆಲ ವುದಿವಸಮಿರ್ಪ್ಪಿನಂ ॥

ಕಂ ॥ ಕುಲದೊದವಿಂಗೀಸತಿಯರೆ ।
ಕುಲದೇವತೆಯಕ್ಕರ್ಕಳೆಂಬಬಗೆಪುಟ್ಟುವಿನಂ ॥
ತಲೆದೋಱಿಗರ್ಭಚಿಹ್ನಂ ।
ತಲೆದೋಱಿದುದವನಿಪತಿಗೆರಾಗೋದ್ರೇಕಂ ॥ 133

ವ ॥ ಆಗಳಾಕೆಗಳಪಸುರ್ಪ್ಪಸೆವಸಿಯುಬಾಸೆಲಾವಣ್ಯನದಿಯಶೈವಾಲಲತೆಯುಲಾಸ್ಯವುನ
ಪಹಾಸ್ಯಂಗೆಯ್ಯೆಯುವಾಕೆಗಳಕಱಂಗಿದ ಕುಚಚೂಚುಕಂಗಳೆಂದೆಸೆದು ತೋಳ
ಪೊದಲಂಜಕ್ಕುಲಿಸುವಪೆರ್ಮ್ಮೆಲೆಕಂನೆಯ್ದಿಲೆಸಳಂನಲಿದು ಕಚ್ಚುರ್ಗವಜಕ್ಕ
ವಕ್ಕಿಯುವಿಳಾಸಮನಿಕ್ಕಿಮೆಟ್ಟೆಯುವಾಕೆಗಳಮುಖರಸದೊಳ್ಮೂಡಿಮುಳ್ಕಾಡುವ
ಕಪೋಳಯುಗಳಂತಿಳಿಗೊಳದೊಳಗಣ ಬಿಳಿಯತಾವರೆಯೆಸಳಂಸರಸವಾಡೆಯು
ವಾಕೆಗಳವೆಱೆನೊಸಲಂಮೆಟ್ಟಿನಿಮಿರ್ದ್ದತೋಱರಗುರುಳತೊಂಗಲೆಳವೆಱೆಯನಂ
ಧಕಾರಮಾವರಿಸಿದಂತೆ ತೋಱೆಯುಮನಂತರಮವರ್ಗ್ಗೆಪುಂಸವನಸೀಮಂತೋ
ನ್ನಯನಸಕಲಮಂಗಳಮಂ ದಶರಥನರನಾಥಂಮಾಳ್ಪುದುಮನುಕ್ರಮದಿಂಶುಭದಿ
ನಮುಹೂರ್ತ್ತದೊಳ್ ಸುಮಿತ್ರೆಲಕ್ಷ್ಮಣನಂಕೈಕೆಭರತನಂಸುಪ್ರಭೆಶತ್ರುಘ್ನನಂ
ಪಡೆವುದುಂ ॥

ಕಂ ॥ ಪಸರಿಸೆಪೂವಲಿಗಳ್ಬಾ ।
ಜಿಸೆಬದ್ಧವೆಣ್ಣಂಗಳ್ಒಡನೆಮಿಳಿರಿಸೆಗುಡಿಗಳ್ ॥
ದೆಸೆಬಿದ್ದವಾಡೆತರುಣಿಯ ।
ರೊಸಗೆಯುಮೇಲೊಸಗೆಯಾದುದಂಪರಮನೆಯೊಳ್ ॥ 134

ವ ॥ ಆಸಮಯದೊಳ್ದಶರಥಂಸುತಮುಖದರ್ಶನೋತ್ಸುಕಂಕತಿಪಯಾಪ್ತಪರಿಜನಪ
ರಿವೃತಂಸುಮಿತ್ರಾದೇವಿಯಸೂತಿಕಾಸದನಮಂಪೊಕ್ಕು ॥

ಮ ॥ ಸಿರಿಸಿಂಹಕ್ಕಭಿಷೇಕಮಂಪಡೆವುದಂರತ್ನಾಕರಂಸುತ್ತಿದು ।
ರ್ವ್ವರೆಯುಂಭಾಸುರಚಕ್ರಮಂಕನಸಿನೊಳ್ಪೊಂಪೆಟ್ಟಿವೇಱಿರ್ದುದಂ ॥
ಹರಿಣೀನೇತ್ರೆಸುಮಿತ್ರೆಕಂಡುದಱಿನಾಳ್ಗಂಪೆಳ್ಪಟ್ಟಂಬರಂ ।
ಭರತಕ್ಷೇತ್ರಮನೆಂದುಕಣ್ತಣಿವಿನಂಸೌಮಿತ್ರಿಯಂನೋಡಿದಂ ॥ 135

ಕಂ ॥ ಬಾಲಾರ್ಕ್ಕಮರೀಚಿಯೆನ ।
ಲ್ಬಾಲಕನಶರೀರಕಾಂತಿಪಸರಿಸೆಹರ್ಷೋ ॥
ನ್ಮೀಲನದಿಂದಶರಥನರ ।
ಪಾಲಕಮುಖಕಮಳಮೆಂಮನಂಗೊಳಿಸಿದುದೋ ॥ 136

ವ ॥ ಅನಂತರಂಭರತಶತ್ರುಘ್ನಜನ್ಮೋತ್ಸವಮಂಗಳಮನಾಚರಿಸಿ ॥

ಮ ॥ ಮನುವಂಶಾಂಬರಭಾನುಕಲ್ಪತರುಕೈವಂದಂತೆರೈವೃಷ್ಟಿತೊ ।
ಟ್ಟನೆಕೋದಂತೆಸುರೇಂದ್ರಧೇನುಕಱೆದಂತಾರ್ತ್ತಿತ್ತುಕೂರ್ತ್ತಿತ್ತುಸಂ ।

ಮನದಿಂದಿತ್ತು ಸುಹೃಜ್ಜನಂಪರಿಜನಂವಿದ್ವಜ್ಜನಂಬೇಯೆನ ।
ಲ್ತನಯಮೂರ್ಕ್ಕಾವರಜಾತಕರ್ಮ್ಮಮುಮನತ್ಯುತ್ಸಾಹದಿಂಮಾಡಿದಂ ॥ 137

ವ ॥ ಅಂತು ದಶರಥಮಹೀನಾಥಂಸಂತಾನಸಮೃದ್ಧಿಯಿನತಿಪ್ರವರ್ದ್ಧಮಾನಸುಖಾಧೀನ
ಮಾನಸನಾಗಿರ್ಪ್ಪುದುಂ ॥

ಕಂ ॥ ಅವನೀವಲ್ಲಭತನಯ ।
ರ್ನ್ನವಶಶಿಕಲೆಯಂತೆಪಡೆದುನಯನೋತ್ಸವಮಂ ॥
ದಿವಸಕ್ರಮದಿಂದಂವೃ ।
ದ್ಧಿವಡೆದರಮರಾವನೀಜದಗೆಯೆಂಬಿನೆಗಂ ॥ 138

ನಸುನಗೆಕಮಳದಸಿರಿಯಂ ।
ನಸುನಗೆಜನನಿಯರಲೋಚನಭ್ರಮರಂಗಳ್ ॥
ಮುಸುಱಿದುವೃಮೋಹವಲ್ಲರಿ ।
ಪಸರಿಸಿಪರ್ವ್ವಿದುದುಸುತರಲಾಲಾಜಲದಿಂ ॥ 139

ತಳರಡಿಯಿಡುವತ್ತಲೆಪರಿ ।
ದೆಳಸುವಜನನಿಯರದಿಟ್ಟಿಮಣಿಕುಟ್ಟಿಮಮಂ ॥
ಬಳಸೆಪೊಸತಲರ್ದನೆಯ್ದಿ ।
ಲ್ಗೊಳದೊಳಗಣರಾಜಹಂಸನಂನೆನೆಯಿಸಿದರ್ ॥ 140

ಚ ॥ ಅರಳೆಲೆಮುತ್ತಿಗಾಯ್ಪುಲಿಯುಗುರ್ನ್ನವರತ್ನದಕಂಕಣಂಗಳಂ ।
ಗುರಮುಡಿನೂಲುಪೊನ್ನಮಣಿಕಿಂಕಿಣಿರನ್ನದಘಂಟೆನೂಪುರಂ ॥
ಮರವಲಯಂಗಳೆಂಬಪಲವಂದದಚಂದದಬಾಳದಂದಮೊ ।
ಪ್ಪಿರೆಪಿತೃಮಾತೃಗಳ್ಗೆ ಪಡೆದರ್ತ್ತನಯರ್ನ್ನಯನೋತ್ಸವಂಗಳಂ ॥ 141

ವ ॥ ಅಂತುದಶರಥಮಹೀನಾಥನಸಾಮ್ರಾಜ್ಯಶ್ರೀಯಮಣಿಮಯಾಭರಣದಂತೆಸೊಗಯಿ
ಸುವಸುತರಬಾಲಕೇಳೀದರ್ಶನದಿಂ ಸುಮಿತ್ರೆಯನಯನಪುತ್ರಿಕೆನಲಿದುನರ್ತ್ತಿಸೆ
ಯುಂಕೈಕೆಯತನುಲತಿಕೆಪುಳಕಕಳಿಕೆಯನಪ್ಪುಕೆಯ್ಯೆಯುಂ ಸುಪ್ರಭೆಯಮನಃ
ಪ್ರಮೋದಮುದಿತೋದಿತಮಾಗೆಯುಂ ರಾಮಲಕ್ಷ್ಮಣಭರತಶತ್ರುಘ್ನರನುಕ್ರಮ
ದಿಂಶೈಶವಮನತಿಕ್ರಮಿಸೆ ॥

ಕಂ ॥ ವಸುಮತಿವೆಸರನ್ವರ್ತ್ಥಂ ।
ವಸುಧೆಗೆನಲ್ಕಱಿದುಪೊಂನಮಳೆಯಂದಾನ ॥

ವ್ಯಸನಿದಶರಥನದೇಂಬೊಸ ।
ಯಿಸಿದನೊಚಾಲೋಪನಯನವಹಿಮೋತ್ಸವಮಂ ॥ 142

ಕಂ ॥ ಪರಮಪ್ರೇಮಂಜನ್ಮಾಂ ।
ತರದಿಂದೊಡವಂದುದೆನಿಸಿಗೆಡೆಪಟ್ಟ ವ್ರೊಲ ॥
ಟ್ಟರಿಯಾಗೆರಾಮಲಕ್ಷ್ಮೀ ।
ಧರರೊಳಮಾದತ್ತು ಭರತಶತ್ರುಘ್ನರೊಳಂ ॥ 143

ಅಮಳ್ಗಳವರೆಂಬಿನಂತಮ ।
ಗಮಳ್ವೆಸರಮರ್ದೆಸೆಯಿತಾಯತಂದೆಯುಚಿತ್ತ ॥
ಕ್ಕಮರ್ದಿನಮಳಯಂಕಜಿದ ।
ಕ್ಕರ್ಮಾರಕಮ್ಮೂರ್ತಿಗೊಂಡಪುರುಷಾರ್ತ್ಥದವೋಲ್ ॥ 144

ಮ ॥ ಸುರಧೇನುಸ್ತನಭಾರದಂತೆಪುರುಷಾರ್ತ್ಥಂಮೂರ್ತಿಗೊಂಡಂತೆನಾ ।
ಲ್ವರುಮೊಂದಾಗಿರೆನಂದನರ್ದ್ದಶರಥಂನಾಲ್ಕುಂಸಮುದ್ರಂಬರಂ ॥
ಧರೆಯಂಕೂಡೆನಿಮಿರ್ಚ್ಚಿನಾಲ್ದೆಸೆಯೊಳಂನಾಲ್ಕುಂಜಯಸ್ತಂಭಮಂ ।
ಚರಿತಾರ್ತ್ಥನ್ನಿಲಿಸಲ್ಸಮರ್ತ್ಥರಿವರೆಂದುತ್ಸಾಹಮಂತಾಳ್ದಿದಂ ॥ 145

ವ ॥ ಮತ್ತಂನಿಜತನೂಭವರನಿರ್ಜ್ಜಿತ ಮನೋಜಾಕಾರಮುಮಂಮುಡಿಳಮಸೊರಿಕಾ ದಿಶುಭವ್ಯಂಜನರಂಜಿತಪ್ರಶಸ್ತಾವಯವಂಗಳುಮಂಪಲಕುಲಿಶಶಂಖಚಕ್ರಲಾಂಛ ನಂಗಳಪ್ಪಕರಚರಣಂಗಳುಮಂನೋಡಿಸಕಲಸಾಮ್ರಾಜ್ಯಶ್ರೀಯುನಪ್ಪುಕೆಯ್ದಂತೆ ಸಂತೋಷದಂತಮನೆಯ್ದಿ ॥

ಕಂ ॥ ಸವಿವವಸರಮಿದುವಿದ್ಯಾ ।
ಯುವತಿಯವದನಾರವಿಂದಮಧುಮನೆನುತ್ತುಂ ॥
ವಿವಿಧಕಳಾಚಾರ್ಯ್ಯರನಾ ।
ರ್ಯ್ಯವರ್ಯ್ಯರಂಗುರುನಿಯೋಗದೊಳ್ಯೋಜಿಸಿದಂ ॥ 146

ಶುಭದಿನಮುಹೂರ್ತ್ತದೊಳ್ಪು ।
ಣ್ಯಭಾಗಿಗಳ್ಕಲಿಸೆಗುರುಗಳೊಡವಂದುದೊಪ್ಪೂ ॥
ರ್ವ್ವಭವೋಪಾರ್ಜ್ಜಿತವಿದ್ಯಾ ।
ವಿಭವವೆನಲ್ಸಕಲಶಾಸ್ತ್ರಪರಿಣತರಾದರ್ ॥ 147

ರೋಮಾಂಚಮನೊಡರಿಸಿಯುಂ ।
ರಾಮನಲಕ್ಷ್ಮಣನಭರತಶತ್ರುಘ್ನರವಿ ॥

ದ್ಯಾಮುಹಿಮೋಚತುಷ್ಷಷ್ಟಿಕ ।
ಲಾಮುಹಿತರಮನದೊಳೀರ್ಷ್ಯೆಯಂಪುಟ್ಟಿಸುಗುಂ ॥ 148

ಮ ॥ ನೊಡರಂಪೊತ್ತಿಸಿಕೊಂಡುಪೋಗೆಸೊಡರೊಳ್ತೇಜಂಗುಣಾಧಿಕ್ಯದಿಂ ।
ಕಡುಗೊರ್ವ್ವಂಪಡೆವಂತೆತಂಮವಿಶದಪ್ರಜ್ಞಾಗುಣೋತ್ಕರ್ಷದಿಂ ॥
ಪಡಿಮಾತೇನಱುವತ್ತುನಾಲ್ಕುಕಳೆಯುಂತತ್ಕೋವಿದರ್ಮ್ಮೆಚ್ಚಿನೊ ।
ರ್ಮ್ಮಡಿಮೇಲಾದುವುರಾಮಲಕ್ಷ್ಮಣರಿನೇಂಸತ್ಸೇವೆಸಾಮಾನ್ಯಮೇ ॥ 149

ಚ ॥ ಕಲಿತನಮುಂಮಹಾಬಲಮುಮುಳ್ಳನಕಯ್ದುವೆಕಯ್ದುಪಂದೆದು ।
ರ್ವ್ವಲನೆನಿಸಿರ್ದ್ದವಂಪಿಡಿದಕೈದುವದೇತಱಕೈದುವೆಂಬಿನಂ ॥
ಕಲಿಸಿದಭಾರ್ಗ್ಗವಾತ್ಮಜನನೋಡಿದತಜ್ಞರಮುಯ್ಯನೆತ್ತಿಯುಂ ।
ಗೆಲೆಸಲೆರಾಮಲಕ್ಷ್ಮಣರದೇಂನೆಱೆಕಲ್ತರೊಕೈದುವೆಲ್ಲಮಂ ॥ 150

ಮ ॥ ಮಿಗೆವಂದೆಲ್ಲಱಬಿಲ್ಲಬಿಂನಣದಬಿಣ್ಪಂರಾಮಲೇಸೆಂಬಿನಂ ।
ಮಿಗೆತಂನೇಸುಪಮಾನಮಾದುದೆನೆರಾಮಂಕಲ್ತಬಿಲ್ಬಲ್ಮೆಯುಂ ॥
ಪೊಗಳಲ್ಪೇಳ್ವುದೆರಾಮನೊಳ್ಸದೃಶವೆಂಬಂನಂಧನುರ್ವ್ವಿದ್ಯೆಯಿಂ ।
ಜಗಮಂಮೆಚ್ಚಿಸಿಚಾಪಚಾಪಲತೆಯಂಕೊಂಡಾಡಿದಂಲಕ್ಷ್ಮಣಂ ॥ 151

ವ ॥ ಅಂತವರ್ಸಕಲಶಸ್ತ್ರಶಾಸ್ತ್ರವಿದ್ಯಾವಿಶಾರದರಾಗಿಕುಮಾರರ್ದ್ದಶಾತಿಶಯಮನಪ್ಪು
ಕೆಯ್ವುದುಂ ॥

ಚ ॥ ಹಿಮಕರಬಿಂಬದಿಂಕಡೆದುದೋಪಳಕಿಂಪಡೆದತ್ತೊಪೊಗಳಿಂ ।
ಸಮೆದುದೊಚಂದ್ರಕಾಂತಮಣಿಯಿಂಬೆಸಕೆಯ್ದುದೊಮೌಕ್ತಿಕಂಗಳಿಂ ॥
ಸಮನಿಸಿದತ್ತೊಕೋಮಳಮೃಣಾಳಿಕೆಯಿಂಪರಿಪೂರ್ಣ್ಣಮಾಯ್ತೊವೇ ।
ೞಮಿದೆನೆರಂಜಿಸಿತ್ತುರಘುರಾಮನಪಾಂಡುರದೇಹಮಂಡಳಂ ॥ 152

ಕಂ ॥ ಉನ್ನತಲಲಾಟಪಟ್ಟಂ ।
ಮನ್ನಿಸದಷ್ಟಮಿಯಚಂದ್ರನಂನಗೆಗಣ್ಗಳ್ ॥
ಮುನ್ನುರವಿಡಿದುವುಕಮಳಮ ।
ನಿನ್ನೇವಂಣಿಪುದೊರಾಮನಭಿರಾಮತೆಯಂ ॥ 153

ಚ ॥ ತೆರೆಕರೆಗಣ್ಮಿದಿಂಗಡಲಗಾಡಿಯನೇಳಿಸಿತೋರಮುತ್ತಿನೈ ।
ಸರದಮರೀಚಿಯಿಂಸಿರಿಯತಾಯ್ಮನೆರಾಮನವೇರುರಂಮನೋ ॥
ಹರಮೆನಿಸಿತ್ತುಮಾರವನಿತಾಜನವಶ್ಯವಿಧಾನವೇದಿಯೊಳ್ ।
ದೊರೆಯೆನಿಸಿತ್ತುಧೈರ್ಯ್ಯಗುಣರೋಹಣಶೈಳಸಿಳಾತಳೋಪಮಂ ॥ 154

ಕಂ || ಏಳಿಸಿದುವುಲಕ್ಷ್ಮಣನವಿ |
ಶಾಳವಿಲೋಚನಯುಗಂಗಳಂಗಪ್ರಭೆಯಿಂ ||
ಮೇಳಿಸಿನಗೆಯಂಪಾಳಿಸಿ |
ಕಾಳಿಂದಿಯೊಳಲರ್ದಪುಂಡರೀಕಶ್ರೀಯಂ || 155

ಹರಿನೀಳರತ್ನಮಂಕಂ |
ಡರಿಸಿದಕಣ್ದೆರವಿಗೆಯ್ದೆಜೀವಂಬೊಯಿದಂ ||
ತಿರೆತೋರ್ಪ್ಪಗಂಡಗಾಡಿಗೆ |
ಪುರುಷೋತ್ತಮನೆಂದುಕೊಂಡುಕೊನೆದುದುಲೋಕಂ || 156

ಚ || ಮನವಮನಲರ್ಚ್ಚಿದತ್ತುಪುರುಷೋತ್ತಮನುಚ್ಚಲಲಾಟರೇಖೆಕೃ |
ಷ್ಣನಕುರುಳೋಳಿವಿಷ್ಣುವಿನಪೇರುರಮಾಯತಿವೆತ್ತವಾರಿಜಾ ||
ಕ್ಷನಚಪಲೇಕ್ಷಣಂಪುರುಷಸಿಂಹನಸಿಂಹಕಟೀತಟಂಜನಾ |
ರ್ದನನಭುಜಂಗಭೀಮಭುಜಮಂಬುಜನಾಭನನಾಭಿಮಂಡಲಂ || 157

ಪೊಳೆವನಖಾಂಶುಮಂಡಲಫಣಾಮಣಿಪಂಚಫಣಾಸಿತಾಹಿಗಳ್ |
ಬಳೆದಪುವೀಂಟಲೆಂದುದಕಕಂಠನಬಲ್ಸಿರಮಂತದೀಯನಿ ||
ರ್ಮಳತರಕೀರ್ತಿದುಗ್ಧರಸಪಾನಮನೆಂಬಿನೆಗಂಪೊದಳ್ಕೆಕೋ |
ಮಳತೆಯನಾಳ್ದುನೀಳ್ದುಬಗೆಗೊಂಡುವುಕೃಷ್ಣನಬಾಹುಶಾಖೆಗಳ್ || 158

ಉ || ಹಾರಮರೀಚಿಯಂಮರಕತಚ್ಛವಿಯುಂಗೆಲೆದೇಹದೀಪ್ತಿನೀ |
ಹಾರಮರೀಚಿಯಂಕುಸುಮಸಾಯಕನಂಗೆಲೆಗಂಡಗಾಡಿಕಂ ||
ಭೀರವನಾದಮಂಜುಳಧರಧ್ವನಿಯಂಗೆಲೆಹೇಜಿಪೇಜಿಗಂ |
ಭೀರರವಂಬಲಾಚ್ಯುತರದೇನೆಸೆದಿರ್ದ್ದರೊರಾಮಲಕ್ಷ್ಮಣರ್ || 159

ಮ || ರಣದೊಳ್ರಾವಣನಂಜವಂಗೆಪೊಸತಿಕ್ಕಲ್ಲಾತ್ತರಶೈಲಕ್ಕೆತೆಂ |
ಕಣಮಂಕಂಕಣದಂತೆಕೈಗೆವರಿಸಲ್ಭೂಚಕ್ರಮಂಚಕ್ರಮಂ ||
ರಣದೊಳ್ಸಾಧಿಸಲೆಂದುಪುಟ್ಟಿದವರೇಂಸಾಮಾನ್ಯರೇರಾಮಲ |
ಕ್ಷ್ಮಣರಪ್ರಾಕೃತವಿಕ್ರಮರ್ತ್ರಿಭುವನಪ್ರಖ್ಯಾತಕೀರ್ತಿಧ್ವಜರ್ || 160

ವ || ಅಂತುರಾಮಲಕ್ಷ್ಮಣಭರತಶತ್ರುಘ್ನರೆಂಬನಾಲ್ವರ್ತನೂಭವರುಂನಾಲ್ಕುಂರತ್ನಕೀಲಾಸ್ತಂಭಂಗಳಂತೆರಘುಕುಲಸಮುದ್ಧರಣಸಮರ್ತ್ಥರಾಗೆದಶರಥಂಪರಿಪೂರ್ಣ್ಣಮನೋರಥನಾಗಿ ||

ಮ॥ಸ್ರ॥ ಧನಮಂಮರ್ಯಾದೆಯಿಂದಾರ್ಜಿಸಿವಿಷಯಸುಖಾಸ್ವಾದನಂದೋಷನಿಷ್ಪಾ।
ದನಮಲ್ತೆಂಬಂತೆಚಿತ್ತಕ್ಕೊದವಿಸೆಪದಪಂಭಾರತೀಹಂಸವಕ್ತ್ರಾ॥
ಬ್ಜಿನಿಯೊಳ್ನಾನಾವಿಧಂನರ್ತಿಸೆಹಿಮಕರಭಾಸ್ವದ್ಯಶೋವಲ್ಲಿಗಾಳಂ।
ಬನಮಂಭೋರಾಶಿವೇಳಾವನಮೆನೆನೆಗಳ್ದಂಭಾರತೀಕರ್ಣಪೂರಂ॥ 161

ಗದ್ಯ॥ ಇದುಪರಮಜಿನಸಮಯಕುಮುದಿನೀಶರಚ್ಚಂದ್ರಬಾಲಚಂದ್ರಮುನೀಂದ್ರಚರಣನಖಕಿರಣಚಂದ್ರಿಕಾಚಕೋರಂಭಾರತೀಕರ್ಣಪೂರಂಶ್ರೀಮದಭಿನವಪಂಪವಿರಚಿತಮಪ್ಪರಾಮಚಂದ್ರಚರಿತಪುರಾಣದೊಳ್ದಶರಥಪುತ್ರೋದಯವರ್ಣನಂತೃತೀಯಾಶ್ವಾಸಂ॥

ಚತುರ್ಥಾಶ್ವಾಸ ಪ್ರಾರಂಭಃ.

—:o:—

ಕಂ ॥ ಶ್ರೀಸುದತಿತಂನುರಸ್ಸರ ।
ಸೀಸದನದೊಳಿರ್ದ್ದುಪಾತ್ರದಾನವ್ಯಸನ ॥
ವ್ಯಾಸಂಗಮನೊದವಿಸೆಸಾ ।
ಖ್ಯಾಸೀನಂಪೆಂಪುವೆತ್ತನಭಿನವಪಂಪಂ ॥ 1

ವ ॥ ಅಂನೆಗಮಿತ್ತಲ್ ॥

ಕಂ ॥ ಮಿಥಿಳಾಪುರಾಧಿನಾಥಂ ।
ಪ್ರಥಿತಯಶಂಜನಕನಾಮಹೀಭುಜನಮನೋ ॥
ರಥಭೂಮಿವಿದೇಹಿಂಗದೇಂ ।
ಪೃಥುಕುಚಯುಗದೊಡನೆಕೊರ್ವ್ವಿವಡೆದುದುಮಧ್ಯಂ ॥ 2

ಶಶಿಕಾಂತಮುಕುರದಂತಿರೆ ।
ಶಶಿಮುಖಿಯಕದಂಪುಗಳ್ಬೆಳತ್ತುರ್ವ್ವುಹರಿಸೀ ॥
ಲಶಲಾಕೆಯಂತೆಬಾಸೆಗೆ ।
ವಿಶೇಷಮೆನೆಪಸರಿಸಿತ್ತುಕರ್ಪ್ಪೆಳವಸಿಱೊಳ್ ॥ 3

ವಳರೇಖೆಮಸುಳೆಗರ್ಭಂ ।
ಬಳೆವುದುಮೊಡವಳೆದಸತಿಯಮಧ್ಯಂಚೆಲ್ವಂ ॥
ತಳೆದುದುನಯನಾನಂದಮ ।
ನೆಳವೆಱೆಪರಿಪೂರ್ಣ್ನಮಾದೊಡಂಪುಟ್ಟಿಪವೋಲ್ ॥ 4

ವ ॥ ಆಸಮಯದೊಳ್ ॥

ಕಂ ॥ ಭವಬದ್ಧವೈರದಿಂಕಾ ।
ದುವಿದೇಹಿಯಗರ್ಭಮಂನಿಶಾಚರನಿರ್ದ್ದಂ ॥
ವಿವಿಧೋಪಸರ್ಗ್ಗಮಂಪಡೆ ।
ಯವೆಮುಳಿಸಂಪಡೆವಮುಳಿವದುಶ್ಚರಿತಂಗಳ್. ॥ 5

ವ ॥ ಆವಿದೇಹಿಯಗರ್ಭಮನಾನಿಶಾಚರನದೇಕಾರಣದಿಂಕಾದಿರ್ದ್ದನೆಂದೊಡೆಚಂದ್ರಪುರ
ಮನಾಳ್ವಚಂದ್ರಧ್ವಜನರಸಿಮನಸ್ವಿಯೆಂಬಳಾಕೆಗೆಪುಟ್ಟಿದಚಿತ್ರೋತ್ಸವೆಯೆಂಬಬಾ
ಲಕಿಯುಮಾನೃಪನಪುರೋಹಿತನಮಗನಪ್ಪಕಪಿಳನೆಂಬಬಾಲಕನುಂ ॥

ಕಂ ॥ ಬಡನಾಡಿಯುಮೊಡನೋದಿಯು ।
ಮೊಡವಳೆದುಂಪಲವುಕಾಲದಿಂದನುಬಂಧಂ ॥
ಗೊದೊಡಲೆರಡಸುವೊಂದೆನೆ ।
ಗೆಡೆವಕ್ಕಿಗಳಂತೆಕೂಡಿನಲಿಯುತ್ತಿರ್ದರ್ ॥

ವ ॥ ಅಂತವರೋರೋರ್ವ್ವರಂಮೆಚ್ಚಿ ॥

ಮ ॥ ಪದಪಿಂಚುಂಬಿಸದುಂಮಳಂಬಯಸಿದಾಗಳ್ಮನ್ಮಥಕ್ರೀಡೆಕೂ ।
ಡದಳಲ್ಕದ್ದೊಡಗೂಡುವುಜ್ಜುಗಮನಕ್ಕುದ್ವೇಗಮಂಮಾಡೆನೋ ॥
ಡದೆತಾಯ್ತಂದೆಯಗೆಲ್ಲೆಯಂಮದನರಾಗೋನ್ಮಾದದಿಂಮುಂದುಗಾ ।
ಣದೆಮುಗ್ಧಾಶಯರಾವಿದಗ್ಧಪುರಮಂಪೊಕ್ಕಿರ್ದ್ದರಾಊರ್ವ್ವರುಂ ॥ 7

ಕಂ ॥ ಅನಿತಿಂದ್ರಿಯಸುಖಮುಂಕ್ಸ್ಪ ।
ರ್ಶನಸುಖಮೊಂದಱೊಳಡಂಗಿದತ್ತೆನ್ನೆಪನಂ ॥
ದನೆಯುಂದ್ವಿಜನಂದನನುಂ ।
ಮನೋಜಸುಖರಸವಿಲೀನಮಾನಸರಿರ್ದ್ದರ್ ॥ 8

ವ ॥ ಅಂತಿರ್ಪ್ಪದುಮೊಂದುದಿವಸಂತತ್ಪುರಾಧಿಪತಿಯಪ್ಪ ಪ್ರತಾಪಸಿಂಹನಸುತಂ ಕುಂಡಲಮಂಡಿತನೆಂಬಂ ॥

ಚ ॥ ಕೊಡೆವಿಡಿದಂತೆಮಂಡೆಗೆಸೆಮೇಲೆಕಿರೀಟಮರೀಚಿಸುತ್ತಲುಂ ।
ಕಡಿತಲೆಯಾಳ್ಕಡಂಗಿಬರೆಮಾರ್ಗ್ಗಮೊಡಂಬಡೆರಾಜಮಾರ್ಗ್ಗದೊಳ್ ॥
ನಡೆಯೆಹಯಂವಿಳಂಬಿತದೆಕುಂಡಳಮಂಡಿತನೇಂವಿಳಾಸಮಂ ।
ಪಡೆದನೊಪದ್ಮರಾಗಮಣಿಕುಂಡಳಮಂಡಿತಗಂಡಮಂಡಲಂ ॥ 9

ವ ॥ ಅಂತುಬರುತ್ತುಂ ॥

ಚ ॥ ಶರದದಚಂದ್ರನಂನಗೆಮೊಗಂನೆಗೆಚಂದ್ರಮರೀಚಿಮಾಲೆಯಂ ।
ತರಳಕಟಾಕ್ಷಮಾಳೆಗೆಲೆವಂದ್ಧುಗೃಹಾಂಗಣದೊಳ್ಕಲತಾತನೂ ॥
ದರಿನಡೆನೋಡೆಕಂತನಡೆನೋಡಿದಪೂಗಣಿಗೆತ್ತುನಾಡೆಕಾ ।
ತರತೆಯನಪ್ಪುಕೆಯ್ಯೊಳಗೆನೋಡಿದನಾಕೆಯನಾಕುಮಾರಕಂ ॥ 10

ವ ॥ ಅಂತುಕಣ್ಸೋಲ್ತುನೋಡಿದೂದಮಿಯನಟ್ಟುವುದುಂ ॥

ಚ ॥ ಬಗೆಯದೆತನ್ನಮುನ್ನಿನೊಲವಂನೆಲೆಯಿಂದೊಡಗೂಡಿಬಂದುದಂ ।
ಬಗೆಯದೆಪಾಳೆಯಂಪಸುಗೆಯಂಗುಣಹಾನಿಯನಪ್ರಸಿದ್ಧಿಯಂ ॥ 10

ಬಗೆಯದೆಬಂದರೊದವಿಗೆಚಿತ್ತಮನೊಪ್ಪಿಸಿಕೊಟ್ಟದಾಸೆಯಂ ।
ಬಗೆದಳಿದಾವವಿಸ್ಮಯಮೊನಾರಿಗೆನಚ್ಚಿನಕೈದುಕ್ಕೈತವಂ ॥ 11

ವ ॥ ಅಂತಾಕೆಯನಾಕುಮಾರಂಬರಿಸಿತನಗರಸಿಮಾಡಿಕಪಿಳನಂಮರುಳ್ಮಾಡಿ[illegible]ವುದು ಮಾತನದುವೆ ನಿರ್ವ್ವೇಗಕಾರಣಮಾಗೆಕೆಲವುಕಾಲದಿ ನಾರ್ಯ್ಯಗುಪ್ತರೆಂಬಾಚಾರ್ಯ್ಯರಸಮೀಪದೊಳ್ಬಾಹ್ಯತಪೋರೂಪಮಂತಳೆದು ॥

ಕಂ ॥ ಅಸುದತಿನೆಲಸೆಚಿತ್ತನಿ ।
ವಾಸದೊಳಾಕಪಿಳಮುನಿತಪಶ್ಶ್ರೀತನುವಂ ॥
ಬಾಸಣಿಸೆತೆಗೆದುಪೊನ್ನಂ ।
ಪೂಸಿದಕಬ್ಬೊರ್ನ್ನಪಾಸೆಯಂತೆವೊಲಿರ್ದ್ದಂ ॥ 12

ಒಪ್ಪಿಸಿಮನಮಂಮಾನಿನಿ ।
ಗೊಪ್ಪಿಸಿತನುವಂತಪಕ್ಕೆಮುನಿಮನಸಿಜನಿಂ ॥
ಸೊಪ್ಪಾಗಿರ್ದ್ದೊಳ್ಕವಡಿಯ ।
ಕುಪ್ಪಸಮಂಪೋಲ್ತಪೋಜಗೇಱದನಾದಂ ॥ 13

ಮುನಿನಡೆದಾತಪದೊಳ್ಜೀ ।
ವನಮಂತವೆಪೇರ್ದ್ದದೇವಗತಿಸಮುನಿಸ್ಸೆಮುಂ ॥
ನಿನಪಗೆಯಂಕುಂಡಲನಂ ।
ನೆನೆದವಧಿಯಿನಳವಿಗಳೆದಮುಳಿಸಂತಳೆದಂ ॥ 14

ವ ॥ ಅಂತುನಿಜವಿರೋಧಿಯಪ್ಪಕುಂಡಲಮಂಡಿತಂಪೆಱತೊಂದುಪೆಣ್ಗೆಸುಮೆರಸುವಿದೇಹಿಯಗರ್ಬ್ಭದೊಳ್ಬಳೆವುದಂತಿಳಿದು ॥

ಕಂ ॥ ಗರ್ಬ್ಭದಪೆಣ್ಗೆಸಿಂಗಂ ।
ಗರ್ಬ್ಭಿಣಿಗಂಬಾಧೆಪಿಂಗೆಪೆತ್ತಾಗಳ್ಗೆ ॥
ಬರ್ಬ್ಭಾರ್ಬ್ಭಕನನೊಯ್ವೆನೆಂಬೀ ।
ದುರ್ಬ್ಭಾವನೆಯಿಂವಿದೇಹಿಯಂಕಾದಿರ್ದ್ದಂ ॥ 15

ಮ ॥ ಸಿರಿದಿಕ್ಕಾಂತೆಗೆಚಾರುಚಂದ್ರಕಳೆಯುಂಚಂಡಾಂಶುವುಂಪುಟ್ಟುವಂ ।
ತಿರೆಭೂವಲ್ಲಭಚಿತ್ತವಲ್ಲಭೆಗೆಪುತ್ರೀಪುತ್ರರೊಂದಾಗಿರಾ ॥
ಗರಸಂಸ್ತ್ಯೈಮಿಗೆಪುಟ್ಟೆಪೂರ್ವ್ವಭವಬದ್ಧಕ್ರೋಧದಿಂಬಾಲನಂ ।
ಸುರನೋರ್ವ್ವಂಪಿಡಿದೊಯ್ದನೊಯ್ಯನೆತೆಱದಿಂಸ್ವರ್ಬ್ಭಾನುಬಾಲಾರ್ಕ್ಕನಂ ॥ 16

ವ ॥ ಅಂತುಕೊಂಡುನೆಗೆದುಗಗನಮಾರ್ಗದೊಳ್ಪೋಗುತ್ತುಂ ॥

ಉತ್ಸಲ್ಲಚ ॥ ಒಗೆವೆನೊಬೀಸಿಪಾಸಜೆಯೊಳದ್ದುವೆನೋಕಡಲೊಳ್ಕರುಳ್ಗಳಂ ।
ತೆಗೆವೆನೊಕುತ್ತಿಕತ್ತಿಗೆಯೊಳಿಕ್ಕುವೆನೋವಿಪಿನಾಗ್ನಿಯೊಳ್ಳಱು ॥
ತ್ತುಗಿವೆನೊಕೂಡೆಮೊಯ್ದ್ವಲನಲ್ಲದೊಡೆನ್ನಳಲ್ಕಱದೆಂದುದಿ ।
ಟ್ಟಗಳೊಳೆನುಂಗುವಂತೆನಡೆನೋಡಿದನಾಶಿಶುವಂನಿಶಾಚರಂ ॥ 17

ವ ॥ ಅಂತುನೋಡಲೊಡನರ್ಭಕನಪೂರ್ವಭವದಣುವ್ರತಸಾಮರ್ಥ್ಯದೊಳಂನಿಜ
ಮಹಾವ್ರತಸಂಸ್ಕಾರದೊಳಂ ॥

ಕಂ ॥ ಫಣಿಗೆಗರುಡಾಂಗದಪಕ್ಷಿಯ ।
ಮಣಿಯಂಕಂಡಂತೆಮಣಿಯೆಶಿಶುವದನನಿರೀ ॥
ಕ್ಷಣದಿಂದಾಕ್ಷಣದೊಳ್ದಾ ।
ರುಣಭಾವಂಪೋದವನುಪಶಮಕ್ಕೆಡೆಯಾದಂ ॥ 18

ಒಡಲೊಳಗುಣ್ಮಿದಸರಲ್ಪೊಱ ।
ಮಡುವುದಯಸ್ಕಾಂತಸಂನಿಧಾನದೊಳೆಂತಂ ॥
ತೊಡಲಿಂಪೋದುದುಮುನಿಸಿನ ।
ಪೊಡರ್ಪನಕ್ತಂಚರಂಗೆಶಿಶುಸಂನಿಧಿಯೊಳ್ ॥ 19

ವ ॥ ಅಂತುಪಶಮಭಾವಮುಂಪಾಪಭೀರುತ್ವಮುಂ ತನಗೆತೊಟ್ಟನೆಪುಟ್ಟೆತಂನ ಕರ್ಣ
ಕುಂಡಲಮಂಬಾಲಕನ ಕರ್ಣಯುಗಳಂಗಳೊಳಮರ್ಚೆಪರ್ಣಲಘುವಿದ್ಯೆಯಿ
ನೀಡಾಡಿಪೋಪುದುಂ ॥

ಚ ॥ ತನುರುಚಿಕರ್ಣಕುಂಡಲಮರೀಚಿವಿಯತ್ತಳಮೆಲ್ಲಮಂಪಳ ।
ಚ್ಚನೆಪೆಳಪಂತುಪರ್ಣಲಘುವಿದ್ಯೆಯಿನೊಯ್ಯನೆಬಂದುಖೇಚರೇಂ ॥
ದ್ರನಮೃದುತಳ್ಪದೊಳ್ಸುರಕುಮಾರಕನಂದುಪಪಾತತಳ್ಪದೊಳ್ ।
ಜನಿಯಿಸಿದಂತೆಕಣ್ಗೆಪಡೆದಂಶಿಶುನಿರ್ಭರಹರ್ಷಭಾರಮಂ ॥ 20

ವ ॥ ಅಂತಾಶಿಶುವಂದಕ್ಷಿಣ ಶ್ರೇಣಿಯರಥನೂಪುರಚಕ್ರವಾಳಪುರಮನಾಳ್ವ ನಿಂದುಗತಿವಿ
ಯಚ್ಚರೇಂದ್ರನಂದಿನಸೂಳ್ಗೆ ವಂದಪುಷ್ಪವತಿವೆಸರಮಹಾದೇವಿಫಲವತಿಯಾದಳೆನಿ
ಸಿಕೊಟ್ಟುಕುಂಡಲಪ್ರಭಾಮಂಡಲವಿಳಾಸಮಂತಳೆದುದಱಿಂಪ್ರಭಾಮಂಡಲನೆಂದು
ಪೆಸರನಿಟ್ಟನಂನೆಗವಿತ್ತಲ್ ॥

ಉ ॥ ಈಗಳೆಪುಟ್ಟಿದೆನ್ನಶಿಶುವಂಕರಣಾಂತನಗಿಲ್ಲದೆತ್ತಿಕೊಂ ।
ಡಾಗಸದತ್ತಲಂತಕನದೂತನವೋಲ್ಪಿಡಿದೊಯ್ದನೋರ್ವ್ವನಿಂ ॥
ನೇಗಳಗೆಯ್ವೆನೆಂದಳೆವಿದೇಹಿನವೋತ್ಪಲಮಾಲಿಕಾಜುವಂ ।
ತಾಗಳದುಷ್ಣವಾರಿಗಳನುಣ್ಮಿದುವಾಕೆಗೆಬಾಷ್ಪವಾರಿಗಳ್ ॥ 21

ಕಂ ॥ ಬಡವಂಚಿಂತಾಮಣಿಯಂ ।
ಪಡೆವಂತೆಂತಾನುಮೋರ್ವ್ವನಂತನಯನನಾಂ ॥
ಪಡೆದಾಗಳೆಮತ್ತೋರ್ವ್ವಂ ।
ಪಿಡಿದೊಯ್ದಂದನುಜನೆಂದುಶೋಕಂಗೆಯ್ದಳ್ ॥ 22

ರಕ್ಷಾವಿಧಾನಮಂತನು ।
ರಕ್ಷಕರಂಬಗೆಯದೆನ್ನತನಯನನೊಯ್ದಂ ॥
ರಾಕ್ಷಸನೆಂದತ್ತಳ್ಧವ ।
ಳೇಕ್ಷಣದಳದಳಿಸಸುರಿಯೆಬಾಷ್ಪಜಲಂಗಳ್ ॥ 23

ಕುಳವೃದ್ಧೆಯರುಂಧಾತ್ರೀ ।
ಕುಳಮುಂಶುದ್ಧಾಂತಕಾಂತೆಯಕ್ಕರ್ಗಳುಮಳಲಿಂ ॥
ದಳೆಕಂಡುಜನಕನತಿವಿ ।
ಹ್ವಳಚಿತ್ತಂಶೋಕರಸಮನೊಳಕೊಂಡಿರ್ದ್ದಂ ॥ 24

ವ ॥ ಆಗಳಮುಹೂರ್ತ್ತಕರೀಶುಭಮುಹೂರ್ತ್ತದೊಳ್ಪುಟ್ಟಿದಬಾಲಕಂಗಮೋಘಮಪಾ
ಯಮಾಗದೀಕೆಯುಮಗಣ್ಯಪುಣ್ಯಾವತಿಯಕ್ಕುಮೆಂದುಶೋಕಮನದಿರ್ಪ್ಪಿಸೆವಿದೇಹಿ
ಸಂತೋಷಂಬಟ್ಟುನಿಜತನೂಜೆಯಮುಖಸರೋಜಮಂನೋಳ್ಪುದುಂ ॥

ಕಂ ॥ ಆಸತಿಗೆಪುಟ್ಟೆಹರ್ಷ್ಷವಿ ।
ಕಾಸಂಮಧುಬಿಂದುಮಾಲೆನೀಲೋತ್ಪಲದಿಂ ॥
ಸೂಸುವವೋಲ್ನಗೆಗಣ್ಣಿಂ ।
ಸೂಸಿದುವಾನಂದಬಾಷ್ಪಬಿಂದುವಿತಾನಂ ॥ ಸಮೂಹ 25

ವ ॥ ತದನಂತರಂ ॥

ಕಂ ॥ ಆರಾಜಭವನದೊಳ್ಮಣಿ ।
ತೋರಣಮೊಡರಿಸಿದುವೀಕ್ಷಣಾಕರ್ಷ್ಷಣಮಂ ॥

ಭಾರತಿಕನಾಗೆಮಂದಸ ।
ಮೀರಂಕೈನಿರಿದುವುತ್ಸವಧ್ವಜತತಿಗಳ್ ॥ 26

ಕೆದಱಿದಪಿಷ್ಟಾತಕದಿಂ ।
ದೊದವಿದಪಟವಾಸಚೂರ್ಣ್ಣದಿಂದಳವಡೆಕ ॥
ಟ್ಟಿದರನ್ನದಮೇಲ್ಕಟ್ಟಿಂ ।
ಪದಪಂಪುಟ್ಟಿಸಿದುದಿಟ್ಟಳಂನೃಪಸದನಂ ॥ 27

ಬದ್ಧವಣಂಬಾಜಿಸೆದೆಸೆ ।
ಬಿದ್ದಂಕುಣಿದಾಡೆಗಣಿಕೆಯರ್ಪೂವಲಿಯೊಳ್ ॥
ಮುದ್ದಾಡೆತುಂಬಿಗಳ್ಮಗಿ ।
ಲುದ್ದಂಪರಿದತ್ತುಹರ್ಷರಸಮಾಪುರದೊಳ್ ॥ 28

ಚ ॥ ಪಡೆದುದುಗಾಯಿನೀಮಧುರಮಂಗಳಗೇಯಮುಪಾಯನಂಗಳಂ ।
ಕುಡಲೆಡೆಯಾಡುತಿರ್ಪ್ಪಗಣಿಕಾಮಣಿನೂಪುರಕಿಂಕಿಣೀರವಂ ॥
ಕುಡಿದುಪಹಾರಪುಷ್ಪರಸಮಂಮೊರೆದೇಳ್ವಳಿನೀರವಂಮಿಗ ।
ಳ್ಪಡೆಯೆವಿದೇಹಪೌರಜನಕರ್ಣ್ಣರಸಾಯನದೊಂದುತಂದಲಂ ॥ 29

ವ ॥ ಅಂತುಜಾತಕರ್ಮ್ಮೋತ್ಸವಂಮಾಡಿದಶಮದಿನದೊಳ್ಸರ್ವ್ವಲಕ್ಷಣಸಸ್ಯಸಂಪತ್ತಿಗೆ
ಸೀತೆಯಪ್ಪುದಱಿಂಸೀತೆಯೆಂದುಪೆಸರನಿಟ್ಟುಕೊಂಡಾಡಿನಡಪುತ್ತುಮಿರೆಮದನಮೋ
ಹನದೀಪಕಳಿಕೆಯಂತೆಯುಂ, ಕಾಮಕಲ್ಪಲತೆಯಂತೆಯುಂ, ನಿರಂತರೋಪಚಯ
ಮನಪ್ಪುಕೆಯ್ದುಭರತಶಾಸ್ತ್ರಾದಿಸಕಲಕಲೆಯೊಳತಿಪರಿಣತಿವಡೆದು ॥

ಕಂ ॥ ಶಶಿಲೇಖೆಯೆನಲ್ಕಪೂರ್ವ್ವ ।
ರಶಲಾಕೆಯೆನಲ್ವಿಳೋಚನೋತ್ಸವಮಂಮಾ ॥
ಡಿಶಿಳೀಮುಖಕುಂತಳೆಮದ ।
ನಶಿಳೀಮುಖದಂತೆಭುವನಮಂಸೋಲಿಸಿದಳ್ ॥ 30

ಮನಸಿಜನಾಜ್ಞಾರೂಪಮಿ ।
ದೆನೆಕರ್ಬ್ಬಿನಬಿಲ್ಲನೊಲ್ಲದುರ್ಚ್ಚುವಸಂಮೋ ॥
ಹನಶರಮೆನೆಬಾಜಿಸಿದುದು ।
ಜನಕಜೆಯಬೆಡಂಗುಮದನಜಯಡಿಂಡಿಮಮಂ ॥ 31

ಉ ॥ ಲೀಲೆಯನಪ್ಪುಕೆಯ್ದುನಯನೋತ್ಸವಮಂದಱಿಗೆಯ್ವಗಾಡಿಯಿಂ ।
ದೇಳಿಸಿಕಾಮಕಲ್ಪಲತೆಯಂಪರಿಪೂರ್ಣ್ಣಕಳಾವಿಳಾಸದಿಂ ॥
ದೇಳಿಸಿಚಾರುಚಂದ್ರಕಲೆಯಂನೆಲೆವೆರ್ಚ್ಚಿಸಿದಳ್ಕರಾಳಲೀ ।
ಲಾಲಸಯಾನೆಜಾನಕಿವಿದೇಹಿಗೆಮೋಹರಸಪ್ರವಾಹಮಂ ॥ 32

ಕಂ ॥ ಜನಕಂಗೆಹರ್ಷದೊದವಂ ।
ಜನಿಯಿಸಿಜಾನಕಿಯರೂಪವಿಭವಂಮಾಡಿ ॥
ತ್ತನುರೂಪಂನೃಪಸುತನಾ ।
ವನೊವರನೀವನಿತೆಗೆಂಬಮನದುಂಮಳಮಂ ॥ 33

ಚ ॥ ಜನಕಜೆಮೀಱಿಶೈಶವಮನೇಂತಲೆದೋಱಿದುದೋನವೀನಯೌ ।
ವನವಿಭವಂಮುಗುಳ್ನಗೆಯನೊಂದೆರಡಂನಿಜಪಲ್ಲವಾಧರಂ ॥
ನನೆಯಸರಲ್ಗಳೊಂದೆರಡುಮಂಕಡೆಗಣ್ಕುಡುವುರ್ವ್ವಕಾಮದೇ ।
ವನಕುಸಿಲ್ಲನೊಂದೆರಡುಮಂಪಡೆದೊಪ್ಪಮನಪ್ಪುಕೆಯ್ವಿನಂ ॥ 34

ವ ॥ ಅಂತುಜಾನಕಿಜನನೀಜನಕರಮನಕ್ಕೆಸಂತೋಷಮನೊದವಿಸುತಿರ್ಪ್ಪಿನಮೊಂದು
ದಿವಸಂ ॥

ಮ॥ಸ್ರ॥ಚರನೋರ್ವ್ವಂಬಂದುಬೇಗಂಜನಕನಸಭೆಯಂಪೊಕ್ಕುಮೆಯ್ಯಿಕ್ಕಿಭೀತಾ ।
ತುರಚಿತ್ತಂಚೇನಚೇಳಾಂಚಳಮನಧರ[illegible]ತ್ತೊಯ್ದುಚಿತ್ತ್ರೈಸಿದೊಂದಂ ॥
ಹರಿವಂಶೋತ್ತಂಸಲೋಕಾದ್ಭುತಮನಸಮಯೋತ್ಪಾತಮಂಲೋಕಲುಂಟಾ ।
ಕರಸಂಖ್ಯಾತಕ್ಷ್ಮಾರಾತರ್ನ್ನೆರೆದುನಿಖಿಲಭೂಚಕ್ರಮಂಸೂಱೆಗೊಂಡರ್ ॥ 35

ಕಂ ॥ ಇಱಿದುತವಿಸು[illegible]ಡೆಪಡೆನಾ ।
ಡೆಱೆಯರಕಯ್ಯೊಳವಿಯಲ್ತುಕಂಡಂತುಟನೆ ॥
ನ್ನಱಿವಂತುಟನುಳ್ಳಂತುಟ ।
ನಱಿಪುವೆನವಧರಿಪುದೆಂದುಚರನಿಂತೆಂದಂ ॥ 36

ಧನದಾಚಲಕ್ಕೆಬಡಗಣ ।
ದೆಸೆವಿಜಯಾರ್ದ್ಧಾಚಳಕ್ಕೆತೆಂಕಣದೆಸೆದು ॥
ಷ್ಟನಿವಾಸಮರ್ದ್ಧಪರಮೆಂ ।
ಬನಾಮದಿಂಮ್ಲೇಚ್ಛದೇಶಮಿರ್ಪ್ಪುದಪಾರಂ ॥ 37

ವ ॥ ಅಲ್ಲಿಮಯೂರವಾಲೆಯೆಂಬಶಬರಶಿಬಿರಮನಾಳ್ವತರಂಗತಮನೆಂಬಶಬರನಾಯಕಂ
ತಂನಾಳ್ವನಾಡಬೇಡಪಡೆಯೆಲ್ಲಮಂಕೂಡಿಕೊಂಡುಕಪೋತಕಾಂಭೋಜಕಣಾದಿ
ದೇಶಂಗಳಂಕಿಡಿಸುತ್ತುಂಬಂದು ॥

ಉ ॥ ಬೇಡರಸಂತಗುಳ್ದುಕಡೆಗಾಲದಮಾರಿಯಮಾಱಿಯಂತೆಕ ।
ಣ್ಣೋಡದೆಬಾಲವೃದ್ಧವನಿತಾವಧೆಗೆಯ್ದುಕವರ್ತ್ತೆಗೊಂಡುಸು ॥
ಟ್ಟೋಡಿಸಿಜಾತಿಯಂಕಿಡಿಸಿನಾಡವನಂಕಡಿದಿಕ್ಕಿಮೆಟ್ಟಿದಂ ।
ಬೇಡರಸಂತರಂಗತಮನಾಗಿರೆಬೇಡರಸೆಂಬಗರ್ವ್ವದಿಂ ॥ 38

ವ ॥ ಎಂದುಬಿನ್ನವಿಸೆ ॥

ಕಂ ॥ ಚರವಚನಮನಾಲಿಸಿತೂ ।
ಬುರಕೊಳ್ಳಿಯತೆಱದಿನಂಬರಕ್ಕೆಸಿಡಿಲ್ದಾ ॥
ಹರಿವಂಶಕೇತುಕಣ್ಕಿಸು ।
ಸೆರೆವರಿಯೆಕೃತಾಂತನಂತೆಮುಳಿದಿಂತೆಂದಂ ॥ 39

ಉ ॥ ಬಂದೆಕುಠಾರದಿಂದಡವಿಯಂತಱಿವಂತಿರೆಪೋಡುಗಾಱನೆ ।
ನ್ನೊಂದೆಭುಜಾಸಿಯಿಂಶಬರಕೋಟಿಯನಿಕ್ಕಿಪಿಶಾಚಕೋಟಿಗಾ ॥
ನಂದಮನುಂಟುಮಾಳ್ಪೆನುಳಿದಾನಿದನೇಳಿಸಿದಂದುದುರ್ಯ್ಯಶೋ ।
ದುಂದುಭಿನಾದಮಾವರಿಸದಿಕ್ಕ್ರಮೆಕೂಡೆಜಗಂಗಳೆಲ್ಲಮಂ ॥ 40

ಕಂ ॥ ಅಱಿಯದೆಬೇಡಿದೊಡೀಯದೆ ।
ಬಱಿದೆಕುಲೀನತೆಗೆಬೆಸೆದುಪಾರ್ತ್ಥಿವಶಬ್ದ ॥
ಕ್ಕೆಱವಟ್ಟೆನಿಸಿಧರಿತ್ರಿಗೆ ।
ಪೊಱೆಯೆನಿಪಂರಾಜನಾಮಧಾರಕನಲ್ತೇ ॥ 41

ವ ॥ ಎಂದುಪರಿಚ್ಛೇದಿಸಿನುಡಿಯೆ ॥

ಕಂ ॥ ನಿನಗೆಸಹಾಯಂದಶರಥ ।
ಜನನಾಥಂತತ್ಸಹಾಯದಿಂಲುಬ್ಧಕವಾ ॥
ಹಿನಿಯಂಮರ್ದ್ದಿಸೆಧುರದೊಳ್ ।
ನಿನಗಂತನಗಂಜವಂಗಮಿದಿರಾಂಪವರಾರ್ ॥ 42

ವ॥ ಎಂದುಮಂತ್ರಿಮಂಡಲಂಬಿನ್ನವಿಸೆಜನಕಂದಶರಥನಲ್ಲಿಗೆಲೇಖವಾಹಕನನಟ್ಟಿಸಮರ
ಸಂನದ್ಧನಾಗಿಬೇಗಮೊಂದೆರಡುಪಯಣಮಂನಡೆದನಿತ್ತಲ್ ॥

ಕಂ॥ ಬಾರಿಸಿಲೇಖಾರ್ತ್ಥಮನವ ।
ಧಾರಿಸಿದಶರಥಮಹೀಭುಜಂಪೊಯ್ಸುವುದುಂ ॥
ಭೇರಿಯಭಂಭಾರವಮದು ।
ಭೈರವರವದಂತೆತೀವೆಗಗನೋದರಮಂ ॥ 43

ವ॥ ಅನಂತರಮಾವೃತ್ತಾಂತಮಂತಿಳಿದು ॥

ಚ॥ ಪುದಿಯೆವಿಭೂಷಣಾಂಶುನಭಮಂತನುದೀಧಿತಿಪೇಱದೊಂದುಜೊಂ ।
ನದಸಿರಿಕಾರಕಾರಿರುಳಮೆಯ್ಸಿರಿತಪ್ಪದೆನಲ್ದಿಗಂತಮಂ ॥
ಪುದಿಯೆಬಲಾಚ್ಯುತರ್ತ್ತರುಣಕೇಸರಿವೋಲ್ಪುಗುತಂದರೀರ್ವ್ವರುಂ ।
ಕದನಮದೋದ್ಧತರ್ದ್ದಶರಥಕ್ಷಿತಿನಾಥಸಭಾಂತರಾಳಮಂ ॥ 44

ವ॥ ಅಂತುಬಂದುತಂದೆಯಪಾದಾರವಿಂದಕ್ಕೆಱಗಿ ॥

ಕಂ॥ ಬಲದೆಡಗೆಲದಾಸನದೊಳ್ ।
ಬಲಾಚ್ಯುತರ್ನ್ನೆಲಸಿಮೇರುನಗದುಪನಗಮಂ ॥
ಗೆಲೆವಂದರ್ಪ್ಪೆಸರಿಸೆನಿ ।
ಸ್ತ್ತುಳಮುಕ್ತಾಭರಣಕಿರಣನಿರ್ಝ್ಝರನೀರಂ ॥ 45

ವ॥ ಅನಂತರಂ ॥

ಕಂ॥ ಗೆಲೆನಿಟಿಲವರ್ದ್ಧಚಂದ್ರನ ।
ವಿಳಾಸಮಂನೊಸಲೊಳೆಸೆಯೆಕರಸರಸಿಜಕು ॥
ಟ್ಮಳಮಮೃತಕಳೆಗೆದಂತಾಂ ।
ಕುಲೇಶಮಾರ್ಪ್ಪೊಳೆಯೆರಾಮಚಂದ್ರಂನುಡಿದಂ ॥ 46

ದೇವರ್ದ್ದಿಗ್ವಿಜಯವ್ಯಸ ।
ನಾವಷ್ಟಂಭದೊಳೆನಡೆಯದಾಟವಿಕರೊಳಾ ॥
ದೀವಿಗ್ರಹಕ್ಕೆನಡೆವುದಿ ।
ದಾವುದೊಜಸಮಿಱುವೆಗಾನೆಮೊಗಮಿಕ್ಕುವುದೇ ॥ 47

ವ॥ ಅದಱಿಂದೇವರ್ಬೆಸನನೆನಗೆಸಯೆಗೆಯ್ವುದಿವರನಾಸ್ವಾದಿತರಣರಸಕರ್ಕ್ಕಳ್ಗೆಱಿಯ
ರೆಂದುಬಗೆಯವೇಡದಂತೆನೆ ॥

ಚ ॥ ಕಿಡಿಕಿಱಿದಾದೊಡಂಸುಡದೆಕಾನನಮಂತರುಣಾರ್ಕ್ಕನಾದೊಡಂ ।
ಕಿಡಿಸನೆತೀವ್ರಮಪ್ಪತಮಮಂಪರಿಬಾಲಕನಾದೊಡಂಪಡ ॥
ಲ್ವಡಿಸದೆಗಂಧಸಿಂಧುರಘಟಾವಳಿಯಂಕಿಱುಗೂಸೆನಲ್ಕೆವೇ ।
ಡಱಿದೊಡಂಜವಂಗೆಪೊಸತಿಕ್ಕನೆವಿಕ್ರಮಶಾಲಿಲಕ್ಷ್ಮಣಂ ॥ 48

ಕಂ ॥ ಮಾತೇನೊಕಿಂಕಿರಾತಂ ।
ಘೂತಂತೆಕಿರಾತಸೇನೆಪುಣ್ಬಡೆಶರಸಂ ॥
ಘಾತದಸವಿದೋರ್ಕ್ಕಂರಘು ।
ಜಾತಂಗೆಂಟನೆಯಕೇಶವಂಗಿದಿರುಂಟೇ ॥ 49

ಶಾ ॥ ಅಂಬೇಱಿಂದಾಂತರಂತತ್ತರದಱಿದುಭುಜಾಗರ್ವ್ವಮಂಬಿಟ್ಟುಬಾಯ್ಬಿ ।
ಟ್ಟಂಬೇಯೆಂಬನ್ನೆಗಂಬೆಂದಗುಳ್ದುಮೆಱೆದುಬಿಲ್ಬಲ್ಮೆಯಂನಾಡೆನಿಂನೆಂ ॥
ಧುಂಬೇಡಪ್ಪೂರ್ದ್ದದಂತಾಗಿರೆನಿಯಮಿಸಿಬಂದಪ್ಪೆನಾನೆಂದುಶೌರ್ಯ್ಯಾ ।
ಳಂಬಂರಾಮಂರಣಕ್ಕೆತ್ತಿಗನೆನೆಬೆಸನಂತಂದೆಯಂಬೇಡಿಕೊಂಡಂ ॥ 50

ವ ॥ ಅಂತುಬೆಸನಂಬೇಡಿಕೊಂಡುತಂದೆಯಂಬೀಳ್ಕೊಂಡು ॥

ಕಂ ॥ ಅಪರಿಮಿತಮೆನಿಪಚತುರಂ ।
ಗಪತಾಕಿನಿತಮಗೆಕದನಕೇಳಿಗೆನೆರವ ॥
ಲ್ತುಪಕರಣಮೆನಿಪಕೋದಂ ।
ಡಪಾಣಿಗಳ್ದಂಡಪಾಣಿಗೆಣೆಯೆನೆತಳರ್ದರ್ ॥ 51

ಗೆಲಲಱಿವರೀರ್ವ್ವರದೋ ।
ರ್ವ್ವಲವಂತ್ರಿಭುವನದೊಳಿವರ್ಗೆನೆರವಮಲ್ತುಚತು ॥
ರ್ಬ್ಬಲಮಿನಿತುಂನುಡಿನೆರವೆನೆ ।
ಬಲಾಚ್ಯುತನ್ನಿರ್ಗ್ಗಚ್ಛವಯಣದಿಂದೆಯ್ತಂದರ್ ॥ 52

ವ ॥ ಅಂತೆಯ್ದಿವರ್ಪ್ಪುದುಮವರನುಚಿತಪ್ರತಿಪತ್ತಿಯಿಂಕಾಣಿಸಿಕೊಂಡು ॥

ಪೃಥ್ವಿ॥ ನೆಲಂಬೆಸಲೆಯಾದಪ್ರೊಲ್‌ನೆರೆದಲುಬ್ಧಕವ್ಯೂಹಮಂ ।
ಗೆಲಲ್ಕೆಱೆದೆನೀಗಳೆಂಬಬಲಗರ್ವ್ವಮಂತಾಳ್ದಿದಂ ॥
ಬಲಾಚ್ಯುತರಕೂಟದಿಂಜನಕನುಗ್ರವನ್ಯದ್ವಿಪಂ ।
ಬಲಂಬಡೆದುದೆಂಬಿನಂವಿಕಟದಂತಕೂಟಂಗಳಿಂ ॥ 53

ವ ॥ ಅನಂತರಮುದಾತ್ತರಾಘವನಮೋಘಶರಾಸನಾದಿವಿವಿಧಾಯುಧಸನಾಥನಾಗಿ ರಥಮನೇಱಿಲಕ್ಷ್ಮಣಂಕಾಲ್ಗಾಪಿನೊಳ್ನೆರೆದುಬರೆಜನಕಕನಕರಿರ್ವ್ವರ್ವಿಜಯಗಜಮನೇಱಿಮುಂಗೋೞೊಳ್ನಡೆಯೆನಾಡಗಡಿಯನೆಯ್ದಿಬರ್ಪ್ಪಸಮಯದೊಳ್ ॥

ಮ ॥ ಬಲಭಾರಕ್ಕೆ ಬಿಗುತ್ತುಸುಯ್ಯೆಫಣಿರಾಜಂಸುಯ್ದುಸುಯ್ಯೆಂಧರಾ ।
ವಲಯಂಕಿತ್ತುನಭಕ್ಕೆಪಾಱಿದಪುದೋಪೇಳೆಂಬಿನಂಭಾನುವಂ ॥
ಜಲಮಂಮಂಡೞಿಸಿತ್ತುತದ್ಬಲಪದಪ್ರೋದ್ಧೂತಧೂಳೀಚ್ಛಟಾ ।
ವಳಿಕಲ್ಪಾಂತಕೃಶಾನುಧೂಮಪಟಳೀಶಂಕಾಸಮುತ್ಪಾದಕಂ ॥ 54

ವ ॥ ಅನಂತರಂನೆಲಂಪೆಸಲೆಯಾದಂತೆಬರ್ಪ್ಪಬೇಡವಡೆ ರಸೆಯಿಂನೊಗೆವಸುರವಡೆಯಂತೆಯುಂವ್ಯೋಮತಳದಿನಿೞಿವಧೂಮಕೇತುಗಳಂತೆಯುಂಕಡೆಗಾಲದೊಳಡಿಯೊತ್ತಿಸುತ್ತಲುಂನೆಗೆವನಲನಪೊಗೆಯಂತೆಯುಂನಡೆವನಂಜಿನಪುಂಜದಂತೆಯುಂ ಕರ್ಬ್ಬಲಿಯಪಿಂಡಿನಂತೆಯುಂಸಿಂಗದಜಂಗುಳಿಯಂತೆಯುಂಜವನೆಂಮೆವೋರಿವಿಂಡಿನಂತೆಯುಂಖರಸಿಡಿಲಬಳಗದಂತೆಯುಂಕಾಳಾಯಸಕಾಳಪುರುಷಪರಿಷಜ್ಜನದಂತೆಯುಂ ಕಾಳರಕ್ಕಸನಸಂತಾನದಂತೆಯುಂಕುಳಿಕನಕುಳಮಹತ್ತರಕುಲದಂತೆಯುಂ ಅರ್ದ್ಧಪ್ರಹಾರವರ್ದ್ಧನದಂತೆಯುಂಯಮಘಂಟಾಸಂಘಾತದಂತೆಯುಂಮಾರಿಯ[illegible]ರಿಯಂತೆಯುಂಕ್ರೂರಗ್ರಹಪರಿಗ್ರಹದಂತೆಯುಂ ಅಗುರ್ವ್ವಮದ್ಭುತಮುಮಾದುದಲ್ಲಿಂಬೞಿಯುಂ ॥

ಚ ॥ ಕರಿಗಳೆಱಂಕೆವೆಟ್ಟಗಳವೋಲ್ನಡೆತಂದುವುವಾಜಿರಾಜಿಗ ।
ಳ್ತೆರೆಗಳತೆಕ್ಕೆಯಂತೆಕವಿತಂದುವುಲುಬ್ಧಕಸೈನಿಕಾಬ್ಧಿಯೊ ॥
ಳ್ಕರಿಮಕರಂಗಳಂತೆರಥಕೋಟಿಗಳಾಸುರವಾಗೆಬಂದುವಾ ।
ವರಿಸಿದುವಾವಗಂಗಗನಮಂವೃಕಕಾಕಸೃಗಾಲಕೇತುಗಳ್ ॥ 55

ಕಂ ॥ ರುಂಜೆಯದನಿದಿಕ್ಪಾಲರ ।
ನಂಜಿಸೆತಳ್ತೊಗೆವಕೋಡಕಾಳೆಯದನಿದಿ ॥
ಕ್ಕುಂಜರಮಂಪೆಳಱಿಸೆನಭ ।
ಮಂಜೇವೊಡೆಯುಲಿಪುಸುತ್ತಿಮುತ್ತಿತ್ತಾಗಳ್ ॥ 56

ಪಲದಿವಸಕ್ಕೆಂತಾನುಂ ।
ಕಲಹಂದೊರೆಕೊಂಡುದೆಂದುಕೆಲಬರ್ಬ್ಬಲ್ಲಂ ॥
ಗೊಲೆಗೊತ್ತಿತೀವಿತೆಗೆದೇಂ ।
ನಲಿವೆರ್ಧರೊಜವನದೂತರೆನಿಸಿಕಿರಾತರ್ ॥ 57

ಕರಿಘಂಟಾನಾದಂಹಯ ।
ಖುರಪುಟನಿನದಂವರೂಥಚೀತ್ಕಾರಂಕೇಂ ॥
ಕರಚಾಪಟಂಕೃತಂಭೋ ।
ರ್ಗ್ಗರೆವಿನಮಾರ್ದ್ದತ್ತಿದತ್ತುವನಚರಸೈನ್ಯಂ ॥ 58

ವ ॥ ಮತ್ತಿತ್ತರಾಮಚಂದ್ರನಬಲಮೆಚಂದ್ರಬಲಮಾಗೆ ॥

ಕಂ ॥ ಆನೆಹಯಂತೇರಾಳಂ ।
ಬೀನಾಲ್ಕುಂಸೇನೆಬೇಡವಡೆಯೊಡೆಯನವೇ ॥
ರಾನೆಹಯಂತೇರಾಳಂ ।
ಬೀನಾಲ್ಕುಂಸೇನೆಯೊಡನೆತಾಗಿದುವಾಗಳ್ ॥ 59

ಉ ॥ ಪಂದಲೆಪಾಱೆಪುಟ್ಟಿಬಿಸುನೆತ್ತರಸುಟ್ಟುರೆಬಾಣಜಾಳದಿಂ ।
ಪಂದರವಿಕ್ಕಿದಂತಿರೆನಭಂಮದದಾನೆಯದಂತಶಲ್ಕವೆಂ ॥
ಟುಂದಸೆಗುಳ್ಕದಂತೆಸೆಯೆಕೂರಸಿಕೂರಸಿಯೊಳ್ಪಳಂಚಿಭೋ ।
ರೆಂದೊಡನುಣ್ಮಿತೋಱಿಕಿಡಿತಾಗಿದುವೆಂಡೆರಡುಂಚತುರ್ಬ್ಬಲಂ ॥ 60

ವ ॥ ಅಂತುಕಾದುವಾಗಳ್ ॥

ಚ ॥ ಇನಿತುಸಿಡಿಲ್ಗೆಕಾಯ್ಪಿನಿತುನಂಜಿನಗಾಳಿಗೆಬೇಗವಿಲ್ಲೆನ ।
ಲ್ಕನಕನನಾಜಿಯೊಳ್ಪಿಡಿದುಕಟ್ಟಿದನಳ್ಕಱೆಸುತ್ತಿಮುತ್ತಿದಂ ॥
ಜನಕನನೆಚ್ಚನೆಚ್ಚುಡಿಯೆಲಕ್ಷ್ಮಣನೇಱಿದತೇರನಾವನಾಂ ।
ಪನೊಯ್ಯಮನಂತರಂಗತಮನಂಸುಭಟೋತ್ತಮನಂಮಹಾಜಿಯೊಳ್ ॥ 61

ಶಾ ॥ ತೇರೆಚ್ಚಂಮುಱಿಯೆಚ್ಚುಬಿಲ್ಲನುಡಿಯೆಚ್ಚಶ್ವಂಗಳಂಸೂತನಂ ।
ಕೂರಂಬಿಂಕೆಡೆಯೆಚ್ಚುತಾಂಗಡೆನಗಂಮಾರಾಂಪಗಂಡಂಗಡೆಂ ॥
ದಾರುತ್ತುಂಗೆಲೆಕಾದಲಕ್ಷ್ಮಣನುಮಂಕಂಡಂತದಂಲೋಕೇಸಂ ।
ಹಾರಂಮಾಳ್ಪಕೃತಾಂತನಂತೆರಘುಜಂಕೊಂಡಂಧನುರ್ದ್ದಂಡಮಂ ॥ 62

ಚ ॥ ಒದವಿದಚಾಪಟಂಕೃತಿಭಯಂಕರಮಾಗೆವರೂಥಭಾರದಿಂ ।
ದದಿರೆನೆಲಂಮನಃಪವನವೇಗದಿನೆಯ್ದಿಬಲಂಮಹಾಬಲಂ ॥
ಕದನಮದಾವಿಲಂಕಜಿಯೆಬಲ್ಸರಿಯೆಂಬಿನೆವೆಂಬನಂಬುನ ।
ಟ್ಟುದೆನೆಜವಾಗೆಕೂಡೆಗತಜೀವಿತಮಾಯ್ತುಕಿರಾತಸೈನಿಕಂ ॥ 63

ವ ॥ ಆಗಳ್ ॥

ಕಂ || ಗೆಲ್ದಾರೆಜನಕಸೇನೆಸಿ |
ಡಿಲ್ದಗಿಯೆಕಿರಾತಸೇನೆದಶರಥರಾಮಂ ||
ಬಿಲ್ದೆಗೆದಿಸೆವಮಾರ್ಪ್ಪಡೆಯೊಳ್ |
ಬಲ್ದಲಿಯರ್ಶಬರನಾಯಕರ್ಪ್ಪಡಲಿಟ್ಟರ್ || 64

ವ || ಆ ಸಮಯದೊಳ್ಲಕ್ಷ್ಮಣಂಲಯಸಮಯಸಮುತ್ಪಾದನಸಮಗ್ರವೀರಗ್ರಹಾವೇಶ
ಮನಪ್ಪುಕೆಯ್ದು ||

ಕಂ || ಪಾರದೆಕೈದುವಬಲಮಂ |
ಪಾರದೆನೆರೆವಲಮನೊಂದೆತೋಳ್ವಲದಿಂಸಂ ||
ಹಾರಿಸಿದಂಮಾರ್ಬ್ಬಲಮಂ |
ವಾರಿಜನಾಭಂಗೆಸಂಗರಕ್ಕಿದಿರುಂಟೇ || 65

ವ || ಅಂತುರಾಮಲಕ್ಷ್ಮಣರ್ಕ್ಕಡಂಗಿಕಾದುವಾಗಳವರಬವರಕ್ಕೆಸುಗಿದುಮಂಡಳಿಸಿಮೆ
ಯ್ದುಗೆವಪೇಡವಡೆಯಂಕೂಡಿಕೊಂಡು ||

ಚ || ಅದಿರದಿದಿರ್ಚ್ಚಿತಾಗಿದತರಂಗತಮಂದಿನನಾಯಕಂಗಿದಿ |
ರ್ಚ್ಚಿದತಮದಂತೆಮೆಯ್ದುಗೆಯಮಾರ್ಬ್ಬಲದಾನೆಗೆಕೂಟಪಾಕಳಂ ||
ಕುದುರೆಗೆಕರ್ಣ್ಣದೂಷಿಕೆರಥಕ್ಕೆಸಿಡಿಲ್ಭಟಮಂಡಳಕ್ಕೆಕೆಂ |
ಡದಮಳೆಯೆಂಬಿನಂಕಱೆದನಂಬಿನಪೆರ್ಮ್ಮಳೆಯಂಹಲಾಯುಧಂ || 66

ಉ || ಕಾದಲಿದಿರ್ಚ್ಚಿಕೈದುವಿಡಿಯಲ್ಬಗೆದಪ್ಪುರ್ದುಮೊಗ್ಗೆಮಂಜಿನಂ |
ತಾದುದನಂಜನೆಂಜಲಿಸಿದಂತೆವೊಲಾದುದುಬೇಗೆಪರ್ವ್ವಿದಂ ||
ತಾದುದುಗಾಳ್ಗೊಡ್ಡಿದಮುಗಿಲ್ಗೆಣೆಯಾದುದುಕೊಡೆಯೊಕ್ಕಿದಂ |
ತಾದುದರಾಮಬಾಣಹತಿಯಿಂದಿದಿರಾದವಿರೋಧಿಸೈನಿಕಂ || 67

ವ || ಅಂತಾಗಳ್ ||

ಕಂ || ಬಲವಳಿಯೆತರಂಗತಮಂ |
ಪಲಾಯನೋದ್ಯುಕ್ತನಾಸೆವಟ್ಟಂಜಂಘಾ ||
ಬಲಮಂದಶರಥರಾಮನ |
ಕೀಳ್ಮುಖಕ್ಕೆಡಱುವಂತವಂದಶಮುಖನೇ || 68

ಓಡಲೊಡರಿಸುವೊಡಂತೊಡೆ |
ನೇಡೊಡರಿಸಿದಪ್ಪುದೆಂದುಭಯರಸದಿಂದ ||

ಲ್ಲಾಡೆಮನಂಕೈದುವನೀ ।
ಡಾಡಿದನಂಜಿಸುಗುವಾರುಮಂರಾಮಶರಂ ॥ 69

ತುೞಿಲಾಳ್ತನಕ್ಕವಂನೀ ।
ಱಿವಂತಳವೞಿದುಸೂಸೆಕಣ್ಣೀರ್ತೆರಿಂ ॥
ದಿೞಿದಂನೆಲಕ್ಕೆ ಬಸವಡಿ ।
ಗಿೞಿವಿನೆಗಂಲುಬ್ಧಕಂನೆಲಂಪೞಿವಿನೆಗಂ ॥ 70

ಚ ॥ ಸುಗಿಯದೆಚಂದ್ರಮಂಡಲದಮುಂದೆತಮಂಕಿಡೆದಿರ್ದುದೆಂಬಿನಂ ।
ಮುಗಿಯೆಕರಾಂಬುಜಂಕುವಳಯಂನಗುವಂತೆನೆಲಕ್ಕೆ ರಾಮನೇ ॥
ಳ್ಗೆ ಗೆದೆಸೆಗೆಟ್ಟುತೊಟ್ಟನೆತರಂಗತಮಂಶರಕೊಂದುಬೀಳ್ವುದುಂ ।
ಗಗನಮನಾಗಳಾವರಿಸಿದತ್ತುಪಹಾರಘನಾನಕಸ್ವನಂ ॥ 71

ಕಂ ॥ ಅಂಬರಮಂವಿಜಯಪತಾ ।
ಕಾಂಬರವೊಡನೊಡನೆನೆಕಳದಿಗ್ವನಿತಾವ ॥
ಕ್ತ್ರಾಂಬುಜಮನಭಯಘೋಷಂ ।
ಚುಂಬಿಸಿದುದುಕಱೆದುದಮರಕುಸುಮಾಸಾರಂ ॥ 72

ವ । ಆಸಮಯದೊಳ್ ॥

ಕಂ ॥ ಅಂಜದಿರಂಜದಿರೆನೆಮುಗಿ ।
ದಂಜಳಿಪುಟದಿಂತರಂಗತಮನಿದಿರೊಳ್ನಿಂ ॥
ದಂಜನಗಿರಿಯವೋಲಿರೆಕೊ ।
ಟ್ಟಂಜಯಜಾಯಾಸಹಾಯನಭಯಮನಾಗಳ್ ॥ 73

ಉ ॥ ಮುತ್ತಿನಪೊನ್ನಪೇರ್ದೊಡಿಗೆಯಂವಸನಂಗಳನಿತ್ತರಣ್ಯದೊ ।
ಳ್ನಿತ್ತರಿಪಂತುನಾಡಗಡಿಯಂಮಱೆದಂಪುಗದಂತವಂಗೆಭೂ ॥
ಪೋತ್ತಮನಾಜ್ಞೆಯಂಬಮಗೆವಂಡನಮಂನಡುನೆತ್ತಿಗಿತ್ತುದಿ ।
ಗ್ಭಿತ್ತಿಗೆಕೀರ್ತಿಚಂದನವಿಲೇಪಮನಿತ್ತನಿದೇನುದಾತ್ತನೋ ॥ 74

ಕಂ ॥ ಪ್ರಬಳನಬಲನವೊಲಂತಾ ।
ಶಬರಂಬೀಳ್ಕೊಂಡುಪೋಗವೆಂದುದನೇಕೊಂ ॥
ಡುಬರ್ದುಂಕಿವೋದನೆರಾ ।
ಮಬಾಣಮಂಕದನಭೂಮಿಯೊಳ್ಮಿಱುವರಾರ್ ॥ 75

ವ ॥ ಆಗಳನೇಕಮಂಗಳಾನಕರವಂಗಳೊದವೆ ॥

ಕಂ ॥ ನಗುವಂತೆಪೆಱೆಯಬಿಲ್ಲ ।
ಲ್ಮೆಗಳಂಕಣ್ಬೆಳಗನುಗುಳೆಪೂಜಿಸನೆವದಿಂ ॥
ಜಗದಧಿಪಧನುರ್ಗುಣಮಂ ।
ತ್ರಿಗುಣಿಸಿದಂತೋಱೆಮುತ್ತಿನೇಕಾವಳಿಯಿಂ ॥ 76

ವ ॥ ಅಂತುಪೂಜಿಸಿ ॥

ಉ ॥ ಮಾರಣಮಂತ್ರನಾದಮೆನಿಸಿತ್ತುವಿರೋಧಿಗೆಶಾಂತಿಕಕ್ರಿಯಾ ।
ಕಾರಣಮಂತ್ರನಾದಮೆನಿಸಿತ್ತುಧರಿತ್ರಿಗೆಮೃತ್ಯುವಂಚನೋ ॥
ಚ್ಚಾರಣಮಂತ್ರನಾದಮೆನಿಸಿತ್ತುಮಗಚ್ಛರಿನಿಂನಚಾಪಟಂ ।
ಕಾರನಿನಾದಮೊಂದೆಸಲಮುಂತೆಱನಂತಳೆದಂದಮಾವುದೋ ॥ 77

ಕಂ ॥ ಏನಂಪ್ರತ್ಯುಪಕಾರಮ ।
ನಾನೊಡರಿಸುವೆಂಕುಮಾರಕಂನೆಯನಿತ್ತಂ ॥
ಮೇನಕಿಯಿಂಮಿಗಿಲೆನಿಸಿದ ।
ಜಾನಕಿಯಂಮದನವಶ್ಯಮಣಿದೀಪಿಕೆಯಂ ॥ 78

ಅನುಬಂಧಮನ್ವಯಾಗತ ।
ಮೆನಿಸಿದುದದನಧಿಕಮಾಗೆಮಾಳ್ಪನುನೆಯದಿಂ ॥
ದನುಗುಣಸಸ್ಯದಸಂಪಾ ।
ದನಸೀತೆಯೆನಿಪ್ಪಸೀತೆಯಂನಿನಗಿತ್ತೆಂ ॥ 79

ವ ॥ ಎಂದುನುಡಿದು ರಾಮನುಮಂಸೌಮಿತ್ರಿಯುಮಂವಿಚಿತ್ರವಸ್ತ್ರಭೂಷಣಾದಿಗಳಿಂದ
ರ್ಚಿಸಿಜನಕಂಕತಿಪಯಪ್ರಯಾಣಂಗಳಿಂ ಕಳಿಪುವುದುಂರಾಮಲಕ್ಷ್ಮಣರಯೋಧ್ಯೆ
ಯಂಪೊಕ್ಕುಸುಖದಿನಿರ್ಪ್ಪುದುಮೊಂದುದಿವಸಂ ॥

ಕಂ ॥ ಜನಕಂತನುಜೆಯನಿತ್ತಂ ।
ಮನುವಂಶಲಲಾಮನಪ್ಪರಾಮಂಗೆಂಬೀ ॥
ಜನವಾರ್ತ್ತೆಗೇಳ್ದುನಾರದ ।
ಮುನಿಗಾದುದುನೋಳ್ಪಕೌತುಕಂಜಾನಕಿಯಾ ॥ 80

ಉ ॥ ಪೆಂಡಿರಲೀಲೆಯುಂಯತಿಗೆನೋೞ್ಪುದುಪಾೞಿಯೆಮುಂಜಿಕಟ್ಟಿಟಂ ।
ಗುಂಡಿಗೆಪೋೞ್ವಮಂಡೆಮಣಿದಂಡಮಿವೀಕ್ಷಣಸೌಖ್ಯಹೇತುವೇ ॥
ಕಂಡೊಡೆಬಾಲೆಯರ್ತ್ತನಗೆಪೇಸದೆಮಾಣ್ಬರೆನಾರದಂಮರು ।
ಳ್ಗೊಂಡವೊಲಾಗಸಕ್ಕೆನೆಗೆದಂವ್ಯಥೆಯಲ್ತೆಸರಾಗಸಂಯಮಂ ॥ 81

ವ ॥ ಅಂತುನಾರದಂಗಗನವೀಧಿಯಿಂಮಿಥಿಳೆಗೆವಂದುಕನ್ನೆಮಾಡದಬಾಗಿಲ್ವಾಡಮಂಪುಗ
ವಾಗಳ್ ॥

ಕಂ ॥ ಬಿರಿಮುಗುಳೆಂತುಬಿಗಿದತಾ ।
ವರೆಗೊಳದೊಳಗಾಡುವಂಚೆವೆಂಣನದೇಂಚ ॥
ಪ್ಪರಿಸಿದಳಾಸೀತೆಕನ್ಯಾ ।
ಪರಿವೃತೆವೈಡೂರ್ಯ್ಯರತ್ನಮಯವೇದಿಕೆಯೊಳ್ ॥ 82

ವ ॥ ಆಗಳದೃಷ್ಟಪೂರ್ವ್ವಮಂನಾರದನವಿಕೃತಾಕಾರಮಂಕಂಡು ತರುಣಿಹರಿಣಿಯಂತೆ
ಬೆರ್ಚ್ಚಿಬಿರುವೋಡುವುದುಂ ॥

ಕಂ ॥ ತತ್ತರುಣಿಯಬೞಿವೞಿಯಂ ।
ಪತ್ತಿಹಿತಾಹಿತವಿವೇಕವಿಕಳಂಪೞಿಯಂ ॥
ಬೆತ್ತಾಮುನಿಪಂಭ್ರಾಮಕ ।
ದತ್ತೆಳಸುವಪಟ್ಟಗಬ್ಬುನಕ್ಕೆಣೆಯಾದಂ ॥ 83

ನಾರದನೇಂತಳೆದನೊಕಾಂ ।
ತಾರತ್ನಮನೆಳಸಿಪರಿವಪರಿಣತಿಯಿಂನಿ ॥
ಸ್ಸಾರಮನಂನೀಲಶಲಾ ।
ಕಾರತ್ನಮನೆಳಸಿಪರಿವತೃಣಪರಿಣತಿಯಂ ॥ 84

ವ ॥ ಅಂತುಬೞಿವೞಿಯನುೞಿಯದೆಯ್ತರ್ಪ್ಪುದುಂ ॥

ಕಂ ॥ ಧಾತ್ರಿಪೞಿವಂತುತಂನಂ ।
ಧಾತ್ರೀಜನವಡಸಿಪಿಡಿದುಪರಿಭವಿಸುವುದುಂ ॥
ಮಿತ್ರಂಕಲಭಕ್ಕೆನೆಮುನಿ ।
ನೇತ್ರೇಂದ್ರಿಯಲೋಭದಿಂದವೆಂದಘಪಟ್ಟಂ ॥ 85

ವ ॥ ಆಗಳಾಕಳಕಳಮಂಕೇಳ್ದು ॥

ಕಂ॥ ಕಡಿತಲೆಯಂತೂಗುತ್ತುಂ ।
ಕಡುಗಲಿಗಳ್ಮುಟ್ಟೆಬಿಪ್ಪುದುಂಭಯರಸದಿಂ ॥
ನಡುಗುತ್ತುಂನಾರದಮುನಿ ।
ಕುಡುಮಿಂಚಿನಗೊಂಚಲಂತೆಗಗನಕ್ಕೊಗೆದಂ ॥ 86

ವ॥ ಅಂತುಪೊಳೆದುಪಾಱಿ ॥

ಶಾ॥ ಪಿಂದಂಪೆಂದಗುಳ್ದಪ್ಪರೆಂದುಪೆಱಗಂನೋಡುತ್ತುಮೋಡುತ್ತುಮೆ ।
ಯ್ತಂದಂಗಾಗಿಗೆಱಂಕೆಮೂಡಿದವೊಲಾಕಾಶಂಬರಂನೀಳ್ದುದಂ ॥
ಕುಂದೇಂದುಪ್ರಭೆಯಿಂಮನಂಗೊಳಿಪುದಂವಿದ್ಯಾಧರೀಲೋಚನಾ ।
ನಂದಸ್ಯಂದಿತಟದ್ವಿಳಾಸವನಮಂಕೈಲಾಸಮಂನಾರದಂ ॥ 87

ವ॥ ಅಂತಾನಗಮನೆಯ್ದಿಸಾನುನಂದನಲತಾಮಂದಿರದೊಳಗಣಿಂದುಕಾಂತಶಿಲಾತಳದೊಳ್ವಿಶ್ರಮಿಸಿ ಮನೋವಿಷಾದಮುಮಂಗಗನಾಧ್ವಖೇದಮುಮಂಕಳೆದುತಂನೊಳಿಂತೆಂದಂ ॥

ಕಂ॥ ಖೇದಮನೆನಗಿನಿತಂಸಂ ।
ಪಾದಿಸಿದಾಕಂನೆಗಳಲನದವಳಲಂಸಂ ॥
ಪಾದಿಸುವೆನೆಂದುಪರಿಪೇ ।
ಡಾದುಶ್ಚರಿತಕ್ಕೆನಾರದಂಬಗೆದಂದಂ ॥ 88

ವ॥ ಅಂತುಬಗೆದಂದು ॥

ಉ॥ ನೋಳಪವಣ್ಗೆಕಣ್ಗೆಬರೆನಿಮ್ನಘನೋಂನತಮಂಪ್ರದೇಶಮಂ ।
ಪಾಲಿಸಿನಾರದಂವಿಷಮಚಿತ್ರಕಳಾನಿಪುಣಂವಿಚಿತ್ರದಿಂ ॥
ಬಾಲೆಯಮುದ್ದುಗೆಯ್ತಮುಮನಾಕೆಯಸುಂದರಮಪ್ಪರೂಪುಮಂ ।
ಲೀಲೆಯುಮಂದುಕೂಲಪಟದೊಳ್ಬರೆದಂಪ್ರತಿಬಿಂಬಮೆಂಬಿನಂ ॥ 89

ವ॥ ಅಂತುಪರವಿದ್ಧಪರಿಣತಿಯಂಮೆಱೆದಾಪಟಮಂವಿದ್ಯಾಧರರಾಜಧಾನಿಯಪ್ಪರಥನೂಪುರಚಕ್ರವಾಳ ಪುರದಪೊಱವೊಳಲವಿನೋದವನದೊಳಗಣಮಣಿಭವನದೊಳಗೆ ನೆರೆಪಿಪೋಪುದುಮಿತ್ತಲ್ ॥

ಮ॥ ಕೆಲಬರ್ಕ್ಷ್ಮೇಚರರಾಜಕಬ್ಬೆಗಳಸೆಯುಂಕೇಳೀವನಾಸ್ಥಾನದೊಳ್ ।
ಚಲಣನ್ಯಾಸವಿಳಾಸಮಂಮೆಱೆಯೆದೇಹಚ್ಛಾಯೆಯುಂರತ್ನಕಾಂ ॥

ಜಲಭೂಷಾರುಚಿಯುಂಪಳಂಚಿದೆಸೆಯುಂಸೌಂದರ್ಯ್ಯದಿಂಮನ್ಮಥಂ ।
ಗಲೆದಿಕ್ಕಲ್ನಡೆವಂತೆವಂಬಗೆಶಿಯಿಂಬಂದಂಪ್ರಭಾಮಂಡಲಂ ॥ 90

ವ ॥ ಅಂತುಬರುತ್ತುಮಾನಿಕೇತನದೊಳಿರ್ದ್ದಚಿತ್ರಪಟಮಂನೋಡಿ ॥

ಕಂ ॥ ಸಮುದಾಯಶೋಭೆವರ್ಣ್ಣ ।
ಕ್ರಮದಿಂಪ್ರತ್ಯೇಕಶೋಭೆಚೆಲ್ವಿಂನಯನ ॥
ಕ್ಕಮರ್ದ್ದಂಮುಂದಿಡೆಖೇಚರ ।
ನೆಮೆಯಿಕ್ಕದೆಬಯಸಿನೋಡೆಬರೆಪದಪೆಂಣಂ ॥ 91

ಉ ॥ ಅನುರಾಗಂತನಗಾಗೆಕಂಡನಿತಱಿಂದಾವಿದ್ಧಮಂತನ್ನಮುಂ ।
ನಿಜಜನ್ಮಾಂತರದಳ್ಕಱಂಪೊಸೆಯಿಪಂತಾಳೋಕಿಸುತ್ತಿರ್ಪ್ಪದುಂ ॥
ನನೆಯುಂಬಿಂದಿಸೆನಿರ್ದ್ದೆಯುಂಮನಸಿಜಂಕಣ್ಣಾರ್ಂತವಿಭ್ರಾಂತಲೋ ।
ಚನಯುಗ್ಮಂನಸುಮುಚ್ಚೆಮೂರ್ಚ್ಛೆಗೊಳಗಾಗಿರ್ದ್ದಂಪ್ರಭಾಮಂಡಳಂ ॥ 92

ಕಂ ॥ ಬರೆದುರಗಲೇಖೆಮೂರ್ಚ್ಛಾ ।
ಪರಿಣತಿಯಂಮಂತ್ರಶಕ್ತಿಯಿಂಪುಟ್ಟಿಪವೋಲ್ ॥
ಲ್ಬರೆಪದಕನ್ನೆಭವಾಂತರ ।
ಪರಿಚಯದಿಂಮೋಹಮೂರ್ಚ್ಛೆಯಂಪುಟ್ಟಿಸಿದಳ್ ॥ 93

ವ ॥ ಅದನಾತನತಂದೆಯಪ್ಪಿಂದುಗತಿಕೇಳ್ದುಸಂಭ್ರಮದಿಂಬಂದುಶೀತಳಕ್ರಿಯೆಗಳನೊ
ಡರ್ಚ್ಚೆ ॥

ಕಂ ॥ ಶಿಶಿರೋಪಚಾರದಿಂಬಿಚ ।
ರಶಿರೋಮಣಿನಯನಕುವಲಯಂಬಿರ್ಚ್ಚೆಮನೋ ॥
ಜಶಿಳೀಮುಖಕೀಲಿತಹೃ ।
ತ್ಕಶೋಕಯಂಕಳೆದುಮೂರ್ಚ್ಛೆಯಿಂದೆಚ್ಚತ್ತಂ ॥ 94

ವ ॥ ತದನಂತರಮಾವಿಯಚ್ಚರಾಧಿರಾಜನೀಪಟಮನಿಲ್ಲಿಗಾರ್ತ್ತಂದರೆಂದುಂಮಳಿಸುತ್ತು
ಮಿರೆನಾರದನಾಗಳಲ್ಲಿಗೆಬಂದುಚಿತಾಸನದೊಳಿರ್ದ್ದುಖಚರಪತಿಗಿಂತೆಂದಂ ॥

ಕಂ ॥ ಜನಕಂಮಿಥಿಳಾಧಿಪನಾ ।
ತನವನಿತೆವಿದೇಹಿಯೆಂಬಳಾಕೆಗೆವಿಯದಂ ॥
ಗನೆಗೆತುಹಿನಾಂಶುಕಳೆಯೆನೆ ।
ಜನಿಯಿಸಿದಳ್ಸೀತೆಯೆಂಬಕನ್ಯಾರತ್ನಂ ॥ 95

ಮ॥ ಸುರವಿದ್ಯಾಧರಕನ್ಯಕಾಜನದೊಳಾಸ್ತ್ರೀರತ್ನಮಂಪೋಲ್ವರೋ ।
ರ್ವ್ವರುಮಿಲ್ಲೀನೃಪರತ್ನವಾಕೆಗನುರೂಪಂರತ್ನಮೇಳಾಪಕಂ ॥
ದೊರೆವೆತ್ತಿರ್ಕ್ಕುಮಿದಂನಿವೇದಿಸುವೆನೆಂದಾಕನ್ಯಕಾವಿದ್ಧಮಂ ।
ಬರೆದಾನಿಲ್ಲಿಗೆತಂದೆನಕ್ಕೆನಿಮಗಂಭದ್ರಂಶುಭಂಮಂಗಳಂ ॥ 96

ವ॥ ಎಂದುನಾರದಂಪರಸಿಪೋಪುದುಮಿತ್ತಲ್ ॥

ಉ॥ ಏನುಮನಾರೊಳಂನುಡಿಯದುಂಮಳದಿಂವಿರಹಾಕುಳಂಮನೋ ।
ಗ್ಲಾನಿಯನೊಂದಿಪೆಂಣಬರೆಪಂಬರೆದಂತಿರೆಚಿತ್ರಭಿತ್ತಿಯೊ ॥
ಳ್ಜಾನಿಸಿಚಿತ್ತಮಂಪುದಿಯೆಮೋಹತಮಂಪಮರುಣ್ಮಿಪೊಣ್ಮಿಲ ।
ಜ್ಞಾನಮಿತಾನನಂತಳೆದನಾಖಚರಾಗ್ರಣಿಮೌನಮುದ್ರೆಯಂ ॥ 97

ವ॥ ಅಂತುದಿಗ್ಭ್ರಮಿತನಾದಮಗನಮೊಗಮನಿಂದುಗತಿನೋಡಿ ॥

ಉ॥ ಮಾನವಕನ್ನೆಯಂಬಯಸಿನಂದನನಿಂನಮನಕ್ಕೆಚಿಂತೆಯಂ ।
ಮ್ಲಾನತೆಯಂಮುಖಕ್ಕೆತರವೇಳ್ಪುದೆಕೊಳ್ಗೊಡೆಗೆಳ್ತಿವಟ್ಟನೆಂ ॥
ದಾನೆರೆದಟ್ಟೆನಿಂನದೊರೆಯಂವರನಂಪಡೆದಿರ್ಮ್ಮಕೇಳ್ವನೇ ।
ಜಾನಕಿಯಂವಿವಾಹವಿಧಿಯಿಂಜನಕಂನಿನಗೀಯದಿರ್ಪ್ಪನೇ ॥ 98

ವ॥ ಎಂದುನಿಜನಂದನನಮನೋವಿಷಾದಮಂಕಳೆದುನಮಗಿಲ್ಲಿಗೆತಕ್ಕುದಾವುದೆನೆವಿಯ
ಚ್ಚರವೀರನೋರ್ವ್ವನಿಂತೆಂದಂ ॥

ಕಂ॥ ಇದುಮಂತ್ರಾಲೋಚಂಬರ ।
ಮುದಾತ್ತಮಣಿಮಲ್ತುಮಿಥಿಳೆಯಿಂಜನಕನುಮಂ ॥
ಬೆದರಿಸಿಜಾನಕಿಯಂತ ।
ಪ್ಪುದುಮಾಳ್ಪುದುದೇವಸುತವಿವಾಹೋತ್ಸವಮಂ ॥ 99

ವ॥ ಎನೆವಿಯಚ್ಚರೇಂದ್ರನಿಂತೆಂದಂ ॥

ಕಂ॥ ಈಯಿತರವೇಳ್ವ್ಯದಬಲೆಯು ।
ನೀಯದೆತಂದಂದುತನಗದತ್ತಾದಾನಂ ॥
ಸ್ತ್ರೀಯುಮದಱಿಂದೆಮನಕೆ ।
ಶ್ರೇಯುಮನಾಚರಿಸದಲ್ತೆಖೇಚರವಂಶಂ ॥ 100

ಸಮನೆನಿಪನೊಡನೆಕೊಳ್ಕಾಡೆ ।
ಸಮನಿಸೆಸಮದತ್ತಿಭೂಚರರ್ಕ್ಕೆಖೇಚರರೊಳ್ ॥
ಸಮನಲ್ಲಸ್ಸರ್ತವೋಹದಿ ।
ನೆಮಗಮದಕ್ರೀಯುಮಾದೊಡಂಕರಣೀಯಂ ॥ 101

ವ॥ ಎಂಬುದುಮಿಂದುಗತಿವಿಯಚ್ಚರೇಂದ್ರಂಗೆಕುಲಮಹತ್ತರಂಚಂದ್ರವರ್ಧನನಿಂ
ತೆಂದಂ ॥

ಕಂ॥ ಎರೆದಟ್ಟಿದೊಡೀಯುರ್ಬ್ಬ್ರ ।
ಚರರೆಂತುಂಖೇಚರದಱಿನಿಲ್ಲಿಗುಪಾಯಾಂ ॥
ತರದಿಂತಂದೆರೆಯೆಭಯಾ ।
ತುರದಿಂದಾತ್ಮಜೆಯನೀವೊಡೀಗುಂಜಸಕಂ ॥ 102

ವ॥ ಎಂಬುದುಮಾಪೆಸನಂಚಪಳವೇಗನೆಂಬವಿದ್ಯಾಧರಂಬೇಡಿಕೊಂಡು ॥

ಕಂ॥ ಗಗನೇಚರತೇಜಸ್ವಿ ।
ಪಗೆವರಭಾಸುರಯಶೋವಿತಾನಮನುರಿಪಲ್ ॥
ನೆಗೆದುದೆನೆಚಪಳವೇಗಂ ।
ನೆಗೆದಂಗಗನಕ್ಕೆವಿಜಿತಚಪಲಾವೇಗಂ ॥ 103

ವ॥ ಅಂತುನೆಗೆದು ॥

ಕಂ॥ ಭೋಂಕನೆಬಡಗಣದೆಸೆಯಿಂ ।
ತೆಂಕಣದೆಸೆಗಾಗಿನಡೆದುದುಳ್ಕಮಿದೆಂಬಾ ॥
ಶಂಕೆಯನೊಡರಿಸಿಮಿಥಿಳೆಗ ।
ಶಂಕಿತಚರನೋರ್ವ್ವನಿಳಿದನಂಬರತಳದಿಂ ॥ 104

ವ॥ ಅಂತವನಿಗವತರಿಸಿಪುರಶ್ರೀಯುಮುಖಶ್ರೀಯುಮನನುಕರಿಸುವಕಮಳವನಸಮೀಪದೊ
ಳ್ವಿಶ್ರಮಿಸಿಜನಕಂಹಯಪ್ರಿಯನಪ್ಪುದಂತಿಳಿದು ॥

ಮ॥ ನೃಪನೀತಂತುರಗಪ್ರಿಯಂವಿಷಮಮಾರ್ಗಾಹಾರೋಹಣಾತ್ಯಂತಲೋ ।
ಲುಪನೊಲ್ದೇಱಿದವಾಜಿನೇಱಿದೆ ಜಡೆಸಾಲ್ಗೊಂಕೊಂಡುಪೋಪೆಂಮದೀ ॥
ಯಪುರಕ್ಕೆಂನಯಪೂರ್ಕ್ಕೆತೀಕ್ಷ್ಣಮಿದಱಿಂಪೋಗೆಂದುನಿಶ್ಚೈಸಿರೂ ।
ಪಪರಾವರ್ತ್ತನವಿದ್ಯೆಯಿಂತುರಗರೂಪಾದಂಚರಂಖೇಚರಂ ॥ 105

ವ॥ ಅಂತುವಿಷಮಹಯವೇಷಮಂತಳೆದು ॥

ಕಂ॥ ಎಯ್ದೆದೆಸೆಯೆಲ್ಲಮಂಪಱ ।
ದೆಯ್ದಿಪುರೋಪವನಮೆಲ್ಲಮಂತುೞದುಪಲ ॥
ಬ್ಬಾಗೆಯ್ದೆಱಿದುಪುಯ್ಯಲಿಡೆಕಱು ।
ಕೆಯ್ದುಕ್ಕೆವಗುದುರೆಪೊೞಲನಳಲಿಸಿತಾಗಳ್ ॥ 106

ಅದುತಿಗುರಿಯಂದದಿಂತಿಱ ।
ದುದುಮುಂದಂನೆಗೆದುಬಂದನೀಡಾಡಿಬಿಸಿ ॥
ಲ್ಗದುಱೆಯುವೋಲ್ಬಿಱುವಱಿವಱ ।
ದುದುಕೆಱಲ್ದಕೃತಾಂತನಂತಿದೆನೆಕೃತಕಾಶ್ವಂ ॥ 107

ಕತ್ತರಿಸಿಕಿವಿಗಳಂನಸು ।
ಗಿತ್ತುತ್ತುಂಮೆಯ್ಯಖಂಡಮಂಘೋರುಘೋರನು ॥
ತ್ತೊತ್ತರಿಸಿಘೋಣಾಪವನನು ।
ದಾತ್ತಂಮಸಗಿತ್ತುವಾಜಿವೇಷ್ಮಾರಿಯವೋಲ್ ॥ 108

ಖರಖುರಹತಿಯಿಂಖರಮಂ ।
ಕರಭಂಗಳನಟ್ಟಿಮುಟ್ಟಿದಂತಾಹತಿಯಿಂ ॥
ಪರಿದೊರಸಿಮನುಷ್ಯರನಾ ।
ತುರಗಂಪುಗಿಸಿತ್ತುನಿಮಿಷದಿಂಯಮಪುರಮಂ ॥ 109

ಇಡೆಗುಂಡೆಯ್ದುವುಪೊಯ್ದೊಡೆ ।
ಬಡಿಕೊಳ್ಳವುಕುತ್ತೆಕಯ್ದುವುಚ್ಚವುಮನದಿಂ ॥
ಕಡುಗಡಿದುಮಿಥಿಳೆಯಂಕೊ ।
ಗಿಡಿಸಿದುದದ್ಭುತತುರಂಗಮಂಸಿಂಗದವೋಲ್ ॥ 110

ಮ॥ಸ್ರ॥ ಕರೆವೋಯೆಂಬತ್ತಲಿತ್ತಲ್ತೊಲಗುತೊಲಗುಪೋಗೆಂಬಬಾಯೆಂಬಬಿದ್ದಂ ।
ಪರಿಯೆಂಬೋವೋವೊಯೆಂಬೀವುಯಲಿಡೆಸುಗಿದೇನೇಗೆಯ್ವೆನೆಂಬುಚ್ಚನೀಚಂ ॥
ಪುರುಷಸ್ತ್ರೀಬಾಲವೃದ್ಧಸ್ಥವಿರಯುವಜನಾತಂಕಶಂಕಾತಿರೇಕಂ ।
ಪುರದೊಳ್ಪೊಣ್ಮಿತ್ತುವಿದ್ಯಾಧರಕೃತಕಹಯಾಟೋಪಘೋರಪ್ರಳಾಪಂ ॥ 111

ಉ ॥ ಬಾಲಕರಂಕೆಲರ್ಮ್ಮುದುಪರಂಕೆಲರಕ್ಷಿವಿಹೀನರಂಕೆಲ ।
ರ್ಬ್ಬಾಲೆಯರಂಕೆಲರ್ಪ್ಪಿಡಿದುಚೆಚ್ಚರದಿಂದರರೀಪುಟಂಗಳಂ ॥
ಕೀಲಿಸಿತಂಮತಂಮಮನೆಯೊಕ್ಕಿರೆತತ್ಪುರಮೆಲ್ಲಮಲ್ಲಕ ।
ಲ್ಲೋಲಮಕಾಲಮೃತ್ಯುಭಯವಿಹ್ವಳಮಾದುದುಸೂಕಳಾಶ್ವದಿಂ ॥ 112

ವ ॥ ಆಸಮಯದೊಳ್ ॥

ಚ ॥ ಕಳಕಳನಾದವಾದತೆಱನಂಜನಕಂತೆಳೆದಾಸವಾರಿಗ ।
ೞ್ತೆಳೆದುಖಲೀನಮಂತುರಿಪದಿಂಬರೆಸಂದಿಸಿಬಿಂದರಾಜಮಂ ॥
ಡೞಬರೆಬಂದುನಿಂದುಹಯಮಂನಡೆನೋಳ್ಪುದುವೀಕ್ಷಣಾಂಶುಮಂ ।
ಡೞಸಿದುವಿಂದುರಸ್ಮಿಯೊಳೆತೀರ್ಚ್ಛತೊಡರ್ಚ್ಛದಕೀಳನೇಣವೋಲ್ ॥ 113

ವ ॥ ಅಂತುನೋಡಲೊಡಂ ॥

ಕಂ ॥ ಸೂಕಳಮಱ್ತುದುಸಕಳಗು ।
ಣಾಕರವೆನೆಜನಕಮುಖವಿಳೋಕನದಿಂದು ॥
ದ್ರೇಕಮನುೞಿದಿರೆವಾಹಕ ।
ರಾಕುಟಿಲಾಶ್ವಕ್ಕೆಖರಖಲೀನಮನಿಟ್ಟರ್ ॥ 114

ಉ ॥ ಒಟ್ಟಜೆಗೆಟ್ಟುಕಾರ್ಯ್ಯವಶದಿಂಖಚರಂಪಿಡಿವಟ್ಟುಪಲ್ಲಣಂ ।
ಗಟ್ಟಿಸಿಕೊಂಡುಮೇನೊಮುಖಲೀನಖಲೀನಕಣಾಭಿಘಾತದಿಂ ॥
ತೊಟ್ಟನೆನೋವನೆಯ್ದಿದನಿದಾವುದುಚೋದ್ಯಮೊಕ್ಕತವಕ್ಕೆಕೈ ।
ಗೊಟ್ಟಖಳಂಗೆತೀವ್ರಪರಿವೇದನಬಂಧನಮಾಗದಿರ್ಕ್ಕುಮೇ ॥ 115

ವ ॥ ಅಂತುಮಾಯಾಹಯಮಂಹಯಮಂದಿರಕ್ಕೆತಂದುಕಟ್ಟುವುದುಮಾಸಮಯದೊಳ್ ॥

ಕಂ ॥ ಮೃಗನಾಭಿಯನಾನೆಯುಕೊಂ ।
ಬುಗಳಂಪೇರ್ವ್ವಿದಿರೆತೋಱೆಮುತ್ತಂಕಣ್ಬೇ ॥
ಲಿಗಳಂಮುಂದಿಟ್ಟೋರ್ವ್ವಂ ।
ಪುಗುತಂದೇರಾಜಭವನದೊಳಗಂಕಬರಂ ॥ 116

ವ ॥ ಅಂತುಬಂದು ತನ್ನತಂದುಪಾಯನಮಂಕೊಟ್ಟೆಱಗಿ ಪೊಡವಟ್ಟುದೇವನಂಮುಬನ
ದೊಳೊಂದುಭದ್ರಗಜಮಿರ್ಪ್ಪುದೆಂದುಬಿಂನವಿಸೆ ॥

ಕಂ ॥ ಜನಕಂವನ್ಯಗಜಾಲೋ ।
ಕನಕೌತುಕಚಿತ್ತನಾದನುಚಿತಮೆವಲಮಾ ॥

ವನೋಭೂಭುಜಂಗಜಪ್ರಿಯು ।
ನೆನಿಸದನರಸಾನೆಯಿಲ್ಲದೇನೊಪ್ಪುಗುಮೇ ॥ 117

ವ ॥ ಅನಂತರಂ ॥

ಕಂ ॥ ಪರಿಜನಮುಮಾಪ್ತಜನಮುಂ ।
ಪರಿಕಾಱರುಮೋಜೆವಿಡಿಯುಮೊಡೆವರೆವನ್ಯ ॥
ದ್ವಿರದನಬಂಧನಕೌತುಕ ।
ನರಣ್ಯಮಂಮುಟ್ಟಿವಂದನಂದುನರೇಂದ್ರಂ ॥ 118

ವ ॥ ಆಮಹಾಗಹನಸರಳಸಲ್ಲಕೀಪ್ರದೇಶದೊಳ್ ॥

ಮ ॥ ಮುಗಿಲೊಡ್ಡಂಗೆಲೆವಂದಕಾಯಮಲದಿಂಪೊಂಪೆಟ್ಟನೊಟ್ಟೈಲೆಪದಿ ।
ಟ್ಟಿಗಳಿಂಕಾಳಿಗನಾಗನಂಮಿಗುವಕಯ್ಯಿಂಕಾರತಂದಲ್ಲೋಲ ॥
ಲ್ಲಗುವೆಂಟುಂಮದವಟ್ಟೆಯಿಂಪೆಱೆಯಸೌಭಾಗ್ಯಕ್ಕೆ ತೋಡಾದಕೋ ।
ಡುಗಳಿಂದಂಜನಕಂಗೆಹರ್ಷಜನಕಂತಾನಾಯ್ತು ವನ್ಯದ್ವಿಪಂ ॥ 119

ವ ॥ ಆಗಳಾಗಜದಬಳಿಸಂದುನಡೆವಾನೆವಾಹಕರೊಡನೆಪೋಗಲೆಂದು ಪಲ್ಲಣಿಸಿಕೆಲದೊಳಿ
ರ್ದಕೃತಕತುರಂಗಮಂತರಿಸಿ ॥

ಕಂ ॥ ಉಂಗುಟಮನಂಕವಣಿಗೆಕ ।
ರಾಂಗುಳಿಯಂಸ್ಕಂಧಸಂಧಿಗೊಯ್ದೇಱಿದನು ॥
ತ್ತುಂಗತುರಂಗಮುಮಂನೃಪ ।
ತುಂಗಂಸೂಕಳಮಿದೆಂದುಸೆಡೆಯದಮನದೊಳ್ ॥ 120

ವ ॥ ಅಂತುಬೆಂಗೆವಂದುಕೀಳನಳವಡೆಪಿಡಿದುತೊಡೆಯೊಳವುಂಕಿನೂಂಕುವುದುಂಬಿಸಿಲ್ಗು
ದುರೆಯಂತೆಪೊಳೆದುಚ್ಚೈಶ್ರವದಂತೆನಭಕ್ಕೆ ನೆಗೆದುರವಿಯರಥವಾಜಿಯಂತೆ ಪವನ
ಪಥದೊಳ್ಪರಿವುದುಂ ॥

ಕಂ ॥ ತ್ರಿದಶಂಮೇಣ್ಖೇಚರಂಮೇ ।
ಱ್ಕುದುರೆಯರೂಪಿಂದಮರಸನಂಮುನ್ನಿನಜ ॥
ನ್ಮದಪಗೆವನೊಯ್ದನಂತೆ ।
ಲ್ಲದೊಡೆವಿಯದ್ಗಾಮಿಯಪ್ಪಕುದುರೆಗಳೊಳವೇ ॥ 121

ವ ॥ ಎಂದುಸಕಲಪರಿಜನಂಗಳ್ ವಿಕಳರಾಗಿಯುಂಸೈಮಿತ್ತಿಕದಿಂದರಸನಬರವಱಿದುಂ
ಮಳಮನುಳಿದಿರ್ಪ್ಪುದುಮಿತ್ತಲ್ ॥

ಕಂ॥ ಎಡೆಯೆಡೆಯುಬೆಟ್ಟನೆಡೆಯೆಡೆ ।
ಯಡವಿಯನೆಡೆಯೆಡೆಯನಾಡನೆಡೆಯೆಡೆಯೂರಂ ॥
ಮಿಡಿದನಿತುಪೇಗದಿಂಕಳೆ ।
ದೊಡರಿಸಿದುದುನೃಪತಿಗಾಹಯುಂವಿಸ್ಮಯಮಂ ॥ 122

ಚ॥ ತ್ವರಿತದಿನೆಯ್ದಿವಂದುಪುರಮಂರಥನೂಪುರಚಕ್ರವಾಳಮಂ ।
ಪುರವನವೀಥಿಯೊಳ್ನಡೆಯೆವಾಜಿವಿಳಂಬಿತದಿಂಧರಾಧಿಪಂ ॥
ಧರಣಿಗೆವಾಯ್ದುಕಯ್ಯಕರವಾಳಳಿಮಾಲೆಸರೋಜಕೋಶದೊಳ್ ।
ಮೊರೆಯದೆನಿಂದವೋಲಿರೆವಸಂತನನೇಳಿಸಿದಂವನಾಂತದೊಳ್ ॥ 123

ಕಂ॥ ಇಡಿದಡರಿಕಾಯ್ತುಮಾಮರ ।
ದಡಿಯೊಳ್ವಿಕ್ರಮಿಸಿಪಥಪರಿಮ್ಲಾನತೆಯಂ ॥
ಕಿಡಿಸಿನರೇಂದ್ರಂತನ್ನೊಳ್ ।
ನುಡಿದಂಸಂಸ್ಕೃತಿಯವಿಷಮಕರ್ಮಸ್ಥಿತಿಯಂ ॥ 124

ಅಮೃತಂವಿಷಮಕ್ಕುಂವ ।
ಕ್ರಮಾದೊಡಾವಿಷಮುಮಮೃತಮಕ್ಕುಂವಿಧಿವ ॥
ಕ್ರಮನುಳಿದೊಡಂತೆಹಯಮೆಂ ।
ನುಮನಿಲ್ಲಿಗೆತಂದುದಿಂನವಘಟಿತಮೊಳವೇ ॥ 125

ಆನೆಲದಿಂಮಾಯಾಹಯ ।
ಮೀನೆಲದತ್ತಂನನೆಳೆದುತಪ್ಪೂರ್ದುಮಾಕ್ ॥
ಟ್ಟಾನೆಯುಮಾಕುದುರೆಯುಮಾ ।
ಸೇನೆಯುಮೇನೆನಗೆಮಾಡಲಾರ್ತ್ತಪೆಹಿತಮಂ ॥ 126

ಸಮನಿಸಿದನಿಷ್ಟಸಂಯೋ ।
ಗಮನಿಷ್ಟವಿಯೋಗಮಂಚತುರ್ಗ್ಗತಿಗಳೊಳಂ ॥
ಭ್ರಮಿಯಿಸೆಕೈಕೊಳ್ಗುಂತಾ ।
ನೆಮಿಕ್ಕವರ್ನ್ನೆರೆದುತನಗೆನೆರವಾದಪರೇ ॥ 127

ಉದಯಿಸಿದಶುಭಾಶುಭಕ ।
ರ್ಮ್ಮದಫಳಮಂಸದೃಶಮಾಗೆಕಾಣ್ಬುದುಸಮಚಿ ॥
ತ್ತದೊಳಿರ್ಪ್ಪುದುತಕ್ಕುದುತ ।
ಕ್ಕುದಲ್ತುತಕ್ಕಂಗೆತಗದಹರ್ಷವಿಷಾದಂ ॥ 128

ವ॥ ಎಂದುದಾತ್ತಚಿತ್ತನಲ್ಲಿಂತಳರ್ದವನವಿಳಾಸಮಂನೋಡಿಮೆಚ್ಚುತ್ತುಂನಡೆಯೆಮುಂ
ದೆಮಾಕಂದನಂದನವನದಬಳಸಿನೊಳಮಶೋಕವನದಪುದುವಿನೊಳಂನಾಗಚಂಪ
ಕವನದಸುತ್ತಿನೊಳಮತಿರಮಣೀಯಮಾಗಿ ॥

ಮ॥ ಪದಪಂಕಣ್ಗೆಮನಕ್ಕೆಸಂತಸಮನಿತ್ತೆಂಮಾಣ್ದುಗೇಮಾಣ್ದುದಿ ।
ಲ್ಲಿದುಬೇಱೊಂದಮರಾಚಲೇಂದ್ರಮೆನೆನಾನಾರತ್ನಕೂಟಾಂಶುಜಾ ॥
ಳದಿನಾಶಾವಧುಗಿತ್ತುಚಿತ್ರಪಟಮಂಚೈತ್ಯಾಲಯಂಮತ್ತಮಿ ।
ತ್ತುದುಸಪ್ತಾಶ್ವನಸಪ್ತಸಪ್ತಿಗೆಸಮಗ್ರಪ್ರಗ್ರಹಾಶಂಕೆಯಂ ॥ 129

ಪೃಥ್ವಿ॥ ಇರುಳ್ಕುಮುದನೇತ್ರದಿಂಕಮಳನೇತ್ರದಿಂದಂಪಗ ।
ಲ್ನಿರೀಕ್ಷಿಸುವಪೇಕ್ಷೆಯಿಂವಸುಧೆತಜ್ಜಿನಾವಾಸಮಂ ॥
ದರಸ್ಮಿತಮುಖಂಗಳಂಪಲವನಪ್ಪುಕೆಯ್ದಿರ್ಪ್ಪವೋ ।
ಲ್ಸರಸ್ಸಮಿತಿಸುತ್ತಿಪೊಂಮುಗಿಲಸುತ್ತಲುಂರಂಜಿಕುಂ ॥ 130

ವ॥ ಅಂತತಿಶಯಮಪ್ಪಜಿನಭವನಮಂಕಂಡುಬಲಗೊಂಡು ॥

ಮ॥ ಅಳಿಮಾಳಾಮಿಳಿತಪ್ರಸೂನಸುರಭಿದ್ರವ್ಯಂಗಳಿಂದರ್ಚ್ಚನಾ ।
ಫಳಶಾಲ್ಯಕ್ಷತದೀಪಧೂಪಚರುಸಂದೋಹಂಗಳಿಂಸರ್ವ್ವಮಂ ॥
ಗಳಸಂಪೂರ್ಣ್ಣಮೆನಿಪ್ಪಜೈನಗೃಹಮಂಪೊಕ್ಕಂಜಿನಸ್ತೋತ್ರಚಾ ।
ಪಳಜಿಹ್ವಾಗ್ರಸಮಗ್ರನಾಟಕನಟಂಸಾಹಿತ್ಯವಿದ್ಯಾಧರಂ ॥ 131

ಗದ್ಯ॥ ಇದುಪರಮಜಿನಸಮಯಕುಮುದಿನೀಶರಚ್ಚಂದ್ರಬಾಳಚಂದ್ರಮುನೀಂದ್ರಚರ
ಣನಖಕಿರಣಚಂದ್ರಿಕಾಚಕೋರಂ ಭಾರತೀಕರ್ಣ್ಣಪೂರಂ
ಶ್ರೀಮದಭಿನವಪಂಪವಿರಚಿತಮಪ್ಪರಾಮಚಂದ್ರಚರಿತಪುರಾಣದೊಳ್
ಜನಕಜಿನಭವನದರ್ಶನಂಚತುರ್ಥಾಶ್ವಾಸಂ.

————

ಪಂಚಮಾಶ್ವಾಸ ಪ್ರಾರಂಭಃ.

—:o:—

ಕಂ ॥ ಶ್ರೀಜಿನಗೃಹಮಂತ್ರಿಭುವನ ।
ಪೂಜಿತಮಂಪದ್ಮರಾಗಮಣಿತೋರಣವಿ ॥
ಭ್ರಾಜಿತಮಂಪೊಕ್ಕಂಜನ ।
ತಾಜಂಗಮಕಲ್ಪವೃಕ್ಷನಭಿನವಪಂಪಂ ॥ 1

ವ ॥ ಅಂತುಪೊಕ್ಕುಪದಪಯೋರುಹಮರೀಚಿಯಿಂ ಮಧ್ಯರಂಗಮನಳಂಕರಿಸಿಮುಕುಳಿ
ತಕರಾಂಬುಜಂತ್ರಿಭುವನಪ್ರಭುಗಭಿಮುಖನಾಗಿ ॥

ಉ ॥ ಕೇವಲಬೋಧದಿಂದಱಿದುಪಾತ್ರಮಪಾತ್ರಮಿದೆಂಬಭೇದಮಂ ।
ದೇವರದೇವಸಂಭವಕರಕ್ಷಯಮೋಕ್ಷಸುಖಕ್ಕೆನಲ್ವಿನೇ ॥
ಯಾವೊಗಿತ್ತುದಾತ್ತದಿವಿಜೇಂದ್ರನರೇಂದ್ರಫಣೀಂದ್ರರಾಜ್ಯಲ ।
ಕ್ಷ್ಮೀವಿಭವಂಗಳಂತಳೆದೆನೀಂಜಸಮಂಜಗದೊಳ್ಜಿನೇಶ್ವರಾ ॥ 2

ಇತ್ತಪೆನೀನೆದೇಹಿಗನುರೂಪಮೆನಲ್ಕುಬಲೇಶಮಾದಿಯಾ ।
ಗತ್ತಲನಂತಸೌಖ್ಯಮವಸಾನಮೆನಲ್ವೆಬರಾರುಮೀವರಿ ॥
ಲ್ಲಿತ್ತಪರನ್ಯರೆಂದುಬಹಿರಂಗನಿಮಿತ್ತದಿನೆಂಬವಂಗೆದೇ ।
ವೋತ್ತಮನೀನೆಬಾಗಿವೆಸರಂಪಡೆದೈಜಗದೊಳ್ಜಿನೇಶ್ವರಾ ॥ 3

ಚ ॥ ಪಗೆಕೆಳೆಯೆಂಬಭೇದದಱಿತಂತಮಗಿಲ್ಲದೆತಮ್ಮನಂಟರಂ ।
ಪಗೆವರಗೆತ್ತುಕೊಂಡುಕಲಿಯಪ್ಪವರಕ್ಕೆಮಘಾತಿಕರ್ಮ್ಮಮಂ ॥
ಪಗೆವಡೆಯಂಪಡಲ್ವಡಿಸಿಕೀೞಿಕೃತಾಂತನಸಿಕ್ಕಿವೀರಲ ।
ಕ್ಷ್ಮಿಗೆನೆಲೆಯಾದಮಯ್ಗಲಿಯೆನೀನೆವಲಂಜಗದೊಳ್ಜಿನೇಶ್ವರಾ ॥ 4

ನನೆಗಣೆಯಿಂಜಗತ್ರಯಮನಂಡಲೆದಂಗಭವಂಗೆಭಂಗಮಂ ।
ಜನಿಯಿಸಿದೈಚರಾಚರರುಮಂತವೆನುಂಗಿದಕಾಲದಂದಶೂ ॥
ಕನರದಮಂಕಳಲ್ಚಿಕಳೆದೈಕಡುಬಲ್ಲಿದನಪ್ಪಮೋಹಮ ।
ಲ್ಲನಬಲಗಯ್ಯನಯ್ಯಮುಱಿದೈಕಲಿನೀನೆವಲಂಜಿನೇಶ್ವರಾ ॥ 5

ಉ ॥ ನೀಱೆಯರುನ್ನತಸ್ತನಭರಂಗಳಭಾರಮವುಂಕಿಸೋಂಕೆನೀ ।
ರೇಱಿದರೇಱಿದರ್ಪ್ಪೆಜಮಪೀಠಮನನ್ಯರೊಳಾಪ್ತರೆಂಬಮಾ ॥

ತೇಱಿದುಭಾರತೀಸ್ತನಭರಂಗಳಭಾರಮನ್ತೊಂಕಿಸೋಂಕೆನೀ ।
ರೇಱಿದೆಸಿಂಹವಿಷ್ಟರಮನೇಱಿದೆನೀನೆವಲಂಜಿನೇಶ್ವರಾ ॥ 6

ಚ ॥ ಸುಗತಿಗೆಭಕ್ತಿದುರ್ಗತಿಗೆನಿನ್ನಪದಪ್ರತಿಕೂಲವೃತ್ತಿಮು ।
ಕ್ತಿಗೆನಿಜತತ್ವಭಾವನೆಯೆಕಾರಣಮೆಂದೊಡೆನೀನೆದೇಹಯಾ ॥
ತ್ರೆಗೆಸುಖದುಃಖಯೋಜನೆಗೆದೇಹಿಗೆಮುಖ್ಯ . ನಿನ್ನನಂತರಂ ।
ಜಗಮನಶೇಷಮಂಪಡೆವೆನೆಂಬುದುಯುಕ್ತಿವಲಂಜಿನೇಶ್ವರಾ ॥ 7

ಕೊಲೆಯುವಿಕಲ್ಪಕೋಟಿಗಳೆದುಷ್ಕೃತಮೆಲ್ಲಮುಬಾಧೆಯೆಂದುಬಂ ।
ಬಲುಸುಕೃತಂಗಳೆಲ್ಲಮವನಿಬ್ಬಗೆಯಾಗಿರೆಮಾಡಿಮಾನವ ॥
ರ್ಕೆಲಗಿಡದಂತುದುಃಖಸುಖಹೇತುಗಳಂನಿಜದಿವ್ಯಭಾಷೆಯಿಂ ।
ಜಲಕನೆತೋಱಿದೈಸಕಲದೇಹಿಗೆನೀನೆಶರಣ್ಜಿನೇಶ್ವರಾ ॥ 8

ಮದನಪತತ್ರಿನಿನ್ನದೆಸೆಗಾಣದುಮೋಹಮಹಾಹಿನಿನ್ನನ ।
ಣ್ಮದುಕಲುಷಾನಲಂನಿಜದಯಾರಸದಿಂಮಸಿಯಾಯ್ತುಪಾಪವಿ ॥
ಲ್ಲದಪಯಣಕ್ಕೆನಿನ್ನನುಡಿಸಂಬಳಮಾಯ್ತೆನೆಪೆಂಣಮಂಣಮೋ ।
ಹಧಪರಮಾತ್ಮರಂತಿರಲಿನೀನೆಜಗಸ್ತುತನೈಜಿನೇಶ್ವರಾ ॥ 9

ಉ ॥ ನೋಟದತೀಟಮಾಲಿಸುವಸೇವಿಪಮಾಸನೆಗೊಳ್ವಸೌಖ್ಯಮಂ ।
ಮಾಟದಸೌಖ್ಯಮೆಂದುಪೆಸರ್ಗೊಳ್ಳದೆನಿನ್ನೊಳಭೇದಮಾದಕೊಂ ॥
ಡಾಟದನಂಗಸೌಖ್ಯಮೆನೆಮೆಚ್ಚಿದಮೆಚ್ಚಿಗೆಯೊಳ್ತೊಡಚ್ಚರ್ವಾ ।
ರಾಟದಿನೆನ್ನಶುದ್ಧಿಯುನಮೂಲ್ಯಮೆನಲ್ಜಗದೊಳ್ಜಿನೇಶ್ವರಾ ॥ 10

ವ ॥ ಎಂದುದರ್ಶನಸ್ತುತಿಗೆಯ್ದು ॥

ಕಂ ॥ ಜಿನಮುಖದರ್ಶನದಿಂದಂ ।
ಜನಕಂಮುಂನಾದಖೇದಮಂಮುಱಿದುಸುಧಾ ॥
ವನನಿಧಿಯೊಳ್ಮುಳುಂಗಿದವೋಲ್ ।
ತನುಪುಳಕಿತಮಾಗಿಹರ್ಷರಸಮಯನಾದಂ ॥ 11

ವ ॥ ಅಂನೆಗಮಿತ್ತಲ್ ॥

ಚ ॥ ಕೃತಕತುರಂಗಮಾಕೃತಿಯುನಂದುಪಸಂಸ್ಕೃತಿಮಾಡಿಮುಂನಿನಾ ।
ಕೃತಿಯೊಳೆಪೋಗಿಪೊಕ್ಕನುಚರಂಖಚರಂಖಚರೇಂದ್ರಸದ್ಮಮಂ ॥
ಪತಿಯುಪದಾರವಿಂದಮನರಿಂದಮನರ್ಚ್ಚಿಸಿದಂಕಿರೀಟಕೀ ।
ಲಿತಹರಿನೀಲರತ್ನರುಚಿಮಂಜರಿಯೆಂಬಲತಾಂತಮಾಲೆಯಿಂ ॥ 12

ವ॥ ಅಂತುಸರ್ವಾಂಗಪ್ರಣತನಾಗಿ ॥

ಕಂ॥ ತಂದೆಂರವ್ಯಕವನಜಿನ ।
ಮಂದಿರದಕೆಲಕ್ಕೆ ಮಿಥಿಳೆಯಿಂಜನಕನನೆಂ ॥
ದಿಂದುಗತಿಗನುಚರಂಪೋ ।
ದಂದವಮುಮಂಬಂದತೆಱನುಮಂನೆಱೆವೇಳ್ದಂ ॥ 13

ವ॥ ಆಗಳಾವಿಯಚ್ಚರಾಧಿರಾಜನತಿಹರ್ಷಚಿತ್ತನಂಗಚಿತ್ತಮನಿತ್ತು ॥

ಮ॥ಸ್ರ॥ ಗಗನಾಂತರ್ಭಾಗದೊಳ್ಪೊಂಗೊಳನಲರ್ದವೊಲಿಂಬಾಗೆಚಿತ್ರಾತಪತ್ರಂ ।
ಪಗಲಂಭೂಷಾಂಶುಜಾಲಂದ್ವಿಗುಣಿಸೆಮುಗಿಲಂಪುಟ್ಟಿಸೆನಾನಾಧ್ವಜಂಗಳ್ ॥
ಭಗವಜ್ಜೈನಾಂಘ್ರಿಪೂಜಾಪರಿಕರಸಹಿತಂಮಂಗಳಾತೋದ್ಯನಾದ ।
ಸ್ಥಗಿತಾಶಾಖಂಡನಾಖಂಡಳವಿಭವದಿನೆಯ್ತಂದನಾಖೇಚರೇಂದ್ರಂ ॥ 14

ವ॥ ಆಸಮಯದೊಳ್ ॥

ಕಂ॥ ಇದುಖಚರಲೋಕಮಿಾಬ ।
ರ್ಪುದುಖೇಚರನಿಕಾಯಮೆಂದುಮನದೊಳ್ಜನಕಂ ॥
ಪದೆದೀಕ್ಷಿಸುವಂನೆಗಮದು ।
ಪುದಿದುದುಮಣಿಮಕುಟಕಿರಣದಿಂದಾಬನಮಂ ॥ 15

ವ॥ ಅಂತುಗಗನತಳದಿನವನೀತಳಕ್ಕವತರಿಸಿದಿಂದುಗತಿಮಂದಗತಿಯಿಂ ಜಿನಮಂದಿರ ಮಂಬಲಗೊಂಡುವೊಳಗಂಪೊಕ್ಕು ದರ್ಶನಸ್ತುತಿಗೆಯ್ದನೇಕಾರ್ಚನೆಗಳನರ್ಚಿಸಿ॥

ಕಂ॥ ಆಗಗನಚರಪ್ರವರಂ ।
ಸ್ವಾಗತಸಂಭಾಷಣಂಗಳಿಂಜನಕನನ ॥
ಭ್ಯಾಗತನಂಮಂನಿಸಿದಂ ।
ಶ್ರೀಗೆಂತುಂವಿನಯಮೊಂದೆಭೂಷಣಮಲ್ತೇ ॥ 16

ವ॥ ಅಂತುಮನ್ನಿಸಿ ॥

ಚ॥ ಅಲರ್ದಮುಖಾಬ್ಜಮಂದಱಿಪೆಚಿತ್ತದಪತ್ತುಗೆಯಂಕಡಂಗಿಕ ।
ಣ್ಮಲರನುರಾಗಮಂಕೆದಱೆನೋಡಿನರೇಂದ್ರಮುಖಾರವಿಂದಮಂ ॥
ಜಲಜಲಿಸುತ್ತುಮಿರ್ಪದಶನಾಂಶುಪೊದಳ್ದತಟಿದ್ವಿಳಾಸಮಂ ।
ಗೆಲೆನುಡಿದಂಘನಧ್ವನಿಘನಧ್ವನಿಯಂಮಿಗೆಖೇಚರಾಧಿಪಂ ॥ 17

ಕಂ॥ ಎನ್ನತನಯಂಗೆತಕ್ಕಳ್ ।
ನಿನ್ನತನೂಜಾತೆರೂಪವತಿಸೀತೆಗಡಾ ॥

ಕನ್ನೆಯನೆಂನಮಗಂಗಿ ।
ತ್ತೆನ್ನೊಡನೊಡರಿಸುಧರಾಧಿಪತಿಕೊಳ್ಕೊಡೆಯುಂ ॥ 18

ವ ॥ ಎನೆಜನಕನಿಂತೆಂದಂ ॥

ಕಂ ॥ ನಿಂನತನಯಂಗಮಾವಂ ।
ಕೋಂನತೆಕುಡಲಪ್ಪುದಾದೊಡಾಕಂನೆಯನಾಂ ॥
ಮುಂನಮೆರಾಮಂಗಿತ್ತೆನ ।
ದಂನಿಲೆನುಡಿಯದೊಡೆಮೆಚ್ಚಲಱಿಗುಮೆಲೋಕಂ ॥ 19

ವ ॥ ಎನೆಸನ್ಮತಿವೆಸರವಿದ್ಯಾಧರನಿಂತೆಂದಂ ॥

ಕಂ ॥ ದೊರೆಕೊಂಡನಿಧಿಯನೊಲ್ಲದೆ ।
ಜರಗಂಕಚ್ಚುವುದೆತಂನತನಯಂಗೆವಿಯ ॥
ಚ್ಚರರಾಜನೆರೆದೊಡೀಯದೆ ।
ದೊರೆಯಲ್ಲದಮಾನವಂಗೆಕುಡುವುದೆಕೂಸಂ ॥ 20

ಆರಾದೊಡಮೆರೆವರ್ಕ ।
ನ್ಯಾರತ್ನಮನೆರೆದೊಡೀವೆವೆಂಬರೆಕುಡುವಂ ॥
ತಾರಾಮನೊಳೇಂಕಂಡೈ ।
ಪೌರುಷಮಂತಕ್ಕುದಱಿದುನೆಗಳ್ವೇಡಾ ॥ 21

ವ ॥ ಎನೆಜನಕಂಮುನಿಸಂಮೊಗಕ್ಕೆತಾರದೆರಾಮನಭುಜಪ್ರತಾಪಮಿಲ್ಲದಂದಾತರಂಗತಮ
ನೆಂಬಶಬರನಾಯಕನಿಂವಿನತಾಖಂಡ ಮನಿತುಂಮ್ಲೇಚ್ಛದೇಶಮುಕ್ಕುಮಂತಾಗದಂ
ತೆಂಮುಮನೆಂಮಭಿಮಾನಮುಮಂಕಾದೊಡೆಂಮಮಗಳಂಕನ್ಯಾರತ್ನಮಂ ಸೀತೆ
ಯನಿತ್ತೆನನೆಮತ್ತೋರ್ವ್ವಖೇಚರನಿಂತೆಂದಂ ॥

ಕಂ ॥ ಎರಳೆಯುಮಂಸೇಡನುಮಂ ।
ಧುರದೊಳ್ಜಂಕೊಂಡನೆಂದದಂಸಾಹಸಮಾ ॥
ಗಿರೆಪೊಗಳ್ವಸಕಳವಿದ್ಯಾ ।
ಧರವಲ್ಲಭಸಭೆಯೊಳಿದುಪೊಗಳ್ತೆಗೆಪೊಲನೇ ॥ 22

ಗಗನಾಂಗಣದೊಳ್ನಡೆವ ।
ಬ್ಬರ್ಗೆದಡೆಗೆಡೆಬಾತ್ತ್ರ್ಬಾತ್ತ್ರ್ಯಾದೊಡಮೆಗಳಂ ॥
ಬಗೆದಾಗಳೆಕುಡುಗುಂವಿ ।
ದ್ಯಗಳೆನೆಖೇಚರರವಾಹಿಂಮೆಭೂಚರರ್ಗುಂಟೇ ॥ 23

ವ || ಎನೆಜನಕಂಮುನಿದು ||

ಚ || ಪುರುಜಿನರಾದಿಯಾಗೆಜಿನಪುಂಗವರುಂಭರತೇಶನಾದಿಯಾ |
ಗಿರೆಸಕಲಾರ್ಧಚಕ್ರಿಗಳುಮೇಂಗಳಭೂಚರರಲ್ಲದಾರೊಳರೇ ||
ಚರರಧನೇಕಸೇನೆಯಱಿಯುಪಾಱಿದೊಡಂಫಲಮುಂಟೆಪಕ್ಷಿಯುಂ |
ತಿರೆಪುರುಷಾರ್ಥಮಲ್ತುಪರನಿಂದೆಯುಮಾತ್ಮಗುಣಪ್ರಶಂಸೆಯುಂ || 24
ನಿಮಗವರೇತಱಿಂದುಱಿದರೆಂದೞಿಕೆಯ್ವರೊವಂಶವೀರ್ಯದೊಳ್ |
ಸಮನವರ್ಗಾರುಮಿಲ್ಲವರಶೇಷಕಳಾಕುಶಲಪ್ರಚಂಡವಿ ||
ಕ್ರಮರವರಿಂತ್ರಿಖಂಡಭರತೋರ್ವರೆಯಂಭುಜದಂಡದಿಂದಲಾ |
ಕ್ರಮಿಸುವಗಂಡಗರ್ವದಬಲಾಚ್ಯುತರಲ್ಲರೆರಾಮಲಕ್ಷ್ಮಣರ್ || 25

ವ || ಎಂಬುದುಮಿಂದುಗತಿವಿಯಚ್ಚರೇಂದ್ರನಾನುಡಿಗೆಕನಲ್ದು ||

ಮ || ದೆಸೆಬಿದ್ದಂಬಲಗರ್ವಮಂಪೊಗಳ್ವೆವಜ್ರಾವರ್ತಮಂರಾಮನೇ |
ಱಿಸೆವೈದೇಹಿಯನೀವುದಾಱಿದೊಡೆಮತ್ಪುತ್ರಂಪ್ರಭಾಮಂಡಲಂ ||
ಗೆಸರೋಜಾಕ್ಷಿಯನೀವುದೀನುಡಿಯನೇಗೊಳ್ಳೆಂಬುದುಂರಾಮನಾ |
ಹಸಮಂಬಲ್ಲುದಱಿಂದಮಾನುಡಿಯುಮೇಗೊಂಡಂಮಹೀವಲ್ಲಭಂ || 26

ವ || ಅನಂತರಂಜನಕನಂವಿಚಿತ್ರವಸ್ತ್ರಾಭರಣಂಗಳಿನರ್ಚಿಸಿವಿದ್ಯಾಧರಕುಲಕ್ಕೆಮೊದಲಿಗರಪ್ಪನಮಿವಿನಮಿಗಳ್ಗೆಶ್ರೀಮದಾದಿಭಟ್ಟಾರಕಕಾರಣಮಾಗೆನಾಗರಾಜನಿತ್ತನಾಗವಿದ್ಯಾಧಿಷ್ಠಿತಂಗಳಪ್ಪವಜ್ರಾವರ್ತಸಾಗರಾವರ್ತಂಗಳೆಂಬಬಿಲ್ಗಳಂಹಲಾಯುಧಗದಾಯುಧಸಮನ್ವಿತಂಗಳಂತರಿಸಿಕೊಟ್ಟವಕ್ಕೆಚಂದ್ರವರ್ಧನನೆಂಬಮಹತ್ತರನಂಕಾಪುವೇಳ್ದುಕಳಿಪುವುದುಂ ವಿಯಚ್ಚರಬಲಂಬೆರಸವರೀರ್ವರುಂಮಣಿಮಯವಿಮಾನಂಗಳನೇಱಿಪವನಪಥದೊಳ್ ಮನಃಪವನವೇಗದಿಂಮಿಥಿಳೆಗೆಬರುತ್ತಿರ್ಪುದುಂ ||

ಚ || ಗಗನದೊಳೊಡ್ಡುಗಟ್ಟಿಬೆಳಗಾಬರುತಿರ್ಪ್ಪುದದಲ್ತುರೋಹಣಾ |
ದ್ರಿಗಳೆಳತರ್ಪ್ಪುವಲ್ಲವುನವಗ್ರಹಮಂಡಲವಲ್ತುಕಲ್ಪವಾ ||
ಸಿಗರವಿಮಾನಮಲ್ತುಜನಕಂಬರುತಿರ್ದ್ದಪನೆಂದುಕಣ್ಬೊಲಂ |
ಪುಗೆನಲಿದತ್ತುಬಿಟ್ಟವೆಳಗಿಂಗುಡಿಗಟ್ಟಿಪುರಾಂಗನಾಜನಂ || 27

ಉ || ಎಲ್ಲಿಗೆಪೋದನೆಂಮರಸನಿಂನೆಮಗಾರ್ಸ್ಸರಣೆಂಬಖೇದಮಂ |
ತಲ್ಲಣಮಂಮೊದಲ್ಗಿಡಿಸಲಾಬರುತಿರ್ಪನೆನಂಮಸ್ವೈಪಿನಿಂ ||
ದಿಲ್ಲಿಗೆಭೂಪನೆಂದುನಡೆನೋಳ್ಪೆಡೆಯೊಳ್ನಿಜಲೋಚನಪ್ರಭಾ |
ಪಲ್ಲವದಿಂವಿಪಲ್ಲವಮನಿತ್ತುದುಚಂದ್ರಿಕೆಗಂಗನಾಜನಂ || 28

ವ ॥ ಅಂತುಬಂದುಜನಕಂಮಿಥಿಳೆಯಂಪೊಕ್ಕುಚಂದ್ರವರ್ಧನಾದಿಗಳನುಚಿತಪ್ರತಿಪ
ತ್ತಿಯಿಂಮಂನಿಸಿಬೀಡಿಂಗೆಪಸಸೆಪುರದಬಹಿರ್ಭಾಗದರಮ್ಯಪ್ರದೇಶದೊಳ್ ॥

ಮ ॥ ನೆಲೆಮಾಡಂಗಳನೇಕಮಾಗೆನೆಲೆವೀಡಂವಿದ್ಯೆಯಿಂಮಾಡಿಮೆ ।
ಯ್ಗುಲಿತಳ್ವಿಲ್ಲದೆಚಂದ್ರವರ್ಧನನಭೀಷ್ಟಾವಲ್ಲೀವರ್ಧನಂ ॥
ಬಲನಾರಾಯಣಬಾಹುದಂಡದಳವಂನೋಡಲ್ಗದಾದಂಡದಿಂ ।
ಹಲದಿಂಕೊಡಿದೆಚಾಪದಂಡಯುಗಮಂಪ್ರೈತಲ್ಲಿಕಾದಿರ್ಪ್ಪುದುಂ ॥ 29

ವ ॥ ಇರ್ಪ್ಪಿನಮಿತ್ತಲ್ ॥

ಕಂ ॥ ಪ್ರಿಯಸಂಭಾಷಣಸಹಿತಂ ।
ಬಯಸಿದುದಂಪರಿಜನಕ್ಕೆ ಸಾಲ್ವಿನಮಿತ್ತ ॥
ಪ್ರಿಯಮಂಪುಟ್ಟಿಸಿದಂಸುರ ।
ಭಿಯೊಳೇನೌದಾರ್ಯ್ಯನಿಧಿಯೊಜನಕನರೇಂದ್ರಂ ॥ 30

ವ ॥ ಅನಂತರಂಮಜ್ಜನಭೋಜನಾದಿದಿವಸವ್ಯಾಪಾರವಂತೀರ್ಚ್ಚಿಸೆಜ್ಜೆವನೆಯೊಳ್ವಿತಾ
ನೋಪಧಾನಾದಿವಿರಾಜಮಾನಹಂಸತೂಲತಳ್ಪದೊಳ್ವಿಶ್ರಮಿಸಿ ನಿಜಮನೋವಲ್ಲಭೆ
ಗೆತಂನಪೋದಬಂದ ವೃತ್ತಾಂತಮಂನೆಱೆಯಪೇಳ್ಘನನಿನದಮಂಕೇಳ್ದಹಂಸವನಿ
ತೆಯಂತೆವಿಕಳೆಯಾಗಿ ॥

ಉ ॥ ನೋಡಿರೆಪುಟ್ಟಿದಾಗಳೆಬಳಂಶುವಂಪಿಡಿದೊಯ್ದೊಡೀಕೆಯಂ ।
ನೋಡಿತನೂಜನಂಮಱೆದನೀಕೆಯುಮಂಗಳೆಬಿಲ್ಗಳಂನೆವಂ ॥
ಮಾಡಿವಿಯಚ್ಚರಾನುಚರರೊಯ್ದಪರೆಂದುವಿದೇಹಿಮೆಯ್ಯನೀ ।
ಡಾಡಿಕಪೋಳದಿಂತಳೆದಳಾಣ್ಮವಲೋಚನವಾರಿಧಾರೆಯಂ ॥ 31

ವ ॥ ಇಂತುವಿದೇಹಿವಿಕಳೆಯಪ್ಪುದುಂ ॥

ಉ ॥ ಅಂಬುಜನೇತ್ರೆನಿಂನಮನದುಂಮಳಮಂಬಿಡುತಂನತೋಳ್ಗಪಾ ।
ಱುಂಬಳೆಭೂರಿಭೂವಳಯಮಂತಳೆದಿರ್ದ್ದನನಂತವೀರ್ಯ್ಯನೆಂ ॥
ಬಂಬಲಭದ್ರನೇಱಿಸುಗುವಂಕರದಬಿಲ್ಲನಳುಕ್ಕೆಗೆಟ್ಟುಬಿ ।
ಲ್ಲುಂಬೆಱಗಾಗಿಪತ್ತುವಿಡೆಕನ್ನೆಯಲೋಭಮನನ್ಯರಾಜಕಂ ॥ 32

ಮಾಸ್ರ॥ ಖಯುಣವಿಲ್ಲಂಬಿಲ್ಗೆವಿದ್ಯಾಧರರ್ಗ್ಗಿವೊಯುಣಸಂಬಂಧದಿಂರಾಮನಂಲ ।
ಕ್ಷ್ಮಣನಂಪೊರ್ದ್ದಲ್ಕೆವೇಡಿರ್ದ್ದವುನೆವದೊಳ್ಕೈಸಾರ್ದ್ದವಾಬಿಲ್ಗಳಿಂಧಾ ॥
ರುಣಿಯಂಬಾಯ್ಕೆಳಿಸಲ್ಕಾರಣಪುರುಷರಿವರ್ಪ್ಪುಟ್ಟಿದರ್ಪ್ಪಕ್ಷವಿಕ್ಷೇ ।
ಪಣಮಾತ್ರಂಕಾರ್ಮ್ಮುಕಾರೋಪಣಮವರ್ಗದಱಿಂದೇಕೆಶೋಕಾತಿರೇಕಂ ॥ 33

ವ ॥ ಎಂದುಸತಿಯಶಂಕೆಯಂಕಳೆದುಗೃಹಮಹತ್ತರಂಗೆಬೆಸಸುವುದುಂ ॥

ಕಂ ॥ ಬಹಿರುದ್ಯಾನದಕೆಲದೊಳ್ ।
ಬಹುರತ್ನಸುವರ್ಣ್ಣಮಯಮೆನಲ್ನಯನಸುಖಾ ॥
ವಹಮುಂಮಾಡಿಸಿದಂಗೃಹ ।
ಮಹತ್ತರಂನಿಮಿಷದಿಂಸ್ವಯಂಬರಗೃಹಮಂ ॥ 34

ವ ॥ ಆಸ್ವಯಂಬರಭೂಮಿಪೂರ್ವ್ವಾಪರಾಯತಚತುರಶ್ರಮೆನಿಸಿಪೊಳೆವಪೊಂಮಗಿಲುಗಳಿನೊಳಂದಕ್ಷಿಣೋತ್ತರಮುಖಂಗಳಾಗಿತೋರ್ಕ್ಕೆವೆತ್ತ ಕೆಲದನೆಲೆಮಾಡಂಗಳೊಳಮವಱಮುಂದಣಿಂದುಕಾಂತದ ಬಯಲಮಂಡಪದೊಳಮವಱಿರ್ಕ್ಕೆಲದಕರ್ಕ್ಕೇತನದಚೌಪಳಿಗೆಗಳೊಳಮಂಸುತ್ತಿಮುತ್ತಿದಮಾಣಿಕದಮತ್ತವಾರಣಂಗಳೊಳಮಲ್ಲಿಂಪೊಱಗೆಶೋಣಮಣಿಕಲಶಕರಕಿಸಲಯಂಗಳಿಂನಭಶ್ರೀಯನಾಲಿಂಗಿಸುವಬಾಗಿಲ್ವಾಡಂಗಳೊಳಮವಱಮುಂದೆ ಸಂದಣಿಸಿದಮರಕತಮಕರತೋರಣಂಗಳೊಳಮತಿರಮಣೀಯಂಗಳಾಗಿ ॥

ಮ ॥ ದಿವಿಜೋರ್ವ್ವೀರುಹಮಿತ್ತದೇವರಮಣವ್ಯಾಪಾರದಿಂದಾದದೇ ।
ವವಿಮಾನಂಗಳಿವೆಂಬಭೇದದೊಳ್ಭೇದಂಮಾಟಕೂಟಂಗಳಿಂ ॥
ನವರತ್ನೋಪಲಕರ್ಮ್ಮದಿಂಮಣಿವಿತಾನಶ್ರೇಣಿಯಿಂಭೇದಮೆಂ ।
ಬುವರಾರೆಂಬಿನೆಗಂಸ್ವಯಂಬರಗೃಹಂಕಣ್ಗೆಂಪೆಡಂಗಾದುದೋ ॥ 35

ವ ॥ ಆಸ್ವಯಂಬರಗೃಹವಿಹಾರಕ್ಕೆ ಜನಕಂಪ್ರಧಾನಪುರಷಪುರಸ್ಸರಂಬಂದು ॥

ಕಂ ॥ ಪುರುವಂಶದಕುರುವಂಶದ ।
ಹರಿವಂಶದನಾಥವಂಶದುಗ್ರಾನ್ವಯದು ॥
ರ್ವ್ವರೆಯೊಡೆಯರಾದಿಯಾಗಿರೆ ।
ನರನಾಥಸುತರ್ಕ್ಕಳನಿಬರಾನುಂಬಂದರ್ ॥ 36

ನಾನಾಃವಾಹನಚಯಮುಂ ।
ನಾನಾನಕವಂಶವಿದಿತನಾನಾಧ್ವಜಸಂ ॥
ತಾನಮುಮೆಸೆದಿರೆಬಂದ ।
ರ್ನ್ನಾನಾದೇಶಾಧಿನಾಥನಂದನರನಿಬರ್ ॥ 37

ವ ॥ ಅನಂತರಮಾಸಮಯದೊಳ್ದಶರಥಂರಾಮಲಕ್ಷ್ಮಣಭರತಶತ್ರುಘ್ನರ್ವ್ವೆರಸುಬಂದೊಂದುಪಳುಕಿನಚೌಪಳಿಗೆಯೊಳ್ರತ್ನಮುದ್ರಿಕೆಯ ಮಧ್ಯನಾಯಕರತ್ನದಂತಿರ್ಪ್ಪುದಂ ॥

ಚ ॥ ಶರನಿಧಿರತ್ನರಾಶಿಗಳನುರ್ವ್ವರೆರೋಹಣಪರ್ವ್ವತಂಗಳಿಂ ।
ಸುರಗಿರಿಸಾನುಕಲ್ಪಕುಜದಿಂಗಗನಸ್ಥಳಿತಳ್ತತಾರಕಾ ॥

ಪರಿಕರದಿಂಸರೋಜಿನಿಮರಾಳದಿನೊಪ್ಪುವವಮಾಳ್ಕೆಯಿಂಸ್ವಯಂ ।
ಬರಗೃಹವೊಪ್ಪಮಂತಳೆದುದೊಪ್ಪುವರಾಜತನೂಜರಾಜಿಯಿಂ ॥ 38

ವ ॥ ಅಂನೆಗಮಿತ್ತಲ್ ॥

ಚ ॥ ಮಳಯಜಮಿಶ್ರತೀರ್ಥಜಲಧಾರೆಗಳಿಂಶಶಿಕಾಂತಕಾಂತಮಂ ।
ಗಳಕಲಶಾಂಶುಧಾರೆಗಳಿನಿಮ್ಮಡಿಸಿತ್ತು ವಿವಾಹಮುಖ್ಯಮಂ ॥
ಗಳಸವನಂವಿಳಾಸವತಿಸೀತೆಗೆದಿಕ್ತಟಮಂಪಳಂಚೆಮಂ ।
ಗಳಪಟಹಸ್ವನಂಪುದಿಯೆಮಂಗಳಗಾಯಕಗೀತನಿಸ್ವನಂ ॥ 39

ಕಂ ॥ ಹಿಮಕಿರಣಮಾಲಿಮುಸುಕಿದ ।
ಕುಮುದಿನಿಯಷಡಂಗುತನಗೆಪುದುವೆಸೆವೃಗನೇ ॥
ತ್ರಿಮನಂಗೊಂಡಳ್ಮಳಯಜ ।
ಹಿಮಕರ್ದ್ದಮಸುರಭಿಸಲಿಲಸವನೋತ್ಸವದೊಳ್ ॥ 40

ವ ॥ ಆಮಂಗಳಸವನಸಮಯಾನಂತರಂಜಾನಕಿನೀರಾಜನವಿರಾಜಮಾನಧಾರಾನಿಳಯಜಲಯಂತ್ರಪುತ್ರಿಕೆಯಂತೆನಯನಪುತ್ರಿಕೆಗೆಮಣಿಭೂಷಣಮೆನಿಸಿಪಳುಕಿನಪಟ್ಟಿನಣೆಕೇಸಡಿಯಕೆಂಪಿನಿಂದರುಣಮಣಿಯನೊಟ್ಟೈಸೆಮೆಟ್ಟಿನಿಲ್ವುದುಮಾನಿತಂಬಿನಿಯನಿತಂಬಸೂತ್ರದೊಳ್ತೊಡರ್ಚ್ಚಿದತೋರಮುತ್ತುಗಳಂತೆಯುಮಾನ್ಯತ್ತಕುಚೆಯಕುಚಕಳಸದೊಳೊಸರ್ವ್ವಲಾವಣ್ಯರಸಬಿಂದುಗಳಂತೆಯುಮಾಕನಕಕೇತಕೀದಳನಖಿಯನಖಮುಖದೊಳುನ್ಮುಖಮಯೂಖಮಂಜರಿಯಂತೆ ಯುಮಾಪಲ್ಲವಾಧರೆಯಧರಪಲ್ಲವದೊಳ್ ಪೊಳೆವದರಹಾಸಕಳಿಕೆಯಂತೆಯುಮಾಚಳಾಳಕಿಯಳಕವಲ್ಲರಿಯೊಳ್ ಬೆಳತ್ತಿರ್ಬಿರಿಮುಗುಳಂತೆಯುಂಪೋರೊಂದೆಜಲಬಿಂದು ಬಿಡುತಪ್ಪುದುಂ ॥

ಕಂ ॥ ಆರಮಣಿಯತನುಲತೆಯಿಂ ।
ವಾರಿಕಣಪ್ರಚಯಮಂದುಕೂಲಾಂಚಲದಿಂ ॥
ವಾರಾಂಗನೆಯತ್ತೊರ್ಡೆದ ।
ನ್ನೀರಂಜಿಸುವಂತೆಮಣಿಶಲಾಕೆಯನಾಗಳ್ ॥ 41

ಮ ॥ ನಗೆಗಣ್ಣೊಸೆವಿಳಾಸಮಂನಗೆಮೊಗಂಲಾವಣ್ಯಮಂಬೀಱಿಸಾ ।
ವಗಿಸುತ್ತುಂಕಚಬಂಧಮಂಸಿಥಿಲನೀವೀಬಂಧಮಂಕಾಂಚಿಯೊ ॥
ಳ್ತೆಗೆಯುತ್ತುಂಸ್ಮರಮಂತ್ರದೇವತೆಯವೋಲ್ಬಾಹಾಲತಾಂದೋಳನಂ ।
ಬಗೆಯಂಬಲ್ಸೆಱೆಗೆಯ್ಯೆಬಾಲೆಮೆಱೆದಳ್ಲೀಲಾಪದನ್ಯಾಸಮಂ ॥ 42

ವ ॥ ಅಂತುಬಂದುಚೆಂಬೊಂನಕಂನೆಮಾಡದಮೊಗಸಾಲೆಯೊಳಿರ್ದಮುತ್ತಿನಚಿತ್ತರಿಗೆಯೊಳ್ಕುಳ್ಳಿರ್ದ್ದುಂಮೇಳದಂಗನೆಯರ್ಮಂಗಳಪಸದನಂಗೊಳಿಸಲವಸರಂಬಡೆ

ದುವಿಚಿತ್ರಚೀನಾಂಬರಮಂನಿಱಿವಿಡಿದುಡಿಸಿಕೆಂದಾವರೆಯನೆಳವಿಸಿಲೆಳಸುವಂದ
ಮಾಗೆಲಾಕ್ಷಾರಸದಿನಡಿಯೂಡಿಯುಂಚರಣನಖಚಂದ್ರಮಾಲೆಗೆನಕ್ಷತ್ರಮಾಲೆಯು
ನೋಲಗಿಸುವಂತೆಮುಕ್ತಾಫಲನೂಪುರಮಂತುಡಿಸಿಯುಂ ಪುಳಿನವಳಯಮಂಪೊಂ
ದಾವರೆಯಬಳ್ಳಿಬಳಸಿದಂತೆನಿತಂಬವಳಯದೊಳ್ಮಣಿಮೇಖಲೆಯಂತೊಡರ್ಚಿ
ಯುಂಮದನಮದರದನೀರದನದೊಳ್ಕೀರ್ತಿಮುಖಮಂಕೀಲಿಸುವಂತೆಶತಪತ್ರಭಂ
ಗಮಂತುಂಗಸ್ತನಭಾಗದೊಳ್ಸಂಗಳಿಸಿಯುಂಪೀವರಪಯೋಧರಮಂಡಳಕ್ಕೆ ಪರಿ
ವೇಷಮಂಪಡೆದಂತೆಪಂಚರತ್ನದಬಂಣಸರಮಂಕೊರಲೊಳಿಕ್ಕಿಯುಂಬಾಹುಲತೆ
ಯಬೀಳಲಂತೆರತ್ನಕಾಂತಿಕವಲ್ಪುರಿವಿನಮಂಗದಮಂನಳಿತೋಳ್ಗಳವಡಿಸಿಯುಂಸಿ
ರೀಸದಬಾಸಿಗಮಂಭೃಂಗಮಾಲೆಬಳಸುವಂತೆ ನಳಿತೋಳೊಳ್ಪಚ್ಚೆಯಪಿಂಡುಗಂ
ಕಣಮನೇಱಿಸಿಯುಂನನೆಗಣೆಗೆಗಱಿಗಟ್ಟುವಂತಂಗುಳಿಯೊಳ್ ರತ್ನಮುದ್ರಿಕೆ
ಯಂಮುದ್ರಿಸಿಯುಂಸ್ಮರವಶೀಕರಣಯಂತ್ರಮಂಬರೆವಂತೆಕಪೋಳತಳದೊಳ್ಮ
ಕರಿಕಾಪತ್ರಮಂಬರೆದುಂಪೊಸಮಸೆಯಪ್ಪಾಗಣೆಗೆಪೋಗರಂಪಡೆವಂತೆನಗೆಗಂಣ್ಗಳೊ
ಳಂಜನಮನಳ್ಕೆಗೆಯ್ದುಂಕರ್ಣಾಂತವಿಶ್ರಾಂತಲೋಚನದೊಳ್ಪಡಿಯಿಟ್ಟುನೋ
ಳ್ಪಂತೆಕಿವಿಯೊಳವತಂಸೋತ್ಪಲಮಂತೊಡರ್ಚಿಯುಂ ॥

ಚ ॥ ಉಗುರ್ಗಳಕಾಂತಿಯಿಂದಳಕವಲ್ಲಿಗೆನೀರ್ದಳೆವಂತೆಮೆಲ್ಲಮೆ ।
ಲ್ಲಗೆತಲೆವಿಕ್ಕಿ ಚಂದ್ರಕಿರಣಂಗಳನಾಗಳೆರಾಹುನುಂಗಿಮ ॥
ತ್ತುಗುಳ್ದಪುದೆಂಬಿನಂಮುಡಿಸಿಬಾಲೆಯುಸೋರ್ಮುಡಿಯಂಲಲಾಟದೊಳ್ ।
ಮೃಗಮದಬಿಂದುವಂಪೆಱೆಗೆಸುಣ್ಣಱೆಯಂಪಡೆವಂತೆತಿರ್ದಿದಳ್ ॥ 43

ವ ॥ ಆಗಳಾಕೆಯುಮಂಗಳವಸದನಮೆತನಗೆವೀರವಸದನಮಾಗೆ ॥

ಕಂ ॥ ಬಾಲೆಯುಕಡೆಗಣ್ನೋಟಮೆ ।
ಸಾಲದೆನನೆಗಣೆಗಳೇವುವೆಂದುಮನೋಜಂ ॥
ಶೂಲಿಯುನೊಸಲುರಿಗಣ್ಣಿಂ ।
ಪೀಲಿಯಕಂಣೆಂಬನಾವನೆನಗಿದಿರೆಂಬಂ ॥ 44

ಮನಸಿಜನೆನೆರತಿಯೆನೆಕ ।
ಬ್ಬಿನಬಿಲ್ಲೆನೆಕುಸುಮಬಾಣಮೆನೆಕೋಕಿಲನಿ ॥
ಸ್ವನಮೆನೆಮಧುಕರಝುಂಕೃತ ।
ಮೆನೆಸೀತೆಯುಪಸದನಕ್ಕೆ ಪರ್ಯಾಯಂಗಳ್ ॥ 45

ವ ॥ ಅಂತುಕೈಗೆಯ್ದುವುದುಮಾಸಮಯದೊಳ್ ॥

ಕಂ ॥ ಹರಿವಂಶನಿಯಮದಿಂಹಿತ ।
ಪುರೋಹಿತಂಶುಭಮುಹೂರ್ತ್ತದೊಳ್ಕಂನಿಕೆಯಂ ॥
ತರವೇೞ್ವೃದ್ಧಕಂಚುಕಿ ।
ವೆರಸುಮನೋರಥಮೆನಿಪ್ಪರಥಮಂತಂದಂ ॥ 46

ವ ॥ ಆಗಳಾಪುರೋಹಿತಾದೇಶದಿನನೇಕಮಂಗಳಾನಕನಿನದಮೊದವೆರಥಮನೇಱಿ ॥

ಕಂ ॥ ರಮಣಿಯರೆರಡುಂಕೆಲದೊಳ್ ।
ಚಮರರುಹಮನಿಕ್ಕಿಬೀಱಿಬೆಳ್ಗೊಡೆಬೇಱೊಂ ॥
ದಮೃತಾಂಶುವನಾಕ್ಷಣದೊಳ್ ।
ಹಿಮಾಂಶುಮುಖಿಮೆಱೆದಳೀಕ್ಷಣಾಕರ್ಷಣಮಂ ॥ 47

ವ ॥ ಆಗಳಾಸ್ಯಂದನಮಂಸುತ್ತಿಮುತ್ತಿಕಾಂಚದಡಪದಡವಕೆಯ ಕಂನಡಿಯಪರಿಚಾರಿಕಿ
ಯರುಮೊಡನಾಡಿಗಳಪ್ಪಯ್ನೂರ್ವ್ವರ್ಕ್ಕಂನೆಯರುಂಮಂಗಳೋಪಕರಣದ್ರ
ವ್ಯಂಗಳಂಪಿಡಿದುನಡೆಯೆ ॥

ಚ ॥ ಮದನಪತಾಕೆಚುಂಬಿಸೆವಿಯನ್ಮುಖಮಂಸ್ಮರಚಾಪಟಂಕೃತಂ ।
ಪುದಿಯೆದಿಗಂತಮಂಕುಸುಮಸಾಯಕಸಾಯಕಮುಕ್ತ್ಯರಾಜಲೋ ॥
ಕದಮನವಂಮನೋಜವಿಜಯಾಂಗನೆಜಾನಃಪ್ರೋಕ್ಷಳಾಸಭಾ ।
ಸದನಸುವರ್ಣ್ಣಗೋಪುರಮನೇಱಿಹಿರಣ್ಮಯಮಂವರೂಥಮಂ ॥ 48

ಕಂ॥ ಕನ್ನೆಯರಖಿಲಕಲಾಸಂ ।
ಪನ್ನೆಯರಯ್ನೂರ್ವ್ವರಲರ್ದತಾವರೆಗಳವೋಲ್ ॥
ತನ್ನೊಡವರೆಬಂದಳ್ಸಿರಿ ।
ಸನ್ನಿದಮಾದಂತೆಸೀತೆಕನ್ಯಾರತ್ನಂ ॥ 49

ವ ॥ ಅಂತುಬಂದು ॥

ಚ ॥ ಜನಕಜೆವಶ್ಯದೀಪಕಳಿಕಾಕೃತಿಯಿಂಪುಗೆತತ್ಸಭಾನಿಕೇ ।
ತನಕುಸುಮೋಪಹಾರಮಣಿರಂಗಮನಂಗಣಮಂನರೇಂದ್ರನಂ ॥
ದನರ್ಗಮನೋವಿಕಾರದೊಡನಂಗವಿಕಾರಮಿದೇಂಪೊದಳ್ದುದೋ ।
ನನೆಕೊನೆಯೇಱುವಂತೆವನರಾಜಿಮಧುಪ್ರಥಮಪ್ರವೇಶದೊಳ್ ॥ 50

ಕಂ ॥ ಉದಯಿಸೆಶಶಿಕಳೆತೆರೆಮಸ ।
ಗಿದಪಾಲ್ಗಡಲಂತೆನೃಪಕುಮಾರಕದಂಬಂ ॥

ಸುದತಿಪುಗೆಸಭೆಯನೊಳಕೊಂ ।
ಡುದುಮದನವಿಕಾರಚೇಷ್ಟೆಯಂಬಹುವಿಧಮಂ ॥ 51

ದಿನಲಕ್ಷ್ಮಿಯಪುಗಿಲೊಳ್ಕೋ ।
ಕನದಾಕರನಿಕರಮೊಡನೆಸಳ್ಕ್ರಸಗುವವೋಲ್ ॥
ಜನಕಾತ್ಮಜೆಪುಗೆಸಭೆಯಂ ।
ಜನಿಯಿಸಿದುದುಮದನಚೇಷ್ಟೆರಾಜನ್ಯಕದೊಳ್ ॥ 52

ವ ॥ ಆಗಳಾಕೆಯಲಾವಣ್ಯಾಮದಿರಾರಸಸೇವನೆಯಿಂಕರಮೆಸೆಕ್ಕಿ ॥

ಕಂ ॥ ದ್ವಿಗುಣಿಸಿನಖರುಚಿಪೂವಾ ।
ಲೆಗಳಂಕಾಱಿರುಳೊಳೊಗೆದತಾರಾವಳಿಯಂ ॥
ನಗೆತೋಱಿದುಜುಂಬಂಸಾ ।
ವಗಿಸಿದನಡಿಗಡಿಗೆನೃಪಕುಮಾರಕನೋರ್ವ್ವಂ ॥ 53

ಪರಭಾಗಂಬೆತ್ತಿರೆಪ ।
ದ್ಮರಾಗಮಣಿಮಾಣಿಪದ್ಮರಾಗದಿನೋರ್ವ್ವಂ ॥
ನರನಾಥಸುತಂಮೆಱೆದಂ ।
ಕಿರೀಟಮಂತಿದ್ದುವಂತೆಭುಜಶಾಖೆಗಳಿಂ ॥ 54

ತಾರಾವಳಿಯಂತಳೆದನ ।
ಭೋರಂಗದಭಂಗಿತನಗೆಪುದುವೆನಿಸಿದುದಂ ॥
ವೇರುರಮನದೇಂಮೆಱೆದನೊ ।
ಹಾರಮನೋಸರಿಸುವಂತೆನೃಪಸುತನೋರ್ವ್ವಂ ॥ 55

ಮಂಗಳಮಣಿಪೀಠಂವಿಜ ।
ಯಾಂಗನೆಗೆನೆತೋರ್ಪ್ಪವಡೆದುದಂಮತ್ತೋರ್ವ್ವಂ ॥
ತುಂಗಭುಜಶಿಖರಮಂರ ।
ತ್ನಾಂಗದಮಂಸಾಚ್ಛವೊಂದುನೆವದಿಂಮೆಱೆದಂ ॥ 56

ಉ ॥ ಶ್ರೀವಿಡೆಂಗುವೆತ್ತಕಮಲಾಕರದೊಳ್ರಮಣೀಯಮಾದಕೆಂ ।
ದಾವರೆಪೂವಿನೊಳ್ನೆಣಸಿದತ್ತುಕುಮಾರವಿಶಾಲವಕ್ಷದೊಳ್ ॥
ಸಾವಗಿಸುತ್ತುಮಿರ್ಪ್ಪಪದದೊಳ್ಪೊಳೆದೊಪ್ಪುವತೋಱಮುತ್ತಿನೆ ।
ಕ್ಕಾವಳಿಸೂಸುವಂಶುಜಲದಿಂಬೆಳಗಿಂಪಳವಟ್ಟುಕೆಂದಳಂ ॥ 57

ವ ॥ ಆಗಳಾಸ್ವಯಂಬರಮಧ್ಯಭೂಮಿಗೆಮಣಿಭೂಷಣಮೆನಿಸಿಮನಂಗೊಳಿಸುವವಳಾ

ಕಿನ್ನಱಿಪಳಿಗೆಯನೀಲಶಿಲಾಸ್ತಂಭಮಂಮಲಂಗಿಪೊಂನಪುತ್ತಳಿಗೆಯವಿಳಾಸಮನಸ
ಕಳಿದಮತಟಿದ್ವಲ್ಲರಿಬಳಸಿದಶರಲ್ಲಕ್ಷ್ಮಿಯಂತೆಯುಂತಾರಾವಳಿಬಳಸಿದಿಂದುಕಳೆಯಂ
ತೆಯುಂವಿದ್ರುಮಲತೆಬಳಸಿದಲಾವಣ್ಯರಸಸಮುದ್ರದಹೆಜ್ಜ್ವೇಲೆಯಂತೆಯುಂಕ
ನ್ಯಕಾಕದಂಬದಬಳಸಿಂಬಗೆಗೊಳಿಸಿನಿಖಿಲಜನಮನಃಪೀಠದೊಳ್ ಮನಸಿಜಂಪ್ರತಿ
ಷ್ಠೆಗೆಯ್ದ ರತಿಯಂತೆನಿರತಿಶಯಮಾಗಿರ್ಪ್ಪುದಂ ॥

ಕಂ ॥ ಸಕಳೇಂದುಮುಖಿಯನಾಕ ।
ನ್ನಿಕೆಯಂಕಣ್ಸೋಲ್ತುನೋಡಿಮತ್ತೋರ್ವ್ವಂಕೌ ॥
ತುಕದಿಂದೆಮೆಯಿಕ್ಕದಂ ।
ಜಕುಮಾರಂಸುರಕುಮಾರನಂಗೆಲೆವಂದಂ ॥ 58

ತರುಣಿಯಲಾವಣ್ಯರಸಾಂ ।
ಬುರಾಶಿಯೊಳ್ತಂಕೆತಂನಕಂಣುಂಮನಮುಂ ॥
ಮರವಾನಿಸೆನಂತೋರ್ವ್ವಂ ।
ಸ್ಮರಸಂಮೋಹನಶರಕ್ಕೆಗುಱಿಯಾಗಿರ್ದ್ದಂ ॥ 59

ಅಳವಡಿಸುವಂತೆಮಣಿಕಂ ।
ಡಳಮಂನಸುಮುರಿದುಜನಕಸುತೆಯಕಪೋಳ ॥
ಸ್ಥಳಮಂಮೃಗಮದಪತ್ರಾ ।
ವಳಿವಿಳಸಿತಮಂಮರಲ್ದುನೋಡಿದನೋರ್ವ್ವಂ ॥ 60

ತಳವೆಳಗಾದಂವನಿತಾ ।
ತಿಳಕದಫೆಜೆನೊಸಲಲೋಚನಾತಿಳಕದಚೆ ॥
ಲ್ವೆಳಕುಱಿಗೊಳಿಸಂಮೋಹನ ।
ತಿಳಕದವೋಲ್ಮನಮನವನಿಪಾಲಕತಿಲಕಂ ॥ 61

ಬಾಲೆಯಸೋರ್ಮ್ಮುಡಿಮನಸಿಜ ।
ಕಾಲೋರಗನಂತೆಮನದೊಳಾಕಂಪನಮಂ ॥
ಮೇಳೈಸೆಮತ್ತೋರ್ವ್ವಂಭೂ ।
ಪಾಳಂಪಾವಡರ್ದನಂತೆಱಂಗಾಗಿರ್ದ್ದಂ ॥ 62

ಮ ॥ ತನುರೋಮಾಂಚಮನಪ್ಪುಕೆಯ್ಯೆನೃಪನೋರ್ವ್ವಂಕನ್ಯಕಾರೂಪದ ।
ಶೃಂಗನದಿಂತತ್ಪುಳಕಂಗಳಂಕಳವಿಪಂಬೇನಾದಮಂಕೇಳ್ದ್ದುಭೋಂ ॥

ಕನೆಮೆಯ್ವೆಚ್ಚಿರ್ದುದೆಂದುವಂಚಿಸಿಯುಮೇಂಮೋಲ್ವಾಯ್ದುದೆಂಲೋಲಲೋ ।
ಚನಮಂತಾಂಗಿದನಲ್ಲಜಾನಕಿಯಸೌಂದರ್ಯ್ಯಕ್ಕೆದಾಕ್ಷ್ಟರ್ಯ್ಯಮೇ ॥ 63

ಉ॥ ಪಲ್ಲವಪಾಟಳಾಧರೆಯಪೀನಪಯೋಧರಮಂಡಳಂಗಳಾ ।
ಪಲ್ಲಪರೀಪರಂಪರೆಯನೀಯೆಸಮುತ್ಸುಕಲೋಚನಪ್ರಭಾ ॥
ಪಲ್ಲವದಿಂದುಕೂಲನವಪಲ್ಲವಶೋಭೆಯನಾಗಳೋರ್ವ್ವನಿ ।
ತ್ರಲ್ಲಿಯೆಕಣ್ಪಳಂಚಲಯೆಜಾನಕಿಯಂಮನಮೊಲ್ದುನೋಡಿದಂ ॥ 64

ಮ॥ ಕೆಲರಾಗಳ್ಭುಜಪೀಠಮರ್ದ್ಧಭುಜಾವಿಂದಂಸೂಚಿಯಿಂದಂಕೆಲ ।
ಪ್ಪರ್ಲವುಂಭಂಗಿಯಿನಿದ್ದುರ್ಜಾನಕಿಯರೂಪಾಶ್ಚರ್ಯ್ಯಮಂನೋಡಿಕ ॥
ಣ್ಮಲರಂಚಿತ್ತಮನಿತ್ತುಚಿತ್ರಿಸಿದವೋಲ್ನಿಷ್ಪಂದರಾಗಿರ್ಪ್ಪುದುಂ ।
ಗೆಲೆವಂದತ್ತುವಿಚಿತ್ರಚಿತ್ರಸಭೆಯಂಭೂಭೃತ್ಸಭಾಮಂಡಲಂ ॥ 65

ಕಂ॥ ಅನಿತಿಂದ್ರಿಯಮುಂವಿಷಯಮ ।
ನನಾಕುಳಂಬಿಟ್ಟುದರ್ಶನೇಂದ್ರಿಯಮೊಂದ ॥
ಕ್ಕನುವಶಮಾದುವೆನಲ್ನೃಪ ।
ತನಯಜ್ಜಾನಕಿಯಮೇಲೆಕಂಣಾಗಿರ್ದ್ದರ್ ॥ 66

ಕರಣಂನಯನಮೆವಿಷಯಂ ।
ತರುಣಿಯೆಪೆಱತೇನುಮಿಲ್ಲೆನಲ್ರಾಜತನೂ ॥
ಜರಕಣ್ಗಳೆಳಸಿಬಳಸಿದು ।
ವುರವಣಿಸಿದುವಟ್ಟಿಮುಟ್ಟಿದುವುಜಾನಕಿಯಂ ॥ 67

ವ॥ ಅನಂತರಂ ॥

ಕಂ॥ ಬಿಸರುಹನೇತ್ರೆಗೆಜಾನಕಿ ।
ಗೆಸುಟ್ಟಿತೋಱುತ್ತುಮಱಿಪಿದಳ್ಪರಿವಿಡಿಯಿಂ ॥
ಪೆಸರ್ಗೊಂಡುವೃದ್ಧಕಂಚುಕಿ ।
ಪೆಸರನೃಪಾತ್ಮಜರವಂಶವೀರ್ಯ್ಯಶ್ರುತಮಂ ॥ 68

ವ॥ ಅಂತಱಿಪುವುದುಂ ॥

ಕಂ॥ ಕಡುಮುಂದಮಪ್ಪಕಣ್ಣೆಮೆ ।
ಕೊಡುಪುರ್ಬ್ಬಿಂತುಡುಕೆನೋಡೆಮೊಗರಸವೆಂಬಿಂ ॥

ಗಡಲೊಳ್ಪೊಳೆವೆಳವಾಳೆಯ ।
ಪೆಡಂಗನೊಳಕೊಂಡುವಕ್ಷಿಗಳ್ಜಾನಕಿಯಾ ॥ 69

ಚ ॥ ನನೆಯಸರಳ್ಗಳಂತೆನೆಱೆದಿಂಗಳತಣ್ಗದಿರಂತೆಕಂತುರಾ ।
ಜನಕರವಾಳವೊಯ್ಯೊಳಪಿನಂತೆನವೋತ್ಪಲದಾಮದಂತೆಪೂ ॥
ವಿನಮಳೆಯಂತೆತುಂಬಿಗಳಮಾಲೆತೆಱಂಬೊಳೆವಂತಲೋಲಲೋ ।
ಚನರುಚಿಸುತ್ತಿಮುತ್ತಿದುದಶೇಷನೃಪಾಲಸಭಾಂತರಾಳಮಂ ॥ 70

ವ ॥ ಅಂತುನೋಡಿ ॥

ಚ ॥ ಎಱಗದೆಪೂತಚಂಪಕವನಕ್ಕೆನಮೇರುಮಹೀರುಹಕ್ಕೆಬಂ ।
ದೆಱಗುವಚಂಚರೀಕದವೊಲಾಕೆಯಕೇಕರವನ್ಯರಾಜಕ ॥
ಕ್ಕೆಱಗದೆರಾಘವಂಗೆಱಗೆಕಂಚುಕಿಕಂಡಱಿದಾಲತಾಂಗಿಗ ।
ಳ್ಗಱಿಯೊಳಭಿವರ್ಣ್ಣಿಸಲ್ಬಗೆದಳಾಧರಣೀಶಗುಣೈಕದೇಶಮಂ ॥ 71

ಉ ॥ ಪ್ರಾಕೃತನಲ್ಲನೀದಶರಥಾಗ್ರತನೂಭವನೇಕವಾಕ್ಯನಾ ।
ಶಾಕರಿಕರ್ಣ್ಣಚಾಮರಯಶಂಚರಮಾಂಗನನಂತವೀರ್ಯ್ಯನಿ ॥
ಕ್ಷ್ವಾಕುಕುಳಾಮೃತಾರ್ಣ್ಣವಸುಧಾಕಿರಣಂರಣಮೇರುಲೋಕಲುಂ ।
ಟಾಕನಿದಾಘತಾಪಶರವರ್ಷ್ಷಣನೇಘನುದಾತ್ತರಾಘವಂ ॥ 72

ಕಂ ॥ ಕರಿಯಂಕಾಮಂಬಿಸಮಂ ।
ಡುರವರ್ಣ್ಣಂರಾಮನಿದುವೆಭೇದಮಭೇದಂ ॥
ನಿರತಿಶಯಮಪ್ಪರೂಪಿಂ ।
ವರನಾಗಲ್ಮಿನಗೆತಕ್ಕನೀರಘುವೀರಂ ॥ 73

ವ ॥ ಎಂಬಿನಮಾಸಮಯದೊಳ್ವಿದ್ಯಾಧರಮಹತ್ತರಂವಿಧಿಪೂರ್ವ್ವಕಮಾಗಿಯಾವಿಷಮ
ಚಾಪಮನರ್ಚ್ಚಿಸುವುದುಂ ॥

ಮ॥ಸ್ರ॥ ರಸನಾಶಂಪಾಶತಂಸಂಚಱೆಸೆಪುದಿಯೆಫೂತ್ಕಾರಮಾಶಾಂತಮಂದ ।
ಳ್ಳಿಸೆವಹ್ನಿಜ್ವಾಲೆನಾಗಾನನಕುಹರಸಹಸ್ರಂಗಳಿಂಕಣ್ಗಳಿಂದೆ ॥
ಹ್ದಿಸೆಗಂಗಾರಂಗಳೆತ್ತಂಕೆದಱೆಫಣಸಹಸ್ರಂಗಳಂಬಿರ್ಚ್ಚಿಕಣ್ಬೆ ।
ರ್ಚ್ಚಿಸೆವಜ್ರಾವರ್ತ್ತಚಾಪಂಪಡೆದುದುಭಯಮಂಕಾಳಕಾಳಾಹಿರೂಪಂ ॥ 74

ಕಂ ॥ ಸಿಡಿಲಂತೆಮೊಳಗಿನೆಲನಂ ।
ಪೊಡೆಯುತ್ತುಂ ಪತ್ತುದೆಸೆಗಮವ್ವಳಿಸುತ್ತುಂ ॥

ಪಡೆದುದಗುರ್ವ್ವಂಜವನೆರ್ದೆ ।
ಗಿಡೆವಜ್ರಾವರ್ತ್ತಸಾಗರಾವರ್ತ್ತಂಗಳ್ ॥ 75

ವ ॥ ಆಗಳವರಮುಸಕಮಂಕಂಡುಭಯಂಗೊಂಡುಖೇಚರಮಂಡಲಂಪ್ರಭಾಮಂಡಲಂಗೆ
ಕಂನೆಕ್ಕೈಸಾರ್ದ್ದಳಿಂದುಪೇಱಸಾದ್ರ್ವನೋಡುತ್ತಿರ್ಪ್ಪದಂ ॥

ಸ್ರ ॥ ಈವಜ್ರಾವರ್ತ್ತಕೋದಂಡಮನವಯವದಿಂದೇಱಸಲ್ಸಾಳ್ವದೋರ್ದ್ದಂ ।
ಡಾವಷ್ಟಂಭಂಪ್ರಚಂಡಂಜನಕಜೆಗೆವರಂಬಪ್ಪ್ಪದೆಂಬೀವ್ಯವಸ್ಥಾ ॥
ರಾವಂಕರ್ಣ್ಣಾವತಂಸಂಪಸರಿಸೆನಿಜಪೀಠಂಗಳಿಂದೆರ್ದ್ದದಾಗ ।
ೞ್ತೀವೃತ್ತಿರ್ಪ್ಪಂನೆಗಂಭೂಷಣರುಚಿಕಕುಭಾನೀಕಮಂರಾಜಲೋಕಂ ॥ 76

ಕಂ ॥ ಮನಸಿಜನುಂಚಂದ್ರಮನುಂ ।
ದಿನಕರನುಮನೇಕರೇಕೆನೆರೆದರೊವೇಳಿಂ ॥
ಜನೆಗಂನೃಪತನಯರ್ಬ್ಬಿ ।
ಲ್ಲನೇಱಸಲ್ತಂಮಃಪೆಳಗುಪೆಳಗೆನೆಬಂದರ್ ॥ 77

ನ ॥ ಅಂತುಬಂದಗುರ್ವ್ವಪರ್ವ್ವರೆವಿಗುರ್ವ್ವಿಸಿದಬಿಲ್ಗಳಂಕಂಡುಭಯಂಗೊಂಡು ॥

ಮ ॥ ಉರಿಯಂಕಾಱುವಕೆಂಡಮಂಕಱೆವಬಿಲ್ಲಂಕಂಡೆಬಿಲ್ಲಾಕ್ಕೆವಂ ।
ತರುಣೀರತ್ನಮನೆಳ್ದುಕೊಳ್ವಸಮಕಟ್ಟಿಂದಟ್ಟಿದಂಖೇಚರಂ ॥
ಮರುಳಾದಂಜನಕಂವ್ಯವಸ್ಥೆಯನೊಡಂಬಟ್ಟಿರೊಕಲ್ಯಾಣತ ।
ತ್ಪರರೀಮಂಗಳಲಗ್ನದೊಳ್ಕಾಳಿಕದಂಷ್ಟ್ರಾಲಗ್ನಮಂಸೈರಿಪರ್ ॥ 78

ಕಂ ॥ ಅಹಿದರ್ಶನಮಲ್ತುಶುಭಾ ।
ವಹಂವಿವಾಹಕ್ಕೆವಿಷಮುಮೀಮಾರ್ಗ್ಗಮಹಿ ॥
ಗ್ರಹಣಂಪುಂನಂಪಾಣಿ ।
ಗ್ರಹಣಂಬಳಿಯಂಗಳಿಂನವಘಟಿತಮೊಳವೇ ॥ 79

ಮಧುಪರ್ಕ್ಕಮಲ್ತುಮಂಗಳ ।
ವಿಧಾನದೊಳಗೊಂದುಮಲ್ತುಶಾವಂಪಿಡಿವೀ ॥
ವಿಧಿಕನ್ಯಾಪರಿಣಯನ ।
ಪ್ರಧಾನಕಾರ್ಯ್ಯಂಗಳಿಂನವಘಟಿತಮೊಳವೇ ॥ 80

ಕುಡುವೆಂಜಾನಕಿಯಂಪಿಡಿ ।
ದೊಡಜಗರಮನೆಂದುಮುಂನಪೇಳ್ದ್ದೊಡೆಯಾಗಾ ।

ರುಡವುಂಕಲ್ತುವಿವಾಹ ।
ಕ್ಕೊಡರಿಸುವೆಂಬಱಿದೆಪಿಡಿವನಾವನೊಪಾವಂ ॥ 81

ಉ ॥ ದೂರದೊಳಂಜದೀಕ್ಷಿಸುವಕಣ್ಗಲಿಗಳ್ನೃಪರಾರುಮಿಲ್ಲಿನ ।
ಲ್ಲಾರೆವರಲ್ಮನಂಗಿಡದವೊಯ್ಗಲಿಯೂವನೊಬಾಹುವೀರ್ಯ್ಯದಿಂ ॥
ದಾರವನೆತ್ತಲಾರ್ಪ್ಪರೆನಲೇಱಿಸಲುದ್ಧತವೃತ್ತಿನಾಡೆಯುಂ ।
ದೂರಮಿವಕ್ಕೆ ಬಿಲ್ಪೆಸರನಿಟ್ಟವನುರ್ವ್ವಿಗೆನಂಜನಿಟ್ಟವಂ ॥ 82

ವ ॥ ಎಂದುನೆರೆದರಸುಮಕ್ಕಳೆಲ್ಲರಾಬಿಲ್ಲಂಕಂಡುಬಲ್ಗ್ರಹಂಪಿಡಿದವರಂತೆಪೆಡಂಮಗುಳೆ ॥

ಶಾ ॥ ದೇಶಾಧೀಶತನೂಭವರ್ಸ್ಸೆಡೆವೃದುಂಸಾಕೇತಸಿಂಹಾಸನಾ ।
ಧೀಶಂಕಂಡುದರಸ್ಮಿತಂದಶರಥಂಭ್ರೂವಲ್ಲರೀಪಲ್ಲವಾ ॥
ದೇಶಂನೋಡೆಮುಖಾಬ್ಜಮುಂಸಭೆಯಿನೆದ್ದಂತುಂಗವಂಶಂಸುರೇಂ ।
ದ್ರಾಶಾದಂತಿಬಲಂಜಿತಾಹಿತಬಲಂದುರ್ವ್ವಾರಬಾಹಾಬಲಂ ॥ 83

ವ ॥ ಅಂತುತಳರ್ವ್ವದುಂ ॥

ಕಂ ॥ ಜನನಯನಪ್ರತಿಬಿಂಬಂ ।
ತನುರುಚಿಯೊಳ್ಪೊಳೆಯೆನಡೆವನೆಯ್ದಲ್ಗೊಳನಂ ॥
ನೆನೆಯಿಸಿವರ್ಣ್ಣನೆರಾಮಂ ।
ನೆನೆಯಿಸಿದನನುಕ್ಷಣಂಸಹಸ್ರೇಕ್ಷಣನಂ ॥ 84

ಮ ॥ ಬಲಭದ್ರಂರಜತಾದ್ರಿಬರ್ಪ್ಪತೆಱದಿಂಬಂದಂಧನುರ್ದ್ದರ್ಶನಾ ।
ಕುಳರಂರಾಜತನೂಜರಂಸ್ಮಿತಮುಖಂನೋಡುತ್ತಲುದ್ಭ್ರೂಲತಂ ॥
ಕೆಲರಂಮೂರ್ಚ್ಛೆಗೆಸಂದರಂಕೆಲಬರಂಬಳ್ಕುತ್ತೆಪಂನಿತ್ತರಂ ।
ಕೆಲರಂಪೆಕ್ಕಸಮುತ್ತರಂಕೆಲಬರಂಶಂಕಾವಿಷಾತಂಕರಂ ॥ 85

ವ ॥ ಅಂತೆಯ್ದೆವರ್ಪ್ಪುದುಂ ॥

ಚ ॥ ಪದನಖದೀಪ್ತಿಮಂಜರಿನಿಜಾಳಕದಂತಿರೆತಂನನಾವಗಂ ।
ಪುದಿಯಲೊಡಂಮಿಗುರ್ವ್ವಣೆರಘೂದ್ವಹಸಂನಿಧಿಯಿಂದದೃಶ್ಯಮ ॥
ಪ್ಪುದುಮಿಳಿದಾಯ್ತುಚಾಪಲತೆರೋಹಣಶೈಲವಿಷಾಪಹಾರರ ।
ತ್ನದವಿತತಾಂಶುತಳ್ತಡರೆನಿರ್ವ್ವಿಷವಾದಮಹಾವಿಷಾಹಿವೋಲ್ ॥ 86

ವ ॥ ಆಗಳಾವಿಷಮಕೋದಂಡಮನೇರಂಡಕಾಂಡಮಂಬಗೆವಂತೆಬಗೆದು ॥

ಮ ॥ ಪದುಳಂನಿಂದೆಡಗಯ್ಯೊಳೆತ್ತಿರಘುಜಂಕೊಪ್ಪಂಪದಾಂಗುಷ್ಠಮೂ ।
ಲದೊಳೊಟ್ಟೇಱಿಸೆಕಾಲದಂಡನಿಭಮಂಕೋದಂಡಮಂಭೂತಳಂ ॥
ಪದುಳಂನಿಂದುದೆಶೇಷಕಂಠಕಠಿಣಾಸ್ಥಿಶ್ರೇಣಿನುಗ್ಗಾರ್ಗದಿ ।
ರ್ದ್ದುದೆಕೂರ್ಮ್ಮಂನತಪೃಷ್ಠರಂನೆಱದುದೆಂಸಂಪತ್ತುದೇಂಮಾಣ್ದುದೇ ॥ 87

ಕಂ ॥ ಇವರ್ಮ್ಮರ್ಭರಂಗೆಯ್ದನಗೊಲೆ ।
ಗೋವರ್ಮ್ಮರ್ದಲೆತ್ತಿದನಗುರ್ವ್ವುಮೆಯ್ವೆತ್ತುದನಾ ॥
ಕಾಮರ್ಮ್ಮುಕಮಂರಘುವೀರನ ।
ದೋರ್ಮ್ಮಂಡಳಶಕ್ತಿಮನುಜಸಾಧಾರಣಮೇ ॥ 88

ಮ ॥ ಪುಳಕಂಜಾನಕಿಗುತ್ಸವಂಜನಕರಾಜಂಗುಮೋಳಂಖೇಚರಾ ।
ವಳಿಗುದ್ವೇಗಭರಂನರೇಂದ್ರಸುತಸಂದೋಹಕ್ಕೆಸಂಮೋಹನಂ ॥
ಲಲನಾಶ್ರೇಣಿಗೆವಿಸ್ಮಯಂಪುರಜನಕ್ಕಾಕರ್ಷಣಂಲೋಚನಾ ।
ವಳಿಗಾಯ್ತೇಱಿಸಿನೀವಿಜೇವೊಡೆಯೆವಜ್ರಾವರ್ತ್ತಮಂರಾಘವಂ ॥ 89

ವ ॥ ತದನಂತರಂ ॥

ಮ ॥ ಸಮದಂಲೀಲೆಯಿನೆತ್ತೆಖೇಚರವದಂಕಿತ್ತೆತ್ತಿಪಾರಿತ್ತನು ।
ಕ್ರಮದಿಂದಾನತಮಾಗೆಕೊಳ್ವಪಿರಿದುಂಲಜ್ಜಾನತಂರಾಜಲೋ ॥
ಕಮಣಂಬೆಕ್ಕಸಮುತ್ತುದೇಱಿಸುವುದುಂಕೋದಂಡಮಂರಾಮನ ।
ಕ್ರಮದಿಂಮನ್ಮಥನಾಗಳೇಱಿಸದೆವಾಱೆಚ್ಚಂಪುರಸ್ತ್ರೀಯರಂ ॥ 90

ಕಂ ॥ ಅವತಂಸವಾದುವವರ ।
ಸ್ತವನಂಗಳ್ಸಕಳಜನಪಜಯಜಯನಿನದಂ ॥
ರ್ವಿಶಬ್ದಂಗಿಡಿಸಿದುವು ।
ತ್ಸವಪಟಹಧ್ವನಿಗಳುಣ್ಮಿಪೊಣ್ಮಿದುವಾಗಳ್ ॥ 91

ಎತ್ತಿದುದುಮಂಗಳಧ್ವಜ ।
ವೆತ್ತಿದುದುಸಿತಾತಪತ್ರವಾಗಸಮಂಪೊ ॥
ತೆತ್ತಿದುದಾರ್ವ್ವದಂ ।
ಮುತ್ತಿನಸೇಸೆಗಳನಿಕ್ಕಿದವರ್ಮ್ಮಾನಿನಿಯರ್ ॥ 92

ವ ॥ ಆಗಳಾಬಳನದೋರ್ವ್ವಳಕ್ಕೆಕಂಚುಕಿರೋಮಾಂಚಕಂಚುಕಿತಶರೀರೆಯಾಗಿಜಾನ
ಕೀದೇವಿಯನಿಜಮನೋರಥಂಸಫಲವಾದುದಿದುವೆಪುಣ್ಯಾವಹಸಮಯಮಖಿಲರಾಜ
ಕುಲಶೇಖರನಂಕುಸುಮಶೇಖರನಂಮಾಳ್ಪುದೆಂದುಬಿಂನವಿಸೆ ॥

ಉ ॥ ಆವೆಡೆಹಂಸಿನೀನಡೆಯುಚೆಲ್ವಿನೆನೂಪುರದಿಂಚರಂಸ್ಮರಂ ।
ಜೇನ್ನೊಡೆದಂದಮಾಗೆಮೃದುಪಾದತಳಂಗಳಕೆಂಪುಕೂಡೆಕೆಂ ॥
ದಾವರೆಪೂಗಳಂಕೆದಱುವಂತಿರೆಕುಂತಳಸೌರಭಕ್ಕೆ ಭೃಂ ।
ಗಾವಳಿಮೇಲೆಪೀಲಿದಳೆಯಂತಿರೆಬಂದಳದೊಂದುಲೀಲೆಯಿಂ ॥ 93

ಕಂ ॥ ಅಲರ್ಗಣೆಯನಂಗಜಂಗೀ ।
ಯಲೆಂದುರತಿಬರ್ಪ್ಪವೊಳ್ಕೆಯಿಂಮಾಲೆಯನಾ ॥
ಲಲಿತಾಂಗಿಪಿಡಿದುಕಣ್ಗಂ ।
ಕೆಲಕ್ಕಮಾದಾಶರಥಿಯಬಗೆಗಂಬಂದಳ್ ॥ 94

ವ ॥ ಅಂತುಬಂದು ॥

ಉ ॥ ಮಾಲೆಯಮೇಲೆತುಂಬಿಗಳಮಾಲೆತೆಱಂಬೊಳೆದಾಡೆಬೇಱಿಪೂ ।
ಮಾಲೆಯಲೀಲೆಯಂಕೆದಱಿಕೇಕರಮಾಲೆಸಿರೀಷಮಾಲೆಯಂ ॥
ಸೋಲಿಸೆನೀಳ್ದಬಾಹುಲತೆತೋಳಮೊದಲ್ಮದನಾನುರಾಗಮಂ ।
ಸಾಲಿಡೆಸಾರ್ದ್ದಸೀತೆರಘುವಂಶನಮೇರುಗೆಮಾಲೆಸೂಡಿದಳ್ ॥ 95

ಮ ॥ ಸ್ರ ॥ ತನುಸೋಂಕಿಂಮೆಯ್ಗೆ ರೋಮಾಂಚಮನೊದವಿಸಿರಾಮಂಗೆವೈದೇಹಿನೀರೇ ।
ಜನಿಸರ್ಗ್ಗಮೋದಗಂಧೋದಕಸವನಮನಿತ್ತಳ್ಕೆಱಿಂಬಾಹುಮೂಲಂ ॥
ಸ್ತನಮೂಲಂನಾಭಿಮೂಲಂತ್ರಿಗುಣಿಸೆಸುಮನಃಶೇಖರಂಮಾಡಿಕಂದ ।
ರ್ಪ್ಪನವಾಮೋಪಾಂತದೊಳ್ರಂಜಿಸುವರತಿಯಸೌಂದರ್ಯ್ಯಮಂಸೂಱೆಗೊಂ
[ಡಳ್ ॥ 96

ಕಂ ॥ ಬಲದೇವಂಗೇನ್ವದೊಪಂ ।
ಬಲವಾತನೊಳಾದಮೋಹದಿಂಕೃಷ್ಣಂದೋ ॥
ರ್ವ್ವಲದೃಷ್ಟಂಗೆಣಿಸಿದರಂ ।
ಕೊಲಲುಂಗೆಲಲುಂಕಡಂಗಿಪಿಂದನೆಬಂದಂ ॥ 97

ಆಕಾರಮಲ್ತುವಜ್ರ ।
ಪ್ರಾಕಾರಮಿದೆನಿಸಿಲಕ್ಷ್ಮಣಂಬರೆಚಾಪಂ ॥
ವೈಕುರ್ವ್ವಣವಿಷಮಫಣೀಂ ।
ದ್ರಾಕೃತಿಯಂಬಿಟ್ಟುಮಟ್ಟುವಿರ್ದ್ದತ್ತಾಗಳ್ ॥ 98

ಗರುಡೋದ್ಗಾರಮಣಿಚ್ಛವಿ ।
ಗರುಡಧ್ವಜನೆನಿಪಕೃಷ್ಣನಿದಿರೊಳ್ಧನುತಂ ॥
ಉರಗಾಕಾರಮನುಪಸಂ ।
ಹರಿಸಿನಿಜಾಕೃತಿಯಿನಿರ್ಪ್ಪುದೊಂದಚ್ಚರಿಯೇ ॥ 99

ವ ॥ ಅಂತುಬಂದು ॥

ಚ ॥ ನಗಧರನೆತ್ತನೇಧನುವನೇಱಿಸನೇನಗಸಾನುಕೂಟಮಂ ।
ಪಗೆವರನೇಱಿಸಲ್ಕೆ ಜಿವೆಲಂಘ್ಯಬಲಂಬಲಗರ್ವ್ವದಿಂದದಂ ॥
ಬಗೆದನೆಪುರ್ಬ್ಬನೇಱಿಸುವವಮೊಳ್ಕೆಯಿನಶ್ರಮದಿಂಪೊಡರ್ಪ್ಪುಕೈ ।
ಮಿಗೆರಿಪುಮರ್ದ್ದನಂಧನುವನೆತ್ತಿದನೇಱಿಸಿದಂಜನಾರ್ದ್ದನಂ ॥ 100

ಪೃಥ್ವಿ ॥ ಪರಾಭವಿಸಿದಂಗುಣಪ್ರಗುಣಚಂಡಕೋದಂಡದಿಂ ।
ಪರಿಸ್ಫುರಿತಪಂಚರತ್ನರುಚಿಸಾಗರಾವರ್ತ್ತದಿಂ ॥
ವಿರೋಧಿಬಳದೈತ್ಯವೀರರಸಸಾಗರಾವರ್ತ್ತದಿಂ ।
ಸುರೇಂದ್ರಧನುಮೂಡಿದಂಬರಮನಂದುಪೀತಾಂಬರಂ ॥ 101

ಚ ॥ ಉದಧಿಕಲಂಕಿದತ್ತುದೆಸೆತಲ್ಲಣಿಸಿತ್ತಮರಾದ್ರಿಗಾಳಿಗೊ ।
ಡ್ಡಿದಸೊಡರಂತೆಸಂಚಲಿಸಿದತ್ತುನೆಲಂನಡುಗಿತ್ತುದಿಗ್ಗಜಂ ॥
ಮದವುಡುಗಿತ್ತುಖೇಚರಬಲಂಬೆಳಱಿತ್ತುಕಱುತ್ತುದಿವ್ಯಚಾ ।
ಪದತಿರುವಾಯ್ಗೆದಿವ್ಯಶರಮಂತರೆದೋರ್ವ್ವಲಶಾಲಿಲಕ್ಷ್ಮಣಂ ॥ 102

ಕರಕಮಲಂಗಳಂಮುಗಿದುಲಕ್ಷ್ಮಣದೇವಶರಣ್ಯನೆಂಬದೇ ।
ವರನುಡಿಪೊಣ್ಮಿದತ್ತಲರವೇರ್ಮ್ಮಳೆಕೊಂಡುದುದೇವದುಂದುಭಿ ॥
ಸ್ವರವೊದಗಿತ್ತವಕ್ಕಗಿದುಖೇಚರರಾಜಮಹತ್ತರಂಭೆಯಾ ।
ತುರನೆಮೆಯಿಕ್ಕದೆಂಟನೆಯಕೇಶವನಂಪಜಗಾಗಿನೋಡಿದಂ ॥ 103

ಕಂ ॥ ಅದಟಂವಜ್ರಾವರ್ತ್ತ ।
ಕ್ಕೆದಿವ್ಯಮೆನಿಸಿದಹಲಾಯುಧಂಬೆರಸುಬಲಂ ॥
ಗದೆವೆರಸುಸಾಗರಾವ ।
ರ್ತ್ತದಿವ್ಯಚಾಪಕ್ಕುಪೇಂದ್ರನಧಿಪತಿಯಾದಂ ॥ 104

ಚಂದ್ರಾಸ್ಯೆಯುರಂಮನದೊಳು ।
ಪೇಂದ್ರಂಗೀರೊಂಬದಿಂಬರಂನಿಜ್ಜರ್ತದೇ ॥

ವೇಂದ್ರಗಣಿಕೆಯರನಂಕದ ।
ಚಂದ್ರಧ್ವಜನ್ಗೆ ಕಪ್ಪಮೀವವೊಲಿತ್ತಂ ॥ 105

ವ ॥ ಆಗಳನೇಕಾರ್ಚ್ಚನೆಗೞ್ಗೊಂಡನುಯುರ್ಯ್ಯಗಳಮಂಜನಕನಟ್ಟಿಸುವುದುಂ ॥

ಕಂ ॥ ಅನರಣ್ಯಸುತಂದಶರಥ ।
ಜನಪತಿಕರಿಘಟೆಯೊಳಶ್ವದಳದೊಳುಪೇಂದ್ರಂ ॥
ಜನಕತನೂಜೆಯುಮಂರಾ ।
ಮನುಮಂಮುಂದಿಟ್ಟುಮಿಥಿಳೆಗಭಿಮುಖರಾದರ್ ॥ 106

ವ ॥ ಅಂತುಸ್ವಯಂಬರಶಾಲೆಯಿಂತಳರ್ವ್ವುದುಂ ॥

ಉ ॥ ಅಟ್ಟಳೆಯಂಪಳಂಚಿಪುರಗೋಪುರಮಂಪರಿದೇಱಿಕೋಂಟೆಯಂ ।
ಮೆಟ್ಟಿಸುಧಾಗೃಹಾವಳಿಗೆಲಂಘಿಸಿಹರ್ಮ್ಯತಳಕ್ಕೆವಾಯ್ದುಬೞೆ ॥
ವಟ್ಟಮನೆಯ್ದಿದೇವಕುಲದಾದಲೆಯಿಂಗಗನೋದರಕ್ಕೆದಿಂ ।
ಕಿಟ್ಟಿದುದುಂದುಭಿಸ್ವನಮನೇೞಿಸಿಘೋಂಕನೆಶಂಖನಿಸ್ವನಂ ॥ 107

ವ ॥ ಆಗಳಾಪುರಜನಂಗಳುತ್ತುಂಗಮಾಟಕೂಟಪ್ರಾಸಾದಂಗಳನೇಱಿ ॥

ಚ ॥ ತಲೆವರಿದಾನೆಸುತ್ತಿಪಲವುಂಬರೆತಳ್ತಿರೆಮೇಘಡಂಬರಂ ।
ಲಲನೆಯರಿಕ್ಕೆಚಾಮರಮನಿಕ್ಕೆಅದಾನೆಯಪುಷ್ಪಕಂಗಳೊಳ್ ॥
ನೆಲಸಿಕುಳಾಚಳಾಕೃತಿಯನೇಱಿಗಜೇಂದ್ರಮನಿಂದ್ರನಂತೆಬ ।
ರ್ಪ್ಪಲಘುಪರಾಕ್ರಮಂದಶರಥಂಪರಿಪೂರ್ಣ್ಣಜಗನ್ಮನೋರಥಂ ॥ 108

ವನಧಿತರಂಗದಂತಿರೆತುರಂಗದಳಂಬರೆವಾಜಿರಾಜವ ।
ಲ್ಗನದಿನುರಸ್ಥಲಂಬಿಡಿದಲಕ್ಷ್ಮಿಯಕೇಕರದಂತೆತೋಱುಮು ॥
ತ್ತಿನತಿಸರಂತೆಱಂಬೊಳೆಯೆಮಿಂಚಿನವೊಲ್ಮಣಿಕುಂಡಲಾಂಶುಗ ।
ಳ್ತೊನೆಯೆಕದಂಪಿನೊಳ್ಮದನನಂತಿರೆಬರ್ಪ್ಪವನಲ್ತೆಲಕ್ಷ್ಮಣಂ ॥ 109

ಮ ॥ ತನುಸೋಂಕಿಂತನಗೀಯೆಹರ್ಷಭರಮಂಲಜ್ಜಾರಸಾಕುಂಚಿತಾ ।
ನನೆವೈದೇಹಿತದೀಯಕುಂತಳಸಹಸ್ರಕ್ಕಿತ್ತುತಿರ್ಯ್ಯಗ್ವಿಳೋ ॥
ಕನಮಂಹೇಮವರೂಥದೊಳ್ನೆಲಸಿನೇತ್ರಾನಂದಮಂಮಾಳ್ಪರೂ ।
ಪಿನಚೆಲ್ವಿಂಮದನಂಗೆಲಾಘವಮನಿತ್ತಾಬರ್ಪ್ಪವಂರಾಘವಂ ॥ 110

ಚಳನೀಳಾಚಲರತ್ನಕೂಟಮೆನೆಕಾಲ್ಗೆದಾನೆಯಂದೋಱುರ್ಬ್ಬಿಜಂ ।
ಗಲತಾದಂಷ್ಟ್ರಿಕೆಕಣ್ಗೆಗುರ್ವ್ವಿಸುವಿನಂವಜ್ರಾಂಕುಶಂಮೌಕ್ತಿಕಾ ॥
ವಳಿವಕ್ಷಸ್ಸರಸೀಮೃಣಾಳಿಕೆಪೆಡಂಗಂಬೇಱೆಚಂದ್ರಾರ್ಕ್ಕರಂ ।
ಗೆಲೆವಂದಾಬರುತಿರ್ಪ್ಪವರ್ಬ್ಭರತಶತ್ರುಘ್ನರ್ಪ್ಪುರೋಭಾಗದೊಳ್ ॥ 111

ವ ॥ ಎಂದುಪುರಜನಪರಿಜನಂಗಳೋರೋರ್ವ್ವರೊಳ್ನುಡಿಯೆಪುರಮಂಪೊಕ್ಕುಕರುಮಾಡದಮುಂದಣವಿವಾಹಮಂಡಪದಮುಂದೆವಾಹನಂಗಳಿನಿೞಿದು ಪುಣ್ಯಪುಣ್ಯಾಂಗನಾಜನದತಳಿವಸಜಳಧವಳ ಕಳಮಾಕ್ಷತಂಗಳನಳಕವಲ್ಲರಿಯಂ ಕುಸುಮಿಸುತ್ತುಮೊಳಪುಗುವುದುಂ ॥

ಮ।ಸ್ರ॥ಹರಿನೀಲಸ್ತಂಭಮಂಹಾಗದಪಡಲಿಗೆಯುಂತುಂಗಭೃಂಗಾರಮುಂನೆ ।
ಮ್ಮಿರೆಭಾಸ್ವದ್ಭಿತ್ತಿಯಂಸುತ್ತಿರೆಸುರುಚಿರಚಿತ್ರಂಹರಿದ್ರತ್ನಮಧ್ಯಾ ॥
ಜಿರಮಂಮುಕ್ತಾವಳೀರಂಗವಲಿಬಳಸೆಕರ್ಕ್ಕೇತನದ್ವಾರಶಾಖಾಂ ।
ತರಮಂರತ್ನಸ್ಫುರತ್ತೋರಣವೆಳಸೆಪೆಡಂಗಾದುದುದ್ವಾಹಗೇಹಂ ॥ 112

ಕಂ ॥ ಸುರದಂಪತಿಗಳವಿದ್ಯಾ ।
ಧರದಂಪತಿಗಳನರೇಂದ್ರದಂಪತಿಗಳಕಿಂ ॥
ನರದಂಪತಿಗಳವಿದ್ಧಂ ।
ವಿರಾಜಿಸಿತ್ತದಱಪೊಳೆವಪಳುಕಿನಕೇರೊಳ್ ॥ 113

ಪುರುಜಿನಚರಿತಂಭರತೇ ।
ಶ್ವರಚರಿತಂಸಗರಚಕ್ರವರ್ತ್ತಿಯಚರಿತಂ ॥
ಹರಿವಂಶವೀರಪುರುಷರ ।
ಚರಿತಂಬರೆದಿರ್ದ್ದುವಲ್ಲಿಕೆಲಕೆಲವೆಡೆಯೊಳ್ ॥ 114

ಆಮೋದಮುದಿತಮಧುಕರ ।
ದಾಮಕದೊಳ್ನೀಲರತ್ನದಾಮಂಮಲ್ಲೀ ॥
ದಾಮಕದೊಳ್ಮುಕ್ತಾಫಲ ।
ದಾಮಂತೊಡವಾದುವೊಡನೆಮಣಿಮಂಡಪದೊಳ್ ॥ 115

ಆಳಂಬಿತಮಣಿಘಂಟಾ ।
ಜಾಳಕದೆಡೆಯೆಡೆಯೊಳೆಳಲೆಕಟ್ಟಿದಮುಕ್ತಾ ॥

ಮಾಳಿಕೆಯಂನವವಿಚಕಿಳ ।
ಮಾಳಿಕೆಗೆತ್ತಳಿಸುಳಿವುವಳಿಕಳಭಂಗಳ್ ॥ 116

ಮಂಗಳಗಾಯಿನಿಯರ್ಗೆ ।
ತಂಗಳನುಪಹಾರಕುಸುಮಮಧುಪಾನವ್ಯಾ ॥
ಸಂಗದೊಳಿರ್ದ್ದಳದುಂಬಿಗ ।
ಳಿಂಗೊರಲಿಂಮಡಿಸಿದತ್ತುರಾಜಾಂಗಣದೊಳ್ ॥ 117

ಪಳುಕಿನಕಂಭಂಗಳ್ಕ ।
ಣ್ಗೊಳಿಸುವಮಾಣಿಕದಸೊಡರ್ಗಳಿಂನಾಡೆಮನಂ ॥
ಗೊಳಿಸಿದುವುಲಸಿತಭಸಿತೋ ।
ಜ್ವಳಗಾತ್ರಂಸ್ಥಾಣುನೊಸಲಕಣ್ದೆಱೆದವೋಲ್ ॥ 118

ಅರುಣಮಣಿದೀಪರುಚಿಯಿಂ ।
ಪರಭಾಗಂಬಡೆದನೀಳರತ್ನಸ್ತಂಭಾಂ ॥
ತರದಬಳಾಪ್ರತಿಬಿಂಬಂ ।
ಸಿರಿನೆಂಮಿದಳೆನಿಸಿದತ್ತುಪೀತಾಂಬರನಂ ॥ 119

ಚ ॥ ಉಗುಳ್ದಪುದಿಂದ್ರಚಾಪಲತೆಯಂನವರತ್ನವಿತಾನವಾಡಿದ ।
ತ್ತಗರುವಧೂಪಧೂಮಲತೆತುಂಬಿಯನೀಲದಮೆಯ್ಗೆಹಾಸ್ಯಮಂ ॥
ಪಗಲನಿರುಳ್ಗೆಮಾಣಿಕದದೀವಿಗೆಕೈಸೆಱೆಗೊಟ್ಟುದುತ್ಪತಾ ।
ಕೆಗಳನಿಲಂಗೆಮಾಡಿದುವುಮಾರ್ಗ್ಗನಿರೋಧಮನಾನಿವಾಸದೊಳ್ ॥ 120

ವ ॥ ಆಮಂಟಪದಮಧ್ಯಪ್ರದೇಶದೊಳ್ ॥

ಕಂ ॥ ಮರಕತಮಂಗಳವೇದಿಕೆ ।
ಧರಾಂಗನಾಕೇಶಬಂಧದಂತಿರೆಮುಕ್ತಾ ॥
ವಿರಚಿತರಂಗವಲಿಮನೋ ।
ಹರವಾದುದುತೊಳಗಿಪೊಳೆವತಲೆದುಡುಗೆಯವೋಲ್ ॥ 121

ಪಸುರ್ವರಲಜಗಲಿಯೊಳ್ಕರಂ ।
ಜಸಿದುದುಕಂಬೊಂನಪಟ್ಟವಣೆಪಸುರೆಲೆಯಿಂ ॥

ಮುಸುಕಿದತಾವರೆಗೊಳದೊಳ್ ।
ಪಸುರ್ಗಳೆಗುಮರಲ್ದರಲ್ದ ಪೊಂದಾವರೆವೋಲ್ ॥ 122

ಎಳಅಡಕೆಯಗೊನೆಯಿಂಮಾ ।
ತುಳುಂಗದಿಂನಾಳಿಕೇರಫಲದಿಂದ್ರಾಕ್ಷಾ ॥
ಫಲದಿಂಕಾಂಚನಕದಳೀ ।
ಫಲದಿಂದೊಪ್ಪಿದುದುವೇದಿಕಾಂತರ್ಭಾಗಂ ॥ 123

ಮ ॥ ಬಿಸಸೂತ್ರತ್ರಿತಯಂಯವಾಂಕುರಕೃತಗ್ರೈವೇಯಕಂಪಲ್ಲವೋ ।
ಲ್ಲಸಿತಾದರ್ಶಸುದರ್ಶನೀಯಮಮಲಸ್ರಕ್ಸುಂದರಂಪಂಚರ ॥
ತ್ನಸಮಸ್ತೌಷಧಿಗರ್ಭವಕ್ಷತಯುತಂದೂರ್ವಾಂಚಿತಂಸರ್ವಥಾ ।
ನ್ಯಸಮುತ್ತಂಭಿತಪೂರ್ಣಕುಂಭಮೆಸದತ್ತಾವೇದಿಕಾಮಧ್ಯದೊಳ್ ॥ 124

ಅನುರೂಪಂಸ್ಫಟಿಕಾಬ್ಜದೊಳ್ದಧಿಸುವರ್ಣಕ್ರೌಂಚದೊಳ್ರೋಚನಂ ।
ಘನಹಾರೀತಕಹಂಸಿಯೊಳ್ಹರಿತದೂರ್ವಾಂರಾಜತದ್ರೋಣಿಯೊಳ್ ॥
ಘನಸಾರಂಹರಿನೀಲಶುಕ್ತಿಕೆಗಳೊಳ್ಕಸ್ತೂರಿಮಾಣಿಕ್ಯಭಾ ।
ಜನದೊಳ್ಕುಂಕುಮಪಂಕಮೇಂಮೆಱೆದುವೋಮಾಂಗಲ್ಯಸಾಕಲ್ಯಮಂ ॥ 125

ಕಂ ॥ ಮಿಸುಗುವಕೆಂದಳಿರಂದ್ವಿಗು ।
ಣಿಸಿಮೇಗೊಗೆವಂಶುಮಾಳವೇದಿಕೆಯೊಳೆರಂ ॥
ಜೆಸಿದುವೆಳನೇಸಱಿಂನೆನೆ ।
ಮಿಸುವಚತುಃಕೋಣಶೋಣಮಣಿಕಳಶಂಗಳ್ ॥ 126

ವ ॥ ಆಸಕಳಮಂಗಳದ್ರವ್ಯಸಂಸೇವ್ಯಮಾನಮಣಿವೇದಿಕಾಮಧ್ಯವಿಶಾಲಕಲಧೌತಪೀಠ
ದೊಳ್ರತಿಯುಂರತಿಪತಿಯುಮಿರ್ಪ್ಪವೋಲ್ದಂಪತಿಗಳಿರ್ದ್ದರಲ್ಲಿಪೂರ್ವಭಾಗದೊಳ್
ದಶರಥನಿಂದ್ರನಂದದಿನುಪೇಂದ್ರಭರತಶತ್ರುಘ್ನಸಮನ್ವಿತನುಮನೇಕಮಕುಟಬ
ದ್ಧಪರಿವೃತನುಮಾಗಿರ್ದ್ದಂಮತ್ತಮಪರಭಾಗದೊಳಪರಾಜಿತಾಮಹಾದೇವಿಸುಮಿ
ತ್ರೆಸುಪ್ರಭೆಕೈಕೆವೆರಸನಂತಸಾಮಂತಸೀಮಂತಿನಿಯರನಡುವೆ ಸುರಪುರಂಧ್ರಿಯ
ರ್ಬ್ಬಳಸಿದಿಂದ್ರಾಣಿಯಂತೆಮಹಾಮಹಿಮೆವೆತ್ತಿರ್ದ್ದುದುಮಿತ್ತಲ್ ॥

ಉ ॥ ರಂನದಬಾಯಿನಕ್ಕೆಪಲವೆಂದದಚಂದದಸೀರೆಗೆಂನವ ।
ರ್ತ್ತಂನವರೆಂನದಿತ್ತೊಸಗೆನೆಲದೊಳ್ಪೊಱಗಾರುಮಿಲ್ಲೆನೆ ॥

ಲ್ಕಂನಿಸಿಮೈಮೆಯುಂಮೆಱೆದಳಂದುವಿದೇಹಿವಿವಾಹಗೇಹದೊಳ್ ।
ಸಂನಿದವಾದಕಲ್ಪಲತೆಯೋಸುರಧೇನುವೋವೇೞ್ವೆಮೆಂಬಿನಂ ॥ 127

ವ ॥ ಅಂತಪಾರಪುಣ್ಯಪುಣ್ಯಾಂಗನಾಜನಕ್ಕೆ ಪಂಚರತ್ನದುಪಾಯನವನಿತ್ತು ಪಳಂಚಿ ನುಂಗುರದನೂಪುರದನೂಲತೊಂಗಲಿನಸಂಕಲೆಯಪಿಂಡುಗಂಕಣದಕಳಕಳನಿನದ ವತನುಚಾಪಲತಾಟಂಕಾರಶರ ಮೋಕ್ಷಹೂಂಕಾರದಂತೆಕಿವಿಶಬ್ದಂಗಿಡಿಸೆಕಡೆಗಣ್ಣ ಕಾಂತಿಕುಡುಮಿಂಚಿನಗೊಂಚಲಂತೆ ಸಂಚಲಿಸೆಪೆಂಡವಾಸದವಿಳಾಸಿನೀಜನಂಗಳಂಗ ಜಪಂಗವಲತೆಯುಂಸುತ್ತಿದೆಳಲತೆಗಳೆನೆವಿವಿಧೋಪಾಯನರತ್ನಪಟಲಿಕೆಗಳಂಪಿಡಿ ದೊಡನೆಬರೆಬಂದು ॥

ಉ ॥ ಕತ್ತಱಿಜೊಟ್ಟನಿಟ್ಟುಬಿಡುಮುತ್ತಿನಸೇಸೆಯನಿಕ್ಕಿಮಾಲೆಪೂ ।
ವೆತ್ತಿವಿಚಿತ್ರವಸ್ತ್ರಮಣಿಭೂಷಣಮಂಮಣಿಭಾಜನಂಗಳಿಂ ॥
ದಿತ್ತುವಿದೇಹಿಸಾರಘನಸಾರದರಂನದಬಾಯಿನಂಗಳಂ ।
ಚಿತ್ತವಿಕಾಸಮಂಪಡೆದಳಂದಪರಾಜಿತೆಗಂಸುಮಿತ್ರೆಗಂ ॥ 128

ವ ॥ ಆಸಮಯದೊಳ್ಜನಕನಭಿಜನಸನಾಭಿಜನಸಮನ್ವಿತಂಗಣಕಗಣ ಪುನಃಪುನರುಚ್ಚರಿತಪುಣ್ಯಾಹಪ್ರಶಸ್ತರವದೊಡನಗಣ್ಯಪುಣ್ಯಪುಣ್ಯಾಂಗನಾಜನದಾಸೀವಾರ್ವ ದನಾದವೊದವೆಯುಂಮಾಂಗಲ್ಯಗೀತಮಧುರಧ್ವನಿಗಳೊಡನೆಮಂಗಳಪಾಠಕಪಠ ನಧ್ವನಿಗಳುಣ್ಮೆಪೊಣ್ಮೆಯುಂರಘುಕುಲರಾಜಭವನಕಲಶೋದ್ಧರಣಮೆನಿಸಿದರಾಮ ಚಂದ್ರಂಗೆಸುರುಚಿರಸುರಭಿಸಲಿಲಪೂರ್ಣ್ಣಸುವರ್ಣ್ಣಕಲಶಮನೆತ್ತಿಕೊಂಡು ॥

ಮ ॥ ಜಗತೀಜಂಗಮಕಲ್ಪವೃಕ್ಷಮಿದೆಕೈವಂದತ್ತೆನಲ್ಬಾಹುಜ ।
ಕೆಗಳೊಳ್ಪೊಂಗಳಸಂಮಾನಂಗೊಳಿಸೆಭೂಪಂತಂನಸಂತಾನವೃ ॥
ದ್ಧಿಗೆಪೊಯ್ಮ್ಮರೆಱೆವಂತೆಹರ್ಷ್ಷಪುಳಕಂಕೈಗಣ್ಮೆಹರ್ಷ್ಷಾಶ್ರುಕೈ ।
ವಿಗೆಕೈನೀರೆಱೆದಂಪಳಂಚೆದೆಸೆಯುಂಮಾಂಗಲ್ಯತೂರ್ಯ್ಯಸ್ವನಂ ॥ 129

ವ ॥ ಅಂತುಪಾಣಿಗ್ರಹಣಂಗೆಯ್ಸುವುದುಂ ॥

ಕಂ ॥ ತೆಂಕಣಗಾಳಿಯಸೋಂಕಿನೊ ।
ಳಂಕುರಿಸುವಚೂತಲತೆಯವೋಲ್ಕೆಂದಳಮಂ ॥
ಸೋಂಕೆಬಲಕರತಳಂಪುಳ ।
ಕಾಂಕುರಮೊದವಿದುವುಜಾನಕಿಯತನುಲತೆಯೊಳ್ ॥ 130

ಅಪಮಾನಿಸಿದಂಬಾಲಾ ।
ತಪಮೊಳಸಿದಪುಂಡರೀಕಷಂಡದಸೊಬಗಂ ॥

ಚಪಳಾಕ್ಷಿಯಕೋಮಳಪಾ ।
ಣಿಪಲ್ಲವಸ್ಪರ್ಶಹರ್ಷದಿಂರಘುರಾಮಂ ॥ 131

ಅತಿಲಲಿತಾಕೃತಿಯಿಂದಂ ।
ಪತಿಯಂನೋಡಿದುದುಪುರಜನಂನೋಡುವವೊಲ್ ॥
ಶತಮಖನಂಶಚಿಯಂರತಿ ।
ಪತಿಯಂರತಿಯಂಹಿಮಾಂಶುವಂರೋಹಿಣಿಯಂ ॥ 132

ವ ॥ ಅಂತುನೆರೆದುನೋೞ್ಪಾಗಳ್ ॥

ಕಂ ॥ ಅನುವಿಸಿದುದುರಜತಾಚಳ ।
ದನರ್ಘ್ಯಮಣಿವಿಕಟಕೂಟಮಂದಶರಥರಾ ॥
ಮನಮಣಿಮಯಮಕುಟಂಕಾ ।
ಮನಬಿಲ್ಲಂಬೀಱಿಬೀಱಿನಿಜದೀಧಿತಿಗಳ್ ॥ 133

ಮರಕತಮಣಿಕುಂಡಲರೆ ।
ಶ್ಮಿರೇಖೆಯಿಂಗಂಡಮಂಡಲಂಸೇವಾಳಂ ॥
ಪೊರೆದಸಿತಕಮಲದಂತಿರೆ ।
ಕರಮೆಸೆದಂನೃಪಕುಮಾರಚೂಡಾರತ್ನಂ ॥ 134

ಜಯಲಕ್ಷ್ಮಿಯಮಣಿಪೀಠಂ ।
ಭಯಾನತಕ್ಷತ್ರವಜ್ರಪಂಜರಮಿವೆನ ॥
ಲ್ನಯನೋತ್ಸವಮಂಪಡೆದುವು ।
ಜಯದೀಕ್ಷನಬಾಹುಯುಗಳದಂಗದಯುಗಳಂ ॥ 135

ಉಭಯಪ್ರಕೋಷ್ಠಶಾಖಾ ।
ಸುಭಗಧನುರ್ಗುಣಕಿಣಂಗಳಂಮಣಿಮುದ್ರಾ ॥
ಪ್ರಭೆಯುಂಗೆಲೆವಂದುವುಬಾ ।
ಹುಭುಜಂಗನಕೊರಲಕಚಿಯಘಣಮಣಿರುಚಿಯಂ ॥ 136

ಜಲಬುದ್ಬುದಮಾಲೆಗಳವಿ ।
ಚಲಂಗೞಂಗಡಲಮಡುವಿನೊಳ್ಪೊಳೆವವೊಲೇಂ ॥
ಪೊಳೆದುವೊನಿಸ್ತುಲಮುಕ್ತಾ ।
ವಳಿಗಳ್ಜಲಧರವಿಶಾಲವಕ್ಷಸ್ಥಲದೊಳ್ ॥ 137

ಉ ॥ ಪಿಂಗಿದುದಂಗಜಂಗೆಕಡುಗಾಡಿಯಗರ್ವಮಪೂರ್ವಸೃಷ್ಟಿಬೆ ।
ಳ್ವಿಂಗಿನಿತೆಡ್ಡಮಪ್ಪರೆಫಣೀಂದ್ರಸುರೇಂದ್ರಕುಮಾರರೆಂದುಕ ॥
ಣ್ಪಿಂಗದೆಪತ್ತೆಚಿತ್ತದೊಡನೀಕ್ಷಿಸಿದತ್ತುಪುರಾಂಗನಾಜನಂ ।
ಮಂಗಳಭೂಷಣಪ್ರಜೆಯದಿಂದಭಿರಾಮನೆನಿಪ್ಪರಾಮನಂ ॥ 138

ರಾಜಕುಮಾರರಿಕ್ಕೆಸುರರಾಜಕುಮಾರಕರೊಳ್ಮನುಷ್ಯಕ ।
ನ್ಯಾಜನಮಿಕ್ಕೆ ಮಿಕ್ಕಸುರಕನ್ನೆಯರೊಳ್ದೊರೆಯಪ್ಪರಾರೊಸೇ ॥
ಳೀಜಿತಕಂತುಗೀಜಿತಮನೋಭವಕಾಂತೆಗೆನುತ್ತುಮಂಗನಾ ।
ರಾಜಿನಿರೀಕ್ಷಿಸಿತ್ತುರಘುನಂದನನಂಜನಕಾತ್ಮಜಾತೆಯಂ ॥ 139

ಚ ॥ ತೊಡವುಗಳೀಸರೋಜದಳನೇತ್ರೆಯಮೆಯ್ವೊಳಗಿಂದುಪಾಶ್ರಯಂ ।
ಬಡೆದುವುನೋಳ್ಪರುಂಮಱಸುವಂತಿರೆರತ್ನವಿಭೂಷಣಂಗಳೀ ॥
ರ್ದ್ಗಡೆಯವಿಳಾಸಮಂಮಱಿಸಿದಪ್ಪುವೆನಲ್ತೊಡವಾಕೆಗೊಪ್ಪಮಂ ।
ಪಡೆವೆಡೆಗಲ್ಲವಾವಧುಗೆಮಂಗಳಕಾರಣಮಲ್ತೆಭೂಷಣಂ ॥ 140

ವ ॥ ಎಂದುಪುರಜನಂಗಳತಿಕುತೂಹಲದಿನವಲೋಕಿಸುತಿರ್ಪ್ಪುದುಮಾವಿವಾಹಮಂಗಳ
ಮಹೋತ್ಸವಮಹಾಮಹಿಮೆಯೊಳ್ ॥

ಮ।ಸ್ರ॥ನೆಱರಾರಿಂತೀವರಂಬೀಜನಕಕಳಕಳಂಪೊಣ್ಮೆಸಾಮ್ರಾಜ್ಯಚಿಹ್ನಂ ।
ಪೊಱಗಾಗತ್ಯಂತವಸ್ತ್ರಾದಿಗಳನಖಿಲಲೋಕಕ್ಕೆಸಂಕಲ್ಪವರುಷಂ ॥
ಕಱೆದತ್ತೆಂಬಂತುಧಾತ್ರೀಪತಿಜನಕನುದಾತ್ತಂಮಹೋತ್ಸಾಹಚಿತ್ತಂ ।
ನೆಱೆದತ್ತಿಲ್ಲಿಂನದಾನಕ್ಕಖಿಲಜನಮೆನುತ್ತುಂಮೊಗಂನೋಡದಿತ್ತಂ ॥ 141

ವ ॥ ಅಂತುಜನಕಂಬೀಯದಬಾಗದರೇರ್ಮ್ಮೆಯಂ ಮೆಱೆವುದುಂರಾಮಚಂದ್ರಂಚಂ
ದ್ರೋದಯದಸಮುದ್ರದಂತೆಪೆರ್ಚ್ಚುವಡೆದು ॥

ಮ ॥ ಪಡೆದಂಶಾಶ್ವತಲಕ್ಷ್ಮಿಯಂಪರಹಿತವ್ಯಾಪಾರಮಂಪಾಲಿಸ ।
ಲ್ಪಡೆದಂಪಂನಗರಾಜದಿವ್ಯಧನುವಂಭೂಚಕ್ರಮಂಪಾಲಿಸ ॥
ಲ್ಪಡೆದಂದರ್ಪ್ಪಕರೂಪದರ್ಪ್ಪಮನದಿರ್ಪ್ಪಲ್ಮೂರ್ತ್ತಿಯಂಕೀರ್ತ್ತಿಯಂ ।
ಪಡೆದಂಕೀಳ್ಪಡಿಸಲ್ಸುಧಾಜಲಧಿಯಂಸಾಹಿತ್ಯವಿದ್ಯಾಧರಂ ॥ 142

ಗದ್ಯ ॥ ಇದುಪರಮಜಿನಸಮಯಕುಮುದಿನೀಶರಚ್ಚಂದ್ರಬಾಲಚಂದ್ರಮುನೀಂದ್ರಚರಣ
ನಖಕಿರಣಚಂದ್ರಿಕಾಚಕೋರಂ ಭಾರತೀಕರ್ಣಪೂರಂಶ್ರೀಮದಭಿನವಪಂಪವಿರಚಿ
ತಮಪ್ಪರಾಮಚಂದ್ರಚರಿತಪುರಾಣದೊಳ್ಸೀತಾಸ್ವಯಂವರವರ್ಣನಂಪಂಚಮಾ
ಶ್ವಾಸಂ ॥

ಷಷ್ಠಾಶ್ವಾಸ ಪ್ರಾರಂಭಃ.

—:೦:—

ಕಂ ॥ ಶ್ರೀರಾಮಂವಿಶದಯಶ ।
ಶ್ರೀರಾಮಾರಮಣನರ್ತ್ಥಿಜನತಾಸುರಭೂ ॥
ಜಾರಾಮಂಧರ್ಮ್ಮೋದ್ಯಮ ।
ಧೌರೇಯನುದಾತ್ತಚಿತ್ತನಭಿನವಪಂಪಂ ॥ 1

ವ ॥ ಅಂತುರಾಮಲಕ್ಷ್ಮಣರೊಳಾದಿತೋದಿತಮಾದಗಣ್ಯಪುಣ್ಯಪ್ರಭಾವಮಂಕಂಡು ।

ಮ ॥ ಸಿರಿಯುಂಮೈಮೆಯುಮಾದುವಗ್ರಜರೊಳಾಯ್ತಿಲ್ಲೆನ್ನೊಳೆಂಬೇವದಿಂ ।
ಭರತಂಲೋಭರತಂವಿಷಾದಭರತಂದ್ರೀಭೂತಚಿತ್ತಂತಪೋ ॥
ಭರತೃಷ್ಣಾಪರನಪ್ಪುದಂತಿಳಿದುತದ್ವೃತ್ತಾಂತಮಂಕೈಕೆಮೋ ।
ಹರಸಂಕೈಮಿಗೆಕಾದಲಂಗೆಪತಿಗಂದಿಂತೆಂದಳೇಕಾಂತದೊಳ್ ॥ 2

ಕಂ ॥ ಭರತನವದನಾಂಭೋಜಂ ।
ಕೊರಗಿದುದುಮನಸ್ಸರೋಜದೊಡನೆತ್ತಾನುಂ ॥
ಪರಿಣಯನೋತ್ಸವಚಿಂತಾ ।
ಭರಮಾತನಬಗೆಗೆಬಂದುದಾಗಲೆವೇಳ್ಕುಂ ॥ 3

ಕನಕಂಗಂಸುಪ್ರಭೆಗಂ ।
ಜನಿಯಿಸಿದವಿಶಾಲನೇತ್ರೆಕನಕಪ್ರಭೆಯಂ ॥
ಜನನಾಥಮದುವೆಮಾಡಾ ।
ತನನಿರದೆತೊಡರ್ಚ್ತುಮೋಹಪಾಶದತೊಡರೊಳ್ ॥ 4

ವ ॥ ಎನೆಮನದೆಗೊಂಡುಜನಕನುಮಂಕನಕನುಮಂಬರಿಸಿ ॥

ಕಂ ॥ ಅನುಬಂಧಪರಂಪರೆಯಂ ।
ಜನಿಯಿಸಲೆಮಗರ್ತ್ಥಿಯಾದುದೀವುದುನಿಜನಂ ॥
ದನೆಯನನುರೂಪೆಯಂಮ ।
ತ್ತನೆಯಂಗೆನೆದಶರಥಂಗೆಕನಕಂನುಡಿದಂ ॥ 5

ಮುಂನವೆಭರತಂಗೀವೆಂ ।
ಕಂನೆಯನೆಂಬರ್ಪುಮನದೊಳೆರೆಮನದೊಳ್ಪಂ ॥

ಬಿಂನವಿಸಲಿರ್ದ್ದನಾಪಸ ।
ನಂನಿಂಮಡಿಪಸಸೆಬಯಕೆಕೂಡಿದುದೀಗಳ್ ॥ 6

ವ ॥ ಎಂದಂದಿನದಿನದೊಳ್ಮೌಹೂರ್ತ್ತಿಕನಿರೂಪಿತಶುಭಮುಹೂರ್ತ್ತದೊಳ್ ॥

ಕಂ ॥ ಇನಿವಿರಿದುವಿಭವಮಾದುದೆ ।
ಜನಕತನೂಭವೆಯಮದುವೆಯೊಳಮೆಂಬಿನೆಗಂ ॥
ಕನಕಪ್ರಭೆಯಂಪದಪಿಂ ।
ಕನಕಂಭರತಂಗೆಮದುವೆಮಾಡಿದನಾಗಳ್ ॥ 7

ವ ॥ ಆವಿವಾಹವಿಭವದೆಸಕಕ್ಕಮವರಭುಜಬಲದಮಸಕಕ್ಕಂವಿದ್ಯಾಧರಮಹತ್ತರಂವಿ
ಸ್ಮಿತಚಿತ್ತನಾಗಿಮಿಥಿಳೆಯಿಂರಥನೂಪುರಚಕ್ರವಾಳಪುರಕ್ಕೆಬಂದುನಿಜಪತಿಯನಿಂ
ದುಗತಿಯಂಕಂಡು ॥

ಚ ॥ ಗಣನೆಗಳಂಬಮಾಗೆಮೊದಲಿಂತುದಿಯೆಯ್ದೆತಗುಳ್ದುರಾಮಲ ।
ಕ್ಷ್ಮಣರಮಹತ್ವಮಂಮಹಿಮೆಯಂನೆಱೆಬಂಣಿಸೆಕೇಳ್ದುಖೇಚರಾ ॥
ಗ್ರಣಿಕಿಱಿದಾಯ್ತುನಂಮದೆಸೆಕೇವಲರಲ್ಲರವರ್ದ್ದಟಕ್ಕೆಕಾ ।
ರಣಪುರುಷತ್ರಿಖಂಡಭರತೋರ್ವ್ವಿಗೆವಲ್ಲಭರಾಗದಿರ್ಪ್ಪರೇ ॥ 8

ವ ॥ ಎಂದುಬಗೆಪದಱೆವಿದ್ಯಾಧರಾಧಿರಾಜನುಷಸ್ಸಮಯದರಾಜಮಂಡಲದಂತೆನಿಸ್ತೇಜ
ನಾಗಿರ್ಪ್ಪುದುಮಾಖಚರವಲ್ಲಭತನೂಭವಂಪ್ರಭಾಮಂಡಲಂಮನಃಕರಂಡದೊಳಾ
ಕನ್ಯಾರತ್ನಮಂತಳೆದು ॥

ಕಂ ॥ ಅಯ್ದುವಲರ್ಗಣೆಗಳ್ಕಡು ।
ಕೆಯ್ದುಸೆಮದನಂವಿಯೋಗಿಯೋಗಿಯತೆಱದಿಂ ॥
ದಯ್ದುಂವಿಷಯಸುಖಕ್ಕಂ ।
ಮೆಯ್ದುಗೆದಾಕೆಯನೆಬಿಡದೆಱಾನಿಸುತಿರ್ದ್ದಂ ॥ 9

ವ ॥ ಅಂತುಕನ್ಯಾಸಕ್ತಿಯಿಂಕನ್ಯಾಸಕ್ತನಾದಾದಿತ್ಯನಂತೆಪ್ರಭಾಮಂಡಳಂಹತಪ್ರಭಾ
ಮಂಡಳನಾಗಿ ವಸಂತಧ್ವಜನೆಂಬ ತಂನಸಹಚರಂಗೆ ಸೀತಾವಿರಹದಿಂದಾದತಂನಮ
ನೋವಿಷಾದಮನಱಿಪಿ ॥

ಕಂ ॥ ಆರಮಣಿಯಧರಮಣಿಯಸು ।
ಧಾರಸದಿಂದಲ್ಲದೆಂನಮನಸಿಜತಾಪಂ ॥

ತೀರದುತೀರ್ಚುವುದೆಂನಮ |
ನೋರಥಮನಿದಕ್ಕೆ ನೀನೆಸಖಸಾರಥಿಯೈ || 10

ವ || ಎಂಬುದುಮಾತನಕೆಲದೊಳಿರ್ದ್ದಬೃಹತ್ಕೇತುವೆಂಬವಿದ್ಯಾಧರನಿಂತೆಂದಂ ||

ಉ || ಪೋದುವುನಂಮಬಿಲ್ಗಳಿರಡುಂಜನಕಾತ್ಮಜೆಗಗ್ನಿಸಾಕ್ಷಿಯಿಂ |
ದಾದುದುರಾಮನೊಳ್ಮದುವೆಬಿಲ್ವಿಱಿದೆತ್ತುಬರ್ದುಂಕಿಪುಣ್ಯದಿಂ ||
ಪೋದಮಹತ್ತರಂಮಗುಳ್ದನಾಕೆಯಪಂಬಲೊಳಪ್ಪುದೇಂರಣಾ |
ಸ್ವಾದನಲಂಪಟನ್ನೆರೆದುಕಾದುವನಪ್ಪೊಡೆರಾಮಲಕ್ಷ್ಮಣರ್ || 11

ವ || ಎನಲೊಡಂ ||

ಕಂ || ಪುರ್ವ್ವಿನಗಂಟುಂಕಣ್ಣೊ |
ಳ್ಪುರ್ವ್ವಿದಕಿಸುಸೆರೆಗಳುಂಕಪೋಲಸ್ಥಲದೊಳ್ ||
ಕೊರ್ವ್ವಿದಪೆಮರ್ವನಿಯುಂಕರ |
ಮುರ್ವ್ವಿಸೆಮುನಿಸಿಂಕುಮಾರನಂದಿಂತೆಂದಂ || 12

ಉ || ಮಾನವರೆಂನೊಳಯ್ಯಕಲಿಗಳ್ರಣಕೇಳಿಗೆಸಾಲ್ವರೆಂಬಿದಂ |
ನೀನಱಿರಾಮಲಕ್ಷ್ಮಣರನಶ್ರಮದಿಂಪದಱಿಟ್ಟತಂದಪೆಂ ||
ಜಾನಕಿಯಂಕುಳಾಗತಧನುರ್ಯ್ಯುಗಳಂಗಳನೆಂದುಕೇಱಿಪಂ |
ಚಾನನದಂತೆಗರ್ಜ್ಜಿಸಿವಿಮಾನಮನೇಱಿದನಾಕುಮಾರಕಂ || 13

ಚ || ಕುಲಮದವೊಂದುರೂಪುಮದವೊಂದುವಯೋಮದವೊಂದುತಂನದೋ |
ರ್ವ್ವಲಮದವೊಂದುಜಾತಿಮದವೊಂದುಕಲಾಮದವೊಂದುದೇವತಾ ||
ಬಲಮದವೊಂದುರಾಜ್ಯಮದವೊಂದಿನಿತಲ್ಲದೆಪೇಱೆರಾಗಮ |
ಗ್ಗಳಿಸಿದದೋಷದೃಷ್ಟಿವಿಷಯಾತುರರೇಂಗಡಮುಂದುಗಾಣ್ಬರೇ || 14

ವ || ಅದಱಿನಾಮದಾವಲಂಬನನವರನಬಲನೆಂಬಗೆವಂತೆಬಗೆದುಕಳಿಪಯುಖಚರಪರಿಜ
ನಂಪರಸುಗಗನಮಾರ್ಗ್ಗದಿಂಪೋಗುತ್ತುಂದಿಗವಲೋಕನಂಗೆಯ್ದುತನ್ನಮುಂನಿ
ನಜನ್ಮದೊಳ್ಕುಂಡಳಮಂಡಿತನಾಗಿರ್ದ್ದಂದಿನವಿದಗ್ಧನಗರಮಂಕಾಣಲೊಡಂಜಾ
ತಿಸ್ಮರನಾಗಿಮೂರ್ಚ್ಛೆಗೆಸಲ್ವುದುಮೊಡನೆಯಾವಿಯಚ್ಚರರಾತನಂರಥನೂಪುರಚ
ಕ್ರವಾಳಪುರಕ್ಕೊಂದುಗತಿಖಚರಚಕ್ರವರ್ತ್ತಿಯಕೆಲಕ್ಕೆತರ್ಪ್ಪುದುಂ ||

ಕಂ || ಘನಸಾರಸಲಿಲಮಂಚಿಂ |
ದನರಸಮಂತಳೆದುಬೀಸೆಬಿಜ್ಜಣಿಗೆಯುತ ||

ಣ್ಣನೆತ್ತೀಡುವೆಲರತೀಟದಿ ।
ನಿಮಿಸಾನುಂತಡೆದುಮೂರ್ಛೆಯಿಂದೆೞ್ಚತ್ತಂ ॥ 15

ವ॥ ಆಗಳಾವಿಯಚ್ಚರಾಧಿಪತಿಕುಮಾರನಮುಖಾರವಿಂದಮಂನೋಡಿ ॥

ಕಂ॥ ಜನಕಜೆಯಿಂನೂರ್ಮ್ಮಡಿಮಿಗಿ ।
ಲೆನಿಪ್ಪಕಡುಚೆಲ್ವುವೆತ್ತಖೇಚರಕನ್ಯಾ ॥
ಜನದೊಳ್ವಿವಾಹಮಂಗಳ ।
ಮನೊಡರ್ಚ್ಚುವೆನಂಮಬಿಸುಡುಮನದುಂಮಳಮಂ ॥ 16

ವ॥ ಎಂಬುದುಂಪ್ರಭಾಮಂಡಲಂಕಿಂಚಿದುನ್ನಮಿತಕಂಧರನಿಂದುಗತಿಯುವದನೇಂದು
ಮಂನೋಡಿಮುಕುಳಿತಕರಕಮಲನೆಂನಮೂರ್ಛಾಪ್ರಪಂಚಕ್ಕದುನಿಮಿತ್ತವಲ್ತು
ಪೋದಭವದೊಳಾಂಪ್ರತಾಪಸಿಂಹನೆಂಬ ದೇಶಾಧೀಶಂಗೆಕುಂಡಳಮಂಡಿತನೆಂಬಮ
ಗನಾಗಿಪುಟ್ಟಿತಂದೆಗವಿಧೇಯನಾಗಿಪೋಗಿ ॥

ಕಂ॥ ಬಿಟ್ಟುಜನನನೆನಗೆಪಾಪದ ।
ಬಟ್ಟೆಯೆಪೇರ್ಬ್ಬಟ್ಟೆಯಾಗೆನಾಡಂಬೀಡಂ ॥
ಸುಟ್ಟುಱಿದುಕಟ್ಟುಕವರ್ದಾಂ ।
ಕಟ್ಟಾಳ್ತನದಿಂವಿದಗ್ಧನಗರದೊಳಿರ್ದ್ದೆಂ ॥ 17

ಎನಗರಸಿಮಾಡಿದೆಂಕಪಿ ।
ಳನೆಂಬನಾಪುರದೊಳಿರ್ಪ್ಪನೋರ್ವ್ವಂದ್ವಿಜನಾ ॥
ತನಪೆಂಡತಿಯುಂದರ್ಪ್ಪಂ ।
ಧನೆನಾಡದಗೊಡ್ಡಮೇನುಮಿಲ್ಲೆಂಬಿನೆಗಂ ॥ 18

ವ॥ ಅಂತಿರ್ಪ್ಪುದುಂ ॥

ಕಂ॥ ಅನರಣ್ಯನಪಡೆವಳ್ಳಂ ।
ಮುನಿದಿಱಿದೋಡಿಸಿದೊಡೋಡಿಪರಮಂಡಳದೊಳ್ ॥
ಜಿನಮುನಿಮುಖ್ಯಂಕುಡೆಪಡೆ ।
ದನಣುವ್ರತಮಂವಿನೇಯಜನಸಮ್ಮತಮಂ ॥ 19

ವ॥ ಅಂತಾಮಾರ್ಗ್ಗಮಂಪತ್ತಿಪತ್ತುವಿಡದೆನಡೆದುಜೀವಿತಾವಧಿಯೊಳ್ದೇವಗತಿವಡೆದಾ
ನೆನ್ನದೇವಿಯುಮಹಾದೇವಲೋಕದಿಂಬಂದಿಲ್ಲಿಜನಕಮಹಾದೇವಿಯುಪ್ಪ ವಿದೇಹಿ

ಯುಗರ್ಬ್ಭದೊಳಮಳ್ಗಳಾಗಿಪುಟ್ಟುವುದುಮಾಸಮಯದೊಳಂನಮುಂನಿನಪಗೆಯ
ನಪ್ಪಕಪೆಳಂದೇವಗತಿವಡೆದುಮೆನ್ನಂ ಪಿಡಿದೊಯ್ದುಕೊಲಲೊಡರ್ಚ್ಚಿಕಾಣಲೊ
ಡಂಕರುಣಿಸಿತಂನಮಣಿಕುಂಡಳಮನೆಂನ ಕಿವಿಯೊಳಿತ್ತುಡರ್ಚ್ಚಿಪರ್ಣ್ನಲಘುವಿದ್ಯೆ
ಯಿಂನಿಂಮತಳ್ವದೊಳಿರಿಸಿಬ್ಬೋಗೆದೇವರೆಂನೆಂಪಿರಿಯರಸಿಗೆದಯೆಗೆಯ್ದುಕೊಂಡಾಡಿ
ನಡಿಪಿಯುವರಾಜಪದವಿಯಂದಯೆಗೆಯ್ದಿರಾನುಮೆಂನತಂಗಿಯಪ್ಪುದನಱಿಯದೆಸೀ
ತಾದೇವಿಗಾಸಿಸಿದೆನೆಂದುಬಿಂನವಿಸೆ ॥

ಕಂ ॥ ಖೇಚರಪತಿವಿಸ್ಮಯದಾಕುಳಿ ।
ತಚಿತ್ತನಜ್ಞಾನತಿಮಿರವಿಘಟನದೀಪ ॥
ಪ್ರಚುರರುಚಿಯೆನಿಸೆಮಣಿಮಕು ।
ಟಚಳಕನತ್ಕಾಂತಿತಲೆಯನೇಂತೂಗಿದನೋ ॥ 20

ವ ॥ ಅಂತುಬಗೆಯೊಳೊಗೆದವಿಸ್ಮಯಮೇತನಗೆವೈರಾಗ್ಯಹೇತುವಾಗೆ ॥

ಕಂ ॥ ದೊರೆಕೊಳ್ವದೊಳ್ಳಿತಾದುದು ।
ತರುಣಿಯಸಂಬಂಧಮೀಸುತಂಗೆತ್ತಾನುಂ ॥
ದೊರೆಕೊಂಡೊಡೆಂನವಂಶಂ ।
ದುರಂತದುಷ್ಕೀರ್ತ್ತಿದಾವಶಿಖಿಗೊಳಗಕ್ಕುಂ ॥ 21

ಉಪಕಾರಮನೊಡರಿಸುವುದು ।
ಮುಪಕಾರಮನುಂಟುಮಾಳ್ಕುಮುಪಕಾರಿಗೆತಾ ॥
ನುಪಕಾರಮನೊಡರಿಸುಗುಂ ।
ವಿಪರೀತಂಬಗೆದುನೋಡೆಕರಣಗ್ರಾಮಂ ॥ 22

ಉ ॥ ಪೋದುವುಮತ್ತುಲಾಗತಧನುರ್ಯ್ಯುಗವೆಂನಮಹೋಂನತಿಕ್ಕೆಕೀ ।
ಳಾದುದುರಾಮಲಕ್ಷ್ಮಣರತೇಜಮಗುಂದಲೆಯಾದುದೇಂದುನಿ ॥
ರ್ವ್ವೇದಮನಪ್ಪುಕೆಯ್ದುಗಗನೇಚರಸಂಪದಮಂಪೊಗಳ್ತವೆ ।
ತ್ತಾದೊರೆತಾಂಜರತ್ತೃಣಸಮಾನಮೆನಲ್ಬಗೆದಂವಿಯಚ್ಚರಂ ॥ 23

ವ ॥ ಅಂತುವೈರಾಗ್ಯಪರಂ ನಿಜವಿಯಚ್ಚರಾಧಿರಾಜವಿಭವಮಂ ಪ್ರಭಾಮಂಡಳಂಗಿತ್ತು
ಮಂದಿನದಿವಸದೊಳ್ಮಹೇಂದ್ರೋದ್ಯಾನದೊಳಿರ್ದ್ದಸರ್ವ್ವಭೂತಹಿತಭಟ್ಟಾರಕ
ರಪದಪಯೋರುಹಸಮಕ್ಷದೊಳ್ದೀಕ್ಷೆಗೊಳ್ವುದುಂ ॥

ಕಂ ॥ ಇಂದುಗತಿಮಂತೆರಾಜ್ಯಮಂ ।
ನೊಂದಕ್ಕಂಬುತ್ತೆಗೆಯ್ದುದಾವನೊತೊಱೆದಂ ॥

ಮಂದರಧೈರ್ಯ್ಯಂನೃಪನೆಂ ।
ದೊಂದುತ್ತರಮಮರಸಮಿತಿಪೊಗೞ್ದತ್ತಾಗಳ್ ॥ 24

ವ ॥ ಅಂತುವಿಯಚ್ಚರಾಧಿರಾಜಂಮುನಿರಾಜಪದವಿಯನಪ್ಪುಕೆಯ್ವುದುಮಿತ್ತಲ್ಜನಕಂಸ
ಕಳಸಾಮ್ರಾಜ್ಯಚಿಹ್ನಮುೞಿಯಲುೞಿದವಸ್ತುವಾಹನಾದಿಗಳಂಸೀತೆಗೆ ಬೞುವೞಿಗೊ
ಟ್ಟಯೋಧ್ಯೆಗೆಕೞಿಪುವುದುಂದಶರಥಂಕತಿಪಯಪ್ರಯಾಣಂಗೞಿಂವಿನೀತಾನಗರಮಂ
ಪೊಕ್ಕಿರಲೊಂದುದಿವಸಂ ॥

ಕಂ ॥ ಸುಕೃತಸುರದ್ರುಮವನಪಾ ।
ಲಕನೆಂಬಿನಮಚಲವಿಚಕಿಳೋದ್ಗಮಮಂತಂ ॥
ದಕಲುಷಚಿತ್ತಂದಶರಥ ।
ಸಕಲೋರ್ವ್ವೀಶಂಗೆಋಷಿನಿವೇದಕನಿತ್ತಂ ॥ 25

ವ ॥ ಅಂತುಸಮಯೋಚಿತಸುಮನೋದರ್ಶನಮನಿತ್ತುದೇವಾನಂಮಸರಯೂನದೀತೀ
ರದಮಹೇಂದ್ರೋದ್ಯಾನದೊಳ್ಮನಃಪರ್ಯ್ಯಯಜ್ಞಾನಿಗಳಪ್ಪಸರ್ವ್ವಭೂತಹಿತ
ಭಟ್ಟಾರಕರ್ಮ್ಮಹಾಋಷಿಸಮುದಾಯಂಬೆರಸುಯೋಗನಿಯೋಗದಿಂದಿರ್ದ್ದರೆಂದು
ಬಿಂನವಿಸೆ ॥

ಕಂ ॥ ನೊಸಲೊಳ್ಕರಪಲ್ಲವಪುಟ ।
ಮೆಸೆದಿರೆದಶರಥನೃಪಂಮುನೀಶ್ವರರಿರ್ದ್ದ ॥
ದೆಸೆಗೆಮೊಗಮಿತ್ತುತಂನಿ ।
ರ್ದ್ದಸಿಂಹವಿಷ್ಟರದಿನೆರ್ದ್ದುವಿನಮಿತನಾದಂ ॥ 26

ವ ॥ ಆಗಿದಶರಥಂಪರಿಮಿತಪರಿಜನಂಬೆರಸುಮುನೀಂದ್ರರಿರ್ದ್ದಮಹೇಂದ್ರೋದ್ಯಾನಕ್ಕೆ
ಬಂದು ॥

ಉ ॥ ದೀಪಕಳಾಪಮಂತಳೆದುಬಾಲಕಿಯರ್ಬ್ಬರೆಸುತ್ತಿಮುತ್ತಿತಾ ।
ರಾಪತಿತಾರೆಗಳ್ವೆರಸುಮಂದರಮಂಬಲಗೊಳ್ವಮಾಳ್ಕೆಯಿಂ ॥
ಭೂಪತಿಸರ್ವ್ವಭೂತಹಿತದಿವ್ಯಮುನೀಂದ್ರರನಂದುಬಾಲಚಂ ।
ದ್ರಾಪರನಾಮಧೇಯರನದೇಂಬಲಗೊಂಡನೊಭಕ್ತಿಪೂರ್ವ್ವಕಂ ॥ 27

ವ ॥ ಅಂತುಬಲಗೊಂಡಷ್ಟವಿಧಾರ್ಚ್ಚನೆಗೞಿಂದರ್ಚ್ಚಿಸಿಗುರುಭಕ್ತಿಪೂರ್ವ್ವಕಂವಂದಿಸು
ವುದುಂ ॥

ಕಂ ॥ ಮದನಫಣಿನಿರ್ವ್ವಿಷೀಕರ ।
ಣದಿವ್ಯಮಂತ್ರಸ್ವನಂಜರಾಮರಣಲತಾ ॥
ವಿದಳನಟಂಕಧ್ವನಿಪೊ ।
ಣ್ಮಿದತ್ತುಮುನಿಪರಸದ್ಧರ್ಮ್ಮವೃದ್ಧಿನಿನಾದಂ ॥ 28

ಕ್ಷುಭಿತದಯಾರ್ಣ್ಣವಘೋಷೋರ್ಜ್ಜಿತ ।
ರಭಸಮೆನಲ್ಪರಸಿದತ್ತನಂತರಮಾಸ ॥
ತ್ಸಭೆವಿನತಮಕುಟಮಣಿರುಚಿ ।
ವಿಭಾಸಿಯಂನೃಪಪುರಸ್ಸರಂರಾಜಕಮಂ ॥ 29

ವ ॥ ಅನಂತರಂದಶರಥಂಸಮುಚಿತಾಸನದೊಳ್ರಾಮಲಕ್ಷ್ಮಣಭರತಶತ್ರುಘ್ನರ್ವ್ವೆರಸುಕು
ಳ್ಳಿರ್ದ್ದುದೀಕ್ಷಿತನಾದ ಯಿಂದುಗತಿಯುಮಂಪರಿಮ್ಲಾನದೀನಾನನನಾಗಿತನ್ಮುನಿಯ
ಸಮಕ್ಷದೊಳಿರ್ದ್ದಪ್ರಭಾಮಂಡಳನುಮಂಕಂಡುಮುನಿಮುಖ್ಯಂಗೆಱಗಿ ಮುಕುಳಿ
ತಾಂಜಲಿಪುಟನಾಗಿ ॥

ಉ ॥ ಬಾಲಮೃಣಾಳಮಂಪಿಡಿದುಕೀಳ್ವವೊಲಶ್ರಮದಿಂಮನೋಭವ ।
ವ್ಯಾಲಗಜೇಂದ್ರದಂತಯುಗಳಂಗಳನೇಕೆಯೊಕೀಳ್ತನೇಕೆನಿ ॥
ರ್ಮ್ಮೂಲಿಸಿದಂಭವಾಟವಿಯನೀಜಿನರೂಪಕುಠಾರದಿಂಪ್ರಬೋ ।
ಧಾಲಯವೇಳಿಮೀಖಚರಚಕ್ರಿಯೊಳಾದತಪಃಪ್ರಪಂಚಮಂ ॥ 30

ವ ॥ ಎಂದುಬಿಂನವಿಸೆ ॥

ಕಂ ॥ ಶ್ರುತದೇವತಾಕಟಾಕ್ಷ ।
ದ್ಯುತಿಪಸರಿಸಿಪರ್ವ್ವುವಂದದಿಂನಿಜದಂತ ॥
ದ್ಯುತಿಪಸರಿಸೆದಯೆಯಿಂಯತಿ ।
ಪತಿನುಡಿದಂಮಧುರಮೃದುಗಭೀರಧ್ವನಿಯಿಂ ॥ 31

ವ ॥ ಈಖಚರಪ್ರಭುಪ್ರಭಾಮಂಡಲನಪೋದ ಭವದೊಳಾದವೃತ್ತಾಂತಮುಮನೀಭವ
ದೊಳಾದಸೀತಾಪ್ರಪಂಚಮುಮಂತಿಳಿದದುವೆನಿರ್ವ್ವೇಗಮಾಗೆದೀಕ್ಷೆಗೊಂಡನೆಂಬು
ದುಮನಂತರಂಪ್ರಭಾಮಂಡಳಂವಿನಯವಿನಮಿತಶಿರಸ್ಸರೋಜನಾಗಿ ॥

ಕಂ ॥ ಇಂದುಗತಿಖಚರಪತಿಪಿರಿ ।
ದೊಂದಳ್ಕಱನೆನಗೆಮಾಳ್ಪುದೆಂಬೆಸೆಸಿಂನೀ ॥
ಮೆಂದುಮುಕುಳಿತಕರಂಮುನಿ ।
ವೃಂದಾರಕರಂಕುಮಾರಕಂಬೆಸಗೊಂಡಂ ॥ 32

ವ ॥ ಅಂತುಪಸಗೊಳ್ಳುದುಮವರಿಂತೆಂದುಪಸಸಿದರಾರ್ಧ್ಯಮನಾಮಧೇಯಗ್ರಾಮದೊ
ಳಿರ್ಪ್ಪರ್ಗ್ರಂಥರಾಮರಂವಿಮುಂಚಿಯೆಂಬ ನಾತನ ಕುಲವಧುವನುಮತಿವೆಸರೆಂಬಳವ
ರ್ಗ್ಗತಿಭೂತಿಯೆಂಬತನಯನಾದಂ ॥

ಕಂ ॥ ಆತಂಗೆಸರಸೆಯೆಂಬಳ್ ।
ಪಾತಕಿಕುಲವನಿತೆಯೆನಿಸಿಕಯನೆಂಬವುಣಾ ॥
ಪಾತಕನೊಳ್ಪುದುವಾಳ್ದಳ್ ।
ಜಾತಿಯನೀತಿಯನೆಗಳ್ತೆಸೆಲೆಗಿಡುವಿನೆಗಂ ॥ 33
ಆಯುರ್ದ್ದಶೆಯಳಿಗುಂನರ ।
ಕಾಯುಷ್ಯಂಕಟ್ಟುಗುಂಪರಾಭವಮಕ್ಕುಂ ॥
ಶ್ರೀಯಳಿಗುಮೆಂನದನ್ಯ ।
ಪ್ರೇಯಸಿಯುಂಸರಸೆಯುಂಕಯುಂಕಳ್ದೊಯ್ದಂ ॥ 34

ವ ॥ ಅಂತಾಕೆಯುಂಕಯುಂಕಸವರಂಬೆರಸುಕಳ್ದೊಯ್ವುದುಮತಿಭೂತಿಮತಿವಿಕಳನಾಗಿ ॥

ಕಂ ॥ ಸುಡುಪೊಲ್ಲದನೆಂನದೆತಂ ।
ನೊಡಮೆಯುಪೋಗಿಂಗಮವಳಪೋಗಿಂಗಂನಿ ॥
ರ್ಗ್ಗಡಿಪೆಂನೊಳಱಿಸಿಪೋದಂ ।
ಕಡುಮೋಹಿತರಾರುಮುಚಿತಮಂನೆನೆದಪರೇ ॥ 35

ವ ॥ ಮತ್ತಿತ್ತ ವಿಮುಂಚಿಯುಂದಾನಾರ್ತ್ಥಿಯಾಗಿಮಗುಳ್ದು ಬಂದುಮಗನವಾರ್ತ್ತೆಯುಂ
ಕೇಳ್ದು ತಾನುಂತಂನಪೆಂಡತಿಯುಪ್ಪನುಮತಿಯುಂಸರಸೆಯುತಾಯುಪ್ಪುರಿಯುಂಕಪ್ಪ
ಡವನುಟ್ಟತಿಭೂತಿಯನಱಸುತ್ತುಂಬಂದುಶಂಬರಮೆಂಬಪುರದೊಳ್ಸರ್ವ್ವಮುನಿಗ
ಳೆಂಬದಿವ್ಯಜ್ಞಾನಿಗಳಪಕ್ಕದೆಧರ್ಮ್ಮಮಂಕೇಳ್ದು ವಿಮುಂಚಿಮುಂಚಿತೊಱೆದಮ
ನುಮತಿಯುಮುರಿಯುಂಕನಕಶ್ರೀಗಂತಿಯರಪಕ್ಕದೆತೊಱೆದುದೇವಗತಿವಡೆದರ್ ॥

ಕಂ ॥ ಅಪವರ್ಗ್ಗಲಕ್ಷ್ಮಿಯುಂಕುಡು ।
ವಪರಮಜಿನಚರಣಸೇವೆಗರಿದಾವುದೊನಾ ॥
ಕಪದಪ್ರಾಪ್ತಿಯನೊದವಿಸು ।
ವಪೇರ್ಮ್ಮೆಯೆನೆದಿವದೊಳಸಿಬರುಂಜನಿಯಿಸಿದರ್ ॥ 36

ವ ॥ ಮತ್ತಿತ್ತ ಸರಸೆದುರಾಚಾರದಿಂಕಾಲವಂಕಳಿಪಿನರಕಗತಿತಿಯರ್ಯ್ಯಗ್ಗತಿಗಳೊಳ್ತಿರಿ
ಯುತ್ತುಂಬಂದುಬಳಾಹಕವೆಂಬಪಟ್ಟದೊಳ್ಪುಲ್ಲೆಯಾಗಿಪುಟ್ಟಿಪೇಗೆಗಿಟ್ಟಿನೊಳಸ
ತ್ತುಚಂದ್ರಧ್ವಜನೆಂಬರಸನರಸಿಮನಸ್ವಿಯೆಂಬಳಾಯಿರ್ವ್ವರ್ಗ್ಗಂಚಿತ್ತೋತ್ಸವೆ
ಯೆಂಬಮಗಳಾಗಿಪುಟ್ಟಿದಳದಲ್ಲದೆಯುಮತ್ತಲಾಕಯನುಂ ॥

ಮ॥ ಮಕರಾಂಕದ್ವಿಪದಂತದಂಡದಳಿತಸ್ವಾಂತಂಪರಪ್ರೇಯಸೀ।
ವಿಕಲಂದುರ್ಗ್ಗತಿಯೊಳ್ಕ್ಕ ಯಂತಿರಿತರುತ್ತಂಬಂದುಮತ್ತಂಕ್ರಮೋ॥
ಳಕನಾದಂಕಳಿದಲ್ಲಿಯುಂಕಪಿಳನೆಂಬಂಧೂಮಕೇಶಂಗೆದಾ।
ರಕನಾದಂಕಡೆಯೊಳ್ವಿಚಾರಿಸೆವಿಚಿತ್ರಂಕರ್ಮ್ಮನಿರ್ಮ್ಮಾಪಣಂ॥ 37

ವ॥ ಮತ್ತಮತ್ತಲತಿಭೂತಿಯುಂನರಕಾಯುಷ್ಯಾದಿಭವಾಟವಿಯೊಳ್ತೊಳಲುತ್ತಂಬಂದುತಪಾಕ್ಷನೆಂಬಹಂಸವನದೊಳ್ಕಲಹಂಸನಾಗಿಜಿನಸ್ತವನಶ್ರವಣದಿಂದುಪಶಮಚಿತ್ತನಾಗಿ ಕಿಂನರಗತಿವಡೆದನಂತರಂಕುಂಡಳಮಂಡಿತನಾಗಿವಿದಗ್ಧಪುರಮನಾಳುತ್ತಿರೆಕಪಿಳಂಚಿತ್ತೋತ್ಸವೆಯುಂತನಗೆಪೆಂಡತಿಮಾಡಿತಂದಾಪುರದೊಳಿರ್ಪ್ಪುದುಂನೀನತಿಭೂತಿಯಾದಂದಿನನುಬಂಧಕಾರಣವಾಗೆನೀನಾಕೆಯುಂಕಪಿಳನಕಯ್ಯಿಂಕಳೆದುಕೊಂಡೈಮುಂನೆಸೇಳ್ವಿಮುಂಚಿಯುಂಸುರಲೋಕದಿಂಬಂದು ಯಿಂದುಗತಿಯಾದನಾತನಪೆಂಡತಿಯುಪ್ಪಂದಿನನುಮತಿಪುಷ್ಪವತಿಯಾದಳದುಕಾರಣದಿಂದಿವರ್ನ್ನಿನಗತಿಸ್ನೇಹಿತರಾದರಂದಿನಕಯುನುಂನೀಂಪುಟ್ಟಿದಾಗಳೆನಿಂನಂ ಕೊಂಡುಪೋದಂನೀನತಿಭೂತಿಯಾದಂದಿನುರಿಯೆಂಬನಿಂಮತ್ತೆ ದೇವಗತಿಯಿಂಬಂದು ಜನಕಮಹಾದೇವಿವಿದೇಹಿಯಾಗಿನಿನಗೀಗಳಬ್ಬೆಯಾದಳೆಂದುಭಟ್ಟಾರಕರ್ಬ್ಬೆಸಸುವುದುಂ॥

ಮ॥ ಅಱಿದಾತ್ಮೀಯಸುಹೃದ್ಭವಾಂತರಮನಾದ್ಯಂತಂಪ್ರಭಾಮಂಡಳಂ।
ಜಱಗಾದಂರಘುರಾಮನುಂದಶರಥಕ್ಷೋಣೀಶನುಂನೈಪುಕ॥
ಸ್ವೆಱೆದಂತುತ್ಸುಕರಾದರುಣ್ಮಿಪುಳಕಂಕೈಗೆಣ್ಮೆಹರ್ಷಾಶ್ರುಮಮ್।
ಮಱೆದಳ್ಜಾನಕಿಕೇಳ್ದುಕೇಳ್ದುತಲೆಯಂತೂಗಿತ್ತುರಾಜನ್ಯಕಂ॥ 38

ಕಂ॥ ಅಮೃತಕಡಲೊಳ್ಮುಳುಂಗಿ।
ತ್ತಮೃತಾಂಶುಮಯೂಖಲೇಖೆಯಂತಕ್ಕರ್ಗಯ್ಸಿ॥
ತ್ತಮರ್ದಂಮುಕ್ಕುಳಿಸಿತ್ತನೆ।
ಸಮನಿಸಿದುದುರಾಜಸಭೆಗೆಹರ್ಷೋತ್ಕರ್ಷಂ॥ 39

ವ॥ ಅಲ್ಲಿಂಬಳಿಯಂ॥

ಕಂ॥ ಮಣಿಕುಂಡಳಕಿರಣಂಗ।
ಳ್ಸೋಣಸುವಿನಂನಖಮಯೂಖದೊಳ್ದಶರಥಧಾ॥
ರಿಣಿಪತಿಯಪದಪಯೋಜ।
ಪ್ರಣಮನಮನೊಡರ್ಚ್ಚಿದಂವಿಯಚ್ಚರತಿಳಕಂ॥ 40

ವ॥ ಅನಂತರಂರಾಮಲಕ್ಷ್ಮಣಭರತಶತ್ರುಘ್ನರೊಳ್ವಿನಯವೃತ್ತಿಯಂಮೆಱೆವುದುಂ॥

ಕಂ || ಅನುಜೆನಿಜಾಗ್ರಜಪದಕೋ |
ಕನದಕ್ಕಾನಂದಬಾಷ್ಪಬಿಂದುವನೀವು ||
ತ್ತನುನಯದಿನೆಱಗಿದಳಿಸೀ |
ತೆನಗುವಿನಂಭ್ರಮರಕಂಭ್ರಮದ್ಭ್ರಮರಕಮಂ || 41

ವ || ಅಂತುವಿನಯಭರದಿನೆಱಗಿದನುಜೆಯಂಪ್ರಭಾಮಂಡಲನಖಂಡಿತಪುಣ್ಯಭಾಗಿಯಾ
ಗೆಂದುಪರಸಿಪರಮಾನಂದಪರಂಪರೆಯನಪ್ಪುಕೆಯ್ದಿರ್ಪ್ಪುದುಂ ||

ಸ್ರ || ಆದಿವ್ಯಜ್ಞಾನಿಯಿಂದಂತಿಱಿದುಪದಪದಾರ್ತ್ಥಂಗಳಂಪೂರ್ವ್ವಜನ್ಮ |
ಪ್ರಾದುರ್ಬ್ಭಾವಪ್ರಪಂಚಂಗಳನಧಿಕಮನೋರಾಗದಿಂತನ್ಮುನಿಶ್ರೀ ||
ಪಾದಾಂಭೋಜಂಗಳಂಪೂಜಿಸಿವಿನಯದೆಬೀಳ್ಕೊಂಡುಭೇರೀನಿನಾದಂ |
ರೋದೋಂತರ್ಬ್ಭಾಗಮಂಜಕ್ಕುಲಿಸೆನೃಪತಿಸಾಕೇತಮಂಬಂದುಪೊಕ್ಕಂ || 42

ಮ || ಮಣಿಘಂಟಾಮಣಿಕಿಂಕಣೀಮಣಿವಿತಾನಸ್ವರ್ಣ್ಣಲಂಭೂಷಭೂ |
ಷಣಮಂರತ್ನವಿಮಾನಮಂಭರತನುಂಶತ್ರುಘ್ನನುಂರಾಮಲ ||
ಕ್ಷ್ಮಣರುಂತಂನೊಡನೇಱಿಸೋಂಕಿಬರೆಸೋತ್ಸಾಹಂಪರಿದ್ರತ್ನತೋ |
ರಣಶೋಭಾವಹಮಂನರೇಂದ್ರಗೃಹಮಂಪೊಕ್ಕಂಪ್ರಭಾಮಂಡಳಂ || 43

ವ || ಅಂತುಪುಗುವುದುಂಕುಮಾರನಂಮಣಿಮಯಾಸನದೊಳಿರಿಸಿಮಧುಪರ್ಕ್ಕಪೂರ್ವ್ವ
ಕಮಪಾರಸಾರವಸ್ತ್ರಾಭರಣವಸ್ತುವಾಹನಂಗಳಂಪೂಜಿಸಿಬಳಿಯಂ ಜನಕಂಗೆಬ
ಳಿಯನಟ್ಟುವುದುಂವಿದ್ಯಾಧರಮಹತ್ತರಂಪವನವೇಗನೆಂಬಂಮನಃಪವನವೇಗದಿಂ
ಮಿಥಿಳೆಯನೆಯ್ದಿರಾಜಮಂದಿರಮಂಪೊಕ್ಕು ||

ಕಂ || ನಮಿತಂಖಚರಾನುಚರಂ |
ಕ್ರಮದಿಂತಿ ವಂತುತನಗೆತನಯನವೃತ್ತಾಂ ||
ತಮನಱಿಪೆಜನಕನತಿಸಂ |
ಭ್ರಮಚಿತ್ತಂಪಡೆದುಪಲವುಸೊಳ್ಪಸಗೊಂಡಂ || 44

ವ || ಅಂತುಬೆಸಗೊಂಡು ||

ಮ || ಕೊಲಲೆಂದೊಯ್ದುನಿಶಾಚರಂಖಚರರಾಜಂಗೊಯ್ದುಕೊಟ್ಟಂಗಡಂ |
ಕುಲನಿಸ್ತಾರಕನೆಂನದಾರಕನನಾತಂಬಂದುಸಾಕೇತದೊಳ್ ||
ನೆಲಸಿರ್ದ್ದಂಗಡಸ್ಯೆಪುಕಣ್ಗೆ ಜಿದುದೆಂದಾನಂದಬಾಷ್ಪಾಂಬುಕ |
ಣ್ಮಲಿಂಕೈಗಳವಾಗಿಪೊಣ್ಮೆಜನಕಂರೋಮಾಂಚಮಂತಾಳ್ದಿದಂ || 45

ವ || ಅಂತುಹರ್ಷರಸತರಂಗಿತಾಂತರಂಗನಾಗಿ ||

ಕಂ ॥ ತನುಜಾಗವನೋತ್ಸವಮಂ ।
ತನಗಱಿಪಿದಖೇಚರಂಗೆನಿಜರಾಜ್ಯಮನೀ ॥
ವನಿತುವರವಧಿಕರಾಗಂ ।
ಜನಿಯಿಸೆಜನಕಂನಿಜಾಂಗಚಿತ್ತಮನಿತ್ತಂ ॥ 46

ವ ॥ ಅನಂತರಂ ॥

ಕಂ ॥ ರವಿರಥಮನುತ್ಸವಧ್ವಜ ।
ನಿವಹಂತುಡಿದುವುಕೆದಱಿದುವೃಪೂವಲಿಗಳ್ ॥
ಕಿವಿಕಬ್ಬಂಗೆಟ್ಟರಬ ।
ದ್ದವಣಂಬುಚಿಸಿದುವ್ರೊಡನೆಮಿಥಿಳಾಪುರದೊಳ್ ॥ 47

ಚ ॥ ತನಯಮುಖೇಂದುಮಂಡಲಮನೀಕ್ಷಿಸಲುತ್ಸುಕವೃತ್ತಿಚಿತ್ತದೊಳ್ ।
ನನೆಕೊನೆವ್ರೋಗೆಸಜ್ಜನಸುಭಾಷಿತದೊಳ್ಪುದುವೊಕ್ಕುಸೇಸೆಮಂ ॥
ಮನವೊಸೆದಾಂತುಬಾಂಧವಜನಂಬೆರಸುತ್ಸವದಿಂವಿದೇಹಿಯುಂ ।
ಜನಕನುನೋಱಿದವ್ಮಣಿವಿತಾನವಿರಾಜಿತಮಂವಿಮಾನಮಂ ॥ 48

ವ ॥ ಅಂತುವಿಮಾನಾರೂಢರಾಗಿ ಕಿಱಿದಾನುಂಬೇಗದಿಂದಯೋಧ್ಯೆಗೆಬಂದುರಾಜಭವನ ಮಂಪೊಕ್ಕು ಜನಕನುಂವಿದೇಹಿಯುಂದಶರಥಂಗಮಪರಾಜಿತಾಮಹಾದೇವಿಗಂತುಳಿ ಲ್ಗೆಯ್ವುದುಂರಾಮಾದಿಗಳವಗ್ಗವಿನಯವಿನತರಾಗಿಪರಕೆಯುಂಕೈಕೊಳ್ವುದುಂಜಾ ನಕಿಯುಂಜನನೀಜನಕರಂನಿಬಿಡಾಲಿಂಗನಂಗೆಯ್ದುಮವರಪದಪಯೋರುಹಕ್ಕೆ ಱಗೆ ತದನಂತರಂಪ್ರಭಾಮಂಡಳಂತಂದೆಯಪಾದಾರವಿಂದಮಂ ಮಣಿಕುಂಡಲಪ್ರಭಾ ಮಂಡಳಬಾಲಾತಪದಿನಚ್ಚಿಸುವುದುಂಜನಕಂದಿಕ್ಕರಿಕರಾನುಕಾರಿಗಳಪ್ಪತೋಳ್ಗ ಳಿಂತೆಗೆದುತಕ್ಕೈಸಿಮಗನಮೊಗಮನಳ್ಕತ್ತುನೋಡಿಕಲ್ಪತರುಕೋರಕಿತಮಾದಂ ತೆಪುಳಕಮಂತಳೆದಾನಂದಬಾಷ್ಪಬಿಂದುಸಂದೋಹದಿಂ ನಂದನನಸಹಸ್ರಕುಂತಳ ಕಳಾಪಕ್ಕೆ ಬಿಡುಮುತ್ತಿನತಲೆದುಡುಗೆಯಂಪಡೆದುಮೋಹರಸಸುಧಾರಸದೊಳವಗಾ ಹವಿರ್ಪ್ಪುದುಂ ॥

ಕಂ ॥ ಅಂಬಿರಿವಿದೆಭೋಂಕನೆನಯ ।
ನಾಂಬುಗಳತಿವಿಪ್ಪಳಂಪ್ರಭಾಮಂಡಲನಾ ॥
ತ್ಮಾಂಬಿಕೆಯಪದಕ್ಕೆ ಱಗಿದ ।
ನಂಬುರುಹಕ್ಕೆಱಗಿದಳಿಗಳೆನಿಸೆಕುರುಳ್ಗಳ್ ॥ 49

ವ ॥ ಆಗಳಾವಿದೇಹಿಸುತಪರಿಷ್ವಂಗಸುಖಾನುಭವಮನಪ್ಪುಕೆಯ್ವುದುಂ ॥

ಮ ॥ ಮೊಲೆವಾಲಂಬಿರಿವಿಟ್ಟುಸೂಸೆಮೊಲೆಯಿಂಬಾಷ್ಪಾಂಬುಕೈಗಣ್ಮೆಕ ।
ಣ್ಮಲರಿಂಮೆಯ್ಪುವಿರ್ಗೞ್ವುದಳ್ಳೊಗೆಯೆಮೆಯ್ಯಿಂಗದ್ಗದಂಕಂಠಕಂ ॥
ದಲದಿಂದುದ್ಗತವಾಗೆಮನ್ಯುಮಿಗೆನಾನಾಚೇಷ್ಟೆನಾನಾರಸಂ ।
ತಲೆದೋಱಿತ್ತುವಿದೇಹಿಗಚ್ಚರಿಸುತವ್ಯಾಮೋಹಕೌತೂಹಲಂ ॥ 50

ಚ ॥ ಉದಯಿಸಿದಾಗಳಾತನನಗಲ್ದಳಲಾತನಬಾಲಕೇಳಿಯಂ ।
ಪದೆದವಲೋಕಿಸಲ್ಪಡೆಯದುಂಮೞವಾತನಸೋಂಕಿನೊಳ್ಪುದ ॥
ೞ್ದುದವಿಧಿದಮೋಹಮಾತನಮುಖಾಬ್ಜವಿಳೋಕನಜಾತಕೌತುಕಂ ।
ಸುದತಿವಿದೇಹಿಗೇಂಪಡೆದುದೋರಸಸಂಕರಚಿತ್ರಚೇಷ್ಟೆಯಂ ॥ 51

ತನಯನನಾಗಳಂತೆಪಡೆದಂತೆಮನೋಮುದಮಂವಿದೇಹಿಯುಂ ।
ಜನಕನುಮಪ್ಪುಕೆಯ್ಯೆರಘುವಂಶನಮೇರುವಿಚಿತ್ರರತ್ನಮಂ ॥
ಜನಪಸನಂಗಳಿಂದೊಸೆದುಮನ್ನಿಸೆಹರ್ಷಮಳುಂಬಮಾಯ್ತುಚೆಂ ।
ದನರಸಮಗ್ನರಪ್ಪವರನಪ್ಪಿದುವಿಂದುಕರಂಗಳೆಂಬಿನಂ ॥ 52

ವ ॥ ಅಂತುದಶರಥನಭ್ಯಾಗತಪ್ರತಿಪತ್ತಿಯಂಮಾಳ್ಪುದುಮನುದಿನಂಪ್ರಭಾಮಂಡಲಂರಾ
ಮಲಕ್ಷ್ಮಣರೊಡನೆಕೂಡಿವಿವಿಧವಿನೋದಂಗಳಿಂದಿವಸಂಗಳನೇಕಂಗಳಾಗಿಯುಮೇ
ಕಕ್ಷಣದಂತೆನಿರಂತರೋತ್ಸವಮನೊದವಿಸೆಸುಖದಿನೊಂದುತಿಂಗಳ್ವರಮಯೋಧ್ಯೆ
ಯೊಳಿರ್ದ್ದುಮಿಥಿಳೆಗೆಬಂದುಜನಕನರಾಜ್ಯಮಂತಮ್ಮಕಿಱಿಯುಮನಪ್ಪಕನಕಂಗೆ
ಕೊಟ್ಟುಜನಕನುಂವಿದೇಹಿಯುಂಬೆರಸುರಥನೂಪುರಚಕ್ರವಾಳಪುರಕ್ಕೆಪೋಗಿವಿ
ದ್ಯಾಧರವಿಭೂತಿಯೊಳ್ಸುಖದೊಳಿರ್ದ್ದನಂನೆಗಮಿತ್ತಲೊಂದುದಿವಸಂ ॥

ರಥೋಧತ ॥ ಉರ್ವ್ವರಾಧಿಪತಿಕಂಡನರ್ಚ್ಚನಾ ।
ಪೂರ್ವ್ವಕಂದಶರಥಾವನೀಶ್ವರಂ ॥
ಸರ್ವ್ವಭೂತಹಿತನಾಮಧೇಯರಂ ।
ಸರ್ವ್ವಭೂತಹಿತಸಾಧುಮುಖ್ಯರಂ ॥ 53

ವ ॥ ಅಂತುಕಂಡುಗುರುಭಕ್ತಿಪೂರ್ವ್ವಕಂವಂದಿಸಿ ॥

ಕಂ ॥ ಎನ್ನಭವಾವಳಿಯಂದಯೆ ।
ಯಿನ್ನಿಂಮಡಿಪೆಸಸಿಮೆಂದುಕೈಮುಗಿದಿರೆಕೇಂ ॥
ಚಿನ್ನಮಿತಕಂಧರಂಪದ ।
ಸನ್ನಿಧಿಯೊಳ್ದಶರಥಂಮುನೀಶ್ವರನೆಂದಂ ॥ 54

ಮೊದಲಿಲ್ಲನಿಷ್ಪಸಂಸಾ ।
ರದಲ್ಲಿಸುಖದುಃಖಮಂಚತುರ್ಗ್ಗತಿಯೊಳ್ಮಾ ॥

ಣದೆತಿರಿದುಶುಭಾಶುಭಕ ।
ರ್ಮ್ಮದಫಲಮಂನಗುತುಮಳುತುಮುಣುತುಂಬಂದೈ ॥ 55

ವ ॥ ಅಂತನಂತಮಾದಭವಾವಳಿಯಂತಿರಿತರುತ್ತುಮಿಾಭವಕ್ಕೆಂಟನೆಯ ಭವದೊಳೊರ್ಮ್ಮಸೇನಾಪುರಮೆಂಬಪುರದೊಳ್ ॥

ಕಂ ॥ ಮುನಿಚರ್ಯ್ಯಾವಿಘ್ನದೊಳಂ ।
ಜಿನಧರ್ಮ್ಮದ್ವೇಷಮತಿಯೊಳಂದುರ್ಗ್ಗತಿಯೊಳ್ ॥
ಜನಿಯಿಸಿದುರಂತದುಃಖಮ ।
ನನುಭಸಿದೆವಕ್ರಭಾವಮಳಲಿಸದಾರಂ ॥ 56

ವ ॥ ಅಂತೆತ್ತಾನುಂಸವಿಪಾಕನಿರ್ಜ್ಜರೆಯಿಂದುಷ್ಕರ್ಮ್ಮಫಲಮಂತವಿಸಿನಿಜದಿನುಪಶಮಭಾವಮಂಬಡೆದದಱಫಲದಿಂಚಂದ್ರಪುರಮನಾಳ್ವಚಂದ್ರನೆಂಬನರೇಂದ್ರಂಗಮಾತನಮನೋಹಾರಿಣಿಧಾರಿಣಿಗಂಧಾರಣಿನೆಂಬಮಗನಾದೆನಿನಗೆಸುಧರ್ಮ್ಮೆಯೆಂಬಳ್ಪತ್ನಿಯಾದಳಂದುಜಿನಧರ್ಮ್ಮಮಂಪತ್ತುವಿಡದೆನಡೆದುಚತುರ್ವ್ವಿಧದಾನಶೂರನಾಗಿಶರೀರಭಾರಮನಿೞಿಪಿಧಾತಕೀಷಂಡದಮೂಡಣಮಂದರದುತ್ತರಕುರವದೊಳ್ಪುಟ್ಟಿಮೂಱುಪಳಿತೋಪಮಂಬರಮಲ್ಲಿಯಸುಖಮನನುಭವಿಸಿತದನಂತರಂದೇವಗತಿಪಡೆದು ॥

ಉ ॥ ಪೊಸದಸಾರಭಂತವದಮೆಯ್ಸಿರಿಬಾಡದದಾಮಮುಟ್ಟೊಡಂ ।
ಮಾಸದಸೇರೆಧಾತುಮಲವಿಲ್ಲದೊಡಲ್ಪರಿಪೂರ್ಣ್ಣಯೌವನಂ ॥
ಲೇಸೆನಿಸಿರ್ದ್ದರೂಪುಶುಭಲಕ್ಷಣವೆಂಬಿವನಪ್ಪುಕೆಯ್ದುನಾ ।
ಯಾಸದೊಳೆಸಿದ್ದೈಮೊದಲಸರ್ಗ್ಗದಬಾಳ್ಕೆಯೆರಳ್ಕಡಲ್ಗಳಂ ॥ 57

ವ ॥ ಮತ್ತಮಲ್ಲಿಂದಂಬಂದುಪುಷ್ಕಳಾವತಿವಿಷಯದಪುಂಡರೀಕಿಣಿಪುರಮನಾಳ್ವನಂದಿಘೋಷನರಪತಿಗಮಾತನರಸಿಯಪ್ಪವಸುಮತಿಗಂನಂದಿವರ್ದ್ಧನನೆಂಬನಂದನನಾದೆನಿಂನತಂದೆಯಪ್ಪನಂದಿಘೋಷನೊಂದುದಿವಸಂಕ್ರೀಡಾವನಕ್ಕೆಪೋಗಿದಿವ್ಯಯೋಗಿಗಳಂಕಂಡುಧರ್ಮ್ಮಮಂಬೆಸಗೊಂಡುಸಂಸಾರಶರೀರಭೋಗನಿರ್ವ್ವೇಗಪರನಾಗಿನಿನಗೆರಾಜ್ಯಮಂಕೊಟ್ಟುಯಶೋಧರಭಟ್ಟಾರಕರಚರಣೋಪಾಂತದೊಳ್ ತಪಶ್ಚರಣನಿರತನಾಗಿಸಮಾಧಿವಿಧಿಯಿಂವಿಗ್ರಹಮನುೞಿದುಬೞಿಯಂನವಗ್ರೈವೇಯಕಮಧ್ಯನಾಯಕನಾದಂನೀನುಮೊಂದುಪೂರ್ವ್ವಕೋಟಿಕಾಲಮರಸುಗೆಯ್ದು ಜಿನಧರ್ಮ್ಮಮಂಪತ್ತುವಿಡದೆನಡೆದುಕಡೆಯೊಳಯ್ದನೆಯಕಲ್ಪದುಪಪಾತಕಲ್ಪದೊಳ್ದೇವನಾದೈ ॥

ಕಂ ॥ ಆಯ್ದುಂಕಲ್ಯಾಣಮನಿ ।
ತ್ತೆಯ್ದಿಪದಯ್ದನೆಯಗತಿಯನವೆಯವದಿಂತಾ ॥
ನಯ್ದನೆಯನಾಕಲೋಕಮ ।
ನೆಯ್ದಿಪುದುಜಿನೇಂದ್ರಸೇವೆಗಾವುದುಗಹನಂ ॥ 58

ವ ॥ ಅಂತಲ್ಲಿಯಸುಖಮನನುಭವಿಸಿಬಂದುಭರತದಪರವಿದೇಹದ ವಿಜಯಾರ್ದ್ಧದಶಿಪು ರಮನಾಳ್ವರತ್ನಮಾಲಿಗಂವಿದ್ಯುಲ್ಲತೆಗಂಸೂರ್ಯ್ಯಂಜಯನೆಂಬ ಮಗನಾದನಿಜಜ ನಕನಪ್ಪರತ್ನಮಾಲಿಸಿಂಹಪುರಮನಾಳ್ವವಜ್ರಲೋಚನನೊಳ್ ಕಾದಲೆಂದುಚತು ರಂಗಬಲಸಹಿತನಾಗಿಪೋಗುತ್ತುಮಿರೆ ॥

ಕಂ ॥ ಮನದಮುನಿಸೆಂಬಕಳ್ತಲೆ ।
ಯನಲೆವಮಾಣಿಕ್ಯದೀಪಮೆನೆದಿವದಿಂದಾ ॥
ತನಮುಂದಣ್ಗೆಯ್ತಂದಂ ।
ದಿನಲಕ್ಷ್ಮಿಗೆತಂನದೇಹರುಚಿಕುಡೆಕೊರ್ಬ್ಬಂ ॥ 59

ವ ॥ ಅಂತುಬಂದು ॥

ಕಂ ॥ ವಿಗ್ರಹದೊಳ್ನಿನಗಿನಿತೇ ।
ಕಾಗ್ರಹವುೞಿಮುೞಿಸನೊಂದುಕಥೆಯಂಕೇಳೇ ॥
ಕಾಗ್ರಮನದಿಂದಮೆಂದುಸ ।
ಮಗ್ರಾವಧಿಬೋಧನಮರನಂದಿಂತೆಂದಂ ॥ 60

ಈಭರತದವಿಜಯಾರ್ದ್ಧಮ ।
ಹೀಭೃತ್ತಿಲಕಮೆನಿಪಶಶಿಪುರದೊಡೆಯಂ ॥
ಭೂಭುವನಪ್ರಥಿತಯಶಂ ।
ಶ್ರೀಭೂತಿಸುಭೂತಿವೆಸರಸುತನಂಪಡೆದಂ ॥ 61

ಉಪಮನ್ಯುವೆಂಬವಂತನ ।
ಗೆಪುರೋಹಿತನಾಗೆಪಿರಿಯಸಿರಿಯಂಸುಖದಿಂ ॥
ದುಪಭೋಗಿಸುತ್ತುಮಿರ್ದ್ದೊಂ ।
ಮೆಪ್ಪೊರ್ದ್ದಿದಂಕಮಲಗರ್ಭಯತಿಪತಿಪದಮಂ ॥ 62

ವ ॥ ಅಂತಾತಪೋನಿಧಿಯಸಂನಿಧಿಯೊಳ್ಮಧುಮಾಂಸನಿವೃತ್ತನಾಗಿವರ್ತ್ತಿಸುತ್ತಿರ್ಪ್ಪ ದಂಶ್ರೀಭೂತಿಯುಂತತ್ಪುರೋಹಿತನಪ್ಪುಪಮನ್ಯುದುಷ್ಟಮತಿನಷ್ಟವ್ರತಂಮಾಡಿ ತಾನುಂರಣಮರಣದಿಂವಾರಣವಾಗಿ ಮತ್ತಂಮರಣಮನೆಯ್ದಿಮುಂನಂತಂನಪತಿ

ಯಪ್ಪಶ್ರೀಭೂತಿಯುಮೋಹದಿಂದಾತನಸುತನಪ್ಪಸುಭೂತಿಗಂಯೋಜನಗಂಧಿಗವು
ರವಿಂದನೆಂಬನಂದನನಾಗಿತಾನೊಂದುದಿವಸಂಕಮಲಗರ್ಭಮಹಾಋಷಿಯದರ್ಶ
ನದಿಂಜಾತಿಸ್ಮರನಾಗಿತತ್ಸಮೀಪದೊಳ್ತೊಱೆದುತಪೋನಿಷ್ಠೆಯೊಳ್ನಿಱೆದುದೇವ
ನಾಗಿಶತಾರಕಲ್ಪದೊಳನಲ್ಪಸುಖಮನನುಭವಿಸುತಿರ್ದ್ದನಂನೆಗಮಿತ್ತಲ್ ॥

ಕಂ ॥ ಅಂದುದುರಾಚಾರದಫಲ ।
ದಿಂದಂಶ್ರೀಭೂತಿಸತ್ತುಫುಲ್ಲೆಯುಬಸಿಱೊಳ್ ॥
ಬಂದಂಕಾಳ್ಕಿಚ್ಚುಸುಡ ।
ಲ್ಬೆಂದಂಮಂದಾರಮೆಂಬಗಹನಾಂತರದೊಳ್ ॥ 63

ವ ॥ ಅಂತುಕಳೆದುಕಾಂಭೋಜದೊಳ್ಕಿರಿಂಜಯನೆಂಬಕಿರಾತನಾಗಿ ॥

ಕಂ ॥ ಆಡಿದಕಾಡೊಳ್ಜವನೆ ।
ಬ್ಬಾಡಿದನೆನೆಕೊಂದುತಿಂದುಕಯ್ಯುಂಕಾಲುಂ ॥
ಮೂಡಿದುವುಪಾತಕಕ್ಕೆನೆ ।
ಕಾಡೊಡಯನುಮಳಿದುಶರ್ಕ್ಕರಪ್ರಭೆಗಿಳಿದಂ ॥ 64

ವ ॥ ಅದನುಪಮನ್ಯುಚರನೆಂಬದೇವನವಧಿಯಿನಱಿದಲ್ಲಿಗೆಬಂದುನಿನಗೆಧರ್ಮ್ಮೋಪದೇ
ಶಂಗೆಯ್ಯೆಕೈಕೊಂಡುನೀನೀಗಳ್ ರತ್ನಮಾಲಿಯಾದೆನಿನಗೆಧರ್ಮ್ಮೋಪದೇಶಂಗೆಯ್ದೆ
ನಾವೆಂದುಪೇಳೆಕೇಳ್ದುದುವೆನಿರ್ವ್ವೇಗಕಾರಣವಾಗೆ ಸೂರ್ಯ್ಯಂಜಯನೆಂಬನಿಜತ
ನೂಜನಂರಾಜ್ಯಮಂಕೈಕೊಳ್ವುದೆನಲಾತಂತಪೋರಾಜ್ಯಮನಲ್ಲದೊಲ್ಲೆನೆಂಬುದುಂ
ತದಪತ್ಯನಪ್ಪಕಲ್ಪಾಮರಂಗೆರಾಜ್ಯಮಂಕೊಟ್ಟುರತ್ನಮಾಲಿಸೂರ್ಯ್ಯಂಜಯಂಬೆ
ರಸುತಿಲಕ ಸುಂದರಮುನಿತಿಲಕರಸಮಕ್ಷದೊಳ್ದೀಕ್ಷೆಗೊಂಡನೇಕಕಾಲಂ ತಪಂಗೆ
ಯ್ದುಮಹಾಶುಕ್ರಕಲ್ಪದೊಳ್ಪುಟ್ಟಿಪದಿನಾಱುಸಾಗರೋಪಮಮನಲ್ಲಿಯಸುಖಮ
ನನುಭವಿಸಿಬಂದಂದಿನಸೂರ್ಯ್ಯಂಜಯಂನೀನೀಗಳ್ದಶರಥನಾದೆನೀಂನಂದಿವರ್ದ್ಧ
ನನಾದಂದಿನನಿಂನತಂದೆಯಪ್ಪ ನಂದಿಘೋಷರೆಂಬವರ್ತ್ತೊಱೆದುನವಗ್ರೈವೇಯ
ಕದೊಳ್ನೆಲಸಿ ಬಂದುಸರ್ವ್ವಭೂತಹಿತರಾವಾದೆವಾಶ್ರೀಭೂತಿಯುಮುಪಮನ್ಯು
ವುಂಬಂದುನಿನ್ನಮಯ್ದುನರಪ್ಪಜನಕನುಂಕನಕನುಮಾದರೆಂದುಭಟ್ಟಾರಕರ್ಬ್ಬೆಸ
ಸೆದಶರಥಂವಿಸ್ಮಯಾಕ್ರಾಂತಸ್ವಾಂತನಾಗಿ ॥

ಚ ॥ ಯತಿಪತಿಪೇಳೆಕೇಳ್ದುಭವಸಂತತಿಯುಂಬಗೆದಾಜವಂಜವ ।
ಸ್ಥಿತಿಯುನನಾದಿಯುಂಸುಕೃತದುಷ್ಕೃತಕರ್ಮ್ಮವಿಪಾಕಸೌಖ್ಯದು ॥
ಸ್ಥಿತಿಗಳನುಂಡುರಾಟಳದಗುಂಡಿಗೆಯಂತೆವೊಲಾದೆನೆಂದುನಿ ।
ರ್ವೃತಿಸುಖದತ್ತಲಾಟಿಸಿದನೇಂರಘುಸೂನುಮಹಾನುಭಾವನೋ ॥ 65

ಚ ॥ ಅವಚರದಿಂನೆಗೆಂಸವಿದೆನಿಂದ್ರಿಯಸೌಖ್ಯಮನಗ್ರನಂದನಂ ।
ಕವಚಧರಂಜಿತಾಹಿತಬಲಂಬಲನಂನನಿರಲ್ಕಹಾಪರಾ ॥
ಭವಮದಱಿಂದಮಾವುದೆನಗೆಂದಿರದುತ್ತರಿಸಲ್ಕೊಡರ್ಚಿದಂ ।
ಭವಜಲರಾಶಿಯಿಂದಕರಥಂಜಿನರೂಪಬಹಿತ್ರಯಾತ್ರೆಯಿಂ ॥ 66

ಮ ॥ ಪರಪೀಡಾಕರಮೆಂತುನೋಡುವೊಡಮತ್ತರ್ಥೋಪಾರ್ಜನಂತದ್ದುರಾ ।
ಚರಿತೋದೀರಿತದುಃಖತಿಕ್ತಫಲಸೇವಾಕಾಲದಂದೋರ್ವರುಂ ॥
ನೆರವಿಲ್ಲಾಧನಸೇವೆಯಿಂದೆನೆರವಪ್ಪನ್ನೆಂಟರೆಂದಂದುತಾಂ ।
ಮರುಳಕ್ಕುಂಪುರುಳಕ್ಕುಮೇಮಱಿದುಹಾನಾದಾನವಿಜ್ಞಾನಮಂ ॥ 67

ವನಿತಾಸಂಕುಲಮುಂಷಡಂಗಬಲಮುಂಭಂಡಾರಮುಂವಸ್ತುವಾ ।
ಹನಮುಂತಂನೊಡವಪ್ಪುವಲ್ಲವೊಡವಕ್ಕುಂಪುಣ್ಯಪಾಪಂಗಳೆಂ ॥
ಬಿನಿತಂಭಾವಿಸಿತಾನೆತಂನದೆಸೆಯಿಂತಂನಂದಮಂಭಾವಿಸಲ್ ।
ಮನಮಂತಾರದೆಬಾಹ್ಯಮಂಬಯಸುವೆಂತಜ್ಞೋನ್ಯನೇಂಮಾನ್ಯನೇ ॥ 68

ಅಳಿವೆಂಣಾದೊಡಮೊಂದೆರಲ್ಲಿವಸವೊಂದಾಗಿರ್ದವಂನಂಟನೆಂ ।
ದುಳಿದಂದನ್ಯರನಾಸೆಗೆಯ್ವಳವಳಿಂನಿರ್ವ್ಯಾಕುಳಂಪೊಲ್ಲಿವಳ್ ॥
ಪಳಿಗಂಜಳ್ಖರತಾದಿಗಳ್ಪಲವುಕಾಲಂತಂನೊಳೊತ್ತಿರ್ದವ ।
ರ್ಕ್ಕಳಿದಂದಾಕ್ಷಣದೊಳ್ಧರಾರಮಣಿಮತ್ತೋರ್ವಂಗೆಪುರ್ವ್ವಿಕ್ಕುವಳ್ ॥ 69

ಮೃಗಭೂಮಿಶ್ರಿತಸಾಂದ್ರಚಂದನರಸಂಗಳ್ಚಂದನೋಶೀರವಾ ।
ರಿಗಳುಂನತ್ತಿರ್ತಹೇಮಚಾಮರಚಳಕ್ಕಂದಾನಿಳಂಗಳ್ವಿಳಾ ॥
ಸಗೃಹಂಗಳ್ಕಳೆಯಲ್ಕೆಸಾಲ್ದವುವೆರಾಗದ್ವೇಷವೇಗಂಗಳಿಂ ।
ಬಗೆಯೊಳ್ಪೆರ್ಚಿದತಾಪಮಂಕಳೆವವೊಲ್ಜೈನಾಂಘ್ರಿಕಲ್ಪಾಂಘ್ರಿಪಂ ॥ 70

ಕಂ ॥ ಎನಿತೆನಿತಂಪುಂಜಿಸಿದೊಡ ।
ಮನಿತನಿತುಂಮಣಿಯಲಱಿಯದಣಿಯರಮುರಿಗುಂ ॥
ಧನದಿಂಲೋಭಾಗ್ನಿಯನಿಂ ।
ಧನಭಾರದಿನಾವನಗ್ನಿಯಂನಂದಿಸುವಂ ॥ 71

ಜನಕನನರಣ್ಯನಗ್ರಜ ।
ನನಂತರಥನಿಳೆಯನೊಂದುತಿಂಗಳಕೂಸಿಂ ॥
ಗೆನಗಿತ್ತುತೊಱೆದರೆಂನವೊ ।
ಲಿನವಂಶದೊಳೆಂತುಮೋಹಮೂರ್ಚ್ಛಿತರೊಳರೇ ॥ 72

ಅಕ್ಕರ ॥ ಸಾವಪುಟ್ಟುವಭಯಮುಂಸಂಸಾರಮುಂಸಪ್ತಧಾತುಜದೇಹಸ್ಥಿತಿಯು ।
ನಾವವಸ್ತುವನುಂಡೊಡಂತಣಿವಿಲ್ಲದಕಾಂಕ್ಷೆಯುಂಬಗೆದುತಂನೊ ॥
ಳೇವುದೀತೊಡರ್ಪಿನಗಿದೇಕೆಂದುದಶರಥಂಭಾವಿಸಿ ।
ಭಾವಿತಾತ್ಮನಂಪರಮಯೋಗೀಂದ್ರನಂಬೀಳ್ಕೊಂಡಯೋಧ್ಯೆಗೆವೋದನಾಗಳ್ ॥ 73

ವ ॥ ಅಂತರಮನೆಯನಧಿರಾಜಂಪೊಕ್ಕುನಿರ್ವರ್ತಿತ ನಿತ್ಯನಿಯಮನಾಸ್ಥಾನಮಂಟಪ
ಮಧ್ಯಸ್ಥಿತಸಿಂಹಾಸನದೊಳಿರ್ಪುದುಂ ॥

ಚ ॥ ನೆಲಸಿದರಾಜಮಂಡಳಿಯುಮಂಡಳಿಕರ್ಕಳದಂಡನಾಥಮಂ ।
ಡಲಿಯನಿಯೋಗಿವರ್ಗದಪುರೋಹಿತವರ್ಗದಮಂತ್ರಿವರ್ಗದು ॥
ಜ್ವಲನವರತ್ನಭೂಷಣಕಿರೀಟತಟದ್ಯುತಿಯಿಂದದೇಂಪಳಂ ।
ಚಲಿದುದೊರಾಜರಾಜಸಭೆಕುಂಭಜನೀಂಟಿದತೋಯರಾಶಿಯಂ ॥ 74

ಕಂ ॥ ಗುರುಜನಮುಮಾಪ್ತಜನಮುಂ ।
ಪರಿಜನಮುಂಬಂಧುಜನಮುಮಾಶ್ರಿತಜನಮುಂ ॥
ಪುರಜನಮುಂತಿಂತಿಣಿಯಾ ।
ಗಿರೆಸಭೆಪೋಲ್ತುಲ್ತುರತ್ನಮೇಳಾಪಕಮಂ ॥ 75

ವ ॥ ಅಂತೋಲಗಂಗೊಟ್ಟುದಶರಥಮಹೀನಾಥಂನಿಜತನೂಭವರಂಬರವೇಳ್ದಟ್ಟುವುದುಂ
ತದಾಜ್ಞೆಯಂತಲೆಯೊಳಾಂತು ॥

ಚ ॥ ಹಲಮುಸಲಾಯುಧಂನಡೆವತಾರನಗೇಂದ್ರಮನೊಂದುಕಾರ್ಮುಗಿ ।
ಲ್ಬಳಸಿದವೋಲ್ವಿರಾಜಿಸೆವಿನೀಲಪಟಂನಡೆತಂದನೇಕಕಂ ॥
ಥಲನುದಯಾರ್ಕಮಂಡಲಮನೇಳಿಸೆಶೇಷನಶೇಷಧಾತ್ರಿಯಂ ।
ತಳೆವೆಡೆಯೊಳ್ನೆರಂಬಡೆದವೋಲಿರೆದಕ್ಷಿಣವಾಮಬಾಹುಗಳ್ ॥ 76

ಮ ॥ ಘನದೋರ್ದಂಡವಿಮಂಡಿತಂಘನಗದಾದಂಡಂಬೃಹತ್ಕಾಲದಂ ।
ಡನಿಭಂಭೀಕರಮಾಗೆಪೀತವಸನಂಸಂಧ್ಯಾಂಬುದಂಕೋದನೀ ॥
ಲನಗೇಂದ್ರಂನಡೆತಪ್ಪಮಾಳ್ಕೆಯಿನುಪೇಂದ್ರಂದುರ್ಜಯಂರಾಮಚಂ ।
ದ್ರನಬಿಂದಂನಡೆತಂದನಾಯತಸಿತಾಂಭೋಜೇಕ್ಷಣಂಲಕ್ಷ್ಮಣಂ ॥ 77

ಚ ॥ ಇದಿರ್ವರೆತತ್ಸಭಾಜನದಕಣ್ಮಲರುಂಮನಮುಂಕೆಲಕ್ಕೆವಂ ।
ದೊದವಿದಭಕ್ತಿಯಿಂದೆಬಗಿದಂಪಿತೃಪಾದಯುಗಕ್ಕೆರಾಘವಂ ॥
ಪದನಖಚಂದ್ರಮಂಡಲಕೆಚಂದ್ರಿಕೆಯಂಕುಡೆದೇಹದೀಪ್ತಿಹಾ ।
ರದನೆವದಿಂದಮೋಲಗಿಸೆತಾರಗೆಯಂನಿಜಕಂಠಕಂದಳಂ ॥ 78

ವ ॥ ಅನಂತರಂಲಕ್ಷ್ಮಣಭರತಶತ್ರುಘ್ನರ್ಸರ್ವ್ವಾಂಗಪ್ರಣತರಪ್ಪುದುಮನಂತಸುಖಭೋ
ಗಭಾಗಿಗಳಾಗಿಮೆಂದುಪರಸಿಪರ್ಯ್ಯಂಕಪಾರ್ಶ್ವದೊಳಿಕ್ಕಿದಮಣಿಮಯಾಸನದೊ
ಳ್ಕುಳ್ಳಿರಿಸಿದಶರಥಂರಾಮಚಂದ್ರನಮುಖಚಂದ್ರಮನಂನೋಡಿ ॥

ಚ ॥ ನಿಲೆನುಡಿದೀವಕಾವಧರೆಯಂಪ್ರತಿಪಾಲಿಪಧರ್ಮ್ಮವೃದ್ಧಿಯಂ ।
ತೊಲಗದಪೇರ್ಮ್ಮೆಯಂತಳೆದಪೇರ್ಮ್ಮೆಗನಂಭುವನಾಧಿಪತ್ಯದೊಳ್ ॥
ನಿಲಿಸಿನಿಸರ್ಗ್ಗದುರ್ಗ್ಗಮೆನಿಸಿದ್ದಪವರ್ಗ್ಗಪದಕ್ಕೆಧಾಳಿಯಿ ।
ಟ್ಟಲಘುಪರಾಕ್ರಮಕ್ಕೆನೆಲೆಯಾಗದಪಾರ್ತ್ಥಿವನೇಂಕೃತಾರ್ತ್ಥನೇ ॥ 79

ಮ ॥ ನೊಸಲೊಳ್ಕಣ್ಬಿಡೆವಂತೆಪುತ್ರಪಡೆದೆಂನಿನ್ನಂಸ್ಫುರತ್ತೇಜನಂ ।
ವಸುಧಾರಾಜ್ಯಮನೊಪ್ಪಗೊಳ್ನಿಲಿಸುನೀನೆಂನಂತಪೋರಾಜ್ಯದೊ ॥
ಳ್ಪಸುಗೊಸಿಂಗೆನಗಿತ್ತುಮಜ್ಜನಕನೀಸಂಪತ್ತಿಯಂಪೂಣ್ದುಸಾ ।
ಧಿಸಿದಂಸಜ್ಜನತಾಶರಣ್ಯನನರಣ್ಯಂಮೋಕ್ಷಸಂಪತ್ತಿಯಂ ॥ 80

ಸುತನಂಮನ್ವಯದೊಳ್ಪುರಾತನಜಗದ್ವಿಖ್ಯಾತಭೂನಾಥರೀ ।
ಸ್ಥಿತಿಯಿಂರಾಜ್ಯಸುಖಂಗಳೊಳ್ತಣಿದುತತ್ವಾಭ್ಯಾಸವಿಶ್ರಾಂತಜೀ ॥
ವಿತರಾದರ್ಮ್ಮಜಿದೀಕ್ಷಾಕ್ರಮಮನಾನಿಂತಿರ್ದ್ದುಸನ್ಮಾರ್ಗ್ಗಪ ।
ದ್ಧತಿಯಂಹಾಸ್ಯರಸಪ್ರವಾಹಜಲಧಿಂಪ್ರಕ್ಷಾಳಿತಂಮಾಳ್ಪೆನೇ ॥ 81

ತಿಳಕಾಕಾರದಿನಿರ್ಕ್ಕೆನಿನ್ನನೊಸಲೊಳ್ಸಾಮ್ರಾಜ್ಯಪಟ್ಟಂಧರಾ ।
ವಳಯಾಲಂಕೃತಮಕ್ಕೆನಿಂನಭುಜದಂಡಂನಿನ್ನಮೌಳಿಪ್ರಭಾ ॥
ವಳಿಯಿಂಚಿತ್ರಿತಮಕ್ಕೆಬೆಳ್ಗೊಡೆಪಪ್ಪೀಗಾಂಮನಂಮಂದನೆಂ ।
ನೊಲವಂಪಾಲಿಸುಪಾಳಿಯಲ್ತುಪಿತೃವಾಕ್ಯೋಲ್ಲಂಘನಂರಾಘವಾ ॥ 82

ಚ ॥ ಕಿಡಿವಿಡೆಕರ್ಪ್ಪೂರಂಸುಗಿದುಮೆಯ್ದೆಗೆದಂಕಮತಾಧಿಸಂಪಡ ।
ಲ್ಪಡೆವೆಡೆಗಳ್ಘಣಿಪ್ರಭುಮೊಗಂದಿರಿದಂದೆಸೆಯಾನೆಮಾರ್ಕ್ಕೊರ ॥
ಲ್ಪಡೆಯದೆತಗ್ಗಿಮುಗ್ಗಿದುವಿವಕ್ಷತಿಭಾರದೊಳಾದಸೇದೆಯಂ ।
ಕಿಡಿಸಿತನೂಜನೀಂತಳೆವುದೀನೆಲನಂನಿಜಬಾಹುದಂಡದೊಳ್ ॥ 83

ವ ॥ ಎಂಬುದುಂರಾಮಚಂದ್ರಂಮುಕುಳಿತಕರಸರೋಜನಾಗಿ ॥

ಮ ॥ ಧರೆಯಂದ್ವಾದಶಚಕ್ರವರ್ತ್ತಿಗಳನಿತ್ತಲ್ಲೀವನಿಂಮೀಭುಜಾ ।
ಪರಿಘಕ್ಕೊಪ್ಪಿಸಿಪೇಳ್ಪುದಂಪಡೆದುವೆಂತಾನುಂದಿಶಾದಂತಿದಿ ॥
ಕ್ಕರಿಣೀಪೇಚಕಚುಂಬನೈಕಸುಖಮಂಶೇಷೋರಗಂಭೋಗಿನೀ ।
ಪರಿರಂಭೋತ್ಸವಮಂಪುರಾಣಕಮಠಂನಿದ್ರಾಂಗನಾಸಂಗಮಂ ॥ 84

ಚ ॥ ಬಳವದರಾತಿಮಂಡಲಮನಂಡಲೆವುದ್ಧತಬಾಹುದಂಡದಿಂ ।
ದಿಳೆಯನಿಳೇಶನಿಂತಳೆದುದಂರಣಬಾಲಕರೆಂಮವಂದಿಗ ॥
ರ್ತ್ತಳೆವರೆವಿಶ್ವಲೋಕಮುಮನಶ್ರಮದಿಂಪ್ರಬಲಪ್ರಭಂಜನಂ ।
ತಳೆವವೊಲಕ್ಷಮಂತಳೆಯಲಾರ್ಕ್ಕಮೆವೀಜನವೆಂದವಮಾರುತಂ ॥ 85

ವ ॥ ಎನೆದಶರಥಂತನಯನವಿನಯವಚನಮಂಮನದೆಗೊಂಡು ॥

ಮ ॥ ತನಯಂಗೊಪ್ಪಿಸಿರಾಜ್ಯಮಂನಿಯಮದಿಂನಿಲ್ವತ್ತರ್ಪೋರಾಜ್ಯದೊ ।
ಳ್ಮನುವಂಶಕ್ಷಿತಿನಾಥರೀಸ್ಥಿತಿಗೆನಿನ್ನಂಪ್ರಾರ್ತ್ಥಿಸಲ್ವೇಡನಂ ॥
ದನಸಂಕ್ರಂದನವಂದನೀಯಪದದೊಳ್ನಿಲ್ವಂತಪೋರಾಜ್ಯದೊಳ್ ।
ನಿನಗಸ್ಮದ್ವಚನಂವಿಧೇಯಮದಱಿಂಕೈಕೊಳ್ಧರಾಭಾರಮಂ ॥ 86

ವ ॥ ಎಂದಿವುವೊದಲಾಗೆ ಪಲವುತೆಱದಿಂಮಱುಮಾತಿಂಗೆಡೆಯಿಲ್ಲದಂತುನುಡಿದೆಂತಾನುಂ
ರಾಮನನೊಡಂಬಡಿಸಿರಾಜ್ಯಸ್ಥನಪ್ಪಂತುಮಾಡೆತದನಂತರಂಭರತಂಮುಕುಳಿತಕರ
ಸರೋಜನಾಗಿ ॥

ಚ ॥ ಒಡಲಶುಚಿತ್ವಮಂಗತಿಚತುಷ್ಟಯದೊಳ್ತೊರೆಕೊಳ್ವನಿಷ್ಟಮಂ ।
ಕಿಡುವಸುಖಂಗಳಿಂತಣಿಯದಾಯಸಮಂತಿಳಿದಿರ್ದ್ದವೇನೊನಿಂ ॥
ಮಡಿಸಿಮಗಳ್ಕೆ ಬಿಂನವಿಸದಿಂನೆವರಂಸೆಡದಿರ್ದ್ದನಿನ್ನರಂ ।
ಬಡೆದನಿಳೇಶನಿಂಮೊಡನೆಸಾಧಿಸುವೆಂಪರಮಾರ್ತ್ಥಸೌಖ್ಯಮಂ ॥ 87

ಉಪಚಿತಸೌಖ್ಯಮೊಂದಧಿಕದುಃಖಸಮಾಗಮಜನ್ಮಭೂಮಿಯೊಂ ।
ದಪಗತದೋಷವೊಂದಖಿಲದೋಷಸಮನ್ವಿತಮೊಂದೆತಾಪಮೊಂ ॥
ದಪರಿಮಿತಾನುತಾಪಪರಮೊಂದದಱಿಂನಿಜಪಾದಕಲ್ಪಪಾ ।
ದಪಪರಿಸೇವೆಗಂಜನಪಸಂಪದಸೇವೆಗಮಾವುದಂತರಂ ॥ 88

ವ ॥ ಎಂದುತಱಿಸಂದುಭರತಂ ಬಿಂನವಿಸೆತತ್ಸಭೆಯೊಳೋರ್ವ್ವಗಳತಿತ್ವರಿತಗತಿಯಿಂಬಂ
ದುರಾಮಂಗೆರಾಜ್ಯಮನಿತ್ತುದಶರಥಂಭರತಂಬೆರಸುತಪೋವನಕ್ಕೆ ಪೋಪುದಂನಿವೇ
ದಿಸೆಕೈಕೆವಿಕಳೆಯಾಗಿ ॥

ಕಂ ॥ ಧರೆಯಂರಾಮಂಗಿತ್ತಂ ।
ಗುರುವಾನಳಿಪಿಂದಮಿರ್ದ್ದೊಡೆನಗಕ್ಕುಂಕಿಂ ॥
ಕರಭಾವಮೆಂಬಬಗೆಯಿಂ ।
ಭರತಂಗೊಡರಿಸಿದುದಕ್ಕ ಮಾನಿರ್ವ್ವೇಗಂ ॥ 89

ಕಂ ॥ ಅವನೀಶ್ವರನೊಡನೆತನೂ ।
ಭವಂತಪಂಬಟ್ಟೊಡಾಸೆಯಾರೆನಗೆಂದಾ ॥
ಯುವತಿಭಯಚಕಿತೆಚಿಂತಾ ।
ರ್ಣವಗರ್ತ್ತನಿಮಗ್ನೆ ಮಱೆದಳೆವೆಯಿಕ್ಕುವುದಂ ॥ 90

ತಕ್ಕಳೆದೆನಗೆಸಪತ್ನಿಯ ।
ರಿಕ್ಕಂಕೊಳಿಂಗೆಬಯಸಿಪಾರ್ದ್ದಿರ್ಪ್ಪವಿಷಾ ॥
ದಕ್ಕೆಗುರಿಯಪ್ಪದುರ್ಯ್ಯಶ ।
ಮಕ್ಕುಂತನಯಂತಪಕ್ಕೆ ಪಕ್ಕಾಗಲೊಡಂ ॥ 91

ವ ॥ ಎಂದಿಂತುಪಲುಂಬಿಪಂಬಲಿಸುತ್ತುಮಿರ್ಪ್ಪುದುಮಾಸಮಯದೊಳ್ ॥

ಕಂ ॥ ತನಗಿನಿಯನಿತ್ತವೆಚ್ಚಂ ।
ನೆನೆದಳ್ಕಡಗಿಟ್ಟುಮಱೆದಧನವಂಬಡವಂ ॥
ನೆನೆವಂತೆಕಾಂತೆಚಿಂತಾ ।
ಘನಾಂಧಕಾರಪ್ರದೀಪರೂಪೋಪಮಮಂ ॥ 92

ವ ॥ ಅಂತುನೆನೆದುಮನದೊಳ್ಗುಡಿಗಟ್ಟಿಭರತನಂರಾಜ್ಯಮೋಹದೊಳ್ ತೊಡರ್ಚ್ಚಲೆಂ
ದೊಡರ್ಚ್ಚಿ ॥

ಚ ॥ ಕನಕವಿಭೂಷಣಪ್ರಭೆತನುಪ್ರಭೆಯಿಂತನಿಗೊರ್ವ್ವಕೊರ್ವ್ವವೋ ।
ಹನವಮನೊಡರ್ಚ್ಚಲೆಂದುಗುಣಹಾನಿಗೆಪೆರ್ಚ್ಚದೆಧರ್ಮ್ಮಹಾನಿಯುಂ ॥
ನೆನೆಯದೆಪಾತ್ರಸೇವೆವೃಥೆಯಾದುದೆನಲ್ಮಲಿನಾಂತರಂಗೆತ ।
ಕ್ಕಿನಸೊಡರಂತೆಕೈಕೆಪುಗುತಂದಳಿಳಾಧಿಪರಮ್ಯಹರ್ಮ್ಮ್ಯಮಂ ॥ 93

ಕಂ ॥ ಉದ್ವೇಗಭರಂಸಭೆಗೆಜ ।
ಗದ್ವಲ್ಲಭನಭಿಮತಕ್ಕೆ ವಿಘ್ನಮಪಾಯಂ ॥
ವಿದ್ವಜ್ಜನಕ್ಕೆ ಪಸುಗೆಗೆ ।
ವಿದ್ವೇಷಣವಿದ್ಯೆಬರ್ಪ್ಪತೆಱದಿಂಬಂದಳ್ ॥ 94

ವ ॥ ಅಂತುಕೆಲಕ್ಕೆ ಬಂದು ॥

ಚ ॥ ಅನುಚಿತಮೆಂಬುದಂಬಗೆಗೆತಾರದೆದುರ್ಯ್ಯಶಮಕ್ಕುಮೆಂಬುದಂ ।
ನೆನೆಯದೆಕೈಕೆದೇವರೆನಗೀವುದುಬೈಕೆಯುಮೆಚ್ಚನೆಂಬುದಂ ॥

ಮನುಕುಲದೊಳ್ತೊದಳ್ನುಡಿಪೊದಳ್ಗಮೆಬೆಚ್ಚದೆಬೇಡಿಕೊಳ್ತಪೋ ।
ವನಗಮನಕ್ಕೆವಿಘ್ನಕರಮಲ್ಲದುದಂಮೃಗಶಾಬಲೋಚನೇ ॥ 95

ವ ॥ ಎನೆಮನದೆಗೊಂಡು ॥

ಚ ॥ ವದನಸುಧಾಂಶುಬಿಂಬದಕಳಂಕದಬೆತ್ತುಗೆಳಂತೆವಕ್ತ್ರಪ ।
ದ್ಮದಮಧುಪಾನಮಂಸವಿದುಸೂಕ್ತಿದತುಂಬಿಗಳಂತೆನೀಳ್ದುವಾ ॥
ಸುದತಿಸಮಗ್ರನಗ್ರಜನಿರಲ್ಪಗೆಗಂಜದೆಪಾಪಭೀರುವಾ ।
ಗದೆಭರತಂಗೆರಾಜ್ಯಭರಮಂಕುಡುವೇಳ್ದುಮಲೀಮಸೋಕ್ತಿಗಳ್ ॥ 96

ಕಂ ॥ ದಶರಥನಂಕೈಕೆಚತು ।
ರ್ದಶವರ್ಷಾವಧಿಯನವನಿಯಂಬೇಡೆಚತು ॥
ರ್ದಶಭುವನಾವಧಿಯೆನೆದು ।
ರ್ಯಶಪಟಹಗಭೀರನಾದಮೇನೊದವಿದುದೋ ॥ 97

ಘನವೆನಿಪಕಾಳರಾತ್ರಿಯ ।
ದನಿಯಂತಾನೃಪನಕಿವಿಗೆದುಸ್ಸಹಮಾಯ್ತು ॥
ವನಿತೆಯನುಡಿಕಿವಿಗೆಯ್ತರೆ ।
ಮನಕ್ಕೆಪಡೆದತ್ತುವೇದನಾಸ್ವಾದನಮಂ ॥ 98

ಡೋಲಾಯಮಾನಮನನ ।
ಸ್ತ್ರೀಲಾಪಂಗತಮನೋರಥಂದಶರಥನಾ ॥
ಬಾಲೆಯದನಿಕಿವಿಪ್ಪುಗೆಘನ ।
ಮಾಲೆಯದನಿಗೇಳ್ದಹಂಸನಂತಳವಳಿದಂ ॥ 99

ಮ ॥ ಎರಡಕ್ಕುಂನುಡಿಮೆಚ್ಚುಗೊಟ್ಟುಕೊಡದಂದೀಕೈಕೆಗಾನಿತ್ತೊಡಂ ।
ಧರೆಯಂಸ್ತ್ರೀಜಿತನಾಗಿಕೊಟ್ಟನವನೀಶಂರಾಮನಿರ್ದ್ದಂದದಿಂ ॥
ಭರತಂಗೆಂಬಪವಾದಮಕ್ಕುಮದರಿಂದೇನೆಂಬೆನಾನೆಂದುಮಾ ।
ಗರಪೋಲ್ಮ್ಲಾನದೊಳೊಂದಿಪಚ್ಚಬಗೆಯಿಂದುಬ್ಬೇಗಮಂತಾಳ್ದಿದಂ ॥ 100

ವ ॥ ಅಂತುದಶರಥನರನಾಥಂದಿವಸದವಸಾನದರಥಾಂಗದಂತೆಚಿಂತಾಕ್ರಾಂತನಾಗಿರ್ಪ್ಪ
ದಂ ॥

ಕಂ ॥ ಮಜ್ಜನನಿನೆಲನನೆನಗ ।
ಸ್ಮಜ್ಜನಕನನೆರೆದಳೆಂದುನೊಂದಂಭರತಂ ॥

ಲಜ್ಜಾನತನಭಿಮಾನದ ।
ಪಜ್ಜೆಯನೇಂತಪ್ಪಿಮೆಟ್ಟಲಱಿಗುಮೆತಕ್ಕಂ ॥ 101

ಇಷ್ಟಮೆನಗಲ್ತು ಪತಿಗದ ।
ನಿಷ್ಟಂಭಾವಿಸಿದೞಲ್ಲತನಗಂದೃಷ್ಟಾ ॥
ದೃಷ್ಟವಿರೋಧಂದುರ್ನ್ನಯ ।
ಚೇಷ್ಟಿತಮಂಜನನಿಮುಗ್ಧಮತಿತಿೞಿದಪಳೇ ॥ 102

ವ ॥ ಎಂದುಭರತಂವಿಷಾದಭರತಂದ್ರೀಭೂತಚಿತ್ತನಾಗಿರ್ಪ್ಪುದುಂ ॥

ಚ ॥ ನುಡಿದಳನಿಷ್ಟಮಂನುಡಿದಳನ್ನಯಮಂಪತಿಗಂವಿರುದ್ಧಮಂ ।
ನುಡಿದಳಸೇವ್ಯಮಂನುಡಿದಳನ್ವಯರಾಜ್ಯವಿನಾಶಹೇತುವಂ ॥
ನುಡಿದಳಿನುತ್ತಮಳ್ಕದೆನರೇಂದ್ರಸಭಾಜನಮಂದುಕೈಕೆಯುಂ ।
ನುಡಿದುದುಮೆಚ್ಚಿದಂದದೊಳೆದೋಷಮೆದುರ್ವ್ವಿಳಮಾಗದಿರ್ಕ್ಕುಮೇ ॥ 103

ಮನದೞಪಿಲ್ಲದಂಗನೆಯರೋರ್ವ್ವರುಮಿಲ್ಲೆ ನೆಕೈಕೆಬೇಡಿಮೇ ।
ದನಿಯನಿದೇಕೆಮಾಡಿದಳೊಮುಗ್ಧೆಸಹೋದರರೊಳ್ವಿಭೇದಮಂ ॥
ತನಗಪವಾದಮಂದಶರಥಂಗೆವಿಷಾದಮನೀಗಳಾತ್ಮನಂ ।
ದನಸಮನಕ್ಕೆ ಖೇದಮನಿದೊಂದುಚಿತಾಚರಣಪ್ರಮಾದಮಂ ॥ 104

ಕಂ ॥ ಇತರರಳವಲ್ಲದಪರಾ ।
ಜಿತಾಸುತಂಗಲ್ಲದೇಕೆದೇವಿಧರಿತ್ರೀ ॥
ಪತಿಯುಂವಸುಮತಿಯುಂಜಡ ।
ಮತಿಬೇಡಿದಳೆಂದುಕೆಲಬರೇೞಿಸಿನುಡಿದರ್ ॥ 105

ಕೀರ್ತ್ತಿಸೆಧರೆತಲೆಗರೆದಿರೆ ।
ಮಾರ್ತ್ತಲೆರಾಘವನಮೋಘಶರಮುಂವಜ್ರಾ ॥
ವರ್ತ್ತಮುಮಲ್ಲದೆರಕ್ಷಿಸ ।
ಲಾರ್ತ್ತಪುವೇನೆಲನನುೞಿದರಂಬುಂಬಿಲ್ಲುಂ ॥ 106

ಗುಣಹಾನಿಗೆಜೆಚ್ಚದೆಥಾ ।
ರುಣಿಯುಂಪ್ರಣಯದಿನಿಳೇಶನಿತ್ತೊಡಮೇಂಲ ॥
ಕ್ಷ್ಮಣನೀಯಲೀಯನೆಂಬುದ ।
ನೆಣಿಸದೆಜಡಮತಿಗಳಾಗದಿರ್ಪ್ಪರೆಸತಿಯರ್ ॥ 107

ಸುತಮೋಹದಿನೀವಧೂಪತಿ ।
ಹಿತಮಂಭಾವಿಸದೞಲ್ಲತನಗಮಣಂದು ॥
ರ್ಗ್ಗತಿಹೇತುವನತಿಮೋಹಂ ।
ಗತಿಗಿಡಿಸುಗುಮೆಂಬನಾಡನುಡಿತಪ್ಪುಗುಮೇ ॥ 108

ಮೋಹಮನಖಿಳಪರಿಗ್ರಹ ।
ದಾಹಮನೀಕೈಕೆಬೇಡೆಧರೆಯಂತೃಣದಿಂ ॥
ಲಾಘವಮೆನೆಬಗೆದೀಗಂ ।
ರಾಘವನೌದಾರ್ಯ್ಯತುಂಗನೀಯದುದುಂಟೇ ॥ 109

ಮ॥ಸ್ರ॥ಭರತಂಲಜ್ಜಾನತಂತಾಯ್ವಿಕಳೆದಶರಥಂವಿಹ್ವಳಂಲಕ್ಷ್ಮಣಂಕೋ ।
ಪರಸಾವೇಶಂಸಭಾಮಂಡಲಮಸಕೃದಸದ್ವಾಕ್ಯಮುಕ್ತೋಷ್ಮಮಂತಃ ॥
ಪುರಮಂತಶ್ಶೂನ್ಯಮಿಂತಿರ್ಪ್ಪುದುಮುಪಚಿತಕಾರುಣ್ಯದೃಷ್ಟಿಪ್ರಭಾನಿ ।
ರ್ಭರಪೂರಂಪಾರಿಜಾತಂಕಡಲನಡುವೆಕೈವಂದವೋಲ್ರಾಮನಿರ್ದ್ದಂ ॥ 110

ಉ॥ ತಂದೆಯನನ್ನಿನಿಲ್ವುದುಮನೋರಥಮಪ್ಪುದುತಾಯ್ಗೆರಾಜ್ಯದೊ ।
ೞ್ಸಂದಪನೆಂನತಂಮನೊಸೆದಿತ್ತುಕೃತಾರ್ತ್ಥನೆನಪ್ಪೆನೆಂನಸೈ ॥
ಪಿಂದೊರೆಕೊಂಡುದೀಪರಮಲಾಭಮೆನುತ್ತುಮುದಾತ್ತಚಿತ್ತನಾ ।
ನಂದಮನಪ್ಪುಕೆಯ್ದುಪುಳಕೋದ್ಗಮಮಂತಳೆದಂಪಲಾಯುಧಂ ॥ 111

ಚ॥ ಮಗನೆನಿಪಂಗೆಮಾತೃಪಿತೃಭಕ್ತಿಯೆಕೃತ್ಯಮಿಹತ್ರಗಂಪರ ।
ತ್ರಗಮುಪಕಾರಿಬೇಱೆವೆಱತಾವುದೊಚಾರುಚರಿತ್ರಮೆಂದುಕೀ ॥
ರ್ತ್ತಿಗೆದೆಸೆಸಾಲವೆಂಬಿನೆಗಮರ್ಣ್ಣವಮೇಖಳೆಯಂಧರಿತ್ರಿಯಂ ।
ಬಗೆಯುತೆಪಾರ್ತ್ತೆಗೆಯ್ಯನೆಜರತ್ತೃಣಲಾಘವಮೆಂದೆರಾಘವಂ ॥ 112

ಅಸದನುಶಾಸನಂಸದವನಂನೃಪಲಕ್ಷಣಮೊಂದುಬಾಹುಸಾ ।
ಹಸಗುಣಮೊಂದುದಾನಗುಣಮೀಯೆರಡುಂನಿಮಿರ್ವ್ವಂತುಪೋಗಿಸಾ ॥
ಧಿಸುವೆನರಾತಿಮಂಡಲಮನೆಂನನುಜಂಗೆನಗಂಮನಿತ್ತುದಂ ।
ವಸುಧೆಯನೀವೆನೆಂದುಮನದೊಳ್ತಱಿಸಂದನುದಾತ್ತರಾಘವಂ ॥ 113

ವ॥ ಅಂತುನಿಶ್ಚಯಿಸಿಕೈಕೆಯಮುಖಕಮಲವಿಲೋಕನಂಗೆಯ್ದುಮುಕುಳಿತಕರಕಮ
ಳನುಂವಿಕಸಿತಹೃದಯಕಮಳನುಮಾಗಿ ॥

ಚ॥ ಪುಸಿಪೋಲನಲ್ತುನಾಲಗೆಪಂದೆತನಂಮೊಱೆಯಲ್ತುಕಯ್ಯಕೊ ।
ರಸಿಗೆಕುಳಕ್ರಮಂರಘುಕುಲಕೆ ದಾದೇವಿಯರ್ಗ್ಗೆಂನದೊಸಱಿಂ ॥

ಪುಸಿನುಡಿಯುಂಮದೀಯಜನಕಂನುಡಿದಂದುಜನಾಪವಾದಮೆ ।
ಣ್ದೆಸೆಗಮನರ್ಗ್ಗಳಂಪರೆಗುಮದಾನದನೇಂಪೆಪ್ಪೆನ್ನಮಾಗದೇ ॥ 114

ಮ ॥ ಧರೆಯುಂತಂದೆಯನಂನಿಗಿತ್ತುಧರೆಯುಂಕೈಕೊಂಡೊಡೆಂನೊಳ್ಪುಬೀ ।
ಸರಮುಕ್ಕುಂಬಗೆಕೊಡದಂದುನಿಮಗಕ್ಕುಂಪ್ರಾರ್ತ್ಥನಾಭಂಗಮೀ ॥
ಯೆರಡುಂದುರ್ನ್ನಯಮೆಂನಕೀರ್ತ್ತಿಗೆಕಲಂಬಂಮಾಡುಗುಂರಾಜ್ಯಮಂ ।
ಭರತಂಗಳ್ಕಜಿಂಳಿತ್ತೆನೆಂನನುಡಿಯುಂನೀನಿಂತುನಂಬಂಬಿಕೇ ॥ 115

ಕಂ ॥ ಎನಗೆಪೆಸಸಿದೊಡೆಸಾಲದ ।
ಜನನಿಯರೀಧರೆಯನೆಂನತಂಮಂಗಾನೀ ॥
ಯನೆಬೇಡವೇಳ್ಪುದೇವ ।
ಜ್ಜನಕನನಿಲ್ಲಿವರಮಿಂತಿದಾವುದುಗಹನಂ ॥ 116

ವ ॥ ಎಂದುತಾಯುಬಯಕೆಯಂತೀರ್ಚ್ಚಿ ॥

ಮ ॥ ಜನಕಂರಾಜ್ಯಮನೀಯೆರಾಮನಮುಖಂಹರ್ಷಕ್ಕೆಪಕ್ಕಾದುದಿ ।
ಲ್ಲನುಜಂಗದ್ಯೌನನಂನಿಯುಂಸಲಿಸಲೆಂದೀವಲ್ಲಿಹರ್ಷಕ್ಕೆತಾ ॥
ಯ್ಯನೆತಾನಾದುದಿದಾವುದಚ್ಚರಿಯೊಪೆಳೀವಲ್ಲಿಸತ್ಪಾತ್ರದೊಳ್ ।
ಧನಮಂಪೋನಲಿವಂದದಿಂನಲಿಗುಮೇಧನ್ಯಂಧನಪ್ರಾಪ್ತಿಯೊಳ್ ॥ 117

ವ ॥ ತದನಂತರಮುದಾತ್ತರಾಘವಂತಂದೆಯುಮುಖಾರವಿಂದಮಂನೋಡಿ ॥

ಚ ॥ ಎಡೆಗುಡದಿರ್ದ್ದಡಂಗಗೆನಮಂಡಲಮುರ್ವ್ವರೆತಾಳದಿರ್ದ್ದಡಂ ।
ಮಿಡುಕದೆಗಾಳಿಮೆಯ್ಗರೆದೊಡಂಮಳೆಗಳ್ಮಳೆಗಾಲದಂದಣಂ ॥
ತಡೆದೊಡಮಗ್ನಿತೋಱದೊಡಮುಷ್ಣತೆಯುಂರಘುವಂಶಜತ್ತೊರ್ದ ।
ಳ್ನುಡಿದೊಡಮಾಹವಕ್ಕೆಸೆಡೆದಿರ್ದ್ದಡಮಂತುಜಗಕ್ಕೆಜೀವನಂ ॥ 118

ಕಂ ॥ ದೇವರೆನಗಿತ್ತುದಂವಸು ।
ಧಾವಲಯಮನಾಳ್ವರೆಂನತಂಮಂದಿರೆಬಿಂ ॥
ತಾವಿಷಯಮಲ್ತುಭರತಂ ।
ಗೀವುದುವಸುಮತಿಯನೆಂಮೊಳೆಡೆಗಟ್ಟುಂಟೇ ॥ 119

ಭರತಂತಪಕ್ಕೆನಡೆಗುಂ ।
ಧರೆಯೊಳ್ನಿಲಿಸದೊಡೆಸುತನಾಗಲ್ಕೆಯೊಳಕ್ಕುಂ ॥
ಮರಣಂಜನನಿಗೆನಿಮಗಂ ।
ದೊರೆಕೊಳ್ಗುಮದೃಷ್ಟಬಾಧೆಪರಸಪವಾದಂ ॥ 120

ಪ್ರಾಪ್ತಿಯನಸಕಳೆಯಲುಮ |
ಪ್ರಾಪ್ತಿಯನಾಗಿಸಲುಮಾಗದದಱಿಂದೋಷಾ ||
ವಾಪ್ತಿಯನೇಂನಿಂಮಂನರ್ |
ಸುಪ್ತರವೋಲ್ಮೋಹಮೂರ್ಛೆಯಂತಾಳ್ವವರೇ || 121

ಎಂತುಟುಶುಭಾಶುಭೋದಯ |
ಮಂತುಟನನುಭವಿಪರಾರುಮಿದನಱಿಯುತ್ತುಂ ||
ಚಿಂತಾಜ್ವರಮಂಪಿರಿಯರ್ |
ಸ್ವಾಂತದೊಳಿರಿಸುವುದೆದೇವಜಡಮತಿಗಳವೋಲ್ || 122

ಮ || ಪಡೆಮಾತೇಂಸುತಮೋಹದಿಂದಶರಥಂಮಾತಾಡಿದಂತಪ್ಪನೆಂ |
ದೊಡೆದೇವರ್ಗ್ಗಪವಾದಮಕ್ಕುಮೆನಗಂರಾಮಂಗಡಂಕೇಳ್ದುಮೊ ||
ನುಡಿಯಂರಾಜ್ಯಮನಾಸೆಗೆಯ್ದುನೆನೆದೈನ್ಯಂಬಿಕ್ಕರ್ಗಮಿಂನಾಸೆಗೆ |
ಯ್ದೊಡೆನಿಂಮಾಜ್ಞೆಗೆತಪ್ಪಿದಂಸಲಿಸಿವೊಂಮಿಂಗೆಂನವಾಗ್ವೃತ್ತಿಯಂ || 123

ಪದಿನಾಲ್ಕುಂವರ್ಷಮಂತಾಯ್ತನಯನತಪಮಂಮಾಣಿಸಲ್ರಾಜ್ಯಮಂಬೇ |
ಡಿದಳೊಳ್ಪಂಮಾಡಿದಳ್ಸೋದರವಿರಹಿತಮೇಬಾರ್ತ್ತೆಸಾಮ್ರಾಜ್ಯಸಂಪ ||
ತ್ಪದಮಸ್ಮದ್ಬಾಹುವೀರ್ಯಪ್ರಕಟನದೊಲವಿಂದಂನೆಗಂದಿಗ್ಜಯೋದ್ಯೋ |
ಗದಿನೀಗಳ್ಪೋಗಿಬರ್ಪ್ಪೆಂಭರತನನೊಸಲೊಳ್ನಿಲ್ಕೆಸಾಮ್ರಾಜ್ಯಪಟ್ಟಂ || 124

ವ || ಎಂದುಬಿಂನವಿಸಿದ ರಾಘವನಮೋಘವಾಕ್ಯಮಾಣಿಕ್ಯಕಿರಣದಿನಪಸಾರಿತಮೋಹಾಂ
ಧಕಾರನಾಗಿ ||

ಮ|ಸ್ರ|| ಪರಮಶ್ರೀವಲ್ಲಭಂಗೀಚರಮತನುಗಿದೇಬಾರ್ತ್ತೆನಂಮೀವರಾಜ್ಯಂ |
ಪರಮಾಣುಪ್ರಾಯಮೆಂದಾತನಯನವಿನಯಕ್ಕಂನೆಯಕ್ಕಂಮನಕ್ಕಂ ||
ಚರಿತಕ್ಕಂಬೆಕ್ಕಸಂಬಟ್ಟಧಿಪತಿತಲೆಯಂತೂಗಿದಂಸೂಸುವಂನಂ |
ಸುರಚಾಪಶ್ರೇಣಿಯಂಭಾಸುರಮಣಿಗಣನಾನಾಂಶುಕೂಟಂಕಿರೀಟಂ || 125

ವ || ಆಸಮಯದೊಳ್ಭರತಂದಶರಥಂಗೆಮುಕುಳಿತಾಂಜಳಿಪುಟನಿಂತೆಂದಂ ||

ಕಂ || ಜ್ಯಾಯನರಾಜ್ಯಮನಯ್ಯಕ |
ನೀಯನಪೇಕ್ಷಿಸುವುದುಚಿತಮಲ್ತುತಪೋರಾ ||
ಜ್ಯಾಯತ್ತಮೆಂನಚಿತ್ತಂ |
ನ್ಯಾಯಾರ್ಜ್ಜಿತಮಲ್ಲದೆನಿಪಧನಮೇಭಂಡಂ || 126

ಕಂ ॥ ಹೇಯಮನಱಿದುಂರಾಜ್ಯಮ ।
ನೀಯಲಪೇಕ್ಷಿಸುವಿರೆನಗೆನೀವಲ್ಲದುದಂ ॥
ಶ್ರೇಯಸ್ಕರಮಲ್ಲದುದಂ ।
ಹೇಯಮುಪಾದೇಯಮೆನಗದೆಂತಾದಪುದೋ ॥ 127

ಎಂನೆವರಂವೈರಾಗ್ಯಂ ।
ತಂನೊಳ್ತಲೆದೋಱದನ್ನೆವರಮೊಲವೆಕ್ಕುಂ ॥
ತಂನಂತಾನಱಿದಬೞಿ ।
ಕ್ಕೆಂನೆಂಗಂವಿಷಯಸುಖದೊಳೊಲವಾದಪುಧೇ ॥ 128

ವ ॥ ಎನೆದಶರಥಂಭರತನಪರಿಚ್ಛೇದಮಂ ಮನದೊಳೆಮೆಚ್ಚಿ ತನಯನಿನಗಿದಂನೆವರಂಸ
ಮಯಮಲ್ತದೆಂತೆನೆ ॥

ಕಂ ॥ ಪರಮಪುರುಷಾರ್ತ್ಥಮಿರ್ದ್ದುದು ।
ಚರಮದೊಳಂನೆವರಮುೞಿದಪುರುಷಾರ್ತ್ಥದೊಳಾ ॥
ಚರಿಸುವುದುತಕ್ಕುದದಱಿಂ ।
ಪರಿವಿಡಿಯಂತಪ್ಪಲಾರ್ಗ್ಗಮೇಂಬಂದಪುದೇ ॥ 129

ವ ॥ ಅದಱಿಂನಿನಗೆನಿಜಾಗ್ರಜನವಚನಮೆವಿಧೇಯಮೆನೆ ಮಱುಮಾತುಂಗುಡಲಱಿಯ
ದೆಭರತನಿರೆರಾಘವನಿಂತೆಂದಂ ॥

ಉ ॥ ನಂನಿಗೆಬಂನವಾದೊಡಯಶಂಪಿರಿದಪ್ಪುದುತಂದೆಗೆಂಬಿದಂ ।
ನಿಂನವಿಯೋಗದಿಂಜನನಿಗಪ್ಪುದುಜೀವವಿಯೋಗಮೆಂಬಿದಂ ॥
ನಿಂನನೆಗಳ್ತೆಗಂಮಹಿಮೆಗಂಪಿತೃವಾಕ್ಯಮೆಕೃತ್ಯಮೆಂಬಿದಂ ।
ನಿನ್ನೊಳೆನೀಂವಿಚಾರಿಸುವುದೇೞಿಸಲಪ್ಪುದಿದಾಗದೆಂಬುದಂ ॥ 130

ಚ ॥ ಕ್ರಮಪರಿಪಾಲನಾರ್ತ್ಥಮೆನಗಿತ್ತನಿಳಾಧಿಪನಿತ್ತೆನೆಂನರಾ ।
ಜ್ಯಮನಧಿರಾಜಸತ್ಯಪರಿಪಾಲನೆಗಾಂನಿನಗಳ್ಕಱಿಂದದ ॥
ಕ್ರಮಮಣಮಲ್ತುನೀಂತಳೆವುದೊರ್ಮ್ಮನದಿಂಯುವರಾಜರಾಜ್ಯಭಾ ।
ರಮನಧಿರಾಜವಾಕ್ಯಮೆನಗಂನಿನಗಂಕರಣೀಯಮಲ್ಲವೇ ॥ 131

ವ ॥ ಎಂದುರಾಮನನುಜನಂರಾಜ್ಯದೊಳ್ನಿಲ್ವಂತೆತಾನುಮೊಡಂಬಡಿಸೆವಿಸ್ಮಯಂಬಟ್ಟು ॥

ಉ ॥ ಏದೊರೆಯರ್ಮ್ಮಹಾಪುರುಷರಾದ್ಯರಿದಂಪಿಡಿದೋರ್ವ್ವರೋರ್ವ್ವರೊಳ್ ।
ಕಾದಿದರೋಡಿದರ್ಮ್ಮಡಿದರಲ್ಲದೆತಂದೆಯನಂನಿಗಿತ್ತರಾ ॥
ರ್ಮ್ಮೇದಿನಿಯಂಜರತ್ತೃಣಮನೀವವೊಲೆಂದುಕಡಂಗಿಬಂಣಿಸಿ ।
ತ್ತಾದರದಿಂಮಹೀಭುಜಸಭಾವಳಯಂಬಲಭದ್ರರಾಮನಂ ॥ 132

ಶಾ ॥ ಉರ್ವೀನಾಥರನೇಕರುಂಮಡಗಿಭಂಡಾರಂಗಳಂಲೋಭದಿಂ ।
ಪೇರ್ವಾವಾಗಿಪಿಶಾಚಮಾಗಿಪಲಕಾಲಂಕಾದುಕೊಂಡಿರ್ದ್ದರಾ ॥
ರುರ್ವೀಚಕ್ರಮನಿಂತುಕೊಟ್ಟರನುಜಂಗೆಂದಾಸಭಾವಿಷ್ಟರೋ ।
ರೋರ್ವ್ವರ್ಬ್ಬಣಿಸಿದರ್ಪ್ಪರಾರ್ತ್ಥ್ಯಗುಣಕಲ್ಪಾರಾಮನಂರಾಮನಂ ॥ 133

ಕಂ ॥ ಕಾಗಿಣಿಗೆಮರಂಬೀಳ ।
ಲ್ಪೋಗಿರ್ಕ್ಕಂಕಡಲಕಡೆವರಂನಿಮಿರ್ದ್ದಮಹೀ ॥
ಭಾಗಮನನುಜಂಗಿತ್ತಂ ।
ಭಾಗಿಗಳಾರ್ಸ್ಸೀರಪಾಣಿಯೊರೆಗೆಂದೊರೆಗಂ ॥ 134

ಎಱಗುವುದೂರ್ದ್ಧ್ವಜ್ವಾಳಮೇ ।
ತೆಱನೆನಿಸಿದದೀಪವರ್ತ್ತಿನಿಧಿಗಾನಿಧಿಯಂ ॥
ತೊಱೆದಂದಲೆಂದೊಡಾರ್ಪ್ಪನ ।
ತಱಿಸಲವಂಕಂಡನೇಕಕುಂಡಲನೆವಲಂ ॥ 135

ವಸುಮತಿಯುಂಮೃತ್ಪಿಂಡ ।
ಕ್ಕೆಸಮಂಗಂಡಾರೊಕೊಟ್ಟುತಂದೆಯುಪಳಿಯಂ ॥
ಮಸುಳಿಸಿಹಳಿಯುವೊಲೆಂಟುಂ ।
ದೆಸೆವರೆಗಂವಿಶದಕೀರ್ತ್ತಿಯಂಪಸರಿಸಿದರ್ ॥ 136

ಪಿನಾಸುಮನಿತ್ತುಕೆಲ ।
ದ್ದಾರ್ನಗುಣಕ್ಕಂತೆಪೆಸೆವರಯ್ಯನಸತ್ಯ ॥
ಕ್ಕೇನಯ್ಯರಘುಜನಂತಂ ।
ಭೋನಿಧಿವಳಯಿತಮನಿಳೆಯನಿತ್ತವನಾವಂ ॥ 137

ವ ॥ ಎಂದುಪೊಗಳ್ವಸಭಾಜನದಸ್ತವನಕ್ಕಂಭರತಂಕ್ರಮಂದಪ್ಪಿಸಾಕೇತಸಾಮ್ರಾಜ್ಯಪ
ಟ್ಟಮನೊಡಂಬಟ್ಟುದಕ್ಕಂಲಕ್ಷ್ಮಣಂಕಟ್ಟುಕಡೆದು ॥

ಕಂ ॥ ಅಡಿಮೊತ್ತಕೋಪಶಿಖಿಕ ।
ಣ್ಗಿಡಿಯಂಕೆಂಡಮುಮನುಗುಳೆಪುರ್ವ್ವುರ್ವ್ವಿಸೆಮೋ ॥
ಗಡರ್ವ್ವಪೊಗೆಯಂತೆಕೃಷ್ಣಂ ।
ಕಡೆಗಾಲದೊಳೊಗೆದಧೂಮಕೇತುವೊಲಿರ್ದ್ದಂ ॥ 138

ವ ॥ ಅಂತುಕೋಪರಸವಶಗತನಾಗಿ ॥

ಉ ॥ ಕಾರಾಗಾರದೊಳಿಂದ್ರನಂಸೆಱೆಯಿಕಲ್ಗೋತ್ರಾದ್ರಿಯಂಬಾೞಿಸಲ್ ।
ತಾರಾಮಂಡಲಮಂನೆಲಕ್ಕೆ ನೆಲನಂವ್ಯೋಮಕ್ಕೆ ಪಕ್ಕಾಗಿಸಲ್ ॥
ಪಾರಾವಾರದನೀರನೀಂಟಲಖಿಳಾಶಾದಂತಿದಂತಂಗಳಂ ।
ಬೇರಿಂದಂಕಿೞಲಂಪದೇಂಬಗೆದನೋರಕ್ತೇಕ್ಷಣಂಲಕ್ಷ್ಮಣಂ ॥ 139

ಕಂ ॥ ಸೌಮಿತ್ರಿವಿಳಯಕಾಲಮ ।
ಹಾಮೇಘಸ್ಕಂಧನಿಕಟವರ್ತ್ತಿತವಿದ್ಯು ॥
ದ್ದಾಮಮಿದೆನೆದಂತಾಂಶು ।
ಸ್ತೋಮಂಪೊಳೆದುಳ್ಕೆ ಬೆಟ್ಟವೆಟ್ಟನೆನುಡಿದಂ ॥ 140

ಭರತಾವನಿಯಂಕೊಟ್ಟಂ ।
ಭರತಂಗೆರಘುಪ್ರವೀರನಯ್ಯನನುಡಿಯಂ ॥
ಪರಿಪಾಲಿಸಲೆಂಗುಮೆಪೇ ।
ರ್ಧರೆಯಂಪೆಳ್ಮಾಡಿಕೊಂಡರೆಂಗುಂಲೋಕಂ ॥ 141

ಕ್ರಮಮನತಿಕ್ರಮಿಸಿಪರಾ ।
ಕ್ರಮಮಿಲ್ಲೆಂದಿಳೆಕೆಗೆಯ್ದುಭರತಂಗಿತ್ತಂ ॥
ದಮಿತಾರಿದಶರಥಂರಾ ।
ಜ್ಯಮನೆಂಗುಂರಾಮನಿತ್ತನೆಂಗುಮೆಲೋಕಂ ॥ 142

ಮ॥ಸ್ರ॥ನಮಗಕ್ಕೆಂನಿಸ್ಸಹಾಯಂಬಹುದಿನದಿನಪಾಯಂಸುಖೋಪಾಯಮಕ್ಕುಂ ।
ತಮಗೇಕಾಯತ್ತಮಕ್ಕುಂಪ್ರಜೆಪರಿಜನವೆಂದಪ್ಪೆಕೊಟ್ಟ್ಯದಿಂರಾ ॥
ಜ್ಯಮನೀರೇೞಬ್ಧಿಮಂಜೇಡಿದಳೆಱಿಯದೆನೀವಿತ್ತೊಡಂಮಿಕ್ಕರಂಮ ।
ಟ್ಟುಮಿಡಲ್ವೇೞ್ಗುಮೇರಾಘವಕೊಡೆನೆಳಲೊಳ್ಸಾಗರಾವರ್ತ್ತಚಾಪಂ ॥ 143

ವ ॥ ಎಂದುಪೊಡೆವಸಿಡಿಲಂತೆಗರ್ಜಿಸಿಮಣಿಮಯಾಸನದಿನೆರ್ದ್ದು ॥

ಕಂ ॥ ರೋಮಾಂಚದೊಡನೆಸಭೆಗೆಮ ।
ನೋಮುದಮಪ್ಪಂತುನುಡಿಯೆಲಕ್ಷ್ಮಣದೇವಂ ॥
ರಾಮಂಪರಾರ್ತ್ಥಚರಿತ ।
ಪ್ರೇಮಂಕಣ್ಣೆರ್ಪ್ಪೆಜರ್ಪಿನೋಡಿದನಾಗಳ್ ॥ 144

ಪಿರಿಯಂಣನಜರ್ಪಿಂಗೋ ।
ಸರಿಸಿದನಲ್ಲದೊಡೆಶಾರ್ಙ್ಗಪಾಣಿಯುಮುನಿಸುಂ ॥
ಪರನುರಿಗಂಣುಂಲೋಕಮ ।
ನರಘೞಿಗೆಗೆಬೂದಿಮಾೞ್ಪುದೊಂದಚ್ಚರಿಯೇ ॥ 145

ಪರಿಹರಿಸಿದನೊದವಿದಕೋ ।
ಪರಸಾವೇಶಮನುಪೇಂದ್ರನಣ್ಣನಚಿತ್ತಂ ॥
ಕೊರಗಿದಪುದೆಂದುದಾತ್ತಂ ।
ಪಿರಿಯಂಗಿಟ್ಟಾವಿಘಾತಮಂಮಾಡುವನೇ ॥ 146

ದಾರುಣಭಾವಮನುಪಸಂ ।
ಹಾರಿಸಿಕಣ್ಣಱಿದುಮಟ್ಟಮಣ್ಣನಕೆಲದೊಳ್ ॥
ವಾರಿಜನಾಭಂಗರುಡೋ ।
ದ್ಗಾರಿಹರಿನ್ಮಣಿಯಕೆಲದಫಣಿಯವೊಲಿರ್ದ್ದಂ ॥ 147

ವ ॥ ಅನಂತರಂದಶರಥಂಗೆರಾಮನಿಂತೆಂದಂ ॥

ಮ ॥ ಇರವೇೞ್ಕುಂಪೆಱಪಿಂಗಿಪಾಂಗಱಿಯದಾನಿಲ್ಲಿರ್ಪ್ಪುದುಂಪತ್ತುಗುಂ ।
ಪರಿವಾರಂಗುಣಹಾನಿನೆಟ್ಟನೆನಗಕ್ಕುಂಮುಂನಮೆಂನಿತ್ತುದುಂ ॥
ಭರತಂಪೆತ್ತುದುಮಾಳಮಕ್ಕುಮಪವಾದಾತೋದ್ಯನಾದಂಮಸುಂ ।
ಧರೆನಿಲ್ವಂನೆವರಂದಿಶಾಕರಟಕರ್ಣ್ಣಾಸ್ಫಾಲನಂಮಾಡುಗುಂ ॥ 148

ಮ॥ಸ್ರ॥ ತಲೆಯೊೞ್ಕಿಂಮಾಜ್ಞೆಯಂರಂನದತಲೆದೊಡಮಂಪೊತ್ತುಮೆಯ್ವೆತ್ತಬಾಹಾ ।
ಬಲದಿಂಬೆಂಕೊಂಡಖಂಡಪ್ರಭರನಹಿತರಂಸಾಧಿಪೆಂವಿದ್ವಿಷನ್ಮಂ ॥
ಫಲಮಂಬೀೞ್ಕೊಂಡೆನೆಂದಯ್ಯನಚರಣಯುಗಕ್ಕರ್ಘ್ಯಪಾದ್ಯಂಗಳಂನಿ ।
ಸ್ತುಲಮಾಳಿಸ್ಥೂಲಮುಕ್ತಾಫಲರುಚಿಜಲದಿಂರಾಮನುದ್ಧಾಮನಿತ್ತಂ ॥ 149

ವ ॥ ಅಂತುವಿನಯವಿನಮಿತಮಸ್ತಕನಾಗಿಸಭೆಯಿನೆರ್ದ್ದುಪೋಗೆ ॥

ಕಂ ॥ ಒಡನೆದಶರಥನಕಣ್ಗಳ್ ।
ನಡೆದುವುಕಣ್ಣೊಡನೆತಳರ್ದುನಿಲ್ಲದೆಮನಮುಂ ॥
ನಡೆದುದದಱೊಡನೆನಿಡುಸು ।
ಯ್ನಡೆದುದುಸುಯ್ಯೊಡನೆನೃಪತಿಮೂರ್ಛೆಗೆಸಂದಂ ॥ 150

ಮ॥ಸ್ರ॥ ಕಡೆಗಣ್ಣಿಂಕರ್ಣ್ಣಮೂಲಕ್ಕೊಗೆದುಗುತರೆಬಾಷ್ಪಾಂಬುಗಳ್ಸುಯ್ಲುಪೊಯ್ಲಿ ।
ರ್ದ್ದಡೆಯೊಳ್ಸಂದೇಹಮಂಸಂಗಳಿಸೆಮಿಡುಕಾದಾಣಂಗಳಲ್ಲಲ್ಲಿಸತ್ವಂ ॥
ಗಿಡೆಧೈರ್ಯ್ಯಂಗೆಟ್ಟುಸಂಸಾರಮನುಱದಮಹಾಸತ್ವನುಂಮೂರ್ಛೆವೋದಂ ।
ಗಡಜನ್ಮಾರಣ್ಯದೊಳ್ಮಿಕ್ಕರನಳಲಿಸದೇಮೋಹದಾವಾಗ್ನಿದಾಹಂ ॥ 151

ವ ॥ ಅಂತುದಶರಥಂಮೂರ್ಛಾಗತನಪ್ಪುದುಂ ॥

ಮ॥ಸ್ರ॥ ಪತಿಪುತ್ರಂಪೋಗೆಮೂರ್ಛಾಭರಪರವಶನಾಗಿರ್ಪ್ಪುದುಂಕೈಕೆಲಜ್ಜಾ ।
ನತೆಕಾಂಚೀರತ್ನಘಂಟಾರವದೊಡನಪವಾದಪ್ರಣಾದಂದಿಶಾಸಂ ॥
ತತಿಯಂತಳ್ವ್ವೆಯ್ಯೆತಳ್ವ್ವೆಯ್ದೆ ವೆದುಱುಗಲನೊಟ್ಟೆಯ್ದಿಬಾಷ್ಪಾಂಬುಧಾರಾ ।
ತತಿಮುಕ್ತಾಹಾರಮಂಪೇರ್ಮ್ಮೊಲೆಗೆಕುಡೆತದಾಸ್ಥಾನದಿಂದೆರ್ದ್ದುಪೋದಳ್ ॥ 152

ವ॥ ಅನಂತರಂ ॥

ಕಂ॥ ಅನುಜಂಸಭೆಯಿನಗಲ್ದ ।
ಣ್ಣನುಬಳಿಯಂಸಲ್ವಸಮಯದೊಳ್ಬೇಗಂಲೋ ॥
ಚನಪಬಳಿಸಲ್ವಮನಮಂ ।
ತನುವಿನಬಳಿಸಲ್ವನೆಳಲನಿನಿಸಿಳಿಕೆಯ್ದಂ ॥ 153

ಪ್ರತ್ಯಂತದೇಶಭೂಭೃದ ।
ಪತ್ಯರನೇರ್ವ್ವಟ್ಟಿಪುಗಿಸಿಕಾಂತಾರನಗೋ ॥
ಪತ್ಯಕಮಂಕೌಸಲ್ಯಾ ।
ಪತ್ಯಂಗೋಲಗಿಪೆನವಜಿಹರಿವಿಷ್ಟರಮಂ ॥ 154

ವ॥ ಎಂದುಮನದೊಳ್ಮಂತಣಮಿರ್ದ್ದುಲಕ್ಷ್ಮಣಂಸಭೆಯಿನೆರ್ದ್ದುಪೋಪುದುಂ ॥

ಚ॥ ಕ್ರಮದೊಡೆಯಂಗೆತಂದೆಧರೆಯಂಕುಡಲೆಂದಿರೆದೈವಯೋಗದಿಂ ।
ಸಮನಿಸಿದತ್ತುಪುಣ್ಯಪುರುಷಂಗಮರಣ್ಯನಿವಾಸಮೆಂದುಱೇ ॥
ದಮನೊಳಕೊಂಡುಗದ್ಗದಗಳಂನತದೀನಮುಖಂಪ್ರಲಾಪಸಂ ।
ಭ್ರಮಮುದಿತಾಶ್ರುಶೋಕರಸಭಾಜನಮಾದುದುತತ್ಸಭಾಜನಂ ॥ 155

ಮಾ॥ ವಿಗತದಿಗಿಭಮಾಶಾದೇಶಮಸ್ತಂಗತಾರ್ಕ್ಕಂ ।
ಗಗನಪರಿಧಿಯಾತಪ್ರಾಣವಾತಂಶರೀರಂ ॥
ನೊಗೆಯಿಸಿದವೊಲಾಗಳ್ರಾಘವಂಪೋಗೆಕಣ್ಗಂ ।
ಬಗೆಗವಿಕಳಮಾದತ್ತಾಸಭಾಚಕ್ರವಾಳಂ ॥ 156

ವ॥ ಅಂನೆಗಮಾವೃತ್ತಾಂತಮೆಲ್ಲಮಂಸುಮಿತ್ರೆ ಕೇಳ್ದಪರಾಜಿತಾಮಹಾದೇವಿಯಲ್ಲಿಗೆ ವಂದು ॥

ಕಂ॥ ಎರೆದಳ್ಗಡಕೈಕೆವಸುಂ ।
ಧರೆಯಂಭರತಂಗೆರಾಮನಿತ್ತಂಗಡವೇಂ ॥
ದೊರೆಕೊಳ್ಗುಮೊಕರ್ಣ್ಣಪರಂ ।
ಪರೆಯಿಂಕೇಳ್ದದನೆನಿಮಗೆಪೇಳಲ್ಬಂದೆಂ ॥ 157

ವ॥ ಎಂಬುದುಮಪರಾಜಿತೆಭಯಚಕಿತಚಿತ್ತೆಯಾಗಿ ॥

ಕಂ॥ ಎರೆವಂನಳಿಕ್ಕೈಕೆವಸುಂ ।
ಧರೆಯಂತೃಣವಾಗಿಬಗೆದುಕುಡುವಂನನೆಮಂ ॥
ದರಧೈರ್ಯ್ಯಂರಾಮಂನುಡಿ ।
ದೊರೆಕೊಳ್ಗುಂದೈವಘಟನೆಯಿಂದಾಗದುದೇಂ ॥ 158

ವ॥ ಎಂದವರ್ತ್ತಂಮೊಳುಂಮುಳಿಸಿನುಡಿಯುತ್ತಿರ್ಪ್ಪನ್ನೆಗಂ ॥

ಕಂ॥ ಐರಾವಣಗಜಮಂಜನ ।
ವಾರಣವೊಂದಾಗಿಪುಗುವವೋಲ್ಪುಗುತಂದ ॥
ಸ್ಸೀರಗದಾಹಸ್ತರ್ಬ್ಬಲ ।
ನಾರಾಯಣದೇವರಂತಪುರದರಮನೆಯಂ ॥ 159

ವ॥ ಅಂತರಮನೆಯಂಪೊಕ್ಕು ಜನನೀಯುಗಳಪದಪಯೋಜಕ್ಕೆ ಬಲನಾರಾಯಣರ್ವ್ವಿ
ನತರಾಗಿಸಮುಚಿತಾಸನದೊಳ್ಕುಳ್ಳಿರ್ದ್ದು ಲಕ್ಷ್ಮಣದೇವಂಶ್ರೀರಾಮದೇವನಪರಾ
ರ್ತ್ಥ್ಯವೃತ್ತಿಯಂಬಿಂನವಿಸೆಕೇಳ್ದಪರಾಜಿತಾಮಹಾದೇವಿಶೋಕಾನಲದಂದಹ್ಯಮಾ
ನಮಾನಸೆಯಪ್ಪುದುಂ ॥

ಕಂ॥ ಅನವರತಬಾಷ್ಪಜಲಸೇ ।
ಚನದಿಂದಪರಾಜಿತಾಮಹಾದೇವಿಯಲೋ ॥
ಚನಪುತ್ರಿಕೆಬಳಯಿಸಿದುದು ।
ವನಪಾಳಿಕೆಯಂತೆನೋಹಮೂರ್ಚ್ಛಾಲತೆಯಂ ॥ 160

ಚ॥ ಬಿದಿಪೆದಬಿಟ್ಟಿದಂಮಗನೆಮುಂನತವರ್ಮ್ಮನೆನಾವಶೇಷವಾ ।
ದುದುಪತಿಯುಂತಪಕ್ಕೆನಡೆವಂಸುತನೀನುಮಗಲ್ದುಪೋದೊಡಾ ॥
ವುದುಗತಿಜೀವಿಪಂದಮೆನಗಾವುದುಪೊರ್ದ್ದುವೆನಾರನೆಂದುಗ ।
ದ್ಗದರವಮುಣ್ಮೆತಂದಳಪರಾಜಿತೆಕಣ್ಗೆಕದುಷ್ಣವಾರಿಯಂ ॥ 161

ಕಂ॥ ವನಚರವನಮೃಗವನಖಗ ।
ವನೇಭವನದಹನವನವಿಷಾಹಿಗಳಿನಪಾ ॥
ಯನಿವಾಸಮಪ್ಪವನಮಂ ।
ತನೂಭವಂಪುಗುವೊಡೆಂತದಂಸೈರಿಸುವೆಂ ॥ 162

ಅಗ್ರಸುತನಂಸಮಗ್ರಗು ।
ಣಾಗ್ರಣಿಯಂರಾಮನಂನನಂದಶರಥನಂ ॥

ತುಗ್ರಾಟವಿಪುಗಿಸುವವಮದ ।
ನಗ್ರಹಪೀಡಿತರನಾರುಮಂಕಂಡಱಿಯೆಂ ॥ 163

ಪರಿಹರಿಸಿಪೞಿಯುಂಪಾ ।
ಪಿರಾಮನಂಪುಗಿಸಿವಿಪಿನಮಂನಿಜಸುತನಂ ॥
ಕರುಮಾಡಂಪುಗಿಸಿದಪಳ್ ।
ಕರುಣಂಗೆಟ್ಟಾಕೆಕೈಕೆಕಲ್ಲೆರ್ದೆಯಕ್ಕಂ ॥ 164

ಕೊಟ್ಟೊಡೆಜನಕಂಪೞಿಯು ।
ಬಟ್ಟೆಯನಸಕಳೆದುಪಿರಿಯನಿರೆತಾನುಮೊಡಂ ॥
ಬಟ್ಟಂಗಡರಾಜ್ಯಕ್ಕೆ ನೆ ।
ಕೆಟ್ಟೞಿವರ್ಭರತನಂನರಾರ್ಮ್ಮನುಕುಲದೊಳ್ ॥ 165

ಅಸದರ್ತ್ಥಸ್ವೀಕಾರಂ ।
ಪಸುಗೆಯೆನಿನಗೆಂದುಬಿಡದೆಕತೃಷ್ಣೆಂಬಾ ॥
ರಿಸದೆಭರತನೊಳೆಡಂಬ ।
ಟ್ಟುಸ್ತೈರಿಸಿರ್ಪ್ಪರವವೇಳದೇಕ್ಕೈತವಮುಂ ॥ 166

ಮ ॥ ಅನುಕೂಲಂಪತಿಕೈಕೆಗಕ್ರಮದಿನಿತ್ತಂರಾಜ್ಯಮಂರಾಮದೇ ।
ವನದಂಲಕ್ಷ್ಮಣದೇವಿಯೊಱುವುದುಮಂಣಂಗಕ್ಕುಮುದ್ವೇಗಮಂ ॥
ದಿನಿಸುಂಮಿಱಿದೆಮಾಣ್ದೆಪೋಣದೊಡೆವಿದ್ವಿಷ್ಟಾಂಗನಾಗರ್ಭಪಾ ।
ತನಮೇನಾಗದೆನೀವಿಜೇನ್ಪೊಡೆಯೆನೀನೀಸಾಗರಾವರ್ತ್ತಮಂ ॥ 167

ಅರಸಂಪೞಿಗೆತಪ್ಪೆಪಾವಡರ್ದೊಡಂತುನ್ಮಾದವಾದಂತೆಮೆಯ್ ।
ಮರವಟ್ಟಂತೊಡಲಿಂದುಸಿರ್ತ್ತೊಲಗಿದಂತಾಸಂನಿಪಾತಜ್ವರಂ ॥
ದೊರೆಕೊಂಡಂತವಿವೇಕದಿಂದಭಿಜನಂವಿದ್ವಜ್ಜನಂಮಂಡಲೇ ।
ಶ್ವರಸೇನಾಪತಿಮಂತ್ರಿಮಂಡಲಮದಂಮಾರ್ಕ್ಕೊಳ್ದಂತಿರ್ಕ್ಕುಮೋ ॥ 168

ಕಂ ॥ ಅದುಚಿತ್ರದಸಭೆಮರಸ ।
ರ್ಪ್ಪದಸಭೆತಿರ್ಯ್ಯಗ್ಮನುಷ್ಯಸಭೆಪೆಱತೇನ ॥
ಲ್ಲದೊಡೆಪೊಱಮಡಿಸಿಕಳೆವುದೆ ।
ಮದೀಯನಂದನನನಭಿಜನಾನಂದನನಂ ॥ 169

ವ ॥ ಎಂದೞಲುಮದವೞಲುಮೊದವೆಮಗನಮೊಗಮಂನೋಡಿ ॥

ಮ ॥ ಕ್ರಮಮಂನೋಡದೆನಂಟರಂತೊಱೆದುನಾಡಂಬಿಟ್ಟುಸಪ್ತಾಂಗರಾ ।
ಜ್ಯಮನೀಡಾಡಿಸಪತ್ನನಂನಿಲಿಸಿಸಿಂಹಾಸಂದಿಯೊಳ್ತಾಯ್ಗ್ದಾಃ ॥
ಖಮನುತ್ಪಾದಿಸಿಪೋಪುದಾವುದುಚಿತಂಪಿಂತಿಪ್ಪುದಿಲ್ಲಾಯ್ಪುದೆಂ ।
ಮುಮನೆಂದಂಬಿಕೆಮೆಯ್ಯನೊಕ್ಕುವಿಗಳದ್ಬಾಷ್ಪಾಂಬುವಿಂತೆಂಕಿದಳ್ ॥ 170

ವ ॥ ಅಂತುಶೋಕವಿಕಳೆಯಾದಕೌಸಲ್ಯಗೆ ಲಕ್ಷ್ಮೀಧರನಧರಕಿಸಲಯದ ಮೇಲೆದಂತ
ಕಾಂತಿಲತಾಂತಮಾಲೆಪಸರಿಸೆಮುಕುಳಿತಕರಸರೋಜನಾಗಿ ॥

ಮ ॥ ಕಲಿಯುಂಚಾಗಿಯುಮಿಂನದಾರ್ಮ್ಮಾನುಕೂಲರ್ಮ್ಮಂನಾದರೆಂಬಂನೆಗಂ ।
ನೆಲನುಂನೇಸಱುಮುಳ್ಳಿನಂನಿಲಿಸಿದಂತತ್ಕೂರ್ಮ್ಮೆಯಂಪೇರ್ಮ್ಮೆಯಂ ॥
ಕುಲವಿಸ್ತಾರಕನೇಕಕುಂಡಲನದಕ್ಕಾನಂದಮಂತಾಳ್ದದಾ ।
ಕುಲಮಂತಾಳ್ದುವುದೇವಮದಗ್ರಜನೊಳಾದೀಪೌರುಷಂಚೋದ್ಯಮೋ ॥ 171

ಚ ॥ ಚರಮಶರೀರನೆಯ್ದುವನೆಬಾಧೆಯನುತ್ತಮಸತ್ವನರ್ತ್ಥದೊಳ್ ।
ಪೊರೆವನೆಪುಣ್ಯಮೂರ್ತ್ತಿಗೆಡಱೆಂದೊರೆಕೊಳ್ಗುಮೆವಾಱುಲೋಕಮುಂ ॥
ಧುರದೊಳನಂತವೀರ್ಯ್ಯನೊಳಿದಿರ್ಚ್ಚುಗುಮೇಬಗೆದೀವಿಷಾದಮಂ ।
ಪರಿಹರಿಸಿಂಬಳಂಪ್ರಬಳನಾದೆಸೆಗುಂಮಳಮೇವುದಂಬಿಕೇ ॥ 172

ಕಂ ॥ ಕೆಲದನೆಲದರಸುಮಕ್ಕಳ ।
ನಲಂಘ್ಯಬಲರಂತಗುಳ್ದುಕಳೆದೊಂದೆಡೆಯೊಳ್ ॥
ನೆಲೆವೀಡುಮಾಡಿನಿಂಮಂ ।
ಬಲಭದ್ರಂತರಿಸದಿನಿಸನಂತರಿಸುವನೇ ॥ 173

ಉ ॥ ಪಂಬಲಿಸಲ್ಕೆವೇಡಪೆಱತೇಂಭರತಂಭವದೀಯದಿವ್ಯಪಾ ।
ದಾಂಬುಜಸೇವೆಗೆಂಮಳವಿಗಗ್ಗಳಮಲ್ಲದೊಡಂಸಮಸ್ತಲೋ ॥
ಕಾಂಬಿಕೆನಿಂಮೊಳಾದಿಸುವೆಸಕ್ಕೆಸುಮಿತ್ರಿಯೆಸೊಲ್ವಳಗ್ರಜಂ ।
ಗಾಂಪೆಸಕೆಯ್ವನಿಂತೊಲಗಿಸಿಂಮನದೊಳ್ನಿಮಗಾದಖೇದಮಂ ॥ 174

ವ ॥ ಎಂದುಸಾಮಿತ್ರಿಬಿಂನವಿಸೆಮನದೊಳವಧಾರಿಸಿಕೌಸಲ್ಯೆ ವಿಗತಶೋಕಶಲ್ಯೆನಂದನನ
ಮುಖಾರವಿಂದಮಂನೋಡಿ ॥

ಚ ॥ ಸುಚರಿತೆಸೀತೆನಿಂಮೊಡನೆಬರ್ಪ್ಪವಳಿರ್ಪ್ಪವಳಲ್ಲದಿರ್ಪ್ಪುದೇ ।
ನುಚಿತಮೆಪೇಳಿವಿಹಾಕೆಯೊಡನುಯ್ವುದೆನಲ್ರಘುರಾಮನಂಬಿಕಾ ॥
ವಚನಮನಾತ್ಮಚಿತ್ತದೊಳೊಡಂಬಡುವೆತ್ತದನಂತೆಗೆಯ್ವೆನೆಂ ।
ದಚಲಿತನಾನತಂಪದನಖಾಂಶುಗಳಿಂತಳೆದಂಬಲಾಮುಮಂ ॥ 175

ವ ॥ ಅಂತುರಾಮನಪರಾಜಿತಾಮಹಾದೇವಿಯುಸುಮಿತ್ರಾದೇವಿಯುಪಾದಪಲ್ಲವಂಗಳುಮ
ನಾಶೀರ್ವ್ವಾದಪಾರಿಜಾತಸ್ತಬಕಂಗಳುಂ ಮನುತ್ತಂಸಾವತಂಸಂಮಾಳ್ಪುದುಮನಂ
ತರಂಲಕ್ಷ್ಮಣಂಮಣಿಕಿರೀಟಕಿರಣದಿಂತದೀಯಪದನಖಮಯೂಖಮಂಕೊರ್ಬ್ಬಿಸೆ
ಸಾರ್ವ್ವಭೌಮನಾಗೆಂದುಪರಸಿ ॥

ಮ ॥ ಶಯನಕ್ಲೇಶದೊಳಂನಪಾನಗಮನಾಯಾಸಂಗಳೊಳ್ನಿಂನಸೇ ।
ದೆಯನಿಂನೋಡದತಿಪ್ರಯತ್ನಪರಿಚರ್ಯ್ಯಾರಂಭದಿಂಪುತ್ರಸೀ ॥
ತೆಯುಮಂರಾಮನುಮಂಸಮಾಹಿತಮನರ್ಮ್ಮಾಡೆಂದುಸಂಪ್ರೀತಿಯಿಂ ।
ಪ್ರಿಯದಿಂಪ್ರಾರ್ತ್ಥಿಸಿದಳ್ಗುಣಪ್ರಿಯೆಸುಮಿತ್ರಾದೇವಿಸಾಮಿತ್ರಿಯಂ ॥ 176

ಗುಣಮಂನೋಡದರಣ್ಯಮಂಪುಗಿಸಿದಳ್ರಾಜ್ಯಾರ್ತ್ಥನಂಪುತ್ರಕಾ ।
ರಣದಿಂಕೈಕೆಸುಮಿತ್ರೆರಾಮನೊಡನ್ಪೋಗೆಂದಟ್ಟಿದಳ್ಪಾಲಿಸ ॥
ಲ್ಗುಣಮಂಲಕ್ಷ್ಮಣನಂಜಗಂಪೞವಿನಂಜೇಯೆಂಬಿನಂಕೇವಲಂ ।
ಗುಣಹೀನರ್ಗ್ಗುಣವಂತರನ್ನೆಯಮನೊಳ್ಪಂಮಾಳ್ಪದಾರ್ಷ್ಟ್ಯಮೋ ॥ 177

ವ ॥ ಅಂತುರಾಮಲಕ್ಷ್ಮಣರಂಬಿಕೆಯರಚರಣಾಂಬುಜಂಗಳಂಬೀೞ್ಕೊಂಡರಮನೆಯಿಂ
ಪೊಱಮಟ್ಟುಪಾದಮಾರ್ಗ್ಗದಿಂವಿಪಣಿಮಾರ್ಗ್ಗದೊಳಗನೆವೈದೇಹಿವೆರಸುಬರ್ಪ್ಪ
ಸಮಯದೊಳ್ಕಾವಱಿಗೊಂಡುನೆರೆದುಪರಿತಂದುನೋಳ್ಪಪುರಜನಂಗಳಲ್ಲಿಕೆಲಬ
ರಿಂತೆಂದರ್ ॥

ಉ ॥ ಮಂಗಳದಿಂಪುರಾಂಗನೆಯರಿಕ್ಕದೆಸೇಸೆಯನೇಕಶಂಖನಾ ।
ದಂಗಗನಕ್ಕೆಲಂಘಿಸದೆಮಂಗಳತೂರ್ಯ್ಯನಿನಾದಮುಣ್ಮದೆ ॥
ತ್ತಂಗುಡಿತೋರಣಂತುಱುಗಿಕಟ್ಟದೆಮಂಗಳಗೀತನಾದಮುಂ ।
ಮಂಗಳಪಾಠಕಸ್ತುತಿಯುಮಿಲ್ಲದೆಭೂಪರಿದೆತ್ತಪೋದಪರ್ ॥ 178

ಆನೆಯಮೇಲೆಪೞ್ಗೊಡೆಯನೆತ್ತಿಸಿತಾಮರಮಿಕ್ಕೆಚಾರುಚಂ ।
ದ್ರಾನನೆಯರ್ಕ್ಕರಕ್ಕೆಲದನೇರ್ವ್ವಡಿಯೊಳ್ನೆಲಸಿರ್ದ್ದುಸುತ್ತಲುಂ ॥
ದಾನಗಜಂಘನಾಘನದವೋಲ್ಬರೆಬಾರದೆಪಾದಮಾರ್ಗ್ಗದಿಂ ।
ಜಾನಕಿಯುಂಬಲಾಚ್ಯುತರುಮೇೞ್ದರಂದದೆಬರ್ಪ್ಪದಾವುದೋ ॥ 179

ಶಾ ॥ ಪೌರಸ್ತ್ರೀನಯನಪ್ರಭಾಸಹಚರಂಹಾರಾಂಶುವಿಸ್ತೀರ್ಣ್ಣವ ।
ಕ್ಷೋಣೀರಂಗಸ್ಥಳದೊಳ್ರಸಾಭಿನಯಮಂತೋರ್ಪ್ಪಂನೆಗಂಮಾಜಿಯಂ ॥
ಧಾರಾಪಂಚಕದೊಳ್ವಿಚಿತ್ರಲಯದಿಂತಾಮೇಱಿಬರ್ಪ್ಪೀಮಹಾ ।
ಧೀರರ್ಕ್ಕಾಲ್ನಡೆಯೊಳ್ನೃಪಾವಸಥದಿಂಬರ್ಪ್ಪಂದಮಾವಂದಮೋ ॥ 180

ಉ ॥ ಮಂಗಳರತ್ನವೇದಿಕೆಯೊಳೋಲಗಸಾಲೆಯೊಳಿಂದುಕಾಂತರಾ ।
ಜಾಂಗಣದೊಳ್ಗೃಹೋಪವನದೀರ್ಘಿಕೆಯೊಳ್ನೆಗೞ್ದವಿಲಾಸಗೇ ॥
ಹಂಗಳೊಳಂಚೆವಿಂಡಿನೊಡನಾಡುವಜಾನಕಿಪಾದಮಾರ್ಗದಿಂ ।
ದಂಗಡಿಬೀದಿಯೊಳ್ಪತಿಯಪಿಂತನೆಮೆಯ್ಗರೆದೆತ್ತವೋದಪಳ್ ॥ 181

ವ ॥ ಮತ್ತಮಲ್ಲಿಕೆಲರ್ನ್ನಯನಿಪುಣರುಂಕಲಾಕುಶಲರುಮುದಾತ್ತರಾಘವನಲ್ಲದೆಪದಪಲ್ಲವರಾಗದಿಂನಿಖಿಲಪರಿಜನಮನೋರಾಗಮನೊದವಿಸಲುಮಾರ್ಯ್ಯವೀರ್ಯ್ಯಾದಿನಯೋಧ್ಯಾಸಿಂಹಾಸನಮಂಪದುಳವಿರಿಸಲುಂಕಿಂಚಿದೂನಮಿತಭ್ರೂಲತಾಂಚಲದಿನಖಿಲಯಾಚಕಮನೋರಥಮಂಸಫಲಂಮಾಡಲುಂಭುಜಪ್ರತಾಪತಪನತಾಪದಿನುದ್ವೃತ್ತರಾಜಮಂಡಲಮಂಮಸುೞಿಸಲುಂ ನಿಷ್ಕೃಪಕೃಪಾಣಧಾರಾಜಲಧಿಯಿಂಕರಣಾಗತಕುಭೃತ್ಕುಳಮನೊಳಕೊಂಡುಕಾಯಲುಂನಿಖಿಲದಿಕ್ಪಾಲಮಕುಟನಿಕಟವರ್ತ್ತಿತನಿಜಾಜ್ಞಾಮಾತ್ರದಿಂವರ್ಣ್ಣಾಶ್ರಮಚರಿತ್ರಮನವಿಶ್ರಾಂತಂಮಾಡಲುಂದುರ್ಜ್ಜಯವಜ್ರಾವರ್ತ್ತಚಾಪಟಂಕಾರಶರಮೋಕ್ಷ ಹೂಂಕಾರದಿಂಲೋಕಕಂಟಕವಿಗ್ರಹಮಾದವೀರಗ್ರಹೋಚ್ಚಾಟನಮನೊಡರ್ಚ್ಚಲುಂಜಗತ್ಪವಿತ್ರಚಾರುಚರಿತ್ರದಿಂಮನುಸೂತ್ರಮಂವಿವರಿಸಲುಂಸಹಜಸಾಹಿತ್ಯಕಲಾಕೌಮುದಿಯಿಂದಾದವಿಳಾಸದಿಂವಿದ್ವಜ್ಜನಮನಃಕುಮುದಿನಿಯನಲರ್ಚ್ಚಲುಂಪ್ರೇಮರಸಪುಷ್ಟದೃಷ್ಟಿಪಾತದಿನಭಿಜನಸನಾಭಿಜನಮಂಕೃತಾರ್ತ್ಥಂಮಾಡಲುಂಪೆಱರ್ನ್ನಱಿಯರೆಂದುಕ್ಕೈಕೆಯಕ್ಕೈತವಕ್ಕೆಕನಲ್ದೊನಲ್ದುನುಡಿವನುಡಿಗಳನಾಲಿಸುತ್ತಂ ದಿವಸದವಸಾನಸಮಯದೊಳ್ಪುರದಪರಭಾಗದರಭಟ್ಟಾರಕರಬಸದಿಯಂಪೊಕ್ಕು ॥

ಮ ॥ ಲಲಿತಾಕಾರದಿನೀಯೆನಾಡೆನಯನಕ್ಕಾನಂದಮಂಮೇರುವಂ ।
ಬಲಗೊಳ್ವತ್ರಿತನೂಜನಂತೆಬಲಗೊಂಡಂಪಂಕಜಶ್ರೀಯನಂ ॥
ಡಲೆವಂನಂನಿಜಪಾದವಿನ್ಯಸನಸೌಂದರ್ಯ್ಯಂಬುಧಪ್ರಸ್ತುತಂ ।
ಬಲಭದ್ರಂಜಿನನಾಥದಿವ್ಯಗೃಹಮಂಸಾಹಿತ್ಯವಿದ್ಯಾಧರಂ ॥ 182

ಗದ್ಯ ॥ ಇದುಪರಮಜಿನಸಮಯಕುಮುದಿನೀಶರಚ್ಚಂದ್ರಬಾಳಚಂದ್ರಮುನೀಂದ್ರಚರಣನಖಕಿರಣಚಂದ್ರಿಕಾಚಕೋರಂಭಾರತೀಕರ್ಣ್ಣಪೂರಂಶ್ರೀಮದಭಿನವಪಂಪವಿರಚಿತಮಪ್ಪರಾಮಚಂದ್ರಚರಿತಪುರಾಣದೊಳ್ವನಪ್ರವೇಶವರ್ಣ್ಣನಂಷಷ್ಠಾಶ್ವಾಸಂ ॥

ಸಪ್ತಮಾಶ್ವಾಸ ಪ್ರಾರಂಭಃ.

—:o:—

ಕಂ ॥ ಶ್ರೀರಮಣಂಬಲಗೊಂಡಬಿ ।
ಆರಾಧ್ಯನರತ್ನಭವನಮಂಪೊಕ್ಕಂನೀ ॥
ಹಾರರುಚಿರುಚಿರಕೀರ್ತ್ತಿ ।
ಶ್ರೀರಮಣಂಪೆಂಪುವೆತ್ತನಭಿನವಪಂಪಂ ॥ 1

ವ ॥ ಅಂತುಜಿನಭವನಮಂಪೊಕ್ಕು ಮುಕುಳಿತಕರಸರೋಜಮಂನೊಸಲ್ಗೆತಂದು ॥

ಕಂ ॥ ಒಡಲುಮನಾತ್ಮನುಮಂಬೇ ।
ರ್ಪಡಿಕುಮಪ್ರೋರೊಂದಜೊಳಗೆಪೊಕ್ಕಿರ್ದ್ದವನೇಂ ॥
ಪತಿವಾತರಭಟ್ಟಾರಕ ।
ರಡಿದಳಿರೊಳ್ಪೊಳೆವನಖರುಚಿಕ್ರಕಚಂಗಳ್ ॥ 2

ವ ॥ ಎಂದುದರ್ಶನಸ್ತುತಿಗೆಯ್ದುಜಿನಭವನಮಧ್ಯರಂಗಮಂರಾಮಲಕ್ಷ್ಮಣರಲಂಕರಿಸಿ
ರ್ಪ್ಪುದುಮಾಸಮಯದೊಳ್ ॥

ಮ॥ಸ್ರ॥ಭವಬದ್ಧಕ್ರೋಧದಿಂಸಂಧಿಸಿಪೆಜಗೆತಮಂಸ್ಥಾನಮಂಬಿಟ್ಟುತೇಜಂ ।
ತವೆಲೋಕಂಚಕ್ರವಾಕಕ್ಕೆಡರಿಸಿದಿವಸಶ್ರೀಯನೀಡಾಡಿಕೈಕೊಂ ॥
ಡವರೋಧಸ್ತ್ರೀಯುರಂಪದ್ಮಿನಿಯುರನೆನಸುಂನೋಡದುತ್ತಾನಪಾದಂ ।
ದಿವಸೇಂದ್ರಂಭೀತಿಯಿಂದಂಬರಮನುಳಿದುವಾರಾಶಿಯಂಪೋಗಿಪೊಕ್ಕಂ ॥ 3

ಚ ॥ ಸುಗಿದುತಮಕ್ಕೆಬಿಟ್ಟುಬಿಸುಪಂಪರಿವಾರಮೆನಿಪ್ಪಚಕ್ರವ ।
ಕ್ಕಿಗಳವಿಯೋಗಮಂನೆನೆಯದಬ್ಜನಿಯಂಕಡುಗೊರ್ಪ್ಪನಲ್ಲಳಂ ॥
ಬಗೆಯದೆಮಂಡಲಾಗ್ರರುಚಿದೋಃಜದಭೀತಿಯಿನೋಡಿಪೋಗಿತೊ ।
ಟ್ಟಗೆರವಿಸಾರ್ದ್ದನಸ್ತಗಿರಿಯಂಕ್ಷಣಿಕಂಸ್ಥಿರಸಾರನಪ್ಪನೇ ॥ 4

ಮ ॥ ದಿನಪಂತಂನನಗಲ್ದುಪೋಗೆಹದಿಕ್ಕಾಂತಾನನಂಕಂದಿದ ।
ತ್ತೆನೆಮುರ್ವ್ವಿರ್ಪ್ಪದುದಾತನೊಳ್ನೆರೆಯರಾಗಂಪಶ್ಚಿಮಾಶಾವಿಳಾ ॥
ಸಿನಿಗಾದತ್ತೆನೆಸಂಜೆರಂಜಿಸಿದುದೇನಾಶ್ಚರ್ಯಮೋತಾಳ್ದರಾ ।
ರನಿಯಂತಂನನಗಲ್ದೊಡಂನೆರೆದೊಡಂನೀರಾಗಮಂರಾಗಮಂ ॥ 5

ವಿರಹವ್ಯಾಕುಳಮಾಗೆಚಕ್ರಮಿಥುನಂಸಂಕೋಚಮಂತಾಳೆತಾ ।
ಮರೆಕಾಮಾತುರರುಂರಜೋಧಿಕರುಮೇಂಬೇದಕ್ಕೆಪಕ್ಕಾಗದಿ ॥

ರ್ಪ್ಪರೆದೋಷಾಂಧರೆನುತ್ತವೆಂನಗುವವೊಲ್ಸೆಯ್ದಿಲೊಗ್ಗಳಂಮಲ್ಕರ |
ಲ್ದರಲುತ್ತಿರ್ದ್ದವುಚಂಚರೀಕಮಧುರವ್ಯಾಹಾರವಾಚಾಳಿತಂ || 6

ಕಂ || ಮಿನಮಿನನೆತೋಱೆತಾರಗೆ |
ಘನತರತಿಮಿರಾವಕಾಶಮಾಕಾಶಮದೇಂ ||
ನೆನೆಯಿಸಿದುದೊಕಡಲೊಳ್ಸೀ |
ರ್ಪ್ಪನಿತನುವಂಪುದಿಯೆತೋರ್ಪ್ಪಕೃಷ್ಣನತನುವಂ || 7

ವ || ಅಂತುನೇಸರ್ಪ್ಪಡುವುದುವಾಸಮಯದೊಳಂಮಳಿಸಿತಂಮಲ್ಲಿಗೆ ವಂದಜನನಿಯರೊಳ್ವಿನಯಮಂನುಡಿದುಸಂತೋಷಂಬಡಿಸಿನುಗುಳ್ದ ರಮನೆಗೆಕಳಿಪಿಜಿನಮಂದಿರಕ್ಕೆವಂದುನಿದ್ರಾಮುದ್ರಿತವಿಲೋಚನರ್ನ್ನಡುವಿರುಳಿರ್ದ್ದಪರಮಜಿನಪತಿಯಂಬೀಳ್ಕೊಂಡುಬಿಲ್ಲುವಣ್ಣಿಟುಮಂಕೊಂಡುಸೀತೆನಡುವೆಬರೆಪೊಳಲನಡುವಣಕ್ಷ್ಮಾಲ್ಲಕದ್ವಾರದಿಂಪೊಱಮಟ್ಟುದಕ್ಷಿಣಾಭಿಮುಖರಾಗಿಪಯಣಂಬೋಪುದು ಮನಂತಸಾಮಂತಸಂದೋಹಮವಱಿಪಿಂತನೆಮಾರ್ಬ್ಬಟ್ಟೆಯೊಳ್ಬರ್ಪ್ಪರಂಪೆಸಗೊಳುತ್ತುಂಪೇಗಮೆಯ್ತುಂದುದೂರೋತ್ಸಾರಿತವಿಚಿತ್ರಾತಪತ್ರವಿವಿಧವಾಹನರ್ವ್ವಿನಯವಿನಮಿತೋತ್ತಮಾಂಗರೆಂತ್ತಾನುಮೆಯ್ದಿ ವಂದೆವೆಂದುಬಿಂನವಿಸೆಸೀತೆಸೇದೆವಡೆಯದಂತುಮೆಲ್ಲಮೆಲ್ಲನೆನಡೆವುತ್ತಿರ್ದ್ದವಲ್ಲದಂದಿಂನೆವರಂದೂರಂಪೋಪೆವೆಂದವಱೊಡನೆಮಾತಾಡುತ್ತಾವೆಡೆಯೆಡೆಯಗ್ರಾಮನಗರಂಗಳಂನೋಡುತ್ತುಂಕಳೆದುಗಂಭೀರತರಂಗಿಣಿಯನೆಯ್ದಿವಂದಲ್ಲಿನಿಂದುಸಾಮಂತಾದಿಗಳನೆಂತಾನುಮೊಡಂಬಡಿಸಿನಿಲಿಸಿ ತೊಱೆಯಂಪಾಯ್ದುಪೋಪುದುಂರಾಮಲಕ್ಷ್ಮಣರಗಲ್ಕೆಗೆಸೈರಿಸಲಾಱದೆಕೆಲಂಬರದುವೆನಿರ್ವ್ವೇಗಕಾರಣಮಾಗೆತನ್ನದೀತೀರದಜಿನಾಗಾರದೊಳಿರ್ದ್ದಶ್ರುತಕೇತುಗಳೆಂಬಗಣಧರಸ್ವಾಮಿಗಳಸಮಕ್ಷದೊಳ್ದೀಕ್ಷೆಗೊಂಡಲ್ಲಿಯೆನಿಂದರ್ಕ್ಕಳುಬರ್ವ್ವ್ರತವಿಶೇಷಂಗಳಂಕೈಕೊಂಡುಸಾಕೇತಪುರಕ್ಕೆವಂದರದೆಲ್ಲಮಂದಶರಥನರನಾಥಂಕೇಳ್ದು ||

ಚ || ಸೆಡೆದನೆತಂನಬಂಧುಗಳಗಲ್ಕೆಗೆಪುತ್ರಕಲತ್ರಮೋಹದೊಳ್ |
ತೊಡರ್ದನೆಪಟ್ಟಬಂಧಮನೊಡರ್ಚ್ಚದನೇಭರತಂಗೆರಾಘವಂ ||
ನಡೆಯೆವನಕ್ಕದಂಮುಱಿದುಮೇಂಪೆಸರ್ಗೊಂಡನೆದೀಕ್ಷೆಗೊಂಡನಾ |
ಗಳೆವಿಭುಸರ್ವ್ವಭೂತಹಿತದಿವ್ಯಮುನೀಂದ್ರರಪಾದಪಾರ್ಶ್ವದೊಳ್ || 8

ವ || ಅಂತುದಶರಥಂದಶಧರ್ಮ್ಮನಿರತನಪ್ಪುದುಂಭರತಂರಾಜ್ಯಸುಖರತನಾದನಾಗಳಪರಾಜಿತಾಮಹಾದೇವಿಯುಮುದಾತ್ತರಾಘವನವನಪ್ರವೇಶಕ್ಕೆಱಾಯಾಸಮಂನೆನೆನೆನೆದವಿಶ್ರಾಂತವಿಗಳಿತಾಶ್ರುಸಲಿಲಕಲಿಲಕಪೋಲಯುಗಳೆಗದ್ಗದಕಂಠೆಯಾಗಿ ||

ಕಂ ॥ ಏನನಿದಂನೆಗಳ್ದ್ರಸುತ ।
ಕಾನನದೊಳ್ಪೋಗಿಪೊಕ್ಕು ಮಂಗಳಗೀತ ॥
ಧ್ವಾನಮಿರೆಸಿಂಹಶರಭ ।
ಧ್ವಾನಮನಾಲಿಸುವಮಹಿಮೆಗರ್ತ್ಥಿಗನಾದೈ ॥ 9

ಧವಳಚಮರರುಹಪವನನ ।
ನವಮಾನಂಗೆಯ್ದು ಕಂಡನಿಷ್ಠುರತರಭ್ಯೈ ॥
ರವಮೃಗದೆಪರುಷಕಾನನ ।
ಪವಮಾನನಸೋಂಕನಾಸೆಗೆಯ್ವಲ್ಬಗೆದೈ ॥ 10

ಚ ॥ ವನಜಲಕೇಳಿಯಂಬಿಸುಟುನಂದನನಿರ್ಝರಶೈಲಸಾನುವಂ ।
ದನಜಲಕೇಳಿಯೊಳ್ತೊಡರ್ದವಾರವಧೂಜನಮುಗ್ಧಸ್ವಾಲಕಾ ॥
ನನಮಿರೆಸಾಲಕಾನನಮನೀಕ್ಷಿಸಲರ್ತ್ಥಿಗನಾದೆದಿವ್ಯಭೋ ।
ಜನಮಿರೆಕಂದಕಂದಫಲಮೂಲದಿನಾರಿಸುವೈಕ್ಷುಧಾಗ್ನಿಯಂ ॥ 11

ಮುಡಿಯುಪಯೋಧರಂಗಳನಿತಂಬದಳುಂಬಮೆನಿಪ್ಪಬೀಳ್ಪಿನಿಂ ।
ಗಡಣದಿನಂಚೆಯೊಳ್ಗೃಹವನೋಪವನಸ್ಥಳದೊಳ್ವಿನೋದದಿಂ ॥
ನಡೆವೆಡೆಯೊಳ್ಬಳಲ್ವಜನಕಾತ್ಮಜೆಯಂರಘುವಂಶರಾಮನೀಂ ।
ನಡೆಯಿಸುವಂದಮಾವುದೊತನೂಜದುರಂತವನಾಂತರಾಳದೊಳ್ ॥ 12

ಕಂ ॥ ನಡೆಯಂವನ್ಯಗಜಂಗಳ ।
ನಡೆಯೊಳ್ಸೋಗೆಗಳಸೋಗೆಯೊಳ್ಸೋರ್ಮ್ಮುಡಿಯಂ ॥
ನುಡಿಯಂಕೋಕಿಲರುತಿಯೊಳ್ ।
ಪಡಿಯಿಡಲೊಡನುಯ್ವತನಯಜನಕಾತ್ಮಜೆಯಂ ॥ 13

ವ ॥ ಎಂದತಿಪ್ರಳಾಪಂಗೆಯ್ಯೆಸುಮಿತ್ರೆಯುಮೊಡನೆಶೋಕಿಸೆ ಕೈಕೆಕೇಳ್ದುತನಗತ್ಯಂತ
ಶೋಕಾವೇಗಮಾಗೆ ॥

ಕಂ ॥ ಪತಿದೀಕ್ಷೆಗೊಂಡನಪರಾ ।
ಜಿತೆಗನಿಮಿರಿದಾಯ್ತುದುಃಖಭಾರಂಧರೆಯಂ ॥
ಸುತನುಮಿಳಿಕೆಯ್ದನೀದು ।
ಷ್ಕೃತಮಂಸ್ತ್ರೀತ್ವದಜಡತ್ವದಿಂದೊಡರಿಸಿದೆಂ ॥ 14

ವ ॥ ಎಂದುತಂನಂತಾನೆನಿಂದಿಸಿಕೊಂಡುಭರತನಂಬರಿಸಿಮಗನೆನಿಂನರಾಜ್ಯಂರಾಮಲಕ್ಷ್ಮಣರಿಲ್ಲದೊಪ್ಪಲಱಿಯದವಱಜನನಿಯರುಮವಱವಿಯೋಗವಿಷಾದವೇಗದಿಂವಿಗತಜೀವಿತೆಯರಪ್ಪರದುಕಾರಣದಿಂ ನೀಂಪೇಗಮೆಯ್ದೆವೋಗಿ ಪೋಗಲೀಯದೆರಾಮಲಕ್ಷ್ಮಣರಂನಿಲಿಸಾನುಂನಿಂನಪಿಂದನೆಬಂದಪೆನೆಂಬುದುಮಂತೆಗೆಯ್ವೆನೆಂದುರಾಘವನಂಕಳಿಪಿಬಂದಸಾಮಂತರ್ಸ್ಸಹಿತಂತೊಱೆಯಂಪಾಯ್ದುಪೋಗಿಮುಂದೆಕಱಂಗಿಕಳ್ತಲಿಸಿದಕಾನನದಬಟ್ಟೆಯೊಳ್ಜಾನಕಿಯಗಮನಪರಿಶ್ರಮಮನಾಱಿಸುತ್ತಿರ್ದ್ದರಘುವೀರನಂಮುಟ್ಟೆವೆಂದುವಾಹನದಿನಿೞಿದುಕಾಲಮೇಲೆಕವಿದುಪೋಗವಟ್ಟು ॥

ಕಂ ॥ ಪುದಿಯೆತಮಂಮನಮಂಮೋ ।
ಹದವಾಗ್ನಿಯಧೂಮದಂತೆಕರಣಬಳಪ್ರಾ ॥
ಣದಚೇಷ್ಟೆಗೆಟ್ಟುಭರತಂ ।
ಪದಾನತಂವಿಕಳನಾಗಿಮೂರ್ಛೆಗೆಸಂದಂ ॥ 15

ವ ॥ ಅಂತುಮೂರ್ಛಿತನಾಗಿಕಿಱಿದಾನುಂಬೇಗದಿನೆಂತಾನುಮೆಚ್ಚತ್ತು ಸೀತೆಗಂಲಕ್ಷ್ಮಣಂಗಂತುಳಿಲ್ಗೆಯ್ದುನಿಟಿಲತಟಘಟಿತಮುಕುಳಿತಕರಸರೋಜಂ ರಾಮಚಂದ್ರನಮುಖಚಂದ್ರನಂನೋಡಿ ॥

ಕಂ ॥ ಅಕ್ರಮದಿನಳಿಪಿವಸುಧಾ ।
ಚಕ್ರಮನಾನಾಸೆಗೆಯ್ವೊಡುರ್ವ್ವೀಶವಿಶಾ ॥
ಚಕ್ರಾವಧಿಯುಕ್ಕುಂದೋ ।
ವ್ವಿಕ್ರಮಧನನಿಂಮಮನದೊಳವಧರಿಪುದಿದಂ ॥ 16

ಅನಯಂಮನುಕುಲದೊಳ್ನಾ ।
ಭಿನರೇಂದ್ರನಿನಿತ್ತಲಾದುದಿಲ್ಲೆನಿಂದಂ ॥
ಜನಿಯಿಸಿದೊಡೆಕುಲದೂಷಕ ।
ನೆನಿಪ್ಪಪಾಪಕ್ಕೆಪಳಿಗೆಪಕ್ಕಾಗಿರೆನೇ ॥ 17

ಚ ॥ ಅನಯದಿನಪ್ಪಸಂಪದದಿನಿಲ್ಲಮೆನಾಡೆಯುಮಿಂಬುವೆತ್ತುದೆಂ ।
ತೆನೆಪಳಿವಂನರಿಲ್ಲಧನಮಿಲ್ಲದರಂದುರಿತಾನುಬಂಧಮಿ ॥
ಲ್ಲನಯದಿನಪ್ಪವೀಯೆರಡುಮೊಂಬುದೆನಿಂಬಱಿದೀವೆಮೆಂಬರೆಂ ।
ತೆನಗಧಿರಾಜರಾಜ್ಯಮನಪ್ರಾಜ್ಯಮನಕ್ರಮದಿಂದಮಪ್ಪುದಂ ॥ 18

ವ ॥ ಎಂದುಬಿಂನವಿಸುವಂನೆಗಂ ಕೈಕೆನೊರ್ವ್ವಸಾರ್ಮಂತರೊಡನೆಬರೆಬರ್ಪ್ಪಳಂಕಂಡು ॥

ಕಂ ॥ ಇದಿರೆರ್ದ್ದುಪರಿದುಕೈಕೆಯ ।
ಪದಾಂಬುಜಕ್ಕೆಱಗೆರಾಘವಂಹರ್ಷ್ಷದಭಾ ॥
ರದಿನುಂವಳವಾಸತಿಗಾ ।
ಮದುಮನದೊಳ್ನೆನೆದುತಂನಗೆಯ್ದನ್ನೆಯುಮಂ ॥ 19

ಸ್ಥಾನಚ್ಯುತಿಮಾಡಿದಳೆಂ ।
ಬೇನೋವಿಲ್ಲೇಕಕುಂಡಲಂಕೈಕೆಗಪಾ ॥
ದಾನತನಾದಂಪದಪಿಂ ।
ಮಾನಕಷಾಯಕ್ಕೆ ತಕ್ಕ ನೆಡೆಗೊಟ್ಟಪನೇ ॥ 20

ವ ॥ ಅಂತುವಿನಯವಿನಮಿತನಾಗಿರ್ದ್ದಮಗನಂತೆಗೆದುತಳ್ಕೈಸಿಪಲತೆಱದಿಂ ಪ್ರಳಾಪಂಗೆ
ಯ್ದುವಿವೇಕದಿಂದೆಂನಗೆಯ್ದದುರ್ವ್ವಿಲಸಿತಕ್ಕೆ ಸೈರಿಸಿಮಗನೆರಾಜ್ಯಮಂಕೈಕೊಳ್ವು
ದುನಿಂನತಂಮದಿರ್ನ್ನಿನಗೆಜಸಕೆಯ್ದುಬಾಳ್ವರಿದನುದಾಸೀನಂಗೆಯ್ಯದೆಮಗುಳೆಬಿಜ
ಯಂಗೆಯ್ಯೆಂಬುದುಮಂಬಿಕೆಗೆಮುಕುಳಿತಕರಾಂಬುಜಂರಾಮನಿಂತೆಂದಂ ॥

ಕಂ ॥ ಅಕಲಂಕಚರಿತ್ರಂಕ್ಷ ।
ತ್ರಕುಲೋದ್ಗತನೆರಡನುಸಿರ್ದ್ದೊಡೈಹಿಕಮಾಮು ॥
ಷ್ಮಿಕಮಳಿಗುಂಕೇವಲಮಂ ।
ಬಿಕೆಪಾತಕಮನೃತದಿಂದಮಗ್ಗಳಮುಂಟೇ ॥ 21

ವ ॥ ಎಂದುಮತ್ತಮಯ್ಯನನಂನಿಗೆಬಂನವಂ ಪಡೆದು ನಿಂಮೊಳಾದವಿನಯಮನತಿಕ್ರ
ಮಿಸಿತಂಮನಕಯ್ಯಿಂರಾಜ್ಯಮಂಕೊಂಡೊಡೆಂನನುಡಿಕೀಳ್ತಡಮಕ್ಕುಮಿಂನುಂಮ
ಗುಳೆನುಡಿಯದಿರಿಮೆಂದು ಭರತನುಮನಾಂಕುಡಲ್ಪಡೆದರಾಜ್ಯಂನಿನಗಕ್ರಮಮಣ
ಮಲ್ತುಪಕ್ರಂಬಂದೊಡೆಂಮಾಜ್ಞೆಗೆತಪ್ಪಿದೆಯೆಂದುನಿಲೆನುಡಿದು ॥

ಕಂ ॥ ಬಂಹಿಮವನ್ಮಹಿಮಂನಿಜ ।
ಸಿಂಹಕಟೀತಟವಿಲಾಸಪರ್ಯ್ಯಂಕತಳಂ ॥
ಸಿಂಹಾಸನಮೆನೆಭರತಂ ।
ಗೇಂಪಲಿಸಾಮ್ರಾಜ್ಯಪಟ್ಟಮಂಕಟ್ಟಿದನೋ ॥ 22

ವ ॥ ಅಂತುನಿಜಮದಾನ್ಯತಾಗುಣವಿಶುದ್ಧಸಿದ್ಧರಸಪ್ರವಾಹಕ್ಕೆ ಸೇತುಗಟ್ಟುವಂತಮಂಗೆಪ
ಟ್ಟಮಂಕಟ್ಟಿವಿನಯಮಂಮುಂದಿಟ್ಟು ॥

ಉ ॥ ಈಕ್ಷಿಸುವಂನೆಗಂಭುವನವಲ್ಲಭನಿಂಮಪದಾರವಿಂದಮಂ ।
ರಕ್ಷಿಸುವೆಂಧರಾವಳಯಮಂಭವದಾಜ್ಞೆಗೆಱಟ್ಟಿ ಮನ್ಮನಃ ॥

ಸಾಕ್ಷಿಕಮಾನಪೇಕ್ಷಿಸುವೆನಲ್ತುಪಭೋಗಮನೆಂದುಪೂಣ್ದನೇ ।
ನಕ್ಷತ್ರಧೈರ್ಯ್ಯನೋಭರತನೊ[illegible]ಲೋಭರತಪ್ರಪಂಚಮಂ ॥ 23

ವ ॥ ಅಂತುಪ್ರತಿಜ್ಞಾರೂಢನಾದಭರತನುಮಂಜನನಿಯುಮನುಚಿತಪ್ರತಿಪತ್ತಿಯಿಂಮಂ
ನಿಸಿಪೊೞಲ್ಗೆ ಕಳಿಪಿರಾಮಂಲಕ್ಷ್ಮಣಸೀತಾಸಮೇತಂಪಯಣಂಪೋಪ್ರುದು ಮಿತ್ತಭರ
ತಂಕೈಕೆವೆರಸಯೋಧ್ಯೆಯಂಪೊಕ್ಕು ॥

ಮ ॥ ಅಮಳ್ವೆತ್ತಂತೆಸಮಾನಮಾಗೆಭರತಂಕೊಂಡಾೞ್ದಂಕ್ಷತ್ರಧ ।
ರ್ಮ್ಮಮುಮಂಧರ್ಮ್ಮಮುಮಂಧರಾವಲಯಮುಮಂವಿಕ್ರಾಂತದಿಂತಾಳ್ದಿಸಂ ॥
ಯಮಸಂರಕ್ಷಣಸತ್ವದಿಂತಳೆದುದಾನಂಪೂಜೆಶೀಲೋಪವಾ ।
ಸಮನತ್ಯಂತರೂಢರಾಜತನಯರ್ತ್ತನ್ನಂನರಾರೆಂಬಿನಂ ॥ 24

ವ ॥ ಅಂತುಭರತಂರಾಜ್ಯಸುಖವಿಮುಖನರಸುಗೆಯ್ಯುತ್ತಿರ್ಪ್ಪನಮಿತ್ತಲ್ ॥

ಉ ॥ ಆತಪತಾಪಮಂತೞಿರಸತ್ತಿಗೆಯಿಂದೆತೃಷಾವಿಷಾದಮಂ ।
ಶೀತಲತೋಯದಿಂದೆಪಸಿವಂಪರಿಪಕ್ವಫಲಂಗಳಿಂದೆನಿ ॥
ದ್ರಾತುರವೇಗಮಂಲತೆಯಮಂಟಪದಿಂದೆಪಥಶ್ರಮಾಂಬುವಂ ।
ಸೀತೆಗೆತೊೞ್ದಿದಂಕದಳೀದಳವೀಜನದಿಂದೆರಾಘವಂ ॥ 25

ಮ ॥ ವನಕೇಳೀಗಮನಕ್ಕೆ ದೀಪಕಲಿಕಾದೀಪ್ತಿಪ್ರತಾನಕ್ಕೆ ಮೀ ।
ಜನವಾತಕ್ಕೆಬಳಲ್ವಸೀತೆಗಮನಾಯಾಸಕ್ಕೆ ಚಂಡಾಂಶುತಾ ॥
ಪನಿರೋಧಕ್ಕೆ ಸಮಗ್ರವಾತಹತಿಗೇನುಂಬೇವಸಂಬಟ್ಟೆೞ ।
ಲ್ಲಿನಿಯಂತಂನೋಡನುಯ್ದುಪಂರಘುಜನೆಂಬೀರಾಗದುದ್ರೇಕದಿಂ ॥ 26

ಕಂ ॥ ಪರಲೊತ್ತೆಸೈರಿಸುತ್ತುಂ ।
ಗುರುಜಘನಭರಂಗಳಿಂತಡಂಮೆಟ್ಟುತ್ತುಂ ॥
ಚರಣಕಮಲಂಗಳಂಸಂ ।
ವರಿಸುತ್ತುಂಸೀತೆಸೆಡೆದುಮೆಲ್ಲನೆನಡೆದಳ್ ॥ 27

ಚ ॥ ಒಗೆವಕುಚಂಗಳಿಂತೊಲಗೆಮೇಲುದನೋರಡಿಗೊಮ್ಮೆಸೀತೆಸಾ ।
ವಗಿಸುವಕೈತವಂವದನಚಂದ್ರಸುಧಾರಸಬಿಂದುವೆಂಬಿನಂ ॥
ನೆಗೆವಪಥಶ್ರಮಾಂಬುಕಣಮುಂನಸುಬಂಬಲುಬಾಡಿದಂಗಮುಂ ।
ತ್ರಿಗುಣಿಸೆರಾಗಮಂಮಗಳ್ದುವೀಕ್ಷಿಸುತುಂನಡೆದಂರಘೂದ್ವಹಂ ॥ 28

ಮ।ಸ್ರ॥ ಕ್ರಮದಿಂಪರ್ಯ್ಯಂತನಾನಾಜನಪದನಗರಗ್ರಾಮಪುಣ್ಯಾಶ್ರಮಪ್ರಾಂ ।
ತಮೆಬೀಡಪ್ಪಂತುಸಾಮಿತ್ರಿಯುಸಮುಚಿತಪರ್ಯ್ಯಾಪ್ತಿಯಿಂಪಿಂಗೆಯಾತ್ರಾ ॥

ಶ್ರಮವೇಗಂಪಾರಿಯಾತ್ರಾವನಿಯನಿಕಟಮಂರಾಘವಂಜಾನಕೀಸ್ಮೇ |
ರಮುಖಾಬ್ಜಾಲೋಕನಂಲೋಚನಸು[illegible]ಮುಖಪಾಥೇಯಮಾಗೆಯ್ದೆವಂದಂ ॥ 29

ವ ॥ ಅಂತೆಯ್ದೆವರ್ಪ್ಪುದುಂ ॥

ಮ।ಸ್ರ॥ ಫಲಭಾರಾಕ್ರಾಂತಸಾರ್ವ್ವರ್ತ್ತುಕನಿಕಟವನಂಮೇಖಳಾಕೀರ್ಣ್ಣವಲ್ಲೀ |
ನಿಲಯಂಗಂಧೇಭಗಂಧೋತ್ಕಟಮವಿರಳಸಾನುಸ್ಥಳೀಪದ್ಮನೀಲೋ ॥
ತ್ಪಲಷಂಡಂಕೂಟಕೋಟಿಸ್ಫುರಿತಮಣಿಮಯೂಖಾವಳೀಚಿತ್ರಿತಾಶಾ |
ಫಲಯಂಕಣ್ಗಂಮನಕ್ಕಂಪಡೆದುದುಪದಪಂಚಿತ್ರಕೂಟಾಚಲೇಂದ್ರಂ ॥ 30

ಫಣಿಲೋಕಂಪಾದಪೀಠಂತನಗೆನೆರಸೆಯಂಮೆಟ್ಟಿಮತ್ತಿತ್ತತಾರಾ |
ಗಣಮಂತಳ್ತೊಯ್ದುಪೇರ್ವ್ವಿಗೆನಸರಲಂಕಣ್ಗೆಚೆಲ್ವಾಗಿನಾನಾ ॥
ಮಣಿಕೂಟಂಚಿತ್ರಕೂಟಂಸೊಗಯಿಸೆಪದಪಿಂಸೀತೆಯುಂರಾಮನುಂಲ |
ಕ್ಷ್ಮಣನುಂನೋಡುತ್ತುಮುತ್ಕಂಟಕಿತತನುಗಳಾಶೈಲಮಂದಾಂಟಿಪೋದರ್ ॥ 31

ವ ॥ ಅಂತವರ್ಚ್ಚಿತ್ರಕೂಟಾಚಲೇಂದ್ರಮಂಬಲದೊಳಿಕ್ಕಿಪೋಗಿತದನಂತರಮವಂತಿವಿಷಯದೊಳಗನೆಬರುತ್ತುಮದೊಂದುವಟವಿಟಪಿಚ್ಛಾಯಾಚ್ಛಾದಿತಮಪ್ಪತಣ್ಬೆಲನುಣ್ಬಸಲೆಯೊಳ್ವಿಶ್ರಮಿಸಿಪಥಶ್ರಮಮನಾಱಿಸುತ್ತುಂ ॥

ಕಂ ॥ ಫಲಭರಿತಂಗಳನೀಕೆ |
ಯ್ದೊಲಂಗಳಂಕಾವರಿಲ್ಲನಿರ್ಜ್ಜಂತುಕಮೀ ॥
ನೆಲನನಿತುಂಜೇಡರಮೇ |
ಕ್ಕೆಲದರಸರಬಾಧೆಯಿಂದೆಪಾಳಾಯ್ತಕ್ಕುಂ ॥ 32

ವ ॥ ಎಂದುನುಡಿಯುತ್ತಿರ್ಪ್ಪನವೋರ್ವ್ವಂಮಾರ್ವ್ವಟ್ಟೆಯೊಳ್ಬರುತ್ತುಮವರಂಕಟ್ಟಿದಿರೊಳ್ಕಂಡೆಱಗಿಪೊಡವಟ್ಟುಮಱವಟ್ಟಿರ್ಪ್ಪುದುಂಲಕ್ಷ್ಮಣನವನೊಳಂಜದಿರೆಂದುವಿನಯಮಂನುಡಿದೀನಾಡೇಕೆಪಾಳಾದುದೆನೆಮುಕುಳಿತಾಂಜಲಿಪುಟನಿಂತೆಂದಂ ॥

ಕಂ ॥ ಇದವಂತಿವಿಷಯಮೀವಿಷ |
ಯದೊಳಂಟುಜ್ಜಯಿನಿಯೆಂಬಪೊಳಲದನಾಳ್ವಂ ॥
ಮದವದರಿಕರಟಿಮಸ್ತಕ |
ವಿದಾರಿಸಿಂಹೋದರಂಪರಾಕ್ರಮಸಿಂಹಂ ॥ 33

ವ ॥ ಆತಂತಂನಸಾಮಂತನಪ್ಪವಜ್ರಕರ್ಣ್ಣಂತನಗೆಕೈತವದಿಂದೆಱಗುವುದಂಕರ್ಣ್ಣಪರಂಪರೆಯಿಂಕೇಳ್ದುಕಡುಮುಳಿದು ॥

ಮ ॥ ಸಕಲಜ್ಞಂಪೊಱಗಾಗೆಕೈಮುಗಿಯೆನೆಂಬೀಪ್ರೋಕ್ತಿಯಿಂರತ್ನಮು ।
ದ್ರಿಕೆಯೊಳ್ಕೀಲಿಸಿಜೈನಬಿಂಬಮನಿದೇನುದ್ವೃತ್ತನೋನಮ್ರಮು ॥
ಸ್ತಕನಪ್ಪಂಗಡವಜ್ರಕರ್ಣನೆನಗಂಕೌಟಿಲ್ಯದಿಂದೆಂದುಮಾ ।
ನಕಷಾಯಾಶಯನಾತನಿರ್ದ್ವಪುರಮಂಸಿಂಹೋದರಂಮುತ್ತಿದಂ ॥ 34

ವ ॥ ಅದಱಿನಾತನೊಳಾದಭೀತಿಯಿನೀವಿಷಯಮಿನಿತುಂಪಾಳಾದುದಾದಶಪುರಮುಮೀದೆ
ಸೆಯಲ್ಲಿಲ್ಲಿಗಿನಿತುದೂರಮೆಂದುಬಿಂನವಿಸಿಬೀಳ್ಕೊಂಡುಪೋಪುದುಂ ॥

ಮ ॥ ವ್ರತಮಂಪಾಲಿಸಿದಂಮಹಾಪುರುಷನೆಂಬೀಸಂತಸಂಗೆಟ್ಟುದು ।
ರ್ಮ್ಮತಿಸಿಂಹೋದರನಪ್ರಮತ್ತಚರಿತಂಗಾವಜ್ರಕರ್ಣಂಗೆದು ॥
ಸ್ಥಿತಿಯಂಮಾಡುವೆನೆಂದುಬಂದುಪುರಮಂಮುತ್ತಿರ್ದಪಂತನ್ಮದೋ ।
ದ್ಧತನಂಬಾರಿಸವೇಳ್ಪುದಲ್ಲದೊಡುಪೇಕ್ಷಾದೋಷಮೇನಾಗದೇ ॥ 35

ಕದನೋದ್ಯೋಗದಿನಾಳ್ದನೆಯ್ತಿಬರೆಯುಂಬಳ್ಕುತ್ತೆಬನ್ನಿತ್ತನಿ ।
ಲ್ಲದೃಥಾತ್ಮಂತಳೆದಂಪಲರ್ಪ್ಪೊಗಳ್ವಿನಂನಿಶ್ಶಂಕೆಯುಂಪೊಷ್ಕೆದ ॥
ಪ್ಪಿದನಿಲ್ಲೈಹಿಕಲಾಭಮಂಬಗೆದನಿಲ್ಲೇವೇಳ್ವೆಸದ್ದೃಷ್ಟಿಗ ।
ಲ್ಲದಸದ್ದೃಷ್ಟಿಗೆವಜ್ರಕರ್ಣನೆವಲಂಕಯ್ಯಂನೊಸಲ್ಗೊಯ್ಯದಂ ॥ 36

ವ ॥ ಎನುತ್ತಮವರಲ್ಲಿಂತಳರ್ದುದಶಪುರಮನೆಯ್ದೆವರ್ಪ್ಪುದುಂ ॥

ಉತ್ಸಾಹ ॥ ಕರಿಯುಬಳನನಡುವೆಸೀತೆಪೊಳೆಯೆಚಳವಿಳೋಚನಂ ।
ಕರಿಯಬಿಳಿಯಮುಗಿಲನಡುವೆಪೊಳೆವಮಿಂಚಿನಂದದಿಂ ॥
ಬರೆಕಡಂಗಿವಜ್ರಕರ್ಣನವರನಾತ್ಮರಾಜಮಂ ।
ದಿರದಪೊಂನನೆಲೆಯುಮಾಡದಿದಿರೊಳಿರ್ದ್ದನೋಡಿದಂ ॥ 37

ಕಂ ॥ ಅತಿಲಲಿತಗಮನಮಾತ್ಯಾ ।
ಯತನಯನಮನೂನವಕ್ಷಮಾಜಾನುವಿಳಂ ॥
ಬಿತಬಾಹುಯುಗಳಮಪ್ರಾ ।
ಕೃತಮೀಸೌಂದರ್ಯ್ಯಮಿಂನರಂಕಂಡಱಿಯೆಂ ॥ 38

ಚಾರಣಪುರುಷರಿವರ್ಸ್ವ ।
ಧಾರಣರಲ್ಲತ್ತೃಣೀಕೃತತ್ರಿಭುವನರೇ ॥
ಕಾರಣವೆಳ್ತಂದರೊಬಲ ।
ನಾರಾಯಣರಪ್ಪರುಳಿದರಿಂನರುಮೊಳರೇ ॥ 39

ವ ॥ ಎಂದುನೀಡುಂಭಾವಿಸಿವಿಸ್ಮಯಾಸ್ಫಾರಿತಲೋಚನನಾಗಿನೋಡುತ್ತಿಪೂರ್ವದುಮಪ
ಪೂರ್ವರದುತ್ತರಗೋಪುರವಜಿನೇಂದ್ರಮಂದಿರಮನೆಯ್ದಿ ವಂದುಮೂಱುಸೂಳ್ವಲ
ಗೊಂಡುಜಗತ್ತ್ರಯಪ್ರಭುವಿಗಭಿಮುಖರಾಗಿ ॥

ಕಂ ॥ ಜಯಜಿತವೃಜಿನಜಿನೇಶ್ವರ ।
ದಯಾನದೀಪುಳಿನರಾಜಹಂಸಭವಾಂಭೋ ॥
ಧಿಯತಡಿಯನೆಯ್ದಿಸೆಂಮಂ ।
ನಯನಿಕ್ಷೇಪಪ್ರಮಾಣಮಾತ್ರದಿನರ್ಹಾ ॥ 40

ನೀವಾಳವೆಂದುಕೆಲಬ ।
ರ್ಭಾವಂಪಿಡಿವಂತೆದೇವನೀನಲ್ಲದರಂ ॥
ದೇವರಿವರೆಂದುಪಿಡಿದಪ ।
ರೇವಿಧಿಪಟ್ಟಪರೊಮೋಹಮೂರ್ಛೆಯಿನರುಹಾ ॥ 41

ನಿನಗೆರಸವೊಂದೆಶಾಂತಮೆ ।
ಜಿನೇಂದ್ರಮನವಾರಸಾಂಬುನಿಧಿಯೊಳಗವಗಾ ॥
ಹನಮಿದ್ದುರ್ಮಿಕ್ಕರಸಮಂ ।
ಕನಸಿನೊಳಂನೆನೆಯದಂತುಮಾಡೆಮಗರ್ಹಾ ॥ 42

ಮಣಿಭೂಷಣಭರದಿಂತನು ।
ಕಿಣಮಪ್ಪುದದೇಕೆನಿಂನನಿರ್ಮ್ಮಳಗುಣಭೂ ॥
ಷಣಮಂದಯೆಗೆಯ್ವುದೆಮಂ ।
ಪ್ರಣಯಮನಪವರ್ಗ್ಗಲಕ್ಷ್ಮಿಗದಱಿಂದರುಹಾ ॥ 43

ಸಿಂಗದಮಾರ್ದ್ದನಿಮಿದಮಾ ।
ತಂಗಮನಳಱಿಸುವಪ್ರೋಲ್ನಿಜಪ್ರತಿಬಿಂಬಂ ॥
ಪಿಂಗದೆಮನದೊಳ್ನಿಂದಿರೆ ।
ಪಿಂಗಿಸುವುದುಜನನಮರಣದುಃಖಮನರ್ಹಾ ॥ 44

ಮೆಚ್ಚೆಗಡಮುಳಿಯೆಗಡಬಗೆ ।
ಪೆಚ್ಚಿರೆಬೇಱಾಗೆನಿಂನಪದದೊಳ್ಮನುಜಂ ॥
ಗಚ್ಚಗತಿನೀಚಗತಿವಡೆ ।
ವಚ್ಚರಿಕಣ್ಡೆ ಜಿವತೆಜನನಱಿಪೆಮಗರ್ಹಾ ॥ 45

ಜ್ಞೇಯಂಗೆನೀನೆವಲವಾ ।
ಧ್ಯೇಯಂನೀನಲ್ಲದನ್ಯವಸ್ತುಗಳೆಲ್ಲಂ ॥
ಹೇಯಂಗಳೆಂಬತತ್ತ್ವೋ ।
ಪಾಯಮನೆನಗೀವುದೇವೆನುಱದವನರ್ಹಾ ॥ 46

ನಿತ್ಯಸುಖಮಾತ್ಮರೂಪಮ ।
ನಿತ್ಯಸುಖಂಮೋಹರೂಪಮೆಂಬವಿವೇಕಂ ॥
ಸತ್ಯಸ್ವರೂಪಮವಱೊಳ ।
ಗತ್ಯಂತಾನುಭವವಿಭವಮಕ್ಕೆಮಗೆರ್ಹಾ ॥ 47

ವ ॥ ಎಂದುಮರ್ಕ್ಕನಸ್ತುತಿಗೆಯ್ದು ಜಿನಮುಖದರ್ಶನದಿಂಹರ್ಷಚಿತ್ತರಾಗಿಚೈತ್ಯಾಲಯದ ಪಟ್ಟಶಾಲೆಯಮುಂದಣಪರಿಸೂತ್ರದಸುತ್ತಣಸರೋವರಂಗಳೊಳಲರ್ದತಾವರೆಯ ತನಿಗಂಪಂತಕ್ಕೈಸಿತೀಡುವತಂಗಾಳಿಯಸೋಂಕಿಂಗಮನಪರಿಶ್ರಮಮನಾಱಿಸು ತಿರ್ಪ್ಪದುಮಾಗಳಲ್ಲಿಗೆವಜ್ರಕರ್ಣ್ಣನಟ್ಟಿದಬೋಳಿವಮಾನಿಸರ್ಬ್ಬೋನಮಂತೆಂದುವಿ ನತರಾಗಿಮಾರ್ಪ್ಪಲಂಬಳಸಿಬಿಟ್ಟರ್ದ್ದದೂಸಱಿನೆಂಮರಸಂತಾಂಬರಲುಂನಿಂಮಂ ಬರಿಸಲುಮಱಿಯದೆಂಮನಟ್ಟಿದನೆಂದುಬಿಂನವಿಸಿಮಣಿಮಯಭಾಜನದೊಳಗರ್ಘ್ಯ ಪಾದ್ಯಮಂ ಕೊಟ್ಟಭ್ಯಾಗತಪ್ರತಿಪತ್ತಿಗೆಯ್ವುದುಮವರಭ್ಯವಹೃತಿಯಂನಿರ್ವ್ವ ರ್ತ್ತಿಸಿಕೈಘಟ್ಟಿಯುಮಂತಾಂಬೂಲಮುಂಕೊಂಡುಬಂದ ಮಾನಿಸರಂವಿಸರ್ಜ್ಜಿಸಿತ ದನಂತರಂದಾಶರಥಿಸೌಮಿತ್ರಿಯುಮೊಗಮಂನೋಡಿ ॥

ಮ।ಸ್ರ॥ ಅನಿಮಿತ್ತಂವಜ್ರಕರ್ಣ್ಣಂನಮಗೆವಿನಯಮಂಮಾಡಿದಂಮಾನ್ಯನಾತಂ ।
ಗನುದಾತ್ತಂಮತ್ತಚಿತ್ತಂಮುಱದುಬಳ್ಳಿಸಿಸಿಂಹೋದರಂಕಾದಲೆಂದಿ ॥
ರ್ದ್ದನದಂನೀಂಬಾರಿಸೆಂಬೀನುಡಿಕಿವಿಯುಗೆಸೌಮಿತ್ರಿದಿವ್ಯಾಸ್ತ್ರಬಾಣಾ ।
ಸನಮಂಕಯ್ಯಾಪ್ದರ್ದ್ದನಿಲ್ಲಂತಕನಪಸದೆಕಾಳಾಹಿಬರ್ಪ್ಪಂತೆಬಂದಂ ॥ 48

ವ ॥ ಅಂತು ಬಂದರಮನೆಯಬಾಗಿಲೊಳ್ನಿಂದು ಪಡಿಯರನೊಡನೆ ಸಿಂಹೋದರನಸಭೆ ಯಂಪೊಕ್ಕು ॥

ಕಂ ॥ ಎಱಗುವುದಂತಿಕ್ಕೆರ್ಮಕಾ ।
ಯ್ಟಿಱಗುವಸಿಡಿಲಂತೆಘನರವಂಕಯ್ಮಿಗೆನಾ ॥
ಡೆಱೆಯಂಭರತಂಪೆಸಸಿದ ।
ತೆಱನಂಕೇಳೆಂದುಪೀತವಸನಂನುಡಿದಂ ॥ 49

ಜಿನಪತಿಗಲ್ಲದೆಪೊಡಮಡೆ ।
ನೆನೆದೋಷಿಯೆವಜ್ರಕರ್ಣ್ಣನುಱವುದುಮುಳಿಸಂ ॥

ವಿನಮದಮರೇಂದ್ರನೆನಿಸಿದ ।
ಜಿನೇಂದ್ರನೊಳ್ನಿನಗೆಗಂಡಮಚ್ಚರವುಂಟೇ ॥ 50

ಅನೈತಿಕಂಗೆಜಗದವೀ ।
ರಕ್ಷ್ಯತಮಂಕೇಳ್ದಮರ್ಷಮಂತಾಳ್ದಿದನಿಂ ॥
ನಬ್ರಹ್ಮಣ್ಯಂವರ್ಯ್ಯಾಜ ।
ನವ್ರೀಡಾಕರಮದಂವಿಚಾರಿಸವೇಡಾ ॥ 51

ಸುತ್ತುೞ್ವುದುಮಂನಿಸೆಭೂ ।
ಪೋತ್ರಮನಾಜ್ಞೆಯನವಜ್ಞೆಗೆಯ್ದೊಡೆಕೊಡೆನಿ ॥
ಲ್ನಿತ್ತಿಗೆಗೆಂಟಕ್ಕುಮಿದಂ ।
ಮತ್ತೆಸದಿರುಚಿತಮಲ್ತುಗುಣವಿದ್ವೇಷಂ ॥ 52

ವ ॥ ಎನೆಸಿಂಹೋದರಂಘನರವಕ್ಕೆಸಿಡಿಲ್ವಸಿಂಹದಂತೆಮುನಿದು ॥

ಕಂ ॥ ಶ್ರೇಯಮನೆನಗಱಿಪಲುಪಾ ।
ಧ್ಯಾಯನೆತನಗಱಿವನಱಿವನಪ್ಪೊಡೆಭರತಂ ॥
ಜ್ಯಾಯನರಾಜ್ಯಮನದ್ಯಾಕ ।
ನೀಯಂಕಯ್ಕೊಂಡತೊಂಡುತನಗೌಚಿತ್ಯಂ ॥ 53

ಅಂಣನಮಾತಂಮಂನಿಸಿ ।
ಕಂಣಱಿದೋಸರಿಸಿದಂಜನಾರ್ದ್ದನನಿದಿರೊ ॥
ಳ್ತಂಣನೆಹರಿಪೀಠದೊೞ್ ।
ಪ್ಪೆಂಣನೆತಾಂತಂನಬೀರಮೇನಱಿಯದುದೇ ॥ 54

ಎನ್ನಾಳ್ನೆನಗೆಜಗದೊಡವ ।
ನ್ನಿಯಮಿಸುವೆಡೆಗೆತಾನುಮೆನಗರಸನೆಬಂ ॥
ದೆನ್ನಂನಿಯಮಿಸುವೊಡೆತ ।
ನ್ನೆನ್ನಳವಂಸಮರಮುಖದೊಳಱಿಯಲ್ಬರ್ಕ್ಕುಂ ॥ 55

ವ ॥ ಎನೆಲಕ್ಷ್ಮಣಂಮಂದಸ್ಮಿತಮುಖಾರವಿಂದನಾಗಿ ॥

ಕಂ ॥ ಅಧಿರಾಜಂಬರೆಗಂಕರದ ।
ನಧುರೀಣಂಗಂಡನಾವನೆನೆಕೇಳ್ದಘನ ॥
ಪ್ರಧನರತಂಸಿಂಹೋದರ ।
ನಧೋಕ್ಷಜಂಗೊಱೆಯನುಚ್ಚೈರ್ದಂಕೂರಸಿಯುಂ ॥ 56

ವ ॥ ಆಗಳದಂಕಂಡುಕಡುಮುೞಿದು ॥

ಕಂ ॥ ಬಾಳಂಬಂಜೆಸಿಪಿಡಿದಂ ।
ಬಾಳಕನಂಪಿಡಿವವಾಳ್ಕೆಯಿಂದವನಂಬ ॥
ಲ್ಲಾಳನೆೞೆದೊಯ್ದನಾವಂ ।
ಕಾಳಗದೊಳ್ಲಕ್ಷ್ಮಣಂಗೆಕೂರ್ಪ್ಪಂತೋರ್ಪ್ಪಂ ॥ 57

ಕಡಿತಲೆಯಂತೂಗುತ್ತುಂ ।
ಕಡಿತಲೆಕಾಱರ್ಕ್ಕಡಂಗಿಬರೆಬಱಗಯ್ಯೊ ॥
ಳ್ತುಡಿಕಿಪಿಡಿದೊತ್ತಿಮಸಕದಿ ।
ನೆಡೆಯುಡಿಗೆದೆಸಿಲೆಯೊಳಸಗಪೊಯ್ಲಂಪೊಯ್ದಂ ॥ 58

ಉ ॥ ಓರ್ವ್ವರಿನೋರ್ವ್ವರಂಮುಱಿಯೆಮೋದಿದನೋರ್ವ್ವರಿನೋರ್ವ್ವರಂಭುಜಾ ।
ಗರ್ವ್ವದಿನೋವದಿಟ್ಟನೆಱೆಯುಟ್ಟಿಸಿಡಿಲ್ಪೊಡೆವಂತೆಪೊಯ್ದನೋ ॥
ರೋರ್ವ್ವರಿನೋರ್ವ್ವರೋರ್ವ್ವರನಗುರ್ವ್ವಿಸೆಸಾಳನೆಸೀಳ್ದುನಿಂತಿದೇಂ ।
ಮಾರ್ವ್ವಲಮಂಪಡಲ್ವಡಿಸಳುರ್ಕ್ಕೆಗನಿರ್ದ್ದಯನೋಜನಾರ್ದ್ದನಂ ॥ 59

ವ ॥ ಆಗಳಾಕಳಕಳಕ್ಕೆಮುನ್ನೀರಮೇರೆದಪ್ಪಿದಂತೆಬೆಂನನೆತಗುಳ್ದು ಬರ್ಪ್ಪಮಾರ್ವ್ವಡೆ
ಗೆಕಡೆಗಾಲದಕೃತಾಂತನಂತೆಪೆಡಂಮಗುಳ್ದು ॥

ಕಂ ॥ ಕೂರಾಳಿಂಕೂರಾಳಂ ।
ತೇರಿಂತೇರಂಕಡಂಗಿಹಯದಿಂಹಯಮಂ ॥
ವಾರಣದಿಂವಾರಣಮಂ ।
ನಾರಾಯಣನಿಟ್ಟುತವಿಸಿದಂಮಾರ್ವ್ವಲಮಂ ॥ 60

ಉ ॥ ಏನುಜದಾಂಪುದುಂಜವನಪೋಲ್ತವೆಕೊಂದನೊಮ್ಮೆರಿಸೇನೆಯುಂ ।
ಮಾನವನೆಂದವಲ್ಲವಿದುದಾನವನೆಂದಮೆನಲ್ಬ್ಬಲಹರ್ಪ್ಪಲಂ ॥
ಮಾನವರಿಂಹಯಪ್ರತತಿಯಂಹಯದಿಂರಥಮಂರಥಂಗಳಿಂ ।
ದಾನೆಯನಿಟ್ಟುಕೈಗೆದೊರೆಕೊಂಡುದೆಕೈದುವೆನಲ್ಜನಾರ್ದ್ದನಂ ॥ 61

ವ ॥ ಅಂತಗುರ್ವ್ವುಮದ್ಭುತಮುಮಾಗೆಕಾದಿ ॥

ಮ ॥ ಚಕಿತಾರಾತಿಚತುರ್ವ್ವಲಂಬಲಯುತಂದೋಸ್ತಂಭದೊಳ್ಸಾಲಭಂ ।
ಜಕೆಪೋಲ್ರಂಜಿಸೆವೀರಲಕ್ಷ್ಮಿರಘುವೀರಂಲಕ್ಷ್ಮಣಂರಾಷ್ಟ್ರಕಂ ॥
ಟಿಕೆನಂಬಾಳ್ದಲೆಗೊಂಡನುಯ್ದನಿಭಮಂಪಂಚಾನನಂಹಸ್ತಿಮ ।
ಸ್ತಕಮಸ್ತಿಷ್ಕರಸಾನುರಕ್ತರಸನಂಮಾರ್ಕ್ಕೊಂಡುಕೊಂಡೊಯ್ವವೋಲ್ ॥ 62

ವ ॥ ಆಸಮಯದೊಳ್ಪರಿಜನಂಬೆರಸುಕರುಮಾಡದೇೞನೆಯನೆಲೆಯೊಳಿರ್ದ್ದು ವಜ್ರಕ
ರ್ಣ್ಣಂಕರ್ಣ್ಣಾಂತವಿಶ್ರಾಂತವಿಸ್ಫಾರಿತವಿಲೋಚನನಿದೇನೆಂದುನೋಡುತ್ತುಮಿರೆ ॥

ಮ.ಸ್ರ॥ ಗಣನಾತೀತಾನ್ಯಸೇನಾಂಗಮನನಿತುಮನೇಕಾಂಗದೊಳ್ಶ್ವಾನ್ಯಹಸ್ತಂ ।
ರಣದೊಳ್ಸೀಳ್ದೊಟ್ಟಿಸಿಂಹೋದರನನುಱದೆಕೊಂಡುಯ್ವುದ್ದಂಡನೀತಂ ॥
ಗೆಲೆಯಾವಂಗಂಡನೆಂದಾಪುರಜನವನಿತುಂವಿಸ್ಮಯತ್ಪಕ್ಷ್ಮವಿಕ್ಷೇ ।
ಪಣಮೊಯ್ತಂದೀಕ್ಷಿಸಿತ್ತುತ್ಸುಕಸರಭಸಯಾನಂಗತಾನ್ಯಾವಧಾನಂ ॥ 63

ವ ॥ ಆಸಮಯದೊಳ್ ॥

ಕಂ ॥ ಅವಿರಳಗಳದಶ್ರುಜಲ ।
ಪ್ಲವಧೌತಕಪೋಲತಳಮವಂತೀಶ್ವರನಂ ॥
ತವುರಂಪರಿಪಾಳಿಪುದೆಂ ।
ಮವತಂಸಮನೆಂದುಬಂದುಕಾಲ್ಗೆಱಗುವುದುಂ ॥ 64

ಮ ॥ ಮಲೆದಿರ್ದ್ದಂಗಡವಜ್ರಕರ್ಣ್ಣನೊಳದಂನೀಂಬಾರಿಸಟ್ಟಿದಂ ।
ಕೊಲಲೆಂದಟ್ಟಿದನಿಲ್ಲರಾಮನಧಿರಾಜಂಚಿಂತೆಬೇಡೇತಱಿಂ ॥
ದಲೆಸಿಂಹೋದರಮಾನಿನೀಜನಮಶೋಕೋದ್ರೇಕಮಂಮಾಣಿಮಂ ।
ಜಲಿರೆಂದಂಘನದುಂದುಭಿಧ್ವನಿಗಳೊಂದಾದಂತೆಲಕ್ಷ್ಮೀಧರಂ ॥ 65

ವ ॥ ಅಂತವನಮನದಶಂಕಾಕಳಂಕಮಂಕಳೆದುಸಿಂಹೋದರನನೆಳೆದೊಯ್ವುದುಮವ
ನಿವರ್ಬ್ಬಲಾಚ್ಯುತರೆಂದಱಿದು ॥

ಚ ॥ ಅತಿಬಲನಪ್ಪಲಕ್ಷ್ಮಣಕುಮಾರನವೀರರಸಪ್ರವಾಹಿನೀ ।
ಪತಿತಮಹಾಮಹೀರುಹಮೆನಲ್ಕತನಾದನವಂತಿವಲ್ಲಭಂ ॥
ಹತಸುಮನೋವಿಳಾಸನಪಸಾರಿತಮೂಲಬಲಂನಿರಸ್ತವಿ ।
ಸ್ಮೃತನಯನಸ್ತಸಾರನವಿಚಾರನಿಳೇಶ್ವರಪಾದಪಾರ್ಶ್ವದೊಳ್ ॥ 66

ವ ॥ ಆಗಳುದಾತ್ತರಾಘವಂ ॥

ಚ ॥ ಮನದೊಳೆಮೆಚ್ಚಿಲಕ್ಷ್ಮಣನದೋರ್ವ್ವಲಗರ್ವ್ವಮನಾನತಂಗೆಸಂ ।
ಮನದೊಳೆಭೀತಿಯಂಕಳೆದುವಿಗ್ರಹದಾಗ್ರಹಮಿಕ್ಕೆವಜ್ರಕ ॥
ರ್ಣ್ಣನೊಳನುಬಂಧಮಂಮಗುಳೆಮಾಳ್ಪುದುನೀನೆನೆಜಾನಕೀಪ್ರಿಯಂ ।
ವಿನಮಿತಮಸ್ತಕಂಮುಗಿದಕೈವೆರಸೆಂದನವಂತಿವಲ್ಲಭಂ ॥ 67

ಉ ‖ ದೇವರಸಂಮವಾವುಗೆಗಳಂಪಿಡಿಯೆಂಬುದನಿಂಬುಕೆಯ್ವಸ |
ದ್ಭಾವಮೆಸಾಲ್ಗುಮೊಲ್ಲೆನುೞಿದೇನುಮನೀಜಸನಂನರೇಂದ್ರನೀ ‖
ನೀವುದುಮೇಕ್ಷೆಗೆಯ್ವುದುಮಪೇಕ್ಷಿಸುವೆಂಫಲಮೂಲವಲ್ಕಲ |
ಪ್ರಾವರಣಾದ್ರಿಕುಂಜವನವಾಸಪವಿತ್ರತಪಶ್ಚರಿತ್ರಮಂ ‖ 68

ವ ‖ ಎಂದುಬಿಂನವಿಸುತ್ತಿರ್ಪ್ಪುದುಮಿತ್ತಲ್ ‖

ಕಂ ‖ ಬಱುಗಯ್ಯೊಳೊಂದೆಮೆಯ್ಯೊಳ್ |
ಮಱುವಕ್ಕಮನಿಕ್ಕಿಗೆಲ್ದುಸಿಂಹೋದರನಂ ‖
ನೆಱೆಗೊಂಡೊಯ್ದಂಕೃಷ್ಣನೆ |
ಪೆಱಂಗೆಪೇಳ್ವಾಹುವೀರ್ಯ್ಯವಿನಿತಾದಪುದೇ ‖ 69

ವ ‖ ಎಂದುಮನದೊಳ್ನಿಶ್ಚೈಸಿಪರಿವೃತಕತಿಪಯಪರಿಜನಂವಜ್ರಕರ್ಣ್ಣಂವಜ್ರಕುಂಡ
ಲಮರೀಚಿಪಗಲಸಿರಿಗೆ ಕಣ್ದೆರವಿಮಾಡಿದೂರೋತ್ಸಾರಿತವಿಚಿತ್ರಾತಪತ್ರವಿವಿಧವಾಹ
ನಂಬಸದಿಯಂಬಲಗೊಂಡುದರ್ಶನಸ್ತುತಿಗೆಯ್ದುತಿಸಂಭ್ರಮಗತಿಯಿಂಬಂದುಮಣಿ
ಮಕುಟಮಯೂಖಲೇಖೆಪಸರಿಸೆದೀಪವರ್ತ್ತಿಸಿಧಿಗೆಱಗುವಂತೆಱಗುವುದುಂ ‖

ಮ ‖ ಬಲವದ್ವೈರಿಗಳಲ್ಲಿಮುಂನೆಳೆದುಕೊಂಡಂತಿರ್ದ್ದವಂದಾಮಕೋ |
ಮಲಪಾದದ್ವಿತಯಂನತಂಗೆಪಡೆದತ್ತತ್ಯುನ್ನತಾಂಗುಷ್ಠದಿಂ ‖
ಬೆಳಗುತ್ತಿರ್ಪ್ಪನಖಂಗಳಿಂತೆಳೆದಕೆಂಪಿಂವಜ್ರಕರ್ಣ್ಣಂಗೆನಿ |
ಶ್ಚಲಮಪ್ಪಂತಿರೆಬೇಗಮುಂನತಿಯನುದ್ವೃತ್ತೇಜಮಂರಾಗಮಂ ‖ 70

ಉ ‖ ಕೊಟ್ಟುದುರಾಗಮಂತಳಮುದಂಶುಗಳಿಂನಖಪಙ್ತಿಪಟ್ಟಮಂ |
ಕಟ್ಟಿದುದುನ್ನತಾಂಗುಳಿಸಮುನ್ನತಿಯಂಚರಣಾನತಂಗೆಮುಂ ‖
ದಿಟ್ಟುದುವಜ್ರಕರ್ಣ್ಣವಸುಧಾರಮಣೀರಮಣಂಗೆತೊಟ್ಟನ |
ಲ್ವಪ್ಪಿಸಿದತ್ತುಮೆಯ್ಮವಿರ್ಗಳಂರಘುವೀರವಚಸ್ಸುಧಾರಸಂ ‖ 71

ವ ‖ ತದನಂತರಂ ‖

ಕಂ ‖ ಎಱಗದೊಡೆನೀಚವೃತ್ತಿಯ |
ನೆಱಗಿದೊಡುಂನತಿಯನೀವವಿಪರೀತಗುಣ ‖
ಕ್ಕೆಱೆವಟ್ಟೆನಿಸಿದುಮೇಂದ್ರಂ |
ಗೆಱಗಿದನಾದರದೆವಜ್ರಕರ್ಣ್ಣನರೇಂದ್ರಂ ‖ 72

ವ ‖ ಅಂತುವಿನಮಿತನಾಗಿ ‖

ಕಂ ॥ ಮನಮಂಕಾರುಣ್ಯರಸಂ ।
ತನುವಂರಾಘವನದೇಹರುಚಿಪುದಿಯೆಸುಧಾ ॥
ವನನಿಧಿಯೊಳ್ಮುೞುಗಿದವೋಲ್ ।
ಲನುರಕ್ತಂಮುಂದೆಮುಗಿದಕೈವೆರಸಿರ್ದಂ ॥ 73

ವ ॥ ಅಂತುಸಮುಚಿತಪ್ರದೇಶದೊಳಿರ್ಪ್ಪುದುಮಾಸಮಯದೊಳ್ ॥

ಕಂ ॥ ಭಂಗಿಮನಸಿಜನಗೂಡಿಗೆ ।
ಭಂಗಮನೊಡರಿಸೆಕಿರೀಟಕಿರಣಂನಭಮಂ ॥
ರಂಗಿಸೆಕಿಱಿದಾನುಂಚತು ।
ರಂಗಬಲಂಬೆರಸುವಿದ್ಯುದಂಗಂಬಂದಂ ॥ 74

ವ ॥ ಅಂತುಬಂದು ॥

ಕಂ ॥ ಶ್ರೀಮುಖದರ್ಶನಮೊಡರಿಸೆ ।
ರೋಮಾಂಚಮನೆಱಗಿವಿದ್ಯುದಂಗಂಮುನ್ನಂ ॥
ಕಾಮದ್ವಿಷಂಗೆಬೞಿಯಂ ।
ರಾಮಂಗಂಲಕ್ಷ್ಮಣಂಗಮಾನತನಾದಂ ॥ 75

ವ ॥ ಅಂತುವಿನಯವಿನಮಿತನಾಗಿವಜ್ರಕರ್ಣ್ನನಕೆಲದೊಳ್ಕುಳ್ಳಿರ್ಪ್ಪುದುಂಲಕ್ಷ್ಮಣಂಕುಮಾರನೀತನಾರ್ಗ್ಗನೆವಿದ್ಯುದಂಗನೆಂಬಂಕುಂಡಳಪುರದಪರದನಸುಷ್ಟಣಿಗೆಪರದುವೋಗಿಕಾಮಲತೆವೆಸರವೇಂಡವಾಸದವಿಳಾಸಿನಿಗೆವಲ್ಲಭನಾಗಿರ್ದ್ದುಕೆಯ್ಯುತ್ತಣಿಂಸಿಂಹೋದರನೆನಗೆರತ್ನತ್ರಯಾರಾಧಕಂಗಲ್ಲದೆಪೆಱಗೆಱಗೆನೆಂದುದಕ್ಕೆಕಡುಮುಳಿದುಕೊಲಲೆಂದುಬಂದುಬಳಿಯುಟ್ಟಿದುದಂಕೇಳ್ದುಕೇಳ್ದದೇಶಪೋತ್ತಾಗಿದಶಪುರಕ್ಕೆಬರುತ್ತುಮಿದಿರೊಳ್ನಂಕಂಡೆನಗೀವೃತ್ತಾಂತಮಂಪೇಳ್ದುಪೋಗಲೀಯದೆಮಗುಳೆಬಂದುನಿಂನಾಡುಪಸಪ್ಪೆನೆಂದೀಕದನಸಹಾಯನಾಗಿರ್ದ್ದಕಾರಣಬಂದನೀತನೆಂದು ಬಿಂನವಿಸೆತದನಂತರಂವಜ್ರಕರ್ಣ್ನನಮೊಗಮಂನೋಡಿರಾಘವದೇವಂ ನಿಜವ್ರತಪರಿಪಾಲನಪರಿಣಾಮಕ್ಕೆ ಮೆಚ್ಚಿದೆಂಮೆಚ್ಚಿದುದಂಬೇಡಿಕೊಳ್ಳೆನೆಮಹಾಪ್ರಸಾದಮೊಂದಿಂತೆಂದಂ ॥

ಕಂ ॥ ಪ್ರಾಣೋಪಕಾರಮಂಕ ।
ಲ್ಯಾಣಮನೆನಗಿತ್ತುದೇವತಣಿಯದನೀಂಮಿಾ ॥
ತ್ರಾಣಪ್ರವೀಣಪರಮ ।
ಪ್ರಾಣಿಹಿತಾಚರಣವಿತರಸಾಧಾರಣಮೇ ॥ 76

ಅಣುವಿಂಕೆಱಿದಾದುದುಧಾ ।
ರುಣಿದೇವರಬಗೆಗೆದೇವನಿಜಸತ್ವಗುಣಂ ॥
ಫಣಿಪತಿಗಮಱಿದುಮನುಜಂ ।
ಗಣನಾರ್ಹನೆಪೊಗಳಲೊಂದೆನಾಲಗೆಯಜಡಂ ॥ 77

ದೇವರಬರವೆನಗಾದುದು ।
ದೇವರಬರವೆಂನಸಯ್ಪಿನಿಂದೇನಭವ ॥
ತ್ರೈವಿದೊರೆಕೊಂಡುದೆನಗಿಂ ।
ನಾವುದುಮಱಿದಂಟೆಪೇೞಿಪಡೆವನಿತುವರಂ ॥ 78

ವ ॥ ಅದಱಿಂದೇವಸ್ಸಿಂಹೋದರಂಗೆಕಾರುಣ್ಯಂಗೆಯ್ವುದೆಂದುಬಿಂನವಿಸೆಲಕ್ಷ್ಮೀಧರನ ದಕ್ಕೆ ಮೆಚ್ಚಿ ॥

ಚ ॥ ಕಡಿದೊಡೆಪಾಲ್ಗಡಲ್ವಿಧವಸ್ತುವನೀಯದೆತೇಯೆಚಂದನಂ ।
ಕುಡದೆಸುಗಂಧಮಂಪಿೞಿಯೆಕಬ್ಬಿನಿದಾಗದೆಕಾಸೆಕಾಂಚನಂ ॥
ಪಡೆಯದೆಕಾಂತಿಯಂನಿಜದಿನೊಳ್ಳಿದರಪ್ಪವರೆಂತುಬಾಧೆವ ।
ಟ್ಟೊಡಮುಪಕಾರಮಂಪೆಱರ್ಗೆಮಾಡದೆಬಾಧೆಯನೇಕೆಮಾಡುವರ್ ॥ 79

ಕಂ ॥ ಇಱಿಯಲ್ಕೆ ಬಗೆದುಸಿಂಹೋ ।
ದರನಿರೆಯುಂವಜ್ರಕರ್ಣನೊಳ್ಪನೆಬಗೆದಂ ॥
ಪರಪೀಡಾಕರಣದೊಳೇಂ ।
ಪರೋಪಕಾರಪ್ರಿಯಂಗೆಬಗೆಬಂದಪುದೇ ॥ 80

ವ ॥ ಎಂದುನುಡಿದನಂತರಂದಾಮೋದರಂಸಿಂಹೋದರಂಗಂವಜ್ರಕರ್ಣಂಗಂಪರಸ್ಪರಕ ರಗ್ರಹಣದಿಂಮನದಕಲ್ಮಷಮಂಕಳೆದುನಾಡುವಂಬೀಡುಮಂಪಚ್ಚುಗೊಟ್ಟು ॥

ಕಂ ॥ ನುಡಿಕಿತ್ತಡವೆನಿಸದನೇ ।
ಪ್ಪೆಡುಗಿಡದೆನರೇಂದ್ರನಾಜ್ಞೆಯಿಂದಿರ್ಪ್ಪದಿದಂ ॥
ಕಡೆಗಣಿಸೆಬೞಿಕ್ಕಣ್ಣನ ।
ತುಡುವ[illegible]ಲೀಮುಖದೊಳಂಟೆಮುಖದಾಕ್ಷಿಣ್ಯಂ ॥ 81

ವ ॥ ಎಂದುನಿಯಮಿಸುವುದುಂವಜ್ರಕರ್ಣಂ ಪರಿಪೂರ್ಣಮನೋರಥಂದಾಶರಥಿಯುಂ ದೇವರೆಂನಮನೆಗೆಭೋಜನಂಗೆಯ್ವುದೆಂದುಯ್ವಸಮಯದೊಳ್ ॥

ಕಂ ॥ ತುಱುಗಿದುವುತೋರಣಂಕೈ ।
ನಿಱಿದುವುಗುಡಿಕಿವುಡುವೀಳ್ವನಂದಿಕ್ಕರಿಗಳ್ ॥
ಪಱೆವೊಳಗಿದುವುನ್ನತಿಕ ।
ಳ್ದೆಱೆದಂತೆವೊಲಾದುದುತ್ಸವಂದಶಪುರದೊಳ್ ॥ 82

ವ ॥ ಆಸಮಯದೊಳ್ಪುಟ್ಟಿತೋಱಿ ॥

ಮಾಸ್ರ ॥ ವನಿತಾರತ್ನಂದಲಾಕೋಮಲೆಜನಕಜೆರಾಮಂದಲಾಬರ್ಪ್ಪನೀಹಾ ।
ರನಗೇಂದ್ರಪ್ರಾಂಶುಸಿಂಹೋದರಕದನಮದೋದ್ರೇಕರೌದ್ರಗ್ರಹೋಚ್ಚಾ ॥
ಟನಮುದ್ರಾಮಾಂತ್ರಿಕಂಲಕ್ಷ್ಮಣನೆದಲೆನುತುಂಬೇಗಮೆಯ್ತಂದುಪೌರಾಂ ।
ಗನೆಯರ್ಕರ್ಣ್ನಾಬ್ಜಿನಂನೋಡಿದರಲರ್ಗಣೆಯಂತಾಗೆನೇತ್ರತ್ರಿಭಾಗಂ ॥ 83

ವ ॥ ಅಂತುಪೌರಜನದ ಮನದೊಡನೆಪುರಮುಮನರಮನೆಯುಮಂಪೊಕ್ಕು ಮಣಿಮ
ಯಮಂಟಪದೊಳಿಕ್ಕಿದಮಣಿಮಯಾಸನಮನಳಂಕರಿಸಿರಾಮಲಕ್ಷ್ಮಣರಿರ್ಪ್ಪುದು
ಮಭಿಜನಸನಾಭಿಜನಸಹಿತನಾತನನರ್ಘ್ಯಮಣಿಭಾಜನದೊಳರ್ಘ್ಯಪಾದ್ಯಮಂ
ಕೊಟ್ಟುಸಿಂಹೋದರನುಮನೊಡನೆಯರಸುಮಕ್ಕಳುಮಂವಿಚಿತ್ರವಸ್ತ್ರಾಭರಣಂ
ಗಳಿಂದಮರ್ಚ್ಚಿಸಿಮಜ್ಜನ ಭೋಜನಾದಿಸತ್ಕಾರಮನಂದಿನದಿನದೊಳ್ಮಾಡಿದುಮಱು
ದಿವಸಂಶುಭಮುಹೂರ್ತ್ತದೊಳ್ ॥

ಕಂ ॥ ತಂನತನುಜೆಯರನೆಣ್ಬ ।
ರ್ಕ್ಕಂನೆಯರಂವಜ್ರಕರ್ಣ್ಣನೊಳಿದರನಿತ್ತರ್ ॥
ಚೆಂನೆಯರನವನಿಪಾಲ ।
ರ್ಮ್ಮೂಂನೂರ್ವ್ವರನಲ್ಲಿಮದುವೆನಿಂದನುಪೇಂದ್ರಂ ॥ 84

ವ ॥ ಅಂತುದಶಪುರದೊಳ್ಸಿಂಹೋದರನನುಜ್ಞೆಗೆಬೀಳ್ಕೊಳಿಸಿಕೆಲವುದಿವಸಮಿರ್ಪ್ಪುದುಂ॥

ಉ ॥ ನೀರಸಮಾಗೆಬಳ್ಳಿಗಿಡುಪೇರ್ಮ್ಮರಗಳ್ಕರಯಂತ್ರನಾಳದಿಂ ।
ಭೂರಸಮೆಲ್ಲಮಂತೆಗೆಯೆಭಾನುದವಾನಳಧೂಮಧೂಸರಂ ॥
ಕಾರಿರುಳಂತೆಕಗ್ಗರದೆಸೆಬಂದುದುಪೇಸಗೆಗಾಲಮಸ್ತಕಾ ।
ಸಾರಕಸಾರಮಸ್ತಮಿತಮಾರುತನುದ್ಗತಚೀರಿಕಾರುತಂ ॥ 85

ಕಂ ॥ ಕರೆದುವುಸೀರುಡುಗಳ್ಪೇ ।
ರ್ಮ್ಮರಗಾಡೆಲೆಯಿಕ್ಕಿಕಳಲ್ದುಬಿರ್ದ್ದುವುತೊಱೆಗ ॥
ಳ್ಪರಿಗೆಟ್ಟುವುಬೆಳ್ವಯಲೊ ।
ಳ್ಸರಳೆಸಿದುವುಮರುಮರೀಚಿಕಾನಿವಹಂಗಳ್ ॥ 86

ಸಾರಂಗಿಡೆಪಾರ್ಥಿವಪರಿ ।
ವಾರಂದೆಸೆಗೆಟ್ಟುಪ್ರದೀಪವೋಲ್ಪೋದುವುನಿ ॥
ಸ್ವೈರಸರೋಜಾಕರದಿಂ ।
ಸಾರಸಕಳಹಂಸಚಕ್ರವಾಕಕುಟುಂಬಂ ॥ 87

ಪರಿವಾರಮೆನಿಪಬಹುಜಲ ।
ಚರಮರಣದೊಳಾದಖೇದದಿಂದೆರ್ದೆವೊಡೆವಂ ॥
ತಿರೆಕೂಡೆಬೀಡಸರಿದುವು ।
ನಿರಂತರೋತ್ತಪನತಾಪದಿಂಪೆರ್ಗ್ಗಱೆಗಳ್ ॥ 88

ಉರಿವರಿವಬಿಸಿಲ್ಸುಡೆಸೀ ।
ಕರಿವೋದುವಿವೆನಿಸಿತುಂಬಿಯುಂಕೋಗಿಲೆಯುಂ ॥
ಮರಗಳಲೆವಱೆಗಳೊಳ್ವೆಯ್ ।
ಗರೆದುವುಪಡುನೇಸಱುಪ್ಪಿನಂಪೇಸಗೆಯೊಳ್ ॥ 89

ಮ ॥ ಪಿಡಿದಿರ್ದ್ದಳ್ಲಕ್ಷ್ಮಿಯಿಂದೀಕೆಯುಮೆನಗೆಕರಂಕೂರ್ಪ್ಪಳೆಂಬೀವಿವೇಕಂ ।
ಗಿಡೆಜನ್ಮಾವಾಸಮಂಪೀಡಿಸಿನಳಿನಿಗೆನಿಷ್ಕಾರಣಂಕಾಯ್ದುನೋವಂ ॥
ಪಡೆದಂಚಂಡಪ್ರಭಂವಾರುಣಿಯನನುದಿನಂಸೇವಿಸುತ್ತಿರ್ದ್ದರಾಗ ।
ಕ್ಕೆಡೆಕೊಟ್ಟನ್ಮಾರ್ಗ್ಗದೊಳ್ವರ್ತ್ತಿಸುವಕುವಲಯದ್ರೋಹನೇಗೆಯ್ದುತೋಱಂ ॥ 90

ಪೃಥ್ವಿ ॥ ವಿಕಾರಮಿನಿಸಿಲ್ಲೆನಲ್ಕೆಱೆದುಬಾಹ್ಯಸಾಮಗ್ರಿಯಿಂ ।
ದಕಾರ್ಯ್ಯಪರನಾಗಿಯುಂಪರಮಯೋಗಿಯಿಪ್ಪಂದದಿಂ ॥
ದಕಂಪಿತಶರೀರನಿರ್ದ್ದುದುಜಲಾಶಯೋಪಾಂತದೊ ।
ಳ್ಬಕಂದರನಿಮೀಲಿತಾಂಬಕನಶೇಷದೋಷಾಶಯಂ ॥ 91

ಚ ॥ ಭುವನಜನಪ್ರಸನ್ನಕಮಲಾಕರನಿಂನಪರಾರ್ತ್ಥಜೀವನಂ ।
ತವುವರೆತೀಬ್ರಕಾಲವಶದಿಂದಮೆನೀರಸಮಾಯ್ತುನೀರಜಂ ॥
ಕುವಳಯಮುಷ್ಪ್ವಕೆಯ್ದುದುವಿಷಾದಮನಂಚೆಗೆಖೇದಮಾಯ್ತುಪೋ ।
ದುವುಪೋರ್ವಕ್ಕಿಗಳ್ವಿಕಳಮಾದುವುಮೀನಕುಳೀರಕೋಟಿಗಳ್ ॥ 92

ಮೃಗಕುಲಮಾಸೆಗೆಯ್ದುಮೃಗತೃಷ್ಣಿಕೆಯಂಜಲಮೆಂದುತೃಷ್ಣೆಯಿಂ ।
ಪಗಲಿರವಂನೆಗಂಪರಿದುಗಂಟಲುರಂಬರಮಾಱೆಪಂದೊವ ॥
ಲ್ತಿಗಳಿಗೆಬೀಳ್ಬಾಯ್ಗೆಕರುಸಂಬರೆನಾಲಗೆಗಿಳ್ತುನಟ್ಟದಿ ।
ಟ್ಟಿಗಳೊಡನಳ್ಳೆಮೊಯ್ಯನಡೆಗೆಟ್ಟುವುತೃಷ್ಣೆಯಿನಾರೊಪೇಯದರ್ ॥ 93

ಚ ॥ ದಿನಕರತೀವ್ರತಾಪಮುರಿಯಿಂಪೆರ್ಚಲಲ್ಕೆಶರೀರತಾಪದಿಂ ।
ವನರುಹಷಂಡಮಂತುರಿಹದಿಂದೊಳಪೊಕ್ಕುಕಡಂಗಿಕಿಳ್ತಿದೇಂ ॥
ಮುನಿಸಿನಳುರ್ಕೆಯಿಂಪಗೆಯನಂಟರೊಳಂಕಡುಕೆಯ್ದುತೋರ್ಪವೋಲ್ ।
ವನಗಜಮೊಟ್ಟಿಕೊಂಡುದುಮೃಣಾಳಿಕೆಯಂನಿಜಮೂರ್ಧಪಿಂಡದೊಳ್ ॥ 94

ಕಂ ॥ ತಪನಾತಪದಿಂಬೇಸ್ತಾ ।
ಕ್ಷಪಣೆಯನೊಳಕೊಂಡುಕೋಳ್ಮಗಂಬಳ್ಮಗಮಾ ॥
ತ್ಮಪುರೋಭಾಗದೊಳಿರ್ದ್ದೊಡ ।
ಮುಪಶಮಿಸಿದುದೊಳ್ಪನೀಗುವಮಾತಪಯೋಗಂ ॥ 95

ಉದಬಿಂದುಗೆತ್ತುಗಿರಿಸಾ ।
ನುದೇಶದೊಳ್ಕಾಯ್ದುಬಿದಿರಪೊಸಮುತ್ತಂನಮಂ ॥
ಗಿದಸೋಗೆವಿಂಡುಂಮಂಬು ।
ಗಿದುವುಂಡಿಗೆಪೇಯೆಕೆಂಡಮಂನುಂಗಿದವೋಲ್ ॥ 96

ಮ ॥ ರವಿಕಾಂತೋಪಳವಹ್ನಿಯಿಂದಡವಿಗಳ್ಭಸ್ಮಾವಶೇಷಂಗಳಾ ।
ದುವುರಲ್ಪೋದುವುಪಟ್ಟಿಗಳ್ನದನದೀದ್ರೋಣೀಜಲಂಕಾಸಿದಂ ॥
ಕೆಯ್ವುವೋಲ್ಬೆಂದುವುಮೂಷೆಯಿಟ್ಟತೆಜದಿಂಗ್ರಾವಸ್ಥಲಂಲೋಹಮಾ ।
ದುವುರೇಣುಸ್ಥಲಿಕಾ[illegible]ದ್ರವವುನಿದಾಘದಾಪ್ತಿಮೋದ್ರೇಕದೊಳ್ ॥ 97

ಬಹುತಾಪಕ್ಕೆಬಿಗುರ್ತ್ತುವಿಷ್ಣುಪಡೆದಂಮತ್ಸ್ಯಾವತಾರಕ್ಕೆನಂ ।
ತುಹಿನಾದ್ರೀಂದ್ರಮನೊತ್ತುಗೊಂಡುನಡೆವಂದೇವರ್ಕಳಾಗ್ನೇಯಮಂ ॥
ದುಹವಿರ್ಭಾಗಮನೊಲ್ಲದಿಂದುಕಳೆಯಂಕೊಳ್ವರ್ಮೃಡಂಪಾರ್ವತೀ ।
ಸ್ಪೃಹೆಯಂಬಿಟ್ಟುಮರುತ್ತರಂಗಿಣಿಯನೊಲ್ದಾಲಿಂಗನಂಮಾಡುವಂ ॥ 98

ವ ॥ ಅಂತತಿಪ್ರಬಳಮಾದನಿದಾಘಸಮಯದೊಳ್ ॥

ಕಂ ॥ ದಿನಮಂಕೆಲವಂದಶರಥ ।
ತನುಜರ್ದಶಪುರದೊಳಿರ್ದ್ದುಪೋಗಲೊಡಂನೊಂ ॥
ದನದಕ್ಕೆವಜ್ರಕರ್ಣ್ಣಂ ।
ವಿನೀತರುತ್ತಮರಗಲ್ಕೆಯಂಸೈರಿಪರೇ ॥ 99

ವ ॥ ಅಂತುಸೀತಾದೇವಿಸಮೇತಂರಾಮಲಕ್ಷ್ಮಣರ್ದಕ್ಷಿಣದಿಶಾಭಿಮುಖರಾಗಿಬಲ್ಲಡವಿ
ಯಂಬಟ್ಟೆವಿಡಿದುನಡೆವೆಡೆಯೊಳ್ ॥

ಕಂ ॥ ರಾಘವನೆಂನಂತೃಣದಿಂ ।
ಲಾಘವಮೆನೆಬಗೆದನೆಂಬವಮನದುಮ್ಮಳದಿಂ ॥
ದಾಘಮನೊಳಕೊಂಡಂತೆನಿ ।
ದಾಘದಮುಂಬಗಲಿತಳೆದುದಿಳೆಕಡುಗಾಯ್ಪಂ ॥ 100

ಇನಕುಲಸಾಮ್ರಾಜ್ಯಶ್ರೀ ।
ತನಗಲ್ಲದೆತಾಳಲರಿದೆಂದಂರಾಮಂತಂ ॥
ನನುಜಂಗೊಪ್ಪಿಸಿಬಂದೊಡೆ ।
ಕನಲ್ದವೋಲ್ಚಂಡಭಾನುಬಿಸುಪಂತಳೆದಂ ॥ 101

ಮ ॥ ಇಳೆಯಂತಾಳ್ದಿದಸತ್ವದಿಂದಮೆನಗಂಬಲ್ಲಾಳ್ಗಳೆಂಬೇವದಿಂ ।
ಬಲನಾರಾಯಣರಂನಿಸರ್ಗ್ಗಚಪಳಂದಾವಾಗ್ನಿಧೂಮಧ್ವಜಂ ॥
ಝಳಮಂಮೇಲಿಕೆಡಂಗಿಪೋಯ್ತುಮಿಳಿಕೆಯ್ದೀನಾನುಮಂಕೀಱಿಬಾ ।
ವಃಪಂತಾದುದುಜೀರ್ಣ್ಣಪರ್ಣ್ಣಪರುಷಪ್ರಧ್ವಾನದಿಂಮಾರುತಂ ॥ 102

ಚ ॥ ಕಡುವಿಸಿಲುರ್ಚ್ಚಿಕೋಮಲಲತಾತನುಬಂಬಲುಬಾಡೆನಾಡೆನೀ ।
ರಡಸಿಬಳಲ್ದುಬರ್ಪ್ಪಪದದೊಳ್ಜನಕಾತ್ಮಜೆಮುಂನೆಬಿಟ್ಟುಬಂ ॥
ದೊಡೆಬಿಡದುರ್ವ್ವರಾರಮಣಿಬೆಂನನೆಬಂದಪಳೆಂಬಶಂಕೆಯಂ ।
ಪಡೆದುರಘೂದ್ವಹಂಗೆಪಡೆದಳ್ಗಮನಶ್ರಮಖಿಂನಖೇದಮಂ ॥ 103

ವ ॥ ಅಂತೆಂತಾನುಮೆಯ್ದೆವಂದುಜ್ಜೇಣಿಯಪಡುವಣಪೇರ್ವ್ವಳಾವಂಕಳೆದುಪೋಗಿಕು
ರವಮೆಂಬಪೊಳಲನಿಕಟವಟವಿಟಪಿಚ್ಛಾಯೆಯೊಳ್ಸೀತೆಸೇದೆಗೆಟ್ಟಿರ್ಪ್ಪುದುಂಜಲಾ
ನ್ವೇಷಣನಿಮಿತ್ತಂಲಕ್ಷ್ಮಣಂಬರುತ್ತುಮಿರೆಯಿರೆ ॥

ಮ ॥ ಬನಮೊಂದಿರ್ದ್ದುದುಮುಂದೆಕಂತುವನದುರ್ಗ್ಗಾಕಾರದಿಂದಲ್ಲಿತ ।
ದ್ವನಲಕ್ಷ್ಮೀಮುಖದಂತೆನೀರಜವನಂಚೆಲ್ವಾಯ್ತುದಂಕಾಯ್ವಯೌ ॥
ವನದೃಪ್ತರ್ಕ್ಕಲರಿರ್ದ್ದರಲ್ಲಿಗೆದಳನ್ನೀಳಾತಸೀಚಂಕನ ।
ತ್ತನುತೋಯಾಹರಣಾರ್ತ್ಥಿಬಂಧನಭಯಂಸೌಮಿತ್ರಿಶತ್ರುಂಜಯಂ ॥ 104

ವ ॥ ಆಗಳಲ್ಲಿ ॥

ಕಂ ॥ ಪರಪುಷ್ಟದಂತೆಪುಗಲೆಂ ।
ಬರಮಾತಂಮಿಾಱಿಲಕ್ಷ್ಮಣಂಪೊಕ್ಕುಸರೋ ॥
ವರಮಂಮೊಗೆದಂಜಲಮಂ ।
ಸರೋಜವಿಸ್ತೀರ್ಣ್ಣಪರ್ಣ್ಣಪುಟಕಾಹಸ್ತಂ ॥ 105

ವ ॥ ಅಂತುನೀರಂಮೊಗೆದುಪೂಗೊಳದಿಂ ಪೊಱಮಡುವುದುಮಾಸಮಯದೊಳ್ಪಿಡಿಯು
ನೇಱಿಕಾಮನಕೈಪಿಡಿಯಂತೆಬರುತ್ತುಂಕಣ್ಬೊಲದೊಳ್ತನ್ನಂಕಂಡುಕಣ್ಬೇಟಂ
ಗೊಂಡುಕೂರಂಕುಶದಪೊಳಪಿನೊಡನೆಪಾಲೊಳ್ತೊಳೆದಕುಡುಮಿಂಚಿನಗೊಂಚಲಂ
ತೆಪೊಳೆದುಸೋಲದಿಂದೆಳಸಿಸುೞಿವಕಡೆಗಣ್ಣನೋಟದಿಂಮಾಟದಗಂಡವರಿಜೆಯೆಂದ
ಱಿದುಈವೇಷವನಿವಳ್ದೇಕೆತಾಳ್ದಿದಳೆಂದಱಿಯಲೆಂದವಸರಂಗೊಟ್ಟುರೆಮುಟ್ಟೆ
ವಂದು ॥

ಚ ॥ ಮನದೊಡನೆಕ್ಕೆಯಿಂಪರಿಯೆಕಣ್ಣಡೆನೋಡಿಮೃಗಾಕ್ಷಿಮಾರಿಜಾ ।
ಕ್ಷನಕಡುಗಾಡಿಯಂಪುರುಷವೇಷದರಾಜತನೂಜೆಕಂತುಮೋ ॥
ಹಸಶರಮುರ್ಚ್ಚೆಘರ್ಮ್ಮಜಲಕುಟ್ಮಲಮುಂಪುಳಕೋದ್ಗಮಂಗಳುಂ ।
ತನುಲತೆಯೊಳ್ಪೊದಳ್ದವೆತಾಳ್ದಿದಳುತ್ಕಳಿಕಾವಿಳಾಸಮಂ ॥ 106

ವ ॥ ಅಂತು ಕಂತುಶರಮುರ್ಚ್ಚೆಪರ್ಚ್ಚೆಶರಹಗ್ಗಬರ್ಪ್ಪಂತೆತ್ತವಾಹನದಿಂದಿೞಿದುಬಂದೀತ
ನಾದೇಶಪುರುಷನೆಂದಱಿದು ನಿಶ್ಚಲಿಸಿಬೀಡಿಂಗೆಬಿಜಯಂಗೆಯ್ಯಿಮೆಂದುಕಯ್ಯಂಪಿಡಿ
ದೊಡಗೊಂಡುಹಂಸತೂಳತಳ್ಪದೊಳ್ಕುಳ್ಳಿರಿಸಿತಾನುಮೊಡನೆಯೆಕುಳ್ಳಿರ್ದ್ದುನೀಮಾ
ರ್ಗ್ಗನಿಮಿತ್ತದಿಂದಿಲ್ಲಿಗೆಬಿಜಯಂಗೆಯ್ದಿರೆಂಬುದುಂಲಕ್ಷ್ಮಣದೇವನೆಂದನೆಂಮವೃ
ತ್ತಾಂತಮಂಬೞಿಕ್ಕೆತಿೞಿಯಪೇೞ್ದಪೆನೀಗಳಿಮ್ಮತ್ತಿಗೆನೀರಡಸಿಬಳಲ್ದಿರ್ದ್ದೊಡಿಮ್ಮ
ಣ್ಣನಬೆಸನದಿಂಜಳಾಶಯಮನಱಸಿ ಬಂದೆವದಱಿನಿದವಸರಮಲ್ತೆಂಬುದುಮಾಬೆಸ
ಕ್ಕಾನೆಸಾಲ್ವೆನೆಂದುತಣ್ಣಗಗದನೀರ್ವ್ವರಸುಕೆಲದೊಳಿರ್ದ್ದಕೆಳದಿಯರನಟ್ಟುವು
ದುಮಾಕೆಗಳವರಿರ್ದ್ದಲ್ಲಿಗೆಪೋಗಿಹಿಮಸಲಿಲದಿಂಶ್ರಮಮನಾಱಿಸಿಮುಂದಿಟ್ಟೊಡ
ಗೊಂಡುಬಂದುಮಜ್ಜನಭೋಜನಾದಿಸತ್ಕಾರಮಂಮೆಱೆವುದುಮಾಕನ್ನೆಯಜನನಿ
ಯುಪ್ಪಪೃಥ್ವೀಮತಿಮಹಾದೇವಿನಿಜಪರಿಜನಮಂಪೋಗಲ್ವೇೞ್ದುಕಟ್ಟೇಕಾಂತಮಂ
ಮಾಳ್ಪುದುಂಜನನಿಯಕಣ್ಣಱಿದುಕಂನೆತನ್ನಮುಂನೆತೊಟ್ಟಗಂಡವಸ್ತ್ರಮಂಕಳೆ
ದುಕಟಕಕಟಿಸೂತ್ರವಿಚಿತ್ರಾಭರಣಾದಿದಿವ್ಯವಸ್ತುಗಳಿಂದಲಂಕರಿಸಿ ॥

ಕಂ ॥ ರೂಪಪರಾವರ್ತ್ತನವಿ ।
ದ್ಯಾಪರಿಣತಿಯಿಂದಾದಮತನುರತಿಯವೊಲಾ ॥
ರೂಪವತಿಪುರುಷವೇಷಂ ।
ಪೋಪುದುಮುರ್ಚ್ಚಿಸಿದಕೈದುವಿರ್ಪ್ಪಂತಿರ್ದ್ದಳ್ ॥ 107

ಕ್ರಮವಿಕ್ಷೇಪದಿನಂಕೆಗ ।
ಸಮನಿಸಿದೈನ್ಯಂಲತಾಂಗಿಸೀತೆಗೆಚೆಲ್ವಿಂ ॥
ಸಮನಧಿಕವೆಂಬಕೌತುಕ ।
ಮಮರ್ದಿರೆನಡೆತಂದುಪಾರ್ಶ್ವದೊಳ್ಕುಳ್ಳಿರ್ದ್ದಳ್ ॥ 108

ವ ॥ ಅಂತುಸೀತೆಯಸಮೀಪದೊಳ್ಕುಳ್ಳಿರ್ಪ್ಪುದುಮಾಸಮಯದೊಳ್ ॥

ಉ ॥ ಆನಗೆಗಣ್ಗಳಾನಿಮಿರ್ದಪುರ್ವ್ವುಗಳಾನಳಿತೋಳ್ಗಳಾಸರೋ |
ಜಾನನವಾಮದಾಳಿಕುಳಕುಂತಳವಾಕಳಹಂಸಯಾನವಾ ॥
ಪೀನಕುಚಂಗಳಾಕ್ಷಣದೊಳೀಕ್ಷಣಮಂಸೆಱಗೆಯ್ಯೆಕೃಷ್ಣನಾ |
ಮಾನಿನಿಗಿತ್ತುತಂನಮನಮಂಮರವಾನಿಸನಂತೆತೋಱಿದಂ ॥ 109

ವ ॥ ಆಸಮಯದೊಳ್ದಾಶರಥಿ ಪುರುಷವೇಷಮೀಕಂನೆಗೇಕಾರಣವಾದುದೆನೆಷಗಜ್ಞನ
ಕಂಗೆತಜ್ಞನನಿಕ್ಕೈಗಳಂಮುಗಿದುಮೀಕೂರವಮೆಂಬಪುರವನಾಳ್ವಂವಾಲಖಿಲ್ಯನೆಂಬ
ನೆಂಮರಸನಾತನಮೇಲೆವಿಂಧ್ಯಾಟವಿಯೊಳಿರ್ಪ್ಪನವಂದ್ಯಕೋಪಂರೌದ್ರಭೂತಿಯೆಂ
ಬಂಮ್ಲೇಚ್ಛರಾಜನಸಂಖ್ಯಾತಕಿರಾತಬಲಂಬೆಸೆತ್ತಿಬಂದುನಾಡುಮಂಬೀಡುಮಂನಿಱಿ
ದುಸೂಱೆಗೊಂಡೆಂಮರಸನಂ ಸೆಱೆವಿಡಿದೊಯ್ದನದನವಂತಿವಲ್ಲಭಂಸಿಂಹೋದ
ರಂಕೇಳ್ದಂಮರಸನಪುತ್ರಕನೆಂದುತಾನಾದೇಶಮಂಸ್ವೀಕರಿಸಲ್ಬಗೆದೊಡೆಂಮರಸನ
ಮಂತ್ರಿಮುಖ್ಯಂವಾಲಖಿಲ್ಯನರಸಿಗರ್ಭಿಣಿಯೆಂದುಬಿಂನವಿಸುವುದುಮದನಾತನವ
ಧಾರಿಸಿಸಂತೋಷಂಬಟ್ಟುಗರ್ಭ್ಭದಕೂಸು ಗಂಡುಗೂಸಾದೊಡಾತನಾನೆಲಕ್ಕೊಡೆ
ಯನೆಂದುಪ್ರೊಡಂಬಡುವುದುಮಾನುಂಕೆಲವಾನುದಿವಸದಿನೀಕನ್ನಿಕೆಯಂ ಪಡೆಯೆ
ಮಂತ್ರಿಮುಖ್ಯನರಸಿಮಗನಂಬಡೆದಳೆಂದೊಸಗೆಯಂ ಮಾಡಿಕಲ್ಯಾಣಮಾಲನೆಂದು
ಪೆಸರನಿಟ್ಟುನಡಪುತ್ತಿರ್ಪ್ಪನಮೊಂದುದಿವಸಂದಿವ್ಯಜ್ಞಾನಿಗಳಂಕಂಡುವಾಲಖಿಲ್ಯಂಗೆ
ಬಂಧನಮೋಕ್ಷಮಾರಿಂದಕ್ಕುಮೆಂದುಬೆಸಗೊಳ್ವುದುಮವರಿಂತೆಂದರ್ ॥

ಚ ॥ ಅಳವಡೆಕೊಂಡಗಂಡವರಿಜಂಬಗೆಗೊಂಡಿರನೋಡಿನೋಡಿದಾ |
ಗಳೆವಧುವೆಂದುನಿಶ್ಚಯಿಸಿಕೈವಿಡಿದಾತನೆನಿಂಮಭೇದಮಂ ॥
ಕಳೆದುನಿರಾಕುಲಂಬಿಡಿಸುಗುಂಸೆಱೆಯಂಪೆಱತೇನೊಕಾಣ್ಬಿರಾ |
ಬಳಯುತನಂಪುರೋಪವನಷಂಡಸಮೀಪಸರೋಜಷಂಡದೊಳ್ ॥ 110

ವ ॥ ಎಂದಱಿಪುವುದುಮಂದಿಂದಿತ್ತಲೀಸರೋವರಕ್ಕೆ ಕಾಪಂಪೇಳ್ದಲ್ಲಿಯೆಬೀಡಾಗಿದ್ದೆ
ವೆಂಮಪುಣ್ಯೋದಯದಿಂನೀವುಮಿಲ್ಲಿಗೆಬಿಜಯಂಗೆಯ್ದಿರೆಂದುಶೋಕದಿಂಗದ್ಗದಕಂಠೆ
ಕಂಣನೀರಂಸುರಿಯೆಸೀತೆಸಂತೈಸೆಲಕ್ಷ್ಮಣಂಜಾನಕಿಗೆಕೈಗಳಂಮುಗಿದು ॥

ಕಂ ॥ ಈಕೆಯತಾಯ್ಗುಪಶಮಿಸುಗೆ |
ಶೋಕಂರಾಘವನಕಣೆಗೆಮಣಿಗುಂರಣದೊಳ್ ॥
ಲೋಕತ್ರಯಮೆನೆಶಬರಪ |
ತಾಕಿನಿವೆಱತೆಗೆಯದೆಡಱಿಬಿಲ್ದೆಗೆದಪುದೇ ॥ 111

ಕಂ ॥ ಅಂನೆವರಮೀತನೊಡರಿ ।
ಮುಂನಿನತೆಱದಿಂದಮಿರ್ಕ್ಕೆಪೇಡರಪಡೆಯಂ ॥
ಬೆಂನಟ್ಟಿಬಿಡಿಸಿಸೆಱೆಯಂ ।
ಕಂನೆಯನಾಂಮದುವೆನಿಲ್ವೆನೆಂದನುಪೇಂದ್ರಂ ॥ 112

ವ ॥ ಎಂದುನುಡಿದವರನೊಡಂಬಡಿಸಿನಡುವಿರುಳೆರ್ದ್ದುಪೋಗಿಮೇಖಲಾತರಂಗಿಣಿಯನು
ತ್ತರಿಸಿತರದಿನೆಡೆಯೆಡೆಯನಾಡುಗಳಂಕಳೆದುಪೋಗೆಪೋಗೆ ॥

ಕಂ ॥ ಸರಳಲತಾಲಾಸ್ಯನಟಂ ।
ಹರಿಣೀರೋಮಂಥಬಂಧುರಂಲವಲೀಮ ॥
ರ್ಮ್ಮರಮುಖರಂಕಲಕರಲೀ ।
ಕರೀತಳಮೆರ್ಗಿದತ್ತರಣ್ಯಸಮೀರಂ ॥ 113

ತಾಂಗಿದುದುಗಾಳಿಯಂದೆಸೆ ।
ಯಂಗವಸಣಿಸಿದುದುಮೋಗೆನೆಗೆದಾಗಸಮಂ ॥
ನುಂಗಿದುದೆನೆಕಳ್ತಲಿಸಿಕ ।
ಜಂಗಿದಬಲ್ಲಡವಿಕಣ್ಗೆವಡೆದುದಗುರ್ವ್ವಂ ॥ 114

ವ ॥ ಅಂತಗುರ್ವ್ವವೆತ್ತವಿಪಿನಮಂಪೊಕ್ಕುಪೋಪಾಗಳ್ ॥

ಉ ॥ ತೊಂಡಿನೊಳಂಮಪೇರಡವಿಯಂಪುಗುತಂದಪರೆಂದುಲುಬ್ಧಕ ।
ತ್ತಂಡದೆಸುತ್ತಿಮುತ್ತಿಗೊಳೆಗೊತ್ತಿದನೇಧನುವಂಸರಲ್ಗಳಂ ॥
ಕೊಂಡನೆದಿವ್ಯಬಾಣಧಿಯಿನಸ್ಖಲಿತಂನಸುನಕ್ಕುತಂನಕೋ ।
ದಂಡಕೃತಾಂತದಂಡದೊಳೆವೋದಿದನೋಡಿಸಿದಂಜನಾರ್ದ್ದನಂ ॥ 115

ವ ॥ ಅಂತುತಂತಂಮಕಯ್ಯಬಿಲ್ಲುಗಳಂಬೀಳೆಪೊಯ್ಯಬೇಡವಡೆಪಗಡುಗೊಂಡೋಡಿ
ಪೋಗಿತಂಮಾಳ್ದಂಗವರಳವಿಗಳೆದಳವನಱಿಯೆಪೇಳ್ವುದುಮಾತನತಿಪ್ರಬಳಕಿರಾತ
ಬಲಸಮೇತಂಮೇಲೆತ್ತಿಬರ್ಪ್ಪುದುಮದಂಕಂಡುಕಡುಮುಳಿದುಸೌಮಿತ್ರಿಲಯಸ
ಮಯದಕಾಳರಾತ್ರಿಯಂತೆಸಾಗರಾವರ್ತ್ತಮಂಜೇವೊಡೆಯೆಸಂವರ್ತ್ತಸಾಗರಾವ
ರ್ತ್ತಗಂಭೀರಘೋಷದಂತೆ ಚಾಪಟಂಕಾರಘೋಷಮೊದವೆಕೇಳ್ದುರೌದ್ರಭೂತಿಸಾ
ಮಾನ್ಯಪುರುಷರಲ್ಲಿವರ್ಕ್ಕಾರಣಪುರುಷರೆಂದುಭಯಚಕಿತಚಿತ್ತನಾಗಿ ॥

ಕಂ ॥ ಆಗ್ರಹಮೊಪ್ಪದಿದೆನಗೆನ ।
ಮಗ್ರರೊಳನಿವಾರ್ಯ್ಯವೀರ್ಯ್ಯರಚಲಿತಧೈರ್ಯ್ಯ ॥
ರ್ವ್ವಿಗ್ರಹಮನುಳಿವೆನಿವರೊಳ ।
ನುಗ್ರಹಮಂಪಡೆವೆನೆಂದುರಥದಿಂದಿಳಿದಂ ॥ 116

ವ ॥ ಅಂತೞವೞಿದುರಥದಿಂದಿೞಿದುವೇಗಂಬಂದು ಬಲಾಚ್ಯುತರಮುಂದೆನಿಂದುಕ್ಕೈಗಳಂ ಮುಗಿದು ಮುಂನಮೆಂನಱಿಯುಮೆಯಿಂದಿಂನೆವರಮಂನೆಯುಮನಾಚರಿಸಿದೆನಿಂನಿಂ ಮಱಸಿದಂದದೊಳೆನೆಗಳ್ವೆಂದುಸರ್ವ್ವಾಂಗಪ್ರಣತನಾಗಿರ್ಪ್ಪುದುಂಲಕ್ಷ್ಮೀಕುಮಾರನಂಜದಿರೆಂದಭಯವಚನದಿಂದವನಮನದಭಯಮಂಕಳೆದುಬೞಿಯಂನೀಂಸೆಱೆವಿಡಿದಿರ್ದ್ದವಾಲಖಿಲ್ಯನಂತಡೆಯದೊಡಗೊಂಡುಬಾರೆಂದುವೇಳ್ವುದುಂ ಮಹಾಪ್ರಸಾದಮೆಂದಾಕ್ಷಣದೊಳ್ಪೋಗಿತರ್ಪ್ಪುದುಮಾತನತಿತ್ವರಿತಗತಿಯಿಂಬಂದು ॥

ಮ ॥ ಬಲನಾರಾಯಣದೇಶದೀಪ್ತಿತನುವಂತಕ್ಕೆರ್ಸೆಪಾದಾನತಂ ।
ವಲಕಾಲಂಸೆಱೆವೋಗಿವೇಡರೊಡನೊಂದಾಗಿರ್ದ್ದತದ್ದೋಷಮಂ ॥
ಕಿಲತಾಕ್ಷಾಳನತತ್ಪರಂಸುರಸರಿತ್ಕಲ್ಲೋಲಮಂಯಾಮುನಾ ।
ಜಲಮಂಪೊಕ್ಕಘಮರ್ಷಣಂಮುಳುಗಿದಂತಿರ್ದ್ದಂಪುರೋಭಾಗದೊಳ್ ॥ 117

ವ ॥ ಅಂತುವಿನತನಾಗಿರಾಮಪ್ರೇಮವಚನಾಮೃತವರ್ಷದಿಂಹರ್ಷಮಂತಾಳ್ದಿಮುಕುಳಿತಾಂಜಲಿಪುಟಂಮುಂದೆನಿಂದಿಂತೆಂದಂ ॥

ಕಂ ॥ ಅಪರಿಮಿತಸೈನಿಕಂಸಿಂ ।
ಹಪರಾಕ್ರಮನೆತ್ತಿಬಂದುಸಿಂಹೋದರನೆಂ ॥
ನಪರಾಭವಮಂಪಿಂಗಿಸ ।
ದೆಪಿಂಗಿದಂರೌದ್ರಭೂತಿಗಿದಿರಾಂಪವರಾರ್ ॥ 118

ದ್ಯುಮಣಿಗೆಕತ್ತಲೆಶರಭ ।
ಕ್ಕೆಮೃಗೇಂದ್ರಂಸೆಡೆವಮಾಳ್ಕೆಯಿಂಸೆಡೆದನಿವಂ ॥
ನಿಮಗೆಸಮರಕ್ಕೆಮಿಕ್ಕರ ।
ಸುಮಕ್ಕಳಂರೌದ್ರಭೂತಿಲೆಕ್ಕಂಗೊಳ್ಳಂ ॥ 119

ಜ್ಯಾತಾಡನಟಂಕಾರದೆ ।
ಭೀತಿಯನೀತಂಗೆಪಡೆದುಪುರ್ವ್ವಿನಜರ್ವ್ವಿಂ ॥
ಪೋತೆಗೆವರನೀವಲ್ಲದ ।
ಱೀತನಕಯ್ಯಂಬಜವನಬಾಯಿಂದೆಂನಂ ॥ 120

ಶಾ ॥ ನಿಂಮಿಂದಾದುದುಬಂಧಮೋಕ್ಷಮೆನಗೀಗಳ್ವೃತ್ತಿಯೊಳ್ಜ್ಞಾತಿಯೊ ।
ಳ್ನಂಮಿಂನಿಂದೆನಪಾರದುಃಖಭರಮಂನಿಂಮಿಂದಮಾಂನೀಗಿದೆಂ ॥
ನಿಂಮಂಕಂಡುಕೃತಾರ್ತ್ಥನಾದೆನಿಳೆಯೊಳ್ಮಂನಾದರಿಂನಪ್ಪವ ।
ರ್ನ್ನಿಂಮಂನರ್ಪ್ಪೆಜರಾರುದಾತ್ತಚರಿತರ್ದ್ದುರ್ವ್ವಾರಬಾಹಾಬಲರ್ ॥ 121

ವ ॥ ಎಂದುಬಿಂನವಿಸಿನೀಮೆಂನಪುರಾಕೃತಪುಣ್ಯಮೆರೂಪುಗೊಂಡುಬರ್ಪಂತೆಬಂದಿರ್ದೆನಿ
ಮಿತ್ತಮೆನಗಿನಿವಿರಿದುಪಕಾರಮನೊಡರ್ಚಿದಿರೆಂಬುದುಂಲಕ್ಷ್ಮಣನದೆಲ್ಲಮಂನಿಂನ
ಪೊಳಲ್ಗೆವೋಗಲೊಡಂನೀನೆತಿಳಿದಪ್ಪೆಯೆಂದುರೌದ್ರಭೂತಿಯಂನೋಡಿವಾಲಖಿಲ್ಯನಂ
ಮುಂದಿಟ್ಟುಪೊಯ್ದುಪೊಳಲಂಪುಗಿಸಿನೀನಿತಂಪೇಳ್ದುದಂಗೆಯ್ದುಸುಖಮಿರಿಲ್ಲದೊ
ಡೆಕಡುಮುಳಿವೆನೆಂದುನಿಯಮಿಸಿಕಳಿಪುವುದುಂ ರೌದ್ರಭೂತಿಮಹಾವಿಭೂತಿಯಿಂ
ಪೊಳಲಂಪುಗಿಸೆವಾಲಖಿಲ್ಯಂರಾಮಲಕ್ಷ್ಮಣರಸಾಹಸಮಂಸನಾಭಿಜನಪರಿಜನಪುರ
ಜನಕ್ಕೆಸಹಸ್ರಮುಖದಿಂಸ್ತುತಿಯಿಸುತ್ತುಂಶುಭಮುಹೂರ್ತದೊಳ್ಲಕ್ಷ್ಮಣಂಕು
ಮಾರಂಗೆನಿಜಕಂನೆಯೊಳ್ಮಹೋತ್ಸಾಹದಿಂವಿವಾಹಮನೊಡರ್ಚೆಸುಖದಿನರಸುಗೆ
ಯ್ಯುತ್ತಿರ್ದ್ದನಂನೆಗಮಿತ್ತರಾಮಲಕ್ಷ್ಮಣರ್ದ್ದಕ್ಷಿಣಾಭಿಮುಖರಾಗಿವಿಪಿನದೊಳಗ
ನೆನಡೆಯೆನಡೆಯೆ ॥

ಮ ॥ ಭ್ರಮಿತಾಷ್ಟಾಪದಮುಗ್ರಖಡ್ಗಮೃಗಸಂಘಂನೆಂಜರದ್ದಂದಶೂ ।
ಕಮುಖಶ್ವಾಸವಿಷಾಗ್ನಿದಗ್ಧವಿಪಿನಂಮತ್ತೇಭವಿಕ್ರೀಡಿತಂ ॥
ತಮದೊಡ್ಡೆಂಬಿನೆಗಂಕಟಂಗಿನಭಮಂನುಂಗಿತ್ತುಪಾಪರ್ದ್ಧಿಸಂ ।
ಭ್ರಮಕೋಲಾಹಲಲುಬ್ಧಕಂಕಲುಷಿತಾಂತಸ್ಸಿಂಧುವಿಂಧ್ಯಾಚಲಂ ॥ 122

ಮಾಸ್ರ॥ನೆಲನಿಲ್ಲಿಂದಿತ್ತಲಿಲ್ಲೆಂಬಿನಮಿನಿತೆದಿಶಾಘೋಟಮೆಂಬಂನೆಗಂಕ ।
ತ್ತಲೆಚಂದ್ರಾದಿತ್ಯತೇಜಕ್ಕೆದಿರದಿದಿರನೊಡ್ಡಿರ್ದ್ದುದೆಂಬಂನೆಗಂಕ ॥
ತ್ತಲಿಸುತ್ತಿರ್ದ್ದತ್ತುಕಾಡಾನೆಯಕಡುಪುಗಳಿಂಸಿಂಹಸಂಘಾತದಿಂಪೇ ।
ರ್ವ್ವಲಿವಿಂಡಿಂಕಣ್ಗೆಗುರ್ವ್ವಂಪಡೆದುಕುಲನಗಸ್ಪರ್ದ್ಧಿವಿಂಧ್ಯಾಚಲೇಂದ್ರಂ ॥ 123

ವ ॥ ಆನಗೋಪತ್ಯಕದೊಳ್ ॥

ಕಂ ॥ ಮಲಯರುಹಗಂಧಿಮೃಗಮದ ।
ತಿಲಕಿತಮಾಳಪ್ರವಾಳಕುಂತಲೆಪುಳಿನ ॥
ಸ್ಥಳವಿಪುಳಜಘನೆಮದಗಜ ।
ವಿಳಾಸವತಿವನಲತಾಂಗಿಕಣ್ಗೆಸೆದಿರ್ದ್ದಳ್ ॥ 124

ವ ॥ ಆಗಳಾವಿಂಧ್ಯನಗಮಂದಾಂಟಿ ಪೋಗಿತಾರೆಯೆಂಬತೊಱೆಯಂಪಾಯ್ದು ರುಣೆಯೆಂಬ
ಗ್ರಹಾರವಂಪೊಕ್ಕುದೊಂದುಗೃಹಮಂಪುಗುವುದುಮಾಗಳಾಗೃಹದವಿಪ್ರವಧು ॥

ಕಂ ॥ ಆದೇಯರೂಪಮಂಕಂ ।
ಡಾದರಿಸಿದಳೇಖಲಿಕ್ಕಿದಳ್ಸೀತೆಗೇ ॥
ತೋದಕದಿಂಗಮನಶ್ರಮ ।
ಖೇದಮನಾಱಿಸಿದಳೇನವಳ್ಶುಭಮತಿಯೋ ॥ 125

ವ ॥ ಅಂನೆಗಮಾಕೆಯಭರ್ತಾರಂನಿಜಮಂದಿರಕ್ಕೆ ಬಂದವರಂಕಂಡಿವರನೇಕಿಲ್ಲಿಪುಗಲಿ
ತ್ತೆಯೆಂದರ್ಘ್ಯಪಾದ್ಯಮನೀಯದೆಪಲಾಶಕಾಂಡಕುಶಕುಸುಮಹಸ್ತನಪ್ರಶಸ್ತಂಕೆ
ಡೆನುಡಿಯೆ ॥

ಚ ॥ ಕಪಿಲನಕೈಪೆಮಾತುಕಿವಿಗೆಯ್ತರೆಜಾನಕಿಪೋಗಿಬಿಕ್ಷೆತಂ ।
ವಿಪಿನದೊಳಿರ್ಪ್ಪದೀಗೃಹದೊಳಿರ್ಪ್ಪದಱಿಂದೆನೆಕೇಳ್ದು ಲಕ್ಷ್ಮಣಂ ॥
ಕುಪಿತಮನಂಕಟಾಕ್ಷಿಸವುದುಂದ್ವಿಜನೀತನವಧ್ಯನಲ್ತೆ ಸೈ ।
ರಿಪುದನುಜಾತನೀಂಮುಳಿಯಲಕ್ಕುಮೆ ದುರ್ಬ್ಬಲರೇನನೆಂದೊಡಂ ॥ 126

ವ ॥ ಎಂದುರಘುವೀರನಲ್ಲಿಂ ತಳರ್ದುಪೂಜಿಪ್ರೊಳಲಂಪೆಱಗಿಕ್ಕಿ ಪೇರ್ವ್ವಟ್ಟೆವಿಡಿದುನಡೆ
ಯುತ್ತುಂ ॥

ಉ ॥ ಮೂಲಸಟಾಳಿಯಿಂದಮುರಗಾಲಯಮಂಬಹುಶಾಖೆಯಿಂದಮಿಂ ।
ದ್ರಾಲಯಮಂಪಳಂಚಿಹಿಮಮಂಸೆಱಗೆಯ್ದುತಮಕ್ಕೆ ಕೊಂಬುಗೊ ।
ಟ್ಟಾಲಮನಗ್ರಪಲ್ಲವಕರಾಗ್ರನಿರುದ್ಧ ಮರುತ್ತರಂಗಿಣೀ ।
ಕೂಲಮನೆಯ್ದಿ ದರ್ವ್ವಿಜಿತಚಂಡಮರೀಚಿಮರೀಚಿಜಾಲಮಂ ॥ 127

ವ ॥ ಅಂತೆಯ್ದಿ ವರ್ಪ್ಪದುಮಾವಟನಿವಾಸಿಯಪ್ಪಿಭ ಕರ್ಣ್ಣದೇವನವರಪುಣ್ಯಪ್ರಭಾವ
ಕ್ಕೆಬೆರ್ಚ್ಚಿಬೆಗಡುಗೊಂಡೋಡಿಪೋಗಿ ವಿಂಧ್ಯಾಟವಿಯೊಳಿರ್ಪ್ಪಯಕ್ಷರಾಜಂಕ್ರೀಡಾ
ಪೂತನೆಂಬಂಗೆಚಂಡಕೋದಂಡಧರರಿರ್ವ್ವರೆಂನಾವಾಸಮಂಕೈಕೊಂಡೊಡವರದೇ
ಹದೀಪ್ತಿಗಳಲ್ಲಿನಿಲಲ್ಕೆಬಳ್ಕುತ್ತುಂನಿಮಗಱಿಪಲ್ಬಂದೆನೆಂಬುದುಮಾತನವಧಿಯಿನವ
ರೀಕಾಲದಬಲದೇವವಾಸುದೇವರೆಂಬುದುಮವನವರಬಂದತೆಱನುಮನಱಿದವರ್ಗ್ಗೆ
ಸತ್ಕಾರಮನೊಡರ್ಚ್ಚಲೆಂದು ॥

ಕಂ ॥ ಕ್ರೀಡಾಪೂತಂಪುರಮಂ ।
ಮಾಡಿದನಳಕಾಪುರಕ್ಕಮಮರಾವತಿಗಂ ॥
ನಾಡೆಯುಮಧಿಕಮೆನಲ್ಮಣಿ ।
ಮಾಡಪ್ರಾಕಾರಗೋಪುರಾಟ್ಟಾಳಕಮಂ ॥ 128

ಪುರದಬಹಿಃಪುರದಂತಃ ।
ಪುರದರಮನೆಯವನಿಪತಿಯಮಾಡದಹಯಮಂ ॥
ದಿರದಾನೆಸಾಲೆಯೊಂದಂ ।
ಬರೆಯಲ್ಕಂಡರಿಸಲರಿದುಮಾಂಡವ್ಯಂಗಂ ॥ 129

ಕಂ ॥ ಮಳೆಗಾಲಂಬರೆಯುಂಪೇ ।
ರ್ವ್ವಗಳುವಿನೊಳಂಯಕ್ಷವಿಕ್ರಿಯಾಜನಿತಮದೇಂ ॥
ಪೊಳಲಾದುದೊರಘುವೀರನ ।
ಪಳುಗೆಳೆದಪೊಗಳ್ತೆವೆತ್ತಪುಣ್ಯೋದಯದಿಂ ॥ 130

ವ ॥ ಅಂತಪೂರ್ವ್ವಮೆನೆಪುರಮಂವಿಗುರ್ವ್ವಿಸಿ ॥

ಮಂ ॥ ಕಿಂಕುರ್ವ್ವಾಣಪ್ರವಣರರೆಬರ್ಬ್ಬರ್ಪ್ಪನಂಕಾದುತಂನಂ ।
ಬಿಂಕಂಪೊಂಕಂಗಿಡಿಸೆನನೆವಿಲ್ಲಾತನಂತೊಟ್ಟುದಿವ್ಯಾ ॥
ಲಂಕಾರಂಗಳ್ನಯನಸುಖಮಂಬೀಱೆಬಂದರ್ಘ್ಯಮಂಯು ।
ಕ್ಷಂಕೊಟ್ಟಂರಾಘವನಚರಣಕ್ಕಿಂನರಾರ್ದ್ಧಸ್ಯಜನ್ಮರ ॥ 131

ವ ॥ ಅಂತರ್ಘ್ಯಪಾದ್ಯಂಗಳಂಕೊಟ್ಟುಕೈಗಳಂಮುಗಿದು ॥

ಶಾ ॥ ಆಸಂನಂಮಳೆಗಾಲಮೆಂನಪುರದೊಳ್ನೀಮಂನೆಗಂದಿಗ್ಜಯ ।
ವ್ಯಾಸಂಗಾರ್ತ್ಥಿಗಳಾಗದಿರ್ದ್ದುಚರಿತಾರ್ತ್ಥಂಮಾಳ್ಪುದೆಂನಂಪರಾ ॥
ರ್ತ್ಥಾಸೀನಂನಿಜವೃತ್ತಮೆಂದುನುಡಿದೆಂತಾನುಂಪ್ರಿಯಪ್ರಾರ್ತ್ಥನಾ ।
ವ್ಯಾಸಂಗಾರ್ತ್ಥಿನರೇಂದ್ರನಂನಿಲಿಸಿದಂಯಕ್ಷಂಪರಾರ್ತ್ಥಪ್ರಿಯಂ ॥ 132

ವ ॥ ಅಂತೆಂತಾನುಮೊಲಿಸಿತಂನವಿಗುರ್ವ್ವಿಸಿದಪುರಕ್ಕೊಯ್ದು ॥

ಕಂ ॥ ಅರಮನೆಯೊಳ್ಬಹುವಿಧಪರಿ ।
ಕರಪೂರ್ಣ್ಣದೊಳಿರಿಸಿಮಾಡಿದಂಯಕ್ಷಂದಿ ॥
ಕ್ಕರಿಕರ್ಣ್ಣಕುಹರಮಂಪಟು ।
ಹರವೆಂತೆಳ್ಪ್ಪಯ್ಯರಘುಸುತಂಗಭಿಷವಮಂ ॥ 133

ವ ॥ ಅಂತುರಾಜ್ಯಾಭಿಷೇಕಂಗೆಯ್ದು ॥

ಕಂ ॥ ಪೇಡದೆಬೇಳ್ಪನಿತುಮನೆಡೆ ।
ಮಾಡದೆಪದನಱಿದುತೀರ್ಚ್ಚಿಪರಿಯುಷ್ಟ್ಯಯುಲಂ ॥
ಪೋಡದೆರಾಮಂಗೊಳ್ಪಂ ।
ಮಾಡಿದನುಚಿತೋಪಚಾರದಕ್ಷಂಯಕ್ಷಂ ॥ 134

ವ ॥ ಮತ್ತಿತ್ತಲಾಕಪಿಲನೆಂದಿನಂದದಿನಾವಿಪಿನದೊಳ್ತೊಳಲುತ್ತುಂ ॥

ಕಂ ॥ ಎನಗಾಡುಂಬೊಲಸೀತಾ ।
ನನವಿದಱೊಳಗಿಂನೆವರೆಗಮಾಂತಾಱೆಂಲೋ ॥
ಚನಪೃದಮಹಾಪುರವೊಂ ।
ದನಿದಂಕಂಡೆಂದಲೆಂದುವಿಸ್ಮಿತನಾದಂ ॥ 135

ವ ॥ ಆಸಮಯದೊಳ್ಸಮಯಾಭಿಧಾನಯಕ್ಷಿ ಪ್ರತ್ಯಕ್ಷಮಾಗಿಪುರೋಭಾಗಕ್ಕೆ ಬರೆಕಪಿಲನಬ್ಬಾಪೇೞೀಪುರಕ್ಕೆಪೆಸರಾವುದಿದಕ್ಕಧಿಪತಿಗಳಾರೆಂಬುದುಂ ॥

ಕಂ ॥ ರಾಮಪುರವೆಂಬುದಿದುರಘು ।
ರಾಮಂಪುರದೊಡೆಯನಖಿಳವಸುಧೆಗೆಕಲ್ಪಾ ॥
ರಾಮಮೆನೆಕೊಟ್ಟಸಂಪದು ।
ಧಾಮರಸೀಂಪೋಗಿಬೇಡಿಕೊಳ್ಳಸವರವಂ ॥ 136

ವ ॥ ಎನೆಕಪಿಲಂವಿಷಣ್ಣನಪ್ಪುದಱಿಂದೇವತೆಗೆಕೈಗಳಂಮುಗಿದು ॥

ಚ ॥ ಎನಗವನೀಶದರ್ಶನದುಪಾಯಮನಂಬಿಕೆಪೇೞ್ವೆನ್ನೆಂಬುದುಂ ।
ಜಿನಗೃಹಮಿರ್ದ್ದಪೀಪುರದಪೂರ್ವ್ವವಿಭಾಗದೊಳಿರ್ದ್ದಪರಲ್ಲಿಸ ॥
ನ್ಮುನಿಪರುಪಾಸಕಕ್ರಮದಿನಲ್ಲಿದೃಢವ್ರತನಾಗಿಪೋದೊಡಾ ।
ಮುನಿವರನಾಜ್ಞೆಗಡ್ಡಯಿಸೆರಲ್ಲಿಯಕಾಪಿನಯಕ್ಷರಾಕ್ಷಸರ್ ॥ 137

ವ ॥ ಎಂಬುದುಮಾಯಕ್ಷಿಪೇೞ್ದಂದದೊಳ್ಬಸದಿಗೆಬಂದು ಜಿನಮುನಿಗಳಂ ಕಂಡುಧರ್ಮ್ಮಮಂಪಸಗೊಂಡುಲಘುಕರ್ಮ್ಮಿಯಪ್ಪುದಱಿಂದರ್ಶನಶುದ್ಧನುಮಣುವ್ರತಧಾರಿಯುಮಾಗಿಯುಷ್ಪಿನಿವೇದಕನೊಡನೆಪೋಗಿಗಂಧೋದಕಮುಮಂಯ್ದುಕೊಟ್ಟುರಘುವೀರಂಗಿಚ್ಛಾಕಾರಪೂರ್ವ್ವಕಂಸರ್ವ್ವಾಂಗಪ್ರಣತನಾಗಿಕಾಣ್ಬುದುಮಾತಂವ್ರತಕ್ಕೆಬಂದುದಕ್ಕೆಮೆಚ್ಚಿಮೆಚ್ಚುಗೊಟ್ಟುಕಳಿಪಿ ॥

ಚ ॥ ಎಱಗದೆಬಾತ್ತ್ರಗೆಟ್ಟೆಡೆಗೆಪೋಮಳೆಯಂಧರೆಗಾವಕಾಲಮುಂ ।
ಕಱೆದುಪರಾರ್ತ್ಥವೃತ್ತಿಯೊಳ್ಪಾವನಮಾಗಿರೆತಂನಜೀವನಂ ॥
ತೊಱೆದುಕಳಂಕಪಂಕಿಲತೆಯಂಮಳೆಗಾಲದಸೊಂಪನೇೞಿಸಲ್ ।
ನೆಱೆದನುಬಂಧಮಂಮೆಱೆದನಕ್ಕರಿಲಾಂಗಲಪಾಣಿಸೀತೆಯೊಳ್ ॥ 138

ವ ॥ ಅಂತುರಾಮ ಲಕ್ಷ್ಮಣರಾಯಕ್ಷನವಿನಯೋಪಚಾರದಿಂಸಮಾಹಿತ ಮನಸ್ಕರಾಗಲ್ಲಿರ್ಪ್ಪುದುಂ ॥

ಚ ॥ ಮುಗುಳ್ತೊಡೆಂಬಗೆಂಟೊಡೆಯೆಮೊಲ್ಲೆಗೆಪೆಳ್ಸ್ವೆಳ್ಪುಟ್ಟೆಪುಟ್ಟೆಕೇ ।
ದಗೆಗೆಳಸೊಕ್ಕುಚೇತರಿಸೆಬಾದಗೆಗೊಬ್ಬರಮಾಗೆರಾಗಮಂ ॥
ಚಗೆಗೆಕಿಱುಮೀಲಿಕಣ್ದೆಱೆಯೆಸೋಗೆಗೆತಣ್ಣಸವುಟ್ಟೆದಟ್ಟಿಪೇ ।
ಸಗೆಯಮಬೆಸಿಲ್ಗೆತೀಡಿದುದುತಂಣನೆಪಂಣನೆಪಟ್ಟಿಮಾನಿಳಂ ॥ 139

ಕಂ ॥ ಪರಿತಾಪಂಕಿಡೆಪುಳಕಾಂ ।
ಕುರಮೊದವೆಲತಾಂಗದೊಳ್ಕದೀಲೋಚನೆಗು ॥
ವ್ಯರೆಗಾನಂದಾಶ್ರುಗಳು ।
ಬ್ಬರಮಾದುವುಪಟ್ಟಿಮಾನಿಲಂಸೋಂಕಲೊಡಂ ॥ 140

ಪಸುರ್ಗೆವಿಲಸಾದಸೀಪದ ।
ಕುಸುಮಮುಮಂದೆಸೆಗೆಕಂಪನೆತ್ತುವಲೋಧ್ರ ॥
ಪ್ರಸವಮುಮಂಸೂಳ್ಕೂಸೆಳೊಳ್ ।
ಪಸೆವಟ್ಟಂದದೊಳೆಮುಸುಱಿಮುತ್ತಿದುವಳಿಗಳ್ ॥ 141

ವ ॥ ಅಂತುಘನಸಮಯಪ್ರವೇಶಮಖಿಲಜನಮನೋವಿಕಾಸಕ್ಕವಕಾಶಮಾಗೆ ॥

ಮ॥ಸ್ರ॥ ಅಪರಾಂಭೋರಾಶಿವೇಳಾವನಮಮರಪುರೋದ್ಯಾನಮುಮಂನೋಡಲೆಳ್ತಂ ।
ದಪುದೋನೀಳಾಚಲಂಗಳ್ಕುಲಪರಿಭವಮಂಪಿಂಗಿಸಲ್ಕಾಕಲೋಕಾ ॥
ಧಿಪನೊಳ್ಮೇಲೆತ್ತಿಕಾದಲ್ಕೆರದಾಮ್ರೊಬಡಬಾಭೀತಿಯಿಂಮೇಣ್ಸರಣ್ಪೊ ।
ಕ್ಕಪುದೋನೀರಾಕರಂವ್ಯೋಮಮನನೆನೆಗೆದತ್ತಂದುನೀಲಾಭ್ರಜಾಳಂ ॥ 142

ಕಂ ॥ ಪಡುವಣಕಡಲಿಂದೊಗೆದುದು ।
ಬಡಬಾಗ್ನಿಯಪೊಗೆಪೊದಳ್ದಕಿಡಿವೆರಸೆನಲೇಂ ॥
ಕುಡುಮಿಂಚುವೆರಸುಗಗನಮ ।
ನಡರ್ದ[illegible]ನೀರಂಧ್ರನೀಳನೀರದನಿವಹಂ ॥ 143

ಪೊತ್ತುವವಡಬಾಗ್ನಿಯಪೊಗೆ ।
ಸುತ್ತಿದೊಡಂಮಳಸಿಕಗ್ಗಪಡುವಣಕಡಲೊ ॥
ಳ್ಕಿತ್ತಸದೆನೆಗೆದುವುಜಲ ।
ಮತ್ತದ್ವಿಪಘಟೆಗಳೆನಿಸಿದುವುಘನಘಟೆಗಳ್ ॥ 144

ಮ॥ಸ್ರ॥ ಇದಮೋಘಂಮೇಘಕಾಲಂಬರೆಗಗನಗೃಹದ್ವಾರದೊಳ್ತೋರಣಂಗ ।
ಟ್ಟಿದುದೋಮೇಣ್ಪಂಚರತ್ನಾವಳಿವಿಳಸಿತಮಂಕಂಠಿಕಾಮಾಲೆಯಂತಾ ॥
ಳ್ದದಳೋದಿಗ್ದೇವಿಮೇಣ್ಸಂನದಪೊರಜೆನಸಾಂಭೋದಮಾದ್ಯದ್ಗಜಕ್ಕಿ ।
ಕ್ಕಿದುದೋಪೇಳೆಂಬಿನಂಕಣ್ಗೆಸೆದುದುಶಬಳಚ್ಛಾಯಮಿಂದ್ರಚಾಪಂ ॥ 145

ವ ॥ ಅನಂತರಂ ॥

ಮ ॥ ವಸುಧಾವಲ್ಲಭಮೇಘಕಾಲವಿಟನೊಳ್ಸಂಭೋಗಮಂಮಾಡೆಬಂ ।
ಣಸರಂಪೊಕ್ಕುೞಿಯಿಂದಲೇಪರಿದುಸೂಸಿತ್ತಲ್ಲದಿಂದೆತ್ತಣಿಂ ॥
ಪೊಸಮುತ್ತುಂಕಿಸುಗಲ್ಗಳುಂಕೆದಱಿಕಣ್ಗಂಬಾಧ್ದುದೆಂಬಂತದೇ ।
ನೆಸೆದೊಪ್ಪಿದ್ದುರ್ವೆಸೂಸಿದಾಲಿವರಲುಂತತ್ತಿಂದ್ರಗೋಪಂಗಳುಂ ॥ 146

ಉ ॥ ತೀಡುವಪ್ಪಿಮಾನಿಳನತೀಟದೊಳುತ್ಕಟಮಾಗೆರಾಗಮಿ ।
ರ್ಪ್ಪೋಡಿದಚಂಚುವಂತೆಱೆದೆಱಂಕೆನೆಗೞ್ದಿರೆಕಂಠನಾಳಮಂ ॥
ನೀಡಿವಿಯತ್ತಳಕ್ಕೊಗೆದುಕಾರಮುಗಿಲ್ವಸಿಯುಂಮನಂಕೞ ।
ಕ್ಕೊರ್ಗೆಡುವಿನಂಕರ್ದುಂಕಿನಲಿದಾಱಿದುದಾಡಿದುದಂದುಚಾತಕಂ ॥ 147

ರಾಗದಬಳ್ಳಿಚಾದಗೆಗೆಕಾಂಚನಚಂಚಳೆಲಾಸ್ಯತರ್ಜ್ಜನಂ ।
ಸೋಗೆನವಿಲ್ಗೆಮೇಖಳೆಘನಾಘನಲಕ್ಷ್ಮಿಗೆದೀಪಮಾಲೆಜಾ ॥
ರಾಗಮನಕ್ಕೆಜಂತ್ರದುರಿಯೆಂಬವಿಯೋಗಿಜನಕ್ಕೆನಲ್ಮಭೋ ।
ಭಾಗದೊಳಂದುಬಿತ್ತರಿಸಿದತ್ತತಟಿಲ್ಲತೆಲಾಸ್ಯಲೀಲೆಯಂ ॥ 148

ಕಂ ॥ ಬಿಡೆಕೆಂಮನೆಗರ್ಜ್ಜಿಸಿತ ।
ಕ್ಕೆಡೆತಗದೆಡೆಯೆಂನದೆಱಗುವಸ್ಥಿರನಪ್ಪಾ ॥
ಜಡನಚಿರಪ್ರಭೆನಿಮಿಷದೊ ।
ಳಡಂಗುಗುಂಬೆಳಗ[illegible]ತುಮದುಸತ್ಪಥಮಂ ॥ 149

ಮ॥ಸ್ರ॥ ಘನಗರ್ಭ್ಭಾಣಾವಧೂಪುಂಸವನದೆಸೆವತೂರ್ಯ್ಯಸ್ವನಂಚೊಳ್ಕಾವ ।
ರ್ಧನಮಾಂಗಲ್ಯಂಬಳಾಕಕ್ಕೆಸೆಯೆಪಸರಿಪಾತೋದ್ಯಘೋಷಂವಿಡೂರಾ ॥
ವನಿಯೊಳ್ವೈಡೂರ್ಯ್ಯರತ್ನಂಜನಿಯಿಸೆನೆಗಳ್ವಾನಂದಭೇರೀರವಂತಾ ।
ನೆನೆರೋದೋಭಾಗದೊಳ್ಘೂರ್ಣ್ಣಿಸಿದುದಭಿನವಾಂಭೋದಗಂಭೀರನಾದಂ ॥ 150

ಕಂ ॥ ಘನನಿನದಂಭಯರಸಮಂ ।
ಜನಿಯಿಸೆನೆನೆಯಿಸಿದುದಂದುಕಳಹಂಸಕುಟುಂ ॥
ಬಿನಿಯಂಪ್ರಿಯವಿರಹಾಲಂ ।
ಬಿನಿಯಂಮೃದುವೆನಿಪಮನದೊಳಂಗಮನದೊಳಂ ॥ 151

ಮ ॥ ಉಗುಳುತ್ತುಂಸಿಡಿಲೆಂಬತೋಱಗಿಡಿಯಂಕಾಲೂಱಿಭೂಭಾಗದೊ ।
ಳ್ಗಗನಾಭೋಗಮನೆಯ್ದೆನೀಳ್ದುಘನವೇಣೀಬಂಧಮಂಬಿಚ್ಚಿರ್ವಿಂ ॥
ಚಗಳೆಂಬುಳ್ಕವದಾಡೆಗಳ್ಪೊಳೆಯೆಚಂದ್ರಾದಿತ್ಯರಂನುಂಗಿಪೇ ।
ಸಗೆಯಂಬೆಳ್ಚಿರ್ಸಿಗರ್ಜ್ಜಿಸುತ್ತುಮೊಗೆದಂಕಾರೆಂಬಕಾಳಾಸುರಂ ॥ 152

ಚ || ಮದಮದಿರಾಪ್ರಮತ್ತಜನತಾಶಯದಂತೆಜಡಾಶಯಂಕಲಂ |
ಕಿದುದುಮನೋಜ್ಞದೀಪಕಳಿಕಾನನದಂತಿರೆಕಾನನಂಕಱಂ ||
ಗಿದುದುವಿರೋಧಿವಾಹಿನಿಗಳಂತಿರೆವಾಹಿನಿಗಳ್ಕಡಂಗಿಮೀ |
ಱಿದುವನುಕೂಲವರ್ಗಮನದೇಂಮಳೆಗಾಲಮಳುಂಬಮಾದುದೋ || 153

ನವವಿಧಮಪ್ಪಕಣ್ಪೊಳಪುರಂಜಿಸೆಸಂಚಿತಾಂಗಹಾರದಿಂ |
ವಿವಿಧಘನಸ್ವನಕ್ಕೆನವಿಲಾಡೆಘನಾಘನಲಕ್ಷ್ಮಿಕೇತಕೀ ||
ಧವಳಕಟಾಕ್ಷಕಂದುರಸಮಗ್ನತೆಯಿಂಪುಳಕಾಂಕುರಂಗಳ |
ತ್ಯವಿರಳಮಾಗೆಕೊಟ್ಟಳಚಿರಪ್ರಭೆಯೆಂಬಸುವರ್ಣಮಾಲೆಯಂ || 154

ಕಂ || ಇಂದೊವರೆನಿಸಿದತನಿರಸ |
ದಿಂದೊದವಿದನೀಲಪಟಲಚ್ಛವಿಯಿಂನು ||
ಣ್ಪಿಂದೆಸೆವರನೇಱಿಲಪಂ |
ಣಿಂದರಗಿಳಿಯಾಮ್ರದೊಲವನೇಂತೊಲಗಿಸಿತೋ || 155

ಶಾ || ಮಾಕಂದಂಫಲಹೀನಮಾದಪದದೊಳ್ಜಂಬೂರಸಾಸ್ವಾದನ |
ಸ್ವೀಕಾರೋತ್ಸವದಿಂದಪಂಮಾಱಿದುಕೀರಂಪ್ರಾರ್ಥಿಯಂತಾಳ್ದಿದ ||
ತ್ತೇಕಗ್ರಾಹಿಕನಲ್ದಚೂತಕಳಿಕಾಸ್ವಾದವ್ಯವಚ್ಛೇದದಿಂ |
ಮೂಕೀಭಾವಮನಪ್ಪುಕೆಯ್ದುದುವಿವೇಕವ್ಯಾಕುಳಂಕೋಕಿಲಂ || 156

ಮ|ಸ್ರ|| ಪಸುರ್ವುಲ್ಲಂಮೇದುಸಂದೊಂದೆಡೆಯೊಳಮೊಡಲಿಂಬಿಲ್ಲೆನಲ್ಕೊರ್ವಿಕೆಚ್ಚ |
ಲ್ಕುಸಿವನ್ನಂಬೇಗಿಪಾಲಂಬಿರಿವಿಡೆಮೊಲೆಯಿಂವತ್ಸಪೀತಾವಶೇಷಂ ||
ಪೊಸಗಾರೊಳ್ತಾರಲೊಳ್ಕಂಣರೆಮುಗುದ್ಧರೆಸೃಕ್ಕಂಗಳಿಂಸೂಸೆಫೇನ |
ಪ್ರಸರಂಮೆಲ್ಕೊತ್ತುತ್ತುಂನಿಂದುದುವನಮಹಿಷೀಬೃಂದಮಾನಂದದಿಂದಂ || 157

ಕಂ || ಸುರಿವಮಳೆಗಳ್ಕಗಿರಿಕಂ |
ದರದೊಳ್ತಡಗಿಟ್ಟತಂಮಣಾಬಕದಂಬ ||
ಕ್ಕರೆಗಚ್ಚಿರ್ಹರಿತದೂರ್ವಾಂ |
ಕುರಮಂಕೊಂಡುಯ್ದುವೆಂದುಹರಿಣೀಯೂಥಂ || 158

ಘೋರೆಂವೆಱಗುವಜಲಧರ |
ಧಾರಾಪುಷ್ಕರದಿನಾತ್ಮಕರಪುಷ್ಕರಮಂ ||
ಪ್ರೇರಿಸಿಸಿಂಪಿಣಿಯಂಕಾಂ |
ತಾರದೊಳಾಡಿದುವುಕರಿಗಳಂಕರಿಣಿಗಳಂ || 159

ಮಾರಂಬಿರಯಿಗೊಡರ್ಚಿದ ।
ಮಾರಣಹೋಮಾಗ್ನಿಧೂಮಪಟಳಂಗಳವೋಲ್ ॥
ಕಾರಮುಗಿಲ್ಗೆಗೆದುವುರತಿ ।
ನೀರೆಱಿದೋವಿದತಮಾಳಷಂಡಂಗಳವೋಲ್ ॥ 160

ಪೋಗಿಂಪೋಗಿಂಪೊಲ್ಲೆಯ ।
ಪೂಗಣೆಗೊಟ್ಟಿಂಮನೋಭವಂಬಿರಯಿಗಳೊಂ ॥
ದಾಗಿರಿಮೊಂದೊದಱುವವೋಲ್ ।
ಸೋಗೆಗಳಂಕೆದಱಿಸೋಗೆಕೇಗಿದುವಾಗಳ್ ॥ 161

ಓವದೆಕುಡುಮಿಂಚಿನಕ್ಕೈ ।
ದೀವಿಗೆಗೆನೆಱಿಸಿಮನ್ಮಥಂಬಿರಯಿಗಳಂ ॥
ತೀವಿತೆಗೆನೆಱೆದುಕೇದಗೆ ।
ಪೂವಿನಕೊನೆಗಱಿಯುಸಲಗಿನಂಬಿನೊಳಿಸುವಂ ॥ 162

ಒಲ್ಲದೆಬಿಸತಂತುಜ್ಯಾ ।
ವಲ್ಲರಿಯಂಕುಸುಮಬಾಣಮಂಕಬ್ಬಿನಬಿ ॥
ಲ್ಲೆಲ್ಲಂಕಾಮಂಕಾಮನ ।
ಬಿಲ್ಲೊಳಿಬಿರಯಿಗಳನಟ್ಟುವೋದಿದನಾಗಳ್ ॥ 163

ವ ॥ ಅಂತತಿಪ್ರಬಲಮಾದಘನಸಮಯಮನತಿಕ್ರಮಿಸೆಯುಂಪೊಲ್ಲೆಯಪೂಗುಡಿಪಲ್ಲಟಿಸೆಯುಂಗಿರಿಮಲ್ಲಿಗೆಬೀತುಬಿಂನವಾಗೆಯುಂ ಕಡವುಮೊಗರಾಗಂಗಿಡೆಯುಂಚಾದಗೆನವೋದಬಿಂದು ಭಕ್ಷಣವ್ರತಮನುಜ್ಝಿಸೆಯುಂಸೋಗೆನವಿಲಪಿಂಡುತಾಂಡವಕ್ಕಲಸೆಯುಂಹಂಸಮಂಡಲಿಮೃಣಾಳಕಾಂಡಮಂಸವಿದುಸೊರ್ಕೆಯುಂಗಿರಿದರೀವನಕ್ಕೆನಿರ್ಝರಜಲಾಭಿಷವಣಮನೊಡರ್ಚೆಯುಂಪೊಂನೆಪೊಸನನೆಯಪಸದನದಿನೆಸೆಯೆಯುಂಪೊಂದಾವರೆಯಮಂದಮಕರಂದದಿನೞಗೆಬೞಿಯಟ್ಟೆಯುಮತಿಪ್ರಕಾಶಮಾದಶರತ್ಪ್ರವೇಶದೊಳ್ ॥

ಕಂ ॥ ಪೆರೆಯಿಕ್ಕಿಪೋದುವಹಿರಾಂ ।
ಶರದನಘನಕಾಲವಿಷಧರಂಗಳ್ಗಗನೋ ॥
ದರಗಹ್ವರದೊಳೆನಲ್ತರ ।
ತರದಿಂಪಸರಿಸಿದುವಂದುಬೆಳಿಯಮುಗಿಲ್ಗಳ್ ॥ 164

ಕಂ॥ ಇರುಳಿಂದುವಿನೊಡವೋಗದ ।
ಶರದದಪೆರ್ದಿಂಗಳಹಿಮಕರಕರತಪ್ತಂ ॥
ತೆರಳಿಕೆನೆಗಟ್ಟಿದಂತಿರೆ ।
ಪೊರೆವೊರೆಗೊಂಡಿರೆಮುಗಿಲ್ಪಗಿಲ್ತುವುನಭದೊಳ್ ॥ 165

ಉ॥ ಓವದೆಮೀನಮೇಷವೃಷಭಾದಿಗಳಂಕ್ರಮದಿಂದಿನಾಧಿಪಂ ।
ಸೇವಿಸಿಮತ್ತೆ ಕಂನೆಯೊಡಗೂಡಲೊಡಂಕಿಡೆತಂನತೇಜಮಿಂ ॥
ನಾವುದುಕಜ್ಜಮೆಂದುತೊಲೆಯಂಜನರಂಜನೆಗೇಱಿತೇಜಮಂ ।
ಭೂವಳಯಕ್ಕೆ ಬೀಱಿದನದೇಂಪ್ರಭುಮಾಡಿದಮಾಯೆಸಲ್ಲದೇ ॥ 166

ಕಂ॥ ಇಂಗಡಲೊಳಗೋಲಾಡುವ ।
ಮೀಂಗಳಬಳಗಂಗಳಂಬಿನಂಶರದದಪೆ ॥
ರ್ದಿಂಗಳೊಳಾಡಿದುವುಚಕೋ ।
ರಂಗಳ್ಚಂದ್ರಾಂಶುಪೂರ್ಣ್ಣಚಂಚುಪುಟಂಗಳ್ ॥ 167

ಬಳಸಿಸುೞದಾಡಿಕಾಲ್ವಿಡಿ ।
ದೆಳಸಿಕಲಾಲಾಪಮೊದವೆಜನನಿಯುಮೊಲೆವಾ ॥
ಲ್ಗಳನುಂಬಳಿಸುವಿನಂತಿರೆ ।
ಕಳವೆಯಪಾಲ್ವೆನೆಯಪಾಲನುಂಡುವುಗಿಳಿಗಳ್ ॥ 168

ದೂರದೊಳೀಕ್ಷಿಸಿತುಂಗಾ ।
ಕಾರದೊಳೊಂದಿದಋಜುತ್ವಮಂಪಡೆದೆಳಸಿ ॥
ತ್ತಾರಯ್ದು ನೋಡದಂತ ।
ಸ್ಸಾರತೆಯಂಕಾಶಕಣಿಶಮಂಶುಕಶಾಬಂ ॥ 169

ವ॥ ಆಶರತ್ಸಮಯದೊಳ್ ॥

ಮ॥ಸ್ರ॥ತನಗತ್ಯುತ್ಸಾಹದಿಂಯುಕ್ಷನನೆಗಳ್ದುಚಿತಾಚಾರಮುಂಪೇಳ್ವುದಂಸಂ ।
ಮನದಿಂದಂಮಾಳ್ಪಸಂಪ್ರೀತಿಯುಮನವರತಂಹರ್ಷಮಂಮಾಡೆಸಾಹಿ ॥
ತ್ಯನಟೀಶೈಲೂಷನತ್ಯೂರ್ಜ್ಜಿತಶುಭಚರಿತಂಸಜ್ಜನಾಧಾರನಿರ್ದ್ದಂ ।
ದ್ಯುನದೀಫೇನಪ್ರತಾನಪ್ರಥಿತಪೃಥುಯಶಂಭಾರತೀಕರ್ಣ್ಣಪೂರಂ ॥ 170

ಗದ್ಯ॥ ಇದುಪರಮಜಿನಸಮಯಕುಮುದಿನೀಶರಚ್ಚಂದ್ರಬಾಳಚಂದ್ರಮುನೀಂದ್ರಚರಣ
ನಖಕಿರಣಚಂದ್ರಿಕಾಚಕೋರಂಭಾರತೀಕರ್ಣ್ಣಪೂರಂ ಶ್ರೀಮದಭಿನವಪಂಪವಿರಚಿ
ತಮಪ್ಪರಾಮಚಂದ್ರಚರಿತಪುರಾಣದೊಳ್ಶರದ್ವರ್ಣ್ಣನಂ ಸಪ್ತಮಾಶ್ವಾಸಂ ॥

ಅಷ್ಟಮಾಶ್ವಾಸ ಪ್ರಾರಂಭಃ.

—:o:—

ಕಂ ॥ ಶ್ರೀನಿಳಯನಿಷ್ಟವಿಷಯಸು ।
ಖಾನುಭವಂಬಡೆದುದೇವನಿರ್ಮ್ಮಿತಮೆನಿಸಿ ॥
ರ್ದ್ದಾನಗರಿಯೊಳಪ್ರಾಕೃತ ।
ಮಾನಧನಂಸುಖದಿನಿರ್ದ್ದನಭಿನವಗಂಪಂ ॥ 1

ವ ॥ ಅಕರತ್ನಮುಖಸಮನಂತರಂಗಮನೋತ್ಸುಕಚಿತ್ತರಾದರಾಮಂಗಮೌಲ್ಯಮು
ಕ್ತಾದಾಮಮುಮಂಲಕ್ಷ್ಮಣಂಗೆಮಣಿಕುಂಡಲಮುಮಂಸೀತಾದೇವಿಗೆಚೂಡಾರತ್ನ
ಮುಮಂವೀಣಾರತ್ನಮುಮನೋಲಗಿಸಿವಿಷಮಮಾದೆಡೆಗೆನ್ನಂನೆನೆವುದೆಂದುವಿನ
ಯಮಂನುಡಿದುಕಿಱಿದೆಡೆಯಂಕಳಿಪಿಬೀಳ್ಕೊಂಡುಬಂದುಯಕ್ಷಂವೈಕುರ್ವ್ವಣಪು
ರಮನದೃಶ್ಯಂಮಾಡಿನಿಜನಿವಾಸಕ್ಕೆಪೋದನಿತ್ತಲಾರಾಮಲಕ್ಷ್ಮಣನಿರ್ಗ್ಗಚ್ಛಪಯ
ಣಂಗಳಿಂವಿಜಯಪುರದಬಹಿರುದ್ಯಾನಮನೆಯ್ದಿವರ್ಷಾಸಮಯದೊಳ್ ॥

ಉ ॥ ಮುಂನಿನಕಾಯ್ಪುಗೆಟ್ಟುದಶದಿಗ್ಮುಖದಿಂಸೆಱೆಮೆಟ್ಟರ್ಕ್ಕಗ ।
ಳ್ತಂನೊಳಡಂಗೆಚಂಡಕಿರಣಂವರುಣಾನಿಯಕಯ್ಯಕೆಂಬರ ॥
ಲ್ಗಂನಡಿಯಂತೆದಿಟ್ಟಿಗಳವಟ್ಟಿರೆಪೊರ್ದ್ದಿದನಬ್ಜಷಂಡಸಂ ।
ಚ್ಛಂನಮನುದ್ಘಹಂಸಮಧುರಸ್ವನಮಂಬನಮಂರಘೂದ್ವಹಂ ॥ 2

ವ ॥ ಅಂತತಿಶಯಮಪ್ಪವನವಿಲಾಸಮಂಸೀತೆಗೆತೋಱುತ್ತುಂಬಂದದೊಂದುತಿಳಿಗೊಳದ
ತಡಿಯತಮಾಲವನಲತಾಗೃಹದೊಳ್ವಿಶ್ರಮಿಸಿರ್ಪ್ಪುದುಂ ॥

ಕಂ ॥ ಲತೆವನೆಯೊಳಗಣತಣ್ಬೞಿ ।
ಲತಾಣದೊಳ್ಕುಸುಮದೆಸಳಪಸೆಯಂಸೀತಾ ॥
ಪತಿಗೆಸಮೆದಂಸುಮಿತ್ರಾ ।
ಸುತಂಸಹೋದರರೊಳಿಂತತಿಸ್ನೇಹಿತರಾರ್ ॥ 3

ಸೌಮಿತ್ರಿಯನಿರತಿಶಯ ।
ಪ್ರೇಮಮನದನಂತುಟಿಂತುಟೆಂಬಂತುಟೆನಿ ॥
ದ್ರಾಮುದ್ರಿತಲೋಚನನಿರೆ ।
ರಾಮಂರಕ್ಷಾನಿಮಿತ್ತಮೆಚ್ಚತ್ತಿರ್ದ್ದಂ ॥ 4

ವ ॥ ಅಂತನತಿದೂರದೊಳತಿಶಯಮಪ್ಪುದೊಂದುಮಾಕಂದನಂದನದಪೊದಱೊಳಾಮೇಂ
ದ್ರನಿರ್ಪ್ಪುದುಮಿತ್ತಲಾಪುರಾಧಿಪತಿಯಪ್ಪಪೃಥ್ವೀಧರಮಹಾರಾಜಂಗಮಾತನಮಹಾ
ದೇವಿಯಪ್ಪಿಂದ್ರಾಣಿಗಂಪುಟ್ಟಿದವನಮಾಲೆಯೆಂಬಬಾಲೆ ॥

ಶಾ ॥ ಗಂಡಳ್ಕೆರ್ನ್ನಿಗರಂನರಿಲ್ಲಕಲಿಬಲ್ಲಾಳಂನರಿಲ್ಲೆಂದುಮಂ ।
ಕಂಡಬ್ಬರ್ಣ್ಣಿಸೆಕೇಳ್ದುಕೇಳ್ದುಕಿವಿವೇಟಂಗೊಂಡುಲಕ್ಷ್ಮೀಧರಂ ॥
ಗಂಡಂಪೋಲ್ವೊಱೆಯಲ್ಲರನ್ಯರೆನಗೆಂದೀಪ್ರಾಣ್ತೆಯಂಕಂನೆಕ್ಕೈ ।
ಕೊಂಡಳ್ಗಾಡಿಯನೆಯ್ದೆನೋಡಿದವರಾರಾತಂಗೆಕಣ್ಪೋಲದರ್ ॥ 5

ವ ॥ ಅಂತಾಕೆಯಬಯಕೆಬಗೆಯೊಳೊಡಂಬಟ್ಟಂತೆವನಮಾಲೆಯಮಾತಾಪಿತೃಗಳುಂಲ
ಕ್ಷ್ಮಣಂಗೆಕುಡುವವೆಂದುನಿಶ್ಚಯಂಗೆಯ್ದಿರ್ದ್ದುದಶರಥಂತಪಂಬಟ್ಟಿರ್ಪ್ಪುದುಮಂ
ರಾಮಲಕ್ಷ್ಮಣರ್ಪ್ಪೊಳಾಪೊಕ್ಕುಪೋದುದುಮಂಚರವಚನದಿನಱಿದಿಂದ್ರಪುರಮ
ನಾಳ್ವಸುಂದರಕುಮಾರಂಗೆತಂನಂಕುಡಲೆಂದಿರ್ಪ್ಪುದುಮದಂಕೇಳ್ದುವನದೇವತೆ
ಯನರ್ಚ್ಚಿಸುವೆನೆಂಬನೆವದಿನುಪವಾಸಮಿರ್ದ್ದುಕತಿಪಯಪರಿಜನಂಬೆರಸುಮಹಾವಿ
ಭೂತಿಯಿಂಬನದೊಳಗೆಲಕ್ಷ್ಮಣನಿರ್ದ್ದದೆಸೆಗೆಪುಣ್ಯಪ್ರೇರಣೆಯಿಂಪೋಗಿವನದೇವ
ತೆಯನರ್ಚ್ಚಿಸಿಜಾಗರಮಿರ್ದ್ದೆಲ್ಲರುಂನಿದ್ರಾವಶಗತರಾಗೆನಿರ್ವ್ವೇಗಪರೆಕಯ್ಯಾತಳದಿನೆ
ರ್ದ್ದು ॥

ಮ ॥ ತನುಗಂಧಂಬನಮೆಲ್ಲಮಂಬಳಸೆನೇತ್ರಜ್ಯೋತ್ಸ್ನೆಯುಂರತ್ನಮಂ ।
ಡನಬಾಲಾತಪಮುಂತಮಕ್ಕೆತವಿಲಂತರ್ಪ್ಪನ್ನಮೆಳ್ತರ್ಪ್ಪಳಂ ॥
ವನಲಕ್ಷ್ಮೀವಧುವೋಸುರಪ್ರಮದೆಯೋವಿದ್ಯಾಧರಸ್ತ್ರೀಯೊಪೇ ।
ಳೆನುತುಂಕಣ್ನೆಮೆಯಿಕ್ಕದೀಕ್ಷಿಸಿದನಾಸ್ತ್ರೀರತ್ನಮಂಲಕ್ಷ್ಮಣಂ ॥ 6

ವ ॥ ಅಂತುನೀಡುಂಭಾವಿಸಿನೋಡಿ ॥

ಮ।ಸ್ರ॥ಬನಮೆತ್ತಲ್ಬಾಲೆಯೆತ್ತಲ್ನಡುವಿರುಳೊಡನಿಲ್ಲೋರ್ವ್ವರುಂಭೀತಿಗೆಟ್ಟಾ ।
ವನಿಮಿತ್ತಂಬಂದಳೆಂಬೀತೆಱನನಱಿವೆನಾನೆಂದುಲಕ್ಷ್ಮೀಧರಂಪೆ ॥
ನ್ನನೆಪೋದಂಪೊಕ್ಕಳಾಕನ್ನೆಯುಮವನಿತಳಾಲಿಂಗಿತಾನೇಕಶಾಖಾ ।
ಜನಿತಧ್ವಾಂತಾಂತರಾಳಪ್ರಬಳವಟಮನೇಗೆಯ್ವುದುದ್ವೇಗವೇಗಂ ॥ 7

ವ ॥ ಅಂತುಮರದಡಿಯೊಳಾಕೆನಿಂದುರಾಮಾನುಜನಪ್ಪಲಕ್ಷ್ಮಣಕುಮಾರನೆತ್ತಾನುಮೀ
ಬನಕ್ಕೆವಿನೋದದಿಂಬಂದನಪ್ಪೊಡೆಯೀವಟನಿವಾಸಿನಿಯರಪ್ಪದೇವತೆಯರಾರಾನು
ಮುಳ್ಳೊಡೆಲಕ್ಷ್ಮಣಕುಮಾರನಿನಗಲ್ಲದೆವನಮಾಲೆವಧುವಾಗೆನೆಂದಾನೇಳ್ದುಸತ್ತ
ಳೆಂಬುದಂಮಱೆಯದಱಿಪುವುದೆಂದುಕರುಣವಾಗೆನುಡಿದು ॥

ಚ ॥ ವೃತಿಗಿನಿಸಪ್ಪೊಡಂಸೆಡೆಯುದೀಭವದೊಳ್ಗೊರೆಕೊಂಡುದಿಲ್ಲದು ।
ಷ್ಕೃತದೊದವಿಂದಮನಪ್ರಿಯುಕರಗ್ರಹಣಂಮಱುಮೆಯ್ಯೊಳಾದೊಡಂ ॥
ಪತಿಯೆನಗಕ್ಕೆಲಕ್ಷ್ಮಣನೆನುತ್ತುಮವಳ್ಕೊರಲೊಳ್ತೊಡರ್ಚಿದಳ್ ।
ಲತೆಯನಿದೇವೊಗಳ್ವುದೆರಡಿಲ್ಲದನಲ್ಮೆಯನಾಲತಾಂಗಿಯಾ ॥ 8

ವ ॥ ಅನಂತರಂ ॥

ಕಂ ॥ ಬೇಗಂಬಂದಾವಧುವೀ ।
ಲ್ವಿಗಳ್ನೀನಜಸುವಾತನಾನುೞಿಮರಣೋ ॥
ದ್ಯೋಗಮನೆಂದುಘನಧ್ವನಿ ।
ಸೋಗೆಯುಕಿವಿಸಾರ್ದ್ದುದನಿಸಿಕೃಷ್ಣಂನುಡಿದಂ ॥ 9

ವ ॥ ಅಂತುನುಡಿದು ॥

ಕಂ ॥ ವನಮಾಲಾಮಂಡನನಾ ।
ವನಮಾಲೆಯನಕ್ಕಱಿಂದೆತಕ್ಕೈಸಿದನ ॥
ಬ್ಜಿನಿಯಂಕರಂಗಳಿಂದ ।
ಬ್ಜಿನೀಪ್ರಿಯಂಚಂಡಭಾನುತಕ್ಕೈಸುವವೋಲ್ ॥ 10

ವ ॥ ಅಂತುನೇಲ್ವಾಕೆಯಂತಕ್ಕೈಸಿನೆಗಪಿ ॥

ಕಂ ॥ ಓವಳಕೊರಲೊಳ್ಕೋದಲ ।
ತಾಪಾಶಮನಂಬುಜೋದರಂಕಳೆದುಸಮು ॥
ದ್ದೀಪಿತರಾಗಂಮೋಹಲ ।
ತಾಪಾಶಮನೊಡನೆತಂನಕೊರಲೊಳ್ಕೋದಂ ॥ 11

ವ ॥ ಆಗಳತಿಸಂಭ್ರಮಮನಪ್ಪುಕೆಯ್ದು ॥

ಮ ॥ ಹರಿನೀಲಚ್ಛವಿಪುಂಡರೀಕನಯನಂವಿಸ್ತೀರ್ಣವಕ್ಷಸ್ಥಳಂ ।
ಪರಿವೃತ್ತಾಯತಬಾಹುಪೀವರನಿತಂಬಂಗಂಡರೊಳ್ನೀಱಿನಂ ॥
ಬರವಾತಂಕಿವಿಯಾರೆಕೇಳ್ದುಕಿವಿವೇಟಂಗೊಂಡುಕಣ್ಣಾರ್ಪಿನಂ ।
ಹರಿಯಂನೋಡಿದಳಾಕೆತಂನಕಡೆಗಣ್ಗಳ್ಬೀಱೆಬೆಳ್ದಿಂಗಳಂ ॥ 12

ಕಂ ॥ ಬೆಮರ್ವನಿಕ್ಕೈಮಿಗೆಲಜ್ಜಾ ।
ನಮಿತಾನನನಿಮಿರ್ದಸುಯ್ಗಳೊಡನೆಕಟಾಕ್ಷಂ ॥
ನಿಮಿರ್ದೆಸೆಯೆನೋಡಿದಳ್ಸಂ ।
ಭ್ರಮದಿಂವನಮಾಲೆಬಾಲೆಪೀತಾಂಬರನಂ ॥ 13

ವ ॥ ಆಸಮಯದೊಳ್ಲಕ್ಷ್ಮಣಕುಮಾರನುಮಾಕೆಯಂನೋಡೆನಂತೆನೋಡಿ ॥

ಕಂ ॥ ಪಲ್ಲಟಿಸದೆಕಣ್ಗಳ್ಗಿಂ ।
ದಲ್ಲಿಯೆನಿಲೆತಂನೊಳಳಸಿನೋಡುವಪದದೊ ॥
ಳ್ಪಿಲ್ಲಶರಂಕೆಳವಾಡಿಯು ।
ಬಿಲ್ಲಂತಿರ್ದ್ದಸೆಗ[illegible]ರಲಸರಲಂಸುರಿದಂ ॥ 14

ಚ ॥ ನಡುವಿರುಳಾರುಮಿಲ್ಲದೆಡೆಯೊಳ್ಕ್ಕರಲೊಳ್ವಧುಕೋದಬಳ್ಳಿಯಂ ।
ಮಡಿಯಲೊಡರ್ಚ್ಚೆಲಕ್ಷ್ಮಣನಿಮಿತ್ತದಿನಾಕೆಯದೈವದೊಂದೊಡಂ ॥
ಬಡಿಕೆಯಿನಾಗಳಾಯಿರುಳೊಳಲ್ಲಿಗೆತಾಂಪಳಂವಟ್ಟುಬಂದುಕ ।
ಯ್ಪಿಡಿದೊಡೆಸಾವುಮಾಲ್ದದೆನೆಸಾಯದರಂಕೊಲಲಾರುಮಾರ್ಪ್ಪರೇ ॥ 15

ವ ॥ ಅನಂತರಮಾಕಾಂತೆವೆರಸುಲಕ್ಷ್ಮಣಂನಿಜಾಗ್ರಜನಿರ್ದ್ದಲತಾಗೃಹಕ್ಕೆಪೋದನಿತ್ತ ಲಾನನಮಾಲೆಯಕೆಳದಿಯರುಮಾಕೆಯಂಶಯ್ಯಾತಳದೊಳ್ಕಾಣದೆಬೆಗಡುಗೊಂ ಡುಬಂದಾಬನದೊಳ್ತೊಳಲ್ದಱಸುತ್ತುಂಬಂದಲ್ಲಿರ್ದ್ದಳಂಕಂಡಲ್ಲಿರ್ದ್ದಮಹಾನುಭಾ ವರಂರಾಮಲಕ್ಷ್ಮಣರೆಂದಱಿದುಮೆಯ್ಗಾಪಿನವರ್ಪ್ಪರಿತಂದುತನಗಱಿಪುವುದುಂಪೃ ಥ್ವೀಧರಮಹಾರಾಜಂಕೇಳ್ದುಪೊಳಲೊಳಷ್ಟಶೋಭೆಯಂಮಾಡಿಸಿಚತುರಂಗಬಲಂಬೆ ರಸುವೇಗಮಿದಿರ್ವ್ವೋಗಿರಾಜಭವನಕ್ಕುಯ್ದಭ್ಯಾಗತಪ್ರತಿಪತ್ತಿಯಿಂಮಂನಿಸಿಶುಭ ದಿನಮುಹೂರ್ತ್ತದೊಳ್ ॥

ಕಂ ॥ ಉತ್ತಮಕನ್ಯಾರತ್ನಮ ।
ನಿತ್ತಂಪೃಥ್ವೀಧರಂನರೇಂದ್ರೋತ್ತಮನ ॥
ತ್ಯುತ್ತಮವರನೆನಿಸಿದಪುರು ।
ಷೋತ್ತಮದೇವಂಗೆಕೂಸುಗುಡಲಾರ್ಪ್ಪಡೆವರ್ ॥ 16

ವ ॥ ಅಂತುವನಮಾಲೆಗಂಚಕ್ರಪಾಣಿಗಂಪಾಣಿಗ್ರಹಣಮಪ್ಪುದುಮಾಸಮಯದೊಳೋ ರ್ವ್ವಂನಂದ್ಯಾವರ್ತ್ತಪುರಮನಾಳ್ವತಿವೀರ್ಯ್ಯನದೂತಂಬಂದುದೂರಾವನತಮಸ್ತ ಕಂಸಮಸ್ತರಾಜಲೋಕಮನೇಕಾಕ್ಷೋಹಿಣೀಬಲಂಬೆರಸುತಂಮೊಳ್ಕಾಡೆಭರತ ನಮೇಲೆನಡೆಯಲೆಂದೆಂಮರಸಂನಿಮಗೆಬೞಿಯಟ್ಟಿದರಾಜಾದೇಶಮೆಂದುಪೃಥ್ವೀಧ ರಂಗೆಬಿಂನವಿಸೆಲಕ್ಷ್ಮಣನದಂಕೇಳ್ದು ॥

ಕಂ ॥ ಮುಳಿಸೆಂಬವಿಷದಬಳ್ಳಿಯ ।
ತಳಿರೆನೆಪೊಳೆವಧರಮಣಿಯುಮೇಲೆಮುಗುಳ್ವ ॥
ಜ್ಜಳಿಪಂತೆಮುಗುಳ್ನಗೆಪ ।
ಜ್ಜಳಿಸುವಿನಂಚಕ್ರಿನೋಡಿದೂತನಮೊಗಮಂ ॥ 17

ವ ॥ ಭರತನುದ್ಯೋಗಮೇನೆಂಬುದುಮಾತನೆಂದನತಿವೀರ್ಯ್ಯವಲ್ಲಭನಟ್ಟಿದದೂತಂವಿನೀತಾಪುರಮಂಪೊಕ್ಕು ಭರತನಂಕಂಡುನಿಂಮನೆಂಮರಸಂತನಗಾಳಾಗಿಸುಖಮಿರ್ಪ್ಪದೆಂದುಪೆಸಸಿಯಟ್ಟಿದನಿದುನಿಮಗುರುವಕಜ್ಜಮದೆಂತೆನೆ ॥

ಚ ॥ ಬಗೆಯದೆಕಾಳಗಕ್ಕೆ ಬಗೆದಪ್ಪೊಡೆನಿಂಮಳವಲ್ಲವಂಕದಾ ।
ನೆಗೆತುರಗಕ್ಕೆ ತೇರ್ಗ್ಗೆಪವಣಿಲ್ಲಪದಾತಿಗೆಮೇರೆಯಿಲ್ಲದಂ ॥
ಬಗೆದುಱದಿರ್ಪ್ಪಗಾಂಪನುೞಿದಾಳ್ವೆಸಗೆಯ್ವುದುಬಾಳ್ವಬಟ್ಟೆಯುಂ ।
ಬಗೆವುದುಕೀೞಿಮೀಱುವವರಾರತಿವೀರ್ಯ್ಯನಬಾಹುವೀರ್ಯ್ಯಮಂ ॥ 18

ವ ॥ ಎಂದುಗಜಱಿಗರ್ಜ್ಜಿಸಿದದೂತನಮಾತಿಂಗೆಶತ್ರುಘ್ನಂಮುಳಿದು ॥

ಚ ॥ ಕನಸಿನೊಳಪ್ಪೊಡಂಭಯದಲೋಭದಮಾತುಮನುಪ್ರಸೂತರೊ ।
ಳ್ಜನಿಯಿಸದಲ್ಪವೀರ್ಯ್ಯನತಿವೀರ್ಯ್ಯವೆಸರ್ತ್ತನಗೇವುದಾಹವ ॥
ಕ್ಕೆನಗಿದಿರಾಗಿನಿಲ್ವನಿತುದೋರ್ವ್ವಲಮುಳ್ಳೊಡೆತಂದುಕಾದಿಸಾ ।
ತನನೆಲೆದೂತಬಿಲ್ವಿಡಿಮುಲೀವೆನೆಪುಲ್ವಿಡಿವಂತುಮಾಡುವೆಂ ॥ 19

ವ ॥ ಎಂದೊದಱಿದೂತನಂಪರಿಭವಿಸಿಕಳೆದು ॥

ಕಂ ॥ ಭರತನೊಳತಿವೀರ್ಯ್ಯಂಸೆಂ ।
ಗರಕ್ಕೆ ಮೇಲೆತ್ತಿಬಂದನೆಂಬಪವಾದಂ ॥
ಪರೆದಂದುರಘುಕುಲಕ್ಕಿದೆ ।
ಪರಾಭವಂಪರಿಭವಕ್ಕೆ ಕೋಡೆರಡೊಳವೇ ॥ 20

ವ ॥ ಎಂದುಮನದೊಳ್ನಿಶ್ಚಯಿಸಿಭರತಂಶತ್ರುಘ್ನಂಬೆರಸುಚತುರಂಗಬಲಸಮೇತನಾಗಿನಿಚ್ಚಪಯಣಂಗೆಯ್ದುನಂದ್ಯಾವರ್ತ್ತಪುರಕ್ಕೆತ್ತುವುದುಮಾಸಮಯದೊಳ್ಮಿಥಿಳೆಯನಾಳ್ವಕನಕನುಮುಜ್ಜೇಣಿಯನಾಳ್ವಸಿಂಹೋದರನುಮಸಂಖ್ಯಾತಬಲಂಬೆರಸುತಂಮೊಳ್ಬಂದುಕೂಡಿಬಂದರಿತ್ತಪರಿಭವಂಬೆತ್ತುಬಂದಚರವಚನಮನತಿವೀರ್ಯ್ಯಂಕೇಳ್ದುಘನಗರ್ಜ್ಜನೆಯಂಕೇಳ್ದಸಿಂಹದಂತೆಮುಳಿದುಭರತಂಗಿದಿರೆತ್ತಿನಡೆಯಲೊಡರಿಸಿದನೆಂಬವಾರ್ತ್ತೆಯುಂವಾಯುಗತಿವೆಸರದೂತನಱಿಪೆಪೃಥ್ವೀಧರಂದೂತನಂಮಂನಿಸಿಕೞಿಪಿರಾಘವನಮೊಗಮಂನೋಡಿಕಾಳಗಮನಾಂಪೋಗಿಮಾಣಿಸುವೆನೆಂಬುದುಂಲಕ್ಷ್ಮಣನದಕ್ಕಾನೇಸಾಲ್ವೆನೆಂದುಮನಃಪವನಜವಮುಳ್ಳವಾಜಿಗಳಿಂಪೂಡಿದರಥಮಂತರಿಸಿಮೂವರುಮೇಱಿಪೋಗಿನಂದ್ಯಾವರ್ತ್ತನಗರದಪೊಱವೊಳಲೊಳ್ಬೀಡಂಬಿಟ್ಟಿರ್ದ್ದಸಮಯದೊಳ್ ॥

ಕಂ ॥ ಅತಿವೀರ್ಯನಶೌರ್ಯಮನ ।
ಪ್ರತಿಹತಮಂ ಭರತನಾರ್ಕ್ಕಮಾಱಂಗೆಲಲು ॥
ದ್ಧತನಂಮುಂನಮೆರಣದೊಳ್ ।
ಹತಪ್ರಭಂಮಾಡಿಗೆಲ್ವಬಗೆಯುಂಬಗೆಯಿಂ ॥ 21

ವ ॥ ಎನೆಜನಕಜೆಗೆಮುಕುಳಿತಕರಸರೋಜನಾಗಿ ॥

ಕಂ ॥ ಜನನಿಬಱುಗಯ್ಯೊಳವನಂ ।
ಮನೆದೊತ್ತಂಪಿಡಿದುತರ್ಪ್ಪತೆಱದಿಂತಂದಂ ॥
ಱನಕಾಲ್ಗೆಱಗಿಸುವೆಂಬಗೆ ।
ವನಿತುವರಮದಾವಗಹನಮೆಂದನುಪೇಂದ್ರಂ ॥ 22

ವ ॥ ಎನೆರಾಘವಂಕೇಳ್ದು ಭರತಂಗತಿವೀರ್ಯನಂನಿಯಮಿಸುವುದಾವಗಹನಮೆನೆಲಕ್ಷ್ಮ ಣನೆಂದನೆತ್ತಾನುಂಭರತಂಸೋಲ್ತನಪ್ಪೊಡೆನಮಗೆಕುಲಪರಿಭವಮಕ್ಕುಮೆಂಬುದುಂ ರಾಘವನೆಂದನಿಂದಿಂಗೆಮೂಱನೆಯದಿವಸದಂದಾಶತ್ರುಘ್ನಂನಂದ್ಯಾವರ್ತ್ತಪುರಕ್ಕೆ ಪ ರಿಯಿಟ್ಟುಪಲಂಬರರಸುಮಕ್ಕಳಂಕೊಂಡು ಪೊಱವೊಳಲೊಳಿರ್ದ್ದೇಳ್ನೂರಾನೆಯು ಮನಱುವತ್ತುಸಾಸಿರಕುದುರೆಯುಮಂಪಿಡಿದೊಯ್ದನೆಂದುಪೇಳ್ವುದುಂ ಮಱುದೆವ ಸಂಪುರಮಂಪೊಕ್ಕೊಂದುಜಿನಮಂದಿರದೊಳಾಯುಧಸಮೇತಂ ಸೀತೆಯುಮಂರಘು ವೀರನುಮನಿರಿಸಿಬಂದು ॥

ಚ ॥ ಅದಟನತಿಪ್ರಚಂಡಬಲನೆಂನದೆದುರ್ದ್ಧರದೋಸ್ಸಹಾಯದಿಂ ।
ಕದನಧುರೀಣನೊಲ್ಲದೆಧನುರ್ಲ್ಲತೆಯುಂನಿಜದಿವ್ಯಬಾಣಮುಂ ॥
ಗದೆಯುನಿದೇನುದಾತ್ತನೊಜನಾರ್ದ್ದನನೋರ್ವ್ವನೆಪಾಶದಂಡಮು ।
ಲ್ಲದಜವನಂತೆನಿಂದನತಿವೀರ್ಯನರಾಜಗೃಹೋಪಕಂಠದೊಳ್ ॥ 23

ವ ॥ ಆಗಳಬ್ಜೋದರನಿದಿರ್ಗ್ಗೆವಂದಾಗಮನವೃತ್ತಾಂತಮನಱಿದು ॥

ಕಂ ॥ ಪಡಿಯರನೋರ್ವ್ವಂಬಂದಾ ।
ಗಡೆಭರತನದೂತನಿರ್ದ್ದಪಂಬಾಗಿಲೊಳೆಂ ॥
ದೊಡೆಬರವೇಳೆಂದಂಬರ ।
ಸಿಡಿಲಂಬಳೆಯುಟ್ಟುಬರಿಸುವಂತತಿವೀರ್ಯಂ ॥ 24

ವ ॥ ಅಂತುಬಂದುಮುಂದನಿಂದು ॥

ಕಂ॥ ಎಱಗದವಜ್ರಸ್ತಂಭದ ।
ತೆಱದಿಂದಿರೆಮುೞಿದುಕಣ್ಕಿಸುಸೆಱೆಯಿಂಕ ॥
ಣ್ದೆಱೆಯೆನಡೆನೋಡಿಬಂದುದ ।
ನಱುಪೆನೆದುಂದುಭಿಗಭೀರರವನಿಂತೆಂದಂ ॥ 25

ಉ॥ ಎತ್ತಿಬರುತ್ತುಮಿರ್ದ್ದನಿದಿರಾಂಪವರಾರ್ಭರತೇಶ್ವರಂಗೆಭೂ ।
ಪೋತ್ತಮನಾಜ್ಞೆಯಂತಲೆಯೊಳಾಂತುಪದಾನತನಾಗಿಕಪ್ಪವಂ ॥
ತೆತ್ತುೞಿಗಂಡುಗೆಯ್ವುದಿರಿದಿಟ್ಟಿಗೆಜೆಟ್ಟಿಗನಾಗಿಬಾಳ್ವುದ ।
ತ್ಯುತ್ತಮಪಕ್ಷಮಾಂತೊಡಪವರ್ತ್ತಿಸುಗುಂಕ್ಷಣದಿಂನಿಷೇಕವಂ ॥ 26

ಕಂ॥ ಆಳಾಗಿಬರ್ದುಂಕದೆಬ ।
ಲ್ಲಾಳಾಗಿಬರ್ದುಂಕಲೊಡರಿಪೊಡೆಭರತನಕೂ ॥
ರ್ವ್ವಾಳನಸುಮಸೆಗೆಬಲಮ್ಮೃ ।
ಣಾಳಂರಿಪುನೃಪರಕಂಠನಾಳಂಧುರದೊಳ್ ॥ 27

ವ॥ ಎಂಬುದುಮದಕ್ಕೆ ಕಡುಮುೞಿದು ॥

ಕಂ॥ ಸಿಡಿಲವನಿಗೇಳ್ದಸಿಂಹಂ ।
ಸಿಡಿಲ್ದುನೆಗೆವಂತೆಗಜಱಿಗರ್ಜ್ಜಿಸಿಬಾಳಂ ॥
ಜಡಿದೆಯ್ದೆಪೊಯ್ವಕಯ್ಯಂ ।
ಪಿಡಿದಾತನಬೀರಸಿರಿಯುಮಂಕಯ್ವಿಡಿದಂ ॥ 28

ಶಾ॥ ಮುಂಗಯ್ಯಂಪಿಡಿದೊತ್ತಿಕಯ್ಯಕರವಾಳ್ಬೞ್ತ್ತಿರ್ಪಿನಂವಕ್ತ್ರರಂ ।
ಧ್ರಂಗಳ್ಕಾಱುವಿನಂಕದುಷ್ಣರುಧಿರಾಂಭಃಪೂರಮಂಪೊಯ್ಯುದ್ವೃ ॥
ಯ್ದಂಗಯ್ಯಿಂಮೊಗಮಂಮುಸುಂಬುಬಿರಬಿದ್ದಂಪೋಗೆವೀರಂಗೆದೋಃ ।
ರ್ಭಂಗಂಮಾಡಿದನೇನಲಂಘ್ಯಬಲನೋರಾಮಾನುಜಂಲಕ್ಷ್ಮಣಂ ॥ 29

ವ॥ ಅಂತುಪರಿಭವಿಸಿ ॥

ಕಂ॥ ಭರತನೊೞದಿರ್ಚ್ಚಿಕಾದುವ ।
ಭರವಸದಿಂಬಂದಿಕಲಿಗೞರ್ದ್ದಡೆಯಿಂಸಂ ॥
ಚರಿಸಿದೊಡೆಮುಟ್ಟಿಕೀಳ್ವಂ ।
ಕರಮಂಕೀಳ್ವಂತೆವನ್ಯಗಜಮಂಬುಜಮಂ ॥ 30

ವ॥ ಎಂದುಗಜಱಿಗರ್ಜ್ಜಿಸುವುದುಮತಿವೀರ್ಯ್ಯನೊಳ್ಕೂಡಿಭರತನೊಳ್ಕಾದಲೆಂದುಬಂ
ದನ್ಯರಾಜನ್ಯಕದೊಳ್ವಿಜಯುನಿವನಜೇಯನೆಂದುಮನಂಗುಂದೆಯುಂ ಬಾಹ್ಬೂರ್

ಲಂಕಾದೊರ್ಗ್ಗಲನಂ ಕಂಡತೋಳನಂ ತೊಳಸಾದುರ್ಗ್ಗಸಮರಮುಖ ವಿಮುಖನಾಗೆ
ಯುಂಮೃಗಧ್ವಜಂಮೃಗಧ್ವಜನೆನಿಸೆಯುಂರಣೋರ್ಮ್ಮಿಭಯರಸೋರ್ಮ್ಮಿಯಂ
ನೂರ್ಮ್ಮಡಿಸೆಯುಂ ಕಳಭಂಕುಸುಮಿತ ಚಂಪಕಾನೋಕಹವಂ ಕಂಡ ಕಳಭ
ನಂತೆಮೊಗಂದಿರಿಪೆಯುಂಕೇಸರಿಕೇಸರಿಯಂಕಂಡಕಾಡಾನೆಯಂ ತೋಸರಿಸೆಯುಂವ
ಜ್ರಧರನಧರನಾಗೆಯುಂಭದ್ರಂಭದ್ರಗಜದಕಣ್ಮುಟ್ಟಿನೊಳಿರ್ದ್ದಫಣಿಯಂತೆಮಣಿ
ಯೆಯುಂಮುನಿಭದ್ರನಭದ್ರನೆನಿಸೆಯುಂನಂದನಂರಣರಸಾಸ್ವಾದನಾನಂದಮನು
ಳಿಯೆಯುಂಅವಾರ್ಯ್ಯವೀರ್ಯ್ಯಂಶೌರ್ಯ್ಯಂಗಿಡೆಯುಂಮಾರಿದತ್ತನನುದಾತ್ತನೆನಿ
ಸೆಯುಂಲಂಪೋಷ್ಠಂರಕ್ಷರವಮುಕ್ತೋಷ್ಠನಾಗೆಯುಂಪ್ರೋಷ್ಠಿಲಂಪ್ರತಿಷ್ಠೆಗಿಡೆ
ಯುಂಮತ್ತಂಪೆಜರುಮಂಜರಿಕೆಯುನರೇಂದ್ರನಂದನರ್ಪ್ಪಂದೆಯುಂಪಾವಕದರ್ದ್ದಂತೆಮಿ
ಡುಕಿದಿರೆಯುಂ ॥

ಮ ॥ ಅತಿವೀರ್ಯ್ಯಂಹತವೀರ್ಯ್ಯನಾದನಿವನಂಕೊಂಡೊರ್ದ್ದುಪೆಂದೋಷದೂ ।
ಷಿತನಂದೋರ್ವ್ವಲಮುಳ್ಳರುಳ್ಳೊಡೆನಗಡ್ಡಂಬರ್ಪ್ಪುದೆಂದಭ್ರಗ ॥
ರ್ಜ್ಜಿತಮೆಂಬಂತಿರೆಗರ್ಜ್ಜಿಸುತ್ತುಮೆಳೆದೊರ್ದ್ದುಂಲಕ್ಷ್ಮಣಂಹಸ್ತಪಾ ।
ದತಳೋದ್ಘಟ್ಟನದಿಂಪಡಲ್ವಡಿಸುತುಂಮಾಱಾಂತಸಾಮಂತರಂ ॥ 31

ಕಡುಕೆಯ್ವ್ಯಂಭರತಂಗಿವಂಗಡರಣಕ್ರೀಡಾರಸಕ್ಕರ್ತ್ಥಿಗಂ ।
ಗಡಸಾಕೇತಪುರಾಧಿರಾಜಪದಮಂಕೈಕೊಳ್ವನೆಂದೆತ್ತುವಂ ॥
ಗಡದುರ್ಲ್ಲೇಖಮನಟ್ಟುವಂಗಡೆನುತುಂಜೋಡಾಡಿಪುಲ್ಗೋಡನಂ ।
ಪಿಡಿದೊಯ್ವಂತೆವೊಲೊಯ್ದನಪ್ರತಿಹತಂಸಾಮಿತ್ರಿಶತ್ರುಂಜಯಂ ॥ 32

ವ ॥ ಅಂತತಿವೀರ್ಯ್ಯನನನಂತವೀರ್ಯ್ಯನೆಳೆದುತಂದೊಪ್ಪಿಸುವುದುಂ ॥

ಶಾ ॥ ಏವೇಳ್ವೆಂಬಳನಿಂಕೃಪಾಳುಪೆಱರಾರಾದ್ರೋಹನಂಕಂಡುರೋ ।
ಷಾವೇಶಂತನಗಾದುದೇಭರತನಂಶತ್ರುಘ್ನನಂಕಂಡುಮಂ ॥
ದ್ಯಾವರ್ತ್ತಕ್ಕಧಿರಾಜನಾಗಿಸುಖದಿಂನೀನಿರ್ಪ್ಪುದೆಂದಂಪರಾ ।
ರ್ತ್ಥವಿಷ್ಟಂಭಮನಪ್ಪುಕೆಯ್ದುವರ್ಗೆಮೈತ್ರೀಭಾವವಾಶ್ಚರ್ಯ್ಯಮೋ ॥ 33

ವ ॥ ಎನಲೊಡಂ ॥

ಕಂ ॥ ಅರಸುತನದೞ್ತಿಪಿಂಗಿತು ।
ವರರಾಜ್ಯಮನಿಮ್ಮ ಮೆಚ್ಚಿದವರ್ಗ್ಗೀವುದಿದಂ ॥
ಪರಿಹರಿಸಿದೆನಾನಿಂನೆಂ ।
ದುರಾಮಲಕ್ಷ್ಮಣರನಾನ್ಯಪಂಕ್ಷಮೆಗೊಂಡಂ ॥ 34

ವ ॥ ಅಂತುನಿಃಶಲ್ಯನಾಗಿಪೋಗಿಶ್ರುತಧಾರಣಭಟ್ಟಾರಕರಪಾದಪಾರ್ಶ್ವದೊಳ್ ॥

ಕಂ ॥ ಜೆರ್ಚ್ಚಿಸೆತಂನಂಕೃಷ್ಣಂ ।
ಬೆರ್ಚ್ಚಿಸಿದಂಕೃಷ್ಣತನಯನಂಜಿನರೂಪಿಂ ॥
ಕೆಚ್ಚೇಱಿದವೈರಾಗ್ಯದ ।
ಪೆರ್ಚ್ಚಿಂಮುಯ್ಯಂಮರಳ್ಚಿವಂತತಿವೀರ್ಯ್ಯಂ ॥ 35

ಚ ॥ ನಿಜಭುಜವೀರ್ಯ್ಯಹಾನಿಗೆತಪಂಬಡೆತಂದೆಮಗಂಗೆರಾಜ್ಯಮಂ ।
ವಿಜಯರಥಂಗೆರಾಮನೊಸೆದೀವುದುಮಾತನತಂಗೆಯೊಳ್ಜಗ ॥
ದ್ವಿಜಯಿಗೆಲಕ್ಷ್ಮಣಂಗೆರತಿಮಾಲೆಯೊಳಾಯ್ತುವಿವಾಹಮುತ್ಸವ ।
ಧ್ವಜಮಣಿತೋರಣಂತುಱುಗೆಘೂರ್ಣಿಸೆಮಂಗಲತೂರ್ಯ್ಯನಿಸ್ವನಂ ॥ 36

ವ ॥ ಆವಿವಾಹವಿಧಾನಾನಂತರಂನಂದ್ಯಾವರ್ತ್ತನಗರಮನಗಲ್ದುನಿಚ್ಚಪಯಣಂಗಳಿಂಕ್ಷೇಮಂಜಳಿಪುರಕ್ಕೆವಂದುಪೊಳಲಪೊಱವೊಳಲಮನೋಹರೋದ್ಯಾನದೊಳ್ದಾಶರಥಿಯುಂವೈದೇಹಿಯುಂವಿಶ್ರಮಿಸಿಪ್ಪುದುಂತತ್ಪುರನಿರೀಕ್ಷಣನಿಮಿತ್ತಂಲಕ್ಷ್ಮಣಂರಾಜವೀಥಿಯೊಳಗನೆಬರುತ್ತುಮಿರೆಪಲರುಮೊಂದೆಡೆಯೊಳಿರ್ದ್ದುಜಿತಪದ್ಮೆಯಪಡೆಮಾತಂನುಡಿಯುತ್ತುಮಿರೆಕೇಳ್ದುಲಕ್ಷ್ಮಣಂ ಜಿತಪದ್ಮೆಯೆಂಬಳಾರ್ಗ್ಗೆಂಬುದುಮಾತನಸಮುದ್ರಘೋಷದೊಡನೆಜನಿಯಿಸುವಗಂಭೀರಸ್ವರದೊಳಂಭದ್ರಾಕಾರದೊಳಮಾತಂಕಾರಣಪುರುಷನಾಗಲ್ವೇಳ್ಕುಮೆಂದುನಿಶ್ಚಯಿಸಿಪುರಾಣಪುರುಷನೋರ್ವ್ವನಿಂತೆಂದಂ ॥

ಕಂ ॥ ಜನಪತಿಶತ್ರುಂದಮನಾ ।
ತನರಸಿಕನಕಾಭೆತತ್ತನೂಜೆಸರೋಜಾ ॥
ನನೆಮಸೆದಕುಸುಮಸಾಯಕ ।
ಮೆನಿಪ್ಪಜಿತಪದ್ಮೆಪೆಸರೊಳಂರೂಪಿನೊಳಂ ॥ 37

ವ ॥ ಆಕನ್ಯಾರತ್ನಂಪುಟ್ಟಲೊಡನತ್ತಶಸ್ತ್ರಶಾಲೆಯೊಳೊಂದುಶಕ್ತಿಪುಟ್ಟಿದುದಾಸಮಯದೊಳೊಂದಾಕಾಶವಚನಮಿಂತೆಂದುದೀದೇವತಾಧಿಷ್ಠಿತಮಪ್ಪಶಕ್ತಿಯಿಂಶತ್ರುಂದಮನಿಡುವುದುಮದಂಸಂಚಲಿಸದೆವಂಚಿಸಿಪಿಡಿದಮಹಾಸತ್ವನೀರಮಣಿಗಂದಕ್ಷಿಣಭರತಧರಾರಮಣಿಗಂರಮಣನಕ್ಕುಮೆಂಬದೇವತಾದೇಶಮಂಕೇಳ್ದುತೆಱದಿನಲ್ಲದೆಕಲ್ಯಾಣೋತ್ಸವಮಂಮಾಡೆನೆಂದಿರೆಕನ್ಯಾಲೋಭದಿನನೇಕರಾಜಸುತರ್ಬ್ಬಂದುಮಾಶಕ್ತಿಪ್ರಹಾರದಿಂಯಮಾಗಾರಮನೆಯ್ದಿದರೆಂದುಪೇಳೆಲಕ್ಷ್ಮಣಂಕೇಳ್ದದಂಗೆಹನಂಗೆಯ್ವದರಮನೆಯಬಾಗಿಲ್ಗೆವಂದುಪಾರ್ತ್ಥಿವಪುತ್ರನೋರ್ವ್ವಂ ಕನ್ಯಾರ್ತ್ಥಿಬಂದನೆಂದುನಿಂಮರಸಂಗಱಿಪೆಂದುಪಡಿಯರನನಟ್ಟುವುದುಮವಂಬಂದು ಬಿಂನವಿಸಬರವೇಳೆಂಬುದುಂ ॥

ಕಂ ॥ ಸಿರಿಯಹರಿನೀಲವೇದಿಯ ।
ನುರಸ್ಥಳಂಬೀರೆಸಿರಿಯಮರಕತಮಣಿವಿ ॥
ಷ್ಟರಮಂಭುಜದ್ವಯಂಪೋ ।
ಲ್ತಿರೆಪೊಕ್ಕಂರಾಜಸಭೆಯನಭಯನುಪೇಂದ್ರಂ ॥ 38

ವ ॥ ಅಂತಂಜನದಿಕ್ಕುಂಜರದಂತೆಬರುತಿರ್ಪ್ಪುದುಂ ॥

ಚ ॥ ತನುಶುಭಲಕ್ಷಣಕ್ಕೆತವರಾದುದುನೀಱನೆಕಂತುರಾಜನೀ ।
ತನತೇಜದಿಂದಮೀತನೆಪೊಡರ್ಪ್ಪನಶಕ್ತಿಗೆದರ್ಪ್ಪಭಂಗಮಂ ॥
ಜನಿಯಿಸಲಾರ್ಪ್ಪನೆಂನಸುತೆಗೀತನೆವಲ್ಲಭನಕ್ಕುಮೆಂದುಕ ।
ಣ್ಮನದೊಡನೆಕ್ಕೆಯಿಂಪರಿಯೆನೋಡಿದನಾನೃಪನಬ್ಜನಾಭನಂ ॥ 39

ವ ॥ ಅಂತುಂಬಂದಾತನಕೆಲದೊಳಿರ್ದ್ದಕನ್ಯಾರತ್ನಕ್ಕೆಮನಮೆಱಗೆಯುಮಾತಂಗೆಜಗದೆ ತನಗಿಕ್ಕಿದಮಣಿಮಯಾಸನದೊಳ್ಕುಳ್ಳಿರ್ಪ್ಪುದುಂಕುಮಾರನನಿರುಪಮಾಕಾರಮಂ ನೋಡಿಕಂನೆಕಣ್ಬೇಟಂಗೊಂಡು ॥

ಕಂ ॥ ಜಿತಪದ್ಮೆಕಂತುಶರಪೀ ।
ಡಿತಚೇತಃಪದ್ಮೆಜನಕಶಸ್ತ್ರಾಹತಿಯಿಂ ॥
ಹತನಾದೊಡೀತನಲ್ಲದೆ ।
ಗತಿಯಿಲ್ಲೆನಗೆಂದುಚಿತ್ತದೊಳ್ತಱಿಸಂದಳ್ ॥ 40

ವ ॥ ಆಸಮಯದೊಳ್ಶತ್ರುಂದಮಂಸೌಮಿತ್ರಿಗಿಂತೆಂದಂ ನಿಂನಸಕಲಭುವನಾದೇಯಮಪ್ಪರೂಪಂ ನೋಡಿಮೊಗಂನೋಡದಮೋಘಶಕ್ತಿಯಿಂದಿಡಲೆನಗೆಬಗೆಬಂದಪುದಿಲ್ಲಮೀ ಕಂನೆಯಾಸೆಯುಮೞಿದುಮಗುೞ್ವಿಜಯಂಗೆಯ್ವುದೆನೆ ॥

ಕಂ ॥ ನಿಂನಿಡುವಶಕ್ತಿಯಳವುಮ ।
ನೆನ್ನಳವುಮನೀಗಳಂತೆತೋರ್ಪ್ಪಂಬೇಗಂ ॥
ತಂನಿಮೆನೆದುಷ್ಟವಿಷಫಣಿ ।
ಸನ್ನಿಭಮಂಶಸ್ತ್ರಶಾಲೆಯಿಂದಂತಂದರ್ ॥ 41

ವ ॥ ಅಂತುತಂದುವಿವಿಧಾರ್ಚ್ಚನೆಯಿನರ್ಚ್ಚಿಸಿಮಂತ್ರಪೂತಂಮಾಡಿಶಸ್ತ್ರಮಂಪಿಡಿದು ಸಮಾಹಿತಮತಿಯಾಗೆಂದನತಿದೂರದೊಳಿರಿಸಿಸರ್ವ್ವಶಕ್ತಿಯಿನಿಡುವುದುಂ ॥

ಕಂ ॥ ಕಡೆಗಾಲದಸಿಡಿಲಂತಿರೆ ।
ಕಿಡಿಯಂಕಾಱುತ್ತೆಕೀಱುಬರೆವಂಚಿಸಿತಂ ॥
ನೆಡಗಯ್ಯಿಂಶಕ್ತಿಬಲಂ ।
ಗಿಡಿಪಿಡಿದಿಟ್ಟವನಶಕ್ತಿಯಂತಲೆವಿಡಿದಂ ॥ 42

ವ ॥ ಆಸಮಯದೊಳ್ ॥

ಕಂ ॥ ಪೂವಳಿಗಳ್ಕಱಿದುವುಕುಸು ।
ನಾವೋದಂಬಳಸೆಭೃಂಗರವದೊಡನೆದಿಶಾ ॥
ವ್ಯೋಮಾಂತರಮಂಸುರಭೇ ।
ರೀಮಂದ್ರಧ್ವಾನಘನರವಂಪುದುವಿನೆಗಂ ॥ 43

ಪರಿಕಿಸವೇಳ್ಪುದೆಲಕ್ಷ್ಮೀ ।
ಧರನಳವನವಾರ್ಯ್ಯವೀರ್ಯ್ಯನಾತಂಗೀದು ॥
ರ್ಧರಶಕ್ತಿಗ್ರಹಣಮದಾ ।
ವೇದಾಯ್ತೆಂದಮರಸಮಿತಿಪೊಗಳ್ದತ್ತಾಗಳ್ ॥ 44

ವ ॥ ಅಂತುಪೊಗಳ್ವದೇವಧ್ವನಿಯಿಂಲಕ್ಷ್ಮಣನೆಂದಱಿದು ॥

ಕಂ ॥ ಕ್ಷಮಿಯಿಸುವುದೆಂನಗೆಯ್ದಱಿ ।
ಯಮೆಗೊರ್ಮ್ಮಿಂಗೆಂದುಚಕಿತಚಿತ್ತಂಶತ್ರುಂ ॥
ದಮನಾಗಳ್ಸೌಮಿತ್ರಿ ।
ಕ್ರಮಕ್ಕೆವಿಕ್ರಮಮನುಳಿದುವಿನಮಿತನಾದಂ ॥ 45

ವ ॥ ಅನಂತರಂ ಸೌಮಿತ್ರಿಯುಂಶತ್ರುಂದಮನನೇಕವಿಚಿತ್ರವಸ್ತ್ರಾಭರಣಂಗಳಿಂದರ್ಚ್ಚಿ ಸಿಬಹಿರುದ್ಯಾನದೊಳುದಾತ್ತರಾಘವನಿರ್ದ್ದುದಂ ಲಕ್ಷ್ಮಣಂಪೇಳೆಕೇಳ್ದುಕಿಱಿದಾ ನುಂಬಲಂಬೆರಸುಪಾದಮಾರ್ಗ್ಗದಿಂ ರಾಮಸ್ವಾಮಿಯಲ್ಲಿಗೆಬಂದುಪಾಯನಪುರಸ್ಸ ರಂಸರ್ವ್ವಾಂಗಪ್ರಣತನಾಗಿ ಸೀತಾದೇವಿಗಂತುಳಿಗ್ಗೆಯ್ದು ವಂದನಮಾಲಾಮನೋ ಹರಮುಂ ಧ್ವಜರಾಜಿವಿರಾಜಿತಮುಂ ಮಂಗಳಾನಕಧ್ವಾನಭರಿತಭುವನಾಂತರಾಳ ಮುಮುಪಹಾರಕುಸುಮಮತ್ತಮಧುಕರಝುಂಕಾರಮುಖರಮುಮಪ್ಪಪುರಮನ ರಮನೆಯುಮನತಿವಿಭೂತಿಯಿಂ ಪುಗಿಸಿಸಮಯೋಚಿತವಿವಿಧೋಪಚಾರ ಪರಿಚ ರ್ಯ್ಯಾಚಾತುರ್ಯ್ಯಮಂ ಮೆಱೆದುಶುಭದಿನಮುಹೂರ್ತ್ತದೊಳ್ ॥

ಕಂ ॥ ಪರಿಣಯನಮಾಗೆಪದ್ಮೋ ।
ದರಂಗೆಜಿತಪದ್ಮೆಯೊಡನೆಮಂಗಳಗೀತ ॥
ಸ್ವರದೊಡನೆಮಂಗಳಾನಕ ।
ವಿರುತಿಪಳಂಚಿದುದುಗಗನದಿಗವನಿತಳಮಂ ॥ 46

ವ ॥ ಅಂತಲ್ಲಿಕತಿಪಯದಿನಮಿರ್ದ್ದಾಮೂವರುಂ ಪೂರ್ವ್ವಾಭಿಮುಖದಿಂಪಯಣಂಬೋಗಿ ವಂಶಸ್ಥಲಮೆಂಬಪೊಳಲನೆಯ್ದಿ ತತ್ಸಮೀಪದವಂಶಸ್ಥಲಗಿರಿದರೀದೇಶಮಂ ದಿವಸ ದವಸಾನಸಮಯದೊಳೆಯ್ದಿ ದೆಸೆಗೆಟ್ಟೋಡುವ ಪೌರಜನಮಂರಘುವೀರಂಕಂಡಿದೇ ಕಾರಣದಿಂದೋಡಿದಪ್ಪುದೆಂದುಬೆಸಗೊಳ್ವುದುಮವರಿಂತೆಂದರಿಂದಿಂಗೆಮೂಱುದಿನ

ಮೊದಲ್ಗೊಂಡುರಾತ್ರಿಸಮಯದೊಳ್ ಶಿಖಿಶಿಖರದೊಳತಿಭಯಂಕರಮುಮತ್ಯ
ದ್ಭುತಮುಮಾಗೆಪಲವುಸಿಡಿಲಧ್ವನಿಗಳೊಂದಾದಂತಶ್ರುತಮಪ್ಪುದೊಂದುರೌದ್ರಧ್ವ
ನಿಯಂ ಕೇಳ್ದಂಜಿಪೊಳಲೆಲ್ಲಂಯಥಾಯಥಮಾಗಿ ಯೋಡಿದಪ್ಪುದೆಂದು ಪೇಳ್ವುದು
ಮಾಧ್ವನಿಗೆಯ್ವರಾರೆಂಬುದನಾರಯ್ವಮೆಂದಾನಗಮನೇಱಿ ನೋಳ್ಪಾಗಳಲ್ಲಿಚತು
ರ್ಮ್ಮುಖಪ್ರತಿಮಾಯೋಗದೊಳ್ನಿಂದು ಶುಭಧ್ಯಾನಮನಪ್ಪುಕೆಯ್ದು ಮಹಾಋಷಿ
ಯರಂಕಂಡೆಯ್ದೆವರ್ಪ್ಪುದುಮವರಂಸುತ್ತಿ ಸುಯ್ಯುತ್ತಿರ್ದ್ದವಿಷಮವಿಷೋರಗಂಗ
ಳುಮಾಪಾದಮಸ್ತಕಂಬರಮೆಡೆವರಿಯದೆಮುಸುಱಿಮುತ್ತುತ್ತಿರ್ದ್ದವಿಷಮವೃಶ್ಚಿ
ಕಂಗಳುಂ ರಾಮಲಕ್ಷ್ಮಣರಪುಣ್ಯಪ್ರಭಾವದಿನದೃಶ್ಯಮಪ್ಪುದುಮಾಪರ್ವ್ವತದಸು
ಗಂಧಕುಸುಮಂಗಳಿಂದಾದಿವ್ಯಮುನಿಯರನರ್ಚ್ಚಿಸುತ್ತುಮಿರೆನೇಸರ್ಪ್ಪಡುವುದು
ಮತಿರೌದ್ರಮಪ್ಪ ಭೂತಬ್ಬೇತಾಳಸಮೂಹಮುಮತಿಭಯಂಕರಾಕಾರಮಾಗೆಗಜ
ಉಱಿಗರ್ಜ್ಜಿಸುವಸಿಂಹಶರಭಶಾರ್ದ್ದೂಲಂಗಳುಮತ್ಯದ್ಭುತಮಾಗೆಮಿಂಚುಮೊಳಗು
ವೆರಸುಸುರಿವಬಿಸುನೆತ್ತರಮಳೆಯುಮಿಗುರ್ವ್ವಿಸೆ ॥

ಕಂ ॥ ಪರಮಜಿನಮುನಿಗೆಯೋಗಾಂ ।
ತರಾಯಮಮರೋಪಸರ್ಗ್ಗದಿಂದಕ್ಕುಮೆನಿ ॥
ಷ್ಠುರಮಾತರಿಶ್ವಪತಿಯಿಂ ।
ತರುಸಂಚಲಿಪಂತೆಮೇರುಸಂಚಲಿಸುಗುಮೇ ॥ 47

ವ ॥ ಅಂತಾಮುನಿಗೆಮಹೋಪಸರ್ಗ್ಗಮಂಮಾಳ್ಪದೇವನ ಮಹಾರೌದ್ರಾನುಭಾವಮಂ
ಕಿಡಿಸಲೆಂದುತಮ್ಮದೇವತಾಧಿಷ್ಠಿತಧನುರ್ಯ್ಯುಗಳಮನೇಱಿಸಿ ॥

ಚ ॥ ಕೆಡೆದುದೊಮಂದರಂಧರೆಗೆಬಿದ್ದುದೊಭಾನುರಥಂನಭಸ್ಥಲಂ ।
ಪಿಡಿಗಿದುದೋಧರಿತ್ರಿಮೊಳಗಿತ್ತೊ ಮಹಾಪ್ರಳಯಾನಳಾರ್ಚ್ಚಿಯಿಂ ॥
ದೊಡೆದುದೊವಜ್ರವೇದಿಕೆಯೆನಲ್ಕಭಮಂಭೆದಿದತ್ತುನೀವಿಜೇ ।
ಪೊಡೆಯೆಬಲಾಚ್ಯುತರ್ತ್ರಿಭುವನೈಕಭಯಂಕರಚಾಪಟಂಕೃತಂ ॥ 48

ವ ॥ ಆರೌದ್ರಧ್ವನಿಕರ್ಣ್ಣಲಗ್ನಮಾಗೆ ಭಗ್ನಾಶಯನಗ್ನಿಕೇತುಹತಪ್ರಭನಾಗಿ ವಿಭಂಗ
ಜ್ಞಾನದಿನಿವರೆಂಟನೆಯಬಲದೇವ ವಾಸುದೇವರೆಂದಱಿದು ನಿಜಜ್ಯೋತಿರ್ಲ್ಲೋಕ
ಮನೋಡಿಪೊಕ್ಕನಿತ್ತಲ್ ॥

ಕಂ ॥ ತ್ರಿದಶೋಪಸರ್ಗ್ಗಮಂಬಗೆ ।
ಯದೆಕುಲನಗದಂತೆದೇಶಭೂಷಣಮುನಿಪ ॥
ರ್ಸ್ವದಮಲಶುಕ್ಲಧ್ಯಾನದೊ ।
ಳುದಾತ್ತತರಘಾತಿಗಾಯ್ತ್ತುಕದಳೀಘಾತಂ ॥ 49

ವ ॥ ಅಂತುವಿಗತಘಾತಿಚತುಷ್ಟಯರನಂತಜ್ಞಾನದಿಂನವಕೇವಲಲಬ್ಧಿಗಳಂಪಡೆವುದುಂ ॥

ಕಂ ॥ ದುಂದುಭಿನಿನಾದಮುಖರಂ ।
ಮಂದಾರನಮೇರುವಿಕಚಕುಸುಮಾಸಾರಂ ॥
ಸಂದಿಸೆಕೇವಲಿಪೂಜೆಗೆ ।
ಬಂದತ್ತುಚತುರ್ನ್ನಿಕಾಯದೇವನಿಕಾಯಂ ॥ 50

ವ ॥ ಅಂತುಬಂದುಪೂಜಿಸುವುದುಮನಂತರಮುದಾತ್ತರಾಘವಂಕಿಂಚಿದುನ್ನಮಿತಕಂಧರಂಮುಕುಳಿತಾಂಜಲಿಪುಟಂನಿಮಗುಪಸರ್ಗ್ಗಮಾದಮಾರ್ಗ್ಗಮಂಬೆಸಸೆನೆದೇಶಭೂಷಣಕೇವಲಿಗಳಿಂತೆಂದುಬೆಸಸಿದಪದ್ಮಪುರಮನಾಳ್ವವಿಜಯಪರ್ವ್ವತಕ್ಷಿತಿಪತಿಯಚರನಮೃತಸ್ವರನೆಂಬನಾತನಕುಲಾಂಗನೆಗೆತನಯರುದಿತನುಮನುದಿತನುಮೆಂಬರಾದರಾಕೆಯೊಡನಾಪುರದವಸುಭೂತಿವೆಸರವಸುಧಾಮರಂಮರೆವಾಳುತ್ತುಮಿರಲುಪಯೋಗರಾಗವೇಗದಿಂ ವಿವೇಕವಿಕಳೆಯಾಗಿಮುಂದಱಿಯದೊಂದುದಿವಸಂತನ್ನವರನಮೃತಸ್ವರನಿರೆನಮಗೆ ಮೆಚ್ಚಿದಂತೆನೆಗಳಲ್ಬಾರದೆಂಬುದುಮಾಪಾರ್ಬ್ಬನಮೃತಸ್ವರನಂದುರಿತಭೀರುವಾಗದಾರುಮಱಿಯದಂತೆಕೊಲ್ವುದುಂ ॥

ಕಂ ॥ ಅಪವಾದಕ್ಕಗಿಯದೆನರ ।
ಕಪಾತಮಂಬಗೆಯದುಮಹಾಪಾತಕಿಮು ॥
ನ್ನುಪಪತಿಯಿಂಪತಿಯಂಕೊಲಿ ।
ಸಿಪುತ್ರವಧೆಗಂಬಳಿಕ್ಕೆಬಗೆಯಂತಂದಳ್ ॥ 51

ಸ್ವೈರಿಣಿಬಗೆಬಂದಾಗಳ್ ।
ನಾರಕ್ರೀಡೆಯನೊಡರ್ಚ್ಚಲೆಂದುಪಪತಿಯಿಂ ॥
ದಾರಕರಂಕೊಲವೇಳ್ದ ।
ಳ್ದಾರುಣಕರ್ಮ್ಮಕ್ಕೆಕಾಮುಕರ್ಪ್ಪೇಸುವರೇ ॥ 52

ವ ॥ ಅಂತುಪೇಳ್ವುದುಮಾವಾತನಾಕೆಯುಸೊಸೆಕೇಳ್ದುತಂನಪುರುಷನಪ್ಪುದಿತಂಗೆಪೇಳೆವಸುಭೂತಿಯುಮೆಂಡತಿಯುಃಸ್ವರತಿಕಾರಿಣಿಯುಮಿರ್ಷ್ಣೆಯಿಂದದನೆಪಿಸುಪ್ಪೆ ಕೇಳ್ದುದಿತನುಮನುದಿತನುಂವಿದಿತವೃತ್ತಾಂತರಾಗಿವಸುಭೂತಿಗುಪಾಯದಿನಪಾಯಮಂಮಾಳ್ಪುದುಮವಂಸತ್ತುಶಾರ್ದ್ದೂಳಾಸ್ಯಮೆಂಬಮಹಾಗಹನದೊಳ್ಕಾಳಜಂಘನೆಂಬಶಬರನಾಗಿಪುಟ್ಟಿದನೆಂದುಪೇಳ್ದುಮತ್ತಮಿಂತೆಂದುಬೆಸಸಿದರಾಪದ್ಮಪುರದುದ್ಯಾನವನದೊಳ್ಸುಮತಿವರ್ದ್ಧನರೆಂಬಾಚಾರ್ಯ್ಯರ್ಬ್ಬಂದಿರ್ದ್ದರೆಂದೃಷಿನಿವೇದಕನಱಿಪೆವಿಜಯಪರ್ವ್ವತಮಹಾರಾಜಂಪೂಜೆವೆರಸುಬಂದರ್ಚ್ಚಿಸಿಪೊಡವಟ್ಟುಕುಳ್ಳಿ

ದ್ಧರ್ಥಮ್ಮಮಂ ಕೇಳ್ದು ವೈರಾಗ್ಯಪರನಾಗಿದೀಕ್ಷೆಗೊಳಲೆಂದೊಡನೆಸಹೋದರರ ಪ್ಪುದಿತನುಮನುದಿತನುಂದೀಕ್ಷೆಗೊಂಡು ತೀರ್ಥವಂದನಾರ್ಥಂ ಸಂಮೇದಶೈಲಕ್ಕೆ ಪೋಗುತ್ತಿರ್ಪ್ಪ ಸಮಯದೊಳಾಮುನಿಯುಗಳಮಂ ಕಂಡು ಭವಬದ್ಧಕ್ರೋಧದಿಂ ಕಾಲಜಂಘಂ ಕೊಲಲತಿಜಂಘಾಲನಾಗಿ ಮುಟ್ಟೆಬರ್ಪ್ಪುದುಮವರವನ ದುಷ್ಟಚೇಷ್ಟೆಯನಱಿದು ॥

ಕಂ ॥ ಉಪಸರ್ಗ್ಗಂ ಪಱಿವಡುವಿನ ।
ಮುಪಘನಮಾಹಾರಮೆಂಬಿವಂ ತೊಱೆದುಸಮಂ ॥
ತುಪಶಾಂತಕ್ಕಯ್ಯಿಕ್ಕಿರೆ ।
ಕೃಪೆಯಾಳ್ದತತ್ಪತಿದುರಾತ್ಮನಂ ಬಾಱಿಸಿದಂ ॥ 53

ವ ॥ ಎಂದು ಬೆಸಸೆ ॥

ಕಂ ॥ ಅನಿತುದಯಾಪರತೆಕಿರಾ ।
ತನಾಯಕಂಗಾದುದಾವಕಾರಣದಿನದಂ ॥
ಮುನಿಮುಖ್ಯಬೆಸಸಿಮೆನೆವಿ ।
ಶ್ವನಾದದಿಂದಿವ್ಯಯೋಗಿಹಲಿಗಿಂತೆಂದಂ ॥ 54

ವ ॥ ಯಕ್ಷನಾಮಗ್ರಾಮವಾಸಿಗಳೇಕೋದರಸ್ಸುರರೂಪನುಂ ಕರುಷನುಮೆಂಬರಲ್ಲಿಗೋರ್ವ್ವವ್ಯಾಧನೊಂದು ಪಕ್ಕಿಯುಂ ಪಿಡಿದು ತರೆ ಕರುಣಿಸಿ ಬೇಡಂಗೆ ಬೆಲೆಗೊಟ್ಟು ಬಿಡಿಸಿದೊಡಾಪಕ್ಕಿಯುಮುಪಶಮಕ್ಕೆ ಪಕ್ಕುಗೊಟ್ಟು ಸುವೆಂ ಬಿಟ್ಟು ಬೇಡವಟ್ಟಗೊಡೆಯನಾದುದಾ ಸುರೂಪನುಂ ಕರುಷನುಂ ಕಳೆದುದಿತನುಮನುದಿತನುಮಾಗಿ ಪುಟ್ಟಿದರಾ ಕಿರಾತನುಂ ಮುನ್ನಿನುಪಕಾರಂ ಕಾರಣಮಾಗೆ ಕೊಲಲೀಯದೆನಿಯಮಿಸಿದನೆಂದು ಬೆಸಸಿ ಮತ್ತಮಿಂತೆಂದರ್ ॥

ಕಂ ॥ ಸದಮಲಚರಿತಂ ತಂಮಿಂ ।
ದುದಿತೋದಿತಮಾದುದೆನಿಸಿ ಸನ್ಯಸನದೆಸ ॥
ತ್ತುದಿತಾನುದಿತಮುನೀಶ್ವರ ।
ರುದಾತ್ತರುತ್ಕೃಷ್ಟದೇವಗತಿಯುಂ ಪಡೆದರ್ ॥ 55

ವ ॥ ಮತ್ತಿತ್ತಲವರ್ಗ್ಗವಾಯುಮಂ ಬಗೆದವೇಡಂ ವಿಗತಾಸು ದುರಂತದುರ್ಗ್ಗತಿಯೊಳ್ತೊಳಲ್ದಿಂತಾನುಂ ಮನುಷ್ಯಗತಿವೆತ್ತು ತಾಪಸನಾಗಿ ಸತ್ತಾತಂ ಜ್ಯೋತಿರ್ಲ್ಲೋಕದೊಳಗ್ನಿಕೇತುವೆಂಬ ದೇವನಾದನಿತ್ತ ಭರತಕ್ಷೇತ್ರದರಿಷ್ಟಪುರಮನಾಳ್ವಪ್ರಿಯವ್ರತಮಹೀಭುಜಂಗೆ ಪದ್ಮಾವತಿಯುಂ ಕನಕಾಭೆಯುಮೆಂಬರೀರ್ವ್ವರರಸಿಯರಾದರಲ್ಲಿಪದ್ಮಾವತಿಗೆ ಮುನ್ನಮಮರಗತಿವಡೆದುದಿತಾನುದಿತರೀರ್ವ್ವರುಂ ಬಂದು ರತ್ನರಥವಿಚಿತ್ರರಥರೆಂಬ ತನಯರಾದರಾ ಜ್ಯೋತಿಷ್ಕನಲ್ಲಿಂ ಬಂದು ಕನಕಾಭೆಗೆ ತನೂಭವನನುಂ

ದರನೆಂಬನಾದನಾಪ್ರಿಯವ್ರತನುಂ ತಂನ ಮಕ್ಕೞಿಗರಸುತನಮಂ ಕೊಟ್ಟು ತೊಱೆ
ದಾಱುದಿವಸಂ ಸನ್ಯಸನಂಗೆಯ್ದು ಸಮಾಧಿಮರಣದಿಂ ಸ್ವರ್ಗ್ಗಕ್ಕೆ ಪೋದನಿತ್ತಲರಸು
ಮಗನೊರ್ವ್ವಂ ನಿಜತನೂಭವೆಯಂ ಶ್ರೀಪ್ರಭೆಯಂ ರತ್ನರಥಂಗೆ ಮದುವೆಮಾಳ್ಪೆನೆಂ
ದಿರ್ಪ್ಪುದುಮಾಕೆಯನನುಂದರಂ ತನಗೆ ಬೇಡಿ ಪಡೆಯದೆ ಕೊಸುಗುಡದಾತನಮೇಲೆತ್ತಿ ಬ
ರ್ಪ್ಪುದುಂ ರತ್ನರಥನುಂ ವಿಚಿತ್ರರಥನುಂ ಕೇಳ್ದು ಮಾಱಿದು ದಾೞಿಯಿಟ್ಟು ಸುತ್ತಿಮುತ್ತಿ ॥

ಕಂ ॥ ಪಿಡಿದು ಪರಿಭವಿಸಿ ಕೊಲ್ಲದೆ ।
ಕಡಂಗಿ ಪೊಱಮಡಿಸಿ ಕಳೆದು ನಾಡಿಂ ದೈನ್ಯಂ ॥
ಬಡಿಸಿದೊಡನುಂದರಂ ಬಿ ।
ಲ್ವಿಡಿದೇವಮನುಗ್ರಕೋಪಿತಾಪಸನಾದಂ ॥ 56

ವ ॥ ಇತ್ತಲಾ ರತ್ನರಥ ವಿಚಿತ್ರರಥರ್ಚ್ಚಿರಕಾಲಮರಸುಗೆಯ್ಯುತ್ತಿರ್ದ್ದು ವೈರಾಗ್ಯದಿಂ ತೊ
ಱೆದು ತಪಂಗೆಯ್ದು ಶರೀರಭಾರಮನಿೞಿಪಿ ನಾಕಲೋಕಸುಖಮನನುಭವಿಸಿ ಬಂದು ಸಿ
ದ್ಧಾರ್ತ್ಥನಗರಮನಾಳ್ವ ಕ್ಷೇಮಂಕರನರೇಂದ್ರಂಗಂ ವಿಮಳಾದೇವಿಗಂ ದೇಶಭೂಷಣ
ಕುಲಭೂಷಣರೆಂಬ ತನಯರಾಃಪುಟ್ಟಿದು ವೆಂಮನೆಂಮ ತಂದೆ ವಿದ್ಯಾಭ್ಯಾಸನಿಮಿತ್ತಂ
ಮತ್ತೊಂದು ಪುರದೊಳಿರಿಸಿ ಸಕಲವಿದ್ಯೆಗಳುಮಂ ಸಾಗರಘೋಷರೆಂಬುಪಾಧ್ಯಾಯ
ರ್ಕ್ಕಲಿಸೆ ಕಲ್ತು ಗುರುಗೃಹಾಗಮನಪೂಜಾನಂತರಂ ಮಹಾವಿಭೂತಿಯಿನೆಂಮ ಪುರ
ಮಂಪುಗುವಸಮಯದೊಳ್ಕೆಯ್ಗೆಯ್ದು ಕಱುಮಾಡದ ಮೇಲಿರ್ದ್ದ ಕನ್ನೆಯಂ ಕಂಡೆ
ಮಗೆ ಪರಿಣಯನಕ್ಕೆ ತಂದರಸುಮಗಳೆಂದು ಬಗೆದು ಬಯಸಿ ನೋಡುತ್ತಿರಮನೆಯಂ
ಪೊಕ್ಕಾಂ ಮೊಡಹುಟ್ಟಿದಳೆಂದಱಿದು ಪೊಲ್ಲದಂ ಬಗೆದೆವೆಂದದುವೆ ನಿರ್ವ್ವೇಗವಾಗೆ
ತೊಱೆದು ತಪಂಬಟ್ಟು ಚಾರಣಋದ್ಧಿವಡೆದು ಪೋಗಲೊಡಮೆಮಗೆ ಮೂಱುಂ ಜನ್ಮ
ದೊಳಂ ಜನಕನಾದ ನಿರತಿಶಯಪ್ರೇಮಾನುಬಂಧದಿಂ ಕ್ಷೇಮಂಕರಮಹಾರಾಜನೆಂಮ
ಗಳ್ಗೆ ಗೆಸ್ಸೈರಿಸಲಾಱದಾಹಾರಶರೀರನಿವೃತ್ತಿಗೆಯ್ದು ಮಹಿಪಿಗರುಡಾಧಿನಾಥನಾಗಿ ಮ
ಹಾಲೋಚನಾಭಿಧಾನಮಂ ಪಡೆದೀಗಳೆಂಮ ಕೇವಲಪ್ರಾಪ್ತಿಯನಱಿದು ಪೂಜಿಸಲ್ಬಂ
ದನೆಂದು ಬೆಸಸಿ ॥

ಕಂ ॥ ತಾಪಸರೂಪಂ ವಿಗತಾ ।
ಲಾಪಂ ಮುಂ ಪೇಳ್ದನುಂದರಂ ಕೌಮುದಿಯೆಂ ॥
ಬಾಹುರಮನಗಲದಿರ್ಪ್ಪಂ ।
ಕೌಪೀನಧರಂ ಜಟಾಧರಂ ದಂಡಧರಂ ॥ 57

ಆಪುರಪತಿ ಪೊಗಳ್ವುದುಮಾ ।
ತಾಪಸನಂ ಮದನವೇಗೆ ತತ್ಪತಿಗೆ ಮರು ॥
ಚ್ಚಾಪದೊಳಮಧಿಪ ಮಿಥ್ಯಾ ।
ಳಾಪದೊಳಂ ಮಾಡದಿರ್ಗ್ಗುಣಾರೋಪಣಮಂ ॥ 58

ವ ॥ ಎನೆಸುಮುಖಂವಿಮುಖನಾಗೆ ॥

ಸ್ವಾಗತ ॥ ಕೆಂಪನುಂಮಸಿಕೋಟಿಸದಿರ್ಪ್ಪ ।
ಣ್ಣಿಂಮನುಜ್ಞೆ ದೊರೆಕೊಂಡೊಡೆಸಾಲ್ಗುಂ ॥
ನಿಂಮನಚ್ಚಿನತಪೋಧನನಂತಂ ।
ದೆಂಮಕಾಲ್ಗೆಱಗುವಂತಿರೆಮಾಳ್ಪಂ ॥ 59

ವ ॥ ಎಂದೊಡಂಬಡಿಸಿನಿಜತನೂಜೆಯನೇಕಾಂತಕ್ಕೆ ಕರೆದುತಾಪಸನತಪಮಂಕಿಡಿಸುವುಪಾಯಮಂಕಲಿಸಿಕಳಿಪುವುದುಂ ॥

ಕಂ ॥ ಜನನಿಯಬೆಸದಿಂಸೆಂಪೋ ।
ಹನವಿದ್ಯೆಯಮೂರ್ತ್ತಿಗೊಂಡುಬರ್ಪ್ಪಂತೆವೊಲಾ ॥
ಮುನಿಯಿರ್ದ್ದೆಡೆಗೊರ್ವ್ವಳ್ಪೊ ।
ವಿನಪೊತ್ತುಱೊಳಾರುಮಿಲ್ಲದೆಡೆಯೊಳ್ಬಂದಳ್ ॥ 60

ವ ॥ ಆಸಮಯದೊಳ್ಸೂಕ್ತಮಂಜಪಿಯಿಸುತಿರ್ದ್ದಾಕೆಯಕಾಲಪಳಂಚಿನುಂಗುರದಿಂಚರಮತನುಚಾಪಟಂಕಾರದಂತೆಕಿವಿಯಂಪಳಂಚೆಜಪಮಂಮಱೆದುಕಣ್ಣಂತೆಱೆದುನೋಡೆಘನಸ್ತನಾದ್ಯವಯವಂಗಳಭಂಗಿತಪೋಭಂಗಮಂಮಾಡೆ ॥

ಕಂ ॥ ಸ್ಮರರಾಗಂಮನದೊಳ್ಪೇ ।
ರ್ವ್ವರಿವಿನೆಗಂಬ್ರಹ್ಮಚರ್ಯ್ಯನಿಷ್ಠಾಗರಿಮಂ ॥
ಕರಗುವಿನಮೆಳಸೆಕಣ್ಗ ।
ಳ್ಪೆರಭಿಕ್ಷುಕನಾಕೆಗಂದಿನೊಳಗಿಂತೆಂದಂ ॥ 61

ವ ॥ ನೀನೀಸಂಜೆಯೊಳಂಜದೆನೆರವಿಲ್ಲದೆಬಂದಬರವಾವುದೆಂಬುದುವೆಂಮಪ್ಪನೆವಮಿಲ್ಲದೆನಗೆಮುನಿದುಜಡಿದುನುಡಿಯೆಬಂದುನಿಂಮಂಕಂಡುಸಂತೋಷದಂತಮನೆಯ್ದಿದೆನೆನಗೆನಿಂಮದೀಕ್ಷೆಯಂಕುಡುವುದನೆರಿದಟವೆಂದುಬಗೆದಿದಾವಗಹನಮೀಗಳ್ಕೈಕೊಳ್ಳೆಂಬುದುಮಾಕೆನಾಂಕೊಡಗೊಸೆನಪ್ಪೆನದುಕಾರಣದಿನೆಂಮತಾಯಲ್ಲಿಗೆವೋಗಿಬೇಡಿಮೆನೆಪೆತ್ತಮಗಳನೆಮಗೆಕುಡಲಱಿಯರೆಂಬುದುಮಾನರಸಿನಡೆಪಿದಕೊಡಗೊಸೆನೆನ್ನಂಕುಡುವರೆಂಬುದುಂತಾಪಸಂಮದನಸಂತಾಪನಸಂಮೋಹನಶರತಾಪಕ್ಕೆಸುಗಿದುಕಯ್ವಿಡಿಯಲಡಸಿಸುವುದುಂನೀವೇಕೆತುರಿಪಂಗೆಯ್ವಿರೆಂಮರಸಿಯಂಪ್ರಾರ್ತ್ಥಿಸಿಪೊಡವಟ್ಟುಬೇಡಿಕೊಂಡುವಿಧಿಪೂರ್ವ್ವಕಂಮದುವೆನಿಲ್ವುದೆಂದೊಡಂಬಡೆನುಡಿದೊಡಗೊಂಡುಪೋಪುದುಂ ॥

ಕಂ॥ ಕಂನೆಯಬಳಿಸಂದಿನನೆಂ ।
ಬಂನಂಮನಸಿಜನಪೂವಿನಂಬಿನವಳಿಯೊಳ್ ॥
ಕಂನೆಯಬಳಿಸಂದಂಮುನಿ ।
ತಂನತಪಸ್ತೇಜದೆಸಕವೊಳಸಾರ್ವಿನೆಗಂ ॥ 62

ವ॥ ಅಂತುರಾತ್ರಿಸಮಯದೊಳ್ರಾಜಪುತ್ರಿಯಬಳಿವಿಡಿದುಬಂದುರಾಜಸದನಮಂಪೊಕ್ಕುಮದನವೇಗೆಗೆಕಯ್ಮುಗಿದುನಿಂದುನಿಂಮನಡಪಿದಮಗಳಪ್ಪನಾಗದತ್ತೆಯನೆಮಗಿತ್ತುಕನ್ಯಾದಾನಫಲಮಂಪಡೆವುದೆಂದುಸರ್ವಾಂಗಪ್ರೀತನಾಗಿಪೂರ್ವದುಮಾಸಮಯದೊಳರಸನರಸಿಯುಲ್ಲಿಗೆಬಂದುಗೊರವನಿರವಂಕಂಡುಕಡುಮುಳಿದುಪಲತೆಱದಿಂಪರಿಭವಿಸಿಪೊಜಮಡಿಸಿಕಳೆಯೆ ॥

ಕಂ॥ ಪರಿಭವಮಂಪೊರ್ದ್ದಿದದು ।
ಷ್ಪರಿಣತಿಯಿಂಕಳಿಪಿಕಾಲಮಂದುರ್ಗ್ಗತಿಯೊ ॥
ಳ್ತಿರಿತಂದುಮನುಜಗತಿಯೊ ।
ಳ್ದಿರಂತದುಷ್ಕರ್ಮ್ಮಫಲಮನನುಭವಿಸುತ್ತುಂ ॥ 63

ವ॥ ಮತ್ತಂತಾಪಸರೂಪಂತಳೆದುಕಾಯಕ್ಲೇಶದಿಂಜ್ಯೋತಿರ್ಲ್ಲೋಕದೊಳಗ್ನಿಕೇತುವೆಂಬದೇವನಾದನಿತ್ತಲನಂತವೀರ್ಯ್ಯಕೇವಳಿಗಳ ಪೂಜೆಗೆಬಂದದೇವಸಭೆಯೊಳೋರ್ವ್ವಂದೇವಂಮುನಿಸುವ್ರತತೀರ್ತ್ಥಕರಸಂತಾನದೊಳ್ನಿಮ್ಮಂತೆಕೇವಳಿಗಳಾಗಿಧರ್ಮ್ಮೋಪದೇಶಂಗೆಯ್ವರಾರೆಂದುಬೆಸಗೊಳ್ವುದುಂ ॥

ಕಂ॥ ಜಲಜಲಿಸೆದಶನಕಿರಣಾ ।
ವಲಿಮೃದುಮಧುರಪ್ರಣಾದದಿಂಕೇವಳಿಕೇ ॥
ವಲಲಬ್ಧಿದೇಶಭೂಷಣ ।
ಕುಲಭೂಷಣದಿವ್ಯಮುನಿಯುಗಕ್ಕಕ್ಕುಮೆನಲ್ ॥ 64

ವ॥ ಅದನಾಸಭೆಯೊಳಿರ್ದ್ದಗ್ನಿಕೇತುದೇವಂಕೇಳ್ದಂಮೊಳಾದಜನ್ಮಾಂತರವೈರಮಂವಿಭಂಗಜ್ಞಾನದಿಂದಱಿದೀಗಳೆಮಗೆಯೋಗವಿಘ್ನೋದ್ಯೋಗದೊಳಿರ್ದ್ದನೀಂಪುಣ್ಯಾಪುರುಷನುಂಚರಮದೇಹಧಾರಿಯುಮಪ್ಪುದನಱಿದೀತಂನಿಂನಮುಳಿಸಿಂಗೆಭೀತನಾಗಿಮುನ್ನಿನತಂನಮುಳಿಸನುಳಿದುಪಶಾಂತಸ್ವಾಂತನೀಸಭೆಗೆವಂದಿರ್ದ್ದನೆಂದುರಾಘವಂಗೆಬೆಸಸುವುದುಮದೆಲ್ಲಮಂಗರುಡಾಧಿಪಂಕೇಳ್ದುಸಂತೋಷದಂತಮನೆಯ್ದಿ ॥

ಉ॥ ಮತ್ತನಯೋಪಸರ್ಗ್ಗಮನದಿರ್ಪ್ಪದನಿಂನಗೂಪ್ರತಿಷ್ಠೆಲೋ ।
ಕೋತ್ತರಮಾಯ್ತುನಿಂನಸಮಯಪ್ರತಿಪಾಲನಶೀಲಶಕ್ತಿಸಂ ॥
ಪತ್ತಿಗೆಮೆಚ್ಚಿದೆಂನನೆವುದುಂನೆನೆದಾಗಳೆಬರ್ಪ್ಪನೆಂದುಮೆ ।
ಚ್ಚಿತ್ತನಿದೇನವಮಾನುಷಮೊರಾಘವಸಂಚಿತಪುಣ್ಯಸಂಚಯಂ ॥ 65

ಮ॥ಸ್ರ॥ ನರನಾಥಂಗಿತ್ತುತಂನಂನೆನೆದಸಮಯದೊಳ್ಬರ್ಪ್ಪೆನಾನೆಂದುಮುಂನಂ ।
ಚರಿತಾರ್ತ್ಥಂಭಕ್ತಿಭಾರಾನತಮಣಿಮಕುಟಂಹರ್ಷಬಾಷ್ಪಾಂಬುವರ್ಷಂ ॥
ಗರುಡಂಬೀಳ್ಕೊಂಡುತತ್ಕೇವಳಿಯುಪದಪಯೋಜಂಗಳಂತಂನತೊಟ್ಟು ।
ಭರಣಪ್ರದ್ಯೋತಿಯಿಂದಸ್ಖಲಿತಮೆನೆನಭಂತನ್ನಲೋಕಕ್ಕೆಪೋದಂ ॥ 66

ಕಂ॥ ಭೂವಂದ್ಯದೇಶಭೂಷಣ ।
ಕೇವಳಿಗಳಸಮವಸೃತಿವಿಹಾರಿಸಿದುದುಭ ॥
ವ್ಯಾವಳಿಗಳನಾರ್ಯ್ಯಾಖಂ ।
ಡಾವಳಿಯೊಳ್ತಣಿಪಲೆಂದುಧರ್ಮ್ಮಾಮೃತದಿಂ ॥ 67

ವ॥ ತದನಂತರಂವಂಶಸ್ಥಲಪುರಮನಾಳ್ವಸುಪ್ರಭನರೇಂದ್ರಂಬಂದುರಾಮಲಕ್ಷ್ಮಣರಂ ಪೂಜಿಸಿವಂಶಸ್ಥಲನಗೋಪರಿಮತಳದೊಳ್ವಿಚಿತ್ರಚೈತ್ಯಭವನಂಗಳಿಂಬಹುಪ್ರಾಕಾರಪ್ರಾಸಾದಪಙ್ತಿಗಳಿಂದನೇಕಾತ್ಯಂತಕಮನೀಯಮಪ್ಪಂತುಪೊಳಲಂಮಾಡಿಸಿರಾಮಲಕ್ಷ್ಮಣರನಾಪೊಳಲೊಳಿರಿಸಿಪೆಸರ್ಕೆಯ್ವುತ್ತಿರೆವಂಶಸ್ಥಲಗಿರಿಗೆರಾಮಗಿರಿಯೆಂಬ ಪೆಸರಾಯ್ತುಮತ್ತಮವರಲ್ಲಿಂತಳರ್ದುತೆಂಕಮೊಗದೆನಿಚ್ಛಾಪಯಣಂಗಳಿಂಬಂದು ಪೇರ್ವ್ವೞುವಂಪೊಕ್ಕುಕರ್ಣ್ಣರವೆಯೆಂಬತೊಱೆಯಂಪಾಯ್ದುಮದಱತೆಂಕಣತ ಡಿಯೊಳೊಂದುರಮ್ಯಪ್ರದೇಶದೊಳ್ವಿಶ್ರಮಿಸಿರ್ಪ್ಪುದುಮಲ್ಲಿಗೆಸುಗುಪ್ತಗುಪ್ತರೆಂಬಗ ಗನಚಾರಣಯುಗಳಂಗಗನತಳದಿನವನೀತಳಕ್ಕವತರಿಸಿಮಾಸೋಪವಾಸದಪಾರಣೆ ಯೊಳ್ಕಾಂತಾರಚರ್ಯ್ಯಾಮಾರ್ಗ್ಗದಿಂಬರ್ಪ್ಪುದುಮವರಂದೂರದೊಳ್ಕಂಡು ॥

ಮ॥ಸ್ರ॥ ದೆಸೆಯಂಭೂಷಾಂಶುಗಳ್ಚಿತ್ರಿಸೆಪದತಳಮಾತ್ಮೀಯಶೋಣಾಂಶುವಿಂದ ।
ರ್ಚ್ಚಿಸೆಧಾತ್ರೀದೇವಿಯಂಸಂಭ್ರಮರಸವಶನೆಳ್ತಂದುಸದ್ಭಕ್ತಿಯಿಂವಂ ॥
ದಿಸಿರಾಗೋತ್ಕಂಠನುಚ್ಚಾಸನದೊಳಿರಿಸಿದಿವ್ಯಾರ್ಚ್ಚನಾದ್ರವ್ಯದಿಂದ ।
ರ್ಚ್ಚಿಸಿದಂಸಾಹಿತ್ಯವಿದ್ಯಾಧರನಮಲಯಶಂಭಾರತೀಕರ್ಣ್ಣಪೂರಂ ॥ 68

ಗದ್ಯ॥ ಇದುಪರಮಜಿನಸಮಯಕುಮುದಿನೀಶರಚ್ಚಂದ್ರಬಾಲಚಂದ್ರಮುನೀಂದ್ರಚರಣ ನಖಕಿರಣಚಂದ್ರಿಕಾಚಕೋರಂಭಾರತೀಕರ್ಣ್ಣಪೂರಂ ಶ್ರೀಮದಭಿನವಪಂಪವಿರಚಿ ತಮಪ್ಪರಾಮಚಂದ್ರಚರಿತಪುರಾಣದೊಳ್ ಚಾರಣಯುಗಳದರ್ಶನಮಪ್ಪಮಾ ಶ್ವಾಸಂ ॥

ನವಮಾಶ್ವಾಸ ಪ್ರಾರಂಭಃ

—:0:—

ಕಂ॥ ಶ್ರೀಪದಮನೀವಮುನಿಪ ।
ಶ್ರೀಪದಮಂಪರಮಭಕ್ತಿಯಿಂದರ್ಚ್ಚಿಸಿಪು ॥
ಶ್ರ್ಯೋಪಾರ್ಜ್ಜನಮಂತಳೆದನಿ ।
ಳಾಪೂಜಿತಚಾರುಚರಿತನಭಿನವಪಂಪಂ ॥ 1

ವ॥ ಅಂತರ್ಚ್ಚಿಸಿವಿಧಿಪೂರ್ವ್ವಕಂನಿರವದ್ಯಾಹಾರಮಂಕುಡುವುದುಮವರ್ಸ್ವಯಮ
ಸಂರಕ್ಷಣಾರ್ತ್ಥಮಪ್ಪಕಾಯಸ್ಥಿತಿಯಂನಿರ್ವ್ವರ್ತ್ತಿಸಿ ಕೈಯೆತ್ತಿಕೊಂಡಕ್ಷಯದಾನ
ಮಸ್ತೆಂಬುದುಂ ॥

ಕಂ॥ ಏನೆಸೆದುದೊರೈವೃಷ್ಟಿಃ ।
ಮಾನಿಲನಳಿಮಿಳಿತಕುಸುಮವರ್ಷ್ಷಂಸುರಭೇ ॥
ರೀನಿನದಂದಿವಿಜರಹೋ ।
ಧ್ವಾನಶ್ರುತಿನೆಗಳ್ನೆಗಳ್ದಪಂಚಾಶ್ಚರ್ಯ್ಯಂ ॥ 2

ವ॥ ಆಗಳವರತಪಸ್ಸಾಮರ್ತ್ಥ್ಯಕ್ಕೆರಾಮಾದಿಗಳ್ರೋಮಾಂಚಕಂಚುಕಿತದೇಹರಾಗಿಧ
ರ್ಮ್ಮಕಥಾಶ್ರವಣಪ್ರಸಂಗದೊಳಿರ್ಪ್ಪುದುಮವರಿದಿರಿನೊಳಿರ್ದ್ದವಿಶಾಲಸಾಲದ್ರುಮ
ಶಾಖಾರೂಢನಾಗಿರ್ದ್ದ ॥

ಉ॥ ಪೋದಭವಪ್ರಪಂಚದಚರಿತಂಮುನಿದರ್ಶನಮಾತ್ರದಿಂಮನ ।
ಕ್ಕಾದೊಡೆಪಾಪಸಂಚಯಮನಿಂನಪವರ್ತ್ತಿಪೆನೆಂದುಬಂದುಪಾ ॥
ದೋದಕದೊಳ್ಪೊರಳ್ದು ಕನಕಪ್ರಭೆವೆತ್ತುಪದೋಪಕಂಠಲ ।
ಗ್ನೋದರಮಸ್ತಕಂವಿನತನಿರ್ದ್ದುದುಪರ್ದ್ದುಪಶಾಂತಚೇತಸಂ ॥ 3

ವ॥ ಆಗಳದಂಕಂಡುರಾಘವನವರತಪಸ್ಸಮೃದ್ಧಿಯಂಸೀತೆಗಂಸೌಮಿತ್ರಿಗಮಭಿವರ್ಣ್ಣಿ
ಸಿಮುನಿಗೆಮುಗಿದಕೈವೆರಸುಹಿತಾಹಿತವಿವೇಕವಿಕಲನುಂವಿಜಾತೀಯನುಮಪ್ಪವಿ
ಹಂಗಮುಪಶಮಕ್ಕೆಬಂದಕಾರಣಮೇನೆಂಬುದುಂಚಾರಣಋಷಿಯರಿಂತೆಂದುಪಸಸಿ
ದರೀಮಹಾಗಹನಂಮುಂನೆಕರ್ಣ್ಣಕುಂಡಲಪುರಪ್ರಮುಖನಿಖಿಲಗ್ರಾಮಸಂಕೀರ್ಣ್ಣ
ಮದನಾಳ್ವಂದಂಡಕನೆಂಬರಸನಾತನಪೆಂಡತಿದುರ್ಮ್ಮನಸ್ಕೆಮಸ್ಕರಿಸಮಯಮಂಪಿ
ಡಿದಿರ್ಪ್ಪಳಾದಂಡಕನುಮೊರ್ಮ್ಮೆಪುರಬಹಿಃಪುರದೊಳ್ಕಲ್ಮೆಲೆನಿಂದಮಹಾಋಷಿಯ
ರಂನೋಡುತ್ತುಂಪೋಗಿಪೇಂಟೆವಡೆಯದೆಬಂದವಿವೇಕಿಯಪ್ಪುದಱಿಂದವರಕೊರಲೊ

ಳೊಂದುಸತ್ತ್ವಮಂಸುತ್ತಿಪೋದೊಡವರುಪಸರ್ಗಂಪಿಂಗುವಿನಂಕಮ್ಮೆತ್ತವೆಂದಿ ರೆಮತೊತ್ತೊಂದುದಿವಸವಾದೆಸೆಯನೆಮೃಗಯಾನಿಮಿತ್ತಂದಂಡಕಂಪೋಗುತ್ತುಮಿರ ಲೋರ್ವ್ವನವರಕೊರಲೊಳಿರ್ದ್ದ ಕಾಳೋರಗನಕಳೇವರಮಂಕಳೆವುದಂಕಂಡಱಿ ಯದಂತಿದೇನೆಂದುಪೆಸಗೊಳ್ವುದುಂ ॥

ಕಂ ॥ ಆರೆಂದುಮಱಿಯೆನೋರ್ವ್ವಂ ।
ಕ್ರೂರಾತ್ಮಂದಿವ್ಯಯತಿಗಿದಂಮಾಡಿದುರಾ ॥
ಚಾರಂನರಕಾಯುಷ್ಯ ।
ಕ್ಕಾರಂಭಿಗನಾದನೆಂದುಪೆಳ್ಕುಱೆನುಡಿದಂ ॥ 4

ದಂಡಕನಾನುಡಿಗೆಭಯಂ ।
ಗೊಂಡಂಯತಿಪತಿಯಧೈರ್ಯ್ಯಮಂಕಂಡುಗುಣಂ ॥
ಗೊಂಡಂಪದಾನತಂಕ್ಷಮೆ ।
ಗೊಂಡಂಭವ್ಯಂಗೆಸಹಜಮುಪಶಮಭಾವಂ ॥ 5

ಕ್ಷಮಿಯಿಸುವುದೆಂನಗೆಯ್ದಱಿ ।
ಯಮೆಗೆಂದಡಿಗೆಱಗೆದಂಡಕಂಮುನಿನುಡಿದಂ ॥
ಕ್ಷಮಿಯಿಸುವುದೆಮುಖ್ಯಂಸಂ ।
ಯಮಕ್ಕೆನಿಶ್ಶಲ್ಯನಲ್ಲದಂಸಂಯಮಿಯೇ ॥ 6

ಚ ॥ ಎಡಪಿದಕಲ್ಗೆತಾಗಿದಮರಕ್ಕಿನಿಸಂಮುನಿಸಂಮನಕ್ಕೆತ ।
ಪ್ಪೊಡೆತರಲಕ್ಕುಮನ್ಯರೊಳಮನ್ಯಭವಂಗಳೊಳಾತ್ತರೌದ್ರದಿಂ ॥
ದೊಡರಿಸಿದಾತ್ಮಕರ್ಮ್ಮಫಲಮಂತವಿಪಲ್ಲಿಸಹಾಯವೃತ್ತಿಯುಂ ।
ಪಡೆವಸುಹೃಜ್ಜನಕ್ಕೆಮುನಿಪಂಮುನಿದಂದುಕೃತಘ್ನನಲ್ಲವೇ ॥ 7

ವ ॥ ಎಂದಹಿಂಸಾರೂಪಮಪ್ಪಧರ್ಮ್ಮಮನುಪದೇಶಂಗೆಯ್ಯೆದಂಡಕನದಂಕೈಕೊಂಡಾ ಕ್ರಮದೊಳೆನಡೆಯುತ್ತುಮಿರೆ ॥

ಕಂ ॥ ಅರಸಿಯುಮಮಾತ್ಯನುಂಪಾ ।
ಪರತಮ್ಮರ್ಧುಮದ್ಯಮಾಂಸಸೇವಾಸಕ್ತ ॥
ನ್ನಿರವದ್ಯಮನರಸನಸ ।
ಚ್ಚರಿತ್ರಮಂಕಿಡಿಸುವಂತುಮಂತಣಮಿರ್ದ್ದರ್ ॥ 8

ವ ॥ ಅಂತುತಮಗಪಾಯಮನೊಡರ್ಚ್ಚುವುಪಾಯಮಂಚಿಚ್ಛಿಸಿ ॥

ಕಂ ॥ ಕಳವೆಂಮಿಥ್ಯೆಯನೇಱಿಸಿ ।
ಕಲತ್ರದೊಳ್ಪೊಲ್ಲಕೆಯ್ದರೆಂದಿಲ್ಲದುದಂ ॥
ಗೞಿಪಿದೊಡೆದಂಡಕಂಕಡು ।
ಮುೞಿದಂಋುಷಿಯುಗ್ರವಮಾಯೆಮೋಹಿಸದಾರಂ ॥ 9

ಪೞಿಗಂಜದೆಕಣ್ಣೆಱೆಜಪ ।
ರೞಿನುಡಿದಿಟಮೆಂದುಡಂಗುರಂಬಡಿಯಿಸಿಕಾ ॥
ಪೞಿಯೆಪೊಱಮಡಿಸಿಕಳೆದಂ ।
ಪೊೞಲಿಂದವಿಚಾರಿಜೈನಮುನಿಸಂಕುಲಮಂ ॥ 10

ವ ॥ ಅಂತುಋುಷಿರೂಪಕನೂರಂಪೊಕ್ಕೊಡೆಕೊಲ್ವೆನೆಂದಾಣೆಯಿಟ್ಟುಪೊಱಮಡಿಸಿಕ
ಳೆವುದುಂ ॥

ಕಂ ॥ ಅಱಿಯದೆಪೊೞಲಂಪೊಗೆಕೆಲ ।
ರೞುಗುಲಿಋುಷಿಯುಗ್ರಮುನಿದುತಂನಾಜ್ಞೆಗೆಟೆ ॥
ಳ್ದುಱರೆಂದುಕೊಂದುಪಾತಕಿ ।
ತೆಱೆದಂಪುಗಲೆಂದುನಿರಯದರರೀಪುಟಮಂ ॥ 11

ವ ॥ ಅಂತುಋುಷಿವಧೆಗೆಯ್ದುತ್ಕಟಮಪ್ಪಪಾಪಮಂಸದ್ಯಃಫಲರೂಪಮೆಂದಂಡಕನುಪಾ
ರ್ಜ್ಜಿಸುತ್ತುಮಿರೆಮತ್ತೊಂದುದಿವಸದಾಪುರಕ್ಕೆ ಮಹಾತಪೋಧನರೇಕವಿಹಾರಿಗ
ಳ್ಬರುತ್ತುಮಿರೆವಾರ್ಬ್ಬೆಟ್ಟೆಯೊಳೋರ್ವ್ವಂಕಂಡುಮಗುೞೆಬಿಜಯಂಗೆಯ್ವೆಮೆನೆ
ಕಾರಣಮೇನೆಂಬುದುಮಿಾಪೊೞಲನಾಳ್ವನೃಪಂನಿಷ್ಕೃಪಂನಿಷ್ಕಾರಣಮನೇಕಋು
ಷಿಸಂಘಾತಮಂಘಾತಿಸಿದನೆಂಬುದುಮಾನುಡಿಯೊಳೊಗೆದ ಕರುಣಾರಸಮೊಕಲಾಪ
ಕಿಂಪಾಕಬೀಜಮನಂಕುರಿತಂಮಾಡೆ ॥

ಮ ॥ ಅರಸಾಂಬುಱಿಪರೆಂನನಾರೆನಗೆಱಾತುದ್ಧಾಂತಮುಂಟೆಂನದೋಃ ।
ಪರಿಘಂದುರ್ದ್ಧರಮೆಂದುಸಾಧುಜನಮಂನಿಷ್ಕಾರಣಂಕೊಂದನೇ ॥
ದುರಿತಕ್ಕಂಜನೆದುರ್ಯ್ಯಶಕ್ಕೆಗಿಯನೇಸೇೞೆಂದುಕಕ್ಕಂಡಮಾ ।
ಗಿರೆಪುರ್ವ್ವೆರ್ವ್ವಿಪೊದಳ್ದುದಾಮುನಿಗೆಸರ್ವ್ವಾಗ್ರಾಸಿಕೋಪಾನಲಂ ॥ 12

ಕಂ ॥ ಅರಸನನರಸಿಯುನೂರಂ ।
ಪರಿಜನಮಂನಾಡನಡವಿಯುಂಬೆಟ್ಟೊಳಗಾ ॥
ಗಿರೆಮುನಿತೇಜೋವೃದ್ಧಿಯಿ ।
ನುರುಪಿದನಣಕಕ್ಕೆಸವಣನುಂಸ್ಥೈರಿಪನೇ ॥ 13

ಮ ॥ ಸಕಳತ್ರಂಕ್ಷಣಮಾತ್ರದಿಂವಿಲಯಮಗ್ನಿಜ್ವಾಲೆವೋಲ್ಸುಟ್ಟುದಂ ।
ಡಕನಂನಂದಿದುದಿಲ್ಲವೇಳ್ಪೆಸರಿಲ್ಲೆಂಬಂನೆಗಂವಂಶರಾ ॥
ಜಕವಂಮಾಮಭುಜಾಗ್ರದೊಳ್ಮ್ರನಿಯತೇಜೋವೃದ್ಧಿಯಿಂದಾದಪಾ ।
ವಕನಾಸ್ವಾದಿಸಿದತ್ತಿದೇವಿರಿದೊಪೇಳಾಪಾತಕಂಗೆಂಬಿನಂ ॥ 14

ಕಂ ॥ ಸುಡುವುದುಕಿಚ್ಚಲ್ಲದೆಗತಿ ।
ಗಿಡಿಸದುಕೋಪಾಗ್ನಿಸುಟ್ಟೊಡಲಂಗತಿಯುಂ ॥
ಕಿಡಿಸಿದುದಾಯತಿಗೆನಲೇಂ ।
ಪಡೆವಾತಱಿವುಳ್ಳನುೞಿಯದಿರ್ಪ್ಪನೆಮುಳಿಸಂ ॥ 15

ವ ॥ ಅಂತು ಸಾಧುಸಂಘವಧೆಗೆಯ್ಸಿದವಧುವುಮಮಾತ್ಯನುಂವಧಕನಪ್ಪದಂಡಕನುಂ ಕ್ರೋಧಕ್ಕೆಸಂದತಪೋಧನನುಮಧೋಗತಿಗೆಸಂದರಾದಂಡಕನೇೞನೆಯನರಕದಂ ಡನೆಗೊಳಗಾಗಿಬೞಿಯಂದುರ್ಗ್ಗತಿಗಳೊಳ್ತೊೞಲ್ದೀಗಳ್ಪರ್ದ್ದಾಗಿರ್ದ್ದನೆನೆಕೇಳ್ದು ದಕ್ಕೆಖಗಂಬೇದಿಸೆನೀಂಮುಂನವಱಿವುನೆಱಿಯದೆನರಕಾದಿದುಃಖಮನನುಭವಿಸಿದೆ ನಿನಗೀಗಳೆಂಮಂಕಂಡದೊಸೆಱಿಂಕರ್ಮ್ಮಬಂಧಂಶಿಥಿಲಮಾದುದೆಂದದಱಿಮನೋ ವಿಷಾದಮಂಕಳೆದದಕ್ಕೆಲಬ್ಧಿದೊರೆಕೊಂಡುದೆಂದಱಿದುಸಮ್ಯಗ್ದರ್ಶನಪೂರ್ವ್ವಕ ಮಣುವ್ರತಮಂಕೊಟ್ಟುರಾಮಲಕ್ಷ್ಮಣರುಮಂ ಸೀತೆಯುಮಂಪರಸಿಗಗನಚಾರ ಣರ್ಪೋಪುದುಂ ॥

ಚ ॥ ಎನಗಿದೆಕಂದನೆಂದುಗಳಕಂದಳದೊಳ್ಚರಣದ್ವಯಂಗಳೊಳ್ ।
ಜನಕಜೆಕಂಠಿಕಾವಲಯಮಂಮಣಿನೂಪುರಮಂತೊಡರ್ಚ್ಚಿವಂ ॥
ಡನದಮಯೂಖಲೇಖೆಜಡೆಗೊಂಡುಕವಲ್ತುಮಡಲ್ತುಲರ್ಚ್ಚೆದೃ ।
ಗ್ವನರುಹಮಂಜಟಾಯುವೆಸರಾದುದದಕ್ಕೆರಘುಪ್ರವೀರನಿಂ ॥ 16

ವ ॥ ಅಂತು ರಾಮಲಕ್ಷ್ಮಣರ್ಸುಗುಪ್ತಗುಪ್ತಗಗನಚಾರಣರತಪಸ್ಸಾಮರ್ತ್ಥ್ಯದ ರ್ಶನದಿಂಕೃತಾರ್ತ್ಥರಾಗಿ ಮಱುದಿವಸಂ ದಂಡಕಾರಣ್ಯದೊಳಗನೆದಕ್ಷಿಣಾಭಿಮು ಖರಾಗಿನಡೆದುಚಳವೀಚೀಸಂಚಯಮಂಕ್ರೌಂಚನದಿಯನುತ್ತರಿಸಿ ಸರಿತ್ತಟವನಲ ತಾಗೃಹದೊಳ್ಸೀತೆಬಳಲ್ದಳೆಂದುವಿಶ್ರಮಿಸಿಸುಖಮಿರ್ಪ್ಪುದುಮಾನದಿಯಸಮೀಪ ದಸರ್ವ್ವರತ್ನಗರ್ಬ್ಭಮಪ್ಪದಂಡಕಗಿರಿಗುಹಾಗೇಹದೊಳೊಂದುಯೋಜನದೆಂಟನೆ ಯಭಾಗಂಖಾತವಾದಲ್ಲಿಪಾತಾಳಲಂಕೆಯೆಂಬಪುರಮಿರ್ಪ್ಪುದದನಾಳ್ವಂ ಖರನೆಂಬ ನಾತನರಸಿರಾವಣನತಂಗೆಚಂದ್ರನಖಿಯೆಂಬಳವರ್ಗ್ಗೆಶಂಭುಕನುಂಸುಂದರನುಮೆಂ ಬರಿರ್ವ್ವರ್ತ್ತನಯರಾದರಲ್ಲಿ ಪಿರಿಯಮಗಂಶಂಭುಕಂಪಂನೆರಡುವರುಷಂ ಮೊದ ಲ್ಗೊಂಡುಸೂರ್ಯ್ಯಹಾಸಾಸಿಯುಂಸಾಧಿಸುತ್ತಿರ್ಪ್ಪುದುಮಾತಂಗಾಬಾಳನಿತ್ತುಬೆ ಸಕೆಯ್ಯಲೆಂದುಬಂದುಯಕ್ಷಾಮರಸಹಸ್ರಮಾಬದ್ಧರತ್ನಮಾನವನಿರ್ದ್ದಬಿದಿರಪೊ

ದಱವೊದಲೊಳಿರಿಸಿ ನವೇರುಮಂದಾರಪಾರಿಜಾತಸುಮನೋಮಂಜರಿಯಿನರ್ಚ್ಚಿ
ಸುತ್ತಿರ್ಪ್ಪುದುಮಿತ್ತ ಲಕ್ಷ್ಮಣಂವನವಿಳಾಸನಿರೀಕ್ಷಣಕುತೂಹಲನಾಗಿ ॥

ಕಂ ॥ ಸುಳಿವೆಡೆಗೆಬಳ್ಗಸಿದ್ಧಿಗೆ ।
ಬಳಿಯಟ್ಟಿದಪುಣ್ಯದೇವತಾದೂತನವೋ ॥
ಲ್ಸಳಿಗಾಳಿಯೊಡನೆಸ್ಪರ್ಶದ ।
ವಾಳೆಬರೆಬಂದತ್ತದೊಂದುದಿವ್ಯಾಮೋದಂ ॥ 17

ಇದುಮನುಜಲೋಕವನಕುಸು ।
ಮದಸೌರಭಮಲ್ತು ದಿವಿಜಲೋಕದಮಂದಾ ॥
ರದಕುಸುಮಸೌರಭಂಬಂ ।
ದುದೆತ್ತಣಿಂದೆಂದುಲಕ್ಷ್ಮಣಂಬೞಿಸಂದಂ ॥ 18

ತನಿಗಂಪಿನಬಳಿವಳಿಯಿಂ ।
ಜನಾರ್ದ್ದನಂಭೃಂಗದಂತೆಸುಮನೋರಾಗಂ ॥
ಜನಿಯಿಸೆತಮಾಳಪಲ್ಲವ ।
ತನುರುಚಿಪೇರ್ವ್ವಿದಿರಪೊದಱನಂದೈತಂದಂ ॥ 19

ಸ್ಥಲರಕ್ತಕಮಲಮಂಕೋ ।
ಮಲಪದತಳಪದ್ಮರಾಗರುಚಿಯಿಂಮೆಂಶ ॥
ಸ್ಥಲಮಂತನುಪ್ರಭಾವಂ ।
ಡಲದಿಂದೆಂಟನೆಯಕೇಶವಂದ್ವಿಗುಣಿಸಿದಂ ॥ 20

ವ ॥ ಅಂತು ಬಂದುಬಿದಿರಪೊದಱವೊದಲೊಳಮರತರುಸುಮನೋಮಾಲೆಯೊಳಮನರ್ಘ್ಯರತ್ನಮಾಲೆಯೊಳಮರ್ಚ್ಚಿಸಿರ್ದ್ದಸೂರ್ಯ್ಯಹಾಸಾಸಿಗೆಕಯ್ಯಂನೀಡುವುದುಂ ॥

ಕಂ ॥ ಜಯಲಕ್ಷ್ಮಿಯನಯನೋತ್ಪಲ ।
ಮಯೂಖಮೆನೆತಾನೆಬಂದುಕರಕಿಸಲಯಕಾಂ ॥
ತಿಯಿನೇಂರಾಗಂಬೆತ್ತುದೊ ।
ಜಯಾಸಿಪೊಗರಿಳಿಸೆಕಿಸುರಮಸಿಯಕ್ಕರಮಂ ॥ 21

ಕಾಳಾಹಿಯೆನಿಪಕೃಷ್ಣನ ।
ತೋಳೊಳ್ನಿಶ್ವಾಸಧೂಮಲೇಖಾಕೃತಿಯಿಂ ॥
ಬಾಳಾಯತಮೆನೆಜಡಿದಂ ।
ಬಾಳೊಡನಳ್ಕಾಡೆನೆಳಲನೆಮದಿಂದಿನಪಂ ॥ 22

ವ ॥ ಅಂತುಜಡಿದುಕರವಾಳಕೂರ್ಪ್ಪಂನೋಡಲೆಂದು ॥

ಕಂ ॥ ಬಾಯ್ದಾರೆನಿಲೆಕುಮಾರಂ ।
ಪೊಯ್ದೊಡೆಕಯ್ಯೊಳವಿದಾರಕಯ್ಯೊಳವಿಯೆನ ॥
ಲ್ಕೆಯ್ದಿಲಕಾವಿನಪೊಡೆಯಂ ।
ಪೊಯ್ದಂತೋರ್ವ್ವೊರ್ದಲೆಪಱಿದುದಾವಂಶವನಂ ॥ 23

ವ ॥ ಆವಂಶವನದೊಡನೆ ॥

ಕಂ ॥ ತಲೆಪಱಿದುಪಾಱಿಪಾಱುವ ।
ತಲೆವರವೆಡೆವಱಿಯದಟ್ಟೆಯಿಂಪೊಣ್ಮುವಸೃ ॥
ಗ್ಜಲಧಾರೆನಾಳವೆನೆಪಂ ।
ದಲೆಪೋಲ್ತುದುನಭದೊಳಲರ್ದಕೆಂದಾವರೆಯಂ ॥ 24

ವ ॥ ಆಗಳದಂ ಕಂಡುನಿರಪರಾಧನಂ ಕೊಂದೆನೆಂದು ಮನದೊಳ್ಲಕ್ಷ್ಮಣಂಕಟ್ಟುಕೆ
ಡೆದು ॥

ಕಂ ॥ ವೇಧಸ್ಸಂಕಲ್ಪಂದು ।
ಬ್ಬೊರ್ಗೀಧನಿವಂನಿಷ್ಠೆಯಿಂನಿರೋಧಿಸಿತನುವಂ ॥
ಸಾಧಿಸಿದೊಡೀಕ್ಕೃಪಾಣಮೆ ।
ಬಾಧಾಕರಮಾಯ್ತುಜಾಕೃಪಾಣೀಯದವೋಲ್ ॥ 25

ವ ॥ ಎಂದುಕಾರುಣ್ಯಪರನಾಗಿರ್ಪ್ಪುದಂತತ್ಕಕ್ಷೇಯಕಮಂರಕ್ಷಿಸುವಯಕ್ಷಾಮರಸ
ಹಸ್ರಮಿಂನೆಮಗೆನೀನೇಪತಿಯೆಂದುಪೊಡವಟ್ಟುಪೂಜಿಸಿಪೋಪುದುಂನಿಜಾಗ್ರಜನಸ
ಮೀಪಕ್ಕೆಬಂದುಕರವಾಳವೃತ್ತಾಂತಮಂವಿದಿತಂಮಾಡಿ ॥

ಕಂ ॥ ಜಲರುಹನಾಭಂಕಣ್ಣೊಳ್ ।
ಪೊಳೆದುಳ್ಕುವಸೂರ್ಯ್ಯಹಾಸಮಂಕುಡೆಕಯ್ಯೊಳ್ ॥
ಹಲಧರನದೇಹರುಚಿಮೂ ।
ವಳಸುವುದುಂಚಂದ್ರಹಾಸಮೆನಿಸಿತ್ತಾಗಳ್ ॥ 26

ವ ॥ ಅಂನೆಗಮಿತ್ತಲ್ ॥

ಕಂ ॥ ವಿವಿಧಾರ್ಚ್ಚನೆವೆರಸುತನೂ ।
ಭವನಿಂದುಕೃಪಾಣಸಿದ್ಧಿವಡೆದಪನೆಂಬು ॥
ತ್ಸವದಿಂದುಳ್ಕಾಪಾತಮ ।
ನವಳಂಗಪ್ರಭೆಯಿನಿಳಿಸಿನಭದಿಂದಿಳಿದಳ್ ॥ 27

ವ ॥ ಅಂತುನಭದಿಂದಿೞಿದು ॥

ಕಂ ॥ ತನಯನತಲೆಯೊಂದೆಸೆಯೊಳ್ ।
ತನುವೊಂದೆಸೆಯೊಳ್ಸಿಡಿಲ್ದು ಕೆಡದಿರೆಕಂಡಾ ॥
ವನಿತೆಭಯರಸದಿನೆರ್ದೆಪಾ ।
ವನೆಪಾಱೆವಿಷಾದವಹ್ನಿಗಿಂಧನವಾದಳ್ ॥ 28

ಖರನಂದನನಂದಶಕಂ ।
ಧರನಳಿಯನನೆಂನಶಂಭು ಕುವರನನಾಕ್ರೋಶಂ ॥
ದರೆನುತ್ತೆಮೋದಿಕೊಂಡ ।
ಳ್ಕರದಿಂವಡಿಗಡಿಗೆಚಂದ್ರನಖಿತೆಳ್ವಸಿಱಂ ॥ 29

ಚ ॥ ಬಱವಱಬತ್ತೆಬಾಯ್ಬೆರಲಬಾಸುಳಪದ್ಧತಿಮಧ್ಯದೊಳ್ಪಗಂ ।
ಡಿಱಿದಿರೆಕಂಣನೀರ್ಗ್ಗಳಪೊನಲ್ಕರೆಗಣ್ಮಿಕಪೋಲದೊಳ್ಬಯ ॥
ಲ್ದೊಱೆಯನೊಡರ್ಚ್ಚೆಚಂದ್ರನಖಿಶೋಕರಸಾಕುಳೆಮೂರ್ಛೆವೋಗಿಮೆ ।
ಯ್ಮಱೆಯಳ್ಚಿತ್ರಮಲ್ತುನಿಜಪುತ್ರವಿಯೋಗಮನಾರೊಸೈರಿಪರ್ ॥ 30

ವ ॥ ಅನಂತರಮೆಂತಾನುಂಮೂರ್ಛೆಯಿಂದೆೞ್ಚತ್ತು ॥

ಕಂ ॥ ತಂನಂದಂಡಿಸಿಱಾಳಂ ।
ಪಂನೆರಡಬ್ದಕ್ಕೆಪಡೆದಬಾಲಕನಂಕೊಂ ॥
ದೆಂನೊಳೆಡಱಿದನಬೇರೊಳ್ ।
ಬೆಂನೀರಂಪೊಯ್ವೆನೆಂದುಬೇಗದಿನೆರ್ದ್ದಳ್ ॥ 31

ಒಡನೊಡನೆಶೋಕರಸಮುಂ ।
ಕಡುಮುಳಿಸುಂತೀವ್ರಮಾಗೆಬೇಱೆಱಿವೊಳಗಂ ॥
ಸಿಡಿಲಂಕೆದಱುವಕಲ್ಪದ ।
ಕಡೆಗಾಲದಕೆಂಡವಳೆಯಮುಗಿಲವೊಲಿರ್ದ್ದಳ್ ॥ 32

ರೋದನದಿಂಸುತನಱರ ।
ಚ್ಛೇದನದಳಲಾಱದಾಱುಗುಂರಿಪುರುಧಿರಾ ॥
ಸ್ವಾದನದಿನೆಂದುವಿಲಯೋ ।
ತ್ಪಾದನಭೈರವಿಯಮಸಕಮಂಕೈಕೊಂಡಳ್ ॥ 33

ವ ॥ ಅಂತುಮುಳಿದೆರ್ದ್ದುಪಜ್ಜೆವಿಡಿದುನಡೆದುರಾಮಲಕ್ಷ್ಮಣರಂಕಂಡು ॥

ಚ ॥ ಬಗೆವವರಾರಿದಂಖೇಚರಕಾಮಿನಿಪುತ್ರವಿಯೋಗವೇಗಮಂ ।
ಬಗೆಯದೆಕಂದನಂಬಱಿದೆಕೊಂದವನಂಕೊಲಲೆಂದುಪ್ರೋದ್ಧದಂ ॥
ಬಗೆಯದೆನೋಡಿಲಕ್ಷ್ಮಣನಗಾಡಿಗೆಕೂರ್ತೊಡಗೂಡುವಾಸೆಯಂ ।
ಬಗೆದಳದಂತೆದಲ್ಲಗೆವರೇವಿಷಯಾಸವಮತ್ತರೇನುವಂ ॥ 34

ವ ॥ ಅಂತುಕಂತುಸಂತಾಪದಿನಾವರ್ತ್ತನಪರಿವರ್ತ್ತನಂಬಂದು ॥

ಕಂ ॥ ರೂಪಪರಾವರ್ತ್ತನವಿ ।
ದ್ಯಾಪರಿಣತಿಯಿಂವಿಯಚ್ಚರಾಂಗನೆಕನ್ಯಾ ॥
ರೂಪಮನೇಂತಳೆದಳೆಸೆತಾ ।
ರಾಪತಿತಾರುಣ್ಯಲಕ್ಷ್ಮಿಯಂತಾಳುವವೋಲ್ ॥ 35

ವನೆಗಣೆಯಧಿದೇವತೆಯಂ ।
ಬನೆಗಂಸಾರ್ತ್ತಂದುಕೃತಕಶೋಕರಸಾಲಂ ॥
ಬನಿನೆಯ್ದಿಲೆಸಳೊಳವರ್ದಿನ ।
ಪನಿಬಂದಪುದೆನಿಸಿಕಣ್ಣನೀರಂತಳೆದಳ್ ॥ 36

ಆರಮಣಿಕೃತಕಶೋಕಾ ।
ಸಾರದಪೊನಲೊಳಗೆಬೆಂಡುನೆಗೆದಿದ್ದರ್ವುದೇಂ ॥
ರಾರಾಜಿಸಲಾರ್ತ್ತಳೆಂತಿ ।
ನೀರೊಳಗಣಚಂದ್ರಕಳೆಯನೆಳಲೆಂಬಿನೆಗಂ ॥ 37

ವ ॥ ಅಂತುಶೋಕಿಸುವಳಂಕಂಡು ॥

ಕಂ ॥ ತನಗೆಕರುಣಾರಸಂಸಂ ।
ಜನಿಯಿಸೆಸಾರಣ್ಣೆಕರೆದುಕುಳ್ಳಿರಿಸಿಲತಾ ॥
ತನುಕಣ್ಣನಿಯಂತೊಡೆದಳ್ ।
ಜನಕಾತ್ಮಜೆಕಂನೆಕಪಟಿಯೆಂದೆತ್ತಱಿವಳ್ ॥ 38

ವ ॥ ಆಗಳಾಕಂನೆಯಂಕರುಣಾರಸಪ್ರಸನ್ನದೃಷ್ಟಿಯಿಂರಘುವೀರಂನೋಡಿ ॥

ಮ॥ಸ್ರ॥ಬಿಸಿಲುಂಬೆಳ್ದಿಂಗಳುಂಗಾಳಿಯುಮೊಳಪುಗದತ್ಯುಗ್ರಸತ್ವಂಗಳಿಂದು ।
ವ್ವಿಸುವಿದುವ್ವಾರಕಾಂತಾರವಮನಬಲೆಯೆನಿಶ್ಶಂಕೆಯಿಂದೆಂತುಪೊಕ್ಕಾ ॥
ಬಿಸವಂದಂಕಂನೆನಿಂನಂದವಮನೆವುಗಱಿಸೆಂದಾಜಿರಂಗಪ್ರಚಂಡಂ ।
ಬೆಸಗೊಂಡಂಬೀಱಿದಂತದ್ಯುತಿಶರದದಬೆಳ್ದಿಂಗಳಂರಾಮಚಂದ್ರಂ ॥ 39

ವ ॥ ಅಂತುಬೆಸಗೊಳ್ವುದುಂಮುಕುಳಿತಾಂಜಲಿಪುಟೆಕೃತಕೃತಾಂತನೆಂನಮಾತಾಪಿತೃ
ಗಳನೋರ್ವರ್ಮ್ಮಗಂದಿಲೊಳಿಮುಳಿದುಯ್ಯನಿಸ್ಸಹಾಯವೃತ್ತಿಯಿಂನಿತ್ತರಿಸಲಾಱದಾ
ನುಮೆಂನಂಪರಿಚ್ಛೇದಿಸಿಪಳುವಂಪೊಕ್ಕುಸಾವೆನೆಂದುಬರುತ್ತುಂನಿಂಮನೆಂನಪುಣ್ಯೋ
ದಯದಿಂ ಕಂಡೆನೀರ್ವ್ವರೊಳೋರ್ವ್ವರೆಂನಂ ಗಂಧರ್ವ್ವವಿವಾಹವಿಧಿಯಿಂಕೈಕೊ
ಳ್ವುದೆನೆಜನಕಜರಾಮಲಕ್ಷ್ಮಣರ ಮೊಗಮಂನೋಡಿಮುಗುಳ್ನಗೆನಗುವುದುಮದ
ಕ್ಕೆಸಿಗ್ಗಾಗಿ ॥

ಕಂ ॥ ಮಗನೞಿವಳಲಂಪಾತಕಿ ।
ಬಗೆಯದೆಪರಪುರುಷಸೇವೆಗೞಿಪುವಬಗೆಯಂ ॥
ಬಗೆದಾಬಗೆಕೂಡದೊಡು ।
ದ್ವೇಗಮಿಂಮಡಿಸಿತ್ತುಖಚರವಧುಗಾಕ್ಷಣದೊಳ್ ॥ 40

ವ ॥ ಅಂತುಮನದೊಳುಂಮುಳಿಸಿ ॥

ಕಂ ॥ ಅವಳಿವರ್ಗೆತಕ್ಕುದಂಪಾ ।
ಡುವೆನೆಂಬಾಗ್ರಹದಿನವರಕಣ್ಪೊಲನಂದಾಂ ॥
ಟುವಿನಂನಡೆದಾತಟಿಲ್ಲತೆ ।
ಯನ್ತ್ರೋಳಾಕಾಶಕ್ಕೆನೆಗೆದುಪಾಱಿದಳಾಗಳ್ ॥ 41

ವ ॥ ಅಂತುಮನೋವೇಗದಿಂಪೋಗಿಪೊಳಲುಮನರಮನೆಯುಮಂಪೊಕ್ಕು ॥

ಹರಿಣಿ ॥ಪರೆದಕಚಮುಂಕಂಣಿಂಕೆಯ್ಗಣ್ಮುವಶ್ರುಜಲಂಗಳುಂ ।
ಬೆರಸುಬಸುಱಂತಿಣ್ಣಂಮೋದುತ್ತುಮಾತ್ಮಜಶೋಕದಿಂ ॥
ಖರನಚರಣೋಪಾಂತಕ್ಷೋಣೀಪ್ರದೇಶದೊಳಾತನೂ ।
ದರಿತನುವನಂದೊಕ್ಕಳ್ಹಾಹಾರವಂನೆಗಳ್ವಂನೆಗಂ ॥ 42

ವ ॥ ಅಂತುಶೋಕವಿಕಳೆಯಾದ ಚಂದ್ರನಖಿಯಂಕಂಡು ಖರನಿದೇನೆಂದುಬೆಸಗೊಳ್ವು
ದುಂ ॥

ಮ ॥ ಬಗೆಗಿಂದುಂಮಳಮಾಗೆತಲ್ಲಣಿಸಿಬಾಳಂಸಾಧಿಸುತ್ತಿರ್ದ್ದವೇ ।
ಮ್ಮಗನಂನೋಡುವೆನೆಂದುಪೋಗೆತಲೆಪೇಱಾಗಟ್ಟೆಪೇಱಾಗೆಥಾ ॥
ತ್ರಿಗೆಬಿದ್ದಿರ್ದ್ದುದಕಂಡುಛೋಂಕನೆರ್ದೆಬಾಳಂಬೀಸಿದಂತಾಗೆಮೂ ।
ರ್ಛೆಗೆಸಂದಂಸುಡೆಸುತ್ತಿಶೋಕದಹನಂಜ್ವಾಲಾಸಹಸ್ರಂಗಳಿಂ ॥ 43

ವ ॥ ಅಂತುಮೂರ್ಛೆವೋಗಿಕಿಱಿದಾನುಂಬೇಗದಿಂ ॥

ಕಂ ॥ ಚೇತರಿಸಿತನಯನಂಕೊಂ ।
ಡಾತನಬೞಿವಿಡಿದುಪೋಗಿಬಾಳಂಕೊಳಲೆಂ ॥
ಡಾತನಮೇಲ್ವಾಯ್ದೊಡೆಪಡೆ ।
ಮಾತೇಂಪರಿಭವಿಸಿಕಳೆದನುದ್ಧತನೆಂನಂ ॥ 44

ನಿನಗೆಸತಿಯಾಗಿಯುಂತ್ರಿಭು ।
ವನದೊಡೆಯದಶಾಸ್ಯನೊಡನೆಪುಟ್ಟಿಯುಮಾದ ॥
ತ್ತೆನಗೆಪರಿಭವಮೆನಲ್ಕುಂ ।
ನಿನಜನ್ಮದಕರ್ಮ್ಮಬಂಧಮಂಮೀಱುವರಾರ್ ॥ 45

ಮ ॥ ಕವಚಂದೊಟ್ಟುಶರಾಸನಂಬಿಡಿದುತೂಣೀರಂಗಳಂತಾಳ್ದಿವೀ ।
ಱುವರಾರೆಂಮುಮನೆಂಬದೋರ್ವ್ವಲದಗುರ್ವ್ವಿಂದಿರ್ಪ್ಪರಾನಂದದಿಂ ॥
ಜವನೀರ್ವ್ವರ್ಮ್ಮನುಜರ್ತ್ತನೂಭವನುಮಂಕೊಂದೆಂನನಾದಂಪರಾ ।
ಭವಮಂಪೊರ್ದ್ದಿಸಿನಿರ್ದ್ದಯರ್ಬ್ಬಗೆಯರಿರ್ದ್ದರ್ದ್ದಂಡಕಾರಣ್ಯದೊಳ್ ॥ 46

ವ ॥ ಎನಲೊಡಂಶ್ರವಣವಿವರದೊಳ್ತಪ್ತಾಯಸಮಂಪೊಯ್ದಂತೆದಾರಕವಿದಾರಣಮುಂ
ದಾರಪರಾಭವಮುಂತನಗಳಲನದವಳಲನೊದವಿಸೆ ॥

ಕಂ ॥ ಬೀಜದಿನೊಗೆವವಿಷಾಂಕುರ ।
ದೋಜೆಯಿನಲ್ ಖರನಶೋಕಬೀಜದಿನೊಗೆದು ॥
ತ್ತೇಜಿಸಿದುದುಕೋಪಾಗ್ನಿಶಿ ।
ಖಾಜಾಲಂಕೆದಱೆಕಿಡಿಯುಮಂಕೆಂಡಮುಮಂ ॥ 47

ಮ ॥ ಎವೆಕೋಪಾನಲಧೂಮಲೇಖೆಯೆನೆಪುರ್ವ್ವುರ್ವ್ವೆದರ್ದ್ದಜರ್ವ್ವಲ್ತಗು ।
ಳ್ದುವುಕಣ್ಗಳ್ಪೊಱಪಾಯ್ದುಕೋಪಶಿಖಿಪೊಣ್ಮಿತ್ತೆಂಬಿನಂಕೆಂಕಮಾ ॥
ದುವುಕೋಪಾನಲತಾಪದಿಂರಣರಸಂದಳ್ಕೆಂದುಕಾದುರ್ಕ್ಕೆವೆಂ ।
ಸೆವ್ರೊಲಾಗಳ್ಬೆಮರ್ಗ್ಗಳ್ಕಪೋಲತಳದೊಳ್ತ್ತಳ್ಪೊಯ್ದುವಾದೈತ್ಯನಾ ॥ 48

ವ ॥ ಅಂತುರೋಷಗ್ರಹಾವೇಶಮನಪ್ಪುಕೆಯ್ದು ॥

ಕಂ ॥ ತಡೆವುದುಪಾೞಿಯೆಸುತನಂ ।
ಮಡಿಪಿದನಂಸತಿಗೆಭಂಗಮಂಮಾಡಿದನಂ ॥
ಕಡುಕೆಯ್ದುಕಾದಿರಣದೊ ।
ಳ್ಪಿಡತಲೆಯುಂಮೆಟ್ಟಿಕಿಳ್ತುಕೊಳ್ವೆಂತಲೆಯಂ ॥ 49

ಅನಿಮಿಷರುಂದಾನವರುಂ ।
ಮೊನೆಗೆನಗಿದಿರಿಲ್ಲರೆಂದೊಡಿದಿರಾಂಪವರೇ ॥
ಮನುಜರವಂದಿರನಾನೋ ।
ರ್ವ್ವನೆದೆಸಬಲಿಗೆಯ್ವೆನೆಂದುಬಿಡೆಗರ್ಜ್ಜಿಸಿದಂ ॥ 50

ವ ॥ ಅಂತುಗರ್ಜ್ಜಿಸಿಕರವಾಳ್ಗೆಕಯ್ಯಂನೀಡುವುದುಂಮಂತ್ರಿಮಂಡಳಮದಂಮಾ
ರ್ಕೊಂಡು ॥

ಕಂ ॥ ಸಾಧಾರಣರಲ್ಲವಿರ್ವ್ವಿ ।
ದ್ಯಾಧರವಲ್ಲಭವಿಚಾರಿಸವೆರುಂನತಿಯಂ ॥
ಸಾಧಿಸದೆಸೂರ್ಯ್ಯಹಾಸಂ ।
ಸಾಧನವಾಯ್ತೆಂದೊಡೇನವವರ್ಮ್ಮನವರೇ ॥ 51

ವ ॥ ಅದಱಿನವರನೇೞಿಸದೆಸಕಲಸಾಮಂತರಂಬರಿಸಿಸಮರಸಂನದ್ಧನಾಗಿನಡೆವುದೆನಯು
ಮದೆಂತೆನೆಸಕಲಚಕ್ರವರ್ತ್ತಿಗಳುಮರ್ದ್ಧಚಕ್ರವರ್ತ್ತಿಗಳುಂಮನುಷ್ಯರಾಗಿಯು
ಮೇಕಾಂಗದೊಳಜೇಯರೆಂಬುದುಂಸರ್ವ್ವಜನಸುಪ್ರಸಿದ್ಧಮೆಂದುಬಿಂನವಿಸೆಮನದೆ
ಗೊಂಡಾಸ್ವರೂಪಮಂದಶಕಂಧರಂಗೆಬಿಂನಪಂಗೆಯ್ವುದೆಂದುದೂತರನಟ್ಟಿಸಮಸ್ತ
ಸಾಮಗ್ರೀಸಹಿತನಾಗಿ ॥

ಕಂ ॥ ಕನಕಾಚಲಚೂಳಿಕೆಯಿಂ ।
ಕನಲ್ದುಗರ್ಜ್ಜಿಸುತುಮೆರ್ದ್ದಸಿಂಗದವೊಲ್ಕಾಂ ॥
ಚನಪೀಠದಿಂಖರಂಬ ।
ಳ್ಗನಖರನುತ್ತಂಸಕಿರಣಕೇಸರನೆರ್ದ್ದಂ ॥ 52

ಪದಿನಾಲ್ಕಾಸಿರನಾಯಕ ।
ರುದಂಶುಮಣಿಮಕುಟಕಿರಣಮೊಡನಂಬರಮಂ ॥
ಪುದುವಿನಮೊಡನೆರ್ದ್ದವಿರ್ವ್ವಿಂ ।
ಜದಡವಿಯಂಪೇಗೆಬಳಸಿದತ್ತೆಂಬಿನೆಗಂ ॥ 53

ವ ॥ ಅಂತಸಂಖ್ಯಾತಭಟಕರಸಾಮಂತಸೇನೆವೆರಸು ಖರದೂಷಣರ್ಗ್ಗಳಿಗದಿರದಿದಿರಂನಡೆ
ವಮುಗಿಲೊಡ್ಡಿನಂತೆಗಗನವೀಥಿಯಿಡಿದುನಡೆದುರಾಮಲಕ್ಷ್ಮಣರನಱಿಸಿಬರ್ಪ್ಪಸಮ
ಯದೊಳ್ಸಮುದ್ರಘೋಷವನೆಜನಿಯಿಸುವಪಟುಪಟಹಶಂಖಕಹಳಾರವಮಂಭೋಂ
ಕನೆಕೇಳ್ದದೇನೆಂದುಸೀತೆಪರ್ಚ್ಚಿಬೆಸಗೊಳ್ವುದಂ ॥

ಕಂ ॥ ದೊರೆಕೊಂಡಬಾಳಕೂರ್ಪ್ಪಂ ।
ಪರಿಕಿಸಲೆಂದಿಱಿಯೆಲಕ್ಷ್ಮಣಂವಂಶವನಾಂ ॥
ತರಿತನೆನಿಸಿರ್ದ್ದಸತ್ತ್ವನ ।
ಪರಿಗ್ರಹಂಕಾಳಗಕ್ಕೆವಂದಪುದಕ್ಕುಂ ॥ 54

ವ ॥ ಎಂದುಮನದೊಳವಧಾರಿಸಿ ॥

ಚ ॥ ಗಗನೆಚರಪ್ರಚಂಡಬಲಮೆತ್ತಿಬರುತ್ತಿರೆಕಾಳಗಕ್ಕದಂ ।
ಬಗೆದನೆಜಾನಕೀಮುಖಸರೋರುಹದೊಳ್ನೆಲಸಿರ್ದ್ದದೃಷ್ಟಿಯಂ ॥
ತೆಗೆದನೆಕಾಲದಂಡಮುಮನೇಳಿಪತಂನಶರಾಸನಕ್ಕೆಮೆ ।
ಲ್ಲಗೆಕರಶಾಖೆಯಂರಘುತನೂಭವನುಯ್ದನಿದೇನುದಾತ್ತನೋ ॥ 55

ವ ॥ ಅಂತುದಾಶರಥಿಶರಾಸನಕ್ಕೆಕಯ್ಯನುಯ್ಯೆಲಕ್ಷ್ಮಣನಿಂತೆಂದಂ ॥

ಶಾ ॥ ದೇವರ್ಬ್ಬಿಲ್ವಿಡಿವಂತುಬಿಲ್ವಿಡಿಯೆವಜ್ರಾವರ್ತ್ತಚಾಪಕ್ಕೆಮೇ ।
ಣ್ದೇವೇಂದ್ರಂಧರಣೀಂದ್ರನಲ್ಲದುಳಿದರ್ಬ್ಬಿಲ್ವೊಯ್ವನಿಲ್ವಂನರಾ ॥
ರ್ದ್ದೇವರ್ಕ್ಕಾವೊಡಮೆಂನಕೂರ್ಗ್ಗಣೆಗಳಿಂಮೆಯ್ವೆರ್ಚ್ಚಿಮೇಲೆತ್ತಿಬಂ ।
ದೀವಿದ್ಯಾಧರಸೈನ್ಯಮಂನಿಮಿಷದಿಂಪರ್ದ್ದಿಂಗೆಬಿರ್ದ್ದಿಕ್ಕುವೆಂ ॥ 56

ವ ॥ ಎಂದುಬೆಸನಂಬಡೆದುಮದೀಯಮಾತೆಯಂಸೀತಾದೇವಿಯನಪಾಯಬಹುಳಮಪ್ಪಗ
ಹನದೊಳಗಲದೆಯಿರ್ಪ್ಪುದೆತ್ತಾನುಮೆನಗೆಧುರಂದುರ್ದ್ಧರಮಾಗೆಸಿಂಹನಾದಂಗೆಯ್ಯೆ
ಬರ್ಪ್ಪುದೆಂದುವಿನಯವಚನಮಂನುಡಿದುವಿನಯವಿನಮಿತನಗ್ರಜನಂಬೀಳ್ಕೊಂಡು ॥

ಕಂ ॥ ಕವಚಮನಾಳಿಸಿಪೆಗಲೊ ।
ಳ್ತ್ತವದೊಣೆಯಂಬಿಗಿದುಬಿಲ್ಲನೇಱಿಸಿಟಂಕಾ ॥
ರವಮುರ್ವ್ವವಡೆಯೆಜೇವೊಡೆ ।
ದುವಿಯಚ್ಚರಸೇನೆಗದಿರದಿದಿರಂನಡೆದಂ ॥ 57

ಪೊಕ್ಕಿಸೆಮಾರ್ಗ್ಗಣೆಯಿಂಮಱು ।
ವೊಕ್ಕದನಾಯಕರನಾಜಿಯೊಳ್ತುಂಡಿಸಿನಿಂ ॥
ತಕ್ಕಳಿದನೆಬಗೆಯೊಳ್ಬ ।
ಶಕ್ತಿಯಪಿಂಡಿಂಗವಂದಿಟಂಸರಿಗಂಡಂ ॥ 58

ಉರ್ವ್ವರೆಯೊಳಿರ್ದ್ದಖಂಡಿತ ।
ದೋರ್ವ್ವಲನಂಬಿಕ್ಕೆನಭದೊಳಿರ್ದ್ದನಿಬರುಮೋ ॥
ರೋರ್ವ್ವರುಮಿಸೆಮಂಜಿನಮಳೆ ।
ಪರ್ವ್ವತಮಂಪರ್ವ್ವಿದಂತೆಕವಿದುವುಕಣೆಗಳ್ ॥ 59

ಕಂ ॥ ಗಗನವೆಡೆನೆಱೆಯದೆನಿಸಿರೆ ।
ಗಗನೇಚರಸೈನ್ಯಮಿಸುವಪೊಸಮಸೆಯಸರ ॥
ಲ್ನಗಧರನಮೇಲೆಪಾಯ್ದುವು ।
ನೆಗಳ್ದಗ್ನಿಮುಖಕ್ಕೆಪಾಯ್ವಶಲಭಂಗಳವೋಲ್ ॥ 60

ಎಡೆಯುಡುಗದೆಖಚರರಬಿ ।
ಲ್ವಡೆಕಡುಕೆಯ್ದುಸುವಕಣೆಗಳರ್ಕ್ಕನತೇಜಂ ॥
ಗಿಡೆಹರಿಯಮೇಲೆಸುರಿದುವು ।
ಬಡವಾಗ್ನಿಯಮೇಲೆಸುರಿವಸರಿಮಳೆಗಳವೋಲ್ ॥ 61

ತಱಿದೊಟ್ಟಿಸೂರ್ಯ್ಯಹಾಸದೆ ।
ಮುಱಿವೊರ್ಕ್ಕದೆಪುದಿದುಪೆಣೆದಸರಪಂಜರದಿಂ ॥
ಪೊಱಮಟ್ಟುಬಿದಿರಪೊದಱಿಂ ।
ಪೊಱಮಟ್ಟಮೃಗೇಂದ್ರನಂತಿರ್ದ್ದನುಪೇಂದ್ರಂ ॥ 62

ವ ॥ ಅಂತು ಪೊಱಮಟ್ಟುಪರಿವೇಷಂಗೊಂಡಚಂಡಕಿರಣನಂತೆ ಕುಂಡಲಿತಕೋದಂಡನಾಗಿ ॥

ಕಂ ॥ ತೊಡುಂಬಿಡುಂಕಾಣ್ಬುದು ।
ನಾಡೆಯುಮರಿದೆನಿಸಿಕೃಷ್ಣನಾರ್ದ್ದಿಸೆದಸೆಗೆ ॥
ಟ್ಟೋಡಿದುದಳ್ಕಾಡಿದುದ ।
ಳ್ಕಾಡಿದುದೋರ್ವ್ಯೋಮದಲೆಖರನಬಲವನಿತನಿತುಂ ॥ 63

ಪತ್ತಿಜವನಂತೆರಿಪುಬಲ ।
ಪತ್ತಿಯನಿಸೆಲಕ್ಷ್ಮಣಂವಿಯಚ್ಚರಸೈನ್ಯಂ ॥
ಸತ್ತುದುಪುಣ್ಬೆತ್ತುದುಪೆಂ ।
ನಿತ್ತುದುಪೊಣ್ದಿಱಿವುದಱಿದುಗರುಡಧ್ವಜನೊಳ್ ॥ 64

ಇವೆದುಷ್ಟವಿಷಾಹಿಗಳೇ ।
ಕವಿತರ್ಪ್ಪವೆಜವನಬೆಸದಿನೆನೆನಿಮಿಷಕ್ಕೇಂ ॥
ತವೆಪೋರ್ದ್ದುವೊಖಚರಪ್ರಾ ।
ಣವಾಯುಮಂಕೃಷ್ಣನೆಚ್ಚನಾರಾಚಂಗಳ್ ॥ 65

ಕಂ ॥ ಇವರ್ಮ್ಮೆಯರ್ಗ್ಗಣ್ಬಿನವಾಂತರ ।
ನೋರ್ಮ್ಮದಲೊಳ್ಕಣೆಗಳುರ್ಚ್ಚಿವೇಣನಂಬಿತ್ತ ।
ಲ್ಕಾವರ್ಮ್ಮಂಚಿದಂತೆನೆತ್ತರ ।
ವೇರ್ಮ್ಮಳ್ಕಜಿದತ್ತುಪೇಂದ್ರನಿಸಧುರಧರೆಯೊಳ್ ॥ 66

ಆವೆಡೆಯುಂನಟ್ಟುವುಬಾ ।
ಣಾವಳಿನಟ್ಟೆಡೆಯಿತಮಗೆನೆಜನೆನೆಕೆಡೆದ ॥
ಬ್ಭರ್ವಳಯಕ್ಕೆವಿಸರ್ಜ್ಜರ ।
ರಾವುದೊಲಕ್ಷ್ಮಣನಕಣೆಗೆವಾಣಿಸುದಸ್ಯೈನ್ಯಂ ॥ 67

ಶಾ ॥ ಆರೇಸಾಡಿದರಾವದಿಗ್ಮುಖದಿನೀಕೂರಂಬುಗಳ್ಬಂದುವೆಂ ।
ದಾರುಂಕಾಣ್ಬವರಿಲ್ಲನಟ್ಟುದನೆಕಾಣ್ಬವರ್ಗ್ಗಯದಂಬಲ್ಲದಂ ॥
ದಾರಾನುಂಪೊಂಜಗಾಗರೇಕಣೆಯಕೊಳ್ಗಂಬೆಂತುತಂನಂಬುಸಂ ।
ಹಾರಂಮಾಡೆವಿಪಕ್ಷಸೈನಿಕಮನಂಭೋಜಾಕ್ಷನೇಸಾಡಿದಂ ॥ 68

ಮ ॥ ವೊನೆಯುಂಬಲ್ಲಿವುನಂಜಿನಂಬುಗಳ್ನಲ್ಕೂರಂಬುಮಾಜಾಂತರಂ ।
ಮನದಿಂಬೇಗದಿನುರ್ಚ್ಚಿಪೋಗೆವೇಣನಂಸಾಲಿಟ್ಟುವೋಲಾಗೆವೇ ॥
ದಿನಿಯೊಳ್ಖೇಚರಸೇನೆಬೀಳೆಬಯಲಾದತ್ತಾಗಸಂಕೃಷ್ಣನಂ ।
ಬಿನಕೃಷ್ಣಾಹಿಯಕೊಳ್ಗೆಬೆರ್ಚ್ಚಿದಿದಿರೊಳ್ಮ್ರಯ್ಯಾರ್ಟ್ಟಿಬಾಳ್ವಂನರಾರ್ ॥ 69

ಕಂ ॥ ಸಿಡಿಲಕಡುಗಾಯ್ಪುಸಿಂಗದ ।
ಪೊಡರ್ಪ್ಪುಭೈರವನಬಲ್ಪುವೆರಾರಿಯಮಸಕಂ ॥
ಕಡೆಗಾಲದಜವನೆಳ್ತರ ।
ವೊಡರಿಸೆಲಕ್ಷ್ಮಣನಡರ್ದ್ದುಕಾದುತ್ತಿರ್ದ್ದಂ ॥ 70

ವ ॥ ಅಂನೆಗಮತ್ತರಾವಣಂಖರದೂಷಣರಟ್ಟಿದಸುದ್ದಿಯಂಕೇಳ್ದುಶಂಭುಕನಸಾವಿಂಗ
ಳಲ್ಲುದ್ದಕಡುಮುಳಿದು ॥

ಚ ॥ ಬೆರಜಿಸಿದತ್ತುಕಾರಿರುಳನುರ್ವ್ವಿದಪುರ್ವ್ವಿನಗಂಟಿನೊಳ್ಕಜಿಂ ।
ಗಿದವೊಗವಂಜಿಸಿತ್ತುಕಿಸುಸಂಜೆಯನಾಸುರವಾಗೆಕೆಂಪುವೇ ॥
ಜಿದಬಿಡುಗಣ್ಣಬಂಣವಜಿಪೆಯುಟ್ಟಿದುದಳ್ಕುಜಿಕಂಪೊಳುಳ್ಕುವು ।
ಳ್ಕದತೆಜನಂಸಕಂಪವಧರಂದಶಕಂಧರಚಕ್ರವರ್ತ್ತಿಯಾ ॥ 71

ವ ॥ ಅಂತುಸಂವರ್ತ್ತಸಮಯದಸಮುದ್ರದಂತೆಕದಡಿ ॥

ಚ ॥ ನಿಯಮದಿನಿರ್ದ್ದನಂನಿರಪರಾಧನನಂನೆಯದಿಂದಮೆಂನತಂ ।
ಗೆಯಮಗನಂವಿದಾರಿಸಿದನಂತಱಿದಾತನಮೆಯ್ಯರಕ್ತವಾ ॥
ರಿಯನೆಱೆದಾೞಿಪೆಂಬರನಶೋಕಕೃಶಾನುವನೆಂದುಕಾಯ್ದುದು ।
ರ್ಜ್ಜಯನಸುರಾಧಿಪಂಜಡಿದನಾಸುರಮಂನಿಜಚಂದ್ರಹಾಸಮಂ ॥ 72

ವ ॥ ಅಂತುಜಡಿದು ॥

ಚ ॥ ಒದವಿದಕೋಪವಹ್ನಿಯುರಿಯುಂಪೊಗೆಯುಂನೆಗೆವಂತೆಪದ್ಮರಾ ।
ಗದಹರಿನೀಲದುನ್ಮ್ಮಖವಿಭೂಷಣರಶ್ಮಿಪಗಂಡುಗೊಳ್ವಿನಂ ॥
ಕದನಮದೋದ್ಧತಂಖಚರನಾಯಕರಂಬರವೇಳ್ಕಸಿಂಹಪೀ ।
ಠದಿನಿರದೆರ್ದ್ದನಸ್ತಮಿತಪುಣ್ಯದಶಾನನನಾದಶಾನನಂ ॥ 73

ವ ॥ ಅಂತುಸಿಂಹಾಸನದಿಂದೆರ್ದ್ದು ॥

ಚ ॥ ನೆಡೆಯೆಹಿಮಪ್ರಭಂನಿಜಯಶಃಪ್ರಭೆಯಿಂದಿನನಂಶುಮಾಲೆಕೀ ।
ಳ್ಪಡೆಬೆಲಗೆಯ್ಯೆಬಾಳಪೊಳಪಿಂಕಡುಗತ್ತಲೆದೇಹದೀಪ್ತಿಯಿಂ ॥
ದೊಡರಿಸೆರಾಹುತನ್ನಹರಿನೀಲವಿಮಾನಮನೇಱುವಂತಿರಾ ।
ಗಡೆಕಡುಕೆಯ್ದುಪುಷ್ಪಕವಿಮಾನಮನೇಱಿದನಿಂದ್ರವಿದ್ವಿಷಂ ॥ 74

ವ ॥ ಅನಂತರಂ ॥

ಮ ॥ ಪ್ರತಿಕೂಲಾನಿಲನಿಂಪತಾಕೆಮಗುಳೆಂಬಂತಾಗೆಕೈಸಂನೆಯಿಂ ।
ಶ್ರುತಿಯಂಸಾರ್ತ್ತರೆಪೋಪುದಲ್ತನಯಮೆಂಬಂತಾಗೆಘಂಟಾಟಣಂ ॥
ಸ್ಮೃತಿಸಾರ್ತ್ತಂದುದುಪುಣ್ಯದೇವತೆಯಕಣ್ಣೀರೆಂಬಿನಂಮೇಘಸಂ ।
ಹತಿಯಿಂದಲ್ಲುಗೆಮುತ್ತುಪುಷ್ಪಕವಿಮಾನಂದಂಡಕಾರಣ್ಯಮಂ ॥ 75

ವ ॥ ಆಸಮಯದೊಳ್ದಶಾಸ್ಯನೊಂದುತಣ್ಬೆಲತಾಣದೊಳ್ಬರಸಿಡಿಲುೞಿವಿಡಿದುಪೊಳೆ
ವಕುಡುಮಿಂಚಿನಂತೆಬಲಭದ್ರನಕೆಲದೊಳಿರ್ದ್ದಸೀತೆಯಂಕಂಡು ॥

ಕಂ ॥ ಬಲೆದೃಷ್ಟಿಗೆವಜ್ರದಸಂ ।
ಕಲೆಹೃದಯಕ್ಕೆನಿಜರೂಪವತಿಜಾನಕಿಕ ॥
ಪ್ಪೋಲದೊಳಿರೆಪದ್ಮಪತ್ರದ ।
ಜಲಬಿಂದುವಿನಂತೆಚಲಿತಮಾದುದುಚಿತ್ತಂ ॥ 76

ಕಂ ॥ ಎನಗಾಲೋಕನಮಾತ್ರದಿ ।
ನನುರಾಗಮನಿತ್ತುತಮ್ಮನೀಲಚ್ಛವಿಯಿಂ ॥
ಮನಮಂರುಜಾವಮಾಡಿದುವೀ ।
ವನಿತೆಯಕೊಂಕಿದಕುರುಳ್ಗಳಿದುಬಿಸವಂದಂ ॥ 77

ಕಂ॥ ಮೃಗಲೋಚನಂಗೞಿದುರ್ಗವು ।
ಮೃಗಮೆಲ್ಲಿರ್ದಪುದೊಮಟಫಲಂಮಟಮೆಲ್ಲೀ ॥
ಪಗಲುಮೆಸೆವಿಂದುವೆತ್ತಣಿಂ ।
ನೊಗೆದುದೊವೇಳೆಂದುನೋಡಿದಂನಗೆಮೊಗಮಂ ॥ 78

ತಳಥಳಿಸಿಪೊಳೆವಸೀತೆಯ ।
ಚಳನಯನಂಖಚರಚಕ್ರವರ್ತಿಯಚಿತ್ತಂ ॥
ಕೊಳದೊಳಗೆಳವಾಳೆತೆರಂ ।
ಪೊಳೆವಂತೆಕಲಂಕಿಕದಡಿದತ್ತಾಕ್ಷಣದೊಳ್ ॥ 79

ಸಿರಿಸದಬೂಸಿಗದೊಳ್ನಲಿ ।
ಮಱಿದಾಡುವತುಂಬಿಯಂತೆಪಾಂಬ್ವನಕಣ್ಗಳ್ ॥
ಪರಿಮಱಿಯಾಡಿದುವುತನೂ ।
ದರಿಯುಳತನುಪಾಶಮೆನಿಪದೋರ್ವಲ್ಲರಿಯೊಳ್ ॥ 80

ಸುೞಿಗೊಂಡನಾಭಿಕೂಪದ ।
ಸುೞಿಯಿಂಪೊಱಮಡದೆಸುೞಿವನಯನಂಗಳಜೆಂ ॥
ಬೞಿವಿಡಿದುಸುೞಿದುಪರಿದುದು ।
ಸುೞಿಯೊಳಗಣಪಱುಗುಲಂತೆಪಾತಕನಮನಂ ॥ 81

ಉ॥ ಹಾರಮರೀಚಿಮಂಜರಿಸುಧಾರಸಧಾರೆಸುಧಾಂಶುಲೇಖಿಕ ।
ರ್ಪೂರಶಲಾಕೆನೇತ್ರಸುಖದಾಯಕಮೀದೊರೆಯಲ್ಲಮೀಕೆಶೃಂ ॥
ಗಾರಸಮುದ್ರಮಂಕಡೆಯೆಪೃದ್ಭವನುದ್ಭವಮಾದಳೆಂದುಕ ।
ಣ್ಣಾರೆದಶಾಸ್ಯನೀಕ್ಷಿಸಿದನೀಕ್ಷಿಸಿಕಂಣಱಿದಾರೆಮನ್ಮಥಂ ॥ 82

ಮಾ॥ಸ್ರ॥ ಪಲರುಂವಿದ್ಯಾಧರಸ್ತ್ರೀಯರುಮಮರಿಯರುಂಮಾನವಸ್ತ್ರೀಯರುಂತಂ ।
ಮೊಲವಿಂಮೇಲ್ವಾಯ್ದೊಡಂಮುಂಬಗೆಯದಬಗೆಯೇನಾದುದೆಂದುದ್ಧತಂಮೂ ॥
ದಲಿಸುತ್ತಂರೂಪಿನೊಳ್ಮಿಕ್ಕಿರಿಸುವನೆನಗೆಂದಂಬನಂಬಟ್ಟುವಂನಂ ।
ಪಲಕಾಲಕ್ಕೀಸುವೆತ್ತಂದಶಮುಖನೆನುತುಂಮನ್ಮಥಂಪಾಣದೆಚ್ಚಂ ॥ 83

ಸ್ರ॥ ಸ್ವಾಂತಂಪಂಚೇಷುವಿಂಜಂತಗೆವುಗಿಲಪ್ರೊಲಪ್ಪಂತುಕಂದರ್ಪನೆಚ್ಚಿ ।
ಚ್ಚಿಂತುಂಕಾದ್ಬ್ವಾಬಿದಟ್ಟಾಸುರಮನೆಮುೞಿದೇರ್ವಟ್ಟಿಕೋದಂಡದಿಂಪೊ ॥
ರ್ದ್ದಂತಾನುಂನಿಂನಸೌಂದರ್ಯದಿನೆನಗೊಳಗಾದಂದಶಗ್ರೀವನೆಂದಾ ।
ಕಾಂತಾರತ್ನಕ್ಕೆವೈದೇಹಿಗೆಮಕುಟತಟದ್ರತ್ನದಿಂದರ್ಘ್ಯಮಿತ್ತಂ ॥ 84

ವ॥ ಅಂತುಬಿಸನವಶಗತನಾಗಿ ॥

ಚ ॥ ನಡೆನಡುಕೆೞ್ವರಂದಶಮುಖಂಮನಮಂಸುಮನಸ್ತ್ರೀಮುಖಂ ।
ನಡೆಗಿಡೆಕೀರ್ತಿಬಾರ್ತೆಗಿಡೆಲಕ್ಷ್ಮಿಮೊದಲ್ಗಿಡೆಮಾನಸಿಕ್ಕೆ ನೇ ॥
ರ್ಪಡುಗಿಡೆಸತ್ಯಶೌಚಗುಣಸಂಪದವೇೞ್ದನಾದನೆಂನರಂ ।
ಕಿಡಿಮಸಿಯಾದಪ್ರೋಲ್ವಿಷಯಲೋಭದಿನೇೞ್ದರಾಗದಿರ್ಪರೇ ॥ 85

ಮ ॥ ವಿಹಿತಾಚಾರಮನನ್ವಯಾಗತಗುಣಪ್ರಖ್ಯಾತಿಯಂದುಷ್ಟನಿ ।
ಗ್ರಹಶಿಷ್ಟಪ್ರತಿಪಾಲನಪ್ರಭೃತಿಯಂಕಯ್ಗೆಯ್ದನ್ಯಾಂಗನಾ ॥
ಸ್ಪೃಹೆಯಂತಾಳ್ದಿದನಲ್ತೆ ಕಾಲವಶದಿಂಲಂಕೇಶ್ವರಂವಿಸ್ಮಯಾ ।
ವಹಮಲ್ತಬ್ಧಿಯುಮೊರ್ಮೆಕಾಲವಶದಿಂಮರ್ಯಾದೆಯಂದಾಂಟದೇ ॥ 86

ವ ॥ ಅಂತುಮನವೆಳೆದುಮಱಿಯೆ ॥

ಕಂ ॥ ಮದಕರಿಯದಾನಲೇಖೆಗೆ ।
ಪದೆವಮಧುವ್ರತದಮಾಳ್ಕೆಯಿಂದಶವದನಂ ॥
ಪದೆದಂರಘುವೀರನಪಾ ।
ರ್ಶ್ವದಸುದತಿಗೆವಿಷಯಿತಂನಕೇಡಂನೋಡಂ ॥ 87

ಅವಿವೇಕಿದಶಮುಖಂದು ।
ಷ್ಟವಿಷಾಹಿಯಪೆಡೆಯಮಣಿಶಲಾಕೆಗೆಕಯ್ನೀ ॥
ಡುವಗಾಂಪನಂತೆರಘುವೀ ।
ರವಧೂಜನಕಜೆಗೆಮನದೊಳೆೞಸಂತಂದಂ ॥ 88

ಚ ॥ ಪರವಧುಗಾಸೆಗೆಯ್ವಧಿಕಪಾತಕಮೊಂದುರಘುಪ್ರವೀರನೊ ।
ಳ್ದರದೊಳಿಬರ್ಕ್ಕೆದೋಸರಿಸಿವಂಚಿಸಿಸೀತೆಯನುಯ್ವಭೀತಿಯೊಂ ॥
ದೇಡಹಿಳೊಳಂಜಸಂಮಸುಳೆತನ್ನವಲೋಕನಿಯಂದಶಾನನಂ ।
ಬರಿಸಿದನಾತ್ಮಸತ್ವಗುಣಹಾನಿಯಿಂಸೂಚಿಸದೇವಿನಾಶಮಂ ॥ 89

ವ ॥ ಅಂತು ನೆನೆಯಲೊಡಮವಲೋಕಿನಿವಿದ್ಯೆ ಮನದೊಡನೆಬಂದುಪಸನ್ನಾವುದೆನೆದಶಮುಖನಿವರಾರ್ಗೆಂಬುದುಮಯೋಧ್ಯಾಸಿಂಹಾಸನಾಧಿಪತಿಯುಮಿಕ್ಷ್ವಾಕುವಂಶಸಂಭವನುಮಪ್ಪನರಣ್ಯತನೂಭವಂದಶರಥನರನಾಥಂತದಪತ್ಯರಿವರ್ಕಾಲದಬಲದೇವವಾಸುದೇವರ್ದ್ದೇವತಾಧಿಷ್ಠಿತಂಗಳಪ್ಪವಜ್ರಾವರ್ತಸಾಗರಾವರ್ತಚಾಪರತ್ನಂಗಳನಪ್ರಯತ್ನದಿಂಪಡೆದ ರಾಮಲಕ್ಷ್ಮಣರೆಂಬಮಹಾಬಲಪರಾಕ್ರಮರೀಕೆರಾಮನಮಹಾದೇವಿಮಿಥಿಳಾಪುರವರೇಶ್ವರನಪ್ಪಹರಿವಂಶದಜನಕನತನೂಭವೆರಥನೂಪುರಚ

ಕ್ರಮಾಳಪುರಮನಾಳ್ವಂಚಂಡಬಲಪರಾಕ್ರಮನಪ್ಪಪ್ರಭಾಮಂಡಲನತಂಗೆಸೀತಾದೇ
ವಿಯೆಂಬಳೆಂಬುದುಮಾಕೆಯನೀತನಿಂದಗಲ್ಚುವುಪಾಯಮಾವುದೆನೆದೇವತೆಭಯಚ
ಕಿತಚಿತ್ತೆಯಾಗಿ ॥

ಕಂ ॥ ಆರಯ್ಯೆವಿರೋಧಂಸಾ ।
ಧಾರಣಪುರುಷರೊಳಮುಚಿತಮಲ್ತಧಿಕಬಲ ॥
ಕ್ಕಾರಣಪುರುಷರಿವರ್ನ್ನಿ ।
ಷ್ಕಾರಣವಿವರೊಳ್ವಿರೋಧಮಂಮಾಡುವುದೇ ॥ 90

ಕಾವಬೆಸಂನಿಂನದುಸಕ ।
ಲಾವನಿಯನಧರ್ಮ್ಮನಿರತರಂನಿಯಮಿಸಿನೀ ॥
ನೀವಿಷಯಕ್ಕೆಬಗುವುದಂ ।
ಕಾವರೆಕಣೆಗೊಂಡರೆಂಬನುಡಿಗೆಡೆಯಕ್ಕುಂ ॥ 91

ಅಂನೆಯದಿಂನಡೆವವರಂ ।
ನೀಂನಿಯಮಿಸುವೈದಶಾಸ್ಯಪೇಳನಿಂನಾವಂ ॥
ನಿಂನಂನಿಯಮಿಸುವೆಡೆಯೊಳ್ ।
ಪೆಂನೀರಂಪೆರಸಲಣ್ಮತಂಣೀರೊಳವೇ ॥ 92

ಮ ॥ ಪದಿನಾಲ್ಸಾಸಿರಮುಖ್ಯನಾಯಕರಸಂಖ್ಯಾತಂಬಲಂಭೇದದಿಂ ।
ಬಿದಿರಾದರ್ಕ್ಕರದೂಷಣರ್ಬ್ಬಗೆದನಿಲ್ಲತ್ತಲ್ಬರಂಗೆಯ್ದುಕಾ ॥
ದಿದಪಂಲಕ್ಷ್ಮಣನಿತ್ತಲೀಕೆಯೊಡನೀತಂವೀತಶಂಕಂಪಿನೋ ।
ದದೊಳಿರ್ದ್ದಂರಘುವೀರನಿಂನಿವರೊಳಂವಿದ್ವೇಷಣಂದೂಷಣಂ ॥ 93

ವ ॥ ಎಂದುತೆಱೆಯೆನುಡಿದುದಕೆಕಡುಮುಳಿದು ॥

ಕಂ ॥ ಮದನಯಶಃಪಟಹಧ್ವನಿ ।
ಪುದಿಯೆವಿಯಚ್ಚರನಕರ್ಣ್ಣಮಂಪ್ಪದಯಕ್ಕೆ ॥
ಯ್ದಿದುದಿಲ್ಲದಿವ್ಯವಚನಂ ।
ಬಿದಿಯಂಮಿಱುಗುವೆಪೆಱಱಪೇಳ್ದುಪದೇಶಂ ॥ 94

ಆನೊಂದಂಪೆಸಗೊಂಡೊಡೆ ।
ನೀನೊಂದನದೇಕೆಪೇಳ್ವೆಪೇಳ್ದದನೇಗೊ ॥
ಳ್ಳೀನೆಂದುಕೀಱಿನುಡಿವೈ ।
ಮಾನವರಾಂತಪರೆಮರುಳೆಲಂಕಾಪತಿಯುಂ ॥ 95

ವ ॥ ಎಂಬುದುಂವಿದ್ಯಾದೇವತೆಕನಲ್ದು ॥

ಕಂ ॥ ಜನಕಜೆಯುಮಯ್ಯೆದಶರಥ ।
ತನೂಜಱುಂಮರಣಮಾಗಲೆಂದಿರ್ದ್ದಪುದೀ ॥
ತನಕಯ್ಯೊಳಮಲ್ತುಪುರಾ ।
ತನಕರ್ಮ್ಮಾಯತ್ತಮಲ್ತೆದೇಹಿಗಳೆಸಕಂ ॥ 96

ಗೆಲಲೆನಗರಿಪುಬಲಂಬ ।
ಲ್ವಲಮಾದೊಡೆಸಿಂಹನಾದಮಂಮಾಳ್ಪೆಂಬೆಂ ॥
ಬಲವಾಗಿಬರ್ಪ್ಪುದೆಂದೀ ।
ಬಲದೇವಂಗಱಿಪಿವಾಸುದೇವಂಪೋದಂ ॥ 97

ವ ॥ ಎಂದುರಾವಣಂಗೇಳ್ದು ರಣಕ್ಷೋಣಿಗೆಪೋಗಿಲಕ್ಷ್ಮಣಂಕೇಳದಂತುವಿದ್ಯಾದೇವತೆ
ವೈಕುರ್ವ್ವಣಶಕ್ತಿಯಿಂಸಿಂಹನಾದಂಗೆಯ್ವುದುಮಾಧ್ವನಿಯಂಕೇಳ್ದು ॥

ಮ ॥ ಧುರದೊಳ್ದುರ್ಜ್ಜಯನಾಗ್ರಜೆಂನನುಜನೆಂಬೀಸಿಕ್ಕೆಯಂಗೆಟ್ಟುಸಿಂ ।
ಹರವಂದೋಱಿದನಾಹವಂವಿಷಮಮೆಂಬೀವಿಸ್ಮಯಂಚಿತ್ತದೊ ॥
ಳ್ದೊರೆಕೊಂಡತ್ತುರಘೂದ್ವಹಂಗಮುಳಿದಂದೆಂತಕ್ಕುಮೋಜಾನಕೀ ।
ಹರಣಂಕರ್ಮ್ಮವಿಪಾಕಮಾರಬಗೆಗಂವೈಕಲ್ಯಮಂತಾರದೇ ॥ 98

ಕಂ ॥ ಶಾಪಂಪೇಳ್ದುಜಟಾಯುವ ।
ನೋಪಳನಿರವೇಳ್ದುವೈರಿಬಲಮಂತವಿಸ ॥
ಲ್ಕೋಪಂತಿರೆದಂಡಧರಂ ।
ಚಾಪಧರಂಬಳನವಂಧ್ಯಕೋಪಂಪೋದಂ ॥ 99

ವ ॥ ಅಂನೆಗಮಿತ್ತಲ್ ॥

ಕಂ ॥ ಅೞಿಪಿಪರವಧುಗಧೋಗತಿ ।
ಗಿೞ್ವುದನಭಿನಯಿಸುವಂತೆಸೀತೆಯುಸಾರ ॥
ಣೞಿದಂನಭದಿಂಖಚರಂ ।
ಪೞಿಗಂಪಾಪಕ್ಕಮಂಜದವರೇಗೆಯ್ಯರ್ ॥ 100

ದೋಷಿಪಿಡಿವಂತೆದಿವ್ಯದ ।
ಕಾಸಿದಕುಳುವಂಕಡಂಗಿಕಾಳೋರಗನಂ ॥
ಕೂಸುಪಿಡಿವಂತೆಪಿಡಿದಂ ।
ಸಾಸಿಗನವಿವೇಕಿಸೀತೆಯಂದಶಕಂಠಂ ॥ 101

ವ ॥ ಅಂತುಪಿಡಿದುನಿಜವಿಮಾನೋದರದೊೞಿಟ್ಟು ॥

ಕಂ || ದಶಮುಖನುನ್ಮುಖನೞಿಪಿಂ |
ಶಶಿಮುಖಿಯಂಜನಕಸುತೆಯನಾವರಿಸೆಕೇತು ||
ರ್ದ್ದಶಭುವನಮನಪವಾದಂ |
ಶಶಿಕಲೆಯಂಸೈಂಹಿಕೇಯನುಯ್ವಂತುಯ್ದಂ || 102

ವ || ಆಗಳದಂಜಾತಿಸ್ಮರನಪ್ಪಜಟಾಯು ಕಂಡುಕೋಪಾನಳವಿಸ್ಫುಲಿಂಗದಂತಾರಕ್ತಂಗ
ಳಾದಕಣ್ಗಳಿಂನುಂಗುವಂತೆನೋಡಿ ||

ಕಂ || ಪತಿಕಾಪ್ರವೇಳ್ದುಪೋದಂ |
ಸತಿಯಾಂಕಳ್ದುಯ್ದಪಂಬಳಂವಾರ್ಕ್ಕೊಂಡು ||
ರ್ದ್ಧತನಂಮದೀಯತುಂಡಾ |
ಹತಿಯಿಂಶತಖಂಡವಾಗೆಮಾಳ್ಪೆನೆನುತ್ತುಂ || 103

ಚ || ಖರನಖರಂಗಳಿಂನಿಶಿತಚಂಚುಗಳಿಂದಿಱಿಯಲ್ಕಱುತ್ತುಸಾ |
ರ್ತ್ತರೆನಸುನಕ್ಕುಪೊಯ್ಯೆಕರದಿಂಗಮನೋತ್ಸುಕನಿಂದ್ರವೈರಿತಂ ||
ನೆರಡುಮೆಱಂಕೆಗಳ್ಮುಱಿದಿಳಾತಳದೊಳ್ಕೆಡೆದತ್ತುವಜ್ರದಿಂ |
ಸುರಪತಿಪೊಯ್ಯೆಪೆಟ್ಟುಕೆಡೆವಂತೆಜಟಾಯುನಭೋವಿಭಾಗದಿಂ || 104

ಕಂ || ಪಕ್ಕಿಮೊದಲಾಗಿಪತಿಕಾ |
ರ್ಯ್ಯಕ್ಕನುವಶನಾಗಿತಾಗಿರಾವಣನೊಳಳು ||
ರ್ತ್ತಕ್ಕತುಳವಿಱಿದುದೆಂದೊಡೆ |
ತಕ್ಕಂಪತಿಕಾರ್ಯ್ಯದೆಡೆಯೊಳೋಸರಿಸುವನೇ || 105

ಉ || ಭೂಮಿಗೆಬಿರ್ದ್ದಱಂಕೆಮುಱಿದಿರ್ದ್ದವಿಪತ್ತಿಗೆನೊಂದುದಿಲ್ಲಣಂ |
ರಾಮನಗಲ್ಕೆಯಿಂಜನನಿಗೇದೊರೆತಕ್ಕುಮೊದಱುವೇಗಮಂ ||
ಬೀಮನದುಂಮಳಂತನಗೆತಿಂಣಮೆನಲ್ಕೊತ್ತಱಿದಂತದಂಬಿಗ |
ಗ್ರಾಮಣಿಚಿತ್ತದೊಳ್ತಳೆದುದಂಚಿತಪಂಚಪದಾಕ್ಷರಂಗಳಂ || 106

ವ || ಅಂತುಬಿರ್ದ್ದಜಟಾಯುಕಂಠಗತಾಯುವಾಗೆದಶಕಂಠನುಯ್ವಸಮಯದೊಳ್ ||

ಉ || ಸಿಂಗದಕೈಗೆಬಿರ್ದ್ದಹರಿಣಾಂಗನೆವೋಲ್ಬೆರ್ಗ್ಗಗೆಟ್ಟುರಾಮಚಂ |
ದ್ರಾಂಗನೆನೀಳ್ದಕಣ್ಮಲರ್ಗಳಿಂದುಗೆಕಣ್ಬನಿಗಳ್ಮಡಲ್ತಪ ||
ಕ್ಷಂಗಳನೊತ್ತಿಕಾರಮುಗಿಲಿಂದುಗುತಪ್ಪನವೋದಬಿಂದುಜಾ |
ಲಂಗಳೆನಲ್ಪಮತ್ತಳಿನಿಸುಂತನುವಲ್ಲಿಮುಗುಳ್ತುದೆಂಬಿನಂ || 107

ಚ || ಮನಮೞದಾಗೆಮನ್ಯುಮಿಗೆತಳ್ತಮೆಯ್ಯಿಂಕರಗಣ್ಮೆಸೂಸೆಕ |
ಣ್ಬನಿಗಳಕಂದಳಂಬಿಗಿಯೆಗದ್ಗದನಿಸ್ವನಮುಣ್ಮೆಹಾರವಂ ||
ಜನಿಯಿಸೆಸೀತೆಭೀತೆದೆಸೆಗೆಟ್ಟೆರ್ದೆಗೆಟ್ಟೞಲ್ಪೊಣ್ಮೆದತ್ತುಮಾ |
ರ್ದನಿಸಿದಸೆಯ್ದೆಗಂಗನೆಯುರುಂಬಿಡದಂದೊಸೆನಳ್ಪಮಾಳ್ಕೆಯಿಂ || 108

ಉ || ಭೋಂಕನೆಸೀತೆಕಂಡುದಶಕಂಧರನಂಸಲೆವೆಟ್ಟಶೋಕಮಾ |
ತಂಕಮೊಡರ್ಚೆಪುಷ್ಪಕವಿಮಾನದರತ್ನವಿಚಿತ್ರಪುತ್ರಿಕಾ ||
ಸಂಕುಲಮತ್ತೊಘತ್ತುಪುಟಮತ್ತೊರ್ಡೆಕೂಡೆಬೆಮತ್ತರ್ವಾಗಳಾ |
ಲಂಕೆಯಕೇಡನುಂನತಿಯಕೇಡನವಂಗೆನಿವೇದಿಪಂತೆವೋಲ್ || 109

ಕಂ || ಸ್ತನಮಂಡಲಕ್ಕೆಪೊಸಮು |
ತ್ತಿನಹಾರಮನಿತ್ತುತೋಱಗಣ್ಬನಿಯಿಂಲೋ ||
ಚನಯುಗಳಮರುಣಮಣಿಮಂ |
ಡನಮಂಕಿವಿಗಿತ್ತುವರುಣರುಚಿಮಂಜರಿಯಿಂ || 110

ಚ || ಬಲೆಗೊಳಗಾದ್ದಸೋಗೆನವಿಲಂತೆಭಯಾಕುಳಿತನ್ನಚಿತ್ತದೊ |
ಳ್ನಲಸಿದರಾಮನಂಬಯಸಿನೋಡಲಪೇಕ್ಷಿಸಿಬಾಹ್ಯದರ್ಶನ ||
ಕ್ಕಲಸಿದಳೆಂಬಿನಂಮುಗಿಯೆಕಣ್ಮಲರ್ಗಳನಸುಮೂರ್ಛೆವೋಗಿತಂ |
ಕೆಲರಲೆಪಿಂದೆಮೂರ್ಛೆತಿಳಿದಳ್ಮಗುಳ್ದುಂಪೊಱಪೊಣ್ಮೆಹಾರವಂ || 111

ಉ || ನೇಸಱಸಾರೆನಿಬ್ಬರಿಸುವುತ್ಪಲಮಾಲೆವೊಲಿರ್ಪದೃಷ್ಟಿವಿ |
ನ್ಯಾಸಮನೊಯ್ಯನೋಸರಿಸಿನಮ್ರಸಿರೋಧರೆಸೀತೆಲೋಕಸಂ ||
ತ್ರಾಸಿಯರೂಪುಮಾದನಖದರ್ಪಣದೊಳ್ಪಲವಾಗಿತೋಱೆಕಂ |
ಡಾಸತಿಬೆರ್ಚಿಮುಚ್ಚಿದಳೆರಳ್ಕರದಿಂತರಲೇಕ್ಷಣಂಗಳಂ || 112

ಕಂ || ಕ್ರೂರಾತ್ಮಂವಂಚಕನವಿ |
ಚಾರಿದುರಾಚಾರಿಬಗೆಯದುಯ್ದಪನೆನ್ನಂ ||
ಹಾರಾಮಹಾರಾಮಾ |
ಬಾಱಪರೆಂದುಸೀತೆಶೋಕಂಗೆಯ್ದಳ್ || 113

ವ || ಅಂತುಶೋಕಂಗೆಯ್ವಸೀತೆಯಂದಶಾಸ್ಯನನಂತವೀರ್ಯಕೇವಳಿಗಳಚರಣೋಪಾಂ
ತದೊಳ್ಕೆಯ್ಕೊಂಡಪರಾಂಗನಾವಿರತಿವ್ರತಭಂಗಮಂ ಬಗೆಯದುಯ್ದನೆನೆಗಮಿ
ತ್ತಲ್ ||

ಕಂ ॥ ದೇವೇಂದ್ರನವಜ್ರಮನೆಂ ।
ನೀವಜ್ರಾವರ್ತಚಾಪಮಂಮಿಱುವನಿಂ ॥
ನಾವನೆನುತ್ತುಂಸಂಗ್ರಾ ।
ಮಾವನಿಗನುಜನಕೆಲಕ್ಕೆರಾಮಂಬಂದಂ ॥ 114

ವ ॥ ಅಂತುಬರ್ಪ್ಪುದುಂಲಕ್ಷ್ಮಣನಪಾಯಬಹುಳಮಪ್ಪಗಹನದೊಳ್ದೇವಸೀತಾದೇವಿಯು ರನಗಲ್ದೇಕೆಬಿಜಯಂಗೆಯ್ದಿರೆಂಬುದುಂನಿಂನಸಿಂಹನಾದಮಂಕೇಳ್ದುಬಂದೆವೆನೆಭವ ದೀಯಪ್ರಸಾದದಿನೆನಗೆಬಲ್ಲುಳಮಪ್ಪಬವರಮಿಲ್ಲಿದಾವನಾನುಮೋರ್ವ್ವಂಮಾಯಾವಿ ಯುಮಾಟಮಕ್ಕುಮದುಕಾರಣದಿಂ ಬೇಗಂಬಿಜಯಂಗೆಯ್ವುದಾನೀಬವರಮಂತೀ ರ್ಚ್ಚಿನಿಂಮಱಂನನೆಬಂದಪೆನೆಂದುಬಿಂನವಿಸೆ ॥

ಉ ॥ ತೋಱಿದನಿಲ್ಲಸಿಂಹರವಮಂಗಡಲಕ್ಷ್ಮಣನೆಂನಚಿತ್ತದೊ ।
ಳ್ತೋಱಿದುದಿಲ್ಲಬಿಟ್ಟುಬರಲಾಗದುಸೀತೆಯನೆಂಬನಿರ್ಣ್ಣಯಂ ॥
ಬೇಱೆಕಡಂಗಿಕೆತ್ತಿದಪುದೆಂನೆಡಗಣ್ತಡವಿಲ್ಲದಚ್ಚಗಂ ।
ತೋಱದೆಮಾಣದಿಂತಿದೆನುತುಂಮಗುಳ್ದಂಮನುವಂಶಮಂಡನಂ ॥ 115

ವ ॥ ಅಂತುಮಗುಳ್ದುಬಂದುಮುಂನಮಿರ್ದ್ದಲತಾಭವನದೊಳಾಮನೋವಲ್ಲಭೆಯಂಕಾ ಣದೆಬಿಮುಖಕ್ಕೆವಂದಪಾದರಸದಂತೆನಿಜನಿಸರ್ಗ್ಗಧೈರ್ಯ್ಯಗುಣಮದೃಶ್ಯಮಾ ಗೆ ॥

ಕಂ ॥ ಹಾಹಾಜನಕಸುತೇವೈ ।
ದೇಹೀವೈದೇಹಿಯೆಂದುಪುದಿದಿರಮನವಂ ॥
ಮೋಹತಮಂದೀಪಂಮಾ ।
ತಾಹತಿಯಿಂನಂದುವಂತೆಮೂರ್ಚ್ಛೆಗೆಸಂದಂ ॥ 116

ವ ॥ ಅಂತುಮೂರ್ಚ್ಛೆವೋಗಿಱಿದಾನುಂಬೇಗದಿಂ ॥

ಚ ॥ ನಸುಬಿಸುಪೇಱಿಮೆಯ್ಮಗುಳೆಕೆತ್ತುವತಾಣಮೆಕೆತ್ತೆಮಂದಮಾ ।
ದುಸಿರ್ಗಳೆನಾಸಿಕಾಮುಕುಳದಿಂದಿನಿಸುಂಪೊಱಪೊಣ್ಮೆತಳ್ತುಸಂ ॥
ಧಿಸಿದೆಮೆಬಿರ್ಚ್ಚೆಕಣ್ಮಲರ್ಗಳಲ್ಲಲರುತ್ತಿರೆಜಾನಕೀಯೆನು ।
ತ್ತುಸಿರ್ದುಸಿರ್ದ್ದನಾರಘುಕುಲಾಂಬರಚಂಡಮರೀಚಿಮೂರ್ಚ್ಛೆಯಿಂ ॥ 117

ವ ॥ ಅಂತುಮೂರ್ಚ್ಛೆಯಿಂದೆಚ್ಚತ್ತುಸುತ್ತಲುಂತೊಳಲ್ದರಸುತ್ತುಮಡವಿಯೊಳಗೆಸೆಬ ರುತ್ತುಮಿರ್ಪ್ಪಗಳೊಂದೆಡೆಯೊಳಸುವಿಯೋಗಸಂಕಟದಿಂಸರಂಗೆಯ್ವಜಟಾಯು

ವೆಂಕಂಡುಸೀತಾಹರಣವಿದಕ್ಕೆ ಮರ್ಣನಿಮಿತ್ತಮಾದುದೆಂದುಬ್ಬೆಗಂಬಟ್ಟುಸಂಸಾರವಿಷಮವಿಷಾಪಹಾರಮಂಪಂಚನಮಸ್ಕಾರಮನದಕ್ಕೆ ಪೇೞ್ದದನಮರಗತಿಯನೆಯ್ದಿಸಿವೈದೇಹಿಯನಾವನಾಂತರದೊಳೆಲ್ಲಿಯುಮಱಸಿಕಾಣದೆ ॥

ಮ ॥ ಕಳಹಂಸಾಲಸಯಾನೆಯಂಮೃಗಮದಾಮೋದಾಸ್ಯನಿಶ್ವಾಸೆಯಂ ।
ತಳಿರೇತಾವರೆಯೋಮದಾಳಿಕುಳಮೋಕಂಡೆಯ್ದಿಲೇನುತ್ತಕೋ ॥
ಕಿಳಮೇಕಂಡಿರೆಪಲ್ಲವಾಧರೆಯನಂಭೋಜಾಸ್ಯೆಯಂಭೃಂಗಕುಂ ।
ತಳೆಯಂಕೈರವನೇತ್ರೆಯಂಪಿಕರವಪ್ರಖ್ಯಾತೆಯಂಸೀತೆಯಂ ॥ 118

ಚ ॥ ಮಳಯಜಗಂಧಬಂಧುರಸರೋರುಹಮಂದರಹಾಸಚಂದ್ರಿಕಾ ।
ವಿಳಸಿತಚಂದ್ರಮಂಡಲಮನಾರಮಣೀರಮಣೀಯಲೋಚನೋ ॥
ತ್ಪಳಸಹಜಪ್ರಸಂನಕಮಲಾಕರಮಂಸ್ಮರರಾಜರಾಜ್ಯಮಂ ।
ಗಳಮಣಿದರ್ಪ್ಪಣೋಪಮಮನೋಪಳವಕ್ತ್ರಮನೆಲ್ಲಿಕಾಣ್ಬೆನೋ ॥ 119

ಕಳರುತಿಮತ್ತಕೋಕಿಳಮನೀಕ್ಷಣಮುತ್ಪಲಮಂವಿನೀಲಕುಂ ।
ತಳವಳಿಮಾಲೆಯಂಕಚಭರಂನವಿಲಂನಡೆಹಂಸೆಯಂತೆಳಂ ॥
ತಳಿರ್ಗಳನಾನನಂಕಮಳಮಂನಳಿತೋಳ್ಲತೆಯಂಲತಾಂತಕೋ ।
ಮಳೆಮಱೆಗೊಂಡುಮೆಯ್ಗರೆದುಕಾಡುವಕಾರಣಮೇನೊಜಾನಕೀ ॥ 120

ವ ॥ ಮತ್ತಮಾಗಜಗಮನೆವನ್ಯಗಜ ಬೃಂಹಿತಕ್ಕೆ ತಲ್ಲಣಿಸಿತಂನಂತಕ್ಕೆರ್ಗಿಸಿದಸಲ್ಲಕೀನಿಕುಂಜಮುಮನಾಚಕೋರಲೋಲಲೋಚನೆ ವಿಲೋಕನಚಂದ್ರಿಕೆಯಿನೊಸರ್ತ್ತಚಂದ್ರಕಾಂತದಶಯ್ಯಾತಳದತಳಿರ್ವ್ವಾಸನುದಾಸೀನಂಗೆಯ್ದುಸಮೆದಬಯಲ್ದಾವರೆಯೆಸಳಪಸೆಯಿನೆಸೆವ ತಮಾಲವನಮಾಲೆಯುಮನಾಹೇಮತಾಮರಸ ಮುಖಿಯಮುಖಸಮೀರಸಾರಭಕ್ಕೆಳಸಿಬಳಸುವಳಿಮಾಲೆಗೆಸುಗಿದುಸುಯ್ಯನೋಸರಿಸಿದಸಪ್ತಚ್ಛದಷಂಡಮುಮನಾಪೃಥುನಿತಂಬಿನಿತಂಬಭರಪರಿಸ್ಖಲಿತಪದವಿನ್ಯಾಸದಿಂದಂಚೆಯಂಪಳಂಚಲೆದತಣ್ಬೞಲತಾಣಮುಮನಾಲಾವಣ್ಯರಸತರಂಗಿಣಿತಾವರೆಯತಳಿರೆಲೆಯಪತ್ರಭಂಗದಿನುತ್ತುಂಗಪಯೋಧರಮಂಪಸದನಂಗೊಳಿಸಿದತಿಳಿಗೊಳದತಡಿಯುಮನಾಮದಾಳಿಪಟಲಕುಟಿಲಕುಂತಳೆಚೆಂನೆಯ್ದಿಲೆಸಳಚೆಂನಪೂಗಳಿಂತನ್ನತೋಱಗುರುಳ್ಗಳನಲಂಕರಿಸಿದಕಾಸಾರತೀರಮುಮನಾಸುವರ್ಣ್ಣಕೇತಕೀಸುಗಂಧಿಸಹಜಸಾರಭದಿಂಮೃಗನಾಭಿಯನಭಿನಯಿಸಿದಲವಂಗ ವನವೀಥಿಯುಮನಾಶಿರೀಷ ದಾಮಕೋಮಲೆಸುಮನೋವಿಭೂಷಣವಿನೋದದಿಂಬಿರಿಮುಗುಳನಾಯ್ದವನತರುಲತಾವಿತಾನಮುಮನಾಸಂಕಲ್ಪಜನ್ಮಜಂಗಮಲತಾಂಗಿಸಂಭೋಗಲೋಭದಿನಡಂಗಿಕೊ

ಱಬಾಡಿಕಾಡಿದಚಂದನಲತಾಮಂದಿರಮುಮನಾಕನಕಕದಳೀದಳಶ್ಯಾಮಕದಳೀದ
ಳವೀಜನದತಲ್ಪಾಳಿಯಿನನಂಗಕೇಳೀಪರ್ಯಂಕಮುಮನಾಱಿಸಿದಸಂಪಗೆಯಹೊಂಪಮು
ಮಂವಿಯೋಗಶೋಕಾಕುಳಿತಚಿತ್ತನವಳೋಕಿಸುತ್ತುಂ ॥

ಮ ॥ ಎನಿತಾನುಂತೆಱದಿಂಪಲುಂಬಿಪಲವಾಡುತ್ತುಂಮನಸ್ತಾಪದಿಂ ।
ತನುಸಂತಾಪಮನಪ್ಪುಕೆಯ್ಯೆಬಳಲುತ್ತುಂಕಂತುಸಂತಾಪದಿಂ ॥
ದೊನಲುತ್ತುಂಕನಲುತ್ತುಮಂದವಿರಳಪ್ರಸ್ಯಂದಿಬಾಷ್ಪೋದಕಾ ।
ನನನಾಕಾನನದೊಳ್ತೊಳಲ್ದುರಘುರಾಮಂಸೇದೆವಟ್ಟಿರ್ಪ್ಪನಂ ॥ 121

ವ ॥ ಅಂನೆಗಮಿತ್ತಲ್ ॥

ಮ ॥ ಎರಡುಂತೋಳ್ನೆರವೊಂದೆಬಿಲ್ನೆರವಸಂಖ್ಯಾತಂದ್ವಿಷತ್ಸೇನೆಖೇ ।
ಚರರಂಭೂಚರರೊಂದೆಮೆಯ್ಯೊಳ್ಕೊಲುತ್ತಿರ್ದರ್ಪ್ಪನಿಂನೀತನಂ ॥
ಶರಣಾಗಿಂದುಕುಲಕ್ರಮಾಗತದೊಳಸ್ಮದ್ವೃತ್ತಿಯೊಳ್ನಿಳ್ಕೆನೀ ।
ಶರಣಾಯಾತಶರಣ್ಯನಿಂದೆನಗೆಕಯ್ಸಾರ್ಗ್ಗಂಮನೋವಾಂಛಿತಂ ॥ 122

ವ ॥ ಎಂದುತಱಿಸಂದುಸಂಗ್ರಾಮಭೂಮಿಗೆಬಂದು ॥

ಕಂ ॥ ದೇವಭವಚ್ಚರಣಾಂಬುಜ ।
ಸೇವೆಯೆಶರಣೆಂದುಬಂದೆನೇಶ್ವರ್ಗಸನಂನೀ ॥
ನೀವುದೆನಗೆಂದುಲಕ್ಷ್ಮಣ ।
ದೇವಂಗೊಳ್ಗಲಿವಿರಾಧಿತಂನತನಾದಂ ॥ 123

ವ ॥ ಅಂತುಬೆಸನಂಬೇಡಿಕೊಂಡುಬೀಳ್ಕೊಂಡುನೆಲಮುಕ್ಕಿನಂತೆನಭಕ್ಕೆನೆಗೆದುಖರನಂಸೆ
ರಗಿಲ್ಲದೆಮುಟ್ಟೆವಂದುಮದೀಯಜನಕನಂಕೊಂದಿಂದುವರಂಪಾತಾಳಲಂಕೆಯಂಪೊ
ಱಮಡದೆಬರ್ದುಂಕಿದೆಪಲಕಾಲಕ್ಕಂತಾನುಂಬಯಲಬವರಕ್ಕೊಳಗಾದೆ ನೀನಿಂನೆ
ತ್ತವೋದಪೆಯೆಂದುಮೂದಲಿಸಿಕಾದುತ್ತುಮಿರೆ ॥

ಮ ॥ ಮೊರೆಯುತ್ತುಂಪರಿಯುತ್ತುಮಿರ್ಪ್ಪರುಧಿರಸ್ರೋತಂಗಳಿಂಸುತ್ತಲುಂ ।
ನರಳುತ್ತುಂಪೊರಳುತ್ತುಮಿರ್ಪ್ಪಭಟರಿಂಪಿಟ್ಟಾದಮೇಱಾದಸಿಂ ॥
ಧುರದಿಂದಗ್ಗದತಗ್ಗದಸ್ಯರಥದಿಂಕಣ್ಗಂಮನಕ್ಕಂಭಯಂ ।
ಕರಮಾದಾಜಿಯೊಳಟ್ಟಿತಿಂಬಜವನೆಂಬಂತಿರ್ದ್ದನಬ್ಜೋದರಂ ॥ 124

ವ ॥ ಆಸಮಯದೊಳ್ಲಕ್ಷ್ಮಣನಂಕಂಡು ವಿರಾಧಿತನಂಲೆಕ್ಕಂಗೊಳ್ಳದೆಸಾಮಸಕಂ
ಗೊಂಡು ॥

ಉ ॥ ಪೆಂಡತಿಯಂಪರಾಭವಿಸಿದಂಸುತನಂವಧೆಗೆಯ್ದನೆಂನೊಳಂ ।
ಗಂಡಗುಣಕ್ಕೆಮಚ್ಚರಿಸಿಮಾರ್ಮಲೆದಿರ್ದಪನೆಂದುಬಿಟ್ಟಕ ॥
ಣ್ಕೆಂಡದತಂಡಮಂಕೆದಱೆಕೋಪದಿನಂದುಱಿದೆರ್ದ್ದುಕೊಂಡುಕೋ ।
ದಂಡಮನಸ್ತ್ರನುತ್ತೊದಱಿದಂಗಗನೇಚರಸೇಖರಂಖರಂ ॥ 125

ಕಂ ॥ ಕವಚಂಮಿಂಚೆಂಕೆಂಣು ।
ಳ್ಕೆವಸಿಡಿಲಂಚಾಪಟಂಕೃತಂಮೊಳಗಂಮಿಱೆ ॥
ಱುವಿನಂಕಱೆದಂಖರನ ।
ಸ್ತ್ರವರ್ಷಮಂನೀಲಘನವಿಶಾಲಾಪಘನಂ ॥ 126

ವ ॥ ಅಗಳಾತನಿಸುವನಿಶಿತವಿಶಿಖಂಗಳಂಮಂಡಲಾಗ್ರದಿಂಖಂಡಿಸಿ ॥

ಮ ॥ ಮೊನೆಯೊಳ್ಭೈರವನಂತಗುರ್ವ್ವವಡೆದಂರಾಮಾನುಜಂಬೀಱೆಬಿ ।
ಟ್ಟನೆಬಿಟ್ಟಕ್ಷಿಯುಗಂತ್ರಿನೇತ್ರನಯನಕ್ಕಾಕ್ಷೇಪಮಂಕೃಷ್ಣಸ ॥
ರ್ಪನಗುರ್ವ್ವಂತಿರುವಾಯೊಳಿಟ್ಟವಿಶಿಖಂಕೀಳ್ಮಾಡೆಕಾಲಾಗ್ನಿರು ।
ದ್ರನಗಂಟಿಕ್ಕಿದಪುರ್ವ್ವನಂಡಲೆವಕೋದಂಡಂಭುಜಾದಂಡದೊಳ್ ॥ 127

ಉಡಿಯೆಚ್ಚಂಧನುವಂಸಿಡಿಲ್ವಿನೆಗಮೆಚ್ಚಂಕೇತುವಂಸೂತನಂ ।
ಮಡಿಯೆಚ್ಚಂಕಡಿಖಂಡಮಾಗೆಮುಱಿಯೆಚ್ಚಂತೇರನಶ್ವಂಗಳಂ ॥
ಕೆಡೆಯೆಚ್ಚಂಬಿಳಿಯಂಖರಂಮುಳಿದುಕೊಂಡುಗ್ರಾಸಿಯಂಮೇಲೆವಾ ।
ಯ್ದೊಡೆಪೊಯ್ದಂತಲೆಪಾಱಿಬೀಳೆರಘುವೀರಂಸೂರ್ಯ್ಯಹಾಸಾಸಿಯಿಂ ॥ 128

ಕಂ ॥ ಸೌಮಿತ್ರಿಯಕೋಪಾಗ್ನಿಶಿ
ಖಾವಳಿಗೆಸುಗಿದುಖರನವಿಜಯಶ್ರೀಸಂ ॥
ಗ್ರಾಮದೊಳಾಶ್ರಯಿಸಿದಳಾ ।
ರಾಮಾನುಜಭುಜಕೃಪಾಣಧಾರಾಗೃಹಮಂ ॥ 129

ವ ॥ ಅನಂತರಂ ॥

ಕಂ ॥ ಅಗ್ರಜನಮರಣದುಃಖದೊ ।
ಳಾಗ್ರಹದಿಂಮೇಲೆವಾಯ್ದುದೂಷಣನಂಮೀ ॥
ರಾಗ್ರೇಸರನಸಿಯಿಂದ ।
ಗ್ರ್ಯಗ್ರಾಸಂಮಾಡಿದಂಜವಂಗಾಹವದೊಳ್ ॥ 130

ವ ॥ ಆಸಮಯದೊಳ್ ॥

ಕಂ ॥ ಸಮನಿಸಿದತ್ತುಜಯಶ್ರೀ ।
ರಮಣಿಗೆಪರಿಣಯನಮಪ್ಪುದುಂಲಕ್ಷ್ಮಣನೊ ॥
ಳ್ಸ್ವಮನೋವಷ್ಟಂಭಸಮನ್ವಿತ ।
ಮಮರಾನಕನಿನದಮಮರಜಯಜಯನಿನದಂ ॥ 131

ವ ॥ ಅಂತುಗೆಲ್ಲಂಗೊಂಡುಕಯ್ದುವಿಕ್ಕಿಶರಣೆಂದುಬಂದವಿರೋಧಿವಾಹಿನಿಯುಂವಿರಾಧಿತಂ
ಗೆಬೆಸಕೆಯ್ದುಬಾಳ್ವಂತುಮಾಪರನವಜಪೂರ್ವವೃತ್ತಿಯೊಳ್ನಿಲಿಸುವಂತಾಂನಿಯ
ಮಿಸಿಬರುತ್ತುಂ ॥

ಚ ॥ ಮದಜಳಧಾರೆಯಿಲ್ಲದದಿಶಾಗಜದಂತೆಸುಧಾಂಶುಲೇಖೆಯಿ ।
ಲ್ಲದನಭದಂತೆಕಲ್ಪಲತೆಯಿಲ್ಲದನಂದನದಂತೆವೇಲೆಯಿ ॥
ಲ್ಲದಕಡಲಂತೆಕೇಸರಿಣಿಯಿಲ್ಲದಕೇಸರಿಯಂತೆಸೀತೆಯಿ ।
ಲ್ಲದರಘುವಂಶರಾಮನಿರೆನೋಡಿದನಾಕುಳನಾಗಿಲಕ್ಷ್ಮಣಂ ॥ 132

ವ ॥ ಅಂತುಮನದೊಳಳ್ಕುತ್ತುಮೆಯ್ದೆವಂದುಚರಣಾರವಿಂದರಜೋಲಲಾಮಲಕ್ಷಿತ
ಲಲಾಟನಪ್ಪುದುಮತಿವಿಷಮರಣಾಂಗಣದೊಳವ್ರಣಕಾಯನುಮಜೇಯನುಮೆನಿ
ಸಿಜಯಶ್ರೀಯೊಡಗೂಡಿದುದಕ್ಕೆಮನದೊಳ್ಮೆಚ್ಚಿಮುಹುರ್ಮುಹುರಾಶೀರ್ವಾ
ದಮುಖರಮುಖನಾದರಾಮದೇವನಂಲಕ್ಷ್ಮಣಂಮದಂಬಿಕೆಯಂಕಂಡೆನಿಲ್ಲೆತ್ತಲಿ
ರ್ದಪಳೆಂಬುದುಮಾನಿಂನಲ್ಲಿಗೆಬಂದಪಿಂದೆಸಿಂಹಶರಭಾದಿರೌದ್ರವನಚರಂಗಳುಯ್ದು
ವೆಂದರಿಯೆನಾವನಾನುಮೋರ್ವಂಮಾಯಾವಿಕಳ್ದುಯ್ದನೆಂದರಿಯೆನಿಂನೆವರ
ಮರಣ್ಯದೊಳ್ತೊಳಲ್ದುಬಸಿಮುಮೆಲ್ಲಿಯುಂಕಂಡೆನಿಲ್ಲೆಂದುಸೋದುಮನುಶಿವ್ರದುಮ
ದಕ್ಕೆಲಕ್ಷ್ಮಣಂವಿಷಣ್ಣಹೃದಯನುದ್ದೀಪಿತಕೋಪಶಿಖಿಶಿಖಾಕಳಾಪನಿಂತೆಂದಂ ॥

ಉ ॥ ಧಾರಿಣಿಯುಂಮಗುಳ್ದೆಕುಲಪರ್ವತಮುಂನೆಲೆಯಿಂತೆರಳ್ದೆನಿ ।
ರ್ನೀರಮೆನಲ್ತುಳುಂಕಿಲವಣಾರ್ಣವಮುಂದಿವಮುಂನೆಲಕ್ಕೆತಂ ॥
ದಾರಿದಿರಾಂತೊಡಂಜವನುಮಾರಿಗೆಸೋವತವಾಗೆಮಾಳ್ಪೆನಿಂ ।
ನಾರುಮಧೀಶಜಾನಕಿಯನುಯ್ದವಳಿಂಪೊಣಗೆಲ್ಲಿಬಯ್ತಪರ್ ॥ 133

ವ ॥ ಎಂದೊದವಿನುಡಿವಂನೆಗವಿರಾಗಿಬಪ್ರಬಲಮನೇಕಕುಂಡಳಂಕಂಡಿದಾರಬಲ
ಮೆನೆಲಕ್ಷ್ಮೀಧರನಿದುವಿರಾಧಿತನೆಂಬವಿದ್ಯಾಧರಂಧುರದೊಳ್ನಗೆಕದನಸಹಾಯನಾಗಿ
ಪಾಳಿಯಂಪಾಳಿಸಿದನೀಗಳ್ದೇವನಿಜಚರಣಸೇವಾಸಕ್ತಚಿತ್ತನಾಗಿಬರುತ್ತಿರ್ದಪನಾ
ತನಬಲಮೆಂದರಿಪುವಂನೆಗಮೆಯ್ದುವಂದುರಾಘವನಪಾದೋಪಾಂತಪ್ರದೇಶದೊ
ಳ್ಮೆಯ್ಯನಿಕ್ಕಿನಿಜವೃತ್ತಾಂತಮನಿಂತೆಂದುಬಿನ್ನವಿಸಿದನತಿಪ್ರಚಂಡನಪ್ಪನಿಜಾನುಜ

ಭುಜಾದಂಡಮಂಡಲಾಗ್ರಧಾರಾಪತಿಯಿಂದಮರಕಾಮಿನೀಪರ್ಯ್ಯಂಕಶೇಖರನಾದ
ಖರಂಪಾತಾಳಲಂಕಾಧಿಪತಿಯಪ್ಪಮದೀಯಜನಕನಂಚಂದ್ರೋದರವಿಯಚ್ಚರೇಂ
ದ್ರನನುಪಾಂಶುವಧೆಗೆಯ್ವುದುಮೆಮ್ಮ ಪರಿಜನವೋಡಿಪೋಗಿದುರ್ಗ್ಗಮಪ್ಪೀವನ
ದುರ್ಗ್ಗಪ್ರದೇಶದೊಳಾವಾಸಮಂಮಾಡಿಕೊಂಡಿರ್ಪ್ಪುದುಂವಿರಾಧಿತನಾಮಧೇಯನ
ಪ್ಪೆನುಮಲ್ಲಿಯೆಬಳೆದುಕೆಲವುಕಾಲದಿಂ ಸಾಧಿತಸಕಲವಿದ್ಯನಾಗಿಪಗೆಯಂಸಾಧಿಸು
ವುಪಾಯಮಾವುದೆಂದುಂಮಱಸುತ್ತುಮಿರ್ದ್ದಂದುದಿವಸಮೋರ್ವ್ವದಿವ್ಯಜ್ಞಾನಿಗ
ಳಂಕಂಡೆಂಮಪೂರ್ವ್ವವೃತ್ತಿಯೊಳ್ನಿಲ್ವುದಕ್ಕೆಮಾಗದೆಂಬುದಂಬೆಸಸಿನೆಂಬುದು
ಮವರಿಂತೆಂದರ್ ||

ಕಂ || ಸಂಶಯಮೇಂನಿಲ್ವುದಿನ್ನಿಜ |
ವಂಶಾಗತಮಪ್ಪವೃತ್ತಿಯೊಳ್ಕರವಾಳಿಂ ||
ವಂಶಚ್ಛೇದಮುಮಂಖರ |
ವಂಶಚ್ಛೇದಮುಮನೊಡನೆಪಡೆವತಿಬಳನಿಂ || 134

ಎಂದುಪೆಸಸುವುದುಮಾನಂ |
ದಿಂದಿತ್ತಲ್ನಿಂಮಬರ್ಪ್ಪುದಂಪಾರ್ದ್ದಿರೆನೀ ||
ಮಿಂದೆನ್ನಪುಣ್ಯದಿಂದೆ |
ಳ್ತಂದಿರಿಯಿಂತೀರ್ದ್ದದೆಂನಪಗೆಯುಂಬಗೆಯುಂ || 135

ಆಳ್ವೆನೆನನೆನಗೆದೇವ |
ರ್ಪ್ಪೇಳ್ವುದುಕಾರುಣ್ಯದೃಷ್ಟಿಯಿಂದೆಂನಂಕ ||
ಯ್ಕೊಳ್ವುದುಬಿಂನಪಮಂಬಗೆ |
ಗೊಳ್ವುದುಚರಿತಾರ್ತ್ಥನಾಗೆಮಾಡುವುದೆಂನಂ || 136

ವ || ಎಂದುಬಿನ್ನವಿಸಿರಾಮದೇವನಚರಣಸೇವಾಲಾಭದಿನಮೃತಸೇಚನಪಡೆದಂತೆಪರಿತೃಪ್ತ
ನಾದವಿರಾಧಿತಂಗೆ ಲಕ್ಷ್ಮೀಧರನೆಂದನೆಂಮಣ್ಣನೆಂ ನಕದನ ಕೇಳೀವಿಳೋಕನಕುತೂ
ಹಲದಿನೆಂನಲ್ಲಿಗೆವಂದಪಿಂದೆಜಗನ್ಮಾತೆಯಂ ಸೀತಾದೇವಿಯ ನಾವನಾನುಮೋರ್ವ್ವಂ
ಮಾಯಾವಿಕಳ್ಪಯ್ದುನೀಕಾನನದೊಳಿರ್ದ್ದಪನದಱನಿಲ್ಲಿಗೆತಕ್ಕಪುರುಷರನಟ್ಟಿಸಲ
ಟ್ಟುವುದೆನೆವಿರಾಧಿತಂಕೇಳ್ದು ಕಟ್ಟುಕಡೆದು ಕಾರ್ಯ್ಯಧುರಂಧರರಪ್ಪವಿದ್ಯಾಧರರಂಪೆ
ಸಸುವುದುಮವರ್ಪ್ಪೋಗಿ ||

ಮಾ|ಸ್ರ|| ಲತಿಕಾಕುಂಜಂಗಳೊಳ್ಭೂವಿವರಕುಹರದೊಳ್ಘೋರಕಾಂತಾರದೊಳ್ಪ |
ರ್ವ್ವತಸಾನೂದ್ಯಾನದೊಳ್ನಿರ್ಝ್ಝರಸರಿದುಪಕಂಠಂಗಳೊಳ್ಸಾರಕಾಸಾ ||
ರತಟೀದೇಶಂಗಳೊಳ್ಪೊಗೊಳದತಡಿಗಳೊಳ್ದಂಡಕಾರಣ್ಯದೊಳ್ಸ |
ಡೆತೊಳಲ್ದಕ್ಕಂಡರಿಲ್ಲಂಬಿಕೆಯನಜಸಿವಿದ್ಯಾಧರಾಧೀಶಮುಖ್ಯರ್ || 137

ವ ॥ ಅಂತವರ್ಮ್ಮನೋವೇಗದಿಂ ಪೋಗಿಬಂದುಜಾತಸ್ವರೂಪಮಂಬಿಂನವಿಸೆಖಿಂನನಾಗಿ
ರ್ದ್ದರಾಮದೇವಂಗೆವಿರಾಧಿತನೆಂದಂಮತ್ತ್ಕುಲಾಗತಮುಂನಿಸರ್ಗ್ಗದುರ್ಗ್ಗಮುಮಪ್ಪ
ಪಾತಾಳಲಂಕಾಪುರದೊಳಿರ್ದ್ದಸೀತಾದೇವಿಯಪಿರಿಯಂಣನಪ್ಪಪ್ರಭಾಮಂಡಲನಂ
ಬರಿಸಿಬಳಿಕ್ಕೆತಕ್ಕುದಂನೆಗಳಲಕ್ಕುಮದಕ್ಕಾನೆಸಾಲ್ವೆನಲ್ಲಿಗೆಬಿಜಯಂಗೆಯ್ವುದೆಂ
ದುರಾಮಲಕ್ಷ್ಮಣರಂರಥಮನೇಱಿಸಿಕೊಂಡುಚತುರಂಗಬಲಸಹಿತಂನಿತ್ಯಾಲಂಕಾ
ರೋದಯಮಪ್ಪಪಾತಾಳಲಂಕಾಪುರಮಂಪುಗುವಸಮಯದೊಳ್ ॥

ಕಂ ॥ ಪುರಮಂಪುಗಲೀಯದೆಸುಂ ।
ದರನೆಂಬಂಖರತನೂಭವಂತಂನಬಲಂ ॥
ಪೆರಸಡ್ಡಂಬರೆಮೊಗ್ಗಲಿ ।
ವಿರಾಧಿತಂಜವನಮಸಕಮಂಕೆಯ್ಕೊಂಡಂ ॥ 138

ದೆಸೆಮಸುಳ್ಭಾನುಬಿಂಬಂ ।
ಮಸುಳೆವಿರಾಧಿತನಚಾಪವಿಳಯಾಂಬುದದಿಂ ॥
ಪಸರಿಸಿಸುಂದರನೊಳ್ಭಯ ।
ರಸವರ್ಷ್ಷಂಪೆರ್ಚ್ಚೆಪೆರ್ಚ್ಚಿದುದುಶರವರ್ಷ್ಷಂ ॥ 139

ಖರದೂಷಣರ್ವ್ವೊಲಂತಕ ।
ಪುರಮಂಪುಗುವಂತುಸುಂದರಂಗಾಂಪನೆಪೇ ॥
ಳೆರಳೆಗೆಗಱಿಮೂಡಿದವೋ ।
ಳ್ಭರವಶದಿಂಪೊಕ್ಕನೋಡಿಲಂಕಾಪುರಮಂ ॥ 140

ವ ॥ ಅಂತವನನವಯವದಿಂದೋಡಿಸಿಮಹಾವಿಭೂತಿಯಿಂಪುರಮಂಪೊಕ್ಕರಂನೆಗಮಿತ್ತ
ಲಸುರನಾಗಸದೊಳ್ಮನೋವೇಗದಿಂಪೋಗುತ್ತುಮಿರೆ ॥

ಶಾ ॥ ಖೇದಂಕೈಗೞಿವಾಗಳಿದಿಗ್ವಿವರಮಂಹಾಹಾರವಂತೀವೆಬಾ ।
ಷ್ಪೋದಸ್ವೇದಜಲಂಗಳಿಂಕರಗಿಸೀರಾಗೊಕ್ಕುವಂತಾಗೆಮೆ ॥
ಯ್ಮ್ಮೋದುತ್ತುಂಬಸಿಱಂಪರಾಂಗನೆಯನೆಂನಂಕಳ್ದುಕೊಂಡೀಖಳಂ ।
ಪೋದಪ್ಪಂಶರಣಪ್ಪುದಾರ್ಪ್ಪರೆನುತುಂವೈದೇಹಿಪುಯ್ಯಲ್ಚಿದಳ್ ॥ 141

ಮ ॥ ಭವನಾವಾಸನಿವಾಸಿಗಳ್ಸಕಲವಾನವ್ಯಂತರಾವಾಸಸಂ ।
ಭವರತ್ಯುಗ್ರನವಗ್ರಹಾದಿವಿಷಮಜ್ಯೋತಿಷ್ಕರಿಂದ್ರಾದಿಕ ॥
ಲ್ಪವಿಮಾನಸ್ಥಿತರೇದುರಾಚರಿತನಂಮಾರ್ಕ್ಕೊಳ್ವುದನ್ಯಾಂಗನಾ ।
ವಿವಶಂಧಾಶರಥಿಪ್ರಿಯಪ್ರಮದೆಯಂಕೊಂಡುಯ್ದಪಂಸೀತೆಯಂ ॥ 142

ಧರಣೀರಕ್ಷಣದಕ್ಷದಕ್ಷಿಣಭುಜಂಲಕ್ಷ್ಮೀಧರಂಮೈದುನಂ ।
ಹರಿವಂಶಂಜನಕಂಮದೀಯಜನಕಂವೀರಪ್ರಭಾಮಂಡಲಂ ॥
ಪಿರಿಯಂಣಂರಘೂರಾಮನಂಗನೆಯನೆಂನಂಸೀತೆಯಂಪಾತಕಂ ।
ದೊರೆಗೆಟ್ಟುಯ್ದಪನೇವೆನೆಂದುಸತಿಹಾಹಾಕ್ರಂದನಂಮಾಡಿದಳ್ ॥ 143

ವ ॥ ಅಂತುಮುಹುರ್ಮ್ಮುಹುರುದಿತರವಮನರ್ಕ್ಕಜಟಿಯಮಗನಪ್ಪರತ್ನಜಟಿಕೇಳ್ದು ॥

ಮ ॥ ಸತಿಪುಯ್ಯಲ್ಲಿದಪಳ್ರಘೂದ್ವಹಕುಲಸ್ತ್ರೀಸೀತೆವೆಣ್ಬುಯ್ಯಲಂ ।
ಶ್ರುತಿಕಯ್ಕೊಂಡುದುಕೇಳ್ದದಂತವಳೆಗೆಂಡಂದೆಂನವಿಖ್ಯಾತಿದೂ ॥
ಷಿತಮಕ್ಕುಂಸೆಱೆಗೊಂಡನಂಕವನದೊಳ್ಪೆಂಕೊಂಡುಬಾಹಾಬಲೋ ।
ನ್ನತಿಯಂಬೀಱುವೆನೆಂದುಪೂಣ್ಸಿದನೇಂಗಂಡಂಪರಿಚ್ಛೇದಿಯೋ ॥ 144

ವ ॥ ಅಂತುಪರಿಚ್ಛೇದಿಸಿರತ್ನಜಟಿಬದ್ಧಭ್ರುಕುಟಿದಶಾನನನವಿಮಾನಕ್ಕಡ್ಡಂಬಂದು ॥

ಕಂ ॥ ಪರಿಹರಿಸಿಪೞಿಯಂಭೂ ।
ಚರಖೇಚರಚಕ್ರವರ್ತ್ತಿರಾವಣನೀನೀ ॥
ಪರವಧುಗಳ್ಪುವುದುವಿಹಂ ।
ಪರವಳ್ಗುಂನಿಂನಮಹಿಮೆಗಿದುನಡವಳಿಯೇ ॥ 145

ವ ॥ ಎಂದುಮರ್ಮ್ಮೋದ್ಘಾಟನಂಗೆಯ್ದು ॥

ಕಂ ॥ ಮೂದಲಿಸಿಮುಟ್ಟೆವರ್ಪ್ಪುದು ।
ಮಾದಾನವನರ್ಕ್ಕಜಟಿಯನಣ್ಪಿಂಗವನೊ ॥
ಳ್ಗಾದದೆಕರುಣಿಸಿವಿದ್ಯಾ ।
ಚ್ಛೇದಂಗೆಯ್ದುಂನಿರಂಕುಶಂದಶಕಂಠಂ ॥ 146

ವ ॥ ಅಂತುವಿದ್ಯಾಚ್ಛೇದನಂಗೆಯ್ವುದುಂ ॥

ಕಂ ॥ ಅಂಬರದಿನಾತ್ಮವಿದ್ಯಾ ।
ಡಂಬರವಸ್ತಮಿಸೆಬಿರ್ದ್ದಮೂರ್ಚ್ಛಾಪನಂ ॥
ಕಂಬುದ್ವೀಪದೊಳಳವೞ್ ।
ದಂಬರಚರನೆಱಕೆಮುಱಿದಪಕ್ಕಿವೊಲಿರ್ದ್ದಂ ॥ 147

ವ ॥ ಅಂನೆಗಮಿತ್ತದಶಮುಖಂಲಂಕೆಗಭಿಮುಖನಾಗಿಪೋಗುತ್ತುಂ ॥

ಮ ॥ ಬಗೆಸಂಭೋಗಸುಖಕ್ಕೆಕಾತರಿಸೆಕಣ್ಗೞ್ಕೆಱಿಸೆಸರ್ವ್ವಾಂಗಮಂ ।
ತೆಗೆದಾಲಿಂಗಿಸೆಮಾತುಗಳ್ಮದನರಾಗೋನ್ಮಾದಮಂಬೀಱಿಬಾ ॥
ಹುಗಳಾಲಿಂಗನಲೋಲುಪಂಗಳೆನೆಧೈರ್ಯ್ಯಂಗೆಟ್ಟುಮೇಲ್ವಾಯ್ವಚೇ ।
ಷ್ಟೆಗೆಪೌಲಸ್ತ್ಯನುಮೊಪ್ಪುಗೊಟ್ಟನೆಸಲಾರಂದರ್ಪ್ಪಕಂದಂಡಿಸಂ ॥ 148

ವ ॥ ಆಗಲವನೞಿಪಿನೞಿಗೆಯ್ದುತ್ತೆಕ್ಕೆ ಸೀತೆಸೈಸದೆನೀನೆಂನಂಸೋಂಕಿದೊಡೆ ನಾಲಗೆಗಿತ್ತುಸಾ
ವೆನೆಂದುಪರಿಚ್ಛೇದಿಸಿನುಡಿಯೆದಶಾಸ್ಯನೋಸರಿಸಿಮಹಾಸತಿಯಶೀಲದಳವನಱಿಯ
ನಪ್ಪುದಱಿನನಂತವೀರ್ಯ್ಯಕೇವಲಿಗಳೆತ್ತ ಪರವಧೂವಿರತಿವ್ರತಪರಿಪಾಲನವೆನಗಿ
ದಿರಾದುದೆನೆನಿಸರ್ಗ್ಗರಾಗಿಗಳಪ್ಪವೆಂಡಿರಪರಿಣಾಮವೆಲ್ಲಿವರಂನಡೆದಪ್ಪುದೀಕೆಯನಾ
ವತೆಱದೊಳಂ ಪ್ರೊಡಂಬಡಿಸುವುದಾವಗಹನಮೆಂದುತಂನಂತಾನೆಸಂತಯಿಸುತ್ತುಂ
ಪೋಪಸಮಯದೊಳ್ ॥

ಚ ॥ ಅನುವರದೊಳ್ಪಲಾಯನಪರರ್ಗ್ಗಱಿಸೋಂಕದೆಹಸ್ತನುಂಪ್ರಹ ।
ಸ್ತನುಮತಿವೇಗದಿಂಬರುತುಮಾಗಸದೊಳ್ದಶಕಂಠನಂವಿಲೋ ॥
ಚನಪಥವರ್ತ್ತಿಯಂಜಯಜಯಧ್ವನಿಕೆಯ್ಮಿಗೆಮುಟ್ಟೆವಂದವ ।
ರ್ವ್ವಿನಮಿತಮಸ್ತಕರ್ಮ್ಮುಕುಳಿತಾಂಜಲಿಗಳ್ನೊಡವಟ್ಟುಪೋಪುದುಂ ॥ 149

ವ ॥ ಆಗಳದಂಸೀತೆಕಂಡೀತನೇರಾವಣನೆಂದಱಿದು ॥

ಕಂ ॥ ಅನಶನಮಂಕಯ್ಕೊಂಡ ।
ಳ್ಮನದೊಳ್ಪತಿಪತಿಯಕುಶಲವಾರ್ತ್ತೆಯನಾಂಕೇ ॥
ಳ್ವಿನಮುಣ್ಣೆನೆಂದುನೃಪಮಾ ।
ನಿನಿಯರ್ಸ್ವರ್ಜ್ಜನಿಕೆಗಿಂತುನೋಂತರುಮೊಳರೇ ॥ 150

ವ ॥ ಅಂತುರಾವಣಂಲಂಕೆಯನೆಯ್ದೆವಂದುಗೀರ್ವ್ವಾಣರಮಣಮೆಂಬನಿಜವಿನೋದವ
ನಮಂಪುಗುವಾಗಳ್ ॥

ಕಂ ॥ ಪುಗದಿರ್ವ್ವನಮಂಪೊಕ್ಕೀ ।
ಮೃಗಾಕ್ಷಿಯುಂಮಡಗೆರಾಮದೂತನಿನೆಮಗ ॥
ಳ್ಚೆಗಮಕ್ಕುಮೆಂದುಕಯ್ಸಂ ।
ನೆಗೆಯ್ವವೋಲ್ತಿೞಿರತೊಂಗಲಲುಗಿದುವೆಲರಿಂ ॥ 151

ವ ॥ ಅಂತಾಬನಮಂಪೊಕ್ಕಲ್ಲಿಯವಿಚಿತ್ರಮಣಿಮಯಗೇಹದೊಳ್ವೈದೇಹಿಯನಿರಿಸಿತಾ
ನುಂತಂನಕರುಮಾಡಮಂಪೊಕ್ಕಿರ್ಪ್ಪುದುಮಾಸಮಯದೊಳ್ಖರದೂಷಣರಮ
ರಣವಾರ್ತ್ತೆಯಂಚಂದ್ರನಖಿಚರವಚನದಿಂಕೇಳ್ದು ॥

ಕಂ ॥ ಸುತನಂಕೊಂದವನಂಕೊ ।
ಲ್ವತಕ್ಕಿನಿಂಪೋಗಿನಿಜಪರಿಗ್ರಹಸಹಿತಂ ॥
ಪತಿಯುಂಮೈದುನನುಂಪಱ ।
ಹೃತಜೀವಿತರಾಗೆಶೋಕವಿಹ್ವಲೆಯಾದಳ್ ॥ 152

ಚ ॥ ಅವಿರಳವಾರಿಹಾರ್ಯ್ಯರಾತಿಶೋಕರುತಿಪ್ರತಿಬದ್ಧವಾಗೆಪ ।
ಲ್ಲವಪರಿಶೋಭಿಪಾಣಿತಳದಿಂಬಸಿಱಂಬಿಡೆವೋದಿಕೊಳ್ವುದುಂ ॥
ತ್ರಿವಳಿಗಳಂನವಾಗೆಪೆರಲಚ್ಚಿಱಿದಂತಿರೆಕಣ್ಣನೀರ್ವ್ವನ ।
ಲ್ಕವಿತರೆಬಂದುಚಂದ್ರನಖಿಪೊರ್ದ್ದಿದಳಗ್ರಜಪಾದಮೂಲಮಂ ॥ 153

ವ ॥ ಅಂತುಚಂದ್ರನಖಿನಿಖಿಲಾಂತಃಪುರಮುಂಮಂಡೋದರಿಯುಂಬೆರಸುಬಂದುಮುಂದೆ ಮಹಾಶೋಕಂಗೆಯ್ವುದು ಮಾಕೆಗೆಸಂಸಾರಸ್ವರೂಪಮಂ ತಿಳಿಪಿಖರದೂಷಣರಂ ಕೊಂದನನಮೋಘಂಕೊಲ್ವೆನೆಂದಳ್ಕಯುಂಬಾರಿಸಿಭಗವದರ್ಹದ್ಭವನಂಗಳೊಳ್ಮ ಹಾಪೂಜೆಯಂಮಾಡಿಸಿರಾಜಭವನಕ್ಕೆಬಂದುಶಯ್ಯಾಸದನಮಂಪೊಕ್ಕು ॥

ಚ ॥ ತಡೆವುದುತಕ್ಕುದಲ್ತುಖರದೂಷಣರಂಕಡುಕೆಯ್ದುಕೊಂದನಂ ।
ಮಡಿಪುವೆನೆಂದುತಕ್ಕಳಿದುಸೀತೆಯನೇತಱಿಂದಮೆಂತೊಡಂ ॥
ಬಡಿಸುವೆನೆಂತುಮೋಳಿಸುವೆನೆಂತುಮದೀಯಮನೋಜತಾಪಮಂ ।
ಕಿಡಿಸುವೆನೆಂದುಪಂಬಲಿಸಿದಂಪಲವಂಮನದೊಳ್ದಶಾನನಂ ॥ 154

ಉ ॥ ಏತಱಸೋಂಕುಮಾವುದಱಗಾಡಿಯುಮೊಂದಱಕಂಪುಮೆಂನರೊ ।
ಳ್ಮಾತುಮದೆಂತುಟಪ್ಪರಸಮುಂತನಗೆಂತುಮಸಹ್ಯಮಾಗೆಸ್ತ್ರ ॥
ಜ್ಞಾತನಮಾಯೆಮೋಹಿಸುವುದುಂಬಗೆಯುಂವಿಗತಾನ್ಯಚಿತ್ತನಾ ।
ಸೀತೆಯಚಿಂತೆಯಿಂದಶಮುಖಂಮರವಾನಿಸನಂತೆತೋಱಿದಂ ॥ 155

ವ ॥ ಅಂತುಚಿಂತಾಕ್ರಾಂತನಾದನಿಜಮನೋವಲ್ಲಭನಂಮಂಡೋದರಿಕಂಡು ॥

ಚ ॥ ಖರನವಿಪತ್ತಿಯೊಳ್ವ್ಯಕಳನಾದನೆಗೆತ್ತಿನಿತೇಕೆಪೆಂಡಿರಂ ।
ತಿರೆಬಹುಶೋಕವಿಘಾತೆಱದಿನಿರ್ದ್ದೊಡೆಗಂಡಗೆಣಕ್ಕೆನಾಡೆಯುಂ ॥
ಪರಿಭವಮೊಂದಳಿತ್ತಱಿವಳ್ಗಗನೇಚರಚಕ್ರಿಜಾನಕೀ ।
ವಿರಹಕೃಶಾನುಸುತ್ತಿಸುಡೆಚಿತ್ತಮನಾಕುಲನಾದನೆಂಬುದಂ ॥ 156

ವ ॥ ಎನೆದಶಗ್ರೀವನೆಂನಪೆಸನಕ್ಕಿದುನಿಮಿತ್ತಮಲ್ತುನಿನಗೆನ್ನತೆಱನಱಿಯಲಾಗದೆಂದು ॥

ಕಂ ॥ ಪೆಂಡಾಗಿಮನಂಪೋಱನಂ ।
ಗೊಂಡಿರೆವಲ್ಲಭನಮನಮನಱಿದಾಗ್ರಹದಿಂ ॥
ಮಂಡೋದರಿಮಾಣದೆಪೆಸ ।
ಗೊಂಡಳ್ಕಾತುಕಮಿದೇಂನಿಮಿತ್ತಮೆನುತ್ತುಂ ॥ 157

ವ ॥ ಅಂತುಪೆಸಗೊಳ್ವುದುಂಮಱುಮಾತುಗುಡದೆಲಜ್ಜಾರಸನಿಮಜ್ಜದ್ದಶಾನನಂದಶಾನನ
ನಿರೆ ॥

ಉ ॥ ಗಂಡುಡೆಯುಟ್ಟುಕೈದುವಿಡಿದುಂಮೞಮುಂನಿನಗುಂಟುಮಾಳ್ಪಬ ।
ಲ್ಗಂಡಿನದೇವಮಾನವವಿಯಚ್ಚರರೋರ್ವರುಮಿಲ್ಲನಿಂನದೋ ॥
ರ್ಮ್ಮಂಡಲಮಿತ್ರಿಖಂಡಮುಮನಾಕ್ರಮಿಸಿತ್ತಿದುಪುಷ್ಪಕಾಂಡಕೋ ।
ದಂಡನಗೊಡ್ಡಮುಟ್ಟಿದುವೆತೋಱುವೆಯಾತನಪೂವಿನಂಬುಗಳ್ ॥ 158

ಕಂ ॥ ಸ್ಮರನಂಮೆಚ್ಚದಸಿಂನೀ ।
ಪರಿಜಂಕಡೆಗಣಿಸಿನಿನಗಮಿನಿತಚ್ಚಗಮಂ ॥
ತರಲಾರ್ತ್ತನೀಱೆಲೆಪ್ಪದ ।
ಬರೆಪದಕಂಡರಣೆಪೆಸದಪೆಂಣಕ್ಕುಮವಳ್ ॥ 159

ವ ॥ ಎಂದು ಮನವಮನಱಿದುತೆಱೆಯೆನುಡಿಯೆ ಮನದೆಗೊಂಡುಮಂಡೋದರಿಯುಮೊಗ
ಮಂನೋಡಿ ॥

ಚ ॥ ಅಱಿಪುವವಾರ್ತ್ತೆಯಲ್ಲುನಿನಗೆಂನನೆಗಳ್ತೆಯುಮಾರ್ತ್ತೆನೀನೆಮುಂ ।
ನೆಱಿದಬಳಿಕ್ಕದಂನಿನಗೆವಂಚಿಸಲಾಗದುತಂದೆನಿಂದುಮುಂ ॥
ದೞಿಯದೆಸೀತೆಯುಂಮದನನಾಕೆಯದೂಸಱಿನೆಂಸನೆಚ್ಚಪಂ ।
ನೆಱೆಗೊಳೆಪೂವಿನಂಬಲಗಿನಂಬುಗಳೆಂಬಿನಮಂಬುಜಾನನೇ ॥ 160

ವ ॥ ಎಂದುಮತ್ತಮಿಂತೆಂದನಿಂದುಪುಷ್ಪಕವಿಮಾನದೊಳೆಜಾನಕಿಯುಮುಱೆಸೆಱೆವಿಡಿದು
ಬರುತ್ತುಮಾಕೆಯುಪಳಾಗಳೆದಗಾಡಿಯುಂನೋಡಿಮನದೊಳೆನಗಳ್ಪುಕಯ್ಗಳ್ವಾಗೆ
ಸೈರಿಸದೆಪೊರ್ದಲ್ವರನೀನೆಂನಂಪೊರ್ದಿದೊಡೆನಾಲಗೆಗಿತ್ತುಸಾವೆನೆಂದುಜಡಿದುನು
ಡಿಯೆಸೆಡೆದುಲಂಕೆಗೆತಂದುಗೀರ್ವಾಣರಮಣೋದ್ಯಾನದೊಳಿರಿಸಿಬಂದೆನಾಕುಂದ
ದಳಧವಳಲೋಚನೆಯುಲಾವಣ್ಯಸುಧಾರಸಸೇವನೆಸಮನಿಸದಿರೆ ಸಾವುಸಮನಿಸು
ಗುಮೆನೆದಶಾನನನದಶಾವಸ್ಥೆಯುಂಕಂಡುಮಂಡೋದರಿಭಯಂಗೊಂಡು ॥

ಕಂ ॥ ಅಚಿರಪ್ರಭೆಯುಂಪೆಂಡಿರ ।
ಶುಚಿತ್ವಮುಂಕ್ಷಣದಿನಗ್ಗಳಂನಿಲ್ಕುಮೆಪೇ ॥
ಳ್ಕಚರೇಂದ್ರನಿಜಾಕೃತಿಚಿ ।
ತ್ತಚಮತ್ಕೃತಿಗಂಡಿದಕ್ಕೆಸೋಲದರೊಳರೇ ॥ 161

ವ ॥ ಎಂದುಸಂತಸಂಬಡೆನುಡಿದಾಕೆಯನೊಡಂಬಡಿಸಲಾನೇಸಾಲ್ವೆನೆಂದುಸಮಸ್ತಾಂತಃ
ಪುರಸೀಮಂತಿನಿಯರ್ವೆರಸುಸೀತೆಯಸಮೀಪಕ್ಕೆ ವಂದು ॥

ಕಂ ॥ ವನಿತೆಯರನಯನರುಚಿಯಿಂ ।
ತನುರುಚಿಯಿಂರತ್ನಭೂಷಣಂಗಳರುಚಿಯಿಂ ॥
ದಿನಲಕ್ಷ್ಮಿಗೆಕೊರ್ವ್ವಿರ್ದುದು ।
ದನಿಮಂಡೋದರಿವಿಲಾಸದಿಂಕುಳ್ಳಿರ್ದ್ದಳ್ ॥ 162

ವ ॥ ಅಂತುಕುಳ್ಳಿರ್ಪ್ಪುದುಂ ॥

ಕಂ ॥ ಅನಿಬರರಸಿಯರರೂಪುಂ ।
ಮನಕ್ಕೆ ಸೊಗಯಿಸಿದುದಿಲ್ಲಸೀತೆಯಕೆಲದೊ ॥
ಳ್ದಿನಲಕ್ಷ್ಮಿಯಕೆಲದೊಳ್ಲೋ ।
ಚನಸುಖಮಂಪಡೆಯದಂತುತಾರಾವಿಭವಂ ॥ 163

ವ ॥ ಅನಂತರಮಾಖಚರಕಾಂತೆಜಾನಕಿಯಮುಖಸರೋಜಮಂನೋಡಿ ॥

ಉ ॥ ಪಂಕಜಸಂಭವಂನಿನಗೆಪಾಸಟಿಯಲ್ಲದರಾಘವಂಗೆನಿಂ ।
ನಂಕುಡೆಕಂಡುಸೈರಿಸದೆಚಿತ್ತಭವಂದಶಕಂಧರಂಗೆಕೊ ॥
ಟ್ಟಂಕಡುನೀಜಿನಿಂನನನುರೂಪವರಂಗೊಡಗೂಡಿಲೀಲೆಯಿಂ ।
ಲಂಕೆಯನಾಳ್ಗೆತಾಳ್ದರಸಿಪಟ್ಟಮನಾತ್ಮಲಲಾಟಪಟ್ಟದೊಳ್ ॥ 164

ಈನವಯೌವನೋದಯಮನೀನಯನೋತ್ಸವಮಪ್ಪರೂಪಿನು ।
ದ್ದಾನಿಯನೀತನುಚ್ಛವಿಯನೇಂಪೊಗಳ್ದಪ್ಪುದೊಸೋಲ್ತುಬಂದೊಡಂ ॥
ಮೇನಕಿಬಾರ್ತ್ತೆಗೆಯ್ಯದದಶಾನನನುಂಬಸವಾದನೆಂದೊಡಾ ।
ಜ್ಜಾನಕಿನಿಂನವೋಲುಳಿದಮಾನಿನಿಯರ್ಕ್ಕಡುಗಾಡಿಕಾರ್ತ್ತಿಯರ್ ॥ 165

ಕಂ ॥ ಪದವಿಲ್ಲಂನನೆಯಂಬಿನ ।
ಪೊದೆಯಂಪಿಡಿದಿರದಪದದೊಳಾನೊರ್ಡಿದೊಡಂ ॥
ಮದನಂಗಂಮಾನಿನಿದಶ ।
ವದನಂಗಂರೂಪುಭೇದಮೇನಾದಪುದೇ ॥ 166

ಚ ॥ ಇಸುವೆಸಕೆಯ್ಯುಸ್ಖೇಚರಪುರಂಧ್ರಿಯರಂಭರತತ್ರಿಖಂಡದೊ ।
ಳ್ಪಸರಿಸುನಿಂನಗೋಸಣೆಯನಾಣೆಯನೀಖಚರೇಂದ್ರವಕ್ಷದೊ ॥
ಳ್ಪಸಿಯಿಸುಲಕ್ಷ್ಮಿಪೋಲ್ವಿಜಯಲಕ್ಷ್ಮಿಪೊಲಾತನತೋಳತಣ್ಪಿನೊ ।
ಳ್ಪೊಸಯಿಸುನಲ್ಮೆಯಂದಿವಸಲಕ್ಷ್ಮಿಯನೇಕೆಯೊಬಂಜೆಮಾಡುವೈ ॥ 167

ಚ ॥ ಜನಕಜೆನಿಂನಪೀವರಪಯೋಧರಮಂಡಲಮಂಮನೋಜರಾ ।
ಜನವಿಜಯಾಭಿಷೇಕಸವನೋತ್ಸವಪೂರ್ಣ್ಣಸುವರ್ಣ್ಣಕುಂಭಮಂ ॥
ನೆನೆಯಿಸುವಂತುಮಾಡುಖಚರೇಂದ್ರನಕಾತರದೃಷ್ಟಿಪಾತಮಂ ।
ಘನಘನಸಾರಕರ್ದ್ದಮವಿಲೇಪನದಿಂಕರಪಲ್ಲವಂಗಳಿಂ ॥ 168

ವ ॥ ಎನೆಜಾನಕಿಮಂಡೋದರಿಗೆಮನದೊಳ್ಕನಲ್ದು ॥

ಮ ॥ ಇದುಮತ್ತೋನ್ಮತ್ತಜಲ್ಪಂಕುಲವಧುಗಳಮಾತಲ್ತುನಿಂಮಂದಿಗರ್ವ್ವಂ ।
ಶಠಕೇಡಂನೋಡದೊಳ್ಪಂಬಗೆಯದೆಪಳಿಗಂಪಾತಕಕ್ಕಂಭಯಂಗೊ ॥
ಳ್ಳದೆಕೇಳೀಪೊಲ್ಲಮಾತಂನುಡಿದಿರಿದುಮನಂನೋಳ್ಪಸಂಕಲ್ಪಜಲ್ಪಂ ।
ಮದಧೀಶಂರಾಮಚಂದ್ರಂಪೊಱಗೆನೆಪೆಱರೇಂಮಾತೊಜಾತಾನುಜಾತರ್ ॥ 169

ಕಂ ॥ ತನಗೆಪತಿವ್ರತಮಿಲ್ಲದ ।
ವನಿತೆಕುಲಸ್ತ್ರೀಯೆಭಿನ್ನಭಾಜನೆಯಿಂತ ॥
ಪ್ಪನುಚಿತಮಂಹರಿವಂಶದ ।
ವನಿತೆಯರೊಳ್ನುಡಿಯಲಕ್ಕುಮೇನಿಮ್ಮನ್ನರ್ ॥ 170

ವ ॥ ಎಂದುಮಂಡೋದರಿಯಂಬಿಡೆನುಡಿವುದುಮಾಸಮಯದೊಳ್ ॥

ಮ ॥ ಜಡಿಯುತ್ತಂ ಚಂದ್ರಹಾಸಾಸಿಯನೆಳಸೆತದಾಸ್ಥಾನಮಂದಿವ್ಯಗಂಧಂ ।
ಕುಡುಮಿಂಚಂಬೀಱೆವಜ್ರಾಭರಣಕಿರಣಮಿಂದ್ರಂಗೆಸೌಂದರ್ಯ್ಯದಿಂನೂ ॥
ರ್ಮ್ಮಡಿಮೇಲೆಂಬಂನೆಗಂಭೋಂಕನೆಜನಕಸುತಾಲೋಕನೋತ್ಕಂಠಚಿತ್ತಂ ।
ನಡೆತಂದಂದಾನವೇಂದ್ರಂಸುರತರುಸುಮನೋಮಂಜರೀಕರ್ಣ್ಣಪೂರಂ ॥ 171

ಕಂ ॥ ಹರಿನೀರೊಳಗಣನೆಳಲಂ ।
ತಿರೆತಂನಂನೋಡಿನಡುಗೆಜಾನಕಿದಶಕಂ ॥
ಧರನಂಜದಿರೆನುತಂತಃ ।
ಪುರಮಂಕಣ್ಸಂನೆಯಿಂದಮಲ್ಲಿಂಕಳೆದಂ ॥ 172

ವ ॥ ಅನಂತರಂಜಾನಕೀವದನವಿನ್ಯಸ್ತವಿಲೋಚನಂಕಮಳಿನಿಯನೆಳಸುವಹಿಮಕರಕಿರ
ಣದಂತೆದಂತಕಾಂತಿಪಸರಿಸೆಪೌಲಸ್ತ್ಯನಿಂತೆಂದಂ ॥

ಉ ॥ ನೂಪುರಮಂಪದಕ್ಕೆಮಣಿಮೇಖಲೆಯಂಜಘನಕ್ಕೆಕುಂಕುಮಾ ।
ಲೇಪನಮಂಕುಚಕ್ಕೆಪಸುರ್ಗಂಕಣಮಂನತೋಳ್ಗೆಪತ್ರಲೇ ॥
ಖಾಪರಿಶೋಭೆಯಂನಿಜಕಪೋಲತಳಕ್ಕೆಕುಡಲ್ಮನೋಜಸಂ ।
ತಾಪನತಪ್ತಮಾತುರಿಸಿದಪ್ಪುದುಮನ್ಮನಮಂಬುಜಾನನೇ ॥ 173

ಆನೆಯಮೇಲೆಬೆಳ್ಗೊಡೆಯತಣ್ಣೆಳಲೊಳ್ಕುಳ್ಳಿರ್ದರ್ಗಲೇಸರೋ ।
ಜಾನನೆಪೆಂಡವಾಸದವಿಳಾಸಿನಿಯರ್ಬರೆನಿಂನಸುತ್ತಲುಂ ॥
ಜಾನಕಿನೋಡನಿಂನನಗೆಗಣ್ಪರಿತೃಪ್ತಿಯನಪ್ಪುಕೆಯ್ಯೆಲಂ ।
ಕಾನಗರೀಬಹಿಃಪುರನಮೇರುವಿಳಾಸವನಂಗಳೇಳುವಂ ॥ 174

ಚ ॥ ಕುಲನದಿಯಂಕುಲಾದ್ರಿಶಿಖರಂಗಳದಿವ್ಯಸರೋವರಂಗಳಂ ।
ಮಲಯಗಿರೀಂದ್ರಸಾನುವನಮಂಲವಣಾರ್ಣವವಜ್ರವೇದಿಕಾ ॥
ವಿಲಸನಮಂವಿಲೋಚನಪಥಾತಿಥಿಮಾಡಿವಿಯದ್ವಿಳಾಸಿನೀ ।
ತಿಲಕವೆನಿಪ್ಪಪುಷ್ಪಕವಿಮಾನವಮೆಂನೊಡನೇಱುಜಾನಕೀ ॥ 175

ಶಾ ॥ ಎಂನೊಳ್ಪೋರ್ದರ್ಗಡಿದಿಂದ್ರಸಿಂಧುರದಕೋಡಿಂದಾದಪಲ್ಯಂಕದೊ ।
ಳ್ಮುನ್ನಂಪದ್ಮಜನಂಚೆಯಂತಱಿದುತುಪ್ಪುಳ್ಗೊಂಡುದಿಕ್ಪಾಲಕ ॥
ರ್ಬೆರ್ಗಂನಿತ್ತಿಕ್ಕಿದಚೇಲದಿಂಸಮೆದಕೇಳೀತಲ್ಪದೊಳ್ನಿದ್ರೆಗೆಯ್ ।
ನಿಂನಂನಿದ್ರೆಯಿನೆಬ್ಬುರ್ವವಂನಮಮರೀಮಾಂಗಲ್ಯಗೀತಸ್ವನಂ ॥ 176

ಮ॥ಸ್ರ॥ ಅಸಿರತ್ನಂಚಕ್ರರತ್ನಂನವನಿಧಿಸಲವುಂವಿದ್ಯೆಕೈಸಾರ್ದುವುಳ್ಳಂ ।
ಜಸಿದೆಂದಿಕ್ಪಾಲರಂಕಟ್ಟಿದೆನುಱಿದಿರಾದಿಂದ್ರನಂಲೀಲೆಯಿಂಚಾ ॥
ಳಿಸಿದೆಂಕೈಲಾಸಮಂದಕ್ಷಿಣಭರತಧರಾಚಕ್ರಮಂಚಕ್ರದಿಂಸಾ ।
ಧಿಸಿದೆಂಪೌಲಸ್ತ್ಯನಂಮೀಱುವರಸಮರದೊಳ್ಮಾನವಮಿರ್ಗನನೇತ್ರೇ ॥ 177

ಶಾ ॥ ಕಾಡಂಕೂಡಿತೊಳಲ್ದಿಕಾಡೊಡಮೆಯಿಂಭೋಗೋಪಭೋಗಂಗಳೊ ।
ಳ್ಕೀಡುಂತೃಪ್ತಿಯನೀವರಾಘವನೊಳೇಂವೈದೇಹಿವಿದ್ಯಾಧರ ॥
ಕ್ರೀಡಾಸದ್ಮದೊಳಂಗರಾಗವಸನಾದಿದ್ರವ್ಯದಿಂಮನ್ಮಥ ।
ಕ್ರೀಡಾಸೌಖ್ಯಮನಪ್ಪುಕೆಯ್ದುಮೆಱೆನೀಂನಾನಾವಿನೋದಂಗಳಂ ॥ 178

ವ ॥ ಎಂದುಪರನಿಂದಾಪರನುಮಾತ್ಮಸ್ತವನತತ್ಪರನುಮಾಗಿ ॥

ಕಂ ॥ ಅನುನಯಶತಂಗಳಂನುಡಿ ।
ದನುವಕವಾಡಲ್ಕೆಯಕ್ಷರೇಂದ್ರನುಮೇನಾ ॥
ತ್ತರ್ನೆಜನಕಜೆಯಂಗಗನಮ ।
ನನುಲೇಪಂಗೆಯ್ದೊಡಲ್ಲಿಮುಸಿಪತ್ತುಗುಮೇ ॥ 179

ಸಿರಿಯುಂಮೆಯ್ಸಿರಿಯುಂಮೆಱೆ ।
ದುರಾವಣಂಸತಿಯನೆಱಗಿಸಲ್ಸಾಲ್ತನೆಪೊಂ ॥

ನೊರೆಗನ್ಯದೀಪಮೆಱಪಂ ।
ತಿರೆಮಾಣಿಕ್ಯಪ್ರದೀಪಮೇನೆಱಗುಗುಮೇ ॥ 180

ವ ॥ ಅಂತಾದುರಾತ್ಮನದುರುಕ್ತಿಗೆಜನಕಸುತೆ ಕಡುಮುಳಿದುಮುನಿಸಂಮೊಗಕ್ಕೆತಾರದೆ ॥

ಮ ॥ ನುಡಿಯಲ್ತಕ್ಕುದೆಪೇೞ್ದಪ್ಪಿಪೆಗಂಪಾಪಕ್ಕಮುಳ್ಳಕ್ಕುದೀ ।
ನುಡಿಯಂಚೀಪರದಾರವನ್ಯಶಯನಸ್ಥಾನಂಪೆಱಮ್ಮಿರ್ಗಂದನೀ ॥
ರ್ಮ್ಮುಡಿದುತ್ಫುಲ್ಲಕದಂಬಕಂತೊಡೆದಕಾಶ್ಮೀರಾಂಗರಾಗಾದಿಗ ।
ಳ್ಮಡಗೊಟ್ಟಿಳ್ದುಶೆಬಾಯತಂಬುಲಮಿವಸ್ವೈಶ್ಯಂಗಳೇನಲ್ಲವೇ ॥ 181

ಕಂ ॥ ಗುಣಹಾನಿಯಿಂದಧೋಗತಿ ।
ಗುಣದಿಂಸ್ವರ್ಗ್ಗಾಪವರ್ಗ್ಗಸುಖಮಕ್ಕುಮೆನ ॥
ಲ್ಗುಣಹೀನರಸಿರಿಯಿಂದಂ ।
ಗುಣಿಗಳಬಡತನಮೆನಾಡೆಯುಂಲೇಸಲ್ತೇ ॥ 182

ಮ ॥ ಅಱುನೀರಾಗಿರೆತಾಯ್ಮಳಲ್ವರೆಗಮೀವಾರಾಸಿಯಂತುಳ್ಕಲುಂ ।
ತಿಱಿಕಲ್ಲಾಡಲುಮೀತ್ರಿಕೂಟಗಿರಿಯಂತತ್ಸೂರ್ಯ್ಯಹಾಸಾಸಿಯಿಂ ॥
ದಿಱಿದಳ್ಕಾಡಿಸಲುಂದ್ವಿಷನ್ನೃಪರನೇಕಾಕ್ಷೋಹಿಣೀಸೇನೆಯಂ ।
ನೆಱೆವಂದೋರ್ವ್ವಲದೃಪ್ತನಪ್ರತಿಹತಂರಾಮಾನುಜಂಲಕ್ಷ್ಮಣಂ ॥ 183

ಉ ॥ ರಾಮನನಂತವೀರ್ಯ್ಯನಿದಿರೆಳ್ಬವನತ್ರಯಮಾಂತೊಡಂನೃಪ ।
ಗ್ರಾಮಣಿದೋಸ್ಸಹಾಯದೊಳೆಗೆಲ್ವನಮೋಘಮುದಾತ್ತರಾಘವೋ ॥
ದ್ದಾಮಶಿಳೀಮುಖಂರಣದೊಳನ್ಯಸಹಾಯಮನಾಸೆಗೆಯ್ವಶಂ ।
ಕಾಮಯಹೀಡ್ಯಮಾನಂಧಿರಾಜನೊಳೆಕ್ಕತುಳಕ್ಕೆಬರ್ಪ್ಪರೇ ॥ 184

ಆಹವದೋಃಹಳಂಮಸುಳೆಮತ್ಪತಿಯಿಂದಮುಗಳ್ಚಿತಂದೆವೈ ।
ದೇಹಿಯುನೆಂನನುಕ್ಕೆವದಿನಲ್ಲದೊಡೇಂದಶಕಂಠರಾಮಬಾ ॥
ಣಾಪತಿಯಿಂನಭಂಬರೆಗಮಂಬಿರಿಪಿಟ್ಟ್ಯಮಡಲ್ತವಿದ್ವಿಷ ।
ಲ್ಲೋಹಿತದಿಂದಕಾಂಡಲಯಕಾಲದಸಂಜೆಮುಗಿಲ್ಗಳಾಗವೇ ॥ 185

ವ ॥ ಎಂದುಮಱುಮಾತಿಂಗೆಡೆಯಿಲ್ಲದಂತುನುಡಿಯೆ ॥

ಕಂ ॥ ಬಿಡೆನುಡಿಯೆಸೀತೆಮುಳಿಸಿನ ।
ಪಡೆಮಾತಂತಿರ್ಕ್ಕೆರಾವಣಂಗೊಲವುಪದಿ ॥
ರ್ಮ್ಮಡಿಸಿತ್ತಪ್ರಾಪ್ತಿರಸಂ ।
ಬಡೆಗುಂವೈಷಯಿಕಸುಖದೊಳೆದುವಿಸ್ಮಯಮೇ ॥ 186

ವ ॥ ಅಂತುದಶಕಂಠನಾಕಂಬುಕಂಧರೆಯಕನಲ್ದೊನಲ್ದುನುಡಿವವಕ್ರವಚನಮೆಸುಗ್ಗಿ
ಯಕಳಕಂಠಿಯಪುಗಿಲೆಂಬವಕ್ರವಚನದಂತೆತನಗೆಮದನರಾಗಹೇತುವಾಗೆ ॥

ಕಂ ॥ ನಯದಿಂದಮೀಸರೋರುಹ ।
ನಯನೆಯನಳವಡಿಸಲಾರ್ತ್ತನಿಲ್ಲಳವಡಿಸೆಂ ॥
ಭಯದಿಂದಮೆಂದುವಿದ್ಯಾ ।
ದಯಿತಂಪಡೆದಂವಿಕುರ್ವ್ವಣಾವೈಭವಮಂ ॥ 187

ವ ॥ ಆಸಮಯದೊಳ್ ॥

ಕಂ ॥ ರಾಗಾವಿಳರಾಪದ್ಗತ ।
ರಾಗದರಾರೆಂದುದಶಮುಖಂಗಱಿಪುವವೋಲ್ ॥
ಲಾಗಸದಿನಪರಸಂಧ್ಯಾ ।
ರಾಗಾವಿಳನರ್ಕ್ಕನಪರವಾರಿಧಿಗಿೞಿದಂ ॥ 188

ವ ॥ ಅಂತುನೇಸರ್ಪ್ಪಡಲೊಡಂ ॥

ಉ ॥ ತೋರವೆಣಂಗಳಂತಳೆದುಭೂತಗಣಂಕುಣಿದಾಡುವಂತತಿ ।
ಕ್ರೂರಮೃಗಂಗಳನ್ವಿಳಿಸಿಗರ್ಜ್ಜಿಸಿನುಂಗಲೊಡರ್ಚ್ಚುವಂತುಘೋ ॥
ಬ್ಭೋರ್ರೆನೆರಕ್ತವೃಶ್ಚಿಕಚಯವಂತುಸಿಡಿಲ್ದೊಡೆವಂತುಸುತ್ತಲುಂ ।
ವಾರಿಧಿಮೇರೆದಪ್ಪಿಕವಿವಂತುವಿಗುರ್ವ್ವಿಸಿದಂದಶಾನನಂ ॥ 189

ವ ॥ ಅಂತುವಿಗುರ್ವ್ವಿಸುವುದುಂ ॥

ಕಂ ॥ ಬಗೆಯೊಳ್ಜೈನಪದಂನಾ ।
ಲಗೆಯೊಳ್ಪಂಚಪದಮಗಲದಿರೆರನ್ನದದೀ ॥
ವಿಗೆಪರುಷಪವನಹತಿಯುಂ ।
ಬಗೆಯದವೋಲ್ಸೀತೆಬಗೆದೊಲ್ಲುಪಹತಿಯಂ ॥ 190

ವ ॥ ಆಸಮಯದೊಳ್ಸವಿತೃಮಂಡಲಮುದಯಾಚಲಶಿಖರಮಾಣಿಕ್ಯಮಂಡನಮೆನಿಸೆ
ವಿಭೀಷಣಪ್ರಮುಖಮುಖ್ಯಪುರುಷರ್ಪ್ಪೌಲಸ್ತ್ಯನಕೆಲಕ್ಕೆವಂದುಖರದೂಷಣರ
ಮರಣಶೋಕವಿಷಣ್ಣಮನರಾಗಿರ್ಪ್ಪುದುಮಂನೆಗವಿತ್ತಕಂನೆಮಾಡದಮಱಿಯೊ
ೞಿರ್ದ್ದಸೀತೆಶೋಕಂಗೆಯ್ವಸ್ವರಮಂವಿಭೀಷಣಂಕೇಳ್ದುಪುರುಷವಿರಹದಿನತಿಪ್ರಳಾ
ಪಂಗೆಯ್ವರಾರೆಂಬುದುಮಾಮಾತಂಸೀತೆಕೇಳ್ದಿಂತೆಂದಳ್ ॥

ಚ ॥ ತನಗಿದಿರಾಂತಮಹಾರ್ವ್ವಲಮನೋರ್ವ್ವನೆಲಕ್ಷ್ಮಣನಾಂತುಕಾದೆತಂ ।
ಮನರಣಮಂನಿರೀಕ್ಷಿಸಲಪೇಕ್ಷಿಸಿಪೋಗೆಪರೋಕ್ಷದೊಳ್ದಶಾ ॥
ನನನೆಳೆತಂದನಾಂಜನಕನಂದನೆಯಂರಘುವೀರನಪ್ಪರಾ ।
ಮನವಧುಸೀತೆಯಂಪತಿವಿಯೋಗಕೃಶಾನುಸುಡಲ್ಕೆಬೆಂದಪೆಂ ॥ 191

ವ ॥ ಎನೆವಿಭೀಷಣಂನೈಮಿತ್ತಿಕಾದೇಶಮಂನೆನೆದುಭಯಚಕಿತಚಿತ್ತನಾಗಿ ॥

ಕಂ ॥ ಪರರಂಗನೆಯರ್ಗ್ಗಳಿಪಂ ।
ತರೆಪುರುಷಂಪುರುಷಧರ್ಮ್ಮಮಳಿಗುಂಪಳಿಗುಂ ॥
ಧರೆದುರ್ಗ್ಗತಿಸಮನಿಸುಗುಂ ।
ಪರಿಹರಿಸುವುದಾರುಮಱಿಯದೀದುರ್ನ್ನಯಮಂ ॥ 192

ವ ॥ ಎಂದುಬಿಂನವಿಸೆಮಾರೀಚನದನೆನುಡಿಯೆ ॥

ಕಂ ॥ ಸ್ತ್ರೀರತ್ನಕ್ಕಾನಿರಪೆಱ ।
ರಾರೊಡೆಯವಿರ್ಮ್ಮಱುವಂನರಾರೆಂನೀದು ॥
ರ್ವ್ವಾರಭುಜಬಲಮನೆಂದವಿ ।
ಚಾರಿದಶಗ್ರೀವನವರನೇಳಿಸಿನುಡಿದಂ ॥ 193

ವ ॥ ಅಂತುನುಡಿದುದಾನವಂತ್ರಿಜಗದ್ಭೂಷಣದಾನಗಜಮನೇಱಿಜಾನಕಿಯಂಪುಷ್ಪಕವಿ
ಮಾನಮನೇಱಿಸಿನಿಖಿಲಸಾಮಂತಸೇನೆಮುಂದೆಪರಿಯೆ ಪುರಶ್ರೀವಿಳಾಸಮಂತನಗೆ
ತೋರ್ಪ್ಪುದಂ ॥

ಉ ॥ ಜಾನಕಿಜೀವಿತೇಶ್ವರನಗಲ್ಕೆಯೊಳಗ್ಗಳಮಾದಖೇದದಿಂ ।
ದೇನುಮಸಹ್ಯಮಾಗೆಪುರಮಂಪುರಗೋಪುರಮಂಬಹಿಃಪುರೋ ॥
ದ್ಯಾನಮನೀಕ್ಷಿಸಲ್ಬಗೆವಿರೂಕ್ಷಿಸಿಕನ್ನಡಿಸಲ್ಕೆಸಾಲ್ದಳ ।
ಬ್ಜಾನನೆದುಃಖಿತೇಮನಸಿಸರ್ವ್ವಮಸಹ್ಯಮೆನಿಪ್ಪವಾಕ್ಯಮಂ ॥ 194

ವ ॥ ಅಂತುರಾಮಸೀಮಂತಿನಿಯಂಪ್ರಮೋದಮದಿರಾಪ್ರಮತ್ತಂಪ್ರಮದವನದೊಳ್ಸೆ
ಱೆಗೆಯ್ದುವಿರಹವಿಕಳನಾಗಿರ್ಪ್ಪುದುಮಾತನಕೇಡಂವಿಭೀಷಣಂಕೆಂಡುಭಯಂಗೊಂ
ಡುಮಂತ್ರಣಮಿದರ್ಪ್ಪ ಸಮಯದೊಳ್ಸಂಭಿಂನವೆಸರಮಂತ್ರಿಮುಖ್ಯಂದಿಗ್ಗಜದನಿ
ಗ್ಗವಮನುಡಿವಂತೆವಿಯಚ್ಚರಪತಿಯನಚ್ಚಿನಖರದೂಷಣರಂಕೊಂದುತದಪತ್ಯನ
ಪ್ಪಸುಂದರನಂಪಾತಾಳಲಂಕೆಯಿಂಸೋದುಕಳೆದುತದ್ವಿರೋಧಿಯಪ್ಪವಿರಾಧಿತನನ
ನ್ವಯಾಗತರಾಜ್ಯಲಕ್ಷ್ಮಿಯೊಳ್ನೆಲಿಸಿರಾಮಲಕ್ಷ್ಮಣರ್ವ್ವೈರ್ದೇಹಿಯಪೋದದನೆ

ಯನಱಿಯದಿರ್ದ್ದರಲ್ಲದೆಯುಂವಿಗ್ರಹಸಮಗ್ರನಪ್ಪಸುಗ್ರೀವನಂಮೊಳಾದನುಬಂಧದಿಂಶಿಥಿಲನಾಗಿರ್ಕ್ಕುಮಾತನೊಳನು ಬಂಧಮುಳ್ಳದಱಿಂ ಹನುಮಾನುಂನಮಗಲ್ಲನೆಂಬುದುಮಾನುಡಿಗೆದಶಮುಖಂಪರಿಹಾಸಮುಖರಮುಖನಾಗಿ ॥

ಚ ॥ ಕಡಲೊಳಗೊಂದೆರಳ್ದಲಕಣಂಪವನಾಹತಿಯಿಂವಿನಾಶಮಾ ।
ದೊಡೆಜಲರಾಶಿಕುಂದುಗುಮೆಮೇರೆಗೆದೂರಮೆನಿಪ್ಪನಂಬುಧೀ ॥
ರ್ವ್ವಡೆಖರದೂಷಣರ್ಕ್ಕಳಿಯೆಕುಂದುಗುಮೇಕಪಿಚಿಹ್ನರಿಲ್ಲದೇಂ ।
ಕಿಡುವುದೊಭೂಚರರ್ದ್ಧರದೊಳಂಪರೆಖೇಚರಚಕ್ರವರ್ತ್ತಿಯಂ ॥ 195

ವ ॥ ಎಂಬುದುಮಾನುಡಿಯನವಕರ್ಣ್ಣಿಸಿನಿಶಿತಪ್ರಜ್ಞನುಮನಾಗತಜ್ಞನುಮಪ್ಪಸಹಸ್ರಮತಿವಿದ್ಯಾಬಲದೊಳಂಭುಜಬಲದೊಳಂಷಡಂಗಬಲದೊಳಮತ್ಯಧಿಕನಪ್ಪಶ್ವಗ್ರೀವಖೇಚರನಂಭೂಚರಂತ್ರಿಪಿಷ್ಟನಶ್ರಮದೊಳ್ಕೊಂದಂಭೂಚರರಸಂಖ್ಯಾತಖೇಚರರಂಕಾದಿವಿಧೇಯರ್ಮ್ಮಾಡಿಕೊಂಡರೆಂಬುದಾಬಾಲಗೋಪಾಲಪ್ರಸಿದ್ಧಮದಱಿನಮರನೇಱಿಸುವುದುಚಿತಮಲ್ತುಸುಗ್ರೀವಾದಿಗಳುಮಂದಾನಸನ್ಮಾನಂಗಳಿಂನಂಮೊಳಗೆಮಾಳ್ಪುದುಲಂಕೆಗಭೇದ್ಯಮಾಗೆವಿದ್ಯಾಪ್ರಾಕಾರಮಂಮಾಳ್ಪುದಿಂತುಬಲಿದಿರ್ಪ್ಪದುಂವೈದೇಹಿಯವಿರಹದಿಂರಾಮಂವಿಗತದೇಹನಕ್ಕುಮಂತಾಗೆಲಕ್ಷ್ಮಣಂಗಂಪ್ರಾಣಪರಿತ್ಯಾಗಮಕ್ಕುಮೆಂದುನಿಶ್ಚಯಿಸಿನುಡಿಯೆವಿಭೀಷಣನಾಪ್ರಕಾರದಿಂಪ್ರಯತ್ನಪರನಾಗಿರ್ಪ್ಪುದುಮಂನೆಗಮಿತ್ತಲ್ ॥

ಕಂ ॥ ಖರದೂಷಣರಿಂಪಗೆಯುಂ ।
ಪರಿಭವಮುಂತೀರ್ಗ್ಗುಮವರ್ಗೆಸೇಳ್ವೆನೆನುತ್ತುಂ ॥
ಬರುತುಂಕಾನನದೊಳ್ವಾ ।
ನರಚಿಹ್ನಂಕಂಡನೊಂದುರಣಮಂಡಲಮಂ ॥ 196

ಚತುರಂಗಸೇನೆಯಂಜವ ।
ನತಿಕಾಂಕ್ಷೆಯಿನುಂಡುಕಾಱಿದಂತಿರ್ದ್ದರಣ ॥
ಕ್ಷಿತಿತಳಮಂಕಂಡಂನಿಜ ।
ಸತಿಯವಿಯೋಗಾರ್ತ್ತಚೇತಸಂಸುಗ್ರೀವಂ ॥ 197

ವ ॥ ಕಂಡಿದೇನೆಂದುಪಸುಗೊಳ್ವುದುಮದನಱಿವನೋರ್ವ್ವನಿಂತೆಂದಂಬಲಾಚ್ಯುತರ್ಬ್ಬಂದು ॥

ಕಂ ॥ ಶಂಬುಕನಂಕೊಂದಸಿರ ।
ತ್ನಂಬಡೆದುಂಚಂದ್ರನಖಿಯಪುಯ್ಯಲ್ಗತ್ವಾ ॥
ಡಂಬರದಿನೆತ್ತಿಬಂದುದ ।
ನಂಬರಚರಬಲಮನೊಂದೆಮೆಯ್ಯೊಳ್ಕೊಂದರ್ ॥ 198

ಕಂ ॥ ಖರದೂಷಣರಂಕೊಂದ ।
ವಿರಾಧಿತಂಗವನಪೂರ್ವ್ವವೃತ್ತಿಯನಿತ್ತರ್ ॥
ಸೆರಗಿಲ್ಲದವರ್ಕ್ಕಾರಣ ।
ಪುರುಷರ್ಪ್ಪಾತಾಳಲಂಕೆಯೊಳ್ಬಂದಿರ್ದ್ದರ್ ॥ 199

ಅನುಜಂಲಕ್ಷ್ಮಣನಗ್ರಜ ।
ನನಂತಬಲನಪ್ಪರಾಮಚಂದ್ರಂಸಕಲಾ ॥
ವನಿಪತಿತತ್ಪದಸೇವೆಯಿ ।
ನನಾಕುಳಂತೀರ್ಗ್ಗವಾರಪಗೆಯುಂಬಗೆಯುಂ ॥ 200

ಮ ॥ ಗರಳಗ್ರೀವನಹೀಂದ್ರನಿಂದುಮೃಗಲಕ್ಷ್ಮಂಶಂಕರಂನೀಲಕಂ ।
ಧರನೆಂದೇಳಿಸೆತಂನನಿರ್ಮ್ಮಲಯಶಂದಿಕ್ಕಾಮಿನೀಮೌಕ್ತಿಕಾ ॥
ಭರಣಂಕಾಯಲುವಿಶಾಯಲುಂನೆಱೆವಪುಣ್ಯಾತ್ಮಂಪರಾರ್ತ್ಥಪ್ರಿಯಂ ।
ಪುರುಷಾರ್ತ್ಥಯತನ್ಯೈಕರತ್ನಕಲಶಂಸಾಹಿತ್ಯವಿದ್ಯಾಧರಂ ॥ 201

ಗದ್ಯ ॥ ಇದುಪರಮಜಿನಸಮಯಕುಮುದಿನೀಶರಚ್ಚಂದ್ರಬಾಲಚಂದ್ರಮುನೀಂದ್ರಚರಣ
ನಖಕಿರಣಚಂದ್ರಿಕಾಚಕೋರಂಭಾರತೀಕರ್ಣ್ಣಪೂರಂಶ್ರೀಮದಭಿನವಪಂಪವಿರಚಿ
ತಮಪ್ಪರಾಮಚಂದ್ರಚರಿತಪುರಾಣದೊಳ್ಸೀತಾಹರಣವರ್ಣ್ಣನಂನವಮಾಶ್ವಾಸಂ॥

ದಶಮಾಶ್ವಾಸ ಪ್ರಾರಂಭಃ.

—:o:—

ಕಂ॥ ಶ್ರೀಲಲನಾಸ್ತನಭರನಿಬಿ।
ಡಾಲಿಂಗನಕುಂಕುಮಾಂಕಿತೋರಸ್ಥಲನು॥
ರ್ವ್ವೀಲೋಕಮಂಡನಂಮಹಿ।
ಮಾಲಂಬನಚಾರುಚರಿತನಭಿನವಪಂಪಂ॥ 1

ವ॥ ಎನೆ ಮನದೆಗೊಂಡು ಸುಗ್ರೀವನೀಮಹಾನುಭಾವರಪ್ಪರಾಮಲಕ್ಷ್ಮಣರಿನೆಂನಪಗೆ ಯುಂಬಗೆಯುಂ ತೀರ್ಗ್ಗುಮೆಂದುನಿಶ್ಚಯಂಗೆಯ್ದು ನಿಜಾಗಮನಮಂವಿದಿತಂಮಾ ಳ್ಪಂತುಮುಂದೆವಿರಾಧಿತನಲ್ಲಿಗೆದೂತನಂಕೞಿಪಿ॥

ಕಂ॥ ಬಲಸಹಿತಂಸುಗ್ರೀವಂ।
ಬಲನಾರಾಯಣರಬಲದೊಳಭಿಮತಮಂತೀ॥
ಚ್ಚರ್ಲೊಡಚ್ಚಿರ್ವಿಯುನ್ಮುಖಮಂ।
ಬಲಿಮುಖಜಯವೈಜಯಂತಿಚುಂಬಿಸೆಬಂದಂ॥ 2

ವ॥ ಅಂತುಬಂದುಪುರಮಂಪುಗುವಸಮಯದೊಳ್ಲಕ್ಷ್ಮಣನೀತನಾರ್ಗ್ಗನೆವಿರಾಧಿತನಿಂ ತೆಂದಂಕಿಷ್ಕಿಂಧನಗರಾಧಿನಾಥನುಂಕಪಿಧ್ವಜಕುಲಧ್ವಜನುಂಸೂರ್ಯ್ಯಂಜಯುಪ್ರಿ ಯತನೂಜನುಂಬಾಲಿಭಟ್ಟಾರಕರಿಂನೆರ್ಗ್ಗಱಿಯನುಮಂಗದನ ಜನಕನುಮಪ್ಪಸು ಗ್ರೀವಂನಿಂಮನೋಲಗಿಸಲ್ಬಂದಪನೆಂದುಬಿಂನವಿಸುವನ್ನೆಗಂ॥

ಕಂ॥ ಅವಿಚಲಿತಧೈರ್ಯ್ಯನುತ್ತುಂ।
ಗವಂಶನಪ್ರತಿಮಸಹಜಸತ್ವಂಕಪಿಕೇ॥
ತುವುದಾತ್ತಂಬಂದಂನಡೆ।
ವವರ್ಷಧರಶೈಲಮೆಂಬಿನಂಸುಗ್ರೀವಂ॥ 3

ವ॥ ಅಂತುಬಂದುರಾಮಲಕ್ಷ್ಮಣರಚರಣಕಮಲಕ್ಕೆಱಗಿತದನಂತರಂತನಗೆಱಗಿದವಿರಾ ಧಿತನಂಪರಸಿ ಸುಗ್ರೀವಂನಿಯಮಿತಾಸನದೊಳಿರ್ಪ್ಪುದುಮುದಾತ್ತರಾಘವಂ॥

ಕಂ॥ ಕುಶಲಮೆನಿಮಗೆನೆನಿಜಪದ।
ಕುಶೇಶಯಕ್ಕೆಱಗುವನಿತುಸ್ಯೈಪಾಯ್ತೆನಗಿಂ॥
ಕುಶಲಮೆನರೇಂದ್ರಪೆಱಱಿಂ।
ಕುಶಲಂದ್ವಿಷದುಪಹತಂಗೆಸಮನಿಸಿದಪುದೇ॥ 4

ವ ॥ ಎಂಬುದುಮನಂತರಂ ಲಕ್ಷ್ಮೀಧರನಿವರೇನಿಮಿತ್ತಂಬಂದರೆಂಬುದುಂ ಜಾಂಬವಂ ಮುಕುಳಿತಕರಸರೋಜನಿಂತೆಂದಂ ॥

ಕಂ ॥ ಸುಗ್ರೀವನಕುಲವಧುಕಂ ।
ಬುಗ್ರೀವೆಸುತಾರೆಯೆಂಬಳಾಸತಿಯೊಳೊತ್ತ ॥
ಟ್ಟಾಗ್ರಹದಿಂದರಮನೆಯಂ ।
ಸುಗ್ರೀವನರೂಪುಗೊಂಡುಬಳನೊಳಪೊಕ್ಕಂ ॥ 5

ಒಳಗೆಣಪೊಱಗಣಕಾಪಿನ ।
ಕುಳವೃದ್ಧರುಮಂಗರಕ್ಷರುಂಪಡಿಯರರುಂ ॥
ಬಳನಂಸುಗ್ರೀವನೆಗೆ ।
ತೊತ್ತಳಪುಗಲಿತ್ತರ್ವಿಚಿತ್ರಮವನಚರಿತ್ರಂ ॥ 6

ಬಂದಟ್ಟಿನೊಳೊತ್ತಿದತೆಱ ।
ದಿಂದಿರ್ದ್ದೊರ್ಗಡಮವನಕೆಯ್ತಮಂಕಂಡುಲತಾ ॥
ಸುಂದರಿಮಾಯಾವಿಯರೂ ।
ಪೆಂದಱಿದಳ್ಸತಿಯಸ್ವೈಪನದನೇವೇಳ್ವೆಂ ॥ 7

ಎಱೆಯನಕುರುಪುಗಳಂತಂ ।
ನಱಿವವನಂತವನತನುವಿನೊಳ್ಕಣಿವಿವಂ ॥
ಪೆಱನೆಂದಱಿದವನೆರ್ದೆಪಡಿ ।
ದೆಱೆವಿನವೋವರಿಯಪಡಿಯನಾಸತಿಕೆತ್ತಳ್ ॥ 8

ಹರಿಣಾಕ್ಷಿಸಜ್ಜೆವನೆಯೋ ।
ಮರಿಯೊಳ್ಮೆಯ್ಗರೆಯೆಬಗೆಯೊಳ್ಮೊಗೆದುಂಮಳರಿಂ ॥
ದೆರೆದಪ್ಪಲ್ಪಡೆಯದೆಬಳ ।
ನೆರೆದಪ್ಪಿದದಂದಶೂಕನಂದದಿನಿರ್ದ್ಗಂ ॥ 9

ಆಸಮಯದೊಳುದ್ಯಾನದಿ ।
ನೀಸುಗ್ರೀವಂಸ್ವಕೀಯಭವನಕ್ಕೆಳ್ತಂ ॥
ದಾಸುಗ್ರೀವನಗೊಡ್ಡ ।
ಕ್ಕಾಸುರಮೆನೆಮಸಗಿಕಾದಲುದ್ಯತನಾದಂ ॥ 10

ಅವನುಂಬನರಕ್ಕೊಡರಿಸಿ ।
ದವಸರದೊಳ್ದುಟದಪುಸಿಯುಸುಗ್ರೀವನಭೇ ॥
ದವನಱಿಯದೆಬಾರಿಸಿದ ।
ಬ್ಬರ್ವರವನಾಪ್ತಪ್ರಧಾನಸೇನಾಮುಖ್ಯರ್ ॥ 11

ಮೂವತ್ತಕ್ಷೋಹಿಣಿವೆರ ।
ಸಾವಧುವಂಕಾದುಬಾಲಿದೇವಸುತಂರಾ ॥
ಜಾವಸಥದೊಳಿರ್ದ್ದಂಶಾ ।
ಯ್ಯಾರ್ವಸಥಂಚಂದ್ರರಶ್ಮಿದೋರ್ವ್ವಲದೃಪ್ತಂ ॥ 12

ವ ॥ ಆಕ್ಷಣದೊಳೇಳಕ್ಷೋಹಿಣೀಬಲಂಬೆರಸಂಗದಕುಮಾರಂಮಾಯಾಸುಗ್ರೀವನಂತಂ
ದೆಯೆಂಬಸಂದೆಗದಿಂಸ್ವೀಕರಿಸೆನಳನುಮನೀತೆಬಲಂಪರಸುಸುಗ್ರೀವನಂಪೊಱವೊಳ
ಲೊಳ್ಸೆಱೆಗೆಯ್ವುದೆಂದುನಿಯಮಿಸಿಪೇೞೆವೇೞೆಬಲದಿರ್ಪ್ಪುದುಂಸುಗ್ರೀವಂಹನು
ಮನಲ್ಲಿಗೆವೋಗಿನಿಜವೃತ್ತಾಂತಮಂನಿವೇದಿಸುವುದುಂ ॥

ಕಂ ॥ ಹನುಮಂಮಾಯಾಸುಗ್ರೀ ।
ವನನಿಕ್ಕುವೆನೆಂದುಬಂದುಭಾವಿಸಿಸುಗ್ರೀ ॥
ವನದಾವನೆಂದುಮಱಿಯದೆ ।
ಮುನಿದಿಱಿಯದೆಮಗುಳ್ದುಪೋದನೇಳ್ದನಾದಂ ॥ 13

ವ ॥ ಅಂತಾತಂಪೋಪುದುಮೀಸುಗ್ರೀವಂನಿಂಮದೋರ್ವ್ವಲದಗುರ್ವ್ವುಮನವ್ಯಹಿತಪ
ರಹಿತವ್ಯಸನವುಮಂಕೇಳ್ದುಸುತಾರಾವಿರಹದಿಂಚಂಡಕಿರಣಕಿರಣಮನಾಸೆಗೆಯ್ವ
ರುಳಚಕ್ರವಾಕದಂತೆನಿಂಮಚರಣವೇಶರಣೆಂದು ಬಂದನೆಂಬುದುಮುದಾತ್ತರಾಘ
ವಂಲಕ್ಷ್ಮಣನಮೊಗಮಂನೋಡಿ ॥

ಕಂ ॥ ಎಂಮಂದಿಗನೀತನಮನ ।
ದುಂಮಳಮಂಕಳೆವುದೆಂದುಕಾರುಣ್ಯಪರಂ ॥
ತಂಮಂಗೆನುಡಿದನಾರ್ತ್ತಿಗ ।
ರಂಮನ್ನಿಸುವರ್ತ್ತಿರಾಘವಂಗೆನಿಸರ್ಗ್ಗಂ ॥ 14

ಈದೊರೆಯನುಮಂಕಾದಿದ ।
ನಾದೊರೆಯುಂಹನುಮನೆಕ್ಕಕಾದದೆನೆವದಿಂ ॥
ಪೋದನವನಧಿಕನೆಂನದೆ ।
ಕಾದಿಕೊಲಲ್ಬಗೆದನೇನುದಾತ್ತನೊರಘುಜಂ ॥ 15

ವ ॥ ಎನೆರಾಮಚಂದ್ರನನುಗ್ರಹಕ್ಕೆ ಸುಗ್ರೀವಂಸಮಾಹಿತ ಚಿತ್ತನಾಗಿವಿರಾಧಿತನಮೊಗ
ಮಂನೋಡಿ ॥

ಮ ॥ ವಿರಹವ್ಯಾಕುಲರಂತೆದೇವರುಸಿರ್ದೀವೃತ್ತಾಂತಮೇನೆಂದವಾ ।
ನರಚಿಹ್ನಂಗೆವಿರಾಧಿತಂತಿಳಿಪಿದಂಕಾಂತಾರದೊಳ್ಜಾನಕೀ ॥
ಹರಣಂವಂಚನೆಯಿಂದಮಾದತೆಱನಂಸಂಗ್ರಾಮಮಾದಂದಮಂ ।
ಖರನುಂದೂಷಣನುಂಜನಾರ್ದ್ದನನಕಯ್ಯೊಳ್ಕಾದಿಸತ್ತಂದಮಂ ॥ 16

ಕಂ ॥ ಆರುಯ್ದರೆಂದುಮಱಿಯದೆ ।
ನಾರಾಯಣನಿರ್ದ್ದನಱಿದೊಡುಯ್ದನಕರುಳಿಂ ॥
ವೀರಶ್ರೀಗೆಭುಜಾಸಿಯು ।
ಧಾರಾಗೃಹದಲ್ಲಿತೋರಣಂಗಟ್ಟದಿರಂ ॥ 17

ವ ॥ ಎನೆಸುಗ್ರೀವನವಸರಂಬಡೆದುಸಪ್ತದಿವಸಕ್ಕೆ ದೇವಿಯರಸುದ್ದಿಯಂತರ್ಪ್ಪೆನೆಂದುಪ್ರ
ತಿಜ್ಞೆಗೆಯ್ದುಬಿಂನವಿಸೆಮೆಚ್ಚಿನಿಜ್ಜಶಯಣದಿಂಬಲನುಮಚ್ಯುತನುಂವಿರಾಧಿತನುಂ
ಸುಗ್ರೀವನುಂಸೇನೆಸರಸುಕಿಷ್ಕಿಂಧಪುರಮನೆಯ್ದಿದೂತನನಟ್ಟುವುದುಮಾತಂಯ
ಮದೂತನಂತೆಬಂದುಸಾಹಸಗತಿಯಂಕಂಡು ॥

ಉ ॥ ದೇವಕಾರ್ಯಮೊಡವಿಂದುನಿಂನಪಗೆಯಂಸುಗ್ರೀವಕೊಂದೀವೆನಂ ।
ದಾವೀರಾಗ್ರಣಿವಿಗ್ರಹವ್ಯಸನದಿಂದೆಳ್ತಂದನಿಂಪ್ರಾಣಮಂ ॥
ಕಾವುದ್ಯೋಗಮಿದೊಂದೆಮತ್ಪತಿಯಪಾದಾಂಭೋಜಮಂಬಂದುಕಾ ।
ಣ್ಜೀವಾಕರ್ಷಣವಿದ್ಯೆಯಂಮೆಱೆಯದಂನಂರಾಮರೌದ್ರೇಷುಗಳ್ ॥ 18

ವ ॥ ಎಂದುಗಜಱಿಗರ್ಜಿಸಿದದೂತನಮಾತಿಂಗೆಮುಳಿದುಮುನಿಸಂಮೊಗಕ್ಕೆತಾರದೆ ॥

ಕಂ ॥ ಸೆರಗಂಪೆರಗಂಬಗೆಯದೆ ।
ಪುರಮಂಪೊಱಮಟ್ಟುಕೃತಕಸುಗ್ರೀವಂಕೇ ॥
ಸರಿಯಂತೆಗರ್ಜಿಸುತ್ತುಂ ।
ನಿರಂಕುಶಂಮುಟ್ಟಿವಂದನಿದಿರೊಡ್ಡಣಮಂ ॥ 19
ಆಜಿಗಿದಿರೆತ್ತಿಬರೆಮಾ ।
ಯಾಜೀವಿಯನಾಗಕಂಡುವಾನರಚಿಹ್ನಂ ॥
ಸ್ತ್ರೀಜಂಕೋಪಾನಲನು ।
ತ್ತೇಜಿಸೆಕಾೞ್ಕಿಚ್ಚುನೆಗೆದನಗದಂತಿರ್ದ್ದಱಂ ॥ 20

ಉ ॥ ಅಕ್ಷಣದೊಳ್ಪರಸ್ಪರನಿರೀಕ್ಷಣದಿಂಮುಳಿಸುಣ್ಮಿಪೊಣ್ಮೆರ ।
ಕ್ತೇಕ್ಷಣರಾತ್ಮಶಕ್ತಿಗೆಶರೀರಬಲಕ್ಕನುರೂಪಮಪ್ಪವಂ ॥
ಲಕ್ಷಣಯುಕ್ತಮಪ್ಪಗದೆಯಂತಳೆದಿರ್ವ್ವರುಮಿರ್ವ್ವಲಂಬಿಗು ।
ತ್ರೀಕ್ಷಿಸೆವಿರಾಜಿರಿದರ್ವ್ವಿಕಟಶೃಂಗಸಮಗ್ರಚಲಾಚಲಂಗಳಂ ॥ 21

ವ ॥ ಅಂತುಗದಾಯುದ್ಧಸಂನದ್ಧರ್ಪ್ಪಂಚವಿಧಸ್ಥಾನದೊಳಮಷ್ಟವಿಧಚಾರಣೆಯೊಳಮ
ತಿಚಟುಳರಾಗಿ ॥

ಕಂ ॥ ನಡೆವನಡೆಪೊಯ್ವಗದೆಯಂ ।
ಬಿಡೆಬೀಸುವಪೊಯ್ಲನೊಡನೆಕಟ್ಟುವಕಡುಪುಂ ॥
ಕಡುವಿಂನಣಮುಂತಮಗಳ ।
ವಡೆತಾಗಿದರಳೆಯೊಳಾಗಸಂತಾಗುವವೋಲ್ ॥ 22

ಉರವಣೆಯಿಂಬಾಹ್ಯಾಭ್ಯಂ ।
ತರಂಗಳಂವಾಮದಕ್ಷಿಣಂಗಳನಱಿದೋ ॥
ರ್ವ್ವರನೋರ್ವ್ವರ್ಪ್ಪೊಯ್ಯೆಗದಾ ।
ಪರಿಘರಣಂಪಡೆದುದಿರ್ವ್ವರಕ್ಕಂಭಯಮಂ ॥ 23

ಭರದಿಂಪೊಯ್ವುದುಮೋರೊ ।
ರ್ವ್ವರಗದೆಯೊಳ್ಗದೆಪಳಂಚಿಕಿಡಿಸೂಸೆರಣಾ ॥
ಜಿರದೊಳಕಾಂಡದಕೆಂಡದ ।
ಸರಿಸುರಿವವೊಲಾದುದವರದೇನತಿಬಲರೋ ॥ 24

ಓರನ್ನರ್ತ್ತಂಮೊಳಗಾ ।
ಕಾರದಿನಿನಿತಲ್ತುಸತ್ವದಿಂಸಾಹಸದಿಂ ॥
ದೋರಂನರ್ಬ್ಬಿಂನಣದಿಂ ।
ಬೀರದಿನೋರಂನರನ್ನತನ್ನತಸುಗ್ರೀವರ್ ॥ 25

ವ ॥ ಆಸಮಯದೊಳ್ಸಂವರ್ತ್ತಸಮಯದಕೃತಾಂತನಂತೆಮಾಮಸಕಂಮಸಗಿ ॥

ಸ್ರ ॥ ಬೀಸುತ್ತುಂಕಾಲದಂಡಪ್ರತಿಮಘನಗದಾದಂಡಮಂಕಣ್ಗಳಿಂದಂ ।
ಸೂಸುತ್ತುಂಕೆಂಡಮಂಮೇಳಿಸೆಜಯಮಧುತಂನುಚ್ಚದೋರ್ದ್ದಂಡಮಂಗಂ ॥
ತ್ರಾಸಂಸೇನಾದ್ವಯಕ್ಕಂಸಮನಿಸೆಶೌಚಿಪಂಪಾರ್ದ್ದಸುಗ್ರೀವನಂಮಾ ।
ಯಾಸುಗ್ರೀವಂಗದಾದಂಡದಿನಡಸಿಸಿಡಿಲ್ಪೊಯ್ವವೋಲ್ಕಾಯ್ದುಪೊಯ್ಯುಂ ॥ 26

ವ ॥ ಅಂತುಬಸವೞಿದುಬೀೞೆ ಫೊಯ್ವುದುಂಮೂರ್ಛೆವೋದನಂ ಗತಪ್ರಾಣನೆಗೆತ್ತು ಮಾ
ಯಾವಿಮಗುೞ್ದುಪೋಪುದುಂಜಾಂಬವಾದಿಗಳ್ಮಾೞ್ಪ ಶಿಶಿರೋಪಚಾರದಿಂದಂತಾನುಂ
ಮೂರ್ಛೆಯಿಂದೆೞ್ಚೆತ್ತುಸುಗ್ರೀವನವೊಗಮನುದಾತ್ತರಾಘವಂನೋಡಿ ।

ಕಂ ॥ ತನುವಂಭಾವಿಸೆನಿನಗಂ ।
ತನಗಂಸಾದೃಶ್ಯಮಾದೊಡಕ್ಕುಮಪಾಯಂ ॥
ನಿನಗೆಂದುಬೆೞ್ಚಿದೆಂತೀ ।
ೞ್ಚನೆಮೊನೆಯೊಳ್ನಾಳೆನಿಂನಪಗೆಯಂಬಗೆಯಂ ॥ 27

ವ ॥ ಎಂದುನುಡಿದುಮಱುದೆವಸಂರಣಭೂಮಿಗೆವಂದುಮಾಯಾಸುಗ್ರೀವನಂಕಂಡು ॥

ಕಂ ॥ ಕಡುಮುಳಿಸಿಂಕಟ್ಟಿದಿರೊ ।
ಳ್ನಡವೆಡೆಯೊಳ್ರಾಮನಾತನಂಲಕ್ಷ್ಮಣನಿಂ ॥
ಪಿಡಿಯಿಸಿದಂಮೊನೆಯೊಳ್ಮಾ ।
ರ್ಪಡೆಗಂಡೊಡೆಸೆಡೆವಗಂಡನೇಸುಗ್ರೀವಂ ॥ 28

ವ ॥ ಆಸಮಯದೊಳ್ ॥

ಮ॥ಸ್ರ॥ಮೊನೆಯೊಳ್ಮಾಱಾಂತಚಾತುರ್ಬಲಮನಳಱಿಪೆಂಕೊಂಡುಮಾರ್ಕೊಂಡುಸು
ವನೆನಾವಂಕಾದೊಡಂಕೊಂದಪೆನೆನಗಿದಿರಾರೆಂದುಮೆಯ್ವೆೞ್ಚಿದುದ್ವೃ ॥ [ಗ್ರೀ।
ತ್ತನನಿತ್ತಿತ್ತಲ್ಮಗುೞ್ವೋಗದಿರೆನೆರಘುಜಂಕೇಳ್ದುಪೊಯ್ಲುತ್ತಪಂಚಾ।
ನನದಂತೆಯ್ತಂದನಾಸಾಹಸಗತಿವರೆಗಂಗಂಡನೊಳ್ಗಂಡನಾವಂ ॥ 29

ವ ॥ ಅಂತೆಯ್ದಿವಪ್ಪುದುಂ ॥

ಕಂ ॥ ಆರಾಮನಿದಿರೊಳಾವಿ ।
ದ್ಯಾರೂಪಂಪಿಂಗಿಪೋಗೆಸಾಹಸಗತಿತ ॥
ಪ್ತಾರಕ್ತಾಯಸಪಿಂಡಂ ।
ನೀರೊಳಗದ್ದಂತೆತಂನತೇಜಂಗೆಟ್ಟಂ ॥ 30

ಪರಿಹರಿಸಿಪೋಗೆಮಾಯಾ ।
ಸ್ವರೂಪಮೞವೞಿದನಿಲ್ಲಖೇಚರಪತಿಭೀ ॥
ಕರರೂಪನುಗ್ರಕೋಪಂ ।
ವೆರೆಯಿಕ್ಕಿದಕೃಷ್ಣಸರ್ಪಸಿಪ್ಪಂತಿರ್ದ್ದಂ ॥ 31

ವ ॥ ಆಗಳಂಗದಂನಿಜಬಲಸಹಿತಂ ಸುಗ್ರೀವನಂಬಂದುಕೂಡೆಲಕ್ಷ್ಮಣದೇವನೆಲವೊಸು
ಗ್ರೀವನಂಸರಣ್ಬೊಕ್ಕು ಜೀವಿಸೆನೆಮುನಿದುಸಾಹಸಗತಿರಘುವೀರನಂಮುಟ್ಟೆವೆಂದು॥

ಕಂ ॥ ಎಂತುಮೆೞಗಿಕ್ಕಿ ಪಗೆಯಂ ।
ಮುಂತಾದಂತಣ್ಮಿನುತ್ತುಮಿಸೆನಗೆರಾಮಂ ॥
ದಂತಾಂಶುನಿಮಿರ್ದುವವನಸು ।
ವಂತೆಗೆಯಲ್ಕಿಮಿರ್ವಕಾಲಪಾಶಂಗಳವೋಲ್ ॥ 32

ವ ॥ ಅಂತುನಸುನಕ್ಕು ॥

ಮ ॥ ತೆಗೆದಂಬಂದೊಣೆಯಿಂತೊಡರ್ಚಿತಿರುವಾಯೊಳ್ಕರ್ಣಮೂಲಂಬರಂ ।
ತೆಗೆದೇಸಾಡೆಬಲಂಜಿತಾಹಿತಬಲಂತತ್ನಾಯಕಂದೈವಿಕಂ ॥
ತೆಗೆದತ್ತಾತನತೋಳಲಿರ್ದವಿಜಯಶ್ರೀಕಾಂತೆಯಂಪ್ರಾಣವಾ ।
ಯುಗಳಂಮೆಯ್ದೆಗೆವಂತುವಾನರಪತಾಕಸ್ವಾಂತಚಿಂತಾಜ್ವರಂ ॥ 33

ವ ॥ ಅಂತುಸಾಹಸಗತಿಗತಪ್ರಾಣನಾಗೆ ॥

ಉ ॥ ನೋಡಿದೊಡೋಡಿಪೋಯ್ತುವನನಚ್ಚಿನವಿದ್ಯೆರಘುಪ್ರವೀರನೇ ।
ಸಾಡಿದೊಡೊಂದೆಬಾಣಮವನಂನಡೆನೋಡಿನೆಲಕ್ಕೆಸೋವತಂ ॥
ಮಾಡಿದುದೆಂದುತೂಗಿತಲೆಯಂಪೊಗಳ್ದಂತನಗಿಷ್ಟಸಿದ್ಧಿಯಂ ।
ಮಾಡಿದದೃಷ್ಟಿಪಾತಶರಪಾತಚಮತ್ಕೃತಿಯಂಕಪಿಧ್ವಜಂ ॥ 34

ವ ॥ ಆಗಳಖಿಳಜಯಜಯಧ್ವಾನಮೊದವೆ ರಾಘವನಮೋಘಸರಾಸನಮಂಪೂಜಿಸಿಕರಸ
ರೋಜಮಂಮುಗಿದು ॥

ಕಂ ॥ ದೇವರ್ಬಿಜಯಂಗೆಯ್ದುಮ ।
ದಾವಸಥಕ್ಕೆನಗೆರಾಗಮಂಕೇಸಡಿಕೆಂ ॥
ದಾವರೆವೂವಿಂದೀವುದು ।
ಸೇವಾಪದವಿಯೊಳೆನಿಲಿಪುದೆಂನನ್ವಯಮಂ ॥ 35

ವ ॥ ಎಂದುಬಿಂನವಿಸಿಕಪಿಧ್ವಜಂರಘುಕುಲಧ್ವಜರಪ್ಪರಾಮಲಕ್ಷ್ಮಣರಂಮುಂದಿಟ್ಟುವಂ
ದನಮಾಲಾಮನೋಹರಮಂಕಿಷ್ಕಿಂಧಪುರಮಂಪುಗುವಸಮಯದೊಳ್ ॥

ಶಾ ॥ ಆಮುಕ್ತಾಫಲಕಾಂತಿಯೊಳ್ಪೆಣಸುವಂಗಚ್ಛಾಯೆಯಿಂರಂಜಿಪಂ ।
ರಾಮಂಲಕ್ಷ್ಮಣನಾಹರಿನ್ಮಣಿಮಯೂಖಶ್ಯಾಮನೆಂದೀಕ್ಷಣ ॥
ಪ್ರೇಮಂಕೈಮಿಗೆನೋಳ್ಪಕಾಮಿನಿಯರಂಸಮ್ಮೋಹನಾಸ್ತ್ರಂಗಳಿಂ
ಕಾಮಂಕಬ್ಬಿನಬಿಲ್ಲೊಳೆಚ್ಚುಮೆಱೆದಂಚಾಪಾಗಮಪ್ರೌಢಿಯಂ ॥ 36

ವ ॥ ಅಂತುಪುರಮಂಪೊಕ್ಕರಮನೆಗೆವಿಜಯಂಗೆಯ್ದು ಕರುಮಾಡದಮುಂದಣಮಣಿಮಂ
ಟಪದೊಳಿಕ್ಕಿದಮಣಿಮಯಾಸನಮನಲಂಕರಿಸಿರಾಮಲಕ್ಷ್ಮಣರಿರ್ಪ್ಪುದುಮನಂತ
ರಂಸುಗ್ರೀವಂಮಧುಪರ್ಕ್ಕಪೂರ್ವ್ವಕಮಪೂರ್ವ್ವವಸ್ತುವಾಹನಂಗಳನೋಲಗಿಸಿ ॥

ಚ ॥ ಪರಿಭವಭಾರಮಂಕಳೆದುಬಾಂಧವಪುತ್ರಕಳತ್ರಮಿತ್ರರೊ ।
ಳ್ಪಿರೆಪಿಮದನ್ವಯಾಗತಪದಸ್ಥಿತಿಯಂದಯೆಗೆಯ್ದೆದೇವದೇ ॥
ವರದಯೆಗೆಂನವಂಶಮನಿತುಂಪೆರಸಾಳ್ವೆಸಗೆಯ್ದುಬಾಳ್ವೆನಿಂ ।
ನೆರಡನೆಮೋಘಮಾಂನುಡಿದೊಡುಂನತರಾಮಕೃತಘ್ನನಲ್ಲನೇ ॥ 37

ವ ॥ ಎಂದುರಾಘವನಪದಪಯೋಜಸೇವಾಪರಮಲಾಭಮಂಪಡೆದು ॥

ಕಂ ॥ ದಿನನಾಥಂಗಲ್ಲದೆಪ ।
ದ್ಮಿನಿಯಮ್ಮೊಗಮೀಯದಂತೆನಿನಗಲ್ಲದೆಸ ॥
ಜ್ಜನವಾಗೆಂದುರಘುನಂ ।
ದನಕನ್ಯಾವ್ರತದೊಳಂನತನುಜೆಯರಿರ್ದ್ದರ್ ॥ 38

ವ ॥ ಎಂದುಶುಭದಿನಮುಹೂರ್ತ್ತದೊಳುತ್ಸವಾನಕಧ್ವಾನಮೊದವೆ ॥

ಕಂ ॥ ವನಧಿಗೆಕುಲಾಚಲಂವಾ ।
ಹಿನಿಗಳನೀವಂತೆಮೀನನಯನದನಿಜನಂ ॥
ದನೆಯರನಿತ್ತಂರಘುನಂ ।
ದನಂಗೆರಾಜೀವಮುಖಿಯರಂಸುಗ್ರೀವಂ ॥ 39

ವ ॥ ಅಂತುಪಂನೀರ್ವ್ವರ್ಕ್ಕೆಖೇಚರಕಂನೆಯರಂಮದುವೆನಿಂದು ॥

ಕಂ ॥ ನಸುಸೋಂಕಿಂಬಾಲೆಯರಂ ।
ಬಸದಾಗಿಸಿನೆನೆದುಸೀತೆಯಂರಾಮಂದೂ ॥
ರಿಸಿದಂಚಂದ್ರಿಕೆಯಂಸೇ ।
ವಿಸಿದಚಕೋರಕ್ಕೆಬಾರ್ತ್ತೆಯೇತುಹಿನಕಣಂ ॥ 40

ಚ ॥ ತನುಲತೆಯುಂಮರಾಳಗತಿಯುಂಪಿಕನಿಸ್ವನಮುಂವಿಯಚ್ಚರಾಂ ।
ಗನೆಯರಲೋಚನೋತ್ಪಲಮುಮಾನನಹೇಮಸರೋಜಮುಂಘನ ॥
ಸ್ತನಯುಗಕೋಕಮುಂಬಗೆಗೆಮಾಡದೆಖೇದಮನೇಕೆಮಾಡುಗುಂ ।
ಜನಕಸುತಾವಿಯೋಗವಿಧುರಂಗೆರಘುಪ್ರವರಂಗೆರಾಗಮಂ ॥ 41

ಕಂ ॥ ಜನಕತನೂಜೆಯಘನಕಚ ।
ಘನಕುಚಘನಜಘನಭಾರದಿಂಬಳ್ಕುವರಾ ॥
ಮನಚಿತ್ತಮಿತರವನಿತಾ ।
ಜನದತ್ತಡಿಯೆತ್ತದಿರವಿದೇನಚ್ಚರಿಯೋ ॥ 42

ಅನುರಾಗಂಬೆಚರಿಯರಿಂ ।
ಜನಿಯಿಸದಿರೆಜನಕರಾಜಸುತೆಯಂರಾಮಂ ॥
ನೆನೆದಂರಾಗೋತ್ಕಂಠಂ ।
ನೆನೆವಂತಿರೆಚೂತಕಳಿಕೆಯಂಕಳಕಂಠಂ ॥ 43

ಅಂಬರಚರನುಂತಾರಾ ।
ಬಿಂಬಾಧರಮಧುರಮಧುವನಾಸ್ವಾದಿಸಿಚಿ ॥
ತ್ತಂಬೆಂಡುನೆಗೆಯೆಸಾಗರ ।
ಸಾಂಬುಧಿಯೊಳ್ಕೂಡೆಮೂಡಿಮುಳುಗುತ್ತಿರ್ದ್ದಂ ॥ 44

ಅನುರಕ್ತನಲ್ಲಳನೆಳ ।
ಸಿನಿರ್ದ್ದಯಾಲಿಂಗನೋನ್ಮುಖಂಸನುರತಸಂ ॥
ಜನಿತಸುಖಂದಿನಮುಖದ ।
ಬ್ಜಿನಿಗೆಳಸಿದಮಧುಕರಂಗೆಕಿಂಕರನಾದಂ ॥ 45

ವ ॥ ಅಂತಿಷ್ಟವಿಷಯಸುಖಸಂತುಷ್ಟನಾಗಿ ॥

ಕಂ ॥ ಹಿಮಕಿರಣಂಸಂಧ್ಯಾರಾ ।
ಗಮನುಳಿವಂತಾಗಳಂತೆಸುಗ್ರೀವಂರಾ ॥
ಗಮನುಳಿದುರಘುಜನುಪಕಾ ।
ರಮನಾತ್ಮೀಯಪ್ರತಿಜ್ಞೆಯಂಸ್ಮರಿಯಿಸಿದಂ ॥ 46

ಕೃತಮಱಿಯದನೆಂಬೀದುಃ ।
ಶ್ರುತಿಪರೆಗುಮಸತ್ಯದೋಷಮಕ್ಕುಂಮುಳಿಗುಂ ॥
ಪ್ರತಿಪಾನಿಕೆಗಿಡೆದಶರಥ ।
ಸುತನಾವಿಭುಮುಳಿದವಂಗೆಜವನುಂಮುಳಿಗುಂ ॥ 47

ವ ॥ ಎಂದುಮನದೊಳ್ಮಂತಣಮಿರ್ದ್ದು ॥

ಉ॥ ಚಂಡಬಲಂಬಲಾಚ್ಯುತರಸೀತೆಯಸುದ್ದಿಯನಟ್ಟಿಮುಂಪ್ರಭಾ ।
ಮಂಡಲನಲ್ಲಿಗಂಬಿಕೆಯಸುದ್ದಿಗೆಸಾಧಿತವಿಶ್ವವಿದ್ಯರಂ ॥
ತಂಡದಿನಟ್ಟಿಗುಪ್ತಚರರಂಕೆಲರಂತಱಿಸಂದುತಾನುಮಾ ।
ಖಂಡಲದಿಙ್ಮುಖಂಕಲಿಪಯಾನುಚರಂತಳರ್ದಂವಿಯಚ್ಚರಂ ॥ 48

ವ॥ ಅಂತು ಗದಾಯುಧಹಲಾಯುಧರಂಬೀಳ್ಕೊಂಡುಮನಃಪವನವೇಗದಿಂಪೋಗುತ್ತುಮಿರೆ ॥

ಕಂ॥ ಅನುಕೂಲಮಾರುತಾಂದೋ ।
ಳನದಿಂಕಯ್ಸನ್ನೆಗೆಯ್ವವೊಲ್ಗಿರಿಶಿಖರಾ ॥
ವನಿಯೊಳ್ಮಿಳ್ಳಿಸಿದುದುಕೇ ।
ತನಪಲ್ಲವಮೊಂದಶೋಕಪಲ್ಲವಶೋಣಂ ॥ 49

ನಗಸಾನುತಳಂಮನುಜ ।
ಗ್ಗಗೋಚರಂಕಟ್ಟುಗುಡಿಯನಾರಿರ್ದ್ದಪರಿ ॥
ಲ್ಲಿಗೆವೋಗಿನೋಳ್ಪೆನೆಂಬೀ ।
ಬಗೆಯಿಂಸುಗ್ರೀವನೆಯ್ದೆಬರ್ಪ್ಪವಸರದೊಳ್ ॥ 50

ಬಲಿಮುಖಕೇತನನಂಚಿಕಿ ।
ತಲೋಚನಂರತ್ನಜಟಿನಿಜಪ್ರಾಣಭಯಾ ॥
ಕುಲಚಿತ್ತಂಪೌಲಸ್ತ್ಯಂ ।
ಕೊಲಲಟ್ಟಿದತೀಕ್ಷ್ಣಪುರುಷನೆಂದೀಕ್ಷಿಸಿದಂ ॥ 51

ವ॥ ಆಗಳಾತನಂಸುಗ್ರೀವನೆಯ್ದೆವಂದುನಿನಗಿನಿವಿರಿದವಸ್ಥಾಂತರಮೇಕಾದುದೆಂದುಬೆಸಗೊಂಡೊಡದಂಸವಿಸ್ತರಮಱಿಯೆಪೇಳೆಕೇಳ್ದು ॥

ಕಂ॥ ವಾನರಚಿಹ್ನಂತನಗಭಿ ।
ಮಾನಂನಿಂದತ್ತುಪೂಣ್ಕೆಸಂದತ್ತೆನಗಂ ॥
ದೇನೊಸೆದನೊದಶವದನಂ ।
ಜಾನಕಿಯಂಬಿಂಕೆಗೆಯ್ದನೆಂದಱಿಪಲೊಡಂ ॥ 52

ವ॥ ಅಂತುಸಂತೋಷದಂತಮನೆಯ್ದಿ ॥

ಕಂ॥ ಇಡಿದಿರೆಸೀತಾವಿರಹದ ।
ಕಡುಗತ್ತಲೆದಾಶರಥಿಯಮಾನಸದೊಳದಂ ॥
ಕಿಡಿಸುವಬಗೆಯಿಂರತ್ನದ ।
ಸೊಡರಂತರ್ಪ್ಪಂತೆರತ್ನಜಟಿಯಂತಂದಂ ॥ 53

ವ ॥ ಅಂತುತಂದುಕಾಣಿಸುವುದುಂ ॥

ಕಂ ॥ ನಿಟಿಲತಟಘಟಿತಕರಸಂ ।
ಪುಟಂಪಟನ್ಮಣಿಕಿರೀಟರುಚಿಮಂಜರಿಯಿಂ ॥
ಜಟಿಳಿತಮೆನೆಪದಪೀಠದ ।
ತಟಂನರೇಂದ್ರಂಗೆರತ್ನಜಟಿನತನಾದಂ ॥ 54

ವ ॥ ಅನಂತರಂಜನಾರ್ದ್ದನನೀತನಾರ್ಗ್ಗೆನೆಸುಗ್ರೀವನಿಂತೆಂದಂ ॥

ಕಂ ॥ ಅರ್ಕ್ಕಜಟಿವೆಸರಖಚರಕು ।
ಲಾರ್ಕ್ಕನಸುತನಪ್ಪರತ್ನಜಟಿರಣಕೇಳೀ ॥
ಕರ್ಕ್ಕಶನಾತ್ಮಾಂಬಿಕೆಯನ ।
ವರ್ಕ್ಕೈರ್ತ್ತವದುಯ್ದರೆಂದುಬಿಂನವಿಸಿದಪಂ ॥ 55

ವ ॥ ಎಂಬುದುಮದಂಕೇಳ್ದು ॥

ಮ ॥ ಬಿದಿಕಣ್ಣಿಟ್ಟವನಾವನಾವನಸುಮಂಕಾಲಂಕಳಲ್ಚಲ್ಕಡಂ ।
ಗಿದನಾವಂಯಮಪಾಶದೊಳ್ಗೊತ್ತಡರ್ದನಾವಂದೇವಿಯುಂಮುಂದುಗಾ ॥
ಣದೆಕಳ್ದುಯ್ದವನೆಂದುರತ್ನಜಟಿಯುಂರೋಷಗ್ರಹಾವೇಶಗ ।
ದ್ಗದಕಂಠಂಪಸಗೊಂಡನುತ್ತರಳಿತಾರಕ್ತೇಕ್ಷಣಂಲಕ್ಷ್ಮಣಂ ॥ 56

ವ ॥ ಅಂತುಬೆಸಗೊಳ್ವುದುಂರತ್ನಜಟಿಕಯ್ಗಳಂಮುಗಿದು ॥

ಕಂ ॥ ಸ್ವೈರದಿನಾಂಪೋಗುತ್ತಿರೆ ।
ತಾರಾಪಥದೊಳ್ಪಳಂಚಿದುದುಕಿವಿಯಂಹಾ ॥
ಹಾರವಮುರಿಯೆಂಣೆಯವ್ರೋ ।
ಲ್ದೂರಿಸಿಬಗೆಬಗೆಯೊಳೊಗೆಯೆಕಾರುಣ್ಯರಸಂ ॥ 57

ಸ್ರ ॥ ಕಾಮಾಂಧಂಕಳ್ದುಕೊಂಡುಯ್ದಪನಿದುಮೆಪದಂಶೋಕಪೂರ್ವ್ವದಣ್ಮ್ಮಿಳ್ವವರ್ಸ್ಸಂ ।
ಗ್ರಾಮಾವಷ್ಟಂಭಮಂಹಾಜನಕಜನಕಹಾಲಕ್ಷ್ಮಣಾಲಕ್ಷ್ಮಣಾಹಾ ॥
ರಾಮಾರಾಮಾಎನುತ್ತುಂಜನಕಜೆಬಸಿಱುಂಬೋದಿಪುದ್ಯ್ಯಲ್ಕೆಕೇಳ್ದಾ ।
ನಾಮಕ್ಕಾನೆಯ್ದಿದೆಂರಾವಣನೊಳಿಱಿವತಕ್ಕಿಂದವಣ್ಮ್ಮಕ್ಕೆನುತ್ತುಂ ॥ 58

ವ ॥ ಅಂತುಮೊದಲಿಸಿಮುಟ್ಟಿವಪೂರ್ವ್ವದುಂಮದೀಯಜನಕನೊಳಾದನುಬಂಧಂಕಾರಣ
ಮಾಗೆಂನೊಳಿಱಿಯದೆವಿದ್ಯಾಚ್ಛೇದನಂಗೆಯ್ದುರಾವಣಂಸೀತೆಯಂಲಂಕೆಗುಯ್ದನೆಂ
ದುಬಿಂನವಿಸೆ ॥

ಕಂ ॥ ರಾವಣನುಯ್ದಂಸೀತಾ ।
ದೇವಿಯನೆನೆಕೇಳ್ದುಮನದೊಳಂಮಱಸಿದನಿ ॥
ಲ್ಲಾವಾರ್ತ್ತೆವೇಳ್ವವಂಗೆಮ ।
ಹೀವಲ್ಲಭನಿತ್ತನಾತನಭಿವಾಂಛಿತಮಂ ॥ 59

ಮೆಱೆದಂಸೀತೆಯಸುದ್ದಿಯ ।
ನಱಿಪಿದಖೇಚರನನನ್ವಯಾಗತಪದದೊ ॥
ಳ್ನಿಱಿಸಿಭುಜಬಲದಮೆಚ್ಚಿನ ।
ನೆಱನಂರಾಘವನಮ್ಮೈಮೆಗಿದುವಿಸ್ಮಯಮೇ ॥ 60

ವ ॥ ಅಂತುರತ್ನಜಟಿಯುಸಪತ್ನರಂಪ್ರೋಱಿಮಡಿಸಿಕಳೆದುದೇವ್ರೋಪನೀತಪುರಕ್ಕರಸುಮಾಡಿಕಿಷ್ಕಿಂಧಪುರಕ್ಕೆವಂದು ॥

ಮ ॥ ನಲನೀಲಾಂಗದಜಾಂಬವಪ್ರಮುಖಸೇನಾನಾಥರುಂಮಂತ್ರಿಮಂ
ಡಲಮುಂಬಂಧುಜನಂಗಳುಂಬೆರಸುಸುಗ್ರೀವಂನಿಜಾಸ್ಥಾನಮಂ ॥
ಡಲದೊಳ್ಕಿಂಕರಭಾವದಿಂದಿರೆಮೃಗೇಂದ್ರೋತ್ತುಂಗಪೀಠಂಗಳೊ ।
ಳ್ಬಲನಾರಾಯಣರಿರ್ದ್ದರಪ್ರತಿಹತಚ್ಛಂದ್ರಾರ್ಕ್ಕರಿರ್ಪ್ಪಂದದಿಂ ॥ 61

ವ ॥ ಆಸಮಯದೊಳ್ಸೌಮಿತ್ರಿಸುಗ್ರೀವನನೋಗಮಂನೋಡಿ ॥

ಚ ॥ ಅರಸಿಯಸುದ್ದಿಗೇಳ್ಕುಸಿರದಿರ್ಪ್ಪುದುಪಾೞಿಯೆಪಾರದೆಂನತೋ ।
ಳ್ನಿರವಲಮಂವಿರೋಧಿಬಲಮಂತವೆಕೊಲ್ವೆಡೆಗಾನೆಸಾಲ್ವೆನೀ ॥
ಶರನಿಧಿತಾಯ್ಮಳಲ್ವರೆಗಮಾನಿಸೆಬತ್ತದೆಲಂಕೆಗೆತ್ತದಿಂ ।
ತಿರೆಸೆರಗೆಂದನೇನದಟನೋರಣಲಂಪಟನೋಜನಾರ್ದ್ದನಂ ॥ 62

ಉ ॥ ಲಂಕೆಯನೊಕ್ಕಲಿಕ್ಕುವವೊಲಕ್ಕುಱೆಲಂಕೆಯನೊಕ್ಕಲಿಕ್ಕಿಕೀ ।
ಳ್ವಿಂಕೆಡಪಿಂತ್ರಿಕೂಟಗಿರಿಯಂದಶಕಂಠನಕಂಠನಾಳಮಂ ॥
ಭೋಂಕೆನಲೆಚ್ಚುಪಾಯ್ವಬಿಸುನೆತ್ತರಸೇಕದಿನೆಂನತೋಳತೀ ।
ನಂಕಳೆವೆಂವಿಳಂಬಿಸಿದೊಡೆಂನನೆಗಳ್ತೆಗೆಬಂನಮಾಗದೇ ॥ 63

ವ ॥ ಎಂದುತಱಸಂದುಲಕ್ಷ್ಮಣಂನುಡಿಯೆತದನಂತರಂ ॥

ಕಂ ॥ ಕಿಸುಸಂಜೆವೊಗೆದಚಂದ್ರಿಕೆ ।
ಪಸರಿಸಿದಪುದೆನಿಸಿರಾಮಚಂದ್ರಂಸಭೆಯೊ ॥
ಳ್ಪಸರಿಸಿನಯನಪ್ರಭೆರಂ ।
ಜಿಸೆಜಾಂಬೂನದನವದನಮಂವೀಕ್ಷಿಸಿದಂ ॥ 64

ವ ॥ ಅಂತುನೋಡಿ ॥

ಕಂ ॥ ಜೈನಾಗಮವಿದನಂಜಾಂ ।
ಬೋನದನಂಮಧುರನಿನದನಂಬೆಸಗೊಂಡಂ ॥
ದಾನವನವಂಶಮಂಲಂ ।
ಕಾನಗರದತೇಜನನತ್ಯುದಾತ್ತಂರಘುಜಂ ॥ 65

ವ ॥ ಅಂತುಬೆಸಗೊಳ್ವುದುಂಮುಕುಳಿತಾಂಜಲಿಪುಟನಾಗಿ ॥

ಕಂ ॥ ವಿಪುಳಮತಿಸಕಳವಿದ್ಯಾ ।
ನಿಪುಣಂಗಣಧರನಿರೂಪಿತಕ್ರಮದಿಂದೈ ॥
ತ್ಯಪತಿಪ್ರಪಂಚಮಂಶ್ರವ ।
ಣಪಥಾತಿಥಿಮಾಡಲಾತನುದ್ಯತನಾದಂ ॥ 66

ಶ್ರವಣಕ್ಕ ಮರ್ದಿನಸರಿಸುರಿ ।
ವವೊಲಾಗೆವಚೋವಿಳಾಸವಾಸಭೆಗತ್ಯ ॥
ತ್ಸವಮಂಕುಡೆನೇರ್ಪಡೆಬಿಂ ।
ನವಿಸಿದನಾವೇಸೆದಂತರುಚಿತತ್ಸಭೆಯಂ ॥ 67

ವ ॥ ಅದೆಂತೆಂದೊಡೆದೇವಜಗತ್ತ್ರಿತಯನಾಥನಪ್ಪಪುರುಪರಮೇಶ್ವರಧರ್ಮ್ಮತೀರ್ತ್ಥ ಪ್ರವರ್ತ್ತನಾನಂತರಂ ॥

ಕಂ ॥ ಪಲಕಾಲಂಪೋಪುದುಮಾ ।
ಕುಲದೊಳ್ಕೇಯೂರದಂತೆರಂಜಿಸೆದೋರ್ಮ್ಮಂ ॥
ಡಲದೊಳ್ತ್ತಿಳಿದಂಭೂಮಂ ।
ಡಲಮಂತ್ರಿದಶಂಜಯಂಜಯಶ್ರೀರಮಣಂ ॥ 68

ಕಡುನೀಱಿಕಳಾವಿಭವಂ ।
ಬಡೆದಾಭೂಭುಜನೊಳಗ್ರಮಹಿಷೀಪದಮಂ ॥
ಪಡೆದುಗುಣಾಬ್ಧಿಗೆಪೆರ್ಚ್ಚಂ ।
ಪಡೆದಸಿಮುಳ್ಳಿಂದ್ರಲೇಖೆವೆಸರಂಪಡೆದಳ್ ॥ 69

ಜಿತಶತ್ರುವಿಜಯಸಾಗರ ।
ಸುತರ್ಕ್ಕಳಂಚಂದ್ರಲೇಖೆಚಂದ್ರಾದಿತ್ಯ ॥
ಪ್ರತಿಮರನೈಂದ್ರಿಯವೋಲ ।
ಪ್ರತಿಮಪ್ರಭರಂ ಪ್ರಸಿದ್ಧರಂವಧುಪಡೆದಳ್ ॥ 70

ವ ॥ ಆಸುತರ್ಗ್ಗನುಕ್ರಮದಿಂಪೊದನಪುರವರೇಶ್ವರನಪ್ಪ ॥

ಕಂ ॥ ಭುಜಸಖನಾನಂದಮಹೀ ।
ಭುಜಂಗಮಂಭೋಜಮಾಲೆಗಂಪುಟ್ಟಿದವ ॥
ರ್ವಿಜಯೆಸುಮಂಗಳೆಯೆಂಬರ್ ।
ವಿಜಿತಾಮರಕಂನೆಯರ್ಕಳರಸಿಯರಾದರ್ ॥ 71

ವ ॥ ಆತ್ರಿದಶಂಜಯಮಹೀಭುಜಂಪಲಕಾಲಮರಸುಗೆಯ್ದು ವಿಷಯವೈರಾಗ್ಯಪರನಾಗಿ ॥

ಮ ॥ ನಿಜಪುತ್ರಂಜಿತಶತ್ರುಗಪ್ರತಿಮಮಂಸಾಮ್ರಾಜ್ಯಮಂಕೊಟ್ಟುಭೂ ।
ಭುಜರತ್ನಂತ್ರಿದಶಂಜಯಂತಳೆದಿಳಾಪೂಜ್ಯಂತಪೋರಾಜ್ಯಮಂ ॥
ನಿಜಕರ್ಮಾದಿಗಳಂಕುಪೇರಗಿರಿಯೊಳ್ಬೆಂಕೊಂಡುಮುಕ್ತ್ಯಂಗನಾ ।
ಭುಜಪಾಶಕ್ಕೊಳಗಾಗಿಪೀರ್ದನೊಲವಿಂತದ್ವಕ್ತ್ರಪೀಯೂಷಮಂ ॥ 72

ಶಾ ॥ ಮತ್ತಿತ್ತಲ್ಜಿತಶತ್ರುವೆಂಬನೆಸರಾಯ್ತನ್ವರ್ಥಮೊಂಬಂನಮಾ ।
ದೃಪ್ತಾರಾತಿಗಳಂಭಯಂಗೊಳಿಸಿಕಪ್ಪಂಗೊಂಡುಕೈಯ್ಯಾಂತಮ ॥
ಗ್ಗಿರ್ತ್ತಂಬೇಳ್ಪುದನಿತ್ತುಮೂರ್ಣ್ಣಿನೆಭುಜೋತ್ಖಾತಾಸಿಧಾರಾಂಬುವಿಂ ।
ದಿತ್ತಂಶ್ರೀವಧುಗಂಜಯಪ್ರಮದೆಗಂಮಾರ್ಮ್ಮನುಷೀಜನ್ಮಮಂ ॥ 73

ಕಂ ॥ ವಿಜಿಗೀಷುವೆನಿಸಿದಾಭೂ ।
ಭುಜವಲ್ಲಭಮೇರುಮೇಖಲಾಲಕ್ಷ್ಮಿಮರು ॥
ತ್ಕುಜಮಂಪಡೆದುದೊಪೇಳಿನೆ ।
ವಿಜಯಾಂಬಿಕೆಪಡೆದಳಜಿತಭಟ್ಟಾರಕರಂ ॥ 74

ಅವನಿತಾನುಜೆರೂಪಕ ।
ಲಾವಿಭವಖ್ಯಾತೆವಿಜಯಸಾಗರನಮಹಾ ॥
ದೇವಿಸುಮಂಗಳೆಪೆತ್ತಳ್ ।
ಳಾವಲ್ಲಭನಪ್ಪಸಗರಚಕ್ರೇಶ್ವರನಂ ॥ 75

ಜಿನಪತಿಯನೋರ್ವಳೋರ್ವ ।
ಳ್ಜನಪತಿಯಂಪಡೆದಳೆಂದೊಡಾರ್ದ್ದರೆವಿಜಯಾಂ ॥
ಗನೆಗೆಸುಮಂಗಳೆಗೆವೃಥಾ ।
ಸ್ತನಭರಮಂಪೊತ್ತುಕುಸಿವರಾಜಾಂಗನೆಯರ್ ॥ 76

ಚತುರುದಧಿಮೇಖಲಾಳಂ ।
ಕೃತವಸುಧೆಯನಾಳ್ದುಪಡೆದುಸುತರಿಂನರನಾ ॥
ಜಿತಶತ್ರುವಿಜಯಸಾಗರ ।
ರತರ್ಕ್ಯಭುಜವೀರ್ಯರರಸುಗೆಯ್ಯುತ್ತಿರ್ದರ್ ॥ 77

ವ ॥ ಅಕಾಲದೊಳಜಿತತೀರ್ಥಾವತಾರಮಖಿಲಪುಣ್ಯದಶಾವತಾರಮಾದುದಂದುವಿಜಯಾರ್ದ್ಧದರಥನೂಪುರಚಕ್ರವಾಳಪುರದಪೂರ್ಣ್ಣಘನವಿಯುಕ್ತರಂಗೆತೋಯದವಾಹನನೆಂಬತನೂಜನಾದನತ್ತಲುತ್ತರಶ್ರೇಣಿಯೊಳಂಬರತಿಳಕಮೆಂಬಪುರದಸುಲೋಚನಂಗೆಸಹಸ್ರಲೋಚನನಿಂಕಿಱಿಯಳುತ್ಪಲನೇತ್ರೆಯೆಂಬ ತನೂಜೆಯಾದಳಾಕೆಯುಂಪೂರ್ಣ್ಣಘನಂತೋಯದವಾಹನಂಗೆಬೇಡಿಯಟ್ಟಿದೊಡೆಚಕ್ರವರ್ತ್ತಿಯಪ್ಪಸಗರಂಗಗ್ರಮಹಿಷಿಯಕ್ಕುಮೆಂದುನೈಮಿತ್ತಿಕಾದೇಶದಿಂಕುಡಲೊಲ್ಲದಿರೆಕಡುಮುಳಿದುಪೂರ್ಣ್ಣಘನಂಲಯಸಮಯದಘನಾಘನದಂತೆತ್ತಿಬಂದಂಬರತಿಳಕಮಂಮುತ್ತೆಪುತ್ರನಂಪುತ್ರಿಯುಮಂವಿದ್ಯೆಯಿಂಪತತ್ರಿಮಾಡಿಪೊಱಮಡಿಸಿಪೊಱಮಟ್ಟುಕಾದಿಸುಲೋಚನನಮರೀಲೋಚನನಾತಿಥಿಯುಪ್ಪುದುಂಪೂರ್ಣ್ಣಘನನಂಬರತಿಳಕಮಂಪೊಕ್ಕುಕಂನೆಯನಱಸಿಕಾಣದೆತಂನಪೊಳಲ್ಗೆಪೋದನಿತ್ತಲಾಸಹಸ್ರಲೋಚನನುಮುತ್ಪಲನೇತ್ರೆಯುಂಶರಭಾಟವಿಯಂಪೊಕ್ಕುವೇತ್ರಾವತೀತೀರದೊಳಿರ್ದ್ದರನ್ನೆಗಂಸಗರನಂದುಪುಷ್ಪಾಕ್ಷವೆಳೆತಂದಾಪಱುವಿನೊಳೞಿಪಿಪೋಗಲಾತಂತೊಳಲುತ್ತುಂಬಂದು ॥

ಮ ॥ ಮೃಗರಾಜಂಗಗಿದೋಡುವಾನೆಗಳುಮಂಮತ್ತದ್ವಿಪಂಗೆತ್ತುಕಾ ।
ಮ್ಮುಗಿಲೊಳ್ಪೊಱುರ್ವ್ವಗಜಂಗಳಂಶರಭಮಂಬೆಂಕೊಳ್ವಭೇರುಂಡವ ॥
ಕ್ಕಿಗಳಂನೋಡಿದನೋಟದಾಸಱಗಿವಂನಂಕಂಡನಾಸಂನದೊಳ್ ।
ಸಗರಂಕಂನೆಯುಮಂತದಗ್ರಜನುಮಂವೇತ್ರಾವತೀತೀರದೊಳ್ ॥ 78

ಚ ॥ ನವಶಶಿಲೇಖೆಯುಂನವದಿನೇಶನುಮಿಲ್ಲಿಗೆರಾಹುಗಳ್ಕಿಬಂ ।
ದುವುದಿಟವೆಂದುಸಂವೆಗದಿನಿರ್ವ್ವರುಮಂನಡೆನೋಳ್ಪಭೂಭುಜ ॥
ಪ್ರವರನಚಿತ್ತಮಂಸೆಱೆಗೆತಂದುವ್ರಸೋಲಿಪತಂಮಲೀಲೆಯಿಂ ।
ಕುವಲಯಮಾಲೆಯಂನಗುವಬಾಲೆಯಲೋಲವಿಲೋಚನಾಂಶುಗಳ್ ॥ 79

ಅಲೆಯದೆಲರ್ದ್ದಿನೇಶಕಿರಣಂಪುಗದೆಂಬಿನೆಗಂಕೞಂಗಿಕ ।
ತ್ತಲಿಸುವಕಾನನಾಂತರದೊಳಂಗಜಜಂಗಮದೀಪಮಾಲೆವೋ ॥
ಲ್ಜಲಜಲಿಸುತ್ತುಮಿರ್ಪ್ಪಖಚರೇಶ್ವರಕಂನೆಯನಾಗಳೆಯ್ದಿದಂ ।
ತೊಲಗದೆದಿಟ್ಟಿನಟ್ಟುನಿಲೆಕಣ್ಬೊಳಪಿಂದಮರ್ದಪ್ಪಿಕೊಳ್ವವೋಲ್ ॥ 80

ಕಿಡಿಸಿದನೇಕೆತಾವರೆಯನೀಮೊಗಮಂಪಡೆದೇಕೆನೆಯ್ದಿಲಂ ।
ಕಿಡಿಸಿದನೀತೆರಂಪೊಳೆವಕಣ್ಮಲರಂಪಡೆದೇಕೆತುಂಬಿಯಂ ॥
ಕಿಡಿಸಿದನೀವಿನೀಳಕುಟಿಲಾಳಕಮಂಪಡೆದೇಕೆಪದ್ಮಜಂ ।
ಕಿಡಿಸಿದನೀಕೆಯಂಪಡೆದುಜಂಗಮಕಲ್ಪಲತಾವಿಳಾಸಮಂ ॥ 81

ವ ॥ ಎಂದುನೀಡುಂಭಾವಿಸಿನೋಡಿ ॥

ಕಂ ॥ ಎಳಲತೆಯನುೞಿದುತಾವರೆ ।
ಗೆಳಸುವವುಮೞಿದುಂಬಿಯೊಂದವಿಂದೆಱಗಿದುವಾ ॥
ಚಳನಯನೆಯತನುಲತೆಯಿಂ ।
ತಳರ್ದರಸನಕಣ್ಕುಮಾರಮುಖಸರಸಿಜದೊಳ್ ॥ 82

ವ ॥ ಅಂತುನೋಡಿ ॥

ಉ ॥ ಬಾಲಶಿರೀಷಮಾಲೆಯವೊಲೀಕೆಕರಂಸುಕುಮಾರೆನೀಂಕರಂ ।
ಬಾಲನೆಕಾನನಂಮನುಜಖೇಚರಗೋಚರಮಲ್ತುಮುಕ್ಷಶಾ ॥
ರ್ದೂಲಮದೇಭಸಿಂಹಶರಭಾಕುಳಮಿಲ್ಲಿಗೆವಪ್ಪದುಷ್ಕೃತೋ ।
ನ್ಮೀಲನಮಾವಕಾರಣದಿನಾದುದದಂತಿಳಿಪೆಂದನಾನೃಪಂ ॥ 83

ವ ॥ ಅಂತುಬೆಸಗೊಳ್ವುದುಂಸಹಸ್ರಲೋಚನಂನಿಜವೃತ್ತಾಂತಮಂತಿಳಿಪಿ ॥

ಶಾ ॥ ಈನಿಂನಾಕೃತಿನಿಂನದುಂದುಭಿಗಭೀರಧ್ವಾನಮೀನಿಂನನೇ ।
ತ್ರಾನಂದೋದಯಭದ್ರಲಕ್ಷಣಗುಣಂಪೇಳ್ದಪ್ಪುವೀತಂಧರಿ ॥
ತ್ರೀನಾಥಂಪೆಱನಲ್ಲನೆಂಬಿನಿತನೀಭೀಮಾಟವೀದುರ್ಗ್ಗಮ ।
ಸ್ಥಾನಂಪೊಕ್ಕುತೊಳಲ್ದುದೇಂಬೆಸಸಿದಂಲೋಕೈಕರಕ್ಷಾಮಣೀ ॥ 84

ವ ॥ ಎಂಬುದುಮಾನಯೋಧ್ಯಾಪತಿಯೆಂಸಗರನೆಂಬೆನೆಂದುತಂನಬಂದತೆಱನನಱಿಯೆತಿ
ಳಿಪೆಸಹಸ್ರಲೋಚನಂವಿಸ್ಮಯಸ್ತಿಮಿತಲೋಚನನಾಗಿ ॥

ಕಂ ॥ ಬಗೆತೀರ್ವ್ವುದುಬಗೆತಿರ್ಪ್ಪುದು ।
ಸಗರನನಾಶ್ರಯಿಸಿಮೊಂದುಪಿತೃಬೆಸಸಿದನ ॥
ಳ್ಗೆಗಮಾಯ್ತುನಿಮಗಮೆಂದು ।
ಬ್ಬೆಗಮುಬ್ಬರಮಾಗೆಖಚರತನಯಂನುಡಿದಂ ॥ 85

ವ ॥ ಆನುಡಿಯನವಧಾರಿಸಿ ॥

ಶಾ ॥ ಖೇದಂಮಾಣ್ಗೆಶುಭೋದಯಂಸಮನಿಕುಂಸಂಸಾರಿಗಳ್ಗೆಂತಿದೇ ।
ನಾದಂಚೋದ್ಯಮೆನಟ್ಟಿನಿಂಮಜನಕಂಪೇಳ್ದಂತುಟಂಮಾಳ್ಪೆನಾ ॥
ಹ್ಲಾದಂಪೆತ್ತಿರಿಮೆಂದುಸಂಮರಿಸಿಮುಂನಂತಂನನೊಟ್ಟೈಸಿಬಂ ।
ದಾದುಷ್ಪ್ರಾಪ್ಯಪದವಜ್ಜೆಗೊಂಡುನಡೆದಂಪಿಂತಿಕ್ಕಿಕಾಂತಾರಮಂ ॥ 86

ವ ॥ ಅಂತುಬರುತ್ತಿರ್ಪ್ಪಿನಂ ॥

ಕಂ ॥ ಕರೆವಂತಾದುದುಹಸ್ತ್ಯ ।
ಶ್ವರಥಪದಾತಿಗಳಕಳಕಳಂಧರೆನಿಂದಾ ॥
ಧರಣೀಶನಿರ್ದ್ದದೆಸೆಯಂ ।
ನಿರೀಕ್ಷಿಪಂತಾದುದೊಗೆದಧೂಳೀಜಾಲಂ ॥ 87

ವ ॥ ಅಂತುನಿಜಚಾತುರ್ವ್ವಲಂಬಂದುಕೂಡುವುದುಂವಿಜಯವಾರಣಮಣಿಸಾರಿಕೆಯೊಳ್ಸಹಸ್ರಲೋಚನನುಮುತ್ಪಳನೇತ್ರೆಯುಮುಭಯಪಾರ್ಶ್ವಮನಲಂಕರಿಸಿಬರೆ ॥

ಚ ॥ ಪುರವನಿತಾಜನಂಕುಡುವಶೇಷೆವಿನವಾಳಿಯುಮಂಪುರಾಂಗನಾ ।
ತರಳಕಟಾಕ್ಷಮಾಲೆಯುಮನಾಂತುದುಕೂಲಪಟೀಪತಾಕೆಯಿಂ ॥
ಮರಕತರತ್ನತೋರಣದಿನೊಪ್ಪುವಪೆರ್ದಂಪುಗುತಂದನುತ್ಸವಾ ।
ಕರಮನಯೋಧ್ಯೆಯಂದಿವಿಜನಾಯಕನಂತೆಧರಾಧಿನಾಯಕಂ ॥ 88

ವ ॥ ಅಂತಾಪುರಮಂಪೊಕ್ಕುತ್ಪಳನೇತ್ರೆಯಂಮದುವೆನಿಂದು ॥

ಕಂ ॥ ನಿಜವಕ್ಷದೊಳಾವಧುವಂ ।
ಭುಜದೊಳ್ಭೂವಧುವನಿರಿಸಿಷಟ್ಖಂಡಮಹೀ ॥
ಭುಜಪೂಜ್ಯನಮಲಕೀರ್ತ್ತಿ ।
ಧ್ವಜಮಂದಿಗ್ದಂತಿದಂತದೊಳೆತ್ತಿಸಿದಂ ॥ 89

ಪರಚಕ್ರಕಾಲಚಕ್ರಂ ।
ನಿರಸ್ತದಿನಕರಸಹಸ್ರಕರಚಕ್ರಂಭಾ ॥
ಸುರಚಕ್ರರತ್ನಮೊಗೆದುದು ।
ಧರಣೀವಲ್ಲಭನಶಸ್ತ್ರಶಾಲೋದರದೊಳ್ ॥ 90

ಬಲಮಾಱುಂನವನಿಧಿಯುಂ ।
ಪಲವುಂಚಿಹ್ನಂಗಳುಂಚತುರ್ದ್ದಶರತ್ನಾ ॥
ವಳಿಯುಂಜನಿಯಿಸೆನಗರಂ ।
ನೆಲನಂಷಟ್ಖಂಡಭರತಮಂಸಾಧಿಸಿದಂ ॥ 91

ವ ॥ ಅಂತುಸಿದ್ಧದಿಗ್ವಿಜಯಂವಿದ್ಯಾಧರಲೋಕಮಂತನಗೆಕುಡೆಸಹಸ್ರಲೋಚನಂನಿಜಜನಕನಂಕೊಂದವನಂಕೊಂದಲ್ಲದೆಮಾಣೆನೆಂದಸಂಖ್ಯಾತಬಲಸಮೇತಂಬಂದುರಥನೂಪುರಚಕ್ರವಾಳಪುರಮಂಮೂವಳಸಾಗೆಮುತ್ತೆಸಹಸ್ರಲೋಚನಂಸಮರಸಾಧ್ಯನಲ್ಲನೆಂದುತಳಿಸಂದುಪೂರ್ಣ್ಣಘನಂನಿಜತನೂಜನಪ್ಪತೋಯದವಾಹನನಂವಿ

ದ್ವೈಯಿಂಹಂಸನಂಮಾಡಿಕಳಿಪಿಮಹಾಯುದ್ಧಂಗೆಯ್ದುಕಳಿಯೆಸಹಸ್ರಲೋಚನಂ
ತೋಯದವಾಹನನಬೞಿಯಂಗಳೆವೆೞಿಯಪಾವಿನಂತೆತಗುಳುತ್ತುಂಬಂದು ॥

ಕಂ ॥ ಅಟ್ಟುವನನಮುಳಿಸುವೋಡುವ ।
ನಿಟ್ಟೞವೆನಿಸಿದ್ದರ್ಭಯಮುಮೋರ್ಮ್ಮಾದಲೊಳ್ಪಿಂ ॥
ಮೆಟ್ಟಿದುವುಬಗೆಯೊಳಚ್ಚರಿ ।
ಪುಟ್ಟುವಿನಂಸಮವಸರಣಮಂಮುಟ್ಟಲೊಡಂ ॥ 92

ವ ॥ ಅಂತಪಗತಕಲುಷರೀರ್ವ್ವರುಂಭಗವದಜಿತಭಟ್ಟಾರಕರಸಮವಸರಣಭೂಮಿಯಂ
ಪೊಕ್ಕುವಸ್ತುಸ್ತವರೂಪಸ್ತವಗುಣಸ್ತವನಾನಂತರಂಮಾನವಸಭಾಸದಾಸೀನನಾಗಿ
ರ್ದ್ದಸಗರಚಕ್ರವರ್ತ್ತಿಯಸಮೀಪವರ್ತ್ತಿಗಳಾಗೆಗಣಧರಮುಖಕಮಲದತ್ತಲೋ
ಚನಂಸಹಸ್ರಲೋಚನಂ ॥

ಕಂ ॥ ಶ್ರೀಯೋನಿಧಿಮತ್ಪಿತೃಗಂ ।
ತೋಯದವಾಹನನಪಿತೃಗಮೀಮುಳಿಸೀಜ ॥
ನ್ಮಾಯತ್ತಮೊಮೇಣ್ಪೂರ್ವ್ವಭ ।
ವಾಯತ್ತಮೊನೆಱಿಯೆಬೆಸಸಿಮೆನಗಾತೆಜಿನಂ ॥ 93

ವ ॥ ಎನೆಗಣಧರಾಚಾರ್ಯ್ಯರಿಂತೆಂದುಬೆಸಸಿದರೀಭರತಾರ್ಯ್ಯಖಂಡದಪಷಡತ್ತ್ರಕವೆಂ
ಬಪುರದಪರದಂಭಾವನನೆಂಬನಾತಂಹರಿದಾಸನೆಂಬತಂನಮಗಂಗೆನಾಲ್ಕುಕೋಟಿಕ
ಸವರಮಂಕೊಟ್ಟುಪರದೇಶಕ್ಕೆಪರದುಪೋಪುದುಂಹರಿದಾಸನಾಧನಮಂದುರ್ವ್ಯಸ
ನದಿಂಕಿಡಿಸಿನಿಜಭವನದಿಂರಾಜಭವನಕ್ಕೆಕಂನಮಂಸಮೆದುತದುಪಜ್ಞನಮೆಜೀ
ವನಮಾಗಿರ್ದ್ದನಂನೆಗಂಕೆಲವುಕಾಲದಿನಾತನತಂದೆಯುಪ್ರಭಾವನನನೂನಧನಮಂ
ಪಡೆದುರಾತ್ರಿಸಮಯದೊಳ್ಮನೆಗೆಬಂದುಮಗನವಾರ್ತ್ತೆಯಂಕೇಳ್ದುಮಗುಳ್ಚಿತರ
ಲೆಂದುಕಂನಮಂಪುಗುವುದು ಮಾಸಮಯದೊಳ್ಹರಿದಾಸಂತಂನಂಕೊಲಲೆಂದರಸ
ನಟ್ಟಿದತೀಕ್ಷ್ಣಪುರುಷಂಬಂದನೆಂದುಕಯ್ದುಗೆಯ್ದುತಂಮೊಳಿಱಿದುಸತ್ತುಪರಸ್ಪರ
ವಿರೋಧಿಗಳಪ್ಪತಿರ್ಯ್ಯಗ್ಜಾತಿಗಳಾಗಿತಂಮೊಳ್ಘೋರವೈರಂಕೊಂಡುತಿಂದು
ದುಃಖಪರಂಪರೆಯನೆಯ್ದಿಪೆಱತೊಂದುಜನ್ಮದೊಳ್ಪೂರ್ವ್ವವಿದೇಹದಪುಂಡರೀಕಿಣಿ
ಪುರದೊಳುತ್ತರನುಮನುತ್ತರನುಮೆಂಬಸಹೋದರರಾಗಿಪುಟ್ಟಿತಪಂಗೆಯ್ದುಶತಾರ
ಕಲ್ಪದೊಳ್ಪುಟ್ಟಿಬಂದೀಗಳಾಭಾವನನುಂಪೂರ್ಣ್ಣಘನನಾದಂಹರಿದಾಸಂಸುಲೋಚ
ನನಾದನಂದಿನವಿರೋಧಂಕಾರಣಮಾಗೆಸುಲೋಚನಂಪೂರ್ಣ್ಣಘನನಕಯ್ಯೊಳ್ಸತ್ತ
ನೆಂದುತಿಳಿಯೆಪೇಳ್ದು ॥

ಚ ॥ ಪೊಲೆಮುಳಿಸೆಂಬುದಾಮುಳಿಸುಪುಟ್ಟಿದಪೊತ್ತಱೊಳಾವನಾದೊಡಂ ।
ಪೊಲೆಯನೆಪಾಪಹೇತುವಮುಳಿಸಲ್ಲದಪೇಳ್ವೆಱತುಂಟೆಕೋಪದಿಂ ॥
ಕೊಲೆದೊರೆಕೊಳ್ಗು ಮಾಕೊಲೆಯೆಪಾತಕಮೆಂಬುದುಪುಣ್ಯಮೆಂಬುದಾ ।
ಕೊಲೆಪೊಲೆಪೊರ್ದ್ದದಿರ್ಪ್ಪರವೆನೀಮದಱಿಂತೊಱೆಯಿಂವಿರೋಧಮಂ ॥ 94

ವ ॥ ಎಂದುತಿಳಿಪೆತದನಂತರಂ ॥

ಕಂ ॥ ಬಲವೆನಗಿನಿತೇಕೆಸಹ ।
ಸ್ರಲೋಚನನೊಳಾದುದೆಂದುಬೆಸಗೊಂಡಂಗೆ ॥
ಕ್ರಿಲಲಾಮಂಸಗರಂಭವ ।
ಜಲನಿಧಿತಾರಕರನಜಿತಭಟ್ಟಾರಕರಂ ॥ 95

ವ ॥ ಅಂತುಬೆಸಗೊಳ್ವುದುಮಶೇಷಭಾಷಾತ್ಮಕಮಪ್ಪದಿವ್ಯಭಾಷೆಯೊಳಿಂತೆಂದುಪೆಸಸಿದ
ರೀಭರತವಿಷಯದಪದ್ಮಪುರದೊಳಾರಂಭಿಕನೆಂಬನೋರ್ವ್ವಪಾರ್ವ್ವನಾತಂಗೆಬಲಿ
ಬಿಗಳೆಂಬರೀರ್ವ್ವರಂತೇವಾಸಿಗಳಾದರವರ್ವಿದ್ಯಾಮತ್ಸರಮೆತಮಗೆವೈರಕಾರಣ
ಮಾಗೆವರ್ತ್ತಿಸುತ್ತಿರ್ದ್ದಮತ್ತೊಂದುದಿವಸಂಧೇನುವಿಕ್ರಯನಿಮಿತ್ತಮೋರೋ
ರ್ವ್ವರನಿಱಿದುಸತ್ತು ॥

ಕಂ ॥ ಕಲುಷಮತಿಶಬರನಾದಂ ।
ಬಲಿಶಿಬಿಯುಂವೃಷಭನಾಗೆಶಬರಂತೆಂನಂ ॥
ಕೊಲೆಮೂಷಿಕನಾದಂಕಳೆ ।
ದುಲುಬ್ಧಕಂಬದ್ಧರೋಷದಿಂಬೆಕ್ಕಾದಂ ॥ 96

ವ ॥ ಅಂತುಪರಸ್ಪರೋಪಘಾತಪರಿಣಾಮಪರಿಚಿತಿಯಿಂ ॥

ಕಂ ॥ ಅನುಭವಿಸಿಪಲವುಕಾಲಮ ।
ನನಂತಭವದೊಳ್ದುರಂತದುಷ್ಕೃತಫಲಮಂ ॥
ಜಿನದೇವದಿತಂಗಾದ ।
ತ್ತರ್ನೊಜರವರೊರ್ಮ್ಮೆವಾರಣಾಸೀಪುರದೊಳ್ ॥ 97

ವ ॥ ಅನಂತರಂವ್ಯಂತರಗತಿಯೊಳ್ಸ್ವರೂಪನಃಸುಂದರನುಮೆಂಬವೆಸರಂಪಡೆದಲ್ಲಿಂಬಂ
ದುಹೇಮಪುರದೊಳ್ಕಾಲಂಧರ ಪುಷ್ಯಭೂತಿಗಳೆಂಬರಾಗಿಜನಿಯಿಸಿ ಜಾಯಾನಿಮಿ
ತ್ತಂವೈರಮೈಕಲ್ಯಮನಸ್ಕರಾಗಿಸಲುತ್ತುಮೊರ್ಮ್ಮೆ ಪುಣ್ಯವಶದಿನಗಣ್ಯಪುಣ್ಯಧನ
ರಂತಪೋಧನರಂ ಕಂಡುಪಶಾಂತಸ್ವಾಂತರಾಗಿತೊಱೆದುಸತ್ತುಸನತ್ಕುಮಾರಕಲ್ಪ

ದೊಳ್ಪುಟ್ಟಿನಾಕಲೋಕಸುಖಮನನುಭವಿಸಿ ಬಂದುಧಾತಕೀಷಂಡದಪರವಿದೇಹದ
ವಿಜಯಾವತಿವಿಷಯದವಿಜಯಪುರದೊಳ್ವಶಪುಟ್ಟಿದಕ್ಷ್ಯಾರಧರನುಮಮರಧರನು
ಮೆಂಬರಾದರಾಪುರಮನಾಳ್ವ ಸಹಸ್ರಶೀರ್ಷನೆಂಬನೊಂದುದಿವಸಮಾನವೇಂಟೆಗಡ
ವಿಯಂಪೊಕ್ಕು ಪರಸ್ಪರೋಪದ್ರವಕಾರಿಗಳಪ್ಪಕ್ರೂರಮೃಗಂಗಳುಪಶಮಭಾವದಿಂದಿ
ರೆಕಂಡುಕೌತುಕಂಬಟ್ಟುತೊಳಲುತ್ತುಮಲ್ಲಿವಿನಯಂಧರಕೇವಲಿಗಳಂಕಂಡುತಚ್ಚ
ರಣಸಮಕ್ಷದೊಳ್ದೀಕ್ಷೆಯಂಕೊಂಡುಮೋಕ್ಷಕ್ಕೆ ಪೋದನಿತ್ತಲಾಕ್ಷ್ಯಾರಧರನುಮಮ
ರಧರನುಮಾಕೇವಲಿಗಳಪಾದಪಾರ್ಶ್ವದೊಳ್ತಪಂಗೆಯ್ದು ಶರೀರಮಂತೊರೆದುಶತಾ
ರಕಲ್ಪದೊಳನಲ್ಪಸುಖಮನನುಭವಿಸಿಬಂದಾಬಲಿಯುಂಶಿಬಿಯುಂಸಹಸ್ರಲೋಚ
ನನುಂತೋಯದವಾಹನನುಮಾರ್ರೆಂದುಬೆಸಸಿ ॥

ಕಂ॥ ಸಂಸಜ್ಜನಹೃತ್ಕೈರವ ।
ಮರಲ್ವಿನಂದಿವ್ಯವಚನಪರಿಪೂರ್ಣ್ಣಸುಧಾ ॥
ಕರರುಚಿಪಸರಿಸೆಮತ್ತಂ ।
ನರೇಶ್ವರಂಗಜಿತತೀರ್ತ್ಥಕರರಿಂತೆಂದರ್ ॥ 98

ವ॥ ಅಂದಿನಾರಂಭಿಕಂಋಷಿಯರ್ಗ್ಗಾಹಾರದಾನಮಂಕೊಟ್ಟುಭೋಗಭೂಮಿಯೊಳ್ಪು
ಟ್ಟಬಳಿಯಂದಿವಕ್ಕೆ ಸಂದುದಿವ್ಯಸುಖಮನನುಭವಿಸಿ ಬಂದುಧಾತಕೀಷಂಡದಪರವಿ
ದೇಹದವಿಜಯಾವತಿವಿಷಯದೊಳ್ಚಕ್ರಪುರಮನಾಳ್ವಹರಿವರ್ಮ್ಮಂಗಂಗಾಂಧಾರಿ
ಗಂಶ್ರುತಕೀರ್ತ್ತಿವೆಸರಸುತನಾಗಿತಪಂಗೆಯ್ದು ಕಳೆದುಸ್ವರ್ಗ್ಗದೊಳ್ಪುಟ್ಟಿಬಂದುಪೂ
ರ್ವ್ವವಿದೇಹದರತ್ನಸಂಚಯಪುರಮನಾಳ್ವಭಯಘೋಷಂಗಂಚಂದ್ರಾಯಣಿಗಂಪ
ಯೋಬಲನೆಂಬಪುತ್ರನಾಗಿಪವಿತ್ರಚಾರಿತ್ರನಪಗತಪ್ರಾಣಂಪ್ರಾಣತಪ್ರಾಪ್ತನಾಗಿ
ಮಗುಳೆಬಂದುಪೃಥ್ವೀಧರಪುರಮನಾಳ್ವಜಯಂಧರಂಗಂವಿಜಯೆಗಂಜಯಕೀರ್ತ್ತಿ
ವೆಸರಮಗನಾಗಿರಾಜ್ಯಂಗೆಯ್ದುಜನಕಸೂರಿಪಾರ್ಶ್ವದೊಳ್ಪರಿವ್ರಾಜಕನಾಗಿಸಮಾ
ಧಿವೆತ್ತುನವಾನುತ್ತರಗೆಪೋಗಿಬಂದುನೀನೀಗಳೆರಡನೆಯಚಕ್ರವರ್ತ್ತಿಸಗರನಾದೆನೀ
ನಾರಂಭಿಕನಾದಂದಿನನುಬಂಧಂಕಾರಣಮಾಗೆಸಹಸ್ರಲೋಚನನೊಳತಿಪ್ರೀತಿಸಮ
ನಿಸಿದುದೆಂದಾಬೆಸಸೆ ॥

ಕಂ॥ ಜಿನವಚನಮನಾಲಿಸಿಭೀ ।
ಮನೆಂಬರಾಕ್ಷಸಕುಲಾಧಿಪಂತೋಯದವಾ ॥
ಹನನಪುರಾತನಜನ್ಮದ ।
ಜನಕಂಪ್ರೇಮಾನುಬಂಧದಿಂದಿಂತೆಂದಂ ॥ 99

ಮಗನೆವಿಜಯಾರ್ಧನಗದೊ ।
ಳ್ಪಗೆವರತಿಪ್ರಬಲರವರನಡುವಿರೆನಿನಗ ॥
ಚ್ಚಿಗಮಕ್ಕುಂಪಾವಿನೊಳಂ ।
ಪಗೆಯೊಳವೊಂದಾಗಿಜೀವಿಸಲ್ಬಂದಪುದೇ ॥ 100

ಪಲವುಂದ್ವೀಪಂಗಳ್ಕ ।
ಣ್ಮಲರಂಸೆಱೆಗೆಯ್ದುಕಿಂನರಾದ್ಯಷ್ಟಮರು ॥
ತ್ಕುಲನಿಲಯಂಗಳ್ದಕ್ಷಿಣ ।
ಜಲಧಿಯೊಳಿರ್ಪುವುನಿಕಾಮಕಮನೀಯಂಗಳ್ ॥ 101

ವ ॥ ಆದ್ವೀಪಂಗಳೊಳಗೆರಾಕ್ಷಸದ್ವೀಪಮೆಂಬುದುಸಪ್ತಶತಯೋಜನಪ್ರಮಿತಮದಱನ
ಡುವೆ ॥

ಮ॥ಸ್ರ॥ ಕನಕಪ್ರಾಕಾರವೇಳಂಬಳಿಸಿರೆವಿಳಸದ್ಗೋಪುರಾಟ್ಟಾಳಕಂನಂ ।
ದನವೇಳಂಲೋಚನಾನಂದಮನೊಡರಿಸೆಸರ್ವರ್ತುಕಂರಂಜಿಕುಂಯೋ ॥
ಜನಮೆಂಬತ್ತುದ್ದಮಯ್ವತ್ತಗಲಮೆನೆರೋಭೂಷಣಾಕಾರಮುದ್ಯ ।
ಜ್ಜಿನಗೇಹಂಸುತ್ತಲುಂತಳ್ತಿರೆವಿಕಟಹಟದ್ರತ್ನಕೂಟಂತ್ರಿಕೂಟಂ ॥ 102

ವ ॥ ಆತ್ರಿಕೂಟಾಚಲಶಿಖರಮಂಡಲದೊಳ್ ॥

ಕಂ ॥ ತ್ರಿಂಶದ್ಯೋಜನವಿಸ್ತಾ ।
ರಂಶರದಂಬುಧರಧವಳಧವಳಾರಂಹ ॥
ರ್ಮ್ಯಾಂಶುಸ್ಥಗಿತವಿಯಚ್ಚ ।
ಕ್ರಂಶೋಭಾಜನ್ಮಭೂಮಿಲಂಕಾನಗರಂ ॥ 103

ವ ॥ ಆನಿರಾತಂಕಮಪ್ಪಲಂಕೆಯೊಳ್ ಸುಖದಿನರಸುಗೆಯ್ವುದುಂಭೀಮರಾಕ್ಷಸಂಭವಾಂತರ
ಸ್ನೇಹದಿಂತೋಯದವಾಹನನಂತಂನಪೊಳಲ್ಗಯ್ದುರಾಜ್ಯಾಭಿಷೇಕಂಗೆಯ್ದುಪಟ್ಟ
ಮಂಕಟ್ಟಿರಾಕ್ಷಸವಿದ್ಯೆಮೊದಲಾಗೆಪಲವುವಿದ್ಯೆಗಳುಮಂನವಮುಖಾಭರಣಪ್ರಮು
ಖಾನೇಕದಿವ್ಯಾಭರಣಂಗಳುಮಂನವನಿಧಿವೆರಸುಪಾತಾಳಲಂಕೆಯುಮನಿತ್ತುನಿನಗೆ
ರಾಕ್ಷಸಕುಲಮೆಕುಲಮಕ್ಕೆಂದುನಿಯಮಿಸಿನಿಜಪರಿಗ್ರಹಂಬೆರಸುದ್ವೀಪಾಂತರಕ್ಕೆ
ಪೋದನಿತ್ತತೋಯದವಾಹನಂನಿಜಪರಿಜನಂ ಬೆರಸುಲಂಕೆಯೊಳರಸುಗೆಯ್ಯುತ್ತುಂ
ವಿಜಯಾರ್ಧದಕಿಂನರಪುರಮನಾಳ್ವರತಿಮಯೂಖಂಗಮನುಮತಿಗಂಪುಟ್ಟಿದಸು
ಪ್ರಭೆಯಂಮದುವೆನಿಂದುಕೆಲವುಕಾಲದಿಂವೈರಾಗ್ಯಪರನಾಗಿನಿಜಾಗ್ರತನಯನಪ್ಪ
ಮಹಾರಾಕ್ಷಸಂಗೆಪಟ್ಟಮಂಕಟ್ಟಿರಾಜ್ಯಮನಿತ್ತುದೀಕ್ಷೆಗೊಂಡುಮೋಕ್ಷಕ್ಕೆಪೋಪು
ದುಮಿತ್ತಲ್ ॥

ಕಂ॥ ರಕ್ಷಿಸಿವಸುಮತಿಯಂಪರ ।
ಪಕ್ಷಮನಾಕ್ರಮಿಸಿವಿಭವದೊಳ್ತನಗೆಸಹ ॥
ಸ್ರಾಕ್ಷಂಸಮನೆನಿಸಿಮಹಾ ।
ರಾಕ್ಷಸನಧಿರಾಜನೆನಿಸಿಲಂಕೆಯೊಳಿರ್ದ್ದಂ ॥ 104

ವ॥ ಆತಂಗೆ ತನಯರಮರರಾಕ್ಷಸನುಂಭಾನುರಾಕ್ಷಸನುಮೆಂಬರಾದ ರಾಮಹಾರಾಕ್ಷಸನೊಂದುದಿವಸಂಕ್ರೀಡಾವನಕ್ಕೆ ಬಂದಮಂದಮಕರಂದಲೋಭದಿಂದಿರುಳ್ಮುಗಿದಕಮಲಕೋಶದಿಂಪೊಱಮಡಲಱಿಯದುಸಿರ್ಪ್ಪಿಂಗಿದಭ್ರಮರನಂಕಂಡು ॥

ಕಂ॥ ಮರಣಮನೆಯ್ದಿದುದೀಷ ।
ಟ್ಕರಣಂಘ್ರಾಣೇಂದ್ರಿಯಕ್ಕೆ ಸೋಲ್ತನಲಯ್ದುಂ ॥
ಕರಣದನುಸರಣಮೀಸಂ ।
ಸರಣಮಿಪತ್ಕರಣಮಪ್ಪುದೊಂದಚ್ಚರಿಯೇ ॥ 105

ವ॥ ಎಂದುಸಂಸಾರವೈರಾಗ್ಯಪರನವಧಿಬೋಧರಂಶ್ರುತಸಾಗರಚಾರಣಋಷಿಯರಂಕಂಡುನಿಜವಿಭವಕಾರಣಮಂಬೆಸಗೊಳ್ವುದುಮವರಿಂತೆಂದುಬೆಸಸಿದರ್ಪ್ಪಾದನಪುರಾಧಿಪಂಕನಕರಥಂಜಿನಪೂಜೆಯಂಮಾಡೆನೋಡಿನಲಿದುನರ್ತ್ತಿಸಿತತ್ಫಲದಿಂಕಡೆಯೊಳಪರವಿದೇಹದಕಾಂಚನಪುರದೊಳ್ಯಕ್ಷನಾಗಿಸಾಧುಸಂಘಕ್ಕೆ ಸಮನಿಸಿದುಪಸರ್ಗ್ಗಮನಪಹರಿಸಿತಟಿಲ್ಲಂಘನೆಂಬಖೇಚರಂಗಂಶ್ರೀಪ್ರಭೆಗಮುದಿತನೆಂಬ ಮಗನಾಗಿವೈರಾಗ್ಯದಿಂತೊಱೆದುಜಿನಚರಣಮಂದನಾನಂದದಿಂಬಂದವಿಕ್ರಮನೆಂಬವಿದ್ಯಾಧರನವಿಭೂತಿಯಂನೋಡಿಮನವೆಳಸಿವಿಧಾನಂಗೆಯ್ದುಜೀವಿತಾವಸಾನದೊಳೀಶಾನಕಲ್ಪಕ್ಕೆಪೋಗಿಬಂದುಮಹಾರಾಕ್ಷಸನಾದೊಡೀಮಹಾಮಹಿಮೆನಿನಗಾದುದೆಂದುಪೇಳೆಕೇಳ್ದುನಿಜತನೂಜನಪ್ಪಮರರಾಕ್ಷಸಂಗೆ ಲಂಕೆಯಂಕೊಟ್ಟುವಿದ್ಯೆಗಳಂವಿಸರ್ಜ್ಜಿಸಿತಪಂಗೆಯ್ದಪವರ್ಗ್ಗಪ್ರಾಪ್ತನಾದನಿತ್ತಲ್ ॥

ಕಂ॥ ಕರವಾಳಕೂರ್ಪ್ಪಿನಿಂದಮ ।
ರರಾಕ್ಷಸಂಕೂರ್ಪ್ಪುಗಿಡಿಸಿತನಗೆಱುವಖೇ ॥
ಚರವಲ್ಲಭರಂಲಂಕಾ ।
ಪುರದೊಳ್ನಿಶ್ಶಂಕನರಸುಗೆಯ್ಯುತ್ತಿರ್ದ್ದಂ ॥ 106

ವ॥ ಅವಿಪಕ್ಷರಾಕ್ಷಸನೆನಿಪ್ಪಮರರಾಕ್ಷಸಂಗಂತರದನುಜನಪ್ಪಭಾನುರಾಕ್ಷಸಂಗಂಪ್ರತ್ಯೇಕದಿಂಪದಿಂಬತ್ತರ್ತನಯರಪ್ಪುದುಮವರನೋರೊಂದುಪೊಳಲ್ಗರಸುಮಾಡಿನಿಸರ್ಗ್ಗವೈರಾಗ್ಯದಿಂತೊಱೆದೀರ್ವ್ವರುಂನಿರ್ವ್ವಾಣಕ್ಕೆ ಸಂದಿಂಬಳಿಯಮಾಸಂತಾನದೊಳನೇಕರರಸುಗಳತಿಕ್ರಾಂತರಪ್ಪುದುಂ ॥

ಕಂ ॥ ಘನರುತಿಗೆರಾಜಹಂಸಂ ।
ಮನವಳಿವಂತನ್ಯರಾಜಕಂಬೆಚ್ಚುರ್ವಿನಂ ॥
ಘನತೇಜಃಪ್ರಭನಾಳ್ದಂ ।
ಘನಪ್ರಭಂಪ್ರಥಿತಕೀರ್ತ್ತಿಲಂಕಾಪುರಮಂ ॥ 107

ವ ॥ ತದಪತ್ಯಂ ॥

ಕಂ ॥ ಧವಳಚ್ಛತ್ರಚ್ಛಾಯೆಯಿ ।
ನವನೀಚಕ್ರಕ್ಕೆ ಚಂಡಕರತಾಪಂಸಂ ॥
ಭವಿಸದೆನೆತಂನಜಸ್ರದಿಂ ।
ಧವಳಿಸಿದಂಧವಳಕೀರ್ತ್ತಿದಿಗ್ಭಿತ್ತಿಗಳಂ ॥ 108

ವ ॥ ಅಂತಾತಂಲಂಕೆಯನಾಳುತ್ತುಮಿರೆಮತ್ತಿತ್ತವಿಜಯಾರ್ದ್ಧಗಿರಿಯದಕ್ಷಿಣಶ್ರೇಣಿಯ
ಮೇಘಪುರದವಿಯಚ್ಚರೇಂದ್ರನತೀಂದ್ರನೆಂಬಂನಿಜತನೂಜನಪ್ಪಶ್ರೀಕಂಠಕುಮಾರ
ನಿಂಕಿಱಿಯಳಂದೇವಿಲೆಯಂರತ್ನಪುರದಪೂರ್ವ್ವೋತ್ತರಂತಂನಮಗಂಪುಷ್ಪೋತ್ತರಂ
ಗೆಬೇಡೆಕುಡದೆ ॥

ಕಂ ॥ ದೇವಿಲೆಯಂಲಾವಣ್ಯರ ।
ಸಾವಿಲೆಯಂಧವಳಕೀರ್ತ್ತಿಗುತ್ಸವತೂರ್ಯ್ಯ ॥
ರಾವಂಗಗನೋದರಮಂ ।
ತೀವುವಿನಂಚಂದ್ರಮುಖಿಯನಿತ್ತನತೀಂದ್ರಂ ॥ 109

ವ ॥ ಆತನತನೂಭವಂಶ್ರೀಕಂಠಕುಮಾರನೊರ್ಮ್ಮೆಮಂದರಕಂದರಕ್ಕೆಜಿನವಂದನಾನಿ
ಮಿತ್ತಂಪೋಗಿರತ್ನಪುರದಮೇಗನೆಮೇಘಪುರಕ್ಕೆಬರ್ಪಸಮಯದೊಳ್ಪುಷ್ಪೋ
ತ್ತರನತಂಗೆಪದ್ಮೋತ್ತರೆತಂನಚೆಂಬೊಂನಕಂನೆಮಾಡದೊಳ್ಸುಸ್ವರದಿಂಪಾಡುತ್ತು
ಮಿರ್ಪುದಂ ॥

ಮಾಸ್ರ ॥ ಜಿತಭೃಂಗೀಝೇಂಕೃತಂನಿರ್ಜ್ಜಿತಮದನಧನುರ್ಜ್ಯಾಲತಾಟಂಕೃತಂತ ।
ರ್ಜ್ಜಿತವೀಣಾಸಿಂಜಿತಂಭಂಜಿತರತಿರಮಣೀರತ್ನಕಾಂಚೀಪ್ರಣಾದಂ ॥
ಶ್ರುತಿಯುಂತರ್ಕ್ಕೈಯಿಸ್ಸಿರೋಮೋದ್ಗತಿಯೊಡನೆಗತಿಸ್ತಂಭಮಂಖೇಚರಾಧೀ ।
ಶತನೂಜಂಗಿತ್ತುದಾಕನ್ನಿಕೆಯಮಧುರಸಪ್ತಸ್ವರೋತ್ತಾನಗಾನಂ ॥ 110

ಕಂ ॥ ಸ್ವರಮಂತ್ರದೇವತಾನೂ ।
ಪುರರವಮೆನೆಕಿವಿಮನೆಯ್ದೆಕನ್ಯಾಕಲಕಂ ॥
ತರವಂಶ್ರೀಕಂಠಂಗಾ ।
ನರಸೋತ್ಕಂಠಂಪ್ರತಿಷ್ಠೆಯೊಳ್ಪಡೆಳೆದಂ ॥ 111

ವ ॥ ಅಂತಾತಂಗೋರಿಯಮೃಗದಂತೆಳಸಿಬರ್ಪುದುಂ ॥

ಕಂ ॥ ನೋಡಲೊಡಮಾಕುಮಾರನ ।
ಗಾಡಿಗೆಕಣ್ಸೋಲ್ತುಕಂನೆಯುಂಮನಸಿಜನೇ ॥
ಸಾಡಿದನೆಡೆವಡೆದೊಡೆಪರ ।
ಪೀಡಾಕರರೇಕೆಬಾಧೆವಡಿಸದೆಮಾಣ್ಬರ್ ॥ 112

ವ ॥ ಅಂತು ವಶಮಾದಕಂನೆಯನಶಂಕಿತಂಲಂಕೆಗುಯ್ದುಧವಳಕೀರ್ತಿಯ ಕೆಲದೊಳಿ
ರ್ಪುದುಮದಂ ಪುಷ್ಪೋತ್ತರನಱಿದು ॥

ಚ ॥ ಎರೆದೊಡೆಕಂನೆಯಂಕುಡದೆಮುಂನೆನಗೆಂನನುಜಾತೆಯಂಕುಳಾ ।
ಚರಣಮನೇನುಮಂಬಗೆಯದೆಂನುಮನೇಱಿಸಿಕೊಂಡುಪೋದನೆಂ ॥
ಬೆರಡಱೊಳಂಮನಕ್ಕೆಮುನಿಸಿಂಮಡಿದಳ್ಳಿಸೆಲಂಕೆಗೆತ್ತಿದಂ ।
ಧರೆಕಿಱಿದೀವರೂಥಿನಿಗೆನಲ್ವಿಲಯಾಂತಕನಂತೆಖೇಚರಂ ॥ 113

ವ ॥ ಅಂತು ಮೇಲೆತ್ತಿಬರ್ಪುದುಂಧವಳಕೀರ್ತಿನಯಾನುವರ್ತಿಮುಂನಂ ಸಾಮಮ
ನೊಡರ್ಚಿವೆಂದುನಿಜಮಹತ್ತರರಂ ಪುಷ್ಪೋತ್ತರನಲ್ಲಿಗಟ್ಟುವುದುಮವರ್ಬಂದು
ಕಂಡುಪಾಯನಪುರಸ್ಸರರಿಂತೆಂದರ್ ॥

ಮ॥ಸ್ರ॥ಅನುರೂಪಂಕಂನೆಗೀತಂಕುಲಭುಜಬಲವಿದ್ಯಾಬಲಖ್ಯಾತನಿನ್ನಂ ।
ಗೆನಿರಾಳೋಚಂಕುಡಲ್ವೇಳ್ಪುದುಯುವತಿಯುಮನ್ಯೋನ್ಯಸಂಪ್ರೀತಿಯಿಂದಾ ॥
ಯ್ತನುಬಂಧಂರಾಗದಿಂದಿಂನಿವರ್ಗೆಮದುವೆಯಂಮಾಳ್ಪುದೆಂದಟ್ಟಿದಂನಿಂ ।
ಮನುಜನ್ಮಂನಿಂಮನಣ್ಣಂಬಯಸಿಪದಪಿನಿಂದೆಂಮವಿದ್ಯಾಧರೇಂದ್ರಂ ॥ 114

ವ ॥ ಎನೆಮನದೆಗೊಂಡುನಿರುತ್ತರಂಪುಷ್ಪೋತ್ತರನೊಡಂಬಟ್ಟುಮಗಳೆಪೋಳ್ಪುದುಂಶು
ಭದಿನಮುಹೂರ್ತದೊಳ್ಪದ್ಮೋತ್ತರೆಯಂಶ್ರೀಕಂಠಂಗೆಮದುವೆಮಾಡಿಮತ್ತೊಂ
ದುದಿನಂಶ್ರೀಕಂಠನಂನಿನಗೆವಿಜಯಾರ್ಧಮಹೀಧರದೊಳಹಿತರೊಡಗೂಡಿರ್ಪುದು
ನೀತಿಯಲ್ಲದಱಿನನೇಕದ್ವೀಪಮುಖ್ಯಮಪ್ಪವಾನರದ್ವೀಪದೊಳೆನ್ನಸಮೀಪದೊಳಿ
ರ್ಪುದೆನೆಮನದಗೊಂಡುತದ್ವೀಪನಿರೀಕ್ಷಣನಿಮಿತ್ತಂಬರುತ್ತುಮೊಂದೆಡೆಯೊ
ಳ್ವಾನರಂಗಳಂಕಂಡುಮನದೆಗೊಂಡವಂತರಿಸಿಕೊಂಡುಕಿಷ್ಕಿಂಧಗಿರಿಯಮೇಲೆಪದಿ
ನಾಲ್ಕುಯೋಜನವಿಸ್ತಾರದೊಳೊಪ್ಪೊಳಲಂಮಾಡಿಕಿಷ್ಕಿಂಧಪುರಮೆಂದುಪೆಸರನಿಟ್ಟಾ
ಪುರದೊಳ್ಪಲಕಾಲಂರಾಜ್ಯಂಗೆಯ್ಯುತ್ತುಮಿರ್ದೊಂದುದಿವಸಂ ನಂದೀಶ್ವರಪೂಜೆ

ಗಚ್ಯುತೇಂದ್ರನೊಡನೆಪೋಗುತ್ತುಂಮಾನುಷೋತ್ತರದಿಂಪರಿನತ್ತಮನುಷ್ಯರ್ಗ್ಗೆಗಸಲವಿಲ್ಲಪ್ಪುದಱಿಂನಿಜವಿಮಾನಂಪೋಗದಿರೆಮಗುಳ್ದುಬಂದದುವೆನಿರ್ವ್ವೇಗಕಾರಣಮಾಗೆತಂನಮಗಂವಜ್ರಕಂಠಂಗೆರಾಜ್ಯಮಂಕೊಟ್ಟುತಪಂಬಟ್ಟು ||

ಕಂ || ನಾಕಾನೋಕಹಸುಮನಃ |
ಶ್ರೀಕಂಠಾಭರಣಮಾಗೆಗಗನಶ್ರೀಗಾ ||
ಶ್ರೀಕಂಠಯೋಗಿಮುಕ್ತಿ |
ಶ್ರೀಕಂಠಾಭರಣನಾದನನವಧಿಬೋಧಂ || 115

ವ || ತತ್ತನಯಂ ||

ಕಂ || ಪರಿಪಾಲಿಸಿದಂವಾನರ |
ಪುರಮಂಚಿರಕಾಲಮಹಿತಕಂಠಗ್ರಹಣಾ ||
ತುರಕರಕೃಪಾಣನಾಹವ |
ನಿರಂಕುಶಂವಜ್ರಕಂಠನುದ್ಧತಕಂಠಂ || 116

ವ || ಆತನೊಂದುದಿವಸಂತ್ರಿಕಾಲದರ್ಶಿಮಹಾಋಷಿಯರಂಕಂಡು ಪೂಜಿಸಿಪೊಡವಟ್ಟುಧರ್ಮ್ಮಶ್ರವಣಾನಂತರಂಮದೀಯಜನಕಂಗಚ್ಯುತೇಂದ್ರನೊಳತಿಪ್ರೀತಿಸಮನಿಸಿದಕಾರಣಮೇನೆಂಬುದುಂಮುನೀಂದ್ರರಿಂತೆಂದುಬೆಸಸಿದರ್ವ್ವೀತಶೋಕಪುರದಪರದನರ್ಹದತ್ತನೆಂಬನಾತನತನಯದರ್ಶನದತ್ತವಸುದತ್ತರೆಂಬರ್ತ್ತಂಮತಂದೆತಪಸ್ಥನಪ್ಪುದುಂಸ್ತ್ರೀನಿಮಿತ್ತದಿಂತಂಮೊಳಗೆಮುಳಿದುಗುರೂಪದೇಶದಿಂಮುಳಿಸನುಳಿದುತಪಂಗೆಯ್ದುಚ್ಯುತೇಂದ್ರನಾದನನುಜನುಮಮರಗತಿವಡೆದುನಾಕಚ್ಯುತಂಶ್ರೀಕಂಠನಾಗಿತದಚ್ಯುತೇಂದ್ರದರ್ಶನಜನಿತಜಾತಿಸ್ಮರನಾಗಿ ವಂದನಾಭಕ್ತಿಯಿನೊಡನೆಪೋಗುತ್ತುಂಮನುಷ್ಯಕ್ಷೇತ್ರದಿಂದತ್ತಲ್ತನೆಗೆಸಲವಿಲ್ಲದೊಡದುವೆತನಗೆವೈರಾಗ್ಯಕಾರಣವಾಗೆನಿನಗರಸುತನವನಿತ್ತುತಪಂಬಟ್ಟನೆಂಬುದುಮದಂಕೇಳ್ದುತಾನುಂನಿರ್ವ್ವೇಗಪರಾಯಣನಾಗಿವಜ್ರಕಂಠಂನಿಜತನೂಜನಪ್ಪಿಂದ್ರಾಯುಧಂಗರಸುತನಮನಿತ್ತುತಪಂಗೆಯ್ದುಸುಗತಿಪ್ರಾಪ್ತನಾದಿಂಬಳಿಯಂ ||

ಕಂ || ಅಪರಿಮಿತಭುಜಬಲವೀರ್ಯ |
ಸುಪೂಜ್ಯಜಿನವೃಷಭಸಮವಸರಣಾಂಬರಮಾ ||
ಕಪಿಕುಲದೊಳ್ಕಿಷ್ಕಿಂಧಾ |
ಧಿಪರಿಂದ್ರಾಯುಧನಿನಿತ್ತಲಾದರನೇಕರ್ || 117

ವ॥ ಅಲ್ಲಿಂಬಳಿಯಮಾಕುಲದೊಳಪ್ರತಿಹತಪ್ರಭನಮರಪ್ರಭನೆಂಬನಾದನತ್ತಲಂಕೆಗಧವ
ಳಕೀರ್ತ್ತಿಯಕುಲದೊಳ್ಪಲರುಮವಿಶ್ರಾಂತವಿಕ್ರಾಂತರತಿಕ್ರಾಂತರಪ್ಪುದುಮಲ್ಲಿಂ
ಬಳಿಯಂತ್ರಿಕೂಟನೆಂಬನೊಡೆಯನಾದನಾತನಸುತೆ ಗುಣವತಿಯನಮರಪ್ರಭಂಗೆ
ಮದುವೆಮಾಡಲೆಂದುಕಿಷ್ಕಿಂಧಪುರಕ್ಕೊಯ್ಯುವುದುಮಾಕೆಯುವಿವಾಹವೇದಿಕೆಯೊ
ಳ್ಪಂಚರತ್ನಚೂರ್ಣ್ಣದಿಂಬರೆದಲತೆಗಳೊಳಗೆವಾನರಂಗಳರೂಪಂಕಂಡುಬೆರ್ಚ್ಚು
ವುದುಮಮರಪ್ರಭನಿವಂಬರೆದರಾರೆನೆಗೃಹಮಹತ್ತರನಿವಂನಿಂಮಪೂರ್ವ್ವಜನಕ
ನಪ್ಪಶ್ರೀಕಂಠಂಕೊಂಡಾಡಿದನಪ್ಪುದಱಿಂನಿಂಮಕುಲದವರುತ್ಸವಂಗಳೊಳಿಂತೆಬ
ರೆವರೆನೆಮುನಿಸಂತೋಷಿದಂತಾದೊಡಿವಂವೆಟ್ಟುವೆಡೆಯೊಳೇಕೆಬರೆಯುವಿರೆಂದು
ಪತಾಕೆಗಳೊಳಂಮಕುಟಂಗಳೊಳಂಮಣಿಕನಕವಿರಚಿತಂಗಳಂಕೀಲಿಸಿಕೊಂಡಾಡಿ
ವಾನರಧ್ವಜರುಂವಾನರಕುಲರುಮೆಂಬರೂಢಿಯಂಮಾಡಿ ॥

ಕಂ॥ ಅಮರಪ್ರಭಖಚರಂತಂ ।
ನಮಗಂಕಪಿಕೇತುಗಿತ್ತುಸಿರಿಯಂಸನ್ಯಾ ॥
ಸಮನಪ್ಪುಕೆಯ್ದುಮುಕ್ತಿ ।
ಪ್ರಮದಾಪ್ರೇಮಾವಲೋಕನಕ್ಕೊಳಗಾದಂ ॥ 118

ವ॥ ಆತೆಱದಿಂತೊಱೆದುಪಲರುಮಾಕುಲದೊಳಂಬರಚರಮುರ್ಕ್ತರಾದಿಂಬಳಿಕ್ಕೆಲಂ
ಕೆಗೆವಿದ್ಯುತ್ಕೇಶನೆಂಬನಧೀಶನಾದನಾತನಮಹಾದೇವಿಶ್ರೀಚಂದ್ರೆಗೆಸುತಂಸುಕೇಶನೆಂ
ಬನಾದ ನತ್ತಲಾವಾನರಧ್ವಜಕುಲದೊಳ್ಮಹೋದಧಿಯೆಂಬನಾದ ನಾತಂಗಂವಿದ್ಯು
ತ್ಕೇಶಂಗಮತಿಪ್ರೀತಿಸಮನಿಸಿದುದಾವಿದ್ಯುತ್ಕೇಶನೊರ್ಮ್ಮೆವನಕೇಳಿಯೊಳ್ಪುರ್
ದುಮೊಂದುವಾನರಂಶ್ರೀಚಂದ್ರೆಗೆಭಂಗಮಂಮಾಡಿವಿದ್ಯುತ್ಕೇಶನಿಂದಿಸುವೆತ್ತುಚಾರ
ಣಮುಷಿಮರಚರಣೋಪಶಾಂತಮಂಸಾರ್ದ್ದುಮಾರಾಧನಾವಿಧಿಯಿಂದೇಹಮಂಬಿಟ್ಟು
ದೇವಗತಿವಡೆದವಧಿಯಂಪ್ರಯೋಗಿಸಿಬಂದುಶರೀರಪೂಜೆಗೆಯ್ವಸಮಯದೊಳ್ವಿ
ದ್ಯುತ್ಕೇಶನುಳಿದಕಪಿಕುಲಕ್ಕ ಪೊಯುಮನೊಡಚ್ಚೆಕಂಡುಕಡುಮುಳಿದುಪರ್ವ್ವ
ತಾಕಾರವಾನರಂಗಳನಗುರ್ವ್ವಪರ್ವ್ವವಿಗುರ್ವ್ವಿಸುವುದುಂ ॥

ಮ॥ ಮರನಂಕಿತ್ತುನಗಂಗಳಂನೆಗಪಿರೌದ್ರಾಕಾರದಿಂಬರ್ಪ್ಪವಾ ।
ನರರಂಕಂಡುವಿಮುಕ್ತಕೇಶಭರವಿದ್ಯುತ್ಕೇಶವಿದ್ಯಾಧರಂ ॥
ತ್ವರಿತಪ್ರಸ್ಖಲಿತಪ್ರಯಾಣರಭಸಂಶುದ್ಧಾಂತಕಾಂತಾಜನಂ ।
ಪರಸುತ್ತಂಪಿತನೋಡಿದಿವ್ಯಮುನಿಪಾದಾಂಭೋಜಮಂಪೊರ್ದ್ದಿದಂ ॥ 119

ವ॥ ಅಂನೆಗಂಪೆಂಬಳಿಯನುಳಿಯದೆಮುಟ್ಟೆವಂದೀಮುಟ್ಟುಗೆಟ್ಟದುರಾತ್ಮನಂವಿದಾರಿಸು
ವೆನೆಂದಾವನಚರಾಮರಂಗೆಮುಳಿಸನುಳಿವಂತುಧರ್ಮ್ಮೋಪದೇಶಂಗೆಯ್ದುವಿದ್ಯುತ್ಕೇ
ಶನಂನೋಡಿನೀಮಿರ್ವ್ವರನೇಕಭವದೊಳೋರೋರ್ವ್ವರಂವಧಿಸುತ್ತುಂಬಂದೆಂತಾ

ನುಂಮನುಷ್ಯಾಯುಷ್ಯಬಂಧಮಂಪಡೆದುಶ್ರಾವಸ್ತಿಪುರದೊಳ್ನೀಂಯಶೋದತ್ತನಾಗಿಪುಟ್ಟಿಕರ್ಮ್ಮೋಪದೇಶದಿಂಜಿನದೀಕ್ಷೆಯಂಕೈಕೊಂಡುಗ್ರೋಗ್ರತಪಂಗೆಯ್ಯುತ್ತುಮವಂತಿವಿಷಯದೊಳ್ಧರಣೀಭೂಷಣಮೆಂಬಪರ್ವ್ವತದಮೇಲೆಪ್ರತಿಮಾಯೋಗದೊಳಿರ್ಪ್ಪುದುಮಂದುಬೇಡನಾಗಿಪುಟ್ಟಿದೀದೇವನುಂಮೃಗಯಾನಿಮಿತ್ತಂತೊಳಲುತ್ತುಂಬಂದನಿಮಿತ್ತಂನಿಂನಂಬಯ್ದುನುಡಿವುದುಂನೀನುಂಮಾನಕಷಾಯದಿಂಕಳೆದುಜ್ಯೋತಿರಮರಗತಿಪಡೆದಲ್ಲಿಂಬಂದುವಿದ್ಯುತ್ಕೇಶನಾದೆಯಾಬೇಡನುಂಕಳೆದುಕೋಡಗನಾಗಿಮುನಿಪ್ರಸಾದದಿಂಮಹೋದಧಿವೆಸರದೇವನಾದನೆಂಬುದುಂ ॥

ಕಂ ॥ ದೇಶಿಕರಿಂಪೂರ್ವ್ವಭವ ।
ಕ್ಲೇಶಂಗಳನಱಿದುಕೊಟ್ಟುತೊಱೆದಂವಿದ್ಯು ॥
ತ್ಕೇಶಂನಿಜತನಯಂಗೆಸು ।
ಕೇಶಂಗರಸಂದಿವಕ್ಕೆಸಂದಂಕಡೆಯೊಳ್ ॥ 120

ವ ॥ ಮತ್ತಿತ್ತಮಾನವದ್ವೀಪಾಧಿಪತಿಚಿರಕಾಲಮರಸುಗೆಯ್ದು ॥

ನವನಳಿನ ॥ ಅವಚರದಿಂದ್ರಿಯಸೌಖ್ಯಮಿಾಯೆವಿರಕ್ತಿಯಿಂ ।
ದವನಿಯನಿತ್ತುನಿಜಾತ್ಮಜಂಪ್ರತಿಬಿಂದುಗ ॥
ವ್ಯವಹಿತಸೌಖ್ಯಮನೀವುದುಂಜವನಂಪರಾ ।
ಭವಿಸಿಭವೋದಧಿಯಂಮಹೋದಧಿದಾಂಟಿದಂ ॥ 121

ವ ॥ ತದಪತ್ಯಂತಂನಮಕ್ಕಳಪ್ಪಕಿಷ್ಕಿಂಧಂಗಮಂಧ್ರಕಂಗಂಚಿರಪರಿಚಯದಿಂಸಿರಿಯನವಜ್ಞೆಗೆಯ್ದುಕೊಟ್ಟು ॥

ಕಂ ॥ ಪ್ರತಿಬಿಂದುಜರಾಬಿಂದುಗ ।
ಳತರ್ಕ್ಯಬಲಕಾಲಪುರುಷನೊಳ್ಸಮನಿಸೆಸಂ ॥
ಸೃತಿಯಂನಿರ್ಮ್ಮೂಲಿಸಿನಿ ।
ರ್ವೃತಿಲಕ್ಷ್ಮೀವಶ್ಯತಿಲಕಬಿಂದುವನಾಂತಂ ॥ 122

ವ ॥ ಮತ್ತಿತ್ತವಿಜಯಾರ್ದ್ಧನಗೋಪತ್ಯಕದಾದಿತ್ಯನಗರಮನಾಳ್ವ ॥

ಕಂ ॥ ಮಂದರಮಾಲಿವಿಯಚ್ಚರ ।
ನಂದನೆಕಡುನೀಱೆವಿಾಱೆಶಕ್ರನಶಚಿಯಂ ॥
ಕಂದರ್ಪ್ಪನರತಿಯಂತಂ ।
ನಂದಂಶ್ರೀಮಾಲೆಮಿಾಱಿದಳ್ಶೈಶವಮಂ ॥ 123

ವ॥ ಆಖಚರಕನ್ಯಾಸ್ವಯಂವರಕ್ಕೆ ದಕ್ಷಿಣೋತ್ತರಶ್ರೇಣಿಯ ಖಚರಕುಮಾರರುಂವಿದ್ಯಾ
ಧರಚಕ್ರವರ್ತಿಯಪ್ಪಶನಿವೇಗತನೂಭವಂವಿಜಯಸಿಂಹನುಂಕಪಿಕೇತುಗಳಪ್ಪಕಿ
ಷ್ಕಿಂಧಾಂಧ್ರಕರುಂಲಂಕಾಧಿಪನಪ್ಪಸುಕೇಶನುಂಮೊದಲಾಗೆಪಲಂಬರಂಬರಚರಾಧಿ
ರಾಜವರ್ಗ್ಗಂದುಪಂಚರತ್ನಖಚಿತಕಾಂಚನಮಂಚಪಳಿಗೆಯೊಳ್ಮಹಾವಿಭೂತಿಯಿಂದಮಿರೆ॥

ಕಂ॥ ಶ್ರೀಮಾಲೆಮಾಲೆಸೂಡಿದ ।
ಳಾಮನ್ಮಥರೂಪನಪ್ಪಕಿಷ್ಕಿಂಧಮಿಯು ॥
ದ್ದಾಮಿಗೆಡಜುರಿದನದಕ್ಕೆ ।
ದ್ದಾಮಭುಜಂವಿಜಯಸಿಂಹನಾಹವಸಿಂಹಂ ॥ 124

ನೆರೆದವಿಯಚ್ಚರರಿರ್ದ್ದಂ ।
ತಿರೆತಾನೆಕಡಂಗಿಪೊಂಗಿಮುಂದಜುರಿಯದೆಕಾ ॥
ತರನಿಳ್ದುಕೊಳ್ವೆನೆಂದಾ ।
ಹರಿಣಾಕ್ಷಿಯನಿರದೆಕಾಳಗಕ್ಕೊಡಱಿಸಿದಂ ॥ 125

ವ॥ ಆಗಳಂಧ್ರಕಸುಕೇಶರ್ಕ್ಕಿಗೆನಾಶನಂತೆದೆಸೆಗೆಮಸಗಿಕಿಷ್ಕಿಂಧನುಮಂಶ್ರೀಮಾಲೆಯು
ಮಂಕಿಷ್ಕಿಂಧಪುರಕ್ಕೆಕಳಿಪಿಕಡುಕೆಯ್ದುಕಾದುವಾಗಳ್ ॥

ಕಂ॥ ಅಂಧ್ರಕನಾಕಾಶಂನೀ ।
ರಂಧ್ರಮೆನಲ್ಪುರಿದುಸರಳಸರಿಯಂಜವನೀ ॥
ತಂಧ್ರವಮೆಂಬಿನಮಮರಪು ।
ರಂಧ್ರಿಯರಂವಿಜಯಿವಿಜಯಸಿಂಹಂಗಿತ್ತಂ ॥ 126

ವ॥ ಅಂತುಕಾಳಗಮಂಗೆಲ್ದುಸುಕೇಶನುಂತಾನುಂಕಿಷ್ಕಿಂಧಪುರಮಂಪೊಕ್ಕುಸಮರಸಂ
ನದ್ಧರಾಗಿರ್ಪ್ಪುದುಮಿತ್ತಲಶನಿವೇಗಂಸುತನಸಾವಂಕೇಳ್ದುಕೋಕವೇಗದಿಂಕ್ರೋಧ
ವೇಗವತ್ಯಧಿಕಮಾಗೆಗಗನವೀಥಿಯೊಳ್ಬಂದುಕಿಷ್ಕಿಂಧಪುರಮಂಮೂವಳಸಾಗಿಮು
ತ್ತಿಪೊಜಮಟ್ಟುಕಾದಿಯುಮಮುಖಮನಂಧ್ರಕಂಪುಗುವುದುಂಕಿಷ್ಕಿಂಧಸುಕೇಶರತಿ
ಚಕಿತಚಿತ್ತರಾಗಿಪೋಗಿಪಾತಾಳಲಂಕೆಯಂಪೊಕ್ಕಿರ್ಪ್ಪುದುಮಶನಿವೇಗಂಸುಕೇಶನ
ರಾಜಧಾನಿಯಪ್ಪಲಂಕೆಯಂನಿರ್ಘಾತಂಗೆಕೊಟ್ಟುನಿಜರಾಜಧಾನಿಗೆಪೋಗಿಕತಿಪಯ
ದಿನದೊಳೊರ್ಮ್ಮೆಹರ್ಮ್ಯಾಗ್ರಮಣಿಭೂಮಿಯೊಳಿರ್ದ್ದುನೆಗೆದಮುಗಿಲಂನೋಡು
ತ್ತುಮಿರ್ಪ್ಪುದಂ ॥

ಪೃಥ್ವಿ॥ ಘನಂಕರಗೆಕಂಡುಕಂಡಶನಿವೇಗವಿದ್ಯಾಧರಂ ।
ಘನೋಪಲದಮಾಳ್ಕೆಯಿಂಕರಗೆತೃಷ್ಣೆಸಾಮ್ರಾಜ್ಯದೊಳ್ ॥
ಮನಸ್ಸಿನಿಲವೇಳ್ದುತನ್ನಸುತನಂಸಹಸ್ರಾರನಂ ।
ಜಿನೇಂದ್ರಮುನಿರೂಪಮಂತಳೆದನಸ್ತಸಂತಾಪಮಂ ॥ 127

ವ ॥ ಅಂತಾತಂಜಾತರೂಪಧರನಪ್ಪುದುಮಿತ್ತ ಕಿಷ್ಕಿಂಧನುಂಮಧುಪರ್ವ್ವತದಮೇಲೆಪುರ
ಮಂಮಾಡಿಶ್ರೀಮಾಲೆಯೊಳ್ಕ್ರೀಡಿಸುತಮಿರ್ಪ್ಪುದುಂ ॥

ಕಂ ॥ ಅಕ್ಷೋಣೀಶ್ವರವಲ್ಲಭೆ ।
ಋಕ್ಷಜಸೂರ್ಯ್ಯಜತನೂಜರಂಪಡೆದುಸರೋ ॥
ಜಾಕ್ಷಿಯನನಂತರಂಶುಭ ।
ಲಕ್ಷಣೆಯಂಸೂರ್ಯ್ಯಕಮಲೆಯಂಸತಿಪಡೆದಳ್ ॥ 128

ವ ॥ ಆಕೆಯುಂಮೇಘಪುರಮನಾಳ್ವಮೇರುಸುತನಪ್ಪಸಿಂಹವರ್ದ್ಧನಂಗೆಕೊಟ್ಟೊಡಾ
ತಂಕರ್ಣ್ಣಪರ್ವ್ವತದೊಳ್ಕರ್ಣ್ಣಕುಂಡಲಮೆಂಬಪುರಮಂಮಾಡಿಮನೋನುರಾ
ಗದಿನಿರ್ಪ್ಪುದುಮಿತ್ತಲ್ ॥

ಕಂ ॥ ಗಗನೇಚರಕುಲಕೈರವ ।
ಮೃಗಧರನೆನಿಸಿದಸುಕೇಶನಂಗನೆಗಾದ ॥
ರ್ಪ್ಪಗೆಯನಗೆಯೆತ್ತಲಿಂದ್ರಾ ।
ಣಿಗೆಮಾಲಿಸುಮಾಲಿಮಾಲ್ಯವಂತಸುತರ್ಕ್ಕಳ್ ॥ 129

ವ ॥ ಅಂತವರ್ನ್ನವಯೌವನಪ್ರಾಪ್ತರುಂಸಾಧಿತಸಕಲವಿದ್ಯರುಮವಾರ್ಯ್ಯವೀರ್ಯ್ಯ
ರುಮಪ್ಪುದರಿಂಮೆಚ್ಚಿದದೆಸೆಯೊಳ್ಮೆಚ್ಚಿದಂತೆಬಿಚ್ಚತಂಕ್ರೀಡಿಸುತ್ತುಮಿರೆಸುಕೇಶ
ನವರಂಕರೆದುದಕ್ಷಿಣಸಮುದ್ರಕ್ಕೆಪೋಗದಿರಿಮೆಂಬುದುಮವರದೇಕಾರಣಮೆನೆಸು
ಕೇಶನಿಂತೆಂದಂ, ತೋಯದವಾಹನನಿಂತೊಡಗಿನಂಮನ್ವಯಾಗತಮಪ್ಪಲಂಕಾಪು
ರಮನಶನಿವೇಗನೆಳೆದುಕೊಂಡುನಿರ್ಗ್ಘಾತಂಗೆಕೊಟ್ಟೊಡವನನೇಕವಿದ್ಯೆಗಳನಾ
ರ್ಗ್ಗಂದುಷ್ಪ್ರವೇಶಮನೆಸಾಪಂಮಾಡಿಬಲಿಷ್ಠನಾಗಿರ್ದ್ದನಾತಂನಿಂಮಂಕಂಡೊಡೆ
ಕೊಲ್ಗುಮೆಂದುಬಾರಿಸಿದೆನೆಂಬುದುಮವರದಕ್ಕೆಮನದೊಳಕನಲ್ದು ॥

ಕಂ ॥ ಇಂನೆವರಂಕುಲಪರಿಭವ ।
ಮಂನಿಂಮಡಿಪೇಳದಿರ್ದ್ದಿರಾಲಿಸಿತಡೆದಂ ॥
ದಂನತಿಪಿಂಗುಗುಮೆಂದು ।
ತ್ಪಂನಕ್ರೋಧರ್ದ್ದವಾಗ್ನಿಯಂತುರಿದೆರ್ದ್ದರ್ ॥ 130

ವ ॥ ಅಂತುಕಲುಷವಶಗತರಸಂಖ್ಯಾತಬಲಸಮೇತರಾಗಿಪಾತಾಳಲಂಕೆಯಂಪೊಱಮ
ಟ್ಟುಮರುನ್ಮಾರ್ಗ್ಗದಿಂಬಂದಶಂಕಿತರ್ಲ್ಲಂಕೆಯಂಮುತ್ತುವುದುಂ ॥

ಕಂ ॥ ಸೆರಗಂಬೆರಗಂಬಗೆಯದೆ ।
ಪುರಮಂಪೊಱಮಟ್ಟುಕಾದಿಮಾಲಿಯಬಾಹಾ ॥
ಪರಿಘನಿಶಿತಾಸ್ತ್ರಹತಿಯಿಂ ।
ಸುರಲೋಕಪ್ರಾಪ್ತನಾದನಾನಿರ್ಗ್ಘಾತಂ ॥ 131

ಕಂ ॥ ಘಾತಿಸಿರಣಮುಖದೊಳ್ನಿ ।
ರ್ಘಾತನನವರಿಳ್ದುಕೊಂಡುಲಂಕಾಪುರಮಂ ॥
ಪಾತಾಳಲಂಕೆಯಿಂಪಿತೃ ।
ಮಾತೃಗಳಂಬರಿಸಿರಾಜ್ಯಸುಖದಿಂದಿರ್ದರ್ ॥ 132

ವ ॥ ಅಂತುಪಗೆಯುನಗೆಯೆತ್ತಿಕಳೆದುಕುಲಪರಿಭವಮಂಪಿಂಗಿಸಿ ॥

ಕಂ ॥ ಉಭಯಶ್ರೇಣಿಯಖಚರ ।
ಪ್ರಭುಗಳನದಟಲೆದುಕಪ್ಪಮಂಕೊಂಡುಮಹಾ ॥
ವಿಭವಮನೊಳಕೊಂಡಪ್ಪೂ ।
ರ್ವ್ವಭಾಗಿಗಳ್ಬಾಹುವೀರ್ಯ್ಯಮನಿವಾರ್ಯ್ಯಮೆನಲ್ ॥ 133

ವ ॥ ಅಂತುಕೆಲವುಕಾಲಂಪೋಪುದುಮವರತಂದೆಸುಕೇಶನಧಿರಾಜಯುವರಾಜಪಟ್ಟಮ
ನವರ್ಗ್ಗೆಕಟ್ಟಿಕಿಷ್ಕಿಂಧಂ ಬೆರಸುತಪಸ್ಥನಪ್ಪುದುಂಮತ್ತಿತ್ತಲ್ ರಥನೂಪುರಚಕ್ರ
ವಾಳಪುರಮನಾಳ್ವಸಹಸ್ರಾರಖಚರವಲ್ಲಭಂನಿಜಮಹಾದೇವಿಗೆಳವಸಿಱೊಳಿಂದ್ರ
ನವಿಭೂತಿಯಂನೋಳ್ಪಬಯಕೆಸಮನಿಸುವುದುಂವಿದ್ಯೆಯಿಂತದ್ವಿಭೂತಿಯಂತೋ
ಱಿಬಯಕೆಯಂತೀರ್ಚ್ಚೆನವಮಾಸಮಪ್ಪುದುಂ ॥

ಕಂ ॥ ಜನಿಯಿಸೆತನಯಂಬಾಂಧವ ।
ಜನಮಿಂದ್ರವಿಭೂತಿಯಂತದಂಬಿಕೆಮುಂನಂ ॥
ಮನದೊಳ್ಬಯಸಿದುದಱಿನಿಂ ।
ದ್ರನೆಂದುಬಿತ್ತರಿಸೆನಾಮಕರಣೋತ್ಸವಮಂ ॥ 134

ವ ॥ ಆತನನುಕ್ರಮದಿಂಬಳೆದುನವಯೌನಪ್ರಾಪ್ತನಾಗಿಸಾಧಿತಸಕಲವಿದ್ಯನುಭಯ
ಶ್ರೇಣಿಯುಂಬಾಯ್ಕೇಳಿಸಿಖಚರಚಕ್ರವರ್ತ್ತಿಪದಮಂಪಡೆದುತಂನವಿಜಯಾರ್ದ್ಧನಗ
ರಮಂನಾಕಮೆಂದುಂತಂನಖಚರಕಾಂತೆಯರನೂರ್ವ್ವಸಿರಂಭೆಸುಕೇಶಿಯೆಂಬದೇ
ವಕಾಂತೆಯರೆಂದುಂತಂನವಾರಣಮನೈರಾವಣಮೆಂದುಂತನ್ನಶ್ವಮನುಚ್ಚೈಶ್ರವ
ಮೆಂದುಂತಂನನುಚರವಿಯಚ್ಚರನಂ ಹರಿಣಕೇಶಿವೆಸರಪಡೆವಳನೆಂದುಂತಂನಗಾಯ
ಕರಂತುಂಬುರುನಾರದರೆಂದುಂತಂನಮುಖ್ಯಪುರುಷರಂಲೋಕಪಾಲಕರೆಂದುಂತಂ
ನಸಭೆಯಂಸುಧರ್ಮೆಯೆಂದುಂತಂನಸೇನೆಯಂದೇವಸೇನೆಯೆಂದುಂತಂನಸಾಮಾ
ನ್ಯಾಯುಧಮಂಕುಲಿಶಾಯುಧಮೆಂದುಂತಂನವಿಮಾನಮಂಭೂತವಿಮಾನಮೆಂದುಂ
ತಂನಪುರೋಹಿತರನಷ್ಟವಸುಗಳೆಂದುಂತಂನಕಿಂನರಪುರದವರ್ಗ್ಗಳಂಕಿಂನರರೆಂದುಂ
ತಂನಗಂಧರ್ವ್ವನಗರದವರ್ಗ್ಗಳಂಗಂಧರ್ವ್ವರೆಂದುಂತಂನಯಕ್ಷಪುರದವರ್ಗ್ಗಳಂ

ಯಕ್ಷರೆಂದುಂತಂನಮಂತ್ರಿಮುಖ್ಯನಂ ಬೃಹಸ್ಪತಿಯೆಂದುಂತಾನಿಂದ್ರನಲ್ಲದೆಯುಂ
ತಂನನಿಂದ್ರನಾಗಿಬಗೆದುನಾಲ್ವತ್ತೆಣ್ಟಾಸಿರವಂತಃಪುರಕ್ಕಧಿಪನಾಗಿಪುರಾಕೃತಪುಣ್ಯ
ದಿಂಸುಖಮನನುಭವಿಸುತ್ತಿರೆ ॥

ಉ ॥ ಮಾಲಿಗೆಕಪ್ಪಮೀವಖಚರರ್ಪ್ಪಿಡಿದಿಂದ್ರನನಾತನಾಜ್ಞೆಯುಂ ।
ಪಾಲಿಸಲೊಲ್ಲದೇೞಿಸುವುದುಂಚರರಿಂದಱಿದುಗ್ರಕೋಪಮು ॥
ನ್ಮೀಲಿಸೆಪೋರೆದಪ್ಪಿದಬಲಂಬೆರಸಿಂದ್ರನನಾಗಳಂತೆನಿ ।
ರ್ಮ್ಮೂಲಿಸಲೆಂದುಕೀೞಿನಡೆದೆಯ್ದಿದನಾವಿಜಯಾರ್ಧಶೈಲಮಂ ॥ 135

ವ ॥ ಅಂತುತಂನೊಡವುಟ್ಟಿದಸುಮಾಲಿಮಾಲ್ಯವಂತರುಂಕಿಷ್ಕಿಂಧನಮಕ್ಕಳಪ್ಪಋಕ್ಷ
ಜಸೂರ್ಯ್ಯಜರುಂಪೆಱರಱಿಕೆಯನಾಯಕರುಂಬೆರಸಸಂಖ್ಯಾತಸೇನಾಸಮನ್ವಿತ
ನೆತ್ತಿಬರ್ಪ್ಪುದನಿಂದ್ರಂಕೇಳ್ದುರಥನೂಪುರಚಕ್ರವಾಳಪುರದಿಂದಿದಿರೆತ್ತಿಬಂದೈರಾವ
ಣವಾರಣಾರೂಢಂಲೋಕಪಾಲಪುರಸ್ಸರಂಮಹಾಯುದ್ಧಂಗೆಯ್ವುದುಂ ॥

ಕಂ ॥ ಮಾಲಿಮುಳಿಸಿಂದಮಿಂದ್ರನ ।
ಮೇಲೆನಿಶಾತಾಸ್ತ್ರವರ್ಷಮಂಕಱೆವುದುಮಾ ॥
ಮಾಲಿಯನಿಂದ್ರಂದಿವ್ಯಶ ।
ರಾಳಿಯಿನೆಚ್ಚಂತಕಂಗೆಬೋಣಸುಗೆಯ್ದಂ ॥ 136

ವ ॥ ಅದಂಕಂಡುಸುಮಾಲಿಮಾಲ್ಯವಂತರುಂಋಕ್ಷಜಸೂರ್ಯ್ಯಜರುಂಪೆಱರುಮಱಿಕೆ
ಯನಾಯಕರುಂಬಿಱುತೋಡಿಪೋಗಿ ಪಾತಾಳಲಂಕೆಯಂಪೊಕ್ಕರಾಗಳಪಹಾರತೂ
ರ್ಯ್ಯಮಂಪೊಯ್ಸಿ ॥

ಕಂ ॥ ಪ್ರಥಿತಪೃಥುಭುಜಸಹಾಯಂ ।
ಮಥಿಯಿಸಿರಿಪುಬಲಮನಾಜಿಯೊಳ್ಪೂರ್ಣ್ಣಮನೋ ॥
ರಥನಿದಿರ್ಗೋಳಿಪಾರಜನಂ ।
ರಥನೂಪುರಚಕ್ರವಾಳಪುರಮಂಪೊಕ್ಕಂ ॥ 137

ವ ॥ ಅಂತುಗೆಲ್ಲಂಗೊಂಡುಯಕ್ಷಪುರಮನಾಳ್ವವಿಶ್ರಾವಸುಗಂರೋಹಿಣಿಗಂಪುಟ್ಟಿದವೈ
ಶ್ರವಣಂಗೆಲೋಕಪಾಲವೆಸರಪಟ್ಟಮಂಕಟ್ಟಿಲಂಕೆಯಂಕೊಟ್ಟುಯಮನೆಂಬವಿ
ದ್ಯಾಧರಂಗೆಲೋಕಪಾಲವೆಸರನಿತ್ತುಕಿಷ್ಕಿಂಧಪುರಮಂಕೊಟ್ಟುಮತ್ತಂತಂನನಿಂ
ದ್ರನಾಗಿಭಾವಿಸಿಸುಖಮಿರ್ಪ್ಪುದುಮಿತ್ತಲ್ ॥

ಕಂ ॥ ಪಾತಾಳಲಂಕೆಯೊಳ್ಸಂ ।
ಪ್ರೀತಿಪೊದಳ್ದಿರೆಸುಮಾಲಿಖೇಚರಪತಿಗಂ ॥
ಪ್ರೀತಿಮತಿಗಂಜಗದ್ವಿ ।
ಖ್ಯಾತಂರತ್ನಶ್ರವಂತನೂಭವನಾದಂ ॥ 138

ವ || ಆತನತಿಪ್ರಗಲ್ಭನಾಗಿಪುಷ್ಪೋತ್ತರವೆಂಬಮಹಾಗಹನದೊಳ್ವಿದ್ಯೆಗಳಂಸಾಧಿಸಿಸಿದ್ಧ
ಪರಮೇಷ್ಠಿಗಳಂಸ್ತುತಿಯಿಸುತ್ತಿರ್ಪ್ಪಸಮಯದೊಳ್ಕೌತುಕಮಂಗಳಪುರಮನಾ
ಳ್ವವ್ಯೋಮಭಾನುವೆಂಬವ್ಯೋಮಚರಂನಿಜತನೂಜೆಯಪ್ಪಕೈಕೆಸಿಯೆಂಬ ಕನ್ಯಾ
ರತ್ನಮಂದಿವ್ಯಮುನಿಮುಖ್ಯರಾದೇಶದಿಂತನಗೆತಂದುಕುಡುವುದುಮಲ್ಲಿಯೆ ವಿದ್ಯೆ
ಯಿಂಪುಷ್ಪೋತ್ತರವೆಂಬಪೊೞಲಂಮಾಡಿಪಿತೃಗಳಂಬರಿಸಿಶುಭದಿನಮುಹೂರ್ತ್ತ
ದೊಳಾಕೆಯಂಮದುವೆನಿಂದು ನಿರಂತರೋತ್ಸವದಿನಿರ್ಪ್ಪುದುಮೊಂದುದಿವಸಮಾ
ಕೈಕೆಸಿಚತುರ್ತ್ಥಸ್ನಾನಾನಂತರಂನಿಜಮನೋವಲ್ಲಭನಸೂೞ್ಗೆವಂದು ||

ಕಂ || ಹರಿಯಂಹಿಮಕರನಂಬರ |
ಕರನಂಬೆಳಗಪ್ಪಜಾವದೊಳ್ಕನಸಿನೊಳಾ ||
ಹರಿಣಾಕ್ಷಿಕಂಡುಗೃಹವನ |
ಮರಾಳಸಾರಸರವಂಗಳಿಂದೆೞ್ಚತ್ತಳ್ || *139

ವ || ಅಂತುಪ್ಪವಡಿಸಿತಂನಕಂಡಕನಸುಗಳನನುಕ್ರಮಂದಪ್ಪದೆಱಿಪುವುದುಂ ||

ಮ || ಭರತಾರ್ದ್ಧಕ್ಕಧಿರಾಜನಪ್ಪಸುತನಂಪೆತ್ತಪ್ಪೆತನ್ವಂಗಿಕೇ |
ಸರಿಯಂಕಂಡುದಱಿಂಕಲಾಕುಶಲರಂತತ್ವಜ್ಞರಂಪೆತ್ತಪೈ ||
ಹರಿಣೀಲೋಚನೆನಿಶ್ಚಯಂಕನಸಿನೊಳ್ಶೀತಾಂಶುವಂಬಾಲಭಾ |
ಸ್ಕರನಂಕಂಡುದಱಿಂದವೊಂದಱಿಯೆಪೇಳ್ದಂತತ್ಫಲಪ್ರಾಪ್ತಿಯುಂ || 140

ವ || ಅಂತುರತ್ನಶ್ರವಂಶುಭಸ್ವಪ್ನಫಲನಿರೂಪಣಂಮಾಳ್ಪುದುಮಾನಿತಂಬಿನಿನಿರವಧಿಪ್ರ
ಮೋದಮಂತಳೆದುಯಥಾಕ್ರಮದಿನನುದಿನಂಗರ್ಭ್ಭಂಬಳೆಯೆವೆಳೆಯೆ ||

ಕಂ || ಅಲಸುವುದಿಲ್ಲಾಗುೞಿಕೆಯ |
ಪೊಲಸಿಲ್ಲಬೞಲ್ವುದಿಲ್ಲಕೃಶತೆಯುದೀಸಿ ||
ಲ್ಲಲಘುಪರಾಕ್ರಮಿಬಸುಱೊ |
ಳ್ನೆಲಸಿದಮೆಯ್ಗಲಿತನೂಜನೆಂದಱಿಪುವವೋಲ್ || 141

ಹೂಂಕಾರಪೂರ್ವ್ವಕಂಕಂ |
ಣಂಕೆಚ್ಚನೆಗೆಯ್ದುದೆಸೆಗಳಂನೋಳ್ಪಳ್ಮ ||
ತ್ತಂಕೂರಸಿಯೊಳ್ನಿಜಮುಖ |
ಪಂಕಜಮಂಸುತನದರ್ಪ್ಪಮಂಸೂಚಿಪವೋಲ್ || 142

ಕಂ ॥ ಭರತತ್ರಿಖಂಡಮಂಡಲ ।
ಪರಿರಕ್ಷಣದಕ್ಷನೀತನೂಭವನೆಂಬೀ ॥
ಪರಮೋತ್ಸವಮಂಪೇೞ್ವಂ ।
ತಿರೆಪುರದೊಳ್ಕುಸುಮವೃಷ್ಟಿಕಱೆದುದನಿಚ್ಛಂ ॥ 143

ಚ ॥ ರಣರಸಿಕಂಜಗದ್ವಿಜಯಿಖೇಚರಕಾಂತೆಯಗರ್ಭದರ್ಭಕಂ ।
ರಣದೊಳನೇಕವೈರಿನೃಪರಂತವೆಕೊಂದುತದೀಯಮಾಂಸದಿಂ ॥
ತಣಿಪುಗುಮೆಂಮನೆಂದುಪರಮೋತ್ಸವದಿಂಪಱೆಗುಟ್ಟಿಬಿಚ್ಚತಂ ।
ಕುಣಿವುದುಭೂತಕೋಟಿಗಗನೇಚರವಲ್ಲಭರಾಜಧಾನಿಯೊಳ್ ॥ 144

ವ ॥ ಇಂತವರತೋರ್ಕ್ಕೆಯಿಂಗರ್ಬ್ಬಾರ್ಭಕನಳುರ್ಕ್ಕೆಯುಮದಱುಮಖಿಲಜನಪ್ರೀತಮಾಗೆನವಮಾಸಂನೆಱೆಯೆಕೂಸಂಪೆತ್ತುದಶಮದಿನದೊಳ್ಭೀಮರಾಕ್ಷಸಂಕೊಟ್ಟನವಮುಖರತ್ನಭೂಷಣದಮಾಣಿಕಂಗಳೊಳಾತನಮುಖಂಪ್ರತಿಬಿಂಬಿಸೆದಶಮುಖನೆಂದುಪೆಸರನಿಟ್ಟುಮತ್ತಂಭಾನುಕರ್ಣ್ಣನುಂಚಂದ್ರನಖಿಯುಂವಿಭೀಷಣನುಮೆಂಬಮಕ್ಕಳನನುಕ್ರಮದಿಂಪೆತ್ತೊಡವರ್ಬ್ಬಳೆದುಶೈಶವಮನತಿಕ್ರಮಿಸಿಪ್ರಭುಮಂತ್ರೋತ್ಸಾಹಶಕ್ತಿತ್ರಯಮೆಮೂರ್ತ್ತಿಗೊಂಡಂತೆಮೂವರುಮಖಿಳಶಾಸ್ತ್ರಪಾರಾವಾರಪಾರಂಗಮರೊಂದುದಿವಸಮಾಸ್ಥಾಯಿಕಾಮಧ್ಯನಾಯಕರತ್ನಂಗಳಂತಿರ್ದ್ದಸಮಯದೊಳ್ ॥

ಮ ॥ ಶ್ರವಣಾನಂದಮನುಂಟುಮಾಡೆಮಣಿಘಂಟಾನಿಸ್ವನಂಕೇತುಪ ।
ಲ್ಲವಹಸ್ತಾಭಿನಯಂಗಳಂಮಣಿವಿಮಾನಶ್ರೇಣಿಗಳ್ಱೆವೈ ॥
ಶ್ರವಣಂಕಾಮನಬಿಲ್ಗಳಂಕೆದಱೆಭೂಷಾಪಂಚರತ್ನಾಂಶುಗ ।
ಳ್ದಿವಿಜೇಂದ್ರಂಖಚರೇಂದ್ರನಲ್ಲನೆನೆಪೋಗುತ್ತಿರ್ದ್ದನಾಕಾಶದೊಳ್ ॥ 145

ವ ॥ ಅಂತಾತಂತೃಣೀಕೃತತ್ರಿಭುವನನಾಗಿಪೋಗುತಿರ್ಪ್ಪುದುಂದಶಗ್ರೀವನುದ್ವಿಗ್ನನಾಗಿಪೋಗುತ್ತಿರ್ದ್ದಪನೀತನೆತ್ತಣಾತನೆಂಬುದುಂಕೈಕೆಸಿದಶಮುಖಂಗಿಂತೆಂದಳೀತನೆಂಮಕ್ಕನಮಗಂವೈಶ್ರವಣನೆಂಬನುಭಯಶ್ರೇಣಿಗರಸನಪ್ಪಿಂದ್ರನೆಂಬವಿದ್ಯಾಧರಚಕ್ರವರ್ತ್ತಿನಿಂಮಪಿರಿಯಮುತ್ತಮನಪ್ಪಮಾಲಿಯಂಕೊಂದುನಮ್ಮನ್ವಯದಿಂಬಂದಲಂಕೆಯಂಕೊಟ್ಟೊಡೀತನದನಾಳುತ್ತಿರ್ಪ್ಪನಾಮುಮೀಗಾತಂಗೆಭೀತರಾಗಿರ್ಪ್ಪೆವೆಂದುದುಃಖಂಗೆಯ್ಯೆವಿಭೀಷಣಂಬಾರಿಸಿನಿಂಮಪಗೆಯಂಬಗೆದಂತೆತೀರ್ಚ್ಚಿದಶವದನಂನಿಮಗೆಸಂತೋಷಮಂಮಾಡಲಾರ್ಕ್ಕುಮಂನೆಗಂನಂಮಕುಲಕ್ಕೆತಕ್ಕವಿದ್ಯೆಗಳಂಸಾಧಿಸುವೆವೆಂದುತಾಯಿಗೆಬಿಂನವಿಸಿಶುಭದಿನಮುಹೂರ್ತ್ತದೊಳ್ ॥

ಕಂ॥ ಪಿತೃಮಾತೃಪಿತಾಮಹರ್ಗ್ಗ ।
ನತರಾಗಿಪಿಶಾಚಭೂತಕೋಟಿಯಿನತ್ಯ ॥
ದ್ಭುತಮನರಣ್ಯಮನಪ್ರತಿ ।
ಹತಶೌರ್ಯ್ಯರ್ಬ್ಬಂದುಪೊಕ್ಕರಚಲಿತಧೈರ್ಯ್ಯರ್ ॥ 146

ಆಸಾಹಸಿಗರ್ತ್ತತ್ವಾ ।
ಭ್ಯಾನಮನೊಡರಿಸುವಮುನಿಯವೋಲ್ಪೂರ್ಣ್ವಸ್ಯ ॥
ವ್ಯಾಸಂಗಂಗಿಡೆಪಲ್ಯಂ ।
ಕಾನನದೊಳ್ಮೂವರುಂಯಥಾಕ್ರಮಮಿರ್ದ್ದರ್ ॥ 147

ವ॥ ಅಂತುದಶಕೋಟಿಮಂತ್ರದೊಳ್ಕೂಡಿದಷೋಡಶಾಕ್ಷರಮಹಾವಿದ್ಯೆಯಂಸಾಧಿಸುತ್ತಿ
ರ್ಪ್ಪುದುಂಜಂಬೂದ್ವೀಪಾಧಿಪತಿಯಪ್ಪನಾದೃತನೆಂಬದೇವಂಭೌಮವಿಹಾರಾರ್ತ್ಥಂ
ಬಂದವರಂಕಂಡುವಿದ್ಯಾಸಾಧನೆಗೆವಿಘ್ನಹೇತುವಪ್ಪನೇಕವಿಧವಿಗುರ್ವ್ವಣೆಯಂವಿ
ಗುರ್ವ್ವಿಸೆಯುಮವರ್ಮ್ಮಂದರದಂತಚಲಿತಧೈರ್ಯ್ಯರಾಗಿರ್ದ್ದುವಿದ್ಯೆಗಳಂಸಾಧಿಸಿ
ಸಿದ್ಧವಿದ್ಯರ್ಪ್ಪಂಚಪರಮೇಷ್ಠಿಗಳಂಪೂಜಿಸಿದಿಂಬಳಿಯಂ ॥

ಕಂ॥ ಆವಿಷ್ಕೃತನಿಯಮಂತ್ರಿದಿ ।
ನಾವಧಿಯೊಳಗಣ್ಯಪುಣ್ಯನಿಲಯಂವಿದ್ವಿ ॥
ಡ್ಜೀವಾಕರ್ಷಣಪಟುವಂ ।
ರಾವಣನುಗ್ರಾಸಿರತ್ನಮಂಸಾಧಿಸಿದಂ ॥ 148

ವ॥ ಅಂತುಚಂದ್ರಹಾಸಮಂಸಾಧಿಸಿವಿದ್ಯೆಯಿಂಸ್ವಯಂಪ್ರಭವೆಂಬಪೊಳಲಂಮಾಡಿನಿಜ
ಪರಿಜನಂಬೆರಸುಬಂಧುಜನಮಂಬರಿಸಿ ॥

ಕಂ॥ ಪಲವುಂವಿದ್ಯೆಯೊಳಂಭುಜ ।
ಬಲದೊಳಮೀದೊರೆಯರಾರುಮಿಲ್ಲೆನಿಸಿಸುಹೃ ॥
ತ್ಕುಲಮಂಪಾಲಿಸುವಸುಹೃ ।
ತ್ಕುಲಮಂಸಾಧಿಸುವಮನದಳುರ್ಕ್ಕೆಯಿನಿರ್ದ್ದಂ ॥ 149

ವ॥ ಅಂತಿರ್ಪ್ಪುದುಮಿತ್ತ ಸುರಸಂಗೀತಕಪುರಪ್ರಧಾನಂಮಯಂತಂನಮಗಳಪ್ಪಮಂ
ಡೋದರಿಯಂನೈಮಿತ್ತಿಕಾದೇಶದಿಂ ವಿಮಾನಮನೇಱಿಸಿಕೊಂಡು ಚರನಿರೂಪಿತ
ಮಪ್ಪಸ್ವಯಂಪ್ರಭನಗರಕ್ಕೆವಂದುದಶವದನಂಗೆ ಮಹಾವಿಭೂತಿಯಿಂಮದುವೆ
ಯಂಮಾಳ್ಪುದುಮನಂತರಂಮಯಮಾರೀಚಾದಿಗಳಂಮಂನಿಸಿ ಕಳಿಪಿಬಳಿಯಂತಂ

ನವಿದ್ಯೆಗಳಂವಿಗುರ್ವಿಸಿನೋಡಿಪರ್ವದೊಳ್ಕ್ರೀಡಾಭೂಮಿವಿಹಾರಕ್ಕೆ ಪೋಗುತ್ತುಂ ಮೇಘಶೃಂಗವೆಂಬನಗನಿತಂಬದಂಬುರುಹಷಂಡದೊಳ್ಪದ್ಮೆಯುಂವಿದ್ಯುತ್ಪ್ರಭೆಯುಮಶೋಕಲತೆಯುಂಮೊದಲಾಗಾಱುಸಾಸಿರ್ವರ್ಕಂನೆಯರ್ನೀರಾಟಮನಾಡುವುದಂಕಂಡುಮನಂಗೊಂಡಾಕೆಗಳಂಗಾಂಧರ್ವವಿವಾಹದಿಂಸ್ವೀಕರಿಸಲ್ಬಗೆವುದುಂಕಂನೆಯರಿನಾವಾರ್ತೆಯನವರಯ್ಯನಪ್ಪಸುರಸುಂದರಂಕೇಳ್ದುಕನಕಮಾಲಂಬೆರಸುಮೇಲೆತ್ತಿಬರ್ಪುದುಂನಾಗಪಾಶದಿಂಕಟ್ಟಿಕೊಲಲೊಲ್ಲದೆಬಿಟ್ಟುಕಳೆದುದಕ್ಕೆಮೆಚ್ಚಿ ॥

ಕಂ ॥ ಅನಿಬರ್ಕ್ಕಂನೆಯರುಮನಾ ।
ಜನಪತಿಪರಿಣಯನವಿಭವದಿಂದೀಯೆದಶಾ ॥
ನನನೊಸೆದುಮದುವೆನಿಂದಾ ।
ತ್ಮನಗರಮಂಬಂದುಪೊಕ್ಕನತ್ಯುತ್ಸವದಿಂ ॥ 150

ವ ॥ ಅಂತುಸ್ವಯಂಪ್ರಭನಗರಕ್ಕೆವಂದುಕುಂಭಪುರದಮಹೋದರಂಗಂಸುರೂಪೆಗಂಪುಟ್ಟಿದವಿದ್ಯುದ್ವೇಗೆಯಂಭಾನುಕರ್ಣಂಗೆಮದುವೆಮಾಳ್ಪುದುಮಾತನಾಕೆಗತಿಸ್ನೇಹಿತನಾಗಿಕುಂಭಪುರದಮಾತುಗಳನಾಗಳುಂಮೆಚ್ಚಿಕೇಳುತ್ತುಮಿರ್ದೊಡಾತಂಗೆ ಕುಂಭಕರ್ಣಾಭಿಧಾನಮಾಯ್ತುಮತ್ತಂಜ್ಯೋತಿಪ್ರಭಪುರಮನಾಳ್ವಶುದ್ಧಕಮಳಂಗಮಾನಂದಮಾಲೆಗಂಪುಟ್ಟಿದರಾಜೀವಸರಸೆಯೆಂಬಕಂನೆಯಂವಿಭೀಷಣಂಗೆಮದುವೆಮಾಡಿಸುಖದಿನಿರೆ ॥

ಕಂ ॥ ಮಂದೋದರಿಪಡೆದಳ್ಕ್ರಮಂ ।
ನಿಂದಗಿಯಂಬಳಿಕೆಮೇಘವಾಹನನಂಶ ॥
ತ್ರುಂದಮನನಮಿತಬಳನಂ ।
ನಂದನರಂಖೇಚರಾನ್ವಯಾನಂದನರಂ ॥ 151

ಅವರಾಶಾದಂತಿಗೆನಿ ।
ಗ್ಗವಂಗಳಾದಂತೆತನಗೆನೆರವಾಗೆಮಹೋ ॥
ತ್ಸವಮನದೇಂತಳೆದನೊಖಚ ।
ರವಲ್ಲಭಂಕಳೆಯಲೆಂದುಕುಲಪರಿಭವಮಂ ॥ 152

ಉ ॥ ಲಂಕೆಯನನ್ವಯಾಗತಮನೆಂನಪಿತಾಮಹನಪ್ಪಮಾಲಿಯಂ ।
ಮುಂಕಡುಕೆಯ್ದುಕೊಂದೆಳೆದುಕೊಂಡನನಿಕ್ಕಿದೊಡೆಂನಬಾಹುವೀ ॥
ರ್ಯಂಕಡುನೊಚ್ಚಿತಕ್ಕುಮೆನುತುಂಮನದುಂಮೆಳದಿಂಕನಲ್ದುವೀ ।
ತಾಂಕುಶನೆತ್ತಿದಂಮುನಿದುಲಂಕೆಗನೂನಬಲಂದಶಾನನಂ ॥ 153

ವ ॥ ಅಂತುಮಹಾಬಲಸಹಿತನಾಗಿಲಂಕೆಗೆತ್ತುವುದುಂವೈಶ್ರವಣನದಂಕೇಳ್ದು ತಾನುಮಿದಿ
ರೆತ್ತಿ ಬಂದುಭಯಬಲಮುಂತಾಗಿಕಾದುತ್ತುಮಿರೆ ಧನದಂದಶವದನನಂಮುಟ್ಟಿವಂ
ದುನೀಂಮದೀಯಜನನಿಯನುಜೆಯತನುಜನಪ್ಪುದಱಿಂನಿಂನೊಳೆನಗೆ ಕಾಳಗಮು
ಚಿತಮಲ್ತು ತೊಲಗಿಪೋಗೆಂಬುದುಂ ದಶವದನಂನಸುನಕ್ಕು ಕಲಹಕ್ಕೆ ವಂದುನಣ್ಪು
ದೋಪೂರ್ವದವಸರಮಲ್ತು ಕಯ್ದುಗೆಯ್ಯೆಂದುಕಡುಕೆಯ್ದುನಿಲ್ವುದುಂ ॥

ಕಂ ॥ ಮುನಿಸಿಂದಿಸೆವೈಶ್ರವಣಂ ।
ದನುಜನದಂಕಡಿದುಕಳೆದುನಿಶಿತಾಸ್ತ್ರದಿನಾ ॥
ತನತಲೆಯುಮನಿರ್ಬಗೆಯ ।
ಪ್ಪಿನಮೆಚ್ಚಂಮೂರ್ಛೆವೋಗಿಬೀಳ್ತಪ್ಪಿನೆಗಂ ॥ 154

ವ ॥ ಅಂತುಮೂರ್ಛೆವೋದನಂವಿಯಚ್ಚರಾನುಚರರ್ವಿಮಾನದೊಳಿಟ್ಟುವಿಜಯಾರ್ಧ
ನಗರಕ್ಕುಯ್ವುದುಂದಶಾನನಂಪುಷ್ಪಕವಿಮಾನಮಂಕಳೆದುಕೊಂಡುಜಯಪತಾ
ಕೆಯನೆತ್ತಿಸಿನಿಜಸ್ವಯಂಪ್ರಭಪುರಕ್ಕೆ ಪೋಪುದುಮತ್ತಲ್ ॥

ಕಂ ॥ ಸೇನಾಮುಖದೊಳ್ಭಂಗಮ ।
ನಾನೆಯ್ದಿದೆನೆಂದುವಿಶ್ರುತಂವೈಶ್ರವಣಂ ॥
ಮಾನಧನಂವೈರಾಗ್ಯಾ ।
ಧೀನಮನಂಜೈನದೀಕ್ಷೆಯಂಕಯ್ಕೊಂಡಂ ॥ 155

ವ ॥ ಅಂತುನಿಶ್ಶಲ್ಯನಾಗಿವಿನಯಂಧರಚಾರಣರಸಮೀಪದೊಳ್ತಪಂಗೆಯ್ದಪವರ್ಗಶ್ರೀ
ಯನಾಲಿಂಗಿಸಿದನಿತ್ತದಕ್ಷಿಣಸಮುದ್ರದವೇಳಾವನನಿವಾಸಿಗಳಪ್ಪಿಂದ್ರನಸಾಮಂತರೆ
ಲ್ಲರುಮಂಬಾಯ್ಕೇಳಿಸಿಮತ್ತಮೊರ್ಮ್ಮೆಹಸ್ತಪ್ರಹಸ್ತಸುಮಾಲಿಮಾಲ್ಯವಂತಪ್ರ
ಮುಖಸಹಿತಂಪುಷ್ಪಕವಿಮಾನಾರೂಢಂ ಮಹಾಬಲಂಬೆರಸುಗಗನಮಾರ್ಗದಿಂನ
ಡೆದು ॥

ಕಂ ॥ ಬಡಗಣದೆಸೆಯಂಸಾಧಿಸ ।
ಲೊಡರಿಸಿಭೂಚರವಿಯಚ್ಚರೇಶ್ವರರಂತಂ ॥
ನಡಿಗೆಱಗಿಸಿದಶಕಂಠಂ ।
ಪಡೆದಂದೆಸೆವೆಣ್ಗೆ ಕೀರ್ತ್ತಿಮಣಿಕಂಠಿಕೆಯಂ ॥ 156

ವ ॥ ಅಂತುನಿಖಿಲರಾಜಕಮನದಿರ್ಪ್ಪಿಕಪ್ಪಂಗೊಂಡು ಕೈಲಾಸನಗದಸಂಮೇದಗಿರಿಯನ
ಡುವಣಸುರದಾರುವನೋಪಕಂಠದೊಳ್ಬೀಡಂಬಿಟ್ಟಿರ್ಪ್ಪುದುಂ ॥

ಕಂ ॥ ದೆಸೆಸಿವುಡುವಿೞ್ವಿನಂತಿರೆ ।
ಮಸಗಿದಮುಂನೀರವೆರ್ಚ್ಚಿದುೞ್ಳೊಳ್ಳಮಂಬೆ ॥
ರ್ಛ್ಚಿಸಿಕಾರವಮುಗಿಲವೊಳಗಂ ।
ಮಸುೞಿಸಿಪ್ರೋಣ್ಮಿತ್ತುಬೃಂಹಿತಂಕಾನನದೊಳ್ ॥ 157

ಆನಿನದಂಕಿವಿಗೆಯ್ತ್ತರೆ ।
ದಾನವಪತಿಭದ್ರಗಜದಬೃಂಹಿತವೆಂದಾ ॥
ಕಾನನಮಂಪುಗುವುದುಮದ ।
ದಾನೇಕಪದೊಂದುಪಿರಿಯಕಡುಪಂಕಂಡಂ ॥ 158

ವ ॥ ಆಕಾಡಾನೆಯಕಡುಪಿನನಡುವೆ ॥

ಚ ॥ ಬೆದಱಿಮನಂವನಸ್ಥಲದೊಳೊಂದಿಭಮಿರ್ದ್ದುದುಮೂರ್ದ್ಧಪಿಂಡಮ ।
ಲ್ಲದುಶಿಖರಸ್ಥಲಂನಿಟಿಲವಲ್ಲದುಪಾಸಱಿಕರ್ಣ್ಣತಾಳಮ ॥
ಲ್ಲದುಚಲಪಕ್ಷಸಂಹತಿಮದಪ್ಲವಮಲ್ಲದುನಿರ್ಜ್ಝರಪ್ಲವಂ ।
ಮದಗಜವಲ್ಲದಿಂದ್ರನೊಳಿದಿರ್ಚ್ಚಿದನೀಲನಗೇಂದ್ರಮೆಂಬಿನಂ ॥ 159

ವ ॥ ಅಂತಿರ್ದ್ದಸಕಲ ಶುಭಲಕ್ಷಣಾಕಾರನುಮತ್ಯಾಯತಕರನುಮಿಂದ್ರ ನೀಲಚ್ಛಾಯನುಂಮಹಾಕಾಯನುಮಪ್ಪಭದ್ರಗಜಮಂ ಕಂಡುಮನದೆಗೊಂಡೆನಗೆಪಟ್ಟವರ್ದ್ಧನಮಾಗಲಿದುವೆತಕ್ಕುದೆಂದುಮುಂನಮಿಂದ್ರಂಗಂಪಿಡಿಯಲೀಯದತಿವರ್ತ್ತಿಯಂದಾನವಚಕ್ರವರ್ತ್ತಿವಿದ್ಯೆಯಿನಶ್ರಮದೊಳ್ಪಿಡಿದಾಮಹಾಗಜಮಂತ್ರಿಜಗದ್ಭೂಷಣನಾಮಧೇಯಂಮಾಡಿಬೀಡಿಂಗೆಮಗುಳ್ಬರ್ಪ್ಪುದುಮಾಸಮಯದೊಳ್ ॥

ಕಂ ॥ ನೆತ್ತರಪನಿಗಳ್ಮಿಯ್ಯೊ ।
ಳ್ಪೆತ್ತಿರೆಭೋರೆಂದುಬಂದುಗಗನಸ್ಥಲದಿಂ ॥
ಮತ್ತೋರ್ವ್ವಂದೂತಂಚಲ ।
ಚಿತ್ತಂಸರ್ವ್ವಾಂಗವಿನಯವಿನಮಿತನಾದಂ ॥ 160

ವ ॥ ಆಗಿದೇವಶೋಭಾವಲಿಯೆಂಬೆನಾಂವಾನರಧ್ವಜನನುಚರನೆಂಸೂರ್ಯ್ಯಜನುಂಋಕ್ಷಜನುಂನಿಂನಾಜ್ಞೆಯಂನೆರಂಬಡೆದುಪಾತಾಳಲಂಕೆಯಿಂದೆತ್ತಿ ಪೋಗಿನಿಜಾನ್ವಯಾಗತಮಪ್ಪಕಿಷ್ಕಿಂಧಪುರಮಂಕೊಳಲೆಂದುಪರಿದುಮುತ್ತಿಕೊಳ್ವುದುಂಪೋಱಮಟ್ಟುಕಾದಿ ॥

ಕಂ ॥ ವಿಜಿಗೀಷುಬಲ್ಪಿನಿಂಋ ।
ಕ್ಷಜನಂಸೆಱೆವಿಡಿಯೆಕಂಡುಕಾಯ್ದುಬಿಗಿದಸೂ ॥
ರ್ಯ್ಯಜನಂಪುಣ್ಬಡಿಸಿದನೇ ।
ನಜೇಯಭುಜಬಲನೊಸೆಮರದೊಳ್ಯಮರಾಜಂ ॥ 161

ವ ॥ ಆಸಮಯದೊಳ್ಸೂರ್ಯ್ಯಜನಂನಂಮವರ್ಮ್ಮಗುಳಿಯೆಂಬನಗರಕ್ಕೆ ನೆಗೞ್ಕೆಯಿಂ
ಋಷೋದರಾನುಮಿೞಿತೆಜನಂನಿಂಮಡಿಗಳ್ಗೆಱಿಪಲ್ಬಂದೆನೆಂದುಬಿಂನವಿಸೆ ॥

ಉ ॥ ಆನುಡಿಗೇಳ್ದು ಸ್ವೈರಿಸದೆಕಾಲಿಡಲಾಗಸವೆಯ್ದೆ ದೀಪಹಾ ।
ಸೇನೆಗೆನಲ್ಲ ವಂಗಿಡಿಸಲಾಜವನಂಪರಿಯಿಟ್ಟುಮುತ್ತಿದಂ ॥
ಪೋನಿಮಿಷಕ್ಕೆ ಕಿಷ್ಕಿ ಪುರಗೋಪುರಮಂಬಡಿಸುತ್ತಿ ಮುತ್ತೆನಾ ।
ನಾನಕನಿಸ್ವನಂದಶದಿಶಾನನಮಂಮುೞಿಸಿಂದಶಾನನಂ ॥ 162

ವ ॥ ಆದಂಕಂಡುಮೂಮಸಕಂಗೊಂಡುಜವನನಾಯಕಂಸಾಟೋಪನೆಂಬನಾಟೋಪಂಗಿ
ಡದೆಪೊಱಮಟ್ಟುನೆಱೆದುನಿಲ್ವುದುಮವಂಗೆಭಂಗಮಂಖರದೂಷಣಪ್ರ್ವಡೆವುದು
ಮತಂಯುಮಂಕಂಡುಸಮರಸನ್ನದ್ಧನಾಗಿಪೊಱಮಟ್ಟುತಾಗಿದಶಮುಖನಶಿಳೀಮು
ಖಕ್ಕೆಸುಗಿದುಸಮರಮುಖಪರಾಙ್ಮುಖನಾಗಿ ॥

ಕಂ ॥ ಅತಿಜಂಘಾಲಂಭಯಕಂ ।
ಪಿತತನುನಿಜಪತಿಯನಿಂದ್ರನಂಕಂಡುಪದಾ ॥
ನತನೆಂದಂದಶಮುಖನ ।
ಪ್ರತಿಮಂಬವರದೊಳ್ದಿಜ್ವರ್ವವರಾರವನಂ ॥ 163

ಎನೆಮುೞಿದಿಂದ್ರಂದಶವದ ।
ನನಮೇಲೆಳ್ತಪ್ರ್ವಮಸಕದಿಂದೇಳ್ವುದುಮಾ ॥
ತನಮಂತ್ರಿಮುಖ್ಯರೆಂದ ।
ನ್ನಿರ್ನನಗಿದುಪದನಲ್ತುನೆಱೆದುಕಾದುವೊಡವನೊಳ್ ॥ 164

ವ ॥ ಎಂದವನ್ನರ್ಯಮಂನುಡಿಯೆಮಾಣ್ಬೊಡಂಬಟ್ಟುಯಮಂಗೆಸುರಸಂಗೀತಕಪುರ
ಮಂಕೊಟ್ಟುವಿಷಯಾಸಕ್ತಚಿತ್ತನಪ್ಪುದಱಿಂ ತಂನಂತಃಪುರಪುರಂ ಧ್ರಿಯರೊಳ್ವಿ
ನೋದದಿಂಮೆಯ್ಮಱೆದಿರ್ದ್ದನಿತ್ತದಶಮುಖಂಋಕ್ಷಜಂಗೆಕಿಷ್ಕಿ ಪುರಮಂಸೂರ್ಯ್ಯ
ಜಂಗೆಕಿಷ್ಕಿಂಧಪುರಮಂಕೊಟ್ಟುನಿಜಾನ್ವಯಾಗತಮಪ್ಪಲಂಕೆಯಂಮಾತಾಪಿತೃಪಿ
ತಾಮಹಸಹಿತಂಪುಷ್ಪಕವಿಮಾನಾರೂಢನತಿಶಯವಿಭೂತಿಯಿಂಪೊಕ್ಕುಸುಖದಿಂ
ಬಿರೆಕೆಲವುದಿವಸಕ್ಕೆ ॥

ಕಂ ॥ ನಿರುಪಮಚರಿತ್ರಸೂರ್ಯ್ಯಜ ।
ನರಸಿಯೆನಿಪ್ಪಿಂದುಮಾಲೆವೆತ್ತಳ್ಗೊಳ್ಕೋ ॥
ತ್ತರರೆನಿಪಬಾಲಿಸುಗ್ರೀ ।
ವರುಮಂಶ್ರೀಪ್ರಭೆಯುಮಂಯಥಾಕ್ರಮದಿಂದಂ ॥ 165

ಅಲಘುಭುಜರೆನಿಪಖೇಚರ ।
ಕುಲತಿಲಕರನಖಿಲಶಸ್ತ್ರವಿದ್ಯಾವಿದರಂ ॥
ಬಲಯುತನೆನಿಪ್ಪಋಕ್ಷಜ ।
ಕುಲವಧುನಳನೀಳರೆಂಬಸುತರಂಪಡೆದಳ್ ॥ 166

ವ ॥ ಅಂತುಪಲಕಾಲಂಪೋಪುದುಂಬಾಲಿಸುಗ್ರೀವರನಧಿರಾಜಯುವರಾಜಪದವಿಯೊಳ್ನಿಲಿಸಿಸೂರ್ಯ್ಯರಜಂಪಿಹಿತಾಶ್ರವಭಟ್ಟಾರಕರಸಮಕ್ಷದೊಳ್ದೀಕ್ಷೆಯಂಕಯ್ಕೊಂಡುಮೋಕ್ಷಕ್ಕೆಪೋದನಿತ್ತಲ್ ॥

ಕಂ ॥ ಪರಿಣಯನನಿಮಿತ್ತಂದಶ ।
ಶಿರನತ್ತಲ್ಪೋಗೆತೆಜಪುಪಾರ್ದ್ದಿರ್ದ್ದಿತ್ತ ॥
ಳ್ಪುರನಿರದೊಯ್ದಂಲಂಕಾ ।
ಪುರದಿಂದಂಚಂದ್ರನಖಿಯನಂಬುಜಮುಖಿಯಂ ॥ 167

ವ ॥ ಅಂತುಕಳ್ದುಯ್ದು ದಶಾನನಂಗಾನತನಲ್ಲದಚಂದ್ರೋದರನಂಯಮೋದರಮಂಪುಗಿಸಿಪಾತಾಳಲಂಕೆಯಂಸ್ವೀಕರಿಸಿಸುಖದಿನಿರೆ ದಶಾನನಂಮದುವೆನಿಂದು ಮುಗುಳ್ದುಬಂದು ॥

ಚ ॥ ಎನಗಿನಿಸಳ್ಕದೆಂನನುಜೆಯಂಪಿಡಿದುಯ್ದನವಂಗೆತಕ್ಕುದಂ ।
ಜನಿಯಿಪೆನೆಂದುಗರ್ಜಿಸೆದಶಾನನನಾತನಕಾಂತೆನಿಂನವು ॥
ಯ್ದನನನುರಕ್ತನಾಕೆಗನುರೂಪನಿದಾವುದುಪೊಲ್ಲಕೆಯ್ದನೀ ।
ಮುನಿಸವಿವೇಕವೆಂದುನುಡಿದಳ್ಮಯನಂದನೆತದ್ದಶಾಸ್ಯನಂ ॥ 168

ವ ॥ ಅಂತುಮಲ್ಲದೆಯುಂನಿನಗೆವಿಧೇಯನಲ್ಲದ ಚಂದ್ರೋದರನಂಕೊಂದುನಿಷ್ಕಂಟಕಂಮಾಡಿದನಾತನಂಮುನಿದುನೀಂಕೊಂದುನಿಂನನುಜಾತೆಗೆವೈಧವ್ಯದೀಕ್ಷೆಯಂಕುಡುವುದುಳವುದುಚದುರೆಂದುಕಲುಷಮಂಕಳೆದತ್ತಚಂದ್ರೋದರನಪತ್ನಿಯುಮಂತರ್ವ್ವತ್ನಿಯುಮಪ್ಪನುರಾಧೆಪರಿಜನಂಪೆರಸುಪೋಗಿನವಮಾಸಂತೀವೆಕೂಸಂಪೆತ್ತೀತಂಗರ್ಭದೊಳಿರೆಪಗೆವರಿಂಸೇದೆವಟ್ಟನೆಂದಾತಂಗೆವಿರಾಧಿತನೆಂದುಪೆಸರನಿಡುವುದುಂಮಾತನನುಕ್ರಮದಿಂಬಳೆದುಪಗೆಯಂಸಾಧಿಸುವುಪಾಯಮಂಬಗೆಯುತ್ತಿರ್ಪ್ಪನಿತ್ತಲ್ ॥

ಉ ॥ ಮಾನಧನಂವಿವೇಕನಿಧಿಬಾಲಿಜಿನಾಗಮಕೋವಿದಂಪೆಱಂ ।
ಗಾನತನಾಗೆದರ್ಶನವಿಶುದ್ಧಿಗೆದೂಷಣಮಕ್ಕುಮಂತಱಿಂ ॥
ಜೈನಪದಕ್ಕೆ ಜೈನಮುನಿಗಲ್ಲದೆಕೈಮುಗಿಯೆಂದಲೆಂದುಧ ।
ರ್ಮ್ಮಾನುಗತಪ್ರಮತ್ತಚರಿತಪ್ರಿಯನಾದನಿದೇನುದಾತ್ತನೋ ॥ 169

ವ ॥ ಅಂತನಂತವೀರ್ಯನುಂಚರಮದೇಹಧಾರಿಯುಂವಿಕ್ರಮಶಾಲಿಯುಮಪ್ಪಬಾಲಿನಿಯಮಸ್ಥನಾಗಿಸುಖದಿನಿರ್ಪ್ಪುದುಮೊಂದುದಿವಸವಾತನನುಜೆಯಂಶ್ರೀಪ್ರಭೆಯಂಬೇಡಿದಶಮುಖಂಮುಖ್ಯಪುರಃಸರಕಯ್ಯೊಳೋಲೆಯನಟ್ಟುವುದುಮದಂತಿಳಿದುಬಾಲಿಸುಗ್ರೀವಂಪೆರಸುಮಂತ್ರಶಾಲೆಯಂಪೊಕ್ಕು ಮಂತ್ರಿಮಂಡಲಮುಮನಾಪ್ತಪರಿಜನಮುಮಂಬರಿಸಿ ॥

ಕಂ ॥ ತಗದೆನಗುನ್ಮಾರ್ಗ್ಗಿಗೆಕೂ ।
ಸುಗುಡಲ್ದಶಕಂಧರಂಮದಾಂಧಂಧರ್ಮ್ಮ ॥
ಸುಗನಲ್ಲನನುಜೆಯಂಕುಡೆ ।
ತೆಗೞಿಹದೊಳ್ಪರದೊಳೆನಗೆಪಾತಕಮಕ್ಕುಂ ॥ 170

ಕುಡೆಕೂಸನುದ್ಧತಂಗಾಂ ।
ಪೊಡವಡುವನಿತಕ್ಕುಮಾದೊಡೆಂನಚರಿತ್ರಂ ॥
ಕಿಡುಗುಂವ್ರತಮಂಕಯ್ಕೊಂ ।
ಡೆಡೆಯೊಳ್ಬಿಟ್ಟವನೆಭಿನ್ನಭಾಜನನಲ್ತೇ ॥ 171

ಅದಱಿಂದಾತಂಗಾನೀ ।
ಯದೆಕೂಸಂಕಾಳಗಕ್ಕೆ ಮೆಯ್ದುರೆಪಲಕಾ ॥
ಲದರಾಕ್ಷಸವಾನರವಂ ।
ಶದನಣ್ಪಿಂನಿಂದಮೞಿದುದೆಂಬುದುಲೋಕಂ ॥ 172

ಅರಸುತನಂಗೆಯ್ವಾಳ್ಪಿಂ ।
ಧುರದೊಳ್ಮಾಱಾಂತರೆಲ್ಲರಂಮುಗ್ಗಿಪುದುಂ ॥
ದೊರೆಕೊಳ್ಗುಂಪಾತಕಮಾ ।
ಸಿರಿಯುಂಸ್ಥಿರಮಲ್ತುನೀರಬೊಬ್ಬುೞಿಕೆಯವೋಲ್ ॥ 173

ವ ॥ ಅದಱಿಂಪಾಪಕ್ಕಂಪೞಿಗಮೆಡೆಗುಡದೆತಪಮನಪ್ಪುಕೆಯ್ದೊಡೆಂನಕುಲಮುಂಛಲಮುಂವ್ರತಮುಂಕಿಡದೆನಗುಮೆಂದುತಱಿಸಂದುಸುಗ್ರೀವಂಗೆರಾಜ್ಯಮಂಕೊಟ್ಟುಪರಿಜನಕ್ಕೆಲ್ಲಂನಿಶ್ಶಲ್ಯನಾಗಿಸದ್ಧರ್ಮ್ಮನಗಗನಚಂದ್ರರೆಂಬಚಾರಣರಪಕ್ಕದೊಳ್ತೊಱೆದುತಪಂಬಟ್ಟುಘೋರವೀರತಪದಿಂಋದ್ಧಿಪ್ರಾಪ್ತನಾದಂ ॥

ಕಂ ॥ ಸುಗ್ರೀವನುಮಿತ್ತಲ್ಖಚ ।
ರಾಗ್ರಣಿತಂನನುಜೆಯುಂನಯೋಪಾಯಂಪಾ ॥
ಣಿಗ್ರಹಣಸಹಿತಮಿತ್ತುದ ।
ಶಗ್ರೀವಂಗಾತ್ಮಪದವಿಯೊಳ್ಸುಖಮಿರ್ದ್ದಂ ॥ 174

ವ ॥ ಅಂತುದಶವದನಂಶ್ರೀಪ್ರಭೆಯಂಮದುವೆನಿಂದುಮತ್ತಮೊರ್ಮ್ಮೆನಿತ್ಯಾಲೋಕಪುರಮನಾಳ್ವನಿತ್ಯಾಲೋಕನೆಂಬವಿದ್ಯಾಧರಂಗಂ ಶ್ರೀದೇವಿಗಂಪುಟ್ಟಿದರತ್ನಾವಳಿಯಂಮದುವೆನಿಂದುಮಗುಳ್ದುಬರ್ಪ್ಪಸಮಯದೊಳ್ಕೈಲಾಸನಗನಿತಂಬಸ್ಥಳದೊಳಿರ್ದ್ದಮಹಾಮುನಿಯಮೇಲೆವಿಮಾನಂನಡೆಯದೆನಿಲ್ವುದುಂವಿಸ್ಮಿತಮನನಿದೇನೆಂದುನಿಂದವಲೋಕಿನಿವಿದ್ಯೆಯಿಂಬಾಲಿದೇವನಪ್ಪುದನಱಿದುಂಮುನ್ನಮೆನ್ನಮೇಗಣಮುಳಿಸನೞಿಯದೆವಿಮಾನಮಂಸ್ತಂಭಿಸಿದನಾದೊಡೇನಾದುದೀನಗಂಪೆರಸುಕಿೞ್ತೊಯ್ದುಸಮುದ್ರದೊಳಿಕ್ಕುವೆನೆಂದುಪುಷ್ಪಕವಿಮಾನದಿನವನೀತಳಕ್ಕವತರಿಸಿಘನಾಘನಮುಮಂಬಹುಬಾಹುಗಳುಮಂವಿಗುರ್ವ್ವಿಸಿರಸಾತಳಕ್ಕಿೞಿದುಧನದಾಚಳದಧಸ್ಥಳಮನೆಯ್ದಿ ॥

ಉ ॥ ಸಾಸಿರವಿದ್ಯೆಗಳ್ವೆರಸುತೋಳ್ಗಳತರ್ಕ್ಕೆಗೆಗೊಂದೆಳರ್ಕ್ಕೆವೆ ।
ತ್ತಾಸುರವೈರಿಪರ್ಮ್ಮುಗಿಲನೆತ್ತುವಘೋರರಸವೀರನಂತೆಕೈ ॥
ಲಾಸಮನೆತ್ತೆಕಾವಬಗೆಯಿಂಬಹುರತ್ನಮಯಂಗಳಂಜಿನಾ ।
ವಾಸಮನಂದುಬಾಲಿಮುನಿಪುಂಗವನುಂಗುಟದಿಂದಮೊತ್ತಿದಂ ॥ 175

ವ ॥ ಅಂತುಶುಭಪರಿಣಾಮದಿಂದಶಮುಖನೊಳಪ್ಪಕಲುಷಮಿಲ್ಲದೆಕೈಲಾಸಶಿಖರಮಂಮೆಲ್ಲನೊತ್ತೆಪುಯ್ಯಲಿಡುವಸರಂಕೇಳ್ದು ॥

ಕಂ ॥ ಪರಿಜನಸಹಿತಂಮಂಡೋ ।
ದರಿಬಂದುಮುನೀಂದ್ರರಕ್ಷಿಸೆಂದೆಱಗುವುದುಂ ॥
ಚರಣಾಂಗುಷ್ಠಮನೊಯ್ಯನೆ ।
ಕರುಣಾರಸಹೃದಯನೆತ್ತಿದಂಮುನಿಮಹಿತಂ ॥ 176

ವ ॥ ಆಗಳಾಪುಯ್ಯಲ್ಬಿರವಮೇಕಾರಣಮಾಗೆದಶಮುಖಂಗಂದಿಂದಿತ್ತರಾವಣನೆಂಬಪೆಸರಾಯ್ತುನಂತರಮಾತಂರಸಾತಲದಿಂಪೊಱಮಟ್ಟುಬಾಲಿಭಟ್ಟಾರಕರಂಪೂಜಿಸಿಪೊಡಮಟ್ಟುತನ್ನಪೊಲ್ಲಮೆಯಂಕ್ಷಮೆಗೊಂಡುಕಳೆದು ॥

ಚ ॥ ಕೆಲದಜಿನೇಶ್ವರಾವಸಥಮಂಬಲಗೊಂಡೊಳಪೊಕ್ಕುದೇವನಂ ।
ವಿಲಸಿತರತ್ನರಾಶಿಗಳನರ್ಚ್ಚಿಸಿಬಾಜಿಸಿದಂಲಯತ್ರಯಂ ॥
ಸುಲಲಿತಮಾಗೆವಸ್ತುಗುಣರೂಪಜಿನಸ್ತವನಾಂಕಮಾಲೆಯಂ ।
ಪಲತೆಱದಿಂರಸಂಬಡೆಯೆರಾವಣಹಸ್ತದಿನಂದುರಾವಣಂ ॥ 177

ವ ॥ ಅಂತುನಿರ್ಭ್ಭರಭಕ್ತಿಯಿಂಬಾಜಿಪಾಗಳ್ ॥

ಉ ॥ ಆಸನಕಂಪಮಾಗೆಫಣಿಪಂಫಣಿಲೋಕದಿನಂದುಬಂದುಕೈ ।
ಲಾಸನಗಕ್ಕೆ ರಾವಣನದೇವರೊಳಾದತಿಭಕ್ತಿಹರ್ಷ್ದವಂ ॥
ದಾಸುರವುಂಟುಮಾಡೆತನಗಿತ್ತನಿಬಿಡ್ಡಲೊಡಂಸಮಸ್ತದೇ ।
ವಾಸುರಮುಖ್ಯನಾಯಕರ್ಗೆಜೇಯವಿಮುಕ್ತಿಯನೀವಶಕ್ತಿಯಂ ॥ 178

ವ ॥ ಅಂತುಫಣೀಂದ್ರನೀಯೆದಿವ್ಯಶಕ್ತಿಯಂಪಡೆದುಪೋದನಿತ್ತಲುಪಕೃತಿಯಂಗುರುಗೆ
ಳೊಡನಾಳೋಚಿಸಿ ॥

ಕಂ ॥ ಪ್ರಾಯಶ್ಚಿತ್ತಂಗೊಂಡ ।
ಶ್ರೇಯಮನಪಹರಿಸಿಬಾಲಿಮುನಿಶುಕ್ಲಧ್ಯಾ ॥
ನಾಯತ್ತನಾಗಿಮುಕ್ತಿ ।
ಶ್ರೀಯುವತಿಯನಿಬಿಡಕುಚಕಮನಾಲಿಂಗಿಸಿದಂ ॥ 179

ವ ॥ ಮತ್ತಿತ್ತ ರಾವಣಂನಂದ್ಯಕಾಸುವೇಲಾದ್ವೀಪಂಗಳನಾಳ್ವಮಹಾಬಲವಿದ್ಯಾಧರರಂ
ಬಾಯ್ಕೇಳಿಸಿಕುಂಭಕರ್ಣ್ಣವಿಭೀಷಣರುಮಿಂದಗಿಮೇಘವಾಹನರುಂಖರಮರೀಚಿ
ಸುಗ್ರೀವಾಂಗದಮರ್ಕ್ಕಟಧ್ವಜಪ್ರಮುಖನಿಖಿಲವಿದ್ಯಾಧರಪರಮೇಶ್ವರರುಂಬಳಸಿ
ಬರೆವಿವಿಧವಾಹನವಿಚಿತ್ರಾತಪತ್ರಸಾಳಿಕೇತನಂಬೆರಸುತ್ತರಾಭಿಮುಖನಿಂದ್ರನಮೋ
ಲೆನಿಕ್ಕಿಪಯಣದಿಂಬರುತ್ತುಂರೇವತೀನದೀತೀರದೊಳ್ಬೀಡುಬಿಟ್ಟಾತೊಚಿಯಸ್ಸೈಕ
ತಸ್ಥಳದೊಳ್ರತ್ನಮಂಟಪಮನೆತ್ತಿಸಿಸಿಂಹಾಸನದಮೇಲೆಮಣಿಮಯಜಿನಪ್ರತಿಮೆ
ಯಂನಿಲಿಸಿಪೂಜಿಸುವಸಮಯದೊಳ್ ॥

ಕಂ ॥ ತೀವಿಬರೆಘೋಂಕನಾನದಿ ।
ರಾವಣನತಿಸಂಭ್ರಮಾಕುಲಂನೆಗೆದುನಭ ॥
ಕ್ಕಾವುದುಕಾರಣದಿಂದೀ ।
ರೇವತಿನದಿಬಂದುದೆಂದುವಿಸ್ಮಿತನಾದಂ ॥ 180

ವ ॥ ಅಗಿಕಾಲವಿಲ್ಲದಕಾಲದೊಳೀತೊಜಿ ಬಂದಕಾರಣಮನಾರಯು ವೆಂದುದೂತನನ
ಟ್ಟುವುದುಮಾತನದೆಲ್ಲಮನಱಿದುಬಂದು ಮಾಹಿಷ್ಮತೀಪುರವರಾಧೀಶ್ವರಂಸಹಸ್ರ
ಬಾಹುವೀತೊಜಿ ಯಂಜಲಯಂತ್ರಂಗಳಿಂಕಟ್ಟಿನಿಜಾಂತಃಪುರಸಹಿತಂನೀರಾಟವಾಡಿ
ಜಂತ್ರಂಗಳಂಕಳೆಯೆಪೋನಲ್ಲ ವಿತಂದುದೆಂದುಬಿಂನವಿಸೆ ॥

ಕಂ ॥ ತ್ರಿಜಗದ್ಭೂಷಣಮಾದ್ಯ ।
ದ್ಗಜಮಂಮುಳಿದೇಜಿರಿರಾವಣಂನಡೆದಸುಹೃ ॥
ಧ್ವಜನಿಯುನೋಡಿಸಿರಿಪುಸಾ ।
ಮಜದೊಡನೆಸಹಸ್ರಭುಜನುಮಂಸಜಿಗೆಯ್ದಂ ॥ 181

ವ ॥ ಅಂತಾತನಂಸೆಱೆಗೆಯ್ದು ನಿಜವಿಜಯಶಿಬಿರಕ್ಕೆ ತರ್ಪುದುಮಲ್ಲಿಗಾತನತಂದೆಗಳಪ್ಪ
ಶತಬಾಹುಗಳೆಂಬಜಂಘಾಚಾರಣರ್ದ್ಧರ್ಮವಾತ್ಸಲ್ಯದಿಂಬರ್ಪುದುಂದಶಮುಖನಿದಿ
ರೆದ್ದುರ್ಭಕ್ತಿಭರದಿಂವಂದಿಸಿಮಣಿಮಯಾಸನದೊಳಿರಿಸಿಕೈಗಳಂಮುಗಿದುಪೆಸನಾ
ವುದೆಂಬುದುಂನೀಂಸೆಱೆಗೆಯ್ದು ಸಮ್ಯಗ್ದೃಷ್ಟಿಯಪ್ಪಸಹಸ್ರಬಾಹುವಂಬಿಡುವುದೆನೆ
ಮಹಾಪ್ರಸಾದವೆಂದಾತನಂಬರಿಸುವುದುಮಾತಂಬಂದುದಿವ್ಯಮುನಿಗೆಪೊಡವಟ್ಟು
ಕುಳ್ಳಿರ್ಪುದುಂಕರಗ್ರಹಣಪುರಸ್ಸರಂವಿನಯವಚನಂಗಳಂನುಡಿದುನಿನ್ನರಾಜ್ಯದೊ
ಳ್ನಿಲ್ವುದೆನೆನಾಂತಪೋರಾಜ್ಯಮನಲ್ಲದೆರಾಜ್ಯಮನೊಲ್ಲೆನೆಂದು ॥

ಕಂ ॥ ನಿಜಸುತನಪ್ಪಸುಬಾಹುಗೆ ।
ನಿಜರಾಜ್ಯಮನಿತ್ತುದೀಕ್ಷೆಯಂಕೆಯ್ಕೊಂಡಂ ॥
ನಿಜಜನಕರಪ್ಪಶತಬಾ ।
ಹುಜಂಘಾಚಾರಣರಕೆಯ್ಯೊಳಾಧರಣೀಶಂ ॥ 182

ವ ॥ ಅಂತುದೀಕ್ಷೆಯಂಕೆಯ್ಕೊಂಡುಸಹಸ್ರಬಾಹುಮೋಕ್ಷಕ್ಕೆ ಪೋಪುದುಮಿತ್ತಲ್ ॥

ಕಂ ॥ ಖೇಚರವಿಭುತಾಂಮುಂನಂ ।
ಭೂಚರಭೂಭುಜರನೆಯ್ದೆ ಸಾಧಿಸಿಬಳಿಯಂ ॥
ಖೇಚರರಂಸಾಧಿಪೆನೆಂ ।
ಬೀಚಿತ್ತಂಪೆತ್ತುವಿಜಯಯಾತ್ರೆಗೆತಳರ್ದಂ ॥ 183

ವ ॥ ಅಂತುನಿಖಿಲರಾಜಕಮನೊತ್ತಿಕಪ್ಪಂಗೊಳುತ್ತುಂಧರ್ಮಮಂಪ್ರತಿಪಾಲಿಸುತ್ತುಂ
ಬರುತ್ತುಮಿರೆರಾಜಪುರಮನಾಳ್ವಮರುತ್ತಂಬರಸಂಜೀವವಧೆಗೆಯ್ದುಜಂನಮನೊ
ಡರ್ಚಿಪೆಱರಾರ್ಗ್ಗಂಪೊಡವಡದೆಪಲವುಂಪ್ರಾಣಿಗಳಂಕೊಂದಪ್ಪನೆಂದುಕೇಳ್ದಲ್ಲಿಗೆ
ವಂದುಯಾಗನಿಮಿತ್ತಂಯೂಪಸ್ತಂಭಂಗಳೊಳ್ಕಟ್ಟಿರ್ದ್ದಪಸುಗಳಂಗೋಳಿಡೆಕೊಂ
ದುಪೇಳ್ವುದಂಕಂಡುಕೊಂಡಂಗಳನೊಡೆದುಸಾಲೆಗಳಂಕಿಡಿಸಿಯೂಪಸ್ತಂಭಂಗಳ
ನುಡಿದುಸಂವರ್ತಕಂಮೊದಲಾಗೆಸಕಲಋತ್ವಿಜರಂಜಡಿದುಕೊಲಲಿರ್ಪಸಮಯ
ದೊಳ್ಮರುತ್ತಂಬರಸನತಿಸಂಭ್ರಮದಿಂಪರಿತಂದುರಾವಣನಕಾಲಮೇಲೆಬಿಗಿಕ್ಷವೆ
ಗೊಂಡು ॥

ಕಂ ॥ ಕನಕಪ್ರಭೆಯಂನಿರ್ಜ್ಜಿತ ।
ಕನಕಪ್ರಭೆಯಂಮರುನ್ನರೇಂದ್ರಂನಿಜನಂ ॥
ದನೆಯಂಖೇಚರಕುಲಾನಂ ।
ದನನೆನಿಪದಶಾನನಂಗೆನಲ್ಮೆಯಿನಿತ್ತಂ ॥ 184

ವ॥ ಅಂತುಮದುವೆನಿಂದುಕನಕಪ್ರಭೆಗೆಪುಟ್ಟಿದತಂನಮಗಳಪ್ಪಸ್ವೀಕೃತಚಿತ್ತೆಯುಂಮ
ಧುರೆಯನಾಳ್ವಹರಿವಂಶನಮಗನಪ್ಪಮಧುವಿಂಗೆಕೊಟ್ಟುದಶವದನಂಮಹಾಬಲಸ
ಹಿತನಾಗಿಪದಿನೆಂಟುವರುಷಕ್ಕೆ ವಿನಿತಾಖಂಡಮಂಬಾಯ್ಕೆೞಿಸಿಕ್ರಮದಿಂಕೈಲಾಸಪ
ರ್ವ್ವತಮನೆಯ್ದಿಬಾಲಿದೇವರಸಾಮರ್ತ್ಥ್ಯಮಂನೆನೆದುಪೊಗಳುತ್ತಲಾನಗದನಿತಂ
ಬದೊಳ್ಬೀಡಂಬಿಟ್ಟಿರ್ಪ್ಪುದುಮಿತ್ತಲ್ ॥

ಕಂ॥ ಪರಿರಕ್ಷಿಸಿದೇವೇಂದ್ರನ ।
ಶರಧಿಶರಾಸನತನುತ್ರತತಿಯುಂನಳಕೂ ॥
ಬರದಿಕ್ಪತಿದುರ್ದ್ಧರಭುಜ ।
ಪರಿಘಂದುರ್ಲ್ಲಂಘ್ಯಪುರದೊಳತಿಬಲನಿರ್ದ್ದಂ ॥ 185

ವ॥ ಅಂತಾರಾವಣಂಮೇಲೆತ್ತಿಬರ್ಪ್ಪುದಂನಮ್ಮರಸಂಗಱಿಪೆಂದಟ್ಟಿದದೂತನವಚನದಿ
ನಿಂದ್ರನದನಱಿದು ॥

ಶಾ॥ ಏವಂರಾವಣನೆತ್ತಿಬಂದುಬಲಿದಿಕ್ಕಾಕಯ್ದುವಂಕಾದುವಿ ।
ದ್ಯಾವಷ್ಟಂಭದಿನೆಂದುಮಂದರಮಹೀಭೃನ್ಮೇಖಲಾನಂದನ ॥
ಕ್ಕಾವಿದ್ಯಾಧರಚಕ್ರವರ್ತ್ತಿಜಿನಪೂಜೋತ್ಸಾಹದಿಂಪೋದನು ।
ದ್ಗ್ರೀವಂದೋರ್ವ್ವಲಗರ್ವ್ವದಿಂಬಗೆದನಿಲ್ಲಿಂದ್ರಂದಶಗ್ರೀವನಂ ॥ 186

ವ॥ ಮತ್ತಿತ್ತಚರವಚನದಿನಿಂದ್ರನಬೆಸಸಿದುದಂನಳಕೂಬರಂಕೇಳ್ದೊಂದುಯೋಜನಾಂ
ತರದೊಳಿರ್ದ್ದರಂನುಂಗುವಂತಪ್ಪಬೇತಾಳಯಂತ್ರಂಗಳಿಂದೂರದೇಶದೊಳಿರ್ದ್ದರೀ
ರ್ಬ್ಬಟ್ಟಿತಿಂಬಂತೆಫೂತ್ಕಾರಮುಖರಂಗಳಪ್ಪಮಹೋರಗಂಗಳಿನತಿದೂರದೊಳಟ್ಟಿ
ಸುಡುವಕೇಸುರಿಯಪ್ರಾಕಾರಂಗಳಿಂಮತ್ತಮೆನಿತಾನುಂತೆಱದುಪದ್ರವಹೇತುಗಳಪ್ಪ
ರೌದ್ರಮೃಗಂಗಳಿಂತುಱುಗಿಶತಯೋಜನೋತ್ಸೇಧಂಬಡೆದವಜ್ರಸಾಲಮೆಂಬಕೋಂ
ಟೆಯುಂಮಿಗುವಿರ್ಪ್ಪಿಸಿಪೊಳಲ್ಗೆದುರ್ಲ್ಲಂಘ್ಯಪುರಮೆಂಬಪೆಸರನನ್ವರ್ತ್ಥಂಮಾಡಿಪೊಡ
ರ್ಪ್ಪುಗಿಡದಿರ್ಪ್ಪುದುಂ ॥

ಕಂ॥ ಅದಱತೆಱನಱಿಯದಱಿಯೆಂ ।
ದುದಾತ್ತಬಲನಂಪ್ರಹಸ್ತನಂಪೇಳ್ವುದುಮಂ ॥
ತದನಱಿದುಬಂದವಂದಶ ।
ವದನಂಗಾದ್ಯಂತಮದಱತೆಱನಂಪೇಳ್ದಂ ॥ 187

ವ॥ ಅಂತುಪೇಳ್ದನಂಮಾಪಡೆಗಲ್ಲಿಯಜಂತ್ರಂಗಳಿಂದುಪದ್ರವಮಾಗದಂತುತೊಲಗಿಬಿಟ್ಟು
ಬೞಿಕ್ಕದಂಕೊಳ್ವತೆಱನಂಬಗೆವುದೆಂಬುದುಂದಶವದನನಾನುಡಿಯನವಕರ್ಣ್ಣಿಸಿ
ಕೋಂಟೆಯುಂಕೊಳ್ವುಪಾಯಮನೆಬಗೆವುತ್ತುಮಿರ್ಪ್ಪುದುಮಿತ್ತಲ್ ॥

ಕಂ ॥ ನಳಕೂಬರನಕುಲಾಂಗನೆ ।
ವಿಳಾಸವತಿರಾವಣಂಗೆಪಲಕಾಲಮುಂ ॥
ನೆಳಸಿಪ್ಪರ್ಕಾಮಕಾತರೆ ।
ಕೆಳದಿಗೆತಿಳಿವಂತುತಂನತೆಱನಂಪೇಳ್ದಳ್ ॥ 188

ವ ॥ ಅಂತುವಿದ್ಯಾಧರಪರಮೇಶ್ವರಿಯಪ್ಪಚಿತ್ರಮಾಲೆಗೆನಿಜಾಭಿಪ್ರಾಯಮಂಕಲಿಸಿರಾವ
ಣನಲ್ಲಿಗಟ್ಟುವುದುಂ ॥

ಕಂ ॥ ನೀಲಪಟಚ್ಛದನಿಕೆಯೊಳ್ ।
ಲೋಲೇಕ್ಷಣೆಗಗನಮಾರ್ಗ್ಗದಿಂರಾವಣನಿ ॥
ದ್ಧಾರ್ಲಯಮಂವಿಜಯಶ್ರೀ ।
ಲೀಲೆಯಿನಾಚಿತ್ರಮಾಲೆಬಂದೊಳಪೊಕ್ಕಳ್ ॥ 189

ವ ॥ ಅಂತುಪೊಕ್ಕುರಾವಣನಕೆಲಕ್ಕೆವಂದು ॥

ಕಂ ॥ ಉಪರಂಭೆಯೆಂಬಳೆಂಮರ ।
ಸಿಪೋಲಿಪೊಡೆರಂಭೆಗಗ್ಗಳಂಚೆಲ್ವಿಂದಾ ॥
ರುಪಮೆಗೆಪೆಱರೆನಿಪಳ್ವೀ ।
ನಪಯೋಧರೆನಿಂನಸಾರ್ಗ್ಗೆಗಟ್ಟಿದಳೆಂನಂ ॥ 190

ಪಲವುದಿನಂನಿಂನೊಳೊತ್ತು ।
ಟ್ಟೊಲವಿಂದಾಕೆಂನೆನಿಂನನನವರತಂಪಂ ॥
ಬಲಿಸುತ್ತುಂಚಿತ್ತೋದ್ಭವ ।
ನಲರಂಬುಗಳುಚ್ಚೆರ್ನಾಡೆಪಾಡಳಿದಿರ್ದ್ದಳ್ ॥ 191

ಏವೊಗಳ್ವೆನತನುವಿದ್ಯಾ ।
ದೇವತೆನಿರತಿಶಯಮೆನಿಪರೂಪಿಂವಿದ್ಯಾ ॥
ದೇವತೆಸಾಮರ್ತ್ಥ್ಯದಿನೆನಿ ।
ಪಾವಧುಬರೆದೇವನಿನಗೆತೀರದದುಂಟೇ ॥ 192

ವ ॥ ಎನೆದಶಾನನಂಪಳಿಯುಂಪಾಪಮುಮಪ್ಪದುಶ್ಚರಿತ್ರಮನೇವೆನೆಂದುಮನದೊಳ್ನಿಶ್ಚ
ಯಿಸಿವಿಭೀಷಣನಂಬರಿಸಿರಹಸ್ಯದೊಳದನಱಿಪುವುದುಮಾತಂವಿದ್ಯಾಪ್ರಾಕಾರಮಂ
ಕಿಡಿಸುವಂತುಟುಪ್ರತಿವಿದ್ಯೆಯನಾಕೆಯುಂಬರಸಿಪುಸಿದುನಂಬಿಸಿಕಲ್ತುಕೊಳ್ವುದೆನೆ
ರಾವಣನುಮಾಧೂದವಿಗೆನಿಂನ ನುಡಿಗೊಡಂಬಟ್ಟೆನಾಕೆಯಂತಾಯೆಂದುವಕ್ರೋ

ಕ್ತಿಯಿಂನುಡಿವುದುಮಾಕ್ಷಣದೊಳ್ಪೋಗಿಬೇಗಂತರ್ಪ್ಪುದುಮವಳ್ಗೆ ಪುಸಿನೆಱ್ಪುದೋ
ಱಿನಿನಗಮೆನಗಂದುರ್ಲ್ಲಂಘ್ಯ ಪುರದೊಳ್ಕೂಟಮಪ್ಪಂತುಮಾಡೆನೆಮನದೆಗೊಂಡಂ
ತೆಗೆಯ್ವೆನೆಂದುಸಾಲವಿದ್ಯಾಭೇದಿನಿಯಂ ॥

ಕಂ ॥ ಪ್ರತಿವಿದ್ಯೆಯುನಾಕೆಕುಲ ।
ಕ್ಷತಿಯಂಪತಿಗಪ್ಪಹಾನಿಯುಂಬಗೆಯದೆದು ॥
ವ್ರ್ಮ್ಮತಿಕೊಟ್ಟಳದೆಂನರುಮಂ ।
ಮತಿಗಿಡುಪ್ಪುದುಚೋದ್ಯಮಲ್ತುಮದನೋನ್ಮಾದಂ ॥ 193

ವ ॥ ಅಂತಾಕೆಯಕಯ್ಯೊಳಾವಿದ್ಯೆಯಂಕೊಂಡುಕಳಿಪಿಮಱುದೆವಸಂಸಾಲವಿದ್ಯೆಯಂಪ್ರ
ತಿವಿದ್ಯೆಯಿಂಕಿಡಿಸಿದುರ್ಲ್ಲಂಘ್ಯಪುರಮಂರಾವಣಂಮುತ್ತುವುದುಂ ॥

ಕಂ ॥ ಸೆರಗಂಬೆಱಗಂಬಗೆಯದೆ ।
ಪುರಮಂಪೊಱಮಟ್ಟುಕಾದುವಾಗಳ್ನಳಕೂ ॥
ಬರನಂವಿಭೀಷಣಂಮದ ।
ಕರಿಯಂಮೃಗವೈರಿಪಿಡಿವತೆಱದಿಂಪಿಡಿದಂ ॥ 194

ವ ॥ ಆಸಮಯದೊಳ್ ॥

ಕಂ ॥ ದನುಜಾಧೀಶ್ವರನಪುರಾ ।
ತನಪುಣ್ಯದಫಲದಿನಾಯುಧಾಗಾರದೊಳೇಂ ॥
ಜನಿಯಿಸಿದುದೊವಿದ್ವಿಷ್ಟಾ ।
ವನಿಪಾಲಪ್ರಳಯಕಾಲಚಕ್ರಂಚಕ್ರಂ ॥ 195

ವ ॥ ಅಂತುಸುದರ್ಶನಚಕ್ರರತ್ನಂಪುಟ್ಟುವುದುಂರಾವಣಂ ಮಹೋತ್ಸವದಿಂಚಕ್ರಪೂಜೆ
ಯಂಮಾಡಿತದನಂತರಂರಹಸ್ಯದೊಳಾಕೆಯಂ ಕರೆದುನೀಂವಿಶುದ್ಧಕುಲದಕುಶಧ್ವ
ಜಂಗಂಮಧುಕಾಂತೆಗಂಪುಟ್ಟಿದುದೆಱಿಂನಿಜಕುಲಾಚಾರಮಂಬಗೆದುಶೀಲಪರಿಪಾಲ
ನಂಮಾಳ್ಪುದಂತುಮಲ್ಲದೆಯುಂ ನೀನೆನಗೆವಿದ್ಯೋಪದೇಶಂಗೆಯ್ದುದಱಿಂಗುರುವಾ
ದೆಪೆಱತೇನುಮಂಬಗೆಯದೆ ನಳಕೂಬರನೊಳ್ಕೂಡಿಸುಖದಿಮಿರೆಂದಾಕೆಯದುಷ್ಪ
ರಿಣಾಮಮಂಪತ್ತುವಿಡಿಸಿ ॥

ಕಂ ॥ ನಳಕೂಬರನುಮನಾಕ್ಷಣ ।
ದೊಳೆಬರಿಸಿನಿಜಾಗ್ರತನಯುನಿಂದಗಿಯಿಂದ ॥
ಗ್ಗಳಮೆನೆಮಂನಿಸಿಭಯಮಂ ।
ಕಳೆದಿತ್ತಂಭೃತ್ಯಪದವಿಯುಂದಶವದನಂ ॥ 196

ವ || ಅಂತಾತಂಬೆರಸು ||

ಕಂ || ವಿಜಯಾರ್ಧನಗಕ್ಕೆತ್ತಿದ |
ನಜೇಯದೋಶ್ಶಾಲಿರಾವಣಂನಿಜವಿಜಯ ||
ಧ್ವಜಿನಿಗಳಬ್ಧಿಗಳೇಳುಂ |
ನಿಜಸೀಮಾವಜ್ರವೇದಿಯಿಂತಳರ್ದುವೆನಲ್ || 197

ವ || ಅಂತುರಾವಣಂತಂನವೇಲತ್ತಿ ಬಂದು ರಜತಗಿರಿನಿತಂಬದೊಳ್ ಬೀಡಂಬಿಟ್ಟನೆಂಬುದ
ನಿಂದ್ರಂಕೇಳ್ದುಸಮರಸಂನಾಹಭೇರಿಯಂಪೊಯಿಸುವುದುಂ ||

ಕಂ || ಚತುರಾಂಬುರಾಶಿಯಂಘೂ |
ರ್ಣಿತಮೆನೆದಿಗ್ವಲಯಮಂದಿಶಾದ್ವಿರದನಬೃಂ ||
ಹಿತಮೆನೆನಭಮಂಘನಗ |
ರ್ಜಿತಮೆನೆಪುದಿದತ್ತುಭೂರಿಭೇರೀನಿನದಂ || 198

ಚ || ಕರಿಗಳವಾಜಿರಾಜಿಗಳತೇರ್ಗ್ಗಳಖೇಚರರೊಡ್ಡಣಕ್ಕಣಂ |
ಧರೆಕಿಱಿದಂಬರಂಕಿಱಿದುಕೇತನಮಾಳಿಕೆಗೆಂಬಿನಂವಿಯ ||
ಚ್ಚರಧರಣೀಶರತ್ನಮಕುಟಪ್ರಭೆಯಿಂದಶದಿಙ್ಮುಖಂಗಳುಂ |
ಭರಿತಮೆನಿಪ್ಪಿನಂನೆರೆದುದಾಧ್ವನಿಗಿಂದ್ರನರುಂದ್ರಸೈನಿಕಂ || 199

ವ || ಅಂತು ನೆರೆದುರಣಭೂಮಿಯೊಳಿಂದ್ರನಬಲಂಬಲಿದೊಡ್ಡಿನಿಲ್ವುದುಂರಾವಣನಬಲಂರ
ಣರಭಸದಿಂಬಂದುತಾಗುವುದುಂ ||

ಕಂ || ಕಾರ್ವ್ವಲದಚತುರ್ಬ್ಬಲಮುಂ |
ದೋರ್ವ್ವಲಮಂಮೆಱೆದುವಿಱಿಕಾದುವಪದದೊ ||
ಳ್ಮಾರ್ವ್ವಲಮಂಸುರಸೈನಿಕ |
ಮೋರ್ವ್ವಟ್ಟುದುದಳ್ಕಿಬಳ್ಕಿಬೆಂಗುಡುವಿನೆಗಂ || 200

ವ || ಅಂತುರಾಕ್ಷಸಬಲಮೆಲ್ಲಮೊಲ್ಲನುಲಿದೋಡುವುದುಂಕಂಡುಮುಖ್ಯನಾಯಕರಪ್ಪವ
ಜ್ರವೇಗನುಂ ಹಸ್ತನುಂ ಪ್ರಹಸ್ತನುಂ ಮಾರೀಚನುಂಉದ್ಭಟನುಮುಜ್ವಳನುಂವ
ಜ್ರನುಂಮಹಾಜಲಧರನುಂಸಂಧ್ಯಾಭ್ರನುಂ ಕ್ರೂರನುಮೆಂಬಿವರ್ಮ್ಮೊದಲಾಗೆಮ
ಹಾಬಲಪರಾಕ್ರಮತ್ತರ್ತಂಮಬಲಮಂ ಪೆಱಗಿಕ್ಕಿದಿವಿಜಬಲಮನೆಲ್ಲಂಗೆಲೆಕಾದು
ವುದಂಕಂಡುಮೇಘಬಲಿಯುಂತಟಿತ್ತುಂಗನುಂ ಅದ್ರಿಯುಂ ಸಂಜ್ವಲನುಂ ಪಾವ
ಕನುಂಮೊದಲಾಗೆ ||

ಕಂ ॥ ಸುರಬಲದನಾಯಕರ್ಸ್ವರ್ಗಂ ।
ಗರದೊಳ್ರಾವಣನಬಲದನಾಯಕರಂಸಂ ॥
ಹರಿಸೆಕೆಲರಂಕಪಿಧ್ವಜ ।
ರರೆಬರ್ಕ್ಕಾಲಾಗ್ನಿರುದ್ರನಂತುರಿದೆದ್ದರ್ ॥ 201

ವ ॥ ಅಲ್ಲಿಮಹೋಗ್ರನಂದನನುಂ ಪ್ರಸನ್ನಕೀರ್ತಿಯುಂಮಾಲ್ಯವಂತತನೂಭವನುಂಶ್ರೀ
ಮಾಲಿಯುಮೆಡೆವೊಕ್ಕು ದಿವಿಜಬಲಮಂಹತವಿತತ ಕೋಲಾಹಲಮಂಮಾಡಿಕಾದು
ವುದಂಕಂಡುದಂಡಾಗ್ರನುಂಶಿಖಂಡಿಯುಂಶಿಖಿಯುಂಕೇಸರಿಯುಂಕನಕನುಂಮೃಗಚಿ
ಹ್ನನುಮೆಂಬಿಂದ್ರನೞಿಯಂದಿರ್ಮೊದಲಾಗೆಪಲಬರ್ಕ್ಕುಮಾರರ್ಮೂದಲಿಸಿಮುಸು
ಱಿಮುತ್ತುವುದುಂ ॥

ಕಂ ॥ ಶ್ರೀಮಾಲಿನೃಪಕುಮಾರ ।
ಸ್ತೋಮದತಲೆವಱಿದುಪಾಱಿಬೀೞ್ವಿನೆಗಂಸಂ ॥
ಗ್ರಾಮದೊಳೇಸಾಡಿದನಱಿ ।
ಱಾಮರರಾಗಸದೊಳೊಡನೆತಲೆದೂಗುವಿನಂ ॥ 202

ಅವರೞಿವುದನಿಂದ್ರತನೂ ।
ಭವನೀಕ್ಷಿಸಿಕಲುಷವಶಗತಂತಾಗಿರಕ್ಷೋ ॥
ತ್ಸವದಿಂದೇೞಿಸಿಮೊನೆಯೊಳ್ ।
ಜವನಂಶ್ರೀಮಾಲಿಯಂಜಯಂತಂಕೊಂದಂ ॥ 203

ವ ॥ ಅಂತುಶ್ರೀಮಾಲಿಯಂಜಯಂತಂಕೊಂದುವಿಜಯಪತಾಕೆಯನೆತ್ತಿಸುವುದುಮಿಂದ್ರ
ಜಿತ್ಕುಮಾರನತಿಕುಪಿತನಾಗಿಬಂದುಜಯಂತನೊಳ್ಪೊಣರ್ವುದುಮಿಂದ್ರಂನೋಡಿ
ಕಡುವೇಗದಿಂ ॥

ಮ ॥ ಮುೞಿದೈರಾವಣಗಂಧಸಿಂಧುರಮನಾಗಳ್ನಂಶಿದಂವ್ಯೋಮಮಂ ।
ಡಳದೊಳ್ಬೆಳ್ಗೊಡೆಚಂದ್ರಮಂಡಲದಚೆಲ್ವಂಬೀಱೆದಿಕ್ಪಾಲಮಂ ॥
ಡಳಿಸುತ್ತಂಬರೆಪಾಱೆಕೇತನಶತಂಗಳ್ಮಂದೆಮುಂದಯ್ಸುಮಂ ।
ಗಳಭೇರೀರವಮುಣ್ಮೆಪೊಣ್ಮೆದೆಸೆಯಂತಳ್ಪೊಯ್ಯೆಶಂಖಸ್ವನಂ ॥ 204

ವ ॥ ಅಂತಿಂದಗಿಯುಮೊನೆಗೈರಾವಣಮನಣೆದುನೂಂಕುವಿಂದ್ರನಂದನುಜೇಂದ್ರನಸಾರಥಿ
ಸನ್ಮತಿಕಂಡಿಂತೆಂದಂ ॥

ಮ || ನಿನಗಿಂದ್ರಂದೊರೆಸಂಗರಕ್ಕೆ ದೊರೆನೀನಿಂದ್ರಂಗೆಮತ್ತೋರ್ವ್ವರಾ |
ತನನೇನಾಂಕೆಗೊಳಲ್ಸಮರ್ತ್ಥರೆಕುಮಾರಂಬಾಲಕಂಯುದ್ಧಯೋ ||
ಗ್ಯನೆಕಯ್ಕೊಳ್ವುದುದೇವರಿಂದಗಿಯನೆಂದಾಲೋಲಿಸಂಡಾಲಕೇ |
ತನಮುಂಚೋದಿಸಿದಂದಶಾಸ್ಯರಥಮಂಸೂತಂಮನೋವೇಗದಿಂ || 205

ವ || ಅಂತುಮುಟ್ಟೆವಂದುಮೂದಲಿಸಿತಾಗುವುದುಂ ||

ಕಂ || ಶರಸಂಧಾನದವೇಗಂ |
ಪರಿಕಿಸಲರಿದೆನಿಸಿದಿವಿಜಪತಿಯುಂದಶಕಂ ||
ಧರನುಂಕಾಯ್ದೆಸೆಪಾಯ್ದುವು |
ಶರಮಯಮಾಯ್ತಖಿಲಭುವನಮೆನೆಶರನಿಕರಂ || 206

ವ || ಅಂತಚಿಂತ್ಯಯುದ್ಧಂಗೆಯ್ವುದಾನವೇಂದ್ರನನಿಂದ್ರಂಸಾಧಾರಣಾಸ್ತ್ರದಿಂಗೆಲ್ವುದರಿ
ದೆಂದು ||

ಕಂ || ಮುನಿದುತಮದಂಬಿನಿಂದಿಂ |
ದ್ರನಿಸುವುದುಂಬೆಳಗಿನಂಬಿನಿಂಗೆಲ್ದೊಡೆಕಂ ||
ಪನಲಾಸ್ತ್ರದಿನಿಸೆದಿವಿಜಂ |
ದನುಜೇಂದ್ರಂವಾರುಣಾಸ್ತ್ರದಿಂಖಂಡಿಸಿದಂ || 207

ವ || ಅಂತುಖಂಡಿಸೆಮತ್ತಂಪಲತೆಱದದಿವ್ಯಶರಂಗಳಿಂದಿಂದ್ರನಿಸುವುದುಂದಶಕಂಧರನವಂ
ಪ್ರತಿಶರಂಗಳಿಂದಭಿಭವಿಸೆ ||

ಕಂ || ದೇವಕ್ಕಾರ್ವ್ವೊಡಮಿವನಂ |
ಸಾವೆಯ್ದಿಪೆನೆಂದುಮನದೊಳೊದವಿದಮುಳಿಸಿಂ ||
ರಾವಣನವರೂಥಕ್ಕೆಱ |
ರಾವಣವಾರಣಮನಣೆದುನೂಂಕಿದನಿಂದ್ರಂ || 208

ವ || ಅಂತುನೂಂಕುವುದುಂ ||

ಮ || ನಿಜನೇತ್ರಾಧ್ವದೊಳಾಗಳಾಗಲದಟಂಶ್ರೀಮಾಲಿಸತ್ತೀವಮುಂ |
ನಿಜವಂಶಪ್ರಭುವಪ್ಪಮಾಲಿಯನವಂಮುಂಕೊಂಡನೆಂಬೀವಮುಂ ||
ನಿಜಕೋಪಾಗ್ನಿಗೆಕೊರ್ವ್ವನೀಯೆದೊರೆಕೊಂಡಂದ್ರೋಹನೆಂದೇಱಿದಂ |
ತ್ರಿಜಗದ್ಭೀಷಣದಂತಿಯಂರಿಪುಭಟಮಾವಿದ್ರಾವಣಂರಾವಣಂ || 209

ವ ॥ ಅಂತೀರ್ವ್ವರುಮೋರೋರ್ವ್ವರಾನೆಯುಮಂಮುಟ್ಟೆನೊಂಕಿ ಮಹಾಯುದ್ಧಂಗೆಯ್ದುರಾ
ವಣಂನಿಜವಾರದಿನೈರಾವಣದಮೇಲೆವಾಯ್ದುಮುಂದಣಾಧೋರಣನಂಚರಣಪ್ರಹಾ
ರದಿಂನೆಲಕ್ಕಿಕ್ಕಿಮಾತಂಗದಮೇಲೆವಾಯ್ವಸಿಂಹದಂತಿಂದ್ರನಮೇಲೆವಾಯ್ದುಮತ್ತಮ
ನಮೇಲುದಜಿೞಳದಸಿಕಟ್ಟಿಕೊಳ್ವೆನಲ್ಲೆನಂಜದಿರೆಂದಭಯವಚನಮಂನುಡಿದು ॥

ಕಂ ॥ ಕರಿಯಂಹರಿಕೇಸರಿಯಂ ।
ಶರಭಂಶರಭಮನದೊಂದುಭೇರುಂಡನಡ ॥
ತ್ತಿರ್ದುಯ್ವತೆಱದೆನಿಜಸಿಂ ।
ಧುರಕ್ಕೆಮಗುೞ್ದುಯ್ದನಿಂದ್ರನಂದನುಜೇಂದ್ರಂ ॥ 210

ವ ॥ ಆಸಮಯದೊಳಿಂದ್ರನ ಮಗನಪ್ಪ ಜಯಂತನನಿಂದ್ರಜಿತ್ತುಮೂರಂಬಾಳ್ದಲೆದಂದೀ
ಯೆರಾವಣನಭಯಘೋಷಣೆಯಂ ಮಾಡಿಮಹಾವಿಭವದಿಂಬಂದುಲಂಕೆಯಂಪೊ
ಕ್ಕುಸುಖದಿನಿರೆ ॥

ಕಂ ॥ ಪರಿಜನಮುಮುಪಾಯನಮುಂ ।
ಜರಸುಸಹಸ್ರಾರನಾತ್ಮತನಯನಮೋಹಂ ॥
ತರೆತಂನಂಬಂದಂದಕ ।
ಶಿರನಲ್ಲಿಗೆಮುಂದುಗಾಣ್ಬರೇಮೋಹಾಂಧರ್ ॥ 211

ವ ॥ ಅಂತುಬಂದುಲಂಕಾಪುರಮಂಪುಗುವುದುಮುಚಿತಪ್ರತಿಪತ್ತಿಯಿಂಕಾಣಿಸಿಕೊಂಡುಸ
ಹಸ್ರಾರನಂನಿಜಜನಕನಿಂದಧಿಕವಾಗೆಮಂನಿಸಿಮಣಿಮಯಾಸನದೊಳಿರಿಸಿವಿನಯವಿ
ನಮಿತೋತ್ತಂಸಂಪಸನಾವುದೆನೆಸಹಸ್ರಾರನಿಂತೆಂದಂ ॥

ಕಂ ॥ ನಿನಗೆಜಗದಿಂದ್ರನಂಗೆ ।
ಲ್ದುನಿನ್ನಭುಜಬಲದಮಹಿಮೆಯಂಬೀಱಿದೆಜೀ ॥
ಯೆನಿಸಾತನಸೆಱೆಯಂಬಿ ।
ಟ್ಟುನಿನ್ನತತ್ಕರ್ಮ್ಮಂಬಂಣಿಸಲ್ಬಾರದೆನಲ್ ॥ 212

ವ ॥ ಎನೆದಶಾನನಂಮಹಾಪ್ರಸಾದಮಂತೆಗೆಯ್ವೆನೆಂದಿಂದ್ರನಂಬರಿಸಿನಿಷ್ಕಷಾಯಂನಿಂನ
ರಾಜ್ಯದೊಳ್ಸುಖದಿನಿರೆಂದುಕಳಿಪುವುದುಂರಾವಣಂಗೆನಿಶ್ಶಲ್ಯನಾಗಿತಂನಪೊೞಲ್ಗೆವಂ
ದಿಂದುವೆಂಬತೆಂನಪಿರಿಯಮಗಂಗೆರಾಜ್ಯಮಂಕೊಟ್ಟುತಂನಮಗನಪ್ಪಜಯಂತ
ನುಂತಂನಲೋಕಪಾಲರುಂಬೆರಸು ದೀಕ್ಷೆಗೊಂಡುಮೋಕ್ಷಕ್ಕೆವೋದನಿತ್ತಲಿಂದ್ರ
ನಂಗೆಲ್ದುವಿಯಚ್ಚರೇಂದ್ರಂವರುಣನಮೇಲೆನಡೆಯಲೆಂದುಸಮಸ್ತಸಾಮಂತರಂಬ

ಱಿಸಿಹನುಮರ್ದ್ವೀಪಕ್ಕೆ ದೂತನನಟ್ಟುವುದುಮಾತಂಬಂದುಪ್ರತಿಸೂರ್ಯ್ಯನುಮಂ
ಪವನಂಜಯನುಮಂಕಂಡುನಿಜಾಗಮನವೃತ್ತಾಂತಮನಱಿಪುವುದುಂ ಪವನಂಜ
ಯನಾಂಜನೇಯನಂಬರಿಸಿ ॥

ಮ॥ಸ್ರ॥ ವರುಣಂಬಾಯ್ಕೇೞನೆಂಬೀಮುನಿಸನುವಿಸಮೇಲೆತ್ತಲೆಂದೀಗಳೆಂಮಂ ।
ಬರವೇೞ್ದಂದಾನವೇಂದ್ರಂತಡೆವುದುಪದನಲ್ತೊಪ್ಪುಗೊಳ್ರಾಜ್ಯರಕ್ಷಾ ॥
ಭರಮಂನೀನೆಂಬುದುಂಮಾರುತಿಮುಕುಳಿತಹಸ್ತಾಂಬುಜಂವೀರಲಕ್ಷ್ಮೀ ।
ಪರಿರಂಭೋತ್ಸಾಹದಿಂದಾಪೆಸನನತಿಬಳಂತಂದೆಯಂಬೇಡಿಕೊಂಡಂ ॥ 213

ವ॥ ಅಂತುಬೆಸನಂಬೇಡಿಕೊಂಡುವಿಮಾನಾರೂಢನಸಂಖ್ಯಾತಬಲಸಮೇತಂ ಸಮುದ್ರ
ಮಧ್ಯದ್ವೀಪಂಗಳುಮಂಪೊಳಲ್ಗಳುಮನಭೀಕ್ಷಿಸುತ್ತುಂಬರ್ಪ್ಪಸಮಯದೊಳ್ರಾವ
ಣಂಗಗನಮಂಡಲದೊಳಿರ್ದ್ದುಹನುಮನಬರವಂಕಂಡು ॥

ಚ॥ ಇದಿರ್ವರೆತಾನುಮುತ್ಸುಕತೆಯಿಂದಿದಿರ್ವಂದುಮರುತ್ಸುತಂಪದ ।
ಕ್ಕೊದವಿದಭಕ್ತಿಯಿಂಮಣಿಕಿರೀಟಮರೀಚಿಯಿನೀಯೆಪಾದ್ಯಮಂ ॥
ಪದಪಿನಳುರ್ಕ್ಕೆಯಿಂತೆಗೆದುತರ್ಕ್ಕೆಸೆದಾನವಚಕ್ರವರ್ತ್ತಿಗಾ ।
ದುದರಿಪುಚಕ್ರಮಂತವಿಪುದಿಂನೆನಗಾವರಿದೆಂಬಸಂತಸಂ ॥ 214

ವ॥ ಅಂತಾತನಂಕಾಣಿಸಿಕೊಂಡು ॥

ಕಂ॥ ಆಗಸಮುಂದೆಸೆಯುಂಭೂ ।
ಭಾಗಮುಮೆಡೆನೆಱೆಯದೀಬಲಕ್ಕೆನೆನಡೆದಂ ॥
ಮೇಗಿಲ್ಲದಬಲ್ಲಾಳ್ರಣ ।
ರಾಗರಸಂಕದನಕರ್ಕ್ಕಶಂದಶವದನಂ ॥ 215

ವ॥ ಅಂತುನಡೆದುಪಾತಾಳಪುಂಡರೀಕಪುರಮಂಮೂವಳಸಾಗಿಸುತ್ತಿಮುತ್ತೆವರುಣನ
ತಿಕುಪಿತನಾಗಿಪೊಱಮಡುವುದುಮೊಡನೆ ॥

ಕಂ॥ ಓರ್ವ್ವನೆಜವನೆಂಬುದುಪುಸಿ ।
ನೂರ್ವ್ವರ್ಜ್ಜನಿಯಿಸಿದರೆನಿಸಿಖಚರಕುಮಾರ ॥
ರ್ದ್ದೋರ್ವ್ವಲದೃಪ್ತರ್ಪ್ಪರಮಂ ।
ನೂರ್ವ್ವರ್ಸ್ಸಂಗ್ರಾಮಲಂಪಟರ್ಪ್ಪೊಱಮಟ್ಟರ್ ॥ 216

ಕಂ ॥ ಸಿಂಗದಪಂಗುೞಿಯಂತಿರ ।
ಸುಂಗೊಳಿಪೊಱಮಟ್ಟುಕಾದೆವರುಣಕುಮಾರ ॥
ರ್ಪಿಂಗೊಟ್ಟುದುದಶಮುಖಚಕಿತು ।
ರಂಗಬಲಂಸಮರಮುಖದೊಳವರ್ಗಿದಿರುಂಟೇ ॥ 217

ವ॥ ಅಂತುಕಾದುತ್ತುಮಿರೆಹನುಮನೆಡೆವೊಕ್ಕು ತಂನಸೇನೆಯಿಂರಿಪುಸೇನೆಯಂಸುತ್ತಿ ಮುತ್ತಿ ॥

ಉ ॥ ದಾನವವಿದ್ಯೆಯಂತಳೆದುವಾನರರೂಪುಮನಾಂತುವಿದ್ವಿಷ ।
ತ್ಸೇನೆಯೊಳಾನೆಯಂಕುದುರೆಯಂರಥಮಂಪೃಥುಗಂಡಶೈಲಸಂ ॥
ತಾನದಿನಿಟ್ಟುಮೋದಿತರುರಾಜಿಗಳಿಂತಮೆಕೊಂದನಾಮರು ।
ತ್ಸೂನುಗೆಕಯ್ದುಕೆಯ್ದುಕಡುಕೆಯ್ದುಬರ್ದುಂಕುವರಾಜಿರಂಗದೊಳ್ ॥ 218

ವ ॥ ಅಂತುಹನುಮನನುವರದೊಳಾಂತಬಲಮಂಕೃತಾಂತಸಂತೆತವಿಸಿರಾಜೀವಪುಂಡರೀ
ಕಪ್ರಮುಖನಿಜಕುಮಾರನ್ನೂರ್ವ್ವರುಮಂ ಪಿಡಿದುಕಟ್ಟುವುದುಂವರುಣಂಕಂ
ಡುಕುಪಿತನಾಗಿ ॥

ಕಂ ॥ ನೆನೆಯದೆಕಲುಷವಶಂನ ।
ಚ್ಚಿನವಿದ್ಯೆಗಳಂಕಡಂಗಿಕಾದುವಪದದೊ ॥
ಳ್ದನುಜೇಂದ್ರಂಪಿಡಿದಂವರು ।
ಣನನಾವಂರಾವಣಂಗೆಕೂರ್ಪ್ಪಂತೋರ್ಪ್ಪಂ ॥ 219

ವ ॥ ಅಂತಾತನಂಪಿಡಿದು ಕುಂಭಕರ್ಣ್ನಂಗೆಸೆಱೆಯನೊಪ್ಪಿಸಿ ಭವನೋನ್ಮಾದವೆಂಬು
ದ್ಯಾನವನದೊಳ್ಬೀಡಂಬಿಟ್ಟುವೋಲಗಂಗೊಟ್ಟಿರ್ದ್ದವರುಣನಂಬರಿಸಿ ॥

ಕಂ ॥ ಕಲಿಸಾವಂಪಿಡಿವಡೆವಂ ।
ಕಲಹದೊಳಿದುಭಂಗಮಲ್ತುನೀಂಮುನ್ನಿನವೋಲ್ ॥
ಲ್ನೆಲಸಿನಿಜರಾಜ್ಯದೊಳ್ಸುಖ ।
ದಲಿರ್ಪ್ಪುದೆಂದೊಸೆದುವರುಣನಂಮನ್ನಿಸಿದಂ ॥ 220

ವ ॥ ಅಂತು ವರುಣನಂಮಂನಿಸಿಕರಗ್ರಹಣಂಗೆಯ್ದು ಕಾರುಣ್ಯಮನಱಿಪುವುದುಂವರು
ಣಂಹನುಮನಸೆರಗಿಲ್ಲದಬಲ್ಲಾಳ್ತನಮಂಪೊಗಳ್ದು ಸತ್ಯವತಿಯೆಂಬ ತಂನಮಗಳಂ
ರಾವಣಂಗೆಮಹಾವಿಭವದಿನಿತ್ತು ತಂನಪೊಳಲ್ಗೆ ಪೋದನಿತ್ತ ರಾವಣಂಲಂಕೆಗೆವಂದು
ಚಂದ್ರನಖಿಯುಮಗಳಪ್ಪನಂಗಪುಷ್ಪೆಯಂ ಶ್ರೀಶೈಲಂಗೆಪರಿಣಯನೋತ್ಸವದಿನಿತ್ತು
ಕರ್ಣ್ನಕುಂಡಲಪುರಮನಾತಂಗೆ ರಾಜ್ಯಾಭಿಷೇಕಂಗೆಯ್ದು ಕುಡುವುದುಮಲ್ಲಿಯಸ
ಹಸ್ರಾಂತಃಪುರಪುರಂಧ್ರಿಯರ್ಗ್ಗೆವಲ್ಲಭನಾಗಿಸುಗ್ರೀವಂಗಂಸುತಾರೆಗಂಪುಟ್ಟಿದಪದ್ಮ
ರಾಗೆಯಂಮದುವೆನಿಂದುಸುಖದಿನಿರ್ದ್ದನಿತ್ತಲ್ ॥

ಕಂ ॥ ಭರತತ್ರಿಖಂಡಮಂದಶ ।
ಶಿರನಾಳ್ದಂಚಕ್ರರತ್ನಮೆಸೆರತ್ನಂಗ ॥
ಳ್ದೊರೆಕೊಂಡುವಖಿಳವಿದ್ಯಾ ।
ಧರವಲ್ಲಭರೆಲ್ಲರುಂಪದಾನತರಾದರ್ ॥ 221

ಶಾ ॥ ಆಕ್ರೋಧೋದ್ಧತನಪ್ಪರಾವಣನೊಳಾವಂಕಾದುವಂಯುದ್ಧದೊಳ್ ।
ಶಕ್ರಂಗಂತ್ರಿಜಗದ್ವಿಭೂಷಣಗಜಂಕೊಂದಿಕ್ಕಲೇಂಸೋಲದೇ ॥
ಚಕ್ರಕ್ಕಂಪರಚಕ್ರಮುಂಟೆಸಕಲೋರ್ವ್ವೀಚಕ್ರದೊಳ್ವಿದ್ವಿಷ ।
ಚ್ಚಕ್ರಂತೋರ್ಕ್ಕೆಮೆಚಂದ್ರಹಾಸದಿದಿರೊಳ್ಮಾಱಾಂತವಿಕ್ರಾಂತರಂ ॥ 222

ಮ ॥ ನಿಖಿಲಕ್ಷತ್ರಕುಲಂವಿಯಚ್ಚರಕುಲಂಸಂಗ್ರಾಮಕೇಳೀಪರಾ ।
ಙ್ಮುಖಮಾತ್ಮಪ್ರತಿಬಿಂಬದಂತೆಬಳೆಸಂದಾಜ್ಞಾವಿಧೇಯಂಗುಹಾ ॥
ಮುಖದಂತೆಂದುದನೆಂನದಂದುನವರಕ್ತಾಸಕ್ತನಕ್ತಂಚರೀ ।
ಮುಖದೊಳ್ತೂಂತುವುದಾಂತರಂದಶಮುಖೋತ್ಖಾತಾಸಿಧಾರಾಮುಖಂ ॥ 223

ತ್ರಿಜಗದ್ಭೂಷಣನಾಮಸಾಮಜಮನೇಂಮಾಱಾಂಪುದೇಮಿಕ್ಕಸಾ ।
ಮಜಮಾಯಕ್ಷಸಹಸ್ರರಕ್ಷಿತಮನುದ್ಯಚ್ಚಕ್ರಮಂಚಂದ್ರಹಾ ॥
ಸಜಯೋಗ್ರಾಸಿಯನಾಂಪಕೈದುವೊಳವೇಕೈಲಾಸಮಂಕಿತ್ತತ ।
ದ್ಭುಜಮಂಭೂಚರಖೇಚರರ್ಕ್ಕಳಭುಜಂಗಳ್ಪೆಂಗದೇನಾಂಪುವೇ ॥ 224

ಮದಮಂಭದ್ರಗಜಕ್ಕೆರಾಜಮೆಸರಂಚಂದ್ರಂಗೆತೀವ್ರಪ್ರತಾ ।
ಪದಪೆರ್ಚ್ಚಂತಪನಂಗೆತೇಜದೊದವಂಸಪ್ತಾರ್ಚ್ಚಿಗತ್ಯುಗ್ರಖ ॥
ಳ್ಗದಗುರ್ವ್ವಂಗಹನಕ್ಕೆವುನ್ನತಿಯನೇಳುಂಗೋತ್ರಭೂಭೃತ್ಕುಲ ।
ಕ್ಕದಟಂಸ್ಥೈರಿಸುಮಂಪೆಱಂಗೆಬಿತ್ತೇಂಲಂಕೇಶ್ವರಂಸ್ಥೈರಿಸಂ ॥ 225

ಕದನಕ್ಷೋಣಿಯೊಳೋಡಿದರ್ಮ್ಮಡಿದರೆಂಬೀವಾರ್ತ್ತೆಯಂಕಂಡರೆಂ ।
ಬುದನೇಗೊಂಡರಿಳೇಶರೆಂಬನುಡಿಯುಂಭೂಭಾಗದೊಳ್ಕೇಳಲಾ ॥
ದುದುಗೆಲ್ದಸ್ಸುರರಿಗಾದಿದರ್ಪ್ಪಗೆಪರೆಂಬೀವಾರ್ತ್ತೆಯಂಕೇಳಲಾ ।
ಗದಮಂವರ್ತ್ತಿಸಿದಿಂಬಳಿಕ್ಕೆನೆಜಗದ್ವಿದ್ರಾವಣಂರಾವಣಂ ॥ 226

ಕಂ ॥ ಆಯುಧಮೆನಿತೊಳವವುದಿ ।
ವ್ಯಾಯುಧಮವನಳವದಾರಕಯ್ಯಳವಾತಂ ॥
ಕಾಯಲ್ಬರ್ದ್ದಂಕುವಕ್ಕೈರ್ ।
ಗಾಯದೊಡಾವೊಂಗಮೇಂನಿಲಲ್ಬಂದಪುದೇ ॥ 227

ಕಂ॥ ಭೀಷಣಬಲರಸುಹೃದ್ಬಲ ।
ಶೋಷಣದಕ್ಷರ್ನೃಪಾಲಶರಣಾಗತಸಂ ॥
ತೋಷಕರಕುಂಭಕರ್ಣ್ಣರಪಿ ।
ಭೀಷಣರೆಂಬರ್ದ್ದಶಾಸ್ಯನೊಡವುಟ್ಟಿದವರ್ ॥ 228

ಉ॥ ಕಾಲಮನಾಸೆವಟ್ಟುನಿದಿರಿಕ್ಕುವನಿಕ್ಕುವನೇವನೆಂದವ ।
ಕ್ಕಾರ್ಲನನೇೞದಂಬಗೆವರೀನೆಲನಂವಿಜಿಗೀಷುವೃತ್ತಿಯಿಂ ॥
ಪಾಲಿಸುವರ್ಸ್ಸುರಾಸುರವಿಯಚ್ಚರಸೇನೆಯೊಳಾರ್ಗ್ಗವಮಾಜಿಯೊ ।
ೞ್ಸೋಲದವೋಘವಾಹನನುಪೀಂದ್ರಗಿಯುಂದನುಜೇಂದ್ರನಂದನರ್ ॥ 229

ಕಂ॥ ಅವನವಿಯಚ್ಚರಸೇನೆಯು ।
ಪವಣನದೇವೇಳ್ವೆಕಯ್ದುಗೆಯ್ಯದೊಡಮದಂ ॥
ತವೆಕೊಲ್ವುದರಿದುದನುಜನ ।
ಬವರಂಕೈಸಾರೆಯಲ್ತುಗೆಲ್ಲದಬವರಂ ॥ 230

ಬಲದಭುಜಬಲದವಿದ್ಯಾ ।
ಬಲದಮನೋಬಲದಬಲ್ಪಿನಿಂನೃಪರಾರ್ಗ್ಗಂ ॥
ಗೆಲಲರಿಯಂದಶಕಂಧರ ।
ನಲಂಘ್ಯವಿಕ್ರಾಂತತುಂಗನಮರೇಂದ್ರಂಗಂ ॥ 231

ವ॥ ಎಂಬುದುಂಲಕ್ಷ್ಮಣಂಮುಱುಸುವೆರಸಿದಮುಗುಳ್ನಗೆಸರಿಸೆಪರಿಹಾಸವಚೋವಿಳಾ
ಸದಿನಿಂತೆಂದಂ ॥

ಮ॥ ಅದಟಂರಾವಣನೆಂಬುದಂನುಡಿದುತೋಳ್ಬಲ್ಪೇಳ್ಪುದೇಕಾದಲಂ ।
ಮದೆಕಳ್ದುಯ್ದುದೆವೇಳ್ಗಮಂಬಿಕೆಯನಾತಂಭೀತನಿಕ್ಷ್ವಾಕುವಂ ॥
ಕದರಂಗೆಲ್ವನೆರಾಮರಾವಣರಬಲ್ಪಂಮೇಲ್ಪುಮಂಕಾಣಲ ।
ಪ್ಪುದುತಟ್ಟುತ್ತಿಱಿವಲ್ಲಿದಿಟ್ಟದೊಲೆಯಂತೂಗಿಂರಣಕ್ಷೋಣಿಯೊಳ್ ॥ 232

ಚ॥ ನಡೆನೃಪಳೇಶನೊಳ್ತೊಡರದಂನೆಗವಾತನಗಂಡಗರ್ವ್ವಮಿಂ ।
ನಡೆಗುಮೆರಾಮನಂಬುನೆರನಂನಡೆಕಾಲ್ಮಡೆಗೆಟ್ಟುನಿಲ್ಕುಮೀ ॥
ನುಡಿತಡವಲ್ತುನಾಳೆಯೆರಣಾಂಗಣದೊಳ್ನಡೆನೋಡುವಿರ್ಮ್ಮರು ।
ಳ್ಪಡೆಭೊಡಗೊಡಿತಾಂಡವಮನಾಡುವರಾವಣನಟ್ಟೆಯಾಟಮಂ ॥ 233

ಕಂ ॥ ದನುಜೇಂದ್ರನಲ್ಪವೀರ್ಯ್ಯಂ ।
ಮನುಜೇಂದ್ರನನಂತವೀರ್ಯ್ಯನೆಂಣಂಗಾವ ॥
ಣ್ಣನುಮಿದಿರೆಕರಿಂಗಳಂಗೆ ।
ಲ್ದ ಸಿತಖುನಿಭವೈರಿಶರಭಮಂಗೆಲ್ದಪುದೇ ॥ 234

ಕತ್ತಲೆಪಿರಿದಾದೊಡಮೇಂ ।
ಮಾರ್ತ್ತಲೆಯೆದಿನಾಧಿಪಂಗೆಪಿರಿದಾದೊಡಮೇ ॥
ನಾರ್ತ್ತಪುದೆವೈರಿಸೈನ್ಯಮ ।
ಳಾರ್ತ್ತಿಱಿಯಲಜೇಯಬಾಹುಬಳನೆಂಬಳನಂ ॥ 235

ಚ ॥ ಹಿತಮಿತವಾಕ್ಯನಸ್ಖಲಿತಧೈರ್ಯ್ಯಗುಣಂಗುಣರತ್ನರೋಹಣಂ ।
ಕ್ಷಿತಿಧರನತ್ಯುದಾತ್ತಮಹಿಮಂಶರಣಾಗತವಜ್ರಪಂಜರಂ ॥
ನತನರಪಾಳಮೌಳಿಹರಿನೀಳಮಣಿಪ್ರಚಯದ್ವಿರೇಫಚುಂ ।
ಬಿತಚರಣಾರವಿಂದನವದಾತಯಶಂಕವಿತಾಮನೋಹರಂ ॥ 236

ಗದ್ಯ ॥ ಇದುಪರಮಜಿನಸಮಯಕುಮುದಿನೀಶರಚ್ಚಂದ್ರಬಾಲಚಂದ್ರಮುನೀಂದ್ರಚರಣ ನಖಕಿರಣಚಂದ್ರಿಕಾಚಕೋರಂಭಾರತೀಕರ್ಣ್ಣಪೂರಂಶ್ರೀಮದಭಿನವಪಂಪವಿರ ಚಿತಮಪ್ಪರಾಮಚಂದ್ರಚರಿತಪುರಾಣದೊಳ್ದಶವದನವಂಶವರ್ಣ್ಣನಂ ದಶಮಾ ಶ್ವಾಸಂ ॥

ಏಕಾದಶಾಶ್ವಾಸ ಪ್ರಾರಂಭಃ.

—:0:—

ಕಂ || ಶ್ರೀವಧೂಪೇರುರಂಜ |
ನ್ಮಾವಾಸಂಕೀರ್ತಿವಧುಗೆಕೇಳೀಗೃಹಮಾ ||
ಶಾವಲಯಮೆನೆಸಮಸ್ತ ಕ |
ಳಾವಿಭವಮನಪ್ಪುಕೆಯ್ದನಭಿನವಪಂಪಂ ||

ವ || ಎಂಬುದುಂಜಾಂಬವಪ್ರಮುಖರಿಂತೆಂದರ್ || 1

ಚ || ಎಮಗಧಿರಾಜನಾಗಿಖೇಚರೋರ್ವಿಗೆವಲ್ಲಭನಾಗಿಖೇಚರ |
ಪ್ರಮದೆಯರಂಮನಂಗೊಳಿಸಿರಾಜ್ಯವಿಳಾಸಮಂನಪ್ಪುಕೆಯ್ದನು ||
ಕ್ರಮದೊಳೆದಂಡಮೊಂದುಳಿಯೆಭೇದಿಸಿತಪ್ಪುರ್ದುದೇವಿಯಂಪರಾ |
ಕ್ರಮದೆಡೆಯಲ್ತುಪೊಲ್ಲದುದುರಾಗ್ರಹಮಾತನೊಳಾದವಿಗ್ರಹಂ || 2

ಅವರಿವರೆಂನದಾವನೃಪನಂದನರುಂದನುಜಂಗೆಭೀತಿಯಿಂ |
ದವನತರಪ್ಪರಲ್ಲದೊಸೆದಾಳ್ವಸದಿಂನಡೆವಂನರಿಲ್ಲನಾ ||
ಮವರನುಪಾಯದಿಂದೆಪುಗೆಜೆಂಬಲಮಾಗಿರೆಮಾಡಿಕೊಡಿಕೊಂ |
ಡವನೊಡನೆತ್ತಿಕಾದುವುದುಕಾಲವಿಲಂಬನಮಾಗಲಾಗದೇ || 3

ವ || ಎಂಬುದುಂರಘುವೀರನಿಂತೆಂದಂ ||

ಕಂ || ಆತಂಗೆನೆಱೆಯಲಾಱದ |
ಭೀತರನೆರವೇವುದೆನಗೆಮೊನೆಯೊಳ್ದನುಜಂ ||
ಗಾತಂಕಮನೊಡರಿಸಲನು |
ಜಾತಭುಜೋತ್ಖಾತಖಡ್ಗಮಿದೆನೆರಮಲ್ತೇ || 4

ಚ || ಅಸದನುಶಾಸನಂರಘುಕುಳಕ್ಕೆಕುಲವ್ರತಮನ್ಯಕಾಂತೆಗಾ |
ಟಿಸಿದದುರಾತ್ಮನಂರಣದೊಳಣ್ಮಿದನಪ್ಪೊಡಮೋಘಬಾಣದಿಂ ||
ದೆಸೆವಲಿಗೆಯ್ವೆನಕ್ಕೆರಣಕೇಳಿಗೆಜಾನಕಿಯಂದಶಾಸ್ಯನೊ |
ಪ್ಪಿಸಿದೊಡೆಕಾವೆನಿಲ್ಲನಿಮಗಂನಮಗಂಪದನಲ್ತುಮಂತಣಂ || 5

ವ || ಎಂಬುದುಂಜಾಂಬೂನದಂತಂನೊಳಿಂತೆಂದಂ ||

ಕಂ || ತೃಣಪುರುಷನಾಗಿಕಲ್ಪಿಸಿ |
ರಣರಭಸಮನಪ್ಪುಕೆಯ್ದುಪಂಬಗೆಯದರಾ ||
ವಣನುಮನಿಂನುಂಮುಂನುಂ |
ಗಣನಾತೀತಪ್ರತಾಪನೀರಘುರಾಮಂ || 6

ಮ ॥ ಸೆರಗಂಪಾರದುದಾತ್ತರಾಘವನಮಾತಂಕೇಳ್ದು ಜಾಂಬೂನದಂ ।
ಪಿರಿದುಂವಿಸ್ಮಯಮುತ್ತು ಕಾದಿರಣದೊಳ್ಪೌಲಸ್ತ್ಯನಂಗೆಲ್ವದು ॥
ರ್ದ್ಧರಬಾಹಾಬಲಮಂಪರೀಕ್ಷಿಸುವೆನೆಂಬೀಚಿತ್ತದಿಂಪೇೞಲಾ ।
ತುರನಾದಂದನುಜಂಗದಿವ್ಯಮುನಿಪಮ್ಮರ್ಗಂಪೇೞ್ದ ವೃತ್ತಾಂತಮಂ ॥ 7

ವ ॥ ಅಂತುಬಗೆದುರಘುವೀರನಮುಖಾರವಿಂದಮಂನೋಡಿಜಾಂಬೂನದಂಮುಕುಳಿತಕ
ರಕಮಲನಿಂತೆಂದಂ । ದೇವಾಮುಂನಮೊರ್ಮ್ಮೆದಶಗ್ರೀವನನಂತವೀರ್ಯ್ಯಕೇವಳಿ
ಗಳಚರಣೋಪಾಂತದೊಳ್ಧರ್ಮ್ಮಮಂಕೇಳ್ದುತದನಂತರಮೆನಗೆಪೆಱರಕಯ್ಯೊ
ಳ್ಮರಣಮಕ್ಕುಮಾಗದೆಂಬುದಂಬೆಸಸಿಮೆನೆನಿನಗೆಸಿದ್ಧಶೈಲಮನೆತ್ತಿದನಕಯ್ಯೊಳ್ಮ
ರಣಮಕ್ಕುಮೆನೆಸಿದ್ಧನಗಮನೆತ್ತುವಮಹಾಸತ್ವನಾವನುಮಿಲ್ಲದಱಿನೆನಗೆಮರಣ
ಮಿಲ್ಲೆಂದುಹರ್ಷಿತಚಿತ್ತನಾದನೆಂಬುದುಂಲಕ್ಷ್ಮಣದೇವನಿಂತೆಂದಂ ॥

ಕಂ ॥ ಕುಲನಗಮಂನೆಗಪುವದೋ ।
ರ್ವ್ವಲಕ್ಕೆ ನಿರ್ವ್ವಾಣಶೈಲಮೇಗಹನಮದಂ ॥
ಚಲಿಯಿಸುವೆನಚಳವೆಚನಂ ।
ಪಲಾಳಮನ್ವರ್ತ್ಥನಾಮಮಾಯ್ತೆಂಬಿನೆಗಂ ॥ 8

ವ ॥ ಎಂಬುದುಮಮಾತಂಮನದೆಗೊಂಡುಜಾಂಬೂನದನುಂವಿಮಳಬುದ್ಧಿಸುಗ್ರೀವನ
ಳನೀಳಾರ್ಕ್ಕಮಾಲಿಗಳುಂರಹಸ್ಯದಿಂರಾಮಲಕ್ಷ್ಮಣರಂವಿಮಾನಮನೇಱಿಸಿಕೊಂ
ಡುವಿಯನ್ಮಾರ್ಗ್ಗದೊಳ್ಪೋಗಿನಿರ್ವ್ವಾಣನಗಮನೆಯ್ದಿಬಲವಂದರ್ಚ್ಚಿಸೆತದನಂತ
ರಂಸೌಮಿತ್ರಿಸಿದ್ಧಗುಣಸ್ತವನಮಂಮಾಡಿ ॥

ಮ ॥ ಪದಘಾತಕ್ಕೆಧರಿತ್ರಿಬಾಯ್ಬಿಡೆಭುಜಾದಂಡಂಗಳಂಸೋರ್ಚ್ಚಿಬಿ ।
ರ್ಚ್ಚಿದಿಳಾಸಂಧಿಗೆಮೆಯ್ಯೊಣರ್ಚ್ಚಿನೆಲೆಯಿಂದಕ್ಷೋಣಸತ್ವಾಂತಳ ॥
ರ್ಚ್ಚಿದಶಗ್ರೀವನಕಂಠಕಂದಳದಪೇರಂಕೀಳ್ವವೋಲ್ಕಿತ್ತನೆ ।
ತ್ತಿದನೊಟ್ಟಯಿಸ್ಸದರಿಂನರಾರೆನಲುಪೇಂದ್ರಂಸಿದ್ಧಶೈಲೇಂದ್ರಮಂ ॥ 9

ಶಾ ॥ ಆಕುತ್ಕೀಲಮನೊಂದೆದಕ್ಷಿಣಭುಜಂಪೊತ್ತೆತ್ತೆಬಾಹಾಬಲ ।
ಕ್ಕೇಕಚ್ಛತ್ರಮದಾಯ್ತುತತ್ಸಮಯದೊಳ್ದೇವಾನಕಧ್ವಾನಮಾ ॥
ಶಾಕುಂಜೋದರವರ್ತ್ತಿಯಾಯ್ತುಸುಮನೋವರ್ಷಂನವದ್ಭೃಂಗಮಾ ।
ಳಾಕೀರ್ಣ್ಣಂಪೊಸತಾಯ್ತುಸಾಹಸಧನಂಸೌಮಿತ್ರಿಸಾಮಾನ್ಯನೇ ॥ 10

ವ ॥ ಅಂತುಸಿದ್ಧನಗಮನುದ್ಧರಿಸುವುದುಂ ॥

ಕಂ॥ ಗಿರಿನಿರ್ಝರಪ್ರವಾಹಂ ।
ಸುರಿದುದುಭರತತ್ರಿಖಂಡರಾಜ್ಯಾಭಿಷವಂ ॥
ದೊರೆಕೊಂಡಪ್ಪುದುದಶಕಂ ।
ಧರವರ್ಧೆಯಿಂದೆಂದುಮುಂದೆತೋರ್ಪ್ಪಂತಾಗಳ್ ॥ 11

ಹರಿಯಭುಜಬಲಮನೀಕ್ಷಿಪ ।
ಸುರಸಮಿತಿಗೆಪೆಳಗಿದಂತೆಕೈರಿದೀವಿಗೆಯಂ ॥
ಗಿರಿಗುಹೆಯಿಂಫಣಿಮಣಿಭಾ ।
ಸುರಂಗಳತಿಭಯದಿನುದ್ದವೊಗೆದುವುಫಣಿಗಳ್ ॥ 12

ಪೂಮಳೆಯಂತಲ್ಲೊಕ್ಕುವು ।
ಪೂಮರಗಳಪೂಗೆಳಚಲವೊಳಲೆಯಿಂದಾ ॥
ಪೂಮಳೆಯವೊಳಗಿನಂತೆಗು ।
ಹಾಮುಖದಿಂಪೊಣ್ಮಿದತ್ತುಸಿಂಹನಿನಾದಂ ॥ 13

ವ॥ ಆಸಮಯದೊಳ್ ॥

ಕಂ॥ ಸುರಕುಸುಮವೃಷ್ಟಿಸುರತೂ ।
ರ್ಯ್ಯರವಂಸುರಜಯಜಯಸ್ವನಂಕೈಮಿಗೆವಾ ॥
ನರಚಿಹ್ನಪ್ರಮುಖವಿಯ ।
ಚ್ಚರಪತಿಗಳ್ತಮ್ಮಮನದೊಳಚ್ಚರಿವಟ್ಟರ್ ॥ 14

ವ॥ ಅಂತವರತಿವಿಸ್ಮಯಂಬಟ್ಟುರಾಮಲಕ್ಷ್ಮಣರಂಪೂಜಿಸಿಪೊಡವಟ್ಟುಭರತತ್ರಿಖಂಡ
ಮಂಡಲಮಂಬಲಗೊಂಡುವೃಷಭಾದಿತೀರ್ತ್ಥವಂದನಾನಂದಮಂಮನದೆಗೊಂಡು
ಮಗುಳೆಬಂದಾರಾತ್ರಿಯೊಳ್ಕಿಷ್ಕಿಂಧಪುರಮಂಪೊಕ್ಕುವಿಶ್ರಮಿಸಿಮಱುದಿವಸಂ ॥

ಕಂ॥ ಅಮರರ್ಪ್ಪೂಜಿಸಿದಮಹ ।
ತ್ವಮುಮಂಲಕ್ಷ್ಮಣನಸಿದ್ಧಶೈಲೇಂದ್ರಮನ ॥
ಶ್ರಮದಿಂದೆತ್ತಿದಭುಜವೀ ।
ರ್ಯ್ಯಮುಮಂಪೊಗಳುತ್ತುಮಿರ್ಪ್ಪಿನಂಕೆಲರೆಂದರ್ ॥ 15

ಆರಾವಣನುಂಮುನ್ನಂ ।
ತಾರಾದ್ರಿಯನೆತ್ತದಿರ್ದ್ದನೇಭುಜಬಲದಿಂ ॥
ದಾರ್ಧಿಕರೆಂಬುದಂಸಮ ।
ರಾರಂಭದೊಳಲ್ಲದಱಿಯಲೇಂಬಂದಪುದೇ ॥ 16

ವ॥ ಎಂಬುದಂ ॥

ಕಂ॥ ರಾವಣನಗಮಂವಿದ್ಯಾ ।
ದೇವತೆಗಳಬಲದಿನೆತ್ತಿದಂಭುಜಬಲದಿಂ ॥
ದಾವನುಮೆತ್ತಿದನಿಲ್ಲೀ ।
ಭೂವಲ್ಲಭನಂದದಿಂದಮೆಂದರ್ಕ್ಕೆಲಬರ್ ॥ 17

ಕೆಲರೀತಂರಾವಣನಂ ।
ಕಲಹದೊಳಿಱಿದಿಕ್ಕಿಭರತಮಂಡಲಮಂದೋಃ ॥
ರ್ವ್ವಲದಿಂದಮಾಳ್ವನೆಂದ ।
ರ್ಕ್ಕೆಲರಾವಂರಾವಣಂಗಿದಿರ್ಚ್ಚುವನೆಂದರ್ ॥ 18

ವ॥ ಅಂತವರೋರೋರ್ವ್ವರೊಂದೊಂದಂನುಡಿಯುತ್ತುಮೊಡನೆವರೆಸುಗ್ರೀವಾದಿಗಳ್ಬಂ
ದುಪೊಡವಟ್ಟುಕುಳ್ಳಿರ್ಪ್ಪುದುಂಪದ್ಮದೇವನವರಮುಖಪದ್ಮಮಂನೋಡಿ ॥

ಕಂ॥ ಎಡೆವಱಿಯದಿಂನೆವರೆಗಂ ।
ತಡೆದೆಂನಯಮೊಂದೆಸಾಲದೇಜಾನಕಿಯಿ ॥
ರ್ದ್ದೆಡೆಯುಱಿದುಲಂಕೆಗೆತ್ತದೆ ।
ತಡೆಯೆಪರಾಕ್ರಮದಪೇರ್ಮ್ಮೆಪಳಿಗೆಡೆಯಕ್ಕುಂ ॥ 19

ವ॥ ಎನೆಜಾಂಬವನಿಂತೆಂದಂ ॥

ಕಂ॥ ನಯಮಂತಮಗಱಿಪಿದೊಡಂ ।
ನೆಯಮಂಬಿಡದನ್ನರಿಲ್ಲರಾಗಾದಿಗಳೇಂ ॥
ನಿಯತಂಗಳಿಕನ್ನಡಿಯುಂ ।
ಪ್ರಯತ್ನದಿಂಬೆಳಗೆಪತ್ತುವಿಡದೆಕಲುಂಬುಂ ॥ 20

ಅತಿವರ್ತ್ತಿಯಾಗಿದಾನವ ।
ಪತಿಗಱಿಪುವರಿಲ್ಲತಕ್ಕದಂಪರಿಜನದೊಳ್ ॥
ಹಿತನಂಜದೆಪೇಳ್ದಸುಭಾ ।
ಷಿತಮಂಕಯ್ಕೊಳಿಸುಗುಂವಿಭೀಷಣನೆವಲಂ ॥ 21

ಹರಿಣಿ॥ ದನುಜನನುಜಂಶುದ್ಧಾಚಾರಂವಿಚಾರಪರಂಪರಾಂ ।
ಗನೆಯುಮವನೀನಾಥಂತಾರಲ್ಕೆತಕ್ಕುದೆತಕ್ಕುದಂ ॥
ನೆನೆದುಕಳಿಪೆಂದೊಳ್ಪಂಪೇಳ್ದಂಣನಂಜಡಿದಟ್ಟುಗುಂ ।
ಜನಕಸುತೆಯಂವಿಹಾಲಿಂದೈತ್ಯಂವಿಭೀಷಣನೆಂದುದಂ ॥ 22

ಉ ॥ ಅಟ್ಟಲೆವೇಳ್ಪುದೊರ್ಮ್ಮೆಗೆವಿಭೀಷಣನಲ್ಲಿಗೆನಂಮಣ್ಣನ ।
ಟ್ಟಟ್ಟಿಯುಮಾತನಟ್ಟಿದೊಡೆದೇವಿಯನಾತನಮಾತುಗೇಳ್ದುಬಿ ॥
ಟ್ಟಿಟುಗುಮುರ್ಕ್ಕಿಸೊರ್ಕ್ಕಿದಶಕಂಠನುದಂಚಿತಕಂಠನಾಗಿಜಿ ।
ಟ್ಟಿಟ್ಟದೆಪಟ್ಟವೆಟ್ಟನುಸಿರ್ದಟ್ಟಿದೊಡಿರ್ದ್ದಪ್ಪುದಲ್ತೆಕಾಳಗಂ ॥ 23

ಕಂ ॥ ದೂತನನಟ್ಟುವುದೆಂತುಂ ।
ನೀತಿಯೆನಿಜಕುಶಲವಾರ್ತ್ತೆಗೇಳದೊಡಕ್ಕುಂ ॥
ಸೀತಾದೇವಿಗೆಮರಣವ ।
ದೇತೊಡದಳತಿದುಃಖವೇಗದಿಂದಾಗದುದೇಂ ॥ 24

ವ ॥ ಎಂಬುದುಮಾನುಡಿಗೆಮಹೋದಧಿಯೆಂಬವಿದ್ಯಾಧರನಿಂತೆಂದಂ ॥

ಕಂ ॥ ಮಾರುತದಿನಕರಕರಸಂ ।
ಚಾರಕ್ಕಮಗಮ್ಯಮೆಂಬಿನಂವಿದ್ಯಾಪ್ರಾ ॥
ಕಾರಮನೀಗಳೊಡರ್ಚ್ಚಿದ ।
ನಾರಾಕ್ಷಸಪತಿಯಪುರಮನಾವಂಪುಗುವಂ ॥ 25

ವ ॥ ಆದಱಿನೀಗಳಲ್ಲಿರ್ದ್ದವಿದ್ಯಾಧರರೊಳೋರ್ವ್ವರುಂಲಂಕೆಗೆಪೋಗಲುಂಪೋಗಿಕಾರ್ಯ್ಯ
ಮಂತೀರ್ಚ್ಚಿಬರಲುಂಸಮರ್ತ್ಥರಿಲ್ಲೋರ್ವ್ವನತ್ತಲಿರ್ದ್ದನಜೇಯಬಲನಾಂಜನೇಯ
ನದೆಂತೆನೆ ॥

ಮ ॥ ದನುಜಂಮಂನಿಸುವಂವಿಭೀಷಣನುಮಾತಂಗೊಳ್ಳಿದಂಲಂಕೆಯಂ ।
ಘನಬಾಹಾಬಲದಿಂವಿಭೇದಿಸಿಪುಗಲ್ಸಾಮರ್ತ್ಥ್ಯಮುಂಟಂಜನಾ ॥
ತನಯಂಗಾತನೆದೇವಿಯಂಬಿಡಿಸಿತರ್ಕ್ಕಂಕಾದಿತರ್ಕ್ಕಂದಶಾ ।
ನನನೊಟ್ಟಯಿಸ್ಸಿದಸಪ್ಪೊಡೀಕೆಲಸಮಾತಂಗಲ್ಲದೇಂಸಾಧ್ಯಮೋ ॥ 26

ವ ॥ ಎಂಬುದುಮಾನುಡಿಗೆಸಂತೋಷಂಬಟ್ಟುಮಹೋದಧಿಗೆಮೆಚ್ಚುಗೊಟ್ಟುಸುಗ್ರೀವಂ
ಗೃಹಭೂತಿಯೆಂಬದೂತನಂಹನುಮನಲ್ಲಿಗಟ್ಟುವುದುಮಾತಂಗಗನಮಾರ್ಗ್ಗದಿಂಪೋ
ಗಿಹನುಮರದ್ವೀಪಮನೆಯ್ದಿ ॥

ಕಂ ॥ ನಭದಿಂದಮಿಳಿದವಂರಾ ।
ಜಭವನಮಂಪೊಕ್ಕುಪವನಸುತಪಾದನಖ ॥
ಪ್ರಭೆಪಸರಿಸಿತನಗೆಸಿರೋ ।
ವಿಭೂಷಣಶ್ರೀಯನೀಯೆವಿನಮಿತನಾದಂ ॥ 27

ವ ॥ ಆಗನಿಜಾಗಮನವೃತ್ತಾಂತಮನಿಂತೆಂದುಬಿಂನವಿಸಿದಂ। ರಾಮಲಕ್ಷ್ಮಣರ್ದ್ದಂಡಕಾರಣ್ಯಕ್ಕೆ ವಂದುಶಂಭುಕಂಸಾಧಿಸಿದಸೂರ್ಯ್ಯಹಾಸಮಂಕೊಂಡಾತನಂಕೊಂದುದಕ್ಕೆ ಪುಯ್ಯಲ್ಗೆ ವಂದಖರದೂಷಣರನವರಸೇನೆವೆರಸುಕೊಂದುಮಱೆಗೆಬಂದವಿರಾಧಿತನಂಪಾತಾಳಲಂಕೆಯೊಳ್ನಿಲಿಸಿದರೆಂಬುದಂಸುಗ್ರೀವಂಕೇಳ್ದು ॥

ಕಂ ॥ ಇವರತಿಬಳರಿವರಿಂದೆಂ ।
ನವಿಷಾದಂಕಿಡುಗುಮೆಂಬಭರವಸದಿಂಕಂ ॥
ಡವರಂಶರಣಾರ್ತ್ಥಿಯೆನೆಂ ।
ನವಸರಮಂತೀರ್ಚ್ಚಿವೆಂದುಬಿಂನವಿಸುವುದುಂ ॥ 28

ಶರಣಾಗತರಕ್ಷಣತ ।
ತ್ವರರದನೇಗೊಂಡುಕಾದಿಸಾಹಸಗತಿಯುಂ ॥
ಶರಪತಿಯಿನಿಕ್ಕಿಚಿಂತಾ ।
ಜ್ವರಮಂಸುಗ್ರೀವನಂಗದಿಂಪಿಂಗಿಸಿದರ್ ॥ 29

ವ ॥ ಅದಲ್ಲದೆಯುಂ ॥

ಕಂ ॥ ಉದ್ಧರಿಸಿದನಶ್ರಮದಿಂ ।
ಸಿದ್ಧಶಿಲೋಚ್ಚಯಮನೊಂದೆಕರತಲದಿಂದ ॥
ಗೋರ್ವ್ವೀದ್ಧರಣಸಹಿತಮಮರ ।
ಬ್ಬದ್ಧಾಂಜಲಿಯಪ್ಪಿನಂಸುಮಿತ್ರಾಪುತ್ರಂ ॥ 30

ವ ॥ ಎಂದುಬಿಂನವಿಸಿದದೂತನಮಾತಂಕೇಳ್ದು ॥

ಕಂ ॥ ಕಳೆದೆಕ್ಕರದೂಷಣರೆಂ ।
ಬಳಲಂಮಾಯಾವಿಯಪ್ಪಸಾಹಸಗತಿಗಾ ॥
ದಳಿವಳಿಯೆಪೇಗೆವೆಟ್ಟಂ ।
ಮಳೆಯಿಂದಾಱಗಪ್ರೊಲಾಱದಂಪವನಸುತಂ ॥ 31

ಎನಗವರಿಂದಪ್ಪಸುಗ್ರೀ ।
ವನಪಗೆಯಂತೀರ್ಚ್ಚಿಮಾಡಿದುಪಕಾರಕ್ಕೆ ॥
ನ್ನನೆರಾಮಲಕ್ಷ್ಮಣರ್ಗ್ಗೀ ।
ವೆನೆಂದುನಿಶ್ಚೈಸಿದಂಪ್ರಭಂಜನತನಯಂ ॥ 32

ವ ॥ ಆಸಮಯದೊಳಾತನಂತಃಪುರಸೀಮಂತಿನೀಲಲಾಮೆಯಪ್ಪನಂಗಪುಷ್ಪೆಸಹೋದರಪಿತೃವಿಯೋಗೋದ್ವೇಗಮುಮನಾತನನಯನಪುತ್ರಿಕೆಗೆಪದ್ಮರಾಗಮಣಿದರ್ಪ್ಪಣಮೆನಿಪ್ಪಪದ್ಮರಾಗೆನಿಜಜನಕನಪ್ಪಸುಗ್ರೀವನಸಂತೋಷದೊಳಾದಮನೋರಾಗಮು

ಮನಪ್ಪುಕೆಯ್ಯೆಮಱುದಿವಸಂಮಂಗಳಾಭರಣಭೂಷಿತಂಮಣಿಘಂಟಾವಿರಾಜಮಾ
ನಂವಿಮಾನಮನೇಱಿಕಿಷ್ಕಿಂಧಪುರಾಭಿಮುಖನಾಗಿತಳರ್ದುದುಂ ॥

ಕಂ ॥ ಪವನಸುತಸೇನೆನಡೆದುದು ।
ಪವನಪಥಂನೆಱೆಯದೆಂಬಿನಂದೆಸೆಯೆಲ್ಲಂ ॥
ಕಿವಿಶಬ್ದಂಗಿಡೆಕಹಳಾ ।
ರವದಿಂಪಟುಪಟಹಶಂಖಭೇರೀರವದಿಂ ॥ 33

ವ ॥ ಆಸಮಯದೊಳ್ಮರುತ್ಸುತಾಗಮನೋತ್ಸವಕ್ಕೆ ಪುರದೊಳಪ್ಪಶೋಭೆಯಂಮಾಡಿಪ
ರಿಜನಪುರಸ್ಸರಂಸುಗ್ರೀವನಿದಿರ್ಗೊಂಡು ಯಥೋಚಿತಪ್ರತಿಪತ್ತಿಯಿಂಕಾಣಿಸಿಕೊಂ
ಡುರಘುತನೂಜರಾಜಮಂದಿರಕ್ಕೊಡಗೊಂಡುಯ್ವುದುಂ ॥

ಕಂ ॥ ಅತಿವೃತ್ತಾಯತಕರನು ।
ನ್ನತವಂಶಂಭದ್ರಲಕ್ಷಣೋಪೇತಂಮಾ ॥
ರುತಿರಾಮನಸಭೆಗೈರಾ ।
ವತಮಿಂದ್ರನಸಭೆಗೆಬರ್ಪ್ಪಂತೆಱದಿಂಬಂದಂ ॥ 34

ವ ॥ ಅಂತುಬಂದುಪಾಯನಪುರಸ್ಸರಂರಾಮಲಕ್ಷ್ಮಣರಚರಣಕಮಲಂಗಳ್ಗೆಱಗಿನಳನೀ
ಳಾಂಗದವಿರಾಧಿತಪ್ರಮುಖರಂಪ್ರೇಮಾಲಿಂಗನಕ್ಷೇಮವಚನದಿಂಮನ್ನಿಸಿಮಣಿಮ
ಯಾಸನದೊಳ್ಕುಳ್ಳಿರ್ಪುದುಂಜಾಂಬವನಿಂತೆಂದಂ ॥

ಮ ॥ ಕಿರಣಂತೀಕ್ಷ್ಣಕರಂಗೆತೀಕ್ಷ್ಣನಖರಂಸಿಂಹಕ್ಕೆವಜ್ರಾಯುಧಂ ।
ಪುರುಹೂತಂಗುರಿಗಣ್ಮೃಡಂಗೆರದನಂದಿಗ್ದಂತಿಗಾದಂದದಿಂ ॥
ನೆರವಾದಂಪವನಾತ್ಮಜಂಕದನಕೇಳೀಕರ್ಕಶಂರಾಮದೋಃ ।
ಪರಿಘಕ್ಕಾಂಡಿಗೆಸಾಧ್ಯಮಾದುದೆವಲಂಷಟ್ಖಂಡಭೂಮಂಡಲಂ ॥ 35

ಕಂ ॥ ಈಬಲ್ಲಾಳ್ಗಳುಮನೆಬಾ ।
ಹಾಬಲದಿಂನಡೆದುದಿಂನೆಗಂದಶಕಂಠಂ ॥
ಗಾಬಿಂಕೆಮುಮಾಬೀರಮು ।
ಮಾಬಿರುದುಮವಂಗೆನಡೆಯಲಿಂನೆಱದಪುದೇ ॥ 36

ವ ॥ ಎಂಬುದುಮಾಸಮಯದೊಳ್ಸುಗ್ರೀವಂಪವಮಾನಸೂನುಗಿಂತೆಂದಂ ॥

ಉ ॥ ಆನತನಲ್ಲದಂಗೆಪದುಳಂನಿಲವಿಲ್ಲನಿಜಾನ್ವಯಾಗತ ।
ಸ್ಥಾನದೊಳಾನತಂಗೆಭಯಮಿಲ್ಲಜಗತ್ರಯಮಾಂತೊಡಂಜಯ ॥
ಶ್ರೀನಿಳಯರ್ಸ್ಸಹಾಯಮನಪೇಕ್ಷಿಸರುಗ್ರಮಜೇಯರುದ್ಧತ ।
ವ್ಯಾಮಾನಧನರ್ಮ್ಮಹಾಮಹಿಮರಿಂತಿವರೀರ್ವ್ವರೆರಾಮಲಕ್ಷ್ಮಣರ್ ॥ 37

ವ ॥ ಈಮಹಾನುಭಾವರಪ್ರೌಢಿಮೆಯುಂಸೀತಾಸ್ವಯಂವರದೊಳ್ದೇವತಾಧಿಷ್ಠಿತಂಗಳ
ಪ್ಪವಜ್ರಾವರ್ತಸಾಗರಾವರ್ತಮೆಂಬಚಾಪರತ್ನಂಗಳುಮಂಹಲಾಯುಧಗದಾ
ಯುಧಂಗಳುಮಂನಾಗವಿದ್ಯೆಗಳ್ವೆರಸುಗೆಲ್ದುಕೊಂಡರತಿಪ್ರಚಂಡರದಲ್ಲದೆಯುಂ ॥

ಕಂ ॥ ಕಾರಣಪುರುಷರಿವರ್ಸ್ವ |
ಧಾರಣದವರಲ್ಲರಿಕ್ಕಿಸಾಹಸಗತಿಯಂ ॥
ಮಾರುತಿಶರಹತಿಯಿನಸಾ |
ಧಾರಣಮುಪ್ಪೆನ್ನಭಂಗಮೆಂಪಿಂಗಿಸಿದರ್ ॥ 38

ವ ॥ ಎಂಬುದುಮದಕ್ಕೆಹರ್ಷಿತಚಿತ್ತಂಮರುತ್ತನಯಂರಾಮಚಂದ್ರಂಗೆಮುಕುಳಿತಾಂ
ಜಲಿಯಾಗಿದೇವಭವಜ್ಜನ್ಮಮಖಿಲಜಗದುಪಕಾರನಿಮಿತ್ತಮಾದುದದುಕಾರಣದಿಂ ॥

ಕಂ ॥ ಎಮಗುಚಿತಂನಿಜಸೇವಾ |
ಪ್ರಮೋದವಧಿರಾಜಪಂಚಭೂತಂಗಳ್ಗಂ ॥
ನಿಮಗಂಪ್ರತ್ಯುಪಕಾರ |
ಕ್ಷಮರಾರ್ದ್ರೋಹಿಗಳೆಳಂಬಿಕಾಸ್ತನ್ಯಕ್ಕಂ ॥ 39

ವ ॥ ಎಂದುಬಿಂನವಿಸೆ ॥

ಕಂ ॥ ಧೀರಪ್ರಕೃತಿಗೆಸಾಮ್ರಾ |
ಕಾರಕ್ಕನುಗುಣಮೆನಿಪ್ಪನಯವಿನಯವಚ ॥
ಸ್ಸಾರತೆಗೆಮೆಚ್ಚಿರಘುಕುಲ |
ವೀರಂಕಾರುಣ್ಯದೃಷ್ಟಿಯಿಂದೀಕ್ಷಿಸಿದಂ ॥ 40

ಅಪರಿಮಿತಮೆನಿಪಕಾರು |
ಣ್ಯಾಪಯಸ್ಸಾಗರಸಮುದ್ಭವಂಗಳನಿತ್ತಂ ॥
ನೃಪರತ್ನಂಭಟರತ್ನಂ |
ಗಪೂರ್ವಮಂರತ್ನಕರ್ಣಕುಂಡಲಯುಗಮಂ ॥ 41

ವ ॥ ಅಂತುಮೆಚ್ಚಿಂಗುಡುವುದುಮನಂತರಂಮಹೋದಧಿವೆಸರವಿದ್ಯಾಧರನಿಂತೆಂದಂ ॥

ಕಂ ॥ ನೀನಿಲ್ಲದಿನಿಬರುಂಲಂ |
ಕಾನಗರಿಗೆಪೋಗಿನುಡಿದುದಶಕಂಧರನೊ ॥
ಳ್ಜಾನಕಿಯಸುದ್ದಿಯಂಪವ |
ಮಾನಜತಪ್ಪೆಸಕಮಿಲ್ಲದೋಸರಿಸಿದ್ದರ್ ॥ 42

ವ ॥ ಎನೆಮನದೆಗೊಂಡುಮಾರುತಿಮೇಘರುತಿಯಿನುದಾತ್ತರಾಘವಂಗೆಮುಕುಳಿತಕರಸ
ರೋಜನಾಗಿ ॥

ಮ ॥ ನಯದಿಂತಂದಪೆನೆಂತುಮಿೞಾಯದೊಡೆಬಲ್ಪಿಂತಂದಪೆಂದೇವರೇ ।
ವಿಯನಂತಲ್ಲದೆನೋಡಿಬರ್ಪ್ಪುದೆನೆಮಾಯಾರೂಪದಿಂಪೋಗಿಸು ॥
ಬ್ಧಿಯನಾಂತರ್ಪ್ಪವನಲ್ಲೆನಾನೆಕೊಳನಂಪೊಕ್ಕಂತೆವ್ರೇಲ್ಮಾಡಿಲಂ ।
ಕೆಯುಮಂದೈತ್ಯನುಮಂಭಯಂಗೊಳಿಸಿತರ್ಪ್ಪೆಂಜಾನಕೀಸುದ್ದಿಯಂ ॥ 43

ಮ॥ಸ್ರ॥ತ್ರಿದಶೇಂದ್ರಾರಾತಿದೈತ್ಯಂಧರೆಯನೆರಸೆಗಂದುಯ್ಯೆಕೇಳ್ದಾದಕಾಯ್ಪಿಂ ।
ಕದನಕ್ರೀಡಾನುರಕ್ತಂಮುರರಿಪುಪಗೆಯಂಕೊಂದುಭೂಕಾಂತೆಯಂಸಂ ॥
ಮುದದಿಂತರ್ಪ್ಪಂತೆಲಂಕೇಶ್ವರನನಮರವಿದ್ವಿಷ್ಟನಂಕೋಪದಿಂದೋ ।
ವದೆಕೊಂದಾಂತಂದಪೆಂದೇವಿಯನೆನಗರಿದೇದೇವಪೇಳೆಂನನೀಗಳ್ ॥ 44

ವ ॥ ಎಂದುಪೂಣ್ದುನುಡಿದಂಜನಾಸುತಂಗೆರಘುವೀರನಿಂತೆಂದಂ ॥

ಕಂ ॥ ಜನಕಜೆಯಸುದ್ದಿಯಂತ ।
ರ್ಪ್ಪನಿಯೋಗಂನಿನಗೆಮೊನೆಯೊಳಾಂತಂದುದಶಾ ॥
ಸ್ಯನನಿಕ್ಕಿದೇವಿಯಂತ ।
ರ್ಪ್ಪನಿಯೋಗಂಲಕ್ಷ್ಮಣಂಗೆಪುದುಪೆಱರ್ಗ್ಗುಂಟೇ ॥ 45

ವ ॥ ಎಂದುನಿಯಮಿಸಿನುಡಿದು ॥

ಚ ॥ ಅಱಿಪುವರಿಲ್ಲತಂನಕೆಲದೊಳ್ಮಱೆದಪ್ಪೊಡಮೆಂನಗಲ್ಕೆಗಂ ।
ಡೞಿಯದವಳ್ಭಯಾಕುಳತೆಯಿಂದಸುವಂಬಿಡುವಂತುಟಪ್ಪುದೇ ॥
ಸಱಿನೊಳಕೊಳ್ಗುಮಂತೆಸಗದಂಶಿರೆಮಾಳ್ಪುದುಸೀತೆದೇಹಮಂ ।
ತೊಱೆದಬಳಿಕ್ಕೆರಕ್ಕಸನನಿಕ್ಕಿದೊಡಿಕ್ಕಿದಲೆಕ್ಕಮಕ್ಕುಮೇ ॥ 46

ವ ॥ ಎಂದುರಘುವೀರನಣುವಂಗೆಜಾನಕಿಯತಂನಕುರುಪಿನಪೆಱುರ್ವಿಂನಾಣಂಗಳನಱಿಪಿ ॥

ಕಂ ॥ ಜನಕಜೆಯವದನಸರಸಿಜ ।
ಮನಲರ್ಚ್ಚಲ್ವಿರಹಖೇದಮಂಕಳೆಯಲ್ಕಾ ॥
ಹನುಮಂನಕಯ್ಯೊಳ್ರಘುನಂ ।
ದನನಿತ್ತನುದಂಶುಮಾಲಿರವಿಮಂಡಲಮಂ ॥ 47

ವ ॥ ಅಂತಿತ್ತುತನಗಾಕೆಯಚೂಡಾಮಣಿಯಂತರ್ಪ್ಪುದೆಂದುಪೆಸಸೆಮಹಾಪ್ರಸಾದಮಂ
ದಾಕ್ಷಿಣದೊಳೆಬಲಾಚ್ಯುತರಪದಂಗಳಂಬೀಳ್ಕೊಂಡತಿಪ್ರಬಲಬಲಸಮನ್ವಿತಂವಿ
ಮಾನಾರೂಢಂಪವಮಾನಸೂನುಪವನಪಥಕ್ಕೆನೆಗೆದುಪೋಗುತ್ತುಂಮಹೇಂದ್ರಾಚ
ಲಮಧ್ಯದೊಳನತಿಶಯಮಾಗಿರ್ದ್ದಪುರಮಂಕಂಡು ॥

ಕಂ ॥ ಈಕ್ಷಣಸುಖಮಯಮಿದುಜ ।
ನ್ಮಕ್ಷೇತ್ರಂಗಡಮಹೇಂದ್ರಪುರಮೆನಗೀತುಂ ॥
ಗಕ್ಷೋಣೀಧರಸಾನುಸ ।
ಮಕ್ಷದಪಲ್ಯಂಕಗುಹೆಯೊಳೆಂಮಬ್ಬೆಗಡಂ ॥ 48

ಎನ್ನಂಪಡೆದಳ್ಗಡತಾ ।
ಯುಂನಡಪಿದರಮಿತಗತಿಗಳೆಂಬತಪಸ್ಸಂ ॥
ಪಂನರ್ಬ್ಬಾರಣಋಷಿಯು ।
ರ್ಮ್ಮಂನಱಿಪಿದಳೆನಗೆಜನನಿಪರಿವಿಡಿಯಿಂದಂ ॥ 49

ವ ॥ ಈ ಮಹೇಂದ್ರಪುರಮನಾಳ್ವೆಂಮಪುತ್ತ್ರಂಮುಂಮದೀಯಮಾತೆಯುಂಗರ್ಭ್ಭದೊ
ಳಾನಿರ್ಪ್ಪುದುಮೆಂನತಾಯ್ವಿರತ್ತೆಯುಂಮಾವನುಂ ॥

ಕಂ ॥ ಇಲ್ಲದದೋಷಮನಿಟ್ಟಱಿ ।
ವಿಲ್ಲದೆಪೊಱಮಡಿಸಿಕಳೆಯೆಶರಣಿಲ್ಲದೆತಂ ॥
ನಲ್ಲಿಗೆವರೆತಾನುಂಕೃಪೆ ।
ಯಿಲ್ಲದೆನಿರ್ಬ್ಬುದ್ಧಿಪೊರ್ದ್ದಲೀಯದೆಕಳೆದಂ ॥ 50

ವ ॥ ಎಂದುಕಡುಮುಳಿದು ॥

ಕಂ ॥ ರಣಪಟಹರವಂದಿಗ್ವಾ ।
ರಣಕರ್ಣ್ಣಾಭ್ಯರ್ಣ್ಣಮಂಪಳಂಚಲೆಯೆಸಮೀರಾ ॥
ರಣತನಯನಪ್ರಮಿತಭೀ ।
ಷಣಸೈನ್ಯಂಸುತ್ತಿಮುತ್ತಿದಂತತ್ಪುರಮಂ ॥ 51

ವ ॥ ಆಗಳಾಕಳಕಳಂಶ್ರುತಿಪಥಮನೆಯ್ದೆಘನರವಕ್ಕೆಗರ್ಜ್ಜಿಸಿಗುಹೆಯಿಂಪೊಱಮಡುವ
ಮೃಗೇಂದ್ರನಂತೆಮಹೇಂದ್ರಪುರಮಂಪೊಱಮಟ್ಟುಮಱುವಕ್ಕಮನಿಕ್ಕುವತಕ್ಕಾ
ಮಿಕ್ಕುಬರೆಕಡಂಗಿಕಾದುವಲ್ಲಿಮಾರುತಿಯವಾಹಿನಿಗೆಮಹೇಂದ್ರವಾಹಿನಿಪೇಸಗೆಯು
ವಾಹಿನಿಯಂತೊಳಸಾರ್ವ್ವುದು ಮದಂಪ್ರಸನ್ನಕೀರ್ತ್ತಿಕಂಡುಕದನಕೇಳಿಗತಿವ
ರ್ತ್ತಿಯಾಗಿತಾಗುವದುಂ ॥

ಕಂ ॥ ತೇರಳ್ಗಂಮುಱಿಯೆಳ್ಗಂ ।
ಕೂರಂಬಿಂಬಿಲ್ಲದೊಣೆಯುಮಂಪರಿಯೆಳ್ಗಂ ॥
ಸಾರಥಿಯಂಕಿಡೆಯೆಳ್ಗಂ ।
ಮಾರುತಿಯಸರಕ್ಕೆತಕ್ಕುಗಿಡದವನಾವಂ ॥ 52

ವ || ಅಂತು ವಿರಥನಾಗಿ ಮತ್ತಂಪ್ರಸಂನಕೀರ್ತ್ತಿಮಾನಗರ್ವ್ವದಿಂವಿಮಾನಾರೂಢಂರಣ
ಕ್ರೀಡೆಗೊಡರಿಸುವುದುಂ ಶ್ರೀಶೈಳಂತದ್ವಿಮಾನಮಂಛಾಯಾಗ್ರಹಣಂಗೆಯ್ಯೆನೆಲಕ್ಕ
ವರ್ಪ್ಪುದುಂಪ್ರಸನ್ನಕೀರ್ತ್ತಿಯಂಪಿಡಿಯೆಮಹೇಂದ್ರನುಮದಂಕಂಡುಕಡುಕೆಯ್ದು
ಚಿಂತ್ಯಯುದ್ಧಂಗೆಯ್ದೊಡಾತನುಮಂಪಿಡಿದುನಿಜವಿಜಯಸಿಬಿರಕ್ಕೊಯ್ದುಮಂ
ನಿಸಿ ||

ಕಂ || ವಿನಯದಿನೆಱಗಿಮೃಗೇಂದ್ರಾ |
ಸನಮಂಕೊಟ್ಟಂಮನಿಂಮನೊಂಮನೆನಾನಂ ||
ಜನೆಗಂಪ್ರಭಂಜನಂಗಂ |
ಜನಿಯಿಸಿದೆಂಹನುಮನೆಂಬನೆಂದಱಿಪುವುದುಂ || 53

ವ || ಅದಂಕೇಳಲೊಡಮಾನಂದಜಲಲುಳಿತಲೋಚನನತಿಪ್ರಮೋದಪುಳಕಮಂತಳೆದು
ಮಹೇಂದ್ರನಿಂದ್ರಪದವಿದೊರೆಕೊಂಡಂತೆ ಸಂತುಷ್ಟಚಿತ್ತನಾಗಿ ಕಿಱಿದುಬೇಗಮಿ
ರ್ದ್ದನಿಂನ ಪುರುಷಾಕಾರಮುಂಮನೋಹರಾಕಾರಮುಮಾರ್ಯ್ಯವೀರ್ಯ್ಯ
ಮುಮಿಂನೆವರಂ ಶ್ರವಣಭೂಷಣಮಾಗಿರ್ದ್ದುವೀಗಳೆಮಗೆಪ್ರತ್ಯಕ್ಷಮಾದುವೆಂದು
ಪೊಗಳ್ದುಪಲತೆಱದಿಂಪರಸಿದಮಾತಾಮಹಂಗೆಮಾರುತಿಕೈಗಳಂಮುಗಿದು ||

ಕಂ || ಕಿಱುಗೂಸುತನದೊಳಾಜಿಯೊ |
ಳೆಱಿಯುಮೆಯಿಂದಾನೊಡಚ್ಚಿರ್ದೆಂಕ್ಷಮಿಯಿಪುದೆಂ ||
ದೆಱಗಿದನೆಱುವಂಗುಣಮಂ |
ಮೆಱೆವಂಗದುವಿನಯಮೊಂದೆಭೂಷಣಮಲ್ತೇ || 54

ವ || ಅಂತುವಿನಯವಿನಮಿತನಾಗಿ ನಿಂಮಡಿಯನಂಮಕಪಿಧ್ವಜಕುಲಕ್ಕೆಪರೋಪಕಾರ
ಮಂಮಾಡಿದರಘುವೀರನಬೆಸದಿಂಲಂಕೆಗೆಪೋದಪ್ಪೆನಾಂಬರ್ಪ್ಪನ್ನಂನೀಮುಂಕಿಷ್ಕಿಂ
ಧಪುರಕ್ಕೆಪೋಗಿರಾಮಲಕ್ಷ್ಮಣರ ಚರಣಸೇವಾನುಗ್ರಹಮಂಪಡೆದುಸುಗ್ರೀವಾದಿಗ
ಳೊಳ್ಕೂಡಿಸುಖಮಿರ್ಪ್ಪುದೆಂದುನಿಯಮಿಸಿಮಾರುತಿಮಾರುತವೇಗದಿಂಮಾರುತ
ಪಥಕ್ಕೆನೆಗೆದು ತೆಂಕಮೊಗದೆಪಯಣಂಪೋಪುದುಮಿತ್ತ ಮಹೇಂದ್ರಂ ಪ್ರಸನ್ನಕೀ
ರ್ತ್ತಿವೆರಸುಹನುಮದ್ದ್ವೀಪಕ್ಕೆಪೋಗಿಹನುಮನರಮನೆಯಂಪುಗುವುದುಂ ||

ಕಂ || ಅಂಜನೆಗಳಂಬಮಾಯ್ತುಮು |
ದಂಜನನೀಜನಕಬಂಧುಜನದರ್ಶನದಿಂ ||
ದಂಜನೆಯಂಕಂಡತಿಹ |
ರ್ಷಂಜನಿಯಿಸಿದತ್ತುಮಾತೃಪಿತೃಬಂಧುಗಳೊಳ್ || 55

ವ || ಅಂತುಪರಸ್ಪರಕ್ಷೇಮಕುಶಲಭಾಷಾಪುರಸ್ಸರಂ ||

ಕಂ ॥ ಅಮರ್ದಪ್ಪೈಹರುಷಪುಳಕೋ ।
ದ್ಗಮಮುಮರ್ಗ್ಗಾದತ್ತುಕಡವರಲ್ಲುದೆನಲ್ಕಿ ॥
ತ್ರಮದೇಹಿಗಿಷ್ಟಸಂಯೋ ।
ಗಮನಿಷ್ಟವಿಯೋಗಮೆರಡೆಸುಖಜನಕಂಗಳ್ ॥ 56

ವ ॥ ಅಂತುಸಂತುಷ್ಟಚಿತ್ತರಾಗಿಮಹೇಂದ್ರಪ್ರಸಂನಕೀರ್ತ್ತಿಗಳ್ಕಿಷ್ಕಿಂಧಪುರಕ್ಕೆಪೋಗಿ
ಬಲನಾರಾಯಣರಂ ಕಂಡಾಳ್ತನಮಂಕಯ್ಕೊಂಡುಕಪಿಧ್ವಜರೊಳ್ಕೂಡಿಸುಖದಿನಿ
ರ್ದ್ದರಿತ್ತಲಾಕಾಶಮಾರ್ಗ್ಗದೊಳ್ಪೋಗುತ್ತುಂ ॥

ಕಂ ॥ ಅಧರಿತಕನಕಾಚಲಮಂ ।
ವಿಧುರವಿಮಂಡಲವಿಡಂಬಿಕೂಟಮನಾಶಾ ॥
ವಧಿವಿಶ್ರುತಮಂಭೋಂಕನೆ ।
ದಧಿಮುಖಪರ್ವ್ವತಮನಾಂಜನೇಯಂಕಂಡಂ ॥ 57

ಮ ॥ ಪ್ರತಿಮಾಯೋಗನಿಯುಕ್ತರೆಂಟುದಿವಸಂಕಯ್ಯೆತ್ತೆವೆಂದಿರ್ದ್ದರ ।
ಪ್ರತಿಮಲ್ಲರ್ಚ್ಚಾರಣರಾನಗೋಪರಿಮದೊಳ್ತತ್ಪಾರ್ಶ್ವದೊಳ್ಮೂವರ ॥
ಪ್ರತಿರೂಪಾನ್ವಿತೆಯರ್ಸ್ಸಿತಾಂಶುಕೆಯರಿರ್ದ್ದರ್ಕ್ಕಂನೆಯರ್ಕ್ಕಳ್ಮಧು ।
ವ್ರತಮಾಳಾಯತವೇಣಿಗಳ್ಜಪಿಯಿಸುತ್ತುಂದಿವ್ಯಮಂತ್ರಂಗಳಂ ॥ 58

ವ ॥ ಆಸಮಯದೊಳ್ಲಯಸಮಯದಕೇಸರಿಯಮಸಕಮನಪ್ಪುಕೆಯ್ದು ॥

ಕಂ ॥ ಚಾರಣಯುಗಳಮುಮಂಕ ।
ನ್ಯಾರತ್ನಂಗಳುಮನಳುರ್ದ್ದುಸುಡಲೊಡರಿಪುದಂ ॥
ದಾರುಣದಾವಾನಲನಂ ।
ಮಾರುತಿಜಲವರ್ಷ್ಷವಿದ್ಯೆಯಿಂಮಗ್ಗಿಸಿದಂ ॥ 59

ವ ॥ ಆಮಹೋಪಸರ್ಗ್ಗಮಂಪಿಂಗಿಸಿ ॥

ಮಾಲಿನಿ॥ ಯತಿಪತಿಗಳಪಾದಾಂಭೋಜಮಂಭಕ್ತಿಯಿಂದಂ ।
ಸತತಗತಿತನೂಜಂಪೂಜಿಸುತ್ತಿರ್ದ್ದನಾಗಳ್ ॥
ಶ್ರುತನಿಯಮನಿಯುಕ್ತಾಚಾರೆಯರ್ದ್ದಿವ್ಯಯೋಗಿ ।
ದ್ವಿತಯಚರಣಪೂಜಾನಂತರಂಕಂನೆಯರ್ಕ್ಕಳ್ ॥ 60

ವ ॥ ಮಾರುತಿಯಮುಖಾರವಿಂದಮಂನೋಡಿಮಹಾಮಹಿಮನೀಂಬಂದೆಮಗಮೀಮಹಾ
ತಪೋಧನರ್ಗ್ಗಂಸಮನಿಸಿದಮಹೋಪಸರ್ಗ್ಗಮನಪಹರಿಸಿ ಮಹೋಪಕಾರಮಂ
ಮಾಡಿದೆಯೆಂದುಸಂಸ್ತವನಪೂರ್ವ್ವಕಂಮುಕುಳಿತಾಂಜಲಿಗಳಾಗಿರ್ಪ್ಪುದುಂ ॥

ಕಂ ॥ ಈರೌದ್ರಾಟವಿಯೊಳಿದೇ ।
ಕಾರಣದಿಂದಿರ್ದ್ದರೆಂದುವಿಸ್ಮಿತಚಿತ್ತಂ ॥
ಮಾರುತಿಬೆಸಗೊಂಡಂಕ ।
ನ್ಯಾರತ್ನಂಗಳನಪಾರಕಾರುಣ್ಯರಸಂ ॥ 61

ವ ॥ ಅಂತುಬೆಸಗೊಳ್ವುದುಂ ॥

ಕಂ ॥ ಅನವದ್ಯಚರಿತನೆಂದಱಿ ।
ದನಿಬರಕಡೆವುಟ್ಟಿದಾಕೆಹನುಮಂಗಸ್ಮ ॥
ಜ್ಜನಕಂದಧಿಮುಖನಗರೀ ।
ಜನಪತಿಗಂಧರ್ವ್ವನೆಂಬನಂಬರಗಮನಂ ॥ 62

ವ ॥ ಎಂಮಪೆಸರ್ಚ್ಚಿತ್ರಲೇಖೆಯುಂವಿದ್ಯುತ್ಪ್ರಭೆಯುಂತರಂಗಮಾಲೆಯುಮೆಂಬುದೆಂ ಮನೆಮ್ಮಮ್ಮಂವಿಜಯಾರ್ದ್ಧನಗನಿವಾಸಿಗಳಪ್ಪವಿದ್ಯಾಧರರ್ಮ್ಮೊದಲಾಗೆಪಲಬ ರ್ಬ್ಬೇಡೆಯುಂಕುಡದಿರ್ಪ್ಪುದುಮಂಗಾರವೇಗನೆಂಬವಿದ್ಯಾಧರನತ್ಯಾಗ್ರಹಂಗೆಯ್ದು ಬೇಡುವುದುಮಾತನುಮನುದಾಸೀನಂಗೆಯ್ದೊಂದುಜಿನಭವನಕ್ಕೆಪೋಗಿ ॥

ಕಂ ॥ ಅನುರೂಪನಪ್ಪವರನಾ ।
ವನಪ್ಪನಸ್ಮತ್ತನೂಜೆಯರ್ಗ್ಗೆಂದಷ್ಟಾಂ ॥
ಗನಿಮಿತ್ತಮನಱಿವಮಹಾ ।
ಮುನಿಯುಂಬೆಸಗೊಂಡನೆಂಮಪಿತೃವೊಂದುದಿನಂ ॥ 63

ವ ॥ ಅಂತುಬೆಸಗೊಳ್ವುದುಮವರಿಂತೆಂದುಬೆಸಸಿದರುತ್ತರಶ್ರೇಣಿಗೆಪ್ರಧಾನನಪ್ಪಸಾಹಂ ಗತಿಯಂಕೊಂದಾತಂನಿನ್ನಮಕ್ಕಳ್ಗೆಭರ್ತ್ತಾರನಕ್ಕುಮೆನೆಮನದೆಗೊಂಡುಸಂತೋ ಷಂಬಟ್ಟೊಸೆದಿರ್ದ್ದನಾಮುಮೀಮಹಾವಿಪಿನದೊಳ್ಮನೋವೇಗವೆಂಬವಿದ್ಯೆಯಂಸಾ ಧಿಸುತ್ತುಂದ್ವಾದಶವರುಷಮಿಲ್ಲಿರ್ದ್ದುವೆಱಗಾಱುವರುಷದಿಂದಾವಿದ್ಯೆಯಂಸಾಧಿಸಿದೆ ವೆಂಮಂಪೇೞಿಪಡೆಯದಂದಿನಂಗಾರವೇಗಂಮಹೋಪಸರ್ಗ್ಗಮಂಮಾಡಿದನೆಂದುವೇ ಳೆಕೇಳ್ದು ॥

ಕಂ ॥ ಅತಿಬಲನನಿಕ್ಕಿಸಾಹಸ ।
ಗತಿಯಂಕಿಷ್ಕಿಂಧಪುರದೊಳಿರ್ದ್ದಪನತ್ಯೂ ॥
ರ್ಜ್ಜಿತತೇಜಂರಾಘವನೆಂ ।
ದತರ್ಕ್ಯಬಲನಱಿಪಿಪವನತನಯಂಪೋದಂ ॥ 64

ವ ॥ ಇತ್ತಗಂಧರ್ವ್ವಂನಿಜತನೂಜೆಯರ್ಸ್ಸಿದ್ಧವಿದ್ಯೆಯರಾದುದನಱಿದುಸಂತುಷ್ಟಚಿತ್ತ ನಾಗಿತಂಮಲ್ಲಿಗೆವರ್ಪ್ಪುದಂಕಂನೆಯರ್ಕ್ಕಂಡಿದಿರ್ಗ್ಗೊಂಡು ॥

ಕಂ॥ ಚಳದಳಕತವಮಾಳದಳಂ ।
ಚಳನಾಶೋಕಪ್ರವಾಳದೊಳ್ಪ್ವಂಜಿಸೆಕೋ ॥
ಮಳೆಯರ್ವ್ವಿದ್ಯಾಧರಕುಲ ।
ತಿಳಕಂಗೆಶಿಭಕ್ತಿಭರದಿನಾನತರಾದರ್ ॥ 65

ವ॥ ಅಂತುವಿನಮಿತರಾಗಿ ॥

ಮ॥ ಸುತೆಯರ್ಮ್ಮಾರುತಿಪೇಳ್ದುದಂತನಗೆಪೇಳಲ್ಕೇಳ್ದುಗಂಧರ್ವ್ವರಾ ।
ಜತನೂಜಂನಿಜಸೈನಿಕಂಬೆರಸುಕಿಷ್ಕಿಧಕ್ಕೆಬಂದಿತ್ತುತ ॥
ತ್ಸುತೆಯುಮೂರ್ಮ್ಮಾವರುಮಂಪ್ರಶಸ್ತದಿನದೊಳ್ರಾಮಂಗೆಪೊಣ್ಮಾಳ್ದತ್ತನ ।
ಕ್ಕತಿಹರುಷಂಸುಖಮಿರ್ದ್ದನತ್ತಲಱಿವಂಪೋದಂವಿಯನ್ಮಾರ್ಗ್ಗದೊಳ್ ॥ 66

ವ॥ ಅಂತುಪೋಗಿಲಂಕಾಪುರದಬಹಿಃಪುರದೊಳ್ಬೀಡಂಬಿಟ್ಟುಮಱುದಿವಸಂಪುರಮಂಪೊ
ಗುವಸಮಯದೊಳ್ ॥

ಮ॥ ಗೆಲವಂತಿಕ್ಕಿರ್ಮವಾಯುಪುತ್ರನಬಲಕ್ಕಂಕೋಂಟೆವಿದ್ಯಾತ್ಮಕಂ ।
ಸಲವಿಲ್ಲಾದುದಲೋಕದಂತದಱಮೇಲಿರ್ದ್ದಗ್ರಕಾಳೋರಗಾ ॥
ವಲಿಭೂತಾವಳಿರೌದ್ರಸತ್ವನಿವಹಂಲೋಕಾದ್ಭುತಂನಾಡೆನೋ ।
ಡಲಗುರ್ವ್ವಾದುದುತದ್ವಿಭೀಷಣಕೃತಂದುರ್ವ್ವಾರವೈಕುರ್ವ್ವಣಂ ॥ 67

ವ॥ ಅಗಳದಱಸ್ವರೂಪಮೆಲ್ಲಮಂಪೃಥುಮತಿವೆಸೆರಮಂತ್ರಿಬಿಂನವಿಸೆಮರುನ್ನಂದನಂನೆ
ಱಿಯೆಕೇಳ್ದುಕಲುಷವಶಗತನಾಗಿವಿಮಾನದಿನವನಿಗವತರಿಸಿ ॥

ಕಂ॥ ಎನಗೀಪ್ರಾಕಾರವಿಭೇ ।
ದನಮಾವುದುಗಹನಮೆಂದುಕೋಪಾರುಣಲೋ ॥
ಚನನನಿಲಸುತಂತೊಟ್ಟಂ ।
ತನುತ್ರಮಂವಜ್ರಮಯಮನಪ್ರತಿಹತಮಂ ॥ 68

ವ॥ ಅಂತುದಿವ್ಯವಜ್ರಕವಚಮಂತೊಟ್ಟು ॥

ಕಂ॥ ವಿಧಿಪೂರ್ವ್ವಕಮಾತ್ಮಗದಾ ।
ಯುಧಮಂದೈವಿಕಮನೆತ್ತಿಹನುಮಂವಜ್ರಾ ॥
ಯುಧದಿಂದಿವಿಜೇಂದ್ರಂಕುಲ ।
ಕುಧರಂಗಳನಳಱಿಪೊಯ್ವತೆಱದಿಂಪೊಯ್ದಂ ॥ 69

ವ॥ ಅಂತುಪೊಯ್ದುವಿದ್ಯಾಪ್ರಾಕಾರಮನೊಡೆವುದುಂ ॥

ಕಂ ॥ ದ್ವಾರನಿಯುಕ್ತಂರೌದ್ರಾ ।
ಕಾರಮೆನಲ್ವಜ್ರಮುಖನುಮೆಯ್ತರೆಸೆರಗಂ ॥
ಪಾರದೆತಾಗಿದೊಡವನಂ ।
ಮಾರುತಿನಿಮಿಷಕ್ಕೆತೂಂತಿದಂಯಮಮುಖದೊಳ್ ॥ 70

ವ ॥ ಅದಂತದಾತ್ಮಜೆಯಪ್ಪಲಂಕಾಸುಂದರಿಭೋಂಕನೆಕಂಡುಕಡುಮುಳಿದು ॥

ಚ ॥ ಜನಕನನಿಕ್ಕಿದುದ್ಧತನನಿಕ್ಕುವೆನೆಂದುಕಡಂಗಿಬಂದುಭೋಂ ।
ಕನೆಚರಮಾಂಗನಂಪವನಸೂನುವನೀಕ್ಷಿಸಿಕಂಣಸೋಲಮಾ ॥
ರ್ದ್ಗನುವಿಸೆಶೋಕಮುಂಮುಳಿಸುಮುಂಮುಱಿದೆಂನುಮನೆಂನವಿದ್ಯೆಯು ।
ಳ್ಗನಿತುಮನಿತ್ತೆನೆಂದುಪಟದೊಳ್ಬರೆದೆಚ್ಚಳವಳ್ಪತಾಕೆಯಂ ॥ 71

ವ ॥ ಅಂತಿಸುವುದುಂ ॥

ಕಂ ॥ ಬಱಿಸಿಲೇಖಾರ್ತ್ಥಮನವ ।
ಧಾರಿಸಿತಾನುಂಮರಲ್ದುಕಂನೆಯಸಾಮ್ರ್ಯಾ ॥
ಕಾರಕ್ಕೆರಣಾಜಿರದೊಳ್ ।
ವೀರಶ್ರೀಯೊಡನೆಮದುವೆನಿಂದಂಹನುಮಂ ॥ 72

ವ ॥ ಅಂತು ನಿರತಿಶಯಮಪ್ಪ ಸುರೂಪಸಂಪಂನೆಯಂಲಂಕೆಯೆಂಬಕಂನೆಯಂಮದುವೆ
ನಿಂದು ॥

ಕಂ ॥ ಪವಮಾನಸುತಂಸಂಭಿಂ ।
ನವಿದ್ಯೆಯಿಂಮಾಡಿಪೊಳಲನಾಗಸದೊಳ್ತಂ ॥
ನವರೂಥಿನಿಯೆಲ್ಲಮನಿರಿ ।
ಸಿವಿಯುಚ್ಚರಪತಿಯಕೆಲಕೆಪೋಗಲ್ಬಗೆದಂ ॥ 73

ವ ॥ ತತ್ಪ್ರಪಂಚಮೆಲ್ಲಮಂಲಂಕಾಸುಂದರಿತಿಳಿದೀ ಬರವಿದಾವಕಾರಣಮೆನೆರಾಮದೇವರ
ಬೆಸದಿಂಸೀತಾದೇವಿಯಸುದ್ದಿಯಂತರಲ್ಬಂದೆನೆಂಬುದುಮಾಕೆಹನುಮಂಗಿಂತೆಂದಳ್॥

ಕಂ ॥ ನಿಮಗೆಪುಗಲೀಯದಂತಿರೆ ।
ಸಮಕಟ್ಟಿದನಿಂದ್ರವೈರಿವಿದ್ಯಾಪ್ರಾಕಾ ॥
ರಮನೊಡೆದುನೀನಿದಂವ ।
ಜ್ರಮುಖನುಮಂಕೊಂದುಪೊಕ್ಕೆಲಂಕಾಪುರಮಂ ॥ 74

ಪರಮದ್ರೋಹನೆದಶಕಂ ।
ಧರಂಗೆನೀಂಪಗೆವರೊಡನೆಕೂಡಿದೆಮುಂನಂ ॥
ನೆರೆದುವಿಭೀಷಣನೊಳ್ತಂ ।
ನಿರೂಪಿತಕ್ರಮದೆನೆಗಳ್ವುದಲ್ಲಿಂಬೞಿಯಂ ॥ 75

ವ ॥ ಎಂಬುದುಂ ॥

ಕಂ ॥ ಏಗೊಂಡಾಕೆಯವೇಳ್ದ ।
ನಾಗಳೆಕತಿಪಯವಿಯಚ್ಚರರ್ಬ್ಬೆರಸುಮಹಾ ॥
ಭಾಗಂಪೊಕ್ಕಂಪುರಮನ ।
ದೇಗಹನವೊಪವನಜಂಗೆದುರ್ಗ್ಗಮುಮುಂಟೇ ॥ 76

ವ ॥ ಅಂತುನಿಶ್ಶಂಕಿತಂಲಂಕೆಯಂಪೊಕ್ಕುವಿಭೀಷಣನಂಕಂಡುಕ್ಷೇಮಕುಶಲವಾರ್ತ್ತಾ
ನಂತರಂ ॥

ಮ ॥ ಕುಲಮಂಸತ್ಯದಶೌಚದಗ್ಗೞಿಕೆಯಂಚಾರಿತ್ರಮಂಚಾಗಮಂ ।
ಚಲಮಂದೋರ್ವ್ವಲಮಂಕಳಾವಿಭವಮಂಕೊಂಡಾಡುವೀರಾವಣಂ ॥
ನೆಲನೆಲ್ಲಂಪೞಿವನ್ನಮನ್ಯವಧುವಂದುರ್ಮ್ಮೋಹದಿಂಬಾರ್ತ್ತಗೆ ।
ಯ್ಯಲದಂಬಾರಿಸದೊಯ್ಕುನಿರ್ಪ್ಪುದುಮುಪೇಕ್ಷಾದೋಷಮೇನಾಗದೇ ॥ 77

ಚ ॥ ಎಣಿಸದೆತಂನಶೌಚಗುಣಮಂಬ್ರತರಕ್ಷಣಮಂಪರಾಂಗನಾ ।
ಪ್ರಣಯಮನಪ್ಪುಕೆಯ್ಯೆಶರಣಾಗತರಕ್ಷಣದಕ್ಷನಪ್ಪದ ॥
ಕ್ಷೋಣಿಭರತತ್ರಿಖಂಡಧರಣೀಪತಿದಾನವಚಕ್ರವರ್ತ್ತಿರಾ ।
ವಣನಿದನಾಗದೆಂನದೊಡೆನಿಂನನೆಗಳ್ತೆಗೆಬಂನವಾಗದೇ ॥ 78

ಕಂ ॥ ಇಂನಾದೊಡಮೊಪ್ಪಿಸಿಸತಿ ।
ಯಂನಿಂಮಕುಲಾಪವಾದಮಂಕಳೆವುದುನಿಂ ॥
ಮಂನರುಪೇಕ್ಷಿಸೆನೆಲನು ।
ಳ್ಳಂನೆವರಂದಶಮುಖಂಗೆದುರುಯಶಮಕ್ಕುಂ ॥ 79

ವ ॥ ಎನೆವಿಭೀಷಣನಿಂತೆಂದಂ ॥

ಮ|ಸ್ರ॥ದನುಜೇಂದ್ರಂಗಾಗದೆಂದಾನಿದನಱಿಪದುದಾಸೀನದಿಂಮುಂನಮೇನಿ ।
ರ್ಪ್ಪೆನೆದೃಷ್ಟಾದೃಷ್ಟಬಾಧಾಕರಮಿದುವೆಪರಪ್ರೇಯಸೀಪ್ರೇಮಮೆಂದಿಂ ॥
ತೆನಿತಾನುಂಹೇತುದೃಷ್ಟಾಂತಮನಡಿಗಡಿಗಾಂತೋಱಿಯುಂಪೇಳ್ದೊಡಂಕೇ ।
ಳ್ವನೆರಾಗೋದ್ವೇಗವೇಗಂಸಮನಿಸೆಹಿತಮಂಸೂಕ್ತಮಂಕೇಳ್ವನಾವಂ ॥ 80

ಕಂ ॥ ಪನ್ನೊಂದುದಿವಸಮಿಂದಿಂ ।
ಗನ್ನತ್ಯಾಗದೊಳ್ದೇವಿಕುಲಮಂಬ್ರತಮಂ ॥
ತನ್ನುಂನತಿಯುಂಕಾದೊಡ ।
ವಿನ್ನುಂವೈರಾಗ್ಯಮಾದುದಿಲ್ಲಗ್ರಜನೊಳ್ ॥ 81

ಪ್ರಮದವನದೊಳಗೆಸೆಱೆಯಿ ।
ಟ್ಟುಮತ್ತಮಟ್ಟಟ್ಟಿಯುಟ್ಟುತಿರ್ದ್ದಪನುಚಿತ ॥
ಕ್ರಮಮಂಕಾಮುಕರಱಿವರೆ ।
ಸುಮನೋಬಾಣಂಗೆತಕ್ಕುಗಿಡದವನಾವಂ ॥ 82

ವ ॥ ಎಂದುವಿಭೀಷಣಂನುಡಿಯೆಮರುತ್ಸುತಂಕೇಳ್ದುಕರುಣಾರಸವಾಹಿನೀಪ್ರವಾಹಮೆ
ಳೆದುಯ್ಯೆವಿಭೀಷಣನಭವನಮಂಪೊಱಮಟ್ಟದೃಶ್ಯನಾಗಿಪೋಗಿಸೀತಾದೇವಿಯಿರ್ದ್ದ
ಬನಮಂಪೊಕ್ಕುಮಂಡೋದರಿವೆರಸುಪಲಂಬರುಮಂಬರಚರನಿತಂಬಿನಿಯರ್ಬ್ಬಳ
ಸೆದಿನಲಕ್ಷ್ಮಿಯಂಬಳಸಿದದೀಪಮಾಲೆಯಂತೆಕಾಂತಿಗೆಟ್ಟುವಿರಹವಿಧುರೆಯಾಗಿಯುಂ
ಲಾವಣ್ಯರಸತರಂಗಿಣೀತರಂಗಲೇಖೆಯನನುಕರಿಸಿತಳ್ತ್ತಶೋಕತರುತಳಮನಲಂ
ಕರಿಸಿ ॥

ಕಂ ॥ ಪೊಗೆಗೊಂಡಚಿತ್ರಲತೆಯೊ ।
ಳಿಗೊಂಡಪುತ್ತಳಿಗೆಮಂಜುಗೊಂಡಬ್ಜಿನಿಕಾ ॥
ಮ್ಮುಗಿಲೊಳಕೊಂಡೆಳವೆಱೆಯೆನೆ ।
ಮೃಗಲೋಚನೆಸೀತೆನಾಡೆಪಾಡೞಿದಿರ್ದ್ದಳ್ ॥ 83

ಉ ॥ ಶ್ರೀವಧುಪದ್ಮಸದ್ಮದಿನಗಲ್ದಳಿದೇಕೆಯೊಪೇಳ್ಮತ್ತೆವಾಕ್ ।
ಶ್ರೀವಧುವಂಚೆಯಂತೊಱೆದಳೇಕೆಯೊಚಂದ್ರಿಕೆಚಂದ್ರಬಿಂಬದಿಂ ॥
ಭೂವಳಯಕ್ಕೆಬಂದಳೆನುತುಂಬಗೆಯೊಳ್ಪೃಜಪೊಣ್ಮೆಸಂಶಯಂ ।
ಪಾವನಿವಿಸ್ಮಯಸ್ತಿಮಿತಲೋಚನನೀಕ್ಷಿಸಿದಂಮೃಗಾಕ್ಷಿಯಂ ॥ 84

ಚ ॥ ನಿರುಪಮರೂಪೆಯಸ್ಸತಿಯರೀದೊರೆಯರ್ಪ್ಪೆಱರಾರುಮಿಲ್ಲಲೇ ।
ಚರಿಯರಸುತ್ತಿನೊಳ್ಖಚರವೀರಭಟರ್ಕ್ಕಳಕಾಪಿನೊಳ್ಪೆಱ ॥
ತ್ತರುಣಿಯರಿರ್ಪ್ಪರಾತ್ರಿಭುವನಾಂಬಿಕೆಜಾನಕಿತಪ್ಪದಪ್ಪಳಂ ।
ತಿರೆಕಡುನೀಱೆಯಲ್ಲದೊಡೆರಾಘವನಂತಿರೆಚಿತ್ತಮಿಾವನೇ ॥ 85

ವ ॥ ಎಂದುನಿಶ್ಚಿಂತಮಾನನಾಗಿ ॥

ಕಂ ॥ ಜಾನಕಿಪೊಱಗಾಗಿರೆಪವ ।
ಮಾನಸುತಂಕಾಣದಂತುಪೆಱರಾರುಮಶೋ ॥
ಕಾನೋಕಹಕಿಸಲಯಸಂ ।
ತಾನಮನಾಭರಣಕಿರಣಮೊದವಿಸೆಬಂದಂ ॥ 86

ವ ॥ ಅಂತುಸುಕೃತಮೆಮೂರ್ತಿಗೊಂಡಂತೆಕೆಲಕ್ಕೆವಂದು ॥

ಉ ॥ ಮುಂನೆಱಿವಂತುಟಂಪ್ರಿಯನಮುದ್ರಿಕೆಯಂತನಗಿತ್ತುಮಾಯುಪು ।
ತ್ರಂನತನಾಗೆಕಂಡುಮಣಿಮುದ್ರಿಕೆಗೆಂದಿದಿರ್ವಪ್ಪವಾಳ್ಕೆಯಿಂ ॥
ದಂನಯನಾಂಬುಹರ್ಷಪುಳಕಂಪೊಱಪೊಣ್ಮೆಮನೋವಿಕಾಸಮಂ ।
ಕಂನಡಿಸಿತ್ತುಸೀತೆಗೆಮುಖಾಂಬುರುಹಂದರಹಾಸಪೇಶಲಂ ॥ 87

ಚ ॥ ಕೆಲಕಕುಚಂಕದಕ್ಕದಿಸೆಸುಕ್ಕುಸುರಿಂನಡುಗಿತ್ತುಚಿತ್ತಮು ।
ಳ್ಳಲರ್ದಮುಖಾರವಿಂದಮಕರಂದಮೆನಲ್ಬೆಮರ್ಗಳ್ಕಪೋಲದೊ ॥
ಳ್ನಲಿಸಿದುವಂಗಕಾಂತಿಕುಡುಮಿಂಚಿನಗೊಂಚಲನೊಪ್ಪವಿಟ್ಟವೊಲ್ ।
ಜಲಜಲಿಸಿತ್ತುಜಾನಕಿಗೆಮುದ್ರಿಕೆಗೊಟ್ಟುದನಂಗಮುದ್ರೆಯಂ ॥ 88

ವ ॥ ಅಂತುಹರುಷರಸತರಂಗಿತಾಂತರಂಗೆಯಾದಜಾನಕಿಯಂಮಂಡೋದರಿಮೊದಲಾಗೆಕೆ
ಲದಲಿರ್ದ್ದಖೇಚರಕಾಂತೆಯರ್ರಾವಣನೊಳಪ್ಪನುಬಂಧಮನೊಡಂಬಟ್ಟುಸಂತೋ
ಷಂಬಟ್ಟಳೆಂಬುದುಮಳಾಂಬಮೆನೆಮುನಿದು ॥

ಕಂ ॥ ತನಗೆಪತಿವ್ರತಮಿಲ್ಲದ ।
ವನಿತೆಕುಲಸ್ತ್ರೀಯೆಭಿಂನಭಾಜನಮಿಂತ ॥
ಪ್ಪನುಚಿತಮಂಹರಿವಂಶದ ।
ವನಿತೆಯರೊಳ್ನುಡಿಯಲಕ್ಕುಮೇನಿಂಮಂನರ್ ॥ 89
ಎನಗೆಪರಪುರುಷರಸ್ಮ ।
ಜ್ಜನಕಸಹೋದರಸಮಾನರೆನಗನುರಾಗಂ ॥
ಜನಿಯಿಸಿದುದುರಘುಕುಲತಿಲ ।
ಕನಪೆಸರಿಂಬಂದದೂತನಂಕಾಣಲೊಡಂ ॥ 90

ವ ॥ ಎನೆಮಂಡೋದರಿಕೇಳ್ದು ॥

ಉ ॥ ಅರ್ಣ್ಣವಲಂಘನಕ್ಷಮರೆಮಾನವರಾರ್ಗ್ಗಮಭೇದ್ಯಮಪ್ಪುದಂ ।
ಸ್ವರ್ಣ್ಣಲಯಂಬರಂನಿಮಿರ್ದವಜ್ರದಕೋಂಟೆಯನಾರೊಭೇದಿಪರ್ ॥
ನಿರ್ಣ್ಣಯಮಾಗೆರಾಘವನಸುದ್ದಿಯನೀಕೆಗೆಪೇಳ್ದದಾಗದೇ ।
ಕರ್ಣ್ಣಪಿಶಾಚಮೀವಿಕಲಭಾಷೆನಿರನ್ನವಿಕಾರಮಾಗದೇ ॥ 91

ವ ‖ ಎಂದುಕೆಂಡವಾಸದವಿಳಾಸಿನಿಯರೊಡನೆನುಡಿಯುತ್ತಿರ್ಪ್ಪುದುಮಗಣ್ಯಲಾವಣ್ಯಾವ
ತಿವೈದೇಹಿಪುಣ್ಯಪುರುಷನೀನೆಂನನಪಾರದುಃಖಭಾರದಿಂನವೆಯಲೀಯದೆಮದೀಯ
ವಲ್ಲಭನಶುಭವಾರ್ತ್ತೆಯಂತಂದದೊಸಱಿಂದೆನಗೆನೀಂಪ್ರಭಾಮಂಡಲನಿಂದಗ್ಗಳವ
ಪ್ಪಸಹೋದರನೈನಿಂನಕುಲಗೋತ್ರನಾಮಂಗಳನೆನಗೆತಿಳಿಯೆಪೇಳೆನಲೊಡಂ ‖

ಕಂ ‖ ಸೆರಗಕ್ಕುಂವೆಯ್ಗುರೆದಾ ।
ನಿರೆಲೆಂದುನಿಜಸ್ವರೂಪಮಂತೋಱುವುದುಂ ‖
ಮರುತಾತ್ಮಜನಂತಃಪುರ ।
ಪುರಂಧ್ರಿಯರ್ಸ್ಸೆರೆದುಸೀತೆಯಂಮಱಿಗೊಂಡರ್ ‖ 92

ವ ‖ ಅನಂತರಂಮರುತ್ತನೂಜಂಮುಕುಳಿತಕರಸರೋಜನಿಂತೆಂದಂ ‖

ಚ ‖ ಪಿತೃಪವನಂಜಯಂಖಚರವಲ್ಲಭನಂಜನೆಪೆತ್ತತಾಯ್ಮಹಾ ।
ಸತಿಹನುಮಂತನೆಂಪೆಸರೊಳಾಂವಿಜಯಪ್ರಮದಾಪ್ರಿಯಂಜಗ ‖
ತ್ಪತಿಪತಿರಾಮನಾಸುಚರಿತಂಪೆಸವೇಳ್ದೊಡೆನಿಂಮಸುದ್ದಿಗ ।
ಪ್ರತಿಮಪತಿವ್ರತಾಚರಣಭೂಷಣಭೂಷಿತೆಬಂದೆನಂಬಿಕೆ ‖ 93

ವ ‖ ಎಂದುಬಿಂನವಿಸೆ ‖

ಕಂ ‖ ಕಮಳಿನಿಯಂಕಳಹಂಸಂ ।
ಸುಮನೋಮಂಜರಿಯನಳಿವನಾಂತಸ್ಥಳಿಯಂ ‖
ಸಮದೇಭಂನೆನೆವಂತನು ।
ಪಮೆನಿಂಮಂನೆನೆದುಗೂರಿಪಂರಘುವೀರಂ ‖ 94

ವ ‖ ಎಂದುಮತ್ತಂಕೆಲವುವಿಂನಾಣಂಗಳನಿಂತೆಂದಂ ‖

ಕಂ ‖ ವಾರಿಜಮುಃಖಿಭೂಪಂಗಂ ।
ಭೀರಾವಾಹಿನಿಯತೀರದೊಳ್ನಿಂಮಮುಖರಾಂ ‖
ಭೋರುಹದೊಳ್ಪಡಿಯಿಟ್ಟಂ ।
ಭೋರುಹಮಂಮೆಚ್ಚಲೊಲ್ಲನಿಲ್ಲೊಂಮೊಗಡಂ ‖ 95

ಭರತಂಪಿಂದನೆಬಂದಂ ।
ಧರಣ್ಯದೊಳ್ರಾಜ್ಯಭರಮನೊಪ್ಪಿಸಿದೊಡೆಸಂ ‖
ವರಿಸಿಪದಿನಾಲ್ಕುವರುಷಂ ।
ಬರಮಿಪ್ಪರ್ಂತಾಗಿರಾಘವಂನಿಯಮಿಸಿದಂ ‖ 96

ಸಲಿಲಾಹರಣಾರ್ಥಂಪೋ ।
ಗಿಲಕ್ಷ್ಮಣಂದೇವಿಗಂಡವರಿಂಬಿರ್ದ್ದಾ ॥
ಲಲನೆಯುಕರಗದವಳಕ ।
ಯ್ಯಲಟ್ಟಿದಂಗಡಮದೊರ್ಮ್ಮೆಶೀತಲಜಲಮಂ ॥ 97

ಕ್ರೀಡಾಪೂತಂಪೊಳಲಂ ।
ಮಾಡಿಘನಾಗಮದೊಳಿರಿಸಿಯಕ್ಷಂಕೊಟ್ಟಂ ॥
ಚೂಡಾಮಣಿಯಂಕದನ ।
ಕ್ರೀಡೆಗೆನೆನೆದಾಗಳಂತೆಬಂದಪೆನೆಂದಂ ॥ 98

ವ ॥ ಎಂಬುದುಮನುಭೂತಾರ್ಥಸ್ಮರಣೆಯಿಂಮನದಸಂಶಯಂಪಿಂಗೆಮನಂಗೊಂಡು ಮಾನಿನಿಪವಮಾನಸೂನುಗಿಂತೆಂದಳ್ ॥

ಸ್ವಾಗತ ॥ ಎಂತುದಾಂಟಿದೆಮಹಾರ್ಣ್ಣವಮಂಬಂ ।
ದೆಂತುಪೊಕ್ಕೆಪುರಮಂರಘುವೀರಂ ॥
ಗೆಂತುನಿಂನೊಡನೆಕೂಟಮದಾಯ್ತಂ ।
ಬಂತುಟಂತಿಳಿಪುದೋರ್ವ್ವಿಳಾಲಿ ॥ 99

ಕಂ ॥ ಬಡಿದೆಂವಜ್ರದಕೋಟೆಯ ।
ನೆಡೆಮಡಗದೆಬಂದುವಜ್ರಮುಖನಾಂತಿಱಿಯಲ್ ॥
ಕಡುಕೆಯ್ದೊಡೆಕೊಂದೆಂನಿಂ ।
ಮಡಿಪುರಮಂಪೊಕ್ಕುಬಂದುಕಂಡೆಂನಿಂಮಂ ॥ 100

ವ ॥ ಎಂದುಬಿಂನವಿಸಿಮತ್ತಮಿಂತೆಂದನಂಬಿಕೆದಶಮುಖನತಂಗಿಚಂದ್ರನಖಿನಿಜತನೂಜನಪ್ಪಶಂಭುಕನಂಸಾವಿತ್ರಿಕೊಂದುಸೂರ್ಯ್ಯಹಾಸಾಸಿಯುಂ ಕೊಳ್ವುದುಮದಂಕಂಡಳಲ್ದುತಂನಗಂಡನಪ್ಪಖರಂಗೆಪುಯ್ಯಲಿಡುವುದುಮತಿಕುಪಿತನಾತನಸಂಖ್ಯಾತಬಲಸಮೇತನೆತ್ತಿಬಂದುಲಕ್ಷ್ಮಣನೊಳ್ಕಾದುತ್ತಮಿರೆದಶಾನನನುಮವರಬವರಮಂನೋಡಲೆಂದುಬರುತ್ತುಂನಿಂಮಂಕಂಡುವಿಪರೀತಚಿತ್ತನಾಗಿಕೈದುಗೆಯ್ಯದೆಕೈತವದಿಂರಘುವೀರನನಗಲ್ಚಿನಿಂಮನುಯ್ವುದುಮಾಕ್ಷಣದೊಳ್ಲಕ್ಷ್ಮಣನಲ್ಲಿಗೆಶ್ರೀರಾಮದೇವರ್ಬ್ಬಿಜಯಂಗೆಯ್ದುದೇವಾಸೀತಾದೇವಿಯನಗಲ್ದುಪೊಲ್ಲದುಗೆಯ್ದಿರವಂದಿರಂಕೊಲ್ವುದಕ್ಕಾನೆಸಾಲ್ವೆಂಮಗುಳೆ ಬಿಜಯಂಗೆಯ್ಯಿಮೆನೆಬೇಗಂಬಂದುಮುಂನಮಿರ್ದ್ದೆಡೆಯೊಳ್ನಿಂಮಂಕಾಣದೆಕಾನನದೊಳ್ತೊಳಲ್ದರಸುತ್ತುಮಿರ್ಪ್ಪನೆಗಂಖರದೂಷಣರಂಕೊಂದುಲಕ್ಷ್ಮಣನೇಕಾಕಿಯಾಗಿರ್ದ್ದಣನಕೆಲಕ್ಕೆವಂದುಮದಂಬಿಕೆಯೆಲ್ಲಿರ್ದ್ದಪಳೆಂದು ಬೆಸಗೊಳ್ವುದುಮಾಂನಿಂನಲ್ಲಿಗೆಬಂದಪೆಂದೆಯಾವನಾನುಮೋ

ರ್ವವನಾಯೂವಿಕೊಂಡುಯ್ದನೋ ಕ್ರೂರಮೃಗಂಗಳುಯ್ದುವೋಯೆಂದಳಲ್ದು ನು
ಡಿವುದುಂಲಕ್ಷ್ಮಣಂವಿಷಣ್ಣಚಿತ್ತನಾಗಿರ್ಪ್ಪುದುಮಾಸಮಯದೊಳ್ಶರಣಾಗತಂವಿರಾ
ಧಿತವಿಯಚ್ಚರಂನಿಂಮಸದ್ದಿಗೆಚೆಚ್ಚರಮನುಚರರನಟ್ಟಿರಾಮಲಕ್ಷ್ಮಣರಂಪಾತಾ
ಳಲಂಕೆಗುಯ್ದುಪೆಸಕೆಯ್ಯುತ್ತಿರ್ದ್ದನಂನೆಗಮಿತ್ತಸುಗ್ರೀವಂಮಾಯಾಸುಗ್ರೀವನ
ವ್ಯತಿಕರಣದೊಳ್ಶರಣಾಗತಶರಣ್ಯನಪ್ಪರಾಮನಂಕಂಡುತನ್ನವೃತ್ತಾಂತಮಂಬಿನ್ನ
ವಿಸೆನಿಂನಪಗೆಯಂತೀರ್ಚ್ಚದಪೆನೆಂದುಕಿಷ್ಕಿಂಧಪುರಕ್ಕೆವಂದು ॥

ಕಂ ॥ ಸುಗ್ರೀವನಪಗೆವಮಾಯಾ ।
ಸುಗ್ರೀವಂತತ್ಪ್ರಚಂಡನಂಕೀನಾಶಂ ॥
ಗೆಗ್ರಗ್ರಾಸಂಮಾಡಿನೃ ।
ಪಗ್ರಾಮಣಿಕಳೆದನೆಂಮಕುಲಪರಿಭವಮಂ ॥ 101

ವ ॥ ಅದಱಿನೆಂಮವಾನರಧ್ವಜರಪ್ಪವಿದ್ಯಾಧರರೆಲ್ಲಂಪ್ರತ್ಯುಪಕಾರತತ್ಪರತೆಯಿಂದಾಳ್ತ
ನಕ್ಕೆಪೊಣ್ಮರತ್ನಜಟಿಯುದೆಸೆಯಿಂನಿಂಮಸುದ್ದಿಯನಱಿದಿಂಬೞಿಯಂಸುಗ್ರೀವನೆಂ
ನುಮಂಬರಿಸಿಕಾಣಿಸಿದೊಡಾನುಮುದಾತ್ತರಾಘವನಚರಣಸೇವೆಯೊಳ್ನಿಂದೆನೀಗ
ಳಖಿಲವಿದ್ಯಾಪರಮೇಶ್ವರರಪ್ಪವಿದ್ಯಾಧರರ್ಪ್ಪಲಂಬರುಮಂಕೂಡಿಕೊಂಡುರಾಮಲ
ಕ್ಷ್ಮಣರ್ಕ್ಕಿಷ್ಕಿಂಧಪುರದೊಳಿರ್ದ್ದಟ್ಟಿದೊಡೆ ರಾವಣನೊಳ್ನುಡಿದುನಿಂಮಸೆಱೆ
ಯಂಬಿಡಿಸಲ್ಬಂದೆನಿದುಮದೀಯವೃತ್ತಾಂತಮೆನೆಸೀತೆಸಂತೋಷಂಬಟ್ಟು ॥

ಕಂ ॥ ಮರುತಾತ್ಮಜನಿಂಮಂನ ।
ದ್ಧರ್ಗೀಣರೇಕಾಂಗವಿಜಯಿಗಳ್ಬಹುವಿದ್ಯಾ ॥
ಪರಮೇಶ್ವರರನಿಬರಿಳೇ ।
ಶ್ವರಪಾರ್ಶ್ವದೊಳಿಂದುಜನಕಸುತೆಪೆಸಗೊಂಡಳ್ ॥ 102

ವ ॥ ಎನೆಮಯನಮಗಳ್ಮಂಡೋದರಿಸೀತಾದೇವಿಗಿಂತೆಂದಳ್ ॥

ಉ ॥ ನೂತನರೊಳ್ಪುರಾತನರೊಳೀತನೊಳಾರ್ದೊರೆನಾಕಲೋಕದೊ ।
ಳ್ಭೂತಳದೊಳ್ರಸಾತಳದೊಳೋರ್ವ್ವನೆದೋರ್ವ್ವಲಶಾಲಿಲೋಕವಿ ॥
ಖ್ಯಾತನಶೇಷವಿದ್ಯೆಗಳೊಳಾತತಕೀರ್ತ್ತಿಮರುತ್ತನೂಜನ ।
ಜ್ಞಾತಮಖೀಪವೆಣ್ಬಡಿಪೋಡೀತನನೀತನೆಪೋಲ್ವರಿನ್ನರಾರ್ ॥ 103

ವ ॥ ಈತನಪರಾಕ್ರಮದಳುರ್ಕ್ಕೆಯಂಪೇಳ್ವೊಡೆಮುಂನಮೊರ್ಮ್ಮೆದಶಮುಖಂಗೆರಣ
ಮುಖದೊಳಿದಿರ್ಚ್ಚಿದವರುಣನಂ ಪರಾಙ್ಮುಖಂಮಾಡಿಗೆಲ್ದುಕುಡೆವಿಯಚ್ಚರಪತಿ

ಮೆಚ್ಚಿತಂನತಂಗಿಯಪ್ಪ ಚಂದ್ರನಖಿಯ ಮಗಳಪ್ಪನಂಗಪುಷ್ಪೆಯನೀತಂಗೆಮ
ಹಾವಿಭೂತಿಯಿಂ ಮದುವೆಮಾಡಿಕೊಂಡಾಡಿತಂನೊಳ್ಗೇರಂನಂಮಾಡಿಪೊರೆಯೆಪಾ
ಳಿಗೆತಪ್ಪಿ ॥

ಚ ॥ ಬರೆವರೆಕಬ್ಬಕ್ಕೆ ರ್ವ್ವಿಕರವೇಳಿದವಪ್ಪವೊಲೀತನುಂವಿಯ ।
ಚ್ಚರಪತಿಯಪ್ಪರಾವಣನಿರಲ್ಕರವೇಳಿದರಪ್ಪಭೂಮಿಗೋ ॥
ಚರರೊಳಸೇವ್ಯರೊಳ್ನಗೆಕಿಂಕರಭಾವವಮನಪ್ಪುಕೆಯ್ದುನೀ ।
ತರಳತೆಯೊಂದುಮಿಲ್ಲದೊಡೆವೋಲ್ವವರಾಪ್ಪವಮಾನಸೂನುವಂ ॥ 104

ವ ॥ ಎನೆಹನುಮನೆಂದನುದಾತ್ತರಾಘವನಗೆಯ್ದುಪಕೃತಿಗೆಪ್ರತ್ಯುಪಕಾರಮಂಗೆಯ್ದಿಂನ
ಪುರುಷಾಕಾರಮಂ ಮೆರೆಯಲೆಂದು ಬಂದೆನೀಪೊಲ್ಲಮೆಯನೆಂತುಂಕಳೆಯಲಪ್ಪು
ದುನಿಮಗೆಕುಲವಳಿಯೆ:ನೆಲಂಪಳಿಯೆ ಮಾನಸಿಕೆಯನೊಕ್ಕು ಪರಸ್ತ್ರೀಯೆಂಬುಬಗೆ
ಯದೆಪರಕಳತ್ರಮನಾಸೆಗೆಯ್ದಾಪೊಲ್ಲಮೆಯಂಕಳೆವಂದವಾವುದೆನೆಕನಲ್ದುಮಂ
ಡೋದರಿಬೆಟ್ಟವೆಟ್ಟನಿಂತೆಂದಳ್ ॥

ಕಂ ॥ ಅನಿಲತನೂಭವಸುಗ್ರೀ ।
ವನುಮಂನಿಂನುಮನವಂಧ್ಯಕೋಪಂದಶಕಂ ॥
ಠನಮೋಘಂಕೊಲ್ಲದೆಮಾ ।
ಣ್ಬನೆವೇಳೆನೆಸೀತೆಕಲುಷವಶಗತೆಯಾದಳ್ ॥ 105

ವ ॥ ಅಂತುಮುಳಿದು ॥

ಕಂ ॥ ದಾಟಿಕಡಲಂಜಗತ್ರಯ ।
ಕಂಟಕನಂಕೊಂದುರಾಮಲಕ್ಷ್ಮಣರಿಪ್ಪ ॥
ತ್ತೆಂಟುದಿವಸದೊಳೆನಿನಗಣ ।
ಮುಂಟಾಗಿಸುವರ್ವ್ವಿಶೇಷಮಪ್ಪದವಳಲಂ ॥ 106

ವ ॥ ಎನೆಮಂಡೋದರಿಲಯಸಮಯದಚಂಡಿಕೆಯಂತೆಮಾಮಸಕಂಮಸಗಿ ॥

ಉ ॥ ಕೇಸುರಿಸೂಸೆತಂನಮೊಗದಿಂಕಿಡಿಬೀಳ್ತ್ತರೆತಂನಕಣ್ಗಳಿಂ ।
ದಾಸುರಮಾಗೆದಾಡೆಗಳ್ಒಡಲ್ಬಗೆದಂಬರಮಂತುಬಿಂಬೆತಂ ॥
ನಾಸುಕರಂಕರಂದೆಸೆಗಗುರ್ವ್ವಿಸೆಕೈಗಳನೆತ್ತಿಪೊಯ್ಯಲಿ ।
ರ್ದ್ದಾಸಮುಯಕ್ಕೆತೆಕ್ಕನೆಡೆವೊಕ್ಕನರಿಂಚಯನಂಜನಾಸುತಂ ॥ 107

ವ ॥ ಅದಕ್ಕೆಸಿತ್ತರಿಸದಾಕೆಸಭೆಯಿನೆದ್ದುರಾವಣನಕೆಲಕ್ಕೆವೋದಳಿತ್ತಪವಮಾನಸೂ
ನುಬೋನಮಂತರಿಸೆಸೀತೆಸಿದ್ಧಪ್ರತಿಜ್ಞೆಯಾಗಿ ॥

ಚ ॥ ಸತಿಸುಚರಿತ್ರೆಪಂಚಪರಮೇಷ್ಠಿಗಳಂಸ್ತುತಿಗೆಯ್ದುಭಕ್ತಿಯಿಂ ।
ದತಿವರರ್ಗಂನಮಂಮನದೊಳಿತ್ತುರಘೂದ್ವಹಪಾದಪಂಕಜ ॥
ದ್ವಿತಯಮನಿಟ್ಟುಹೃತ್ಸರಸಿಯೊಳ್ಜನಕಾತ್ಮಜೆದೇವತಾವಿನಿ ।
ರ್ಮ್ಮಿತಮಣಿಕುಟ್ಟಿಮಸ್ಥಳದೊಳಿರ್ದ್ದವೃತಾಂನಮನುಂಡನಂತರಂ ॥ 108

ಕಂ ॥ ಹನುಮಂಕೈಮುಗಿದುಜಗ ।
ಜ್ಜನನಿರಘುಪ್ರವರನಲ್ಲಿಗುಯ್ವೆಂನಿಂಮಂ ॥
ಜನಕಾತ್ಮಜೆಬಿಜಯಂಗೆ ।
ಯ್ಯೆನಲದುತತ್ಕೂರ್ಮ್ಮೆಯಲ್ಲದೆಂದಿಂತೆಂದಳ್॥ 109

ಮ ॥ ಧರಣೀವಲ್ಲಭನಾಜ್ಞೆಯಿಲ್ಲದೆನಗೆಂತುಂಬರ್ಪ್ಪುದೌಚಿತ್ಯಮ ।
ಲ್ಲರಸಂಗೆಂನಿರವಂನಿವೇದಿಪುದುಕಾಲಕ್ಷೇಪಮಂಮಾಡಿನೀ ॥
ನಿರೆದೈತ್ಯೇಂದ್ರನಪಾಯಮಂನಿನಗೆಮಾಳ್ಕುಂಪೋಪುದೆಂದಾತನೂ ।
ದರಿವೈದೇಹಿಮರುತ್ಸುತಂಗೆನಿಜಚೂಡಾರತ್ನಮಂನೀಡಿದಳ್ ॥ 110

ವ ॥ ಅಂತುಚೂಡಾಮಣಿಯನಿತ್ತುಮತ್ತಂಕರ್ಣ್ಣಾವರಮೆಯೆಂಬತೊಟಿಯತಡಿಯೊಳ್ಬಾ
ರಣಿಯುಗಳಕ್ಕಾಹಾರದಾನಮಂಕೊಟ್ಟುಪಂಚಾಶ್ಚರ್ಯ್ಯಂಬೆತ್ತುದುಮೊದಲಾಗೆಪ
ಲವುವಿಂನಾಣಂಗಳಂಪೇಳ್ದುಮನ್ಯುಗದ್ಗದಕಂಠೆಯುಮಶ್ರುಜಲಲುಳಿತಲೋಚನೆ
ಯುಮಾದಜಾನಕಿಗೆಹನುಮನಿಂತೆಂದಂ ॥

ದ್ರುತವಿಲಂಬಿತ ॥ ಎನಗಪಾಯಮನಾವನೊಡರ್ಚ್ಚುವಂ ।
ಮೊನೆಯೊಳಂನೊಡನಾವನಿದಿರ್ಚ್ಚುವಂ ॥
ಜನನಿರಾಘವನಾಜ್ಞೆಯೆಕಾದುದೀ ।
ತನನದಲ್ಲದೊಡೆಲ್ಲಿಯರಾವಣಂ ॥ 111

ಉ ॥ ಸೀತೆಯಸುದ್ದಿತಪ್ಪಿನಿತೆಸಾಲ್ವುದುದೈತ್ಯನರಕ್ತಪಾನದಿಂ ।
ಭೂತಗಣಂಗಳಂತಣಿಪಿತಂದಪೆನಾಕೆಯನಂತುತಾರದಂ ॥
ದಾತತಕೀರ್ತ್ತಿಸಲ್ಲದೆನೆಭೂಭುಜನಾಜ್ಞೆಗೆಮಾರ್ಕ್ಕೆನಲ್ಲದಂ ।
ದೇತೊಡಳಿತ್ರಿಕೂಟಕುಧರಂಬರಸಂಬಿಕೆನಿಂಮನುಯ್ಯನೇ ॥ 112

ವ ॥ ಎಂದುಬಿನ್ನವಿಸಿಬೀಳ್ಕೊಂಡುತಂನೊಳಿಂತೆಂದಂ ॥

ಮ ॥ ಬರಮಂಪೋಗುಮನಾರುಮೆತ್ತಲಱಿವರ್ಬ್ಬಂದಂತೆಪೋದಂದುದೋಃ ।
ಪರಿಘಂದೂಷಿತಮಕ್ಕುಮಿಕ್ಕಿಖಳರಂಕಿೞ್ತಪುರೋದ್ಯಾನಮಂ ॥
ಪುರಮಂಸುಟ್ಟುದಶಾಸ್ಯನೆಂನನಱಿವಂತಾಂಪೋಗಿರಾಮಾಂಘ್ರಿತಾ ।
ಮರಸಕ್ಕಾನತನಪ್ಪೆನೆಂಬಮನಮಂತಂದಂಮರುನ್ನಂದನಂ ॥ 113

ವ ॥ ಎಂದುಬಗೆಯುತ್ತುಮಿರ್ಪ್ಪಂನೆಗಮತ್ತ ಮಂಡೋದರಿಖಚರವಲ್ಲಭನಲ್ಲಿಗೆವೋಗಿ ॥

ಕಂ ॥ ದೇವರಘುರಾಮನಂಸು ।
ಗ್ರೀವಂಕಯ್ಕೊಂಡುಹನುಮನಂಬರಿಸಿದಶ ॥
ಗ್ರೀವಬೆಸವೇಳೆಕಂಬು ।
ಗ್ರೀವೆಯಜಾನಕಿಯಸುದ್ದಿಗಾತಂಬಂದಂ ॥ 114

ವ ॥ ಅಂತುಬಂದು ॥

ಕಂ ॥ ಪ್ರಮದವನದೊಳಗೆಸೀತೆಯು ।
ಸಮೀಪದೊಳ್ಹನುಮನಿರ್ದ್ದನೆಂದಱಿಪುವುದುಂ ॥
ಬೆಮರ್ವನಿಗಂಡಸ್ಥಳದೊ ।
ಳ್ಸಮನಿಸೆಕಿಸುಗಣ್ಣಿಮಸಗಿದಂದಶಕಂಠಂ ॥ 115

ವ ॥ ಅಂತುಮುಳಿದುಕದನಕರ್ಕ್ಕಶರಪ್ಪರಾಕ್ಷಸರಂಪೆಸರ್ವ್ವೆಸರೊಳೆಕರೆದು ॥

ಮ ॥ ಪ್ರಮದೋದ್ಯಾನದೊಳಾವನಿರ್ದ್ದನವನಂಕೊಂದಿಕ್ಕಿಮೆಂದಾಹವ ।
ಕ್ಷಮರಂಪೇಳೆದಶಾನನಂದನುಜರುಂಸಾಮಾನ್ಯನೆಂದುದ್ಧತ ॥
ಸ್ಸಮರಕ್ರೀಡೆಗಪೇಕ್ಷೆಗೆಯ್ದುಪರಿತಂದತ್ತಂಡದಿಂಚಂಡವಿ ।
ಕ್ರಮನೀತಂಹನುಮಂತನೆಂದಱಿದೊಡೇನಾರುಂಮನಂಗೆಯ್ವರೇ ॥ 116

ವ ॥ ಅಂತುದೆಸೆದೆಸೆಗೆಮಸಗಿಕವಿತರ್ಪ್ಪುದುಂ ॥

ಕಂ ॥ ಆದನುಜಬಲಮನಾವನ ।
ಪಾದಪಮಂಕಿಳ್ತುಮೋದಿಕೊಲಲೊಡರಿಸಿದಂ ॥
ಕಾದುವಬನಮಂಕೀಳ್ವವಿ ।
ನೋದಂಗಳನೆರಡನೊಡನೆತೀಱ್ಚುವಬಗೆಯಿಂ ॥ 117

ಅಸುಕೆಯಸೇಮ್ಮರನಂಕಿ ।
ಳ್ತುಸಮಬಲಂಬೀಳೆಪೊಯ್ಯೆಪವಮಾನಸುತಂ ॥
ಬಿಸುನೆತ್ತರ್ಕ್ಕಂದಳಿರನೆ ।
ಪಸರಿಸಿದಾನವರಶೋಕವನಮೆಸೆಕೆಡೆದರ್ ॥ 118

ತಾಳವನಂಗಳುಮಂಪಿಂ ।
ತಾಳಕುಜಂಗಳುಮನೊಡನೆಕಿೞ್ತುಡೆದನುಜ ॥
ತ್ತಾಳಂತಟ್ಟಂಗೆಡೆದ ।
ತ್ತಾಳುದ್ದಂಕಳೆವರೇನುದಾತ್ತನೊಹನುಮಂ ॥ 119

ಕಂ ॥ ಬಕ್ಕೆವಲಸುಗೆಳೊಳಸುರರ ।
ತೆಕ್ಕೆಯನೆಱೆಯಟ್ಟಿಪೊಯ್ವುದುಂಕೊಳ್ಮಿದುಳುಂ ॥
ಬಕ್ಕೆಯತೊಳೆಯುಂಸೂಸಿದು ।
ವಾರ್ಕ್ಕಡುಕೆಯ್ದನಿಲಜಂಗೆಕೂರ್ಪ್ಪಂತೋರ್ಪ್ಪಂ ॥ 120

ತಿಲಕತರುವಿಂನಿಶಾಚರ ।
ಬಲಮಂಬಿಳೆಪೊಯ್ದುಕೊಂದುರಾವಣನಯಶ ॥
ಸ್ತಿಲಕಮುಮನವರಪೆಂಡಿರ ।
ತಿಲಕಮುಮಂತೊಡೆದನೊಡನೆಪವಮಾನಸುತಂ ॥ 121

ವ ॥ ಅಂತುಮೇಲೆತ್ತಿಬಂದಸುರಸೇನೆಯೆಲ್ಲಮಂಪೇಳೆಪೆಸರಿಲ್ಲದಂತುಪೇಸದೆಕೊಂದು ॥

ಕಂ ॥ ಅಮಿತಬಲಂಕಿಳ್ತೀಡಾ ।
ಡೆಮರುತ್ತನಯಂಮರುನ್ನದೀತೀರವನ ॥
ದ್ರುಮಮನಿಸಿದುವಂಬರದೊ ।
ಳ್ಮೇರುಮಂದಾರಪಾರಿಜಾತಕುಜಂಗಳ್ ॥ 122

ಚ ॥ ಸರಳತಮಾಳತಾಳಕದಳೀಸಹಕಾರಮಹೀರುಹಂಗಳಂ ।
ಪರಶುವೊಮೋಘವಹ್ನಿಯೊದವಾಗ್ನಿಯೊಘೋರಸಮೀರನೋವನ ॥
ದ್ವಿರದಮೊತಂನತೋಳ್ವಲಮೆನಲ್ಬನಮುಂಬಯಲಾಗೆಕಿಳ್ತನಾ ।
ಸುರಗಿರಿಯಂಕಿಳಲ್ಕೆಱೆವಮಾರುತಸೂನುಗಿದಾವಸಾಹಸಂ ॥ 123

ಉ ॥ ಕೋಗಿಲೆಪೆರ್ಚ್ಚಿಪಾರಿದುವುಚಕೋತವನಾವಳಿಯಿಂಶುಕವ್ರಜಂ ।
ಪೂಗವನಂಗಳಿಂಪೆದಱಿಪೋದುವುಬಾಳಮರಾಳಸಂಕುಳಂ ॥
ಪೂಗೊಳದಿಂದಗಲ್ದುವಿನಿಸುಂಪೆಱಪಿಂಗಿದುವುನ್ಮದಾಳಿಪುಂ ।
ನಾಗವನಂಗಳಿಂತವಿಸೆನಂದನಮಂಪವಮಾನನಂದನಂ ॥ 124

ಮ ॥ ತನಿಗಂಪಂಕೆದಱುತ್ತುಮಿರ್ಪ್ಪಪಳಿಕಿಂದಾಕರುಷಣಂಮಾಡಿಭೃಂ ।
ಗನಿಕಾಯಂಗಳನಂಗಜಂಗೆವಿಜಯಸ್ತಂಭಂಮನತ್ರೀಗೆಯಾ ॥
ವನಮೆಂಬಂತುಪೊಗಳ್ತೆಯಂತಳೆದುದಂಕಿಳ್ತಂಮರುನ್ನಂದನಂ ।
ಘನಸಾರದ್ರುಮಮಂದಶಾನನನಕೀರ್ತ್ತಿಸ್ತಂಭಮಂಕೀಳ್ವವೋಲ್ ॥ 125

ಪುಗಲಿಲ್ಲೀವನದೊಳ್ಮದೀಯಪಿತೃಗೆಂತುಂವೈರಮುರ್ವ್ವೀಜರಾ ।
ಜಿಗಳೊಳ್ಗಂಧವಹಂಮದೀಯಜನಕಂಗೆಂದನ್ವಯದ್ವೇಷಮಂ ॥
ಬಗೆಯೊಳ್ತಾಳ್ದಿದಮಾಳ್ಕೆಯಿಂಪವನಜಂಕಿಳ್ತಂಪುರೋದ್ಯಾನಮಂ ।
ಪಗೆಯೆಂತಾಯ್ತೆನೆಬಿತ್ತಿಗಲ್ಲಿತರುವಲ್ಲೀಗುಲ್ಮಮೊಂದಿಲ್ಲೆನಲ್ ॥ 126

ಮ ॥ ನೆಲನುೞ್ತಂತೆವೊಲಾಗೆಕಿೞ್ತು ಬನಮಂ ಮಾಱಾಂತರುರ್ವ್ವಿರ್ದ್ದರಸ್ತ್ರ ।
ಗ್ಜಳದಿಂತಾಯ್ಪೆದೆಗೊಡೆಬಿತ್ತೆವೇಣನಂಬೇಱಿಱೆಂದುಶೌರ್ಯ್ಯಾಂಕುರಂ ॥
ತಲೆದೋಱಿತ್ತದುಕೋರ್ವ್ವಿಕೀರ್ತ್ತಿಲತೆಯಾಯ್ತಾವಲ್ಲಿಯಿಂದಂಬರ ।
ಸ್ಥಲಮಂಮುದ್ರಿಸಿರಾವಣಂಗಮೞಲಂತಂದಂಮರುನ್ನಂದನಂ ॥ 127

ಉ ॥ ಜಾನಕಿಯಿರ್ದ್ದಶೋಕೆಯುಸಮೀಪದೊಳಿರ್ದ್ದಫಲಪ್ರಸೂನಸಂ ।
ತಾನವಿರಾಜಮಾನಕುಜರಾಜಿಯನೋವದೆಕಿೞ್ತುನಿಲ್ಲರೂ ॥
ಕ್ಷಾನಿಲಪಾತದಿಂತಪನತಾಪದಿನಂಬಿಕೆಗಗ್ಗಳಂಪರಿ ।
ಮ್ಲಾನತೆಯಕ್ಕುಮೆಂದುೞಿಪಿದಂಕೆಲವಂಪವನಂಜಯಾತ್ಮಜಂ ॥ 128

ವ ॥ ಅಂತುದಶಾನನಂಗೆಯಶೋಕಭಂಗವಾಗೆ ವನಭಂಗಮಂಮಾಳ್ಪುದುಂಚರಂನಿಶಾಚರ
ನೋರ್ವ್ವನತಿತ್ವರಿತಗತಿಯಿಂಬಂದು ॥

ಕಂ ॥ ವನಪಾಲರನಿಕ್ಕಿಯುಮಾಂ ।
ತನಿಶಾಚರಬಲಮನಿಕ್ಕಿಯುಂಪವನಸುತಂ ॥
ಬನಮಂಕಿೞ್ತಿಕ್ಕಿಯುಮಾ ।
ರೆನಗಿದಿರಾಂಪನ್ನರೆಂದುಕಡುಕೆಯ್ದಿರ್ದ್ದಂ ॥ 129

ವ ॥ ಎಂದುಬಿಂನವಿಸೆ ॥

ಕಂ ॥ ಚರವಚನಂಕಿವಿಯಂಸಾ ।
ರ್ತ್ತರಘನನಿನದಕ್ಕೆಕೆರಳ್ದಕೇಸರಿವೋಲ್ಕೇ ॥
ಸರಿಪೀಠದಿನೆರ್ದ್ದಂದಶ ।
ಶಿರನೆರಡುಂಪುರ್ವ್ವುಮುರ್ವ್ವಿಗಂಟಿಕ್ಕುವಿನಂ ॥ 130

ವ ॥ ಅಂತುಕಡುಮುಳಿದುಮೇಲೆನಡೆಯಲೊಡರಿಸುವತಂದೆಯನಿಂದಗಿಮಾಕ್ಕೊರ್ಂಡು ॥

ಕಂ ॥ ಲೋಕಾಧಿಪತಿದಶಾನನ ।
ನೇಕಾಕಿಯಮೇಲೆನಡೆದನೆಂಬಪವಾದಂ ॥
ಲೋಕಕ್ಕೆಪರೆಯೆನಿಜಬಾ ।
ಹಾಕೌಕ್ಷೇಯಕರಕೂರ್ಪ್ಪನೇರ್ಪ್ಪಡುಗಿಡುಗುಂ ॥ 131

ಉ ॥ ನೀಂಬರಮುಂಟೆದೇವಕದನಂಪವಮಾನತನೂಭವಂರಣಾ ।
ಡಂಬರದಿಂದಮಂಜದೊಡೆಕೊಂದಪೆನಂತಿದೊಡಂಮನಿಂಮಪಾ ॥
ದಾಂಬುರುಹಕ್ಕೆತಂದವನನೊಪ್ಪಿಸುವೆಂನಿಸಸೆಂನನೆಂದುಶೌ ।
ರ್ಯ್ಯಾಂಬುಧಿಪೇಳಿದಂಬೆಸನನಿಂದಗಿಶೇಚರಚಕ್ರವರ್ತ್ತಿಯಾ ॥ 132

ವ || ಅಂತುಪೆಸನಂಬೇಡಿಪಡೆದುಸಮರಸಂರಂಭದಿನಿದಿರ್ಚ್ಚಿಬರ್ಪ್ಪಷಂ ಮಾರುತಿಕಂಡು ಪೆಱಗಿರಿಸಿಬಂದನಿಜವರೂಥಿನಿಯಂಬರಿಸಿ ವಿಜಯರಥಾರೂಢನಾಗಿಲಂಕಾಪುರವೆಲ್ಲಂ ತಲ್ಲಣಿಪಂತು ಕಾದಿಪೆಸರನಾಯಕರಂಪೇಳ್ವೆಸರಿಲ್ಲದೆಕೊಲ್ವುದುಂಕಂಡಿಂದಗಿಮುಟ್ಟಿವರ್ಪ್ಪುದುಂತಂನೊಳಿಂತೆಂದಂ ||

ಉ || ಕಾದುವಕೂರ್ಪ್ಪುದೋರ್ಪ್ಪಪೆಸನಂರಘುಜಂಪೆಸವೇೞ್ದನಿಲ್ಲಮೇ |
ಲಾದನಿಶಾಚರಪ್ರಮುಖರೊಳ್ತಲೆಮೆಟ್ಟಿಱಿವಂದಮಾವುದಾ ||
ನೀದನುಜಾತ್ಮಜಂಗೆಪಿಡಿಸೆತ್ತುದಶಾನನನಕ್ಕೆಬಳ್ಕಲಂ |
ಕಾದಹನಕ್ಕೊಡರ್ಚ್ಚುವೆನೆನುತ್ತುಮಿದಂಬಗೆದಂಮರುತ್ಸುತಂ || 133

ಚ || ಬಗೆಯದೆದಾನವಾಧಿಪನದೋರ್ವ್ವಲಮಂಖಚರಪ್ರವೀರರಂ |
ಬಗೆಯದೆನಚ್ಚಿತಂನಳವನಿಂದಗಿಗಾಂಪಿಡಿಪೇವೆನೆಂಬುದಂ ||
ಬಗೆದನಿದೇನಪಾರಬಲನೋರಣಧೀರನೊಸಿದ್ಧವಿದ್ಯನೋ |
ಬಗೆವವರಾರಿದಂಹನುಮನಂತಿರಖಂಡಿತಗಂಡಗರ್ವ್ವದಿಂ || 134

ವ || ಎಂದುನಿಶ್ಚಯಂಗೆಯ್ದುತನ್ನಬಲವೆಲ್ಲಮಂಬೀಡಿಂಗೆಕಳಿಪಿಕದನಕೇಳಿಗಳ್ಕಿದಂಪದಿನಿರ್ಗನನಿಂದಗಿಪಿಡಿಪೀಪ್ರದುಮಾತನಾತನಂತಂದುಕಾಣಿಸಿದ ಶವದನಂಗಿಂತೆಂದನೀತಂನಂಮವಿದ್ಯಾವಿನಿರ್ಮ್ಮಿತಮಪ್ಪವಜ್ರಪ್ರಾಕಾರಮನೊಡೆದುವಜ್ರಮುಖನಂಕೊಂದುಸೀತಾದೇವಿಯುಸವಿಾಪಕ್ಕೆವಂದುಬನವನಿತುಮಂಕಿಳ್ತುಮೇಲೆಬಂದಖಚರಬಲಮೆಲ್ಲಮಂಕೊಂದನೀತಂಗೆತಕ್ಕುದಂದೇವರೆಬಲ್ಲರೆಂದುಬಿಂನವಿಸೆ ||

ಕಂ || ಕಿಸುಸೆರೆವರಿದಿರೆಕಣ್ಣೊ |
ಳ್ಕೆಸಲೊಳ್ಪರ್ವ್ವಿಡರಿಪೊಡರೆಗಂಡಸ್ಥಳದೊ ||
ಳ್ಪಸರಿಸೆಪೆಮರ್ವ್ವನಿಗಳ್ಮನಿ |
ದಸುರೇಂದ್ರಂಪವನಸುತನನಂದಿಂತೆಂದಂ || 135

ಚ || ಪಸುಳೆನಿಜಾನ್ವಯಾಯಮಹಿಮೋನ್ನತಿನಾಳ್ಕಡೆಪೋಗೆಪೋಯುಂ |
ಪಸುಗೆಯುಮೆಂನಮಂನಣೆಯುಮಿಂದಗಿಯೊಳ್ಸಮಕಕ್ಷನಾಗೆರ ||
ಕ್ಷಿಸಿದುದನೇನುಮಂಬಗೆಗೆತಾರದೆಲಜ್ಜೆಯುನೊಕ್ಕುಬಿಟ್ಟುಮಾ |
ನಸಿಕೆಯನಿಂತುಭೂಚರರ್ಗೆಖೇಚರನಿಂಚರನಾಗಿಬರ್ಪ್ಪುದೇ || 136

ಕಂ || ಉಪಕೃತಿಯಂನೆನೆಯದೆನೀ |
ನಪಕೃತಿಯನೊಡರ್ಚ್ಚಿದೈದುರಾತ್ಮನೆರಿಪುಭೂ ||
ಮಿಪರೊಡನೆಗೂಡಿದೈದ್ರೋ |
ಹಪೆಂಪುಗಿಡೆದಂಡಿಸಲ್ಕೆವೇಳ್ಪುದುನಿಂನಂ || 137

ವ ॥ ಎನೆಕೆಲದಲಿರ್ದ್ದಕೆಲರ್ದ್ದಾನವರ್ಪ್ಪವಮಾನಸೂನುಗಿಂತೆಂದರ್ ಸ್ವಾಮಿದ್ರೋಹ
ನಾಗಿಸೇನಾಭಂಗಮಂಮಾಡಿಪರಬಲಮಂಪೊಕ್ಕು ತಕ್ಕನುೞಿದುದೋಷಕ್ಕೆ ಪಕ್ಷಾ
ದೆಪವನಂಜಯಂಗೆಪುಟ್ಟಿದೊಡಿಂತು ಪಾೞಿದಪ್ಪಿಗುಣಂಗೆಟ್ಟುನೆಗೞ್ವುದುದೊರೆಕೊ
ಳ್ವುದೆನೆಪವಮಾನಸೂನುಮುೞಿದವರನಿಂತೆಂದಂ ॥

ಕಂ ॥ ತೋಯದವಾಹನನನ್ವಯ ।
ದಾಯತಿಗಿಡೆಪಾೞಿದಪ್ಪಿಪೞಿಪೊರ್ದ್ದೆಪರ ॥
ಸ್ತ್ರೀಯನಪೇಕ್ಷಿಸಿದಖಳ ।
ನ್ಯಾಯಮನಾರಯ್ದು ನೋಡಿಕೊಳ್ಳಿಂನಿಂಮೊಳ್ ॥ 138

ಅಱನಂದಶಮುಖನುೞಿದುದ ।
ನಱಿಯುತ್ತುಂಪೊಲ್ಲದೆಂದುಬಾರಿಸದೊಳ್ಪಂ ॥
ಮೆಱೆದಿರ್ಪ್ಪುದಱಿಂದೋಷ ।
ಕ್ಕೆಱೆವಟ್ಟೆನಿಸಿರ್ದ್ದಪಾಪಿಗಳ್ನೀಮೆವಲಂ ॥ 139

ಸಾಮಿತ್ರಿಯಕಯ್ಯೊಳ್ರಣ ।
ಭೂಮಿಯೊೞಿರ್ದ್ದಪುದುರಾವಣಂಗಂನಿಮಗಂ ॥
ಪೋಮರಣಂಬಿದಿಬರೆದುದ ।
ನೇಮಾತೇದೊರೆಯರಾದೊಡಂತೊಡೆದಪರೇ ॥ 140

ವ ॥ ಎಂದುಪಲತೆಱದಿಂನೆಱನೆತ್ತಿನುಡಿಯೆದಶಮುಖಂಮುೞಿದುಪಲವಂಗಳಪಲೀಯದೀತ
ನಂರಾಮದೂತನೆಂದುಘೋಷಣೆಗಳೆದುಪರಿಭವಿಸಿಪೊಱಮಡಿಸಿಕಳೆಯಿಮೆನೆ ॥

ಕಂ ॥ ಸಿಡಿಲಪೊಡರ್ಪ್ಪಾಕ್ಷಣದೊ ।
ೞ್ಡುವುದುಕಾಳ್ಕಿಚ್ಚುಬನಮನನಿಲನಪೆಸದಿಂ ॥
ಸುಡುವುದುತೆಗಳೆನಲೇಂಕಿಡಿ ।
ಕಿಡಿವೋದನೊಕೋಪತಾಪದಿಂಪವನಸುತಂ ॥ 141

ಮ ॥ ಉರಿಲಿಂಗಂರಸೆಯಿಂದಮಂದೊಗೆದುದೋವೇಳೆಂಬಿನಂಕಂಣಕೇ ।
ಸುರಿಗಳ್ದೞ್ಳಿಸೆಕೋಪದಿಂದಮುರಿದೆರ್ದ್ದಾಸ್ಥಾನದಲ್ಲಿರ್ದ್ದದು ॥
ರ್ದ್ಧರವಿದ್ಯಾಧರವೀರರಂಜವನಬಾಯೊಳ್ತ್ತಂತಿದಂತಂನನಿ ।
ಷ್ಠುರಪಾದಾಹತಿಯಿಂಪ್ರಭಂಜನಸುತಂಹಸ್ತಪ್ರಹಾರಂಗಳಿಂ ॥ 142

ಬಿದಿರ್ದೀಡಾಡಿಕೆಲಂಬರಂಕೆಲಬರಂನಿಟ್ಟೆಲ್ವುನುಗ್ಗಾಗೆಕಾ ।
ಯ್ದೊದೆದೇರ್ವ್ವಟ್ಟೆಕೆಲಂಬರಂಕೆಲಬರಂಬೀೞ್ತ್ತಾಗೆಪೊಯ್ದುಣ್ಮಿತಾ ॥
ಗಿದರಂಸೀಳ್ದುಕೆಲಂಬರಂಕೆಲಬರಂಪೋದ್ವೃತ್ತರಂದೈತ್ಯರಂ ।
ತುದಿಗಾಲಂಪಿಡಿದೆತ್ತಿಪೊಯ್ದುನೆಲದೊಳ್ಕ್ಕೊಂಡಂಮರುನ್ನಂದನಂ ॥ 143

ವ ॥ ಅಂತುಕೊಂದುಕಲ್ಪಾಂತಕೃತಾಂತನಂತೆ ಮಾಮಸಕಂಮಸಗಿಪೊಡೆವಸಿಡಿಲಂತೆಸಿಡಿ
ಲ್ದುಸಿಂಹಲಂಘನದಿಂದಂಬರಕ್ಕೆ ನೆಗೆದು ॥

ಕಂ ॥ ಮನೆಮನೆದಪ್ಪದೆನೆಗೆದುದು ।
ತನಿಗಿಚ್ಚೆನೆದಹನವಿದ್ಯೆಯಿಂಸುಟ್ಟಂಪಾ ॥
ವನಿಲಂಕೆಯನಸುರಾಧೀ ।
ಶನಮನಮುರಿವಂನಮಾನನಂಪೊಗೆವಂನಂ ॥ 144

ಬಹುಧೂಮಲೇಖೆನಿಮಿರ್ದುವು ।
ಮಿಹಿರಾಧ್ವದೊಳಾಂಜನೇಯನೊಡರಿಸೆಲಂಕಾ ॥
ದಹನಮನಸುರೇಂದ್ರವಿನಾ ।
ಶಹೇತುಗಳ್ಧೂಮಕೇತುಗಳ್ನೆಗೆದುವೆನಲ್ ॥ 145

ಅಸುರೇಂದ್ರಂಗೆಕೃತಾಂತನ ।
ಕಿಸುಗಣ್ಣಿದಕಣ್ಣ ಕೆಂಪೆನಲ್ಕೇಸುರಿದ ॥
ೞ್ಸಿದುದುಬದ್ಧಭೃಕುಟಿವೊ ।
ಲಸದಳಮುರ್ವಿಸಿದುದುರ್ವಿಧೂಮಸ್ತೋಮಂ ॥ 146

ಚ ॥ ಅಣುವನವಹ್ನಿವಿದ್ಯೆಸುಡೆಲಂಕೆಯನಲ್ಲಿಚಟಿಕ್ಕಟೆಂಬಭೀ ।
ಷಣರವಮುಣ್ಮೆನೀಳ್ದುರಿವನಾಲಗೆಗಳ್ದಶಕಂಠರಕ್ತದಿಂ ॥
ತಣಿವದಿನಂಗಳಾದಪುವುರಾಮಶರಂಗಳೆನೆಂದುರಾಗದಿಂ ।
ಕುಣಿವಕುಶಿಲ್ವಭೈರವಿಯರಕ್ತಜಟಾಪಟಲಂಗಳೆಂಬಿನಂ ॥ 147

ಪುರಹರನೊಡೆಮುಂತ್ರಿಪುರಮಂಪಲಕಾಲಮುಪೋಷಿತವ್ರತಾ ।
ಚರಣದೊಳಿರ್ದ್ದನೀಗಳುಪವಾಸದಪಾರಣೆವಾಯುಪುತ್ರನಿಂ ॥
ದೊರೆಕೊಳೆಲಂಕೆಯಂಶಿಖಿಶಿಖಾವಧಿಯಪ್ಪಿನಮುಂಡುತೇಗುವಂ ।
ತಿರೆಪೊಱಪೊಣ್ಮಿದತ್ತುಧಗಿಲೆಂಬಧಗದ್ಧಗಿಲೆಂಬನಿಸ್ವನಂ ॥ 148

ಮ॥ಸ್ರ॥ ಕರುಮಾಡಂಮೇರುವಂಪರ್ವಿದುದೊಱಟುಳದಾವಾಗ್ನಿಯೆಂಬಂದದಿಂನಿಂ ।
ದುರಿಯುತ್ತಿರ್ದತ್ತದಂಸುತ್ತಿಱಿದಧವಳಹಾರಂಸುಧಾವಾರ್ಧಿಯೆಂದು ॥
ಸ್ತರದಾರ್ವ್ವಜ್ವಾಳಜಿಹ್ವಾಪರಿಕರಮಳರ್ದತ್ತೆಂಬಿನಂಕಣ್ಗೆದೇಂಭೀ ।
ಕರಮಾಗಿರ್ದತ್ತುಲಂಕಾಪುರಮನುರಿಪೆದಿವ್ಯಾಗ್ನಿಯಿಂದಾಂಜನೇಯಂ ॥ 149

ಉ ॥ ವಾಸುಗಿನುಂಗಲೆಂದುದಶಕಂಧರನಂರಸೆಯಿಂಧರಾತಳ ।
ಕ್ಕಾಸುರಮಾಗೆತಂನರಸನಾದ್ವಿಸಹಸ್ರಮಗುರ್ವ್ವನೀಯೆಭಾ ॥
ಭಾಸುರರತ್ನರಂಜಿತಸಹಸ್ರಫಣಂನೆಗೆದಂತೆಸುತ್ತಲುಂ ।
ಕೇಸುರಿಮಾಲೆನಿಂದುರಿಯೆಪೆಂಡುದುರಾವಣರಾಜಮಂದಿರಂ ॥ 150

ಕಂ ॥ ಗೃಹದೀರ್ಘಿಕೆಯಂಧಾರಾ ।
ಗೃಹಮಂಬಡವಾಗ್ನಿಯಂದದಿಂರತ್ನಶಿಲಾ ॥
ಗೃಹಮಂಸಿಡಿಲಂತಿರೆಧವ ।
ಳಹಾರಮಂದಾವಶಿಖಿವೊಲಳುರ್ದುದುದಹನಂ ॥ 151

ಕನಕದರಜತದಕಾಂಸ್ಯದ ।
ಮನೆಮುಟ್ಟುರಿಮುಟ್ಟೆಕರಗಿಕಣ್ಕಟ್ಟುವುದೈ ॥
ತ್ಯನಸಿಂಹಾಸಂದಿಗೆರಾ ।
ವಣವೀರಶ್ರೀಕಡಂಗಿಕಣ್ಕಟ್ಟಿಳಿನಲ್ ॥ 152

ಚ ॥ ಸುರಿವಮದಾಂಬುವಿಂದುರಿಯನಾಲಗೆತಣ್ಣಸವಾಗೆಬೇಗದಿಂ ।
ಪರಿದುವುನಿರ್ಝರಂಸುರಿವಜಂಗಮನೀಲನಗಂಗಳೆಂಬಿನಂ ॥
ಭರದೊಳೆಕಂಭಮಂಮುಱಿದುಪಾಯ್ದುತೊಡಪ್ಪರಿದಾನೆಸಾಲೆಗೆ ।
ಯ್ತರೆಯಮಜಿಹ್ವೆಯಂತುರಿಯನಾಲಗೆರಾವಣನಂಕದಾನೆಗಳ್ ॥ 153

ಇದುಕಡೆಗಾಲದಂದನಡೆಪೊತ್ತಿದಪಾವಕನೆಂಬಿನಂಪೊದ ।
ಳ್ದುದವಿಕೃಶಾನುಸುತ್ತಿಸುಡೆಮಂದುರಮಂನೆಗಳ್ದುಳ್ಕುಳಂಕರಂ ॥
ಪದಱಿಸೆಲಾಯಮಂಪರಿದುಮುಂಡಿಗೆಯಂಮುಱಿದಾಗಳೇಂಬಿಸಿ ।
ಲ್ಗುದುರೆಗಳಂದದಿಂಕುದುರೆಗಳ್ಪಲವೆಣ್ದೆಸೆಬಿದ್ದುರ್ವ್ವೋದವೋ ॥ 154

ಕಂ ॥ ಎನ್ನಸುತನತಿಥಿಪೂಜೆಯ ।
ನೆನ್ನಸಖಂಗಿತ್ತನಗ್ನಿಗೆಂದನುಕೂಲಂ ॥
ತನ್ನೊಲದಿಂದೂದಿದನನಿ ।
ಲನ್ನಯದಿಂಬೀಸಿಬೀಸಿಲಂಕಾಪುರಮಂ ॥ 155

ವ ॥ ಆಸಮಯದೊಳಗ್ನಿಶಿಖಾಮುಖಕ್ಕೆ ದೂರಮಪ್ಪಬಕ್ಕಬಯಲ್ದಾಣದೊಳ್ನಿಂದುಬ
ಹುಜನಂಗಳುಮ್ಮಳಿಸಿತಮ್ಮೊಳಿಂತೆಂದರ್ ॥

ಚ ॥ ಜನಕಜೆಗಾಸೆಗೆಯ್ಯೆಸುಕೃತಕ್ಷಯದಿಂಜಲವರ್ಷ್ಷವಿದ್ಯೆಪೆ ।
ಚ್ಚನೆಪೆಜಪಿಂಗೆಪುಷ್ಪಕವಿಮಾನಮನೇಱಿದಶಾನನಂವಧೂ ॥
ಜನಸಹಿತಂಕೃಶಾನುಗೆಭಯಾಕುಲನಪ್ಪುದುಚೋದ್ಯಮಲ್ಲದೆಂ ।
ತೆನೆಶುಚಿಯಲ್ಲದಂಗೆಪೆಸಕೆಯ್ಗುಮೆವಿದ್ಯೆಗಳಾವುವಾದೊಡಂ ॥ 156

ಉ ॥ ಮಾನವದೂತನೆತ್ತಜಲರಾಶಿಯನಳ್ಕದೆಪಾಯ್ದುಬರ್ಪ್ಪುದೆ ।
ತ್ತಾನಲಳುಂಬಮಪ್ಪಸುರಸೇನೆಯನೋರ್ವ್ವನೆಕೊಲ್ವುದೆತ್ತಲಂ ॥
ಕಾನಗರಕ್ಕೆನಂದನವನಕ್ಕೆವಿನಾಶಮನೀವುದೆತ್ತಿದೇಂ ।
ದಾನವರಾಜದುರ್ವ್ವಿಳಸಿತೋತ್ಕಟಸಂಕಟವೇಗಮಾಗದೇ ॥ 157

ಕಂ ॥ ಪ್ರತಿಪಕ್ಷಮುಂಟೆಲಂಕಾ ।
ಪತಿಗಣುವೆಂರಾವಣಂಗಿದಿರ್ಚ್ಚುವನೆವರಾ ॥
ಸತಿಸೀತೆಯಶೋಕಾನಳ ।
ಹತಿಯಿಂಬೆಂದತ್ತುಕೂಡೆಲಂಕಾನಗರಂ ॥ 158

ವ ॥ ಎಂದುಪೌರಜನಮುಲಿಯೆಲಂಕಾಪುರಮನುರಿಪಿಗಗನತಳಕ್ಕೆನೆಗೆದುಮಗುಳ್ದುನಿಜ
ಸೇನೆಯಂಕೂಡಿಕೊಂಡುಗಂಧವಹನಂದನಂಕಿಷ್ಕಿಂಧಪುರಕ್ಕಭಿಮುಖನಾಗಿ ॥

ಉ ॥ ಮಾರುತಮಾರ್ಗ್ಗಮಂಪುದಿಯೆಕೇತನಪಟ್ಟಿಕೆಗಳ್ವಿಮಾನಘಂ ।
ಝಾರುತಿಗಳ್ಜಯಾನಕಘನಧ್ವನಿಗಳ್ದೆಸೆಯಂಪಳಂಚೆಭೋ ॥
ಷಾರುಚಿಗಳ್ದನಕ್ಕೆತನಿಗೊರ್ವ್ವನೊಡರ್ಚ್ಚೆಜಯಾಂಗನಾಪ್ರಿಯಂ ।
ಮಾರುತಿಬಂದನಾರಘುತನೂಜಮನೋರಥಸಿದ್ಧಿಬರ್ಪ್ಪವೋಲ್ ॥ 159

ವ ॥ ಅಂತುಬಂದುಗಗನತಳದಿನವನೀತಳಕ್ಕವತರಿಸಿಕಿಷ್ಕಿಂಧಪುರದಬಹಿಃಪುರದೊಳ್ಬೀ
ಡಂಬಿಟ್ಟು ಪುರಮಂಪುರಪುರಂಧ್ರಿಯರ ಮನಮುಮನರಮನೆಯುಮನೊಡನೆ
ಪೊಕ್ಕು ॥

ಉ ॥ ರಾಮಭುಜಪ್ರತಾಪತಪನೋದಯಶೈಲಮುಪಾಂತಪರ್ವ್ವತ ।
ಸ್ತೋಮಸಮನ್ವಿತಂಬರುತುಮಿರ್ದ್ದಪುದೆಂಬಿನೆಗಂವಿಯಚ್ಚರ ॥
ಗ್ರಾಮಣಿಸೂರ್ಯ್ಯವಂಶನರಪಾಲಶಿರೋಮಣಿಯಿರ್ದ್ದತತ್ಸಭಾ ।
ಭೂಮಿಗೆಬಂದನಾಪ್ತಖಚರಾನುಚರಂಪವನಂಜಯಾತ್ಮಜಂ ॥ 160

ಚ ॥ ಮರಕತರತ್ನಕುಂಡಲಮರೀಚಿಗಳಿಂದೆಸೆಗಳ್ಪಸುರ್ಪ್ಪವೆ ।
ತ್ತಿರೆಮಕುಟಪ್ರಭಾಪಟಳದಿಂಗಗನಂಕಿಸುಸಂಜೆಪರ್ವ್ವಿದಂ ॥
ತಿರೆಕನಕಾದ್ರಿಯೊಳ್ಪೊಳೆವತಾರೆಗಳಂದದೆತೋಱುಮುತ್ತಿನೈ ।
ಸರಮುರದೊಳ್ತೊಳತ್ತಳಿಸೆಬಂದನರಿಂಜಯನಂಜನಾಸುತಂ ॥ 161

ವ ॥ ಅಂತುಬರುತ್ತುಮಿರೆ ॥

ಚ ॥ ವದನವಿಕಾಸದಿಂಬರವಿನೆಳ್ತರದಿಂದಮೆಕಾರ್ಯ್ಯಸಿದ್ಧಿಯಾ ।
ದುದನರಿದಂಜನಾಸುತನಿರೀಕ್ಷಣದಿಂರಘುಜಂಗೆಹರ್ಷ್ಷಮಾ ॥
ದುದುಪರಿಷಜ್ಜನಕ್ಕೆಪರಮೋತ್ಸವಮಾದುದುಲಕ್ಷ್ಮಣಂಗೆಕೊ ।
ರ್ವ್ವಿದುದುಮನೋಮುದಂಪಡೆವರಾರಭಿವಾಂಛಿತಕಾರ್ಯ್ಯಸಿದ್ಧಿಯಂ ॥ 162

ವ ॥ ಅಂತುನಿಜಾಗಮನಮೆಸಭಾಜನಮಂಹರ್ಷ್ಷರಸಭಾಜನಮಂಮಾಡೆ ॥

ಚ || ಪುದಿದಿರೆರಾಮಲಕ್ಷ್ಮಣರಕಣ್ಗೊಳಿಪುಂಬೆರಸಿರ್ದ್ದತತ್ಸಭಾ |
ಸದರವಿಲೋಚನಪ್ರಭೆಯುಮಾತ್ಮಶರೀರಮನಂಜನಾಸುತಂ ||
ವಿದಳಿತನೀಲನೀರಜವನಂನಡೆತಂದಪುದೆಂಬಿನಂಸಭಾ |
ಸದನಮನೆಯ್ದಿದಂಸಲಿಲವೀಚಿಗಳಂಗೆಲೆಭೂಷಣಾಂಶುಗಳ್ || 163

ವ || ಅಂತುಬಂದುರಾಘವಂಗೆವಿನಯವಿನಮಿತನಾಗಿಲಕ್ಷ್ಮಣಂಗೆತುಳಿಲ್ಗೆಯ್ದುಸಮುಚಿತಪ್ರದೇಶದೊಳಿಕ್ಕಿದುತ್ತುಂಗಮಣಿಮಯಾಸನಮನಳಂಕರಿಸಿ ||

ಕಂ || ಮಣಿಯೆವಿರಹಾಂಧಕಾರಂ |
ಕುಣಿಯೆಜಗತ್ಪತಿಯನೇತ್ರಪುತ್ರಿಕೆಮೆಯ್ಯೊ ||
ಳ್ಪೆಣೆಯೆಪುಳಕಾಳಿಚೂಡಾ |
ಮಣಿಯಂಕೊಟ್ಟಂನೃಪಂಗೆಪವಮಾನಸುತಂ || 164

ವ || ಅಂತುಕುಡುವುದುಂ ||

ಶಾ || ಆರತ್ನಕ್ಕಿದಿರ್ವರ್ಪ್ಪನ್ನೋಲ್ನೃಪತಿಗಾನಂದಾಶ್ರುಗಳ್ಬಂದುವಾ |
ಸ್ತ್ರೀರತ್ನಂಪಡೆದಪ್ಪಿದಂತೆಪುಳಕಂಚೂಡಾಮಣಿಸ್ಪರ್ಶದಿಂ ||
ಧೀರೋದಾತ್ತನಮೆಯ್ಯೊಳುಣ್ಮಿದುವುಸೀತಾಸುದ್ದಿಯಂಕೇಳ್ವಚೇ |
ತೋರಾಗಂರಘುನಂದನಶ್ರುತಿಗೆತಂದತ್ತಾದಮೌತ್ಸುಕ್ಯಮಂ || 165

ವ || ಅನಂತರಂಮರುನ್ನಂದನಂಬಿಂನಪವನವಧಾರಿಸುವುದೆಂದಿಂತೆಂದಂ ||

ಕಂ || ಘನಸಮಯಸಮಾಗಮಮಂ |
ಮನದೊಳ್ನೆನೆಯುತ್ತುಮಿರ್ಪ್ಪಚಾದಗೆವೋಲ್ಮ ||
ಜ್ಜನನಿನಿಜಾಗಮನಮೆಜೇ |
ವನಮಾಗಿರೆದೇವಜೀವಮಂಪಿಡಿದಿರ್ದ್ದಳ್ || 166

ಉ || ದೇವಪತಿವ್ರತಾಗುಣದಿನಗ್ಗಳಮಾಪುದುಮುಂಟೆಜಾನಕೀ |
ದೇವಿಗರಾವಣಂಮುಳಿದುಮಾಳ್ಪುಪಸರ್ಗ್ಗಮದೆನ್ನದಾದೊಡಂ ||
ಜೀವಸಮಂಮನಕ್ಕೆತರಲಾಜದೆನಿಂಮಡಿನಿಂಮಭಕ್ತಿಯಿಂ |
ಹಾವಿನಪಲ್ಲನಂಜುಕಿಡುವಂತಿರೆಮಾಂತ್ರಿಕಮಂತ್ರಶಕ್ತಿಯಿಂ || 167

ವ || ಎಂದುಬಿಂನವಿಸಿಮತ್ತಂಕೆಲವುವಿಂನಾಣಂಗಳನಿಂತೆಂದಂ ||

ಮ || ಮುನಿಬೃಂದಾರಕರಪ್ಪಚಾರಣಯುಗಕ್ಕಾಹಾರವಂದೇವರೀ |
ವೆನದೀತೀರದೊಳಾಯ್ತುಚೋದ್ಯಮೆನೆಪಂಚಾಶ್ಚರ್ಯಮಾಯೋಗಿಜ ||
ಶ್ಯನದಿಂದಂಡಕನಾಮಹಾಗಹನದೊಳ್ಪದ್ದ್ದಾಗಿಪುಟ್ಟಿರ್ದ್ದತೊ |
ಟ್ಟನೆಜಾತಿಸ್ಮರನಾದನೆಂಬಕುಱುಪಂಮನ್ನಾತಪೇಳ್ದಟ್ಟಿದಳ್ || 168

ವ ॥ ಎಂಬುದುಮನಂತರಂಪ್ರಭಂಜನಸುತನಪ್ರಧಾನಪುರುಷಂಪೃಥುಮತಿವೆಸರವಿದಿತ್ಯಥ
ರಮಂತ್ರಿ ದಾಶರಥಿಗೆಕ್ಕೈಗಳಂಮುಗಿದು ॥

ಕಂ ॥ ಅಮಿತಬಲಂದೇವರ್ಬ್ಬೆಸ ।
ಸೆಮನೋವೇಗದೊಳೆಪೋಗಿಲಂಕಾಪ್ರಾಕಾ ॥
ರಮನೊಡೆದಂಕೊಂದಂವ ।
ಜ್ರಮುಖನನಾರ್ವ್ವಲಿಮುಖಧ್ವಜಂಗಿವಿರಪ್ಪರ್ ॥ 169

ಬನವುಂಕಿಳ್ತಂಪಾಲ ।
ಸ್ತ್ಯನಲಂಕಾಪುರಮನುರಿಪಿದಂನಿಂಮಬೆಸಂ ॥
ತನಗಿಲ್ಲದಸುರನಂಕೊ ।
ಲ್ಲನೆತಾರನೆದೇವದೇವಿಯುಂಹನುಮಂತಂ ॥ 170

ವ ॥ ಎಂದುಬಿಂನವಿಸೆಸುಗ್ರೀವಾದಿಗಳ್ಹನುಮನಭುಜಬಲಕ್ಕಿದಾವಗಹನವಿಾತಂಗಸಾ
ಧ್ಯಮಾವುದೆಂದುಕೊಂಡುಕೊನೆಯೆ ಮರುನ್ನಂದನನಂರಘುನಂದನಂಗೆಮತ್ತಮಿಂ
ತೆಂದಂ ॥

ಕಂ ॥ ಅನ್ನಿಂಮಸುದ್ದಿಯಂಬೇ ।
ಳ್ವನ್ನಂಮಜ್ಜನನಿಜೀವಿತಾಸೆಯನಿಳಿಕೆ ॥
ಯ್ದನ್ನತ್ಯಾಗಂಗೆಯ್ದ ।
ಳ್ಮನ್ನಾದರ್ಸ್ಸತಿಯರಿಂನರಾರೆಂಬಿನೆಗಂ ॥ 171

ಅಸುರನವಾಳ್ವಪಕ್ಕೈತಿಯಿಂ ।
ದಸುವಂಬಿಡುವಂತುಟಕ್ಕುಮಂಬಿಕೆಗೆಬಳಿ ॥
ಕ್ಕಸುರೇಂದ್ರನನಿಕ್ಕಿದೊಡ ।
ಲ್ಲಿಸಾಧ್ಯಮೇಂತಕ್ಕುದಲು ... ಷೇಪಂ ॥ 172

ವ ॥ ಎಂಬುದುಮಂಜನಾಸ ... ನಬೀನ್ ... ಪಮೆತನಗೆವೀರರಸಪ್ರವಾಹಿನಿಗೆಸೇತುವಾಗೆ ॥

ಶಾ ॥ ಈವಾರಾಶಿಯನಿ ... ಟವಲಿ ... ಟಬಡಬಾಸ್ತ್ರಂಸಾಲ್ವುದಾರಾಂತೊಡಂ ।
ಜೀವಾಕರ್ಷ ... ವಿದ್ಯೆಯಂಮೆಚಿಪುದೆಂನೀಚಾಪದಂಡಂದಳ ॥
ಗ್ರೀವಂಗಂ ... ನೆಸಾಲ್ವನಿಂತಡೆಪುದೇತಕ್ಕೆಂದುಸಾಮಿತ್ರಿಸು ।
ಗ್ರೀವಂಗೆಂದನುದಂಚಿತಭ್ರುಕುಟಿಗಂಡೋದ್ಗಾರಿಘರ್ಮೋರ್ಮಿರದಕಂ ॥ 173

ವೆ ॥ ಎಂಬ ... ದುವಾನುಡಿಗೊಡಂಬಟ್ಟುಸುಗ್ರೀವಂರಣರಸೋದ್ರಿಗ್ರೀವನಾಗಿ ॥

ಚ ॥ ತಡವಸ್ಸೈತೇಕೆನಾಳೆನಡೆವಂರಣಕೇಳಿಗೆಬಾಡಬಾಸ್ತ್ರವಂ ।
ತುಡುವನಿತಜ್ಜೆಗಂನಿಮಗದೇವುದೊಲಕ್ಷ್ಮಣದೇವನೆಂಮಪೇ ॥
ರ್ವ್ವಡೆಕಡಲಂನಭೋಗಮನವಿದ್ಯೆಯೆಸೇತುವೆನಲ್ಕೆದಾಂಟಿಪಾ ।
ರ್ಪ್ಪಡೆಯುನದಿರ್ಪ್ಪುಗುಂರಘುತನೂಜರೊಳಾಜಿಗೆಬರ್ಪ್ಪಗಂಡರಾರ್ ॥ 174

ವ ॥ ಎನೆಸಿಂಹನಾದಂಸಿಂಹದಂತೆಗರ್ಜ್ಜಿಸಿ ॥

ಉ ॥ ಓರ್ವ್ವನೆಪೋಗಿಕಿಳ್ತ್ತುಬನಮಂಪುರಮಂಸುಡೆಕಂಡುತಮ್ಮದೋ ।
ರ್ಗ್ಗರ್ವ್ವಮನೋರ್ವ್ವರುಂಮೆಱೆಯಲಾಱರೆಮಾರುತಿಯುನ್ನರಿಲ್ಲಿಸಾ ॥
ಸಿರ್ವ್ವರಬರ್ವ್ವದೋರ್ವ್ವಲಯುತರ್ಕ್ಖಚರಾಧಿಪರಿರ್ದ್ದಪರ್ನ್ನಿಕಾ ।
ಟರ್ವ್ವಯಲಿಂಗೆಬಂದಪರೆನಿಂದಪರೇರಣರಂಗಭೂಮಿಯೊಳ್ ॥ 175

ವ ॥ ಎನೆಬಾಲಿದೇವತನೂಭವಂಚಂದ್ರಮರೀಚಿ ದಹನಮರೀಚಿ ವಿದ್ಯುನ್ಮರೀಚಿಯುಂಪ
ಳಂಚಲೆವಿನಮಿಂತೆಂದಂ ॥

ಉ ॥ ಮಾರುತಿಬುದ್ಧಿವೇಳ್ದೊಡಮದಂಬಗೆಗೊಳ್ಳನೆರಾಮನಂಬುಗ ।
ಳ್ಕೂರಿದವೆಂಬಿದಂಬಗೆಗೆತಾರನೆಸಂಚಿತಪೂರ್ವ್ವಕರ್ಮ್ಮದಾ ॥
ರ್ಪ್ಪ್ರೇರಣೆನೇರಿತಂನಡೆಯಲೀಗುಮೆದುರ್ಮ್ಮತಿಯುಪ್ಪರಾವಣಂ ।
ಗೀರಣಕೇಳಿಮಾರಣಮನೀಯದೆಕೆಂಮನೆಸ್ಸೆತುಪೋಗುಮೇ ॥ 176

ವ ॥ ಅದೆಂತೆನೆಸಾಧಿತಸಕಲವಿದ್ಯರಪ್ಪಗಗನಪತಿಯುಂ ಭೂಮಿಪತಿಯುಂ ನಾಗರಾಜನು
ಮಶನಿವೇಗನುಂ ಮಹೇಂದ್ರನುಂ ಮೃಗೇಂದ್ರನುಂ ಭೀಮಕುಂಡಲನುಂ ಪ್ರಭಾ
ಮಂಡಲನುಂ ಪ್ರಸನ್ನಕೀರ್ತ್ತಿಯುಂ ತಟಿದ್ವಕ್ತ್ರನುಂ ವಜ್ರದಂಷ್ಟ್ರನುಂ ವಿದ್ಯು
ನ್ಮಾಲಿಯುಂ ರವಿಯುಂ ಕ್ರೂರನುಂ ಅಂಗದನುಂ ನಳನುಂ ನೀಳನುಂ ಸುಷೇಣನುಂ
ಮಂದರನುಂ ಜಾಂಬವನುಂ ಸಮೀರಣನುಂ ಸಿಂಹನಾದನುಂ ವರಾಹನುಂ ವಿರಾಧಿತ
ನುಂ ಹನುಮನುಂ ಮತ್ತಂಪೆಱರುಮಱಿಕೆಯವಿದ್ಯಾಬಲಗರ್ವ್ವಿತರಪ್ಪವಿದ್ಯಾಧರ
ರೆಲ್ಲರುಂ ರಾಮಲಕ್ಷ್ಮಣರ್ಬೆಸನನೆಪಾರುತ್ತುಮಿರ್ದ್ದರವರೊಳೋರ್ವ್ವರೋರ್ವ್ವರೆ
ಮಾರ್ವ್ವಲಮುಂಕೊಲಲುಂಗೆಲಲುಂನೆಱೆವರನ್ನೆಮಗೆಪೆಱತುಮಂತಣಕ್ಕೆಡೆಯಿಲ್ಲ
ನೆಕೇಳ್ದೆಲ್ಲರುಮಾತನಮಾತನೆಮನದೆಗೊಂಡುವಿಜಯಪ್ರಯಾಣನಿಶ್ಚಿತಮಂತ್ರರಾಗಿ
ರ್ಪ್ಪುದುಮಾಸಮಯದೊಳ್ ॥

ಕಂ ॥ ಕುಸಿದುವುಕಿರಣಂಗಳ್ಕಡು ।
ವಿಸಿಲಪೊಡರ್ಪ್ಪುಡುಗಿವಂದನುಕ್ರಮದಿಂತ ॥
ಣ್ಬಿಸಿಲಾಯ್ತ್ತನಂತರಂಪೊಂ ।
ಬಿಸಿಲಾದುದುಪೊರ್ದ್ದಪಕ್ಷವೇದಿಯನರ್ಕ್ಕಂ ॥ 177

ಕಂ ॥ ತಪಸಿಗೆಪಿಂಗುವಪ್ರೋೞಾ ।
ತಪಯೋಗಂತಿಂಣವಱಾದರಾಗೋದಯದಿಂ ॥
ತಪನಂಗೆಪಿಂಗಿದತ್ತಾ ।
ತಪಯೋಗಂತಿಂಣವಾಗೆಸಂಧ್ಯಾರಾಗಂ ॥ 178

ಆವಂಗೆಡವಾರುಣಿಯಂ ।
ಸೇವಿಸೆನಾಣ್ಗೆಡದನುೞಿದನಂಬರಮಂರಾ ॥
ಜೀವಸಖಂವಾರುಣಿಯಂ ।
ಸೇವಿಸಲೊಡನಾತ್ಮತೇಜಮಸ್ತಮಿಸುವಿನಂ ॥ 179

ವ ॥ ಅಂತುನೇಸರ್ಪಡುವುದುಂ ॥

ಕಂ ॥ ದಶವದನನಪರಮಾಯು ।
ರ್ದ್ದಸೆಯಂತಸ್ತಮಿಸೆಭಾನುಮಂಡಲಮಾಗ ॥
ೞ್ದಶವದನನಪೞಿಯುಂತಿರೆ ।
ದಶದಿಗ್ವಳಯಮುಮನುರ್ವ್ವಿಪರ್ವ್ವಿತ್ತುತಮಂ ॥ 180

ಕುಮುದಕ್ಕೆಮಂದಹಾಸಂ ।
ಸಮನಿಸಿದುದುಬಿಟ್ಟುಬಂದುಸರಸಿಜಮಂವಿ ॥
ಶ್ರಮಿಸೆಸಿರಿತಂನೊಳಾಶ್ಚ ।
ರ್ಯ್ಯಮೆಜಡರನ್ಯಾಪಕರ್ಷ್ಷಣದಿಂರಾಗಿಸರೇ ॥ 181

ಕೋಕಮಿಥುನಂವಿಯೋಗೋ ।
ದ್ರೇಕಂದೋಷಾನುಷಂಗದಿಂಸಮನಿಸೆಚಿಂ ॥
ತಾಕುಲಿತಮಾದುದಗ್ಗಳಂ ।
ವ್ಯಾಕುಲತೆಯನುಂಟುಮಾಳ್ಕುಮಿಷ್ಟವಿಯೋಗಂ ॥ 182

ಅಂಬರಮಿಡಿವತಮೋದಾ ।
ನಾಂಬುವಿನೊಳ್ಮುೞ್ಗಿನಿಂದನಭಮೆಂಬಮದ ॥
ಸ್ತಂಬೇರಮನಾಗಳ್ ।
ಬೆಂಬೊಯ್ದ್ವೊಲದಱಿತುಱುಗಿದುವುತಾರಗೆಗಳ್ ॥ 183

ಪೆಱತೆಗೆವತಮಂತಳ್ತಮೆ ।
ದುಱುಗಲೆನಲ್ಪೂರ್ವ್ವದಿಗ್ವಧೂವದನಂಕ ॥
ಣ್ದೆಱೆದವೊಲದೇಂಪೞತ್ತುರ್ದೊ ।
ಕಿಱಿದೆಸೆತುಹಿನಾಂಶುಬಿಂಬಮುದಯಿಪಪದದೊಳ್ ॥ 184

ವ ॥ ಅನಂತರಂರೋಹಿಣೀರಮಣನುದಯಾಚಲಸಿಖಂಡಮಣಿಮಂಡನಮೆನಿಸಿ ॥

ಕಂ ॥ ಜನಕಜೆಯವದನಮಂಸಿತ ।
ವನರುಹಮಂಚಂದ್ರಕಾಂತಮಣಿದರ್ಪ್ಪಣಮಂ ॥
ನೆನೆಯಿಸಿದುದುರಾಮಂಗಮ ।
ರನದಿಯಕಲಹಂಸನಂಸುಧಾಕರಬಿಂಬಂ ॥ 185

ವ ॥ ಆಸಮಯದೊಳುದಾತ್ತರಾಘವನುಚಿತಸನ್ಮಾನದಾನಪುರಸ್ಸರಮಖಿಲವಿದ್ಯಾಧರಾಧಿರಾಜರಂಬೀಡಿಂಗೆಪಸೆಸಿನಿರ್ವ್ವರ್ತ್ತಿತಸಂಧ್ಯಾಸಮಯಂಶಯ್ಯಾಗೃಹಕ್ಕೆಬಿಜಯಂಗೆಯ್ದುದುಕೂಲಪ್ರಚ್ಛದಾಚ್ಛಾದಿತವಿಶಾಲಹಂಸತೂಲತಳ್ಪತಳದೊಳ್ಸುಖಪ್ರಸುಪ್ತನಾಗಿರೆ ॥

ಮ ॥ ಜಿನಪೂಜಾವಸರಂಪ್ರಭಾತಸಮಯಂದಿಗ್ಜೈತ್ರಯಾತ್ರಾವಿನೋ ।
ದನದಿಂರಾಘವಮುಖ್ಯಮಂಗಳಮನಿಂತೀಕ್ಷರ್ಗ್ಗಲ್ಕೆಶಯ್ಯಾನಿಕೇ ॥
ತನದಿಂನೀನಿರದೇಳ್ವುದೆಂದುಕರೆವಂತಾದತ್ತುರಾಜಾಲಯಾ ।
ಬ್ಜಿನಿಯೊಳ್ಪೊಣ್ಮುವಹಂಸಸಾರಸರಥಾಂಗೋತ್ತಾನಕೋಲಾಹಲಂ ॥ 186

ವ ॥ ಮತ್ತಮಿನಿಸಾನುಂಬೇಗದಿಂ ॥

ಚ ॥ ಕದನಮುದೋರ್ದ್ಧತಂಮುಳಿದುಲಕ್ಷ್ಮಣನಾರ್ದ್ದಿಡೆವಾಯುವೇಗದಿಂ ।
ತ್ರಿದಶವಿರೋಧಿಯುಪ್ಪದಕಕಂಠನವಕ್ಷಮನುರ್ಚ್ಚಿಪೊಂಗಿಪೊ ॥
ಣ್ಮಿದರುಧಿರಾಂಬುವಿಂದರುಣಮಾದಸುದರ್ಶನಚಕ್ರದಂತದೇ ।
ನುದಯಿಸಿದತ್ತೊಸಾಂಧ್ಯಸಮಯಾರುಣಿತಂದಿನನಾಥಮಂಡಲಂ ॥ 187

ವ ॥ ಅಂತುನೇಸರ್ಮ್ಮೂಡುವುದುಂ ॥

ಮ ॥ ಬಳಭದ್ರಂವ್ಯವಹಾರಮಂಗಳಮನಾಜ್ಯಾವೀಕ್ಷಣಾದ್ಯುತ್ಸವಂ ।
ಗಳನತ್ಯುತ್ಸವದಿಂದೊಡರ್ಚ್ಚಿಜಿನಪೂಜೋತ್ಸಾಹಮಂಮುಖ್ಯಮಂ ॥
ಗಳಮಂಮಾಳ್ಪನುರಾಗಮಂಬಗೆಗೆತಂದಂಭಾರತೀಕರ್ಣ್ಣಕಂ ।
ಡಳನಪ್ರಾಕೃತನಪ್ರಮತ್ತಚರಿತಂಸಾಹಿತ್ಯವಿದ್ಯಾಧರಂ ॥ 188

ಗದ್ಯ ॥ ಇದುಪರಮಜಿನಸಮಯಕುಮುದಿನೀಶರಚ್ಚಂದ್ರಬಾಲಚಂದ್ರಮುನೀಂದ್ರಚರಣನಖಕಿರಣಚಂದ್ರಿಕಾಚಕೋರಂಭಾರತೀಕರ್ಣ್ಣಪೂರಂಶ್ರೀಮದಭಿನವಪಂಪವಿರಚಿತಮಪ್ಪರಾಮಚಂದ್ರಚರಿತಪುರಾಣದೊಳ್ಲಂಕಾದಹನವರ್ಣ್ಣನಮೇಕಾದಶಾಶ್ವಾಸಂ ॥

ದ್ವಾದಶಾಶ್ವಾಸ ಪ್ರಾರಂಭಃ.

ಕಂ॥ ಶ್ರೀಗೆನೆಲೆಯೆನಿಪನಿಜಶ ।
ಯ್ಯಾಗೃಹದಿಂಸ್ನಪನರತ್ನಮಂಟಪವೇದೀ ॥
ಭಾಗಕ್ಕೆಪದತಳಂಗ ।
ಳ್ರಾಗಮನೋಲಗಿಸೆಬಂದನಭಿನವಪಂಪಂ ॥ 1

ವ॥ ಅಂತುಬಂದು ॥

ಕಂ॥ ಸ್ನಪನಪವಿತ್ರಂಶುಚಿವ ।
ಸ್ತ್ರಪೂತಗಾತ್ರಂಪ್ರಧಾನಮಂತ್ರವಿಧಾನಾ ॥
ದ್ಯುಪಚರಿತಾಚಮನಂಪಂ ।
ಚಪರಮಗುರುಗರ್ಘ್ಯಮೆತ್ತಿದಂರಘುರಾಮಂ ॥ 2

ವ॥ ತದನಂತರಂಮಹಾಪ್ರವಾಹಿನೀಶೀತಲಸಲಿಲಸಂಮಿಶ್ರಕರ್ಪೂರದಳಬಹುಳಕಾಂತಿ ದಂತುರಿತಚಂದ್ರಕಾಂತಕಲಶಂಗಳಿಂ ಸುರಭಿಮಲಯರುಹಪಂಕಪಿಂಜರಿತರಜತ ಶುಕ್ತಿಕೆಗಳಿಂ ಸಜಲಧವಳಕಳಮಾಕ್ಷತಕ್ಷೀರಗೌರಪಾಂಡುರಿತಕರ್ಕೇತನಕರಂಡ ಕಂಗಳಿಂ ನವೀನಪ್ರಸೂನಮಧುವಿಲೀನಮಧುಕರಪಟಲಕರ್ಬುರಿತರತ್ನಪಟಳಿಕೆ ಗಳಿಂ ಸುಪಕ್ವಭಕ್ಷ್ಯೋಪದಂಶಪ್ರಚುರಚರುವಿಚಿತ್ರವರ್ಣಶಬಳಿತಸುವರ್ಣಪರಿ ಯಣಂಗಳಿಂದುನ್ಮುಖಮಯೂಖಮಾಣಿಕ್ಯದೀಪಕಿರಣಾರುಣಿತಮರಕತಮಣಿಪು ತ್ರಿಕೆಗಳಿಂ ಬಹುಳಕಾಳಾಗರುಧೂಮಶ್ಯಾಮಳಿತಕಲಧೌತಧೂಪಘಟಂಗಳಿಂ ಕ್ಷೀ ರಾದಿಸವನಪಾವನರಸವಿಚಿತ್ರಿತಾನೇಕಶಾತಕುಂಭಕುಂಭಂಗಳಿಂ ಗಂಧಸಲಿಲಸಂಭೃ ತವಿಶಾಲಹರಿನೀಲಭೃಂಗಾರಂಗಳಿಂ ನಿಜಪ್ರಭಾಪಟಳಪಲ್ಲವಿತಶೋಣಮಣಿಕಲಶಂಗ ಳಿಂ ಸ್ಫಟಿಕಮಣಿಕಿರಣಜಾಳಜಟಿಲಿತಮಧ್ಯರಂಗದಿಂ ಸಂಗೀತಕರಸತರಂಗಿತಬಾ ಹ್ಯರಂಗದಿಂ ಸ್ಥೂಲಮುಕ್ತಾಫಲಮುಕುಳಿತವಿವಿಧರಂಗವಲ್ಲಿಯಿಂ ಮನಂಗೊಳಿಪ ದೇವಪೂಜಾಗೃಹಮಂಪೊಕ್ಕು ದರ್ಶನಸ್ತವನಮುಖರಮುಖಂಯಥಾವಿಧಿಯಿನಭಿ ಷವಮಂತೀರ್ಚ್ಚಿ ॥

ಕಂ॥ ಸಿರಿಖಂಡದಕೊಳ್ಗಸಱೊ ।
ಳ್ಬೆರಸಿದಕತ್ತುರಿಯಸಾರವಣೆಬೆಳಗಿದಕ ॥
ರ್ಪೂರವಳುಕಿನಸೊಡರ್ಗಳ್ಸಂ ।
ದರಮೆನೆಜಿನಪತಿಯನವನಿಪತಿಪೂಜಿಸಿದಂ ॥ 3

ಸುರಹೊಂನೆಯುವಾಸಂತಿಯು ।
ಸುರಗಿಯುಚಂಪಕದಕರ್ಣಿಕಾರದಪೊಂದಾ ॥
ವರೆಯುವಿಚಕಿಲದನಸುಬಿರಿ ।
ದರಲಿಂದರ್ಚಿಸಿದನವನಿಪತಿಜಿನಪತಿಯಂ ॥ 4

ಚಾರುಚರುನಿಚಯದಿಂಘನ ।
ಸಾರಾಗರುಧೂಮಲೇಖೆಯಿಂಮಲಯಜಕಾ ॥
ಕ್ಷೀರರಸದಿಂಜಿನೇಂದ್ರನ ।
ನಾರಾಧಿಸಿದಂನರೇಂದ್ರಚೂಡಾರತ್ನಂ ॥ 5

ಬಾಳೆಯುಮಾವಿನಕಂಮರ ।
ದೀಳೆಯತನಿವಣ್ಣಿಂದಮರ್ಚಿಸಿದಂಭೂ ॥
ಪಾಳಂನಿರ್ಭರಭಕ್ತಿಯು ।
ಜಾಳಕಮೆನೆಮೆಯ್ಯೊಳೊಗೆದರೋಮಾಂಚಂಗಳ್ ॥ 6

ಚ ॥ ಚರುಮಣಿಪರ್ಯ್ಯಣಕ್ಕೆಬಿಡುಮುತ್ತಿನಸೇಸೆಗೆಧೂಪಭಾಜನ ।
ಕ್ಕರುಣಮಣಿಪ್ರದೀಪಿಕೆಗೆದಿವ್ಯಫಲಕ್ಕೆನಮೇರುಪುಷ್ಪಮಂ ॥
ಜರಿಗೆಸುಗಂಧಶುಕ್ತಿಕೆಗೆಪುಣ್ಯನದೀಜಲಪೂರ್ಣ್ಣರತ್ನಭಾ ।
ಸುರಕಲಶಕ್ಕೆಮೇರೆಪವಣಿಲ್ಲೆನೆಪೂಜಿಸಿದಂರಥೌದ್ವಹಂ ॥ 7

ಕಂ ॥ ಎನಿತೊಳವಾತಪವಾರಣ ।
ಮೆನಿತೊಳವುವಿಚಿತ್ರಪಲ್ಲವಾಂಚಿತಮಣಿಕೇ ॥
ತನವೆನಿತೊಳವಾಭರಣಮ ।
ವನಿತಱೊಳಂರಥೌತನೂಭವಂಪೂಜಿಸಿದಂ ॥ 8

ಅಗರುವಧೂಮಲತಾಪಾ ।
ಳಿಗಳೆಳಕಾಯ್ದುಬುಗಲೆಂದುಬಗೆಪದಱುವಿನಂ ॥
ಮುಗಮುಗಿಸುವತೆನಿಗೆಂಪಿಂ ।
ಗಗಲದೆಮೊಗೆಸಿದುವುಮಧುಕರಪ್ರಕರಂಗಳ್ ॥ 9

ಮರಕತಕಲಶಂಗಳ್ಕೆ ।
ಸರಿಪೀಠಮನುದ್ಗತಾಂಬುಲೇಖಾದೂರ್ವ್ವಾಂ ॥
ಕುರದಿಂದರ್ಚಿಸಿಮುಕ್ತಾ ।
ಭರಣಮನರ್ಚಿಸಿದುವೆಂಬುಜಲಧಾರೆಗಳಿಂ ॥ 10

ವ ॥ ಅಂತಚ್ಚಿರ್ಗಸಿರಾಮಚಂದ್ರಜಿನೇಂದ್ರಮುಖಚಂದ್ರನಿರೀಕ್ಷಣಹರ್ಷಪುಳಕಿತಸ
ರ್ವಾಂಗನಾನಂದಬಾಷ್ಪಸಲಿಲವಿಲುಳಿತವಿಲೋಚನಂನಿಟಿಲತಟಘಟಿತಕುಟ್ಮಳಿತಾಂ
ಜಲಿಪುಟಂವಿನಮಿತಶಿರಸ್ಸರೋಜಂಗಂಧಸಲಿಲಶೇಷಾಕ್ಷತಕುಸುಮಶೇಖರಂಜಿನಚರ
ಣಚಂದನತಿಲಕವಿಲಸಿತವದನಾರವಿಂದನುಚ್ಚರಿತಪುನರ್ದ್ದರ್ಶನವಾಕ್ಯಮಾಣಿಕ್ಯ
ಕಂಠಾಭರಣಂಜಿನಚರಣಮಂಬೀಳ್ಕೊಂಡುಜಿನಪೂಜಾಗೃಹಪುರೋಭಾಗದಚಾವಳಿ
ಗೆಯೊಳುತ್ತುಂಗಮಣಿಮಯಾಸನಾಸೀನಂಸುರಭಿಕುಸುಮದಾಮಂ ಸುಗಂಧಾನು
ಲೇಪನದಿವ್ಯವಸನದಿವ್ಯಾಭರಣಭೂಷಿತನಪ್ಪುದುಂ ॥

ಉ ॥ ಪೂತನಮೇರುಸುತ್ತಿದಳಿಮಂಡಳಿಯಿಂರಜತಾದ್ರಿಸೀಳಿಜೇ ।
ಮೂತಕದಂಬದಿಂಸುರಗಜಂಮದವಟ್ಟೆಯಿನಾರದಿಟ್ಟಿಗಂ ॥
ಪ್ರೀತಿಯನುಂಟುಮಾಳ್ಪವೊಲದೇನೆಸೆದಿರ್ದ್ದನೊದೇಹದೀಪ್ತಿಚಂ ।
ದ್ರಾತಪಮಂಪಳಂಚಲೆಯೆನೀಲಪರಿಚ್ಛದದಿಂಹಲಾಯುಧಂ ॥ 11

ಚ ॥ ಎಱಗಿಸಿಪಂಚರತ್ನರುಚಿಯಿಂಸುರಚಾಪದಚೆಲ್ವನಳ್ಕುಱಿಂ ।
ದೆಱಗಿಸಿನೋಳ್ಪನೋಟಕರಲೋಚನಪುತ್ರಿಕೆಯಂಪೆಱಗ್ಗೆತಾ ॥
ನೆಱಗದೆಪೇರ್ಮೆಯಂತಳೆದುದೆಂದೊಡೆಬಣ್ಣಿಪರಾರ್ಜ್ಜಿನೇಶ್ವರಂ ।
ಗೆಱಗಿಮಹತ್ವಮಂತಳೆದರಾಘವರತ್ನಕಟತ್ಕಿರೀಟಮಂ ॥ 12

ಕಂ ॥ ಮರಕತಮಣಿಕುಂಡಳರ ।
ಸ್ಮಿರೇಖೆಯಿಂಗಂಡಮಂಡಲಂಸೇವಾಲಂ ॥
ಬೊರೆದಧವಳಾಬ್ಜದಳದಂ ।
ತಿರೆಕಣ್ಗೆಸೆದಂನರೇಂದ್ರಚೂಡಾರತ್ನಂ ॥ 13

ಫಣಿಮುಯ್ದ್ದಂಪಡೆದಂತನ ।
ಗಣಿವಡೆದಂಶೇಷನುರ್ವ್ವಿಯಂತಾಳ್ದನೆನ ॥
ಲ್ಮಣಿಮುದ್ರಾಫಣಮಣಿಕ ।
ಪ್ಪೊಣರಂತೆಣಿಪಿದುದುಭುಜಯುಗಂರಘುಸುತನಾ ॥ 14

ಚ ॥ ತರುಣಮೃಣಾಳಗರ್ಭರುಚಿವೆತ್ತರಘೂದ್ವಹದೇಹದೀಪ್ತಿಮಂ ।
ಜಾಯಿನುಪಾಶ್ರಯಂಪಡೆದುನಿಸ್ತುಲಮೌಕ್ತಿಕಹಾರಯಷ್ಟಿವೇ ॥
ರುರದೊಳದೇಂವಿರಾಜಿಸಿದುದೋಜನತಾನಯನೋತ್ಪಳೋತ್ಸವಂ ।
ಶರದದಸಾಂದ್ರಚಂದ್ರರುಚಿಯೊಳ್ತಲೆದೋಱುವತಾರಕಾಳಿವೊಲ್ ॥ 15

ವ ॥ ಅನಂತರಮಲ್ಲಿಂತಳರ್ದ್ದು ॥

ಚ ॥ ಚಮರರುಹಂಗಳಂತನಗೆರಳ್ಕೆಲದೊಳ್ನಡೆತಂದುಬೀಚಿರ ।
ಪ್ರಮದೆಯರಿಕ್ಕೆಪಳ್ಗೊಡೆಸುಧಾಕರನಂಕೊಳಬಾಡೆಮಾಡೆರಾ ॥
ಗಮನೆಳವೆಣ್ಗೆಕೇಸಡಿಯಕೆಂಪುತನುಪ್ರಭೆಬೀಜೆಚಂದ್ರಿಕಾ ।
ಭ್ರಮೆಯನಿಳಾಧಿಪಂನಡೆದನೋಲಗಸಾಲೆಗದೊಂದುಲೀಲೆಯಿಂ ॥ 16

ವ ॥ ಅಂತುಬಂದುತನ್ಮಧ್ಯಸ್ಫಟಿಕಘಟಿತವೇದಿಕಾಖಂಡಮಂಡನಮೆನಿಸಿರ್ಪ್ಪಸಿಂಹಪೀಠದೊಳಮೋಘಬಾಣನಪ್ಪುದಾತ್ತರಾಘವನುಮಧಿರಾಜಪಾರ್ಶ್ವಮಣಿಮಯಾಸನದೊಳ್ಸಾಗರಾವರ್ತ್ತಧನುರ್ಜ್ಯಾಲತಾತಾಡನಜನಿತಕಿಣಕಳಂಕಾಂಕಿತಪ್ರಕೋಷ್ಠನಪ್ಪಲಕ್ಷ್ಮಣನುಮತಿಪ್ರಭುತ್ರನಂಬಳಸಿದನಕ್ಷತ್ರಮಂಡಲದಂತೆವಿವಿಧಮಣಿಮಂಡನಮರೀಚಿನಭೋಮಂಡಲಮನಾವರಿಸೆಸೇನಾಪ್ರಧಾನರ್ಸ್ಸಮುಚಿತಾಸನದೊಳ್ಸುಗ್ರೀವಾಂಗದ ನಳನೀಳ ಜಾಂಬವ ಹನುಮತ್ಪ್ರಮುಖನಿಖಿಲಖಚರಪರಿವೃಢರುಮಿರ್ಪ್ಪುದುಮಾಸಮಯದೊಳ್ಪುರೋಹಿತನುಚ್ಚರಿತಸ್ವಸ್ತಿಶಬ್ದಂದೇವದಿಗ್ವಿಜಯಪ್ರಯಾಣಲಗ್ನಮತ್ಯಾಸನ್ನಮೆಂದುಬಿನ್ನವಿಸೆಸೇನಾಪ್ರಧಾನಂನಳಂವಿಜಯಪ್ರಯಾಣದುಂದುಭಿಯಂಪೊಯ್ಸುವುದಂ ॥

ಶಾ ॥ ಲಂಕಾಧೀಶ್ವರಕಾಳಗಂನಿನಗೆಲೇಸಲ್ತೆಂತೆನಲ್ವಾಸುದೇ ।
ವಂಕೊಲ್ವಂಪ್ರತಿವಾಸುದೇವನನಿದೇಂಸಂದೇಹಮೇಸೀತೆಯಂ ॥
ನೀಂಕೊಟ್ಟಟ್ಟುಬರ್ದುಂಕಲಾಟಿಸುವೊಡೆಂಬಂತಷ್ಟದಿಗ್ಭಿತ್ತಿಗಂ ।
ದಿಂಕಿಟ್ಟತ್ತುರಘುಪ್ರವೀರವಿಜಯಪ್ರಸ್ಥಾನಭೇರೀರವಂ ॥ 17

ಮ ॥ ಕುಳಶೈಲಂಗಳಪದ್ಮಿನೀಕುಲದದೇವೀಸಂಕುಲಂಬೆರ್ಚ್ಚೆಬೆ ।
ಬ್ಬೆಳಿಸುತ್ತುಂದೆಸೆಯಾನೆಬಿರ್ಕ್ಕಿಕಿವಿಯಂಮಾರ್ತ್ತಾಂಡನಸಪ್ತಾಶ್ವಮಂ ॥
ಡಳಿಕಂಕಾಕುಳಿತಂಪೆಡಂಮಗುಳೆಶಕ್ರಾಲಿಂಗನಂಗೆಯ್ಯೆಸಂ ।
ಚಳಿಸುತ್ತುಂಶಚಿಘೂರ್ಣ್ನಿಸಿತ್ತುವಿಜಯಪ್ರಸ್ಥಾನಭೇರೀರವಂ ॥ 18

ಕಂ ॥ ಬಲಭದ್ರನನಿರ್ಮ್ಮಲಕೀ ।
ರ್ತ್ತಿಲತಾಕಂದಳಮೆನಿಪ್ಪಪಂನೆರಡುಂಮಂ ॥
ಗಲಶಂಖಂಗಳದನಿಗ ।
ಳ್ಕುಲಗಿರಿಕುಂಜದೊಳೊಡರ್ಚ್ಚಿದುವುಮಾರ್ದ್ದನಿಯಂ ॥ 19

ಭೋರನೆಪೊಯ್ವುದುಮಾಜಿಂ ।
ಭೇರಿಗಳಂಕನಕಕೋಣಹತಿಯಿಂದಂಬಿಂ ॥
ಭಾರವಮೇನೊಗೆದುದೊರಘು ।
ವೀರಜಯಶ್ರೀಕಲಾಪಿನೀಮೇಘರವಂ ॥ 20

ವ ॥ ಆಶುಭಮುಹೂರ್ತ್ತದೊಳ್ ॥

ಕಂ ॥ ಸುರವಲ್ಲರಿಗಳ್ಮುಗುಳಂ ।
ಸುರಿದಪ್ಪುವುರಜತಶಿಖರಿಶಿಖರದೊಳೆನೆಖೇ ॥
ಚರಿಯರ್ಮುತ್ತಿನಸೇಸೆಯ ।
ನರಸಂಗಿಕ್ಕಿದರಪಾಂಗಮಾಲಾಸಹಿತಂ ॥ 21

ದಧಿತಿಲಕಪುರಸ್ಸರಮಖಿ ।
ಳಧರಾಧೀಶಂಗೆನೀಡಿದಳ್ಮತ್ತೊರ್ವ್ವ ॥
ಳ್ವಧುವದನೆದರಸ್ಮಿತಮಂ ।
ಮಧುಕರಝುಂಕಾರಮುಖರಮಂಬಾಸಿಗಮಂ ॥ 22

ವ ॥ ಆಗಳಖಿಳಜನದಜಯಜಯಧ್ವನಿವೆರಸುಕುಲವೃದ್ಧಕುಲಾಂಗನಾಜನದಾಶೀರ್ವ್ವಾ
ದಮೊದವೆಸಿಂಹವಿಷ್ಟರದಿನೆರ್ದ್ದು ॥

ಕಂ ॥ ಇರದೊಡನೆರ್ದ್ದುವಿಯಚ್ಚರ ।
ಪರಿವೃಢರಕಿರೀಟರತ್ನರುಚಿಗಳ್ಗಗನೋ ॥
ದರಮಂಚಿತ್ರಿಸೆತಳರ್ದ್ದಂ ।
ನಿರಂಕುಶಂಲಕ್ಷ್ಮಣಾನ್ವಿತಂರಘುರಾಮಂ ॥ 23

ಮಂಡಳಿಸಿದತ್ತುನಿಜರುಚಿ ।
ಮಂಡಲಮಾಗಸದೊಳೆಂಬಿನಂಪೆಳ್ಗೊಡೆಕ ॥
ಕ್ಗೊಂಡುಪರಿಭವಿಸಿದುದುಶಶಿ ।
ಮಂಡಳಮಂಬಂದುಕಂಡಪೆಳ್ದಾವರೆಯಂ ॥ 24

ಪದಿನಾಱುಂಚಮರಜಮಂ ।
ಪದಿನಱುವರ್ಕ್ಷಚರಕಂನೆಯುಪೂರ್ವ್ವಗುಡಿಯೀ ॥
ಉಱಿದಜಂಗಮಲತೆಗಳೆನ ।
ಲ್ಪಿಡಿದಿರ್ಕ್ಕಿದರೊಡನೆಮಘನನಂಬಿಕ್ಕುವಿನಂ ॥ 25

ಚ ॥ ಎಸೆದುದುಮಂಗಳಾನಕಘನಧ್ವನಿಮಂಗಳಪಾಠಕಸ್ವನಂ ।
ಪಸರಿಸಿದತ್ತುಪೂರ್ಣ್ಣಕಲಶಂಗುಡಿವಂದನಮಾಲೆಮುಂದೆಸಂ ॥
ಧಿಸಿದುವುಗಾಯಿನೀಮಧುರಮಂಗಳಗೀತರವಂಮನಕ್ಕೆಸಂ ।
ತಸದೊದವಂನಿಮಿರ್ಚ್ಚಿದುದುರಾಘವದಿಗ್ವಿಜಯಪ್ರಯಾಣದೊಳ್ ॥ 26

ಕಳಶಕುಚಂಕದಕ್ಕದಿಸೆಕೋಮಲೆಯರ್ಕ್ಕಳಿಕಾಂತಕಾಂತಮಂ ।
ಗಳಕಲಶಂಗಳಂತಳೆದುಮಂಗಳದರ್ಪ್ಪಣಪಲ್ಲವಾನನಂ ॥
ಗಳನುಡಿನೂಲನೂಪುರದಮೆಲ್ಲುಲಿಕಯ್ಮಿಗೆಪುಣ್ಯದೇವತಾ ।
ಕುಳಮೆನೆಗಾಡಿವೆತ್ತುನಡೆದರ್ಮ್ಮನುವಂಶಜಯಪ್ರಯಾಣದೊಳ್ ॥ 27

ಕಂ ॥ ಮುಗುಳದಗುಡಿಪಂಬಳಿವಿಡಿ ।
ಮುಗಿಳ್ತಣ್ಪಿಡಿದುತೀಡೆಕೈಸನ್ನೆಗಳಿಂ ॥
ಪಗೆವರ್ಬ್ಬೆಂಗುಡಿಮೆಂಬಂ ।
ತೊಗೆದುದುಮನುವಂಶಮಂಡನಂನಡೆವೆಡೆಯೊಳ್ ॥ 28

ಎರಡನೆಯಸೂರ್ಯ್ಯಹಾಸದ ।
ಪರಿಜಂಕಯ್ಕೊಂಡುಲಕ್ಷ್ಮಣಂಬಲಗೆಲದೊ ॥
ಳ್ಬರೆಬಂದಂನಿಜಪಾಂಡರ ।
ಮರೀಚಿಕಳ್ಗೊಳಿಸೆರೋಹಿಣೀರಮಣನವೋಲ್ ॥ 29

ಅಂಗದಭುಜಾಖರದರ ।
ತ್ನಾಂಗದಮಂನಖಮಯೂಖಮಾಲಿಕೆಯಿಂಚೆ ॥
ಲ್ವಿಂಗೆನೆಲೆಮಾಡಿನಡೆದಂ ।
ಜಂಗಮತಾರಾದ್ರಿಯೆಂಬಿನಂಬಲಭದ್ರಂ ॥ 30

ವ ॥ ಅಂತುರಾಜಭವನಮಂಪೊಱಮಟ್ಟುಗೋಪುರಪುರೋಭಾಗಕ್ಕೆವಂದು ॥

ಕಂ ॥ ಮುನಿಜನದಬಂಧುಜನದಭಿ ।
ಜನದಬಲಾಜನದಪರಕೆಗಳ್ಕೆವಿಯಂತೆ ॥
ಕ್ಕನೆತೀವೆರಥಮನೇಱಿದ ।
ನಿನವಂಶಜನೇಱಿವಿಜಯವಧುನಿಜಭುಜಮಂ ॥ 31

ವ ॥ ಆಸಮಯದೊಳ್ನಳನೀಳಸುಷೇಣಪ್ರಸನ್ನಕೀರ್ತ್ತಿಪ್ರಮುಖಮುಖ್ಯನಾಯಕ
ರಂಸೇನಾಮುಖಕ್ಕೆಪೇಳ್ದುಸುಗ್ರೀವಾಂಗದಜಾಂಬೂನದಗಗನಪತಿಭೂತಗತಿಪ್ರ
ಭೃತಿಗಳಂಪಶ್ಚಿಮಪ್ರದೇಶದೊಳ್ನಿಯಮಿಸಿ ತಟಿದ್ವಕ್ತ್ರವಜ್ರದಂಷ್ಟ್ರವಿರಾಧಿತಮ
ಹೇಂದ್ರವರ್ಮ್ಮರ್ದಲಾಗೆಪಲಬರುಮಂಬಲವಕ್ಕದೊಳ್ನಿಯೋಜಿಸಿಮಂದರಸಮೀರಣ
ಸಿಂಹನಾದವರಾಹವರ್ಮ್ಮರ್ಗಳಾದವರನೆಡವಕ್ಕದೊಳ್ಪೇಳ್ದುಸಾಮಿತ್ರಿಸಕಲವಿದ್ಯಾಧರ
ಕುಮಾರರ್ವ್ವೆರಸುತಾನುಂಹನುಮನುಂದಾಶರಥಿಯರಥೋಭಯಪಾರ್ಶ್ವದೊಳಾಂ
ರಥಾರೂಢರ್ಮ್ಮಯ್ಯಗ್ಗಪಾಗಿನಡೆವುದುಂ ॥

ಮ ॥ ನಡೆಗೊಂಡತ್ತು ಮದೇಭದಾನಜಲಧಾರಾಸಾರದಿಂ ಮಾರುತಂ ।
ನಡೆಗೆಟ್ಟಿರ್ದ್ದನಮುತ್ಪತಾಕೆಗಳೆನಾಕಾಶಾಪಗಾವೀಚಿನೂ ॥
ರ್ಮ್ಮ್ಯಾಡಿಸುತ್ತಿರ್ದ್ದನಮಸ್ತ್ರಶಸ್ತ್ರಪಟಲಪ್ರದ್ಯೋತದಿಂದಂಬಗ ।
ಲ್ಕ ಡುಗೊರ್ವ್ವಂಪಡೆದಿರ್ದ್ದನಂರಘುತನೂಜಾಖರ್ವ್ವಚಾತುರ್ವ್ವಲಂ ॥ 32

ಕಂ ॥ ಕರಿತುರಗರಥಪದಾತಿಯ ।
ಪರಿಸಂಖ್ಯೆಯನಱಿಯೆನಲ್ಲಿಕೇತನಪಟಸಂ ॥
ಚರಣಕ್ಕೆ ನಭಂಭಟಸಂ ।
ಚರಣಕ್ಕೆ ಧರಿತ್ರಿನೆಱೆಯದೆಂಬಿದನಱಿವಂ ॥ 33

ಮ ॥ ನಿಜತೇಜಂಪೊಱಗಾಗೆಸೈರಿಪನೆರಾಮಸ್ವಾಮಿಯೆಂಬಂತೆನೀ ।
ರಜಮಿತ್ರಪ್ರಭೆಯಂಪಳಂಚಲೆದುಸೀತಾದೇವಿಯಂಕೊಂಡುಪೋ ॥
ದಜಗತ್ಕಂಟಕತೇಜಮಿರ್ದ್ದದೆಸೆಯಂಪೊಳ್ವಂತೆಪತ್ತುಂದಿಶಾ ।
ವ್ರಜಮಂಪೊಳ್ವುಧೂದಳ್ದುಕೊರ್ವ್ವವಡೆದತ್ತುತ್ತಾನಸೇನಾರಜಂ ॥ 34

ತೆಱರುತ್ತುಂತಲೆನುಟ್ಟುತಾಳ್ದಿಧರೆಯಂಸೇನಾಭರಾಕ್ರಾಂತದಿಂ ।
ಫಣಿರಾಜಂನಡುನೆತ್ತಿಪೊತ್ತಿಕಿಡಿವಿಟ್ಟಂತಿರ್ದ್ದುದಾಗಳ್ಫಣಾ ॥
ಮಣಿಚಕ್ರಂವಿಷವಹ್ನಿಧೂಮಪಟಳಂನಿಶ್ವಾಸನಿರ್ಯ್ಯಾತ್ಸಮೀ ।
ರಣನಿಂಪೂರಿಸಿದಂತಿರಿರ್ದ್ದುದುಫಣಾಚಕ್ರಾಂಕಿತಂಸ್ವಸ್ತಿಕಂ ॥ 35

ವ ॥ ಅಂತಸಂಖ್ಯಾತಸೇನಾಸಮುದ್ರಂದಕ್ಷಿಣಸಮುದ್ರಾಭಿಮುಖಮಾಗಿನಡೆದು ॥

ಕಂ ॥ ವೇಳಾಂಧನಗನಿತಂಬದ ।
ವೇಳಾಂಧಪುರೋಪಕಂಠಮಂಸಾರ್ದ್ದುದುಭೂ ॥
ಪಾಳಸ್ಕಂಧಾವಾರಂ ।
ವೇಳಾವನವಿಸರಮಿಲ್ಲದಂಭೋನಿಧಿಪೋಲ್ ॥ 36

ವ ॥ ಆಗಳಾಪುರಾಧಿಪತಿಚತುರಂಗಸೇನಾಸಮನ್ವಿತಂಸಮುದ್ರವೆಸರವಿದ್ಯಾಧರಂಮುಂದೆ
ನಡೆವನಳನಪಡೆಗೆರಣಾನುರಾಗದಿನಡ್ಡಂಬಂದುನಿಲ್ವುದುಂ ॥

ಚ ॥ ಭ್ರುಕುಟಿಲಲಾಟದೊಳ್ತನೆಗೆತೋಱದಮುನ್ನ ಮಿದಿರ್ಚ್ಚದನ್ಯಸೈ ।
ನಿಕಮನದಿರ್ವ್ವತಂನಪಡೆತಂನಪರಾಕ್ರಮಗರ್ವ್ವದುರ್ವ್ವಿಕಾ ॥
ತುಕವೆನೆಕಟ್ಟಿದಂಖಚರನಾಯಕನಪ್ಪಸಮುದ್ರನಂಭಯಾ ।
ನಕರಸಮುದನಂನಳನರಾತಿಬಲಾರ್ಣ್ಣವಬಾಡವಾನಳಂ ॥ 37

ಮ || ಅತಿಗಂಭೀರನನರ್ಘ್ಯರತ್ನಕಟಕಾಧಾರಂಮಹಾವಾಹಿನೀ |
ಪತಿಲಕ್ಷ್ಮೀನಿಳಯಂನಿಸರ್ಗ್ಗವಿಭುಮರ್ಯ್ಯಾದಾಪರಂಲೋಕವಿ ||
ಶ್ರುತಸೇವಾಂತವನಂನಿಮಿರ್ಚ್ಚಿದಸಮುದ್ರಂಯುದ್ಧದೊಳ್ಬಂಧನ |
ಸ್ಥಿತನಾದಂತಲೆವಿಲ್ಲೊಳಿಂದೊಡೆನಳಂಗಂಡಂಬೆಱಗ್ಗಂಡರೇ || 38

ವ || ಅಂತಾತನಂತಂದುನಳಂತನಗೊಪ್ಪಿಸುವುದುಂ ಬಳಭದ್ರಂಸಮುದ್ರಂಗಭಯಮಂ
ಕೊಟ್ಟುಮನ್ನಿಸೆಮಱುದಿವಸಮಾತಂತನ್ನಸುತೆಯರಂಸತ್ಯಶ್ರೀಕಮಲೆಗುಣಮಾ
ಲೆ ರತ್ನಮಾಲೆಯೆಂಬನಾಲ್ವರಂಲಕ್ಷ್ಮಣಂಗೆಕೊಟ್ಟುವೈವಾಹಿಕಸಂಬಂಧದಿಂಭೃ
ತ್ಯಪದಮನಪ್ಪುಕೆಯ್ದುಪೂರ್ವ್ವಪದಮಂಪಡೆದಂ ಮಱುದಿವಸಮಲ್ಲಿಂದಮೆತ್ತಿನ
ಡೆವಾಗಳ್ ||

ಕಂ || ಅಡಿಗೆಱಗಿಸುವೇಳಾಚಲ |
ದೊಡೆಯಂಖಚರಂಸುವೇಲನೆಂಬಂತೆಂನು ||
ಳ್ಕೊಡಮೆಯನಿತ್ತುಱುವಿಟ್ಟಗೆ |
ನಡೆದಂರಘುಜನಬಲಕ್ಕೆ ಮಾರ್ವ್ವಲಮುಂಟೇ || 39

ವ || ಅಂತಂದಿನದಿವಸಂ ಸುವೇಳಾಚಲದೊಳಿರ್ದ್ದು ಮಱುದಿವಸಂ ಲಂಕಾದ್ವೀಪದಸಮೀ
ಪಮಪ್ಪಹಂಸದ್ವೀಪಮನೆಯ್ದಿ ಮರ್ಪ್ಪುದುಮಾದ್ವೀಪಾಧಿಪತಿನಭಸ್ತರನಸಂಖ್ಯಾತಬ
ಲಸಮೇತನಾಗಿತಾಗುವುದುಂ ||

ಕಂ || ಅನುವರದೊಳ್ಗಂಸದ್ವೀ |
ಪನಾಥನಂದ್ವೀಪಿರಥನನಂಜಿಸಿದಂಡೋ ||
ಪನತಂಮಾಡಿದಯಮದಂ |
ಡನಿಭಮದಾರಳವೊನಳನಬಾಹಾದಂಡಂ || 40

ವ || ಅಂತಾದ್ವೀಪದೊಳ್ಬೀಡಂಬಿಟ್ಟುಲಕ್ಷ್ಮೀಧರಂಪ್ರಭಾಮಂಡಲಂಗೆಬಳಿಯನಟ್ಟಿವೆಱ
ವುಂ ದ್ವೀಪಾಂತರವಿದ್ಯಾಧರಾಧಿರಾಜರನಾಜ್ಞಾವಿಧೇಯರಂ ಮಾಡುತ್ತುಮಿರ್ಪ್ಪಿನ
ಮಿತ್ತಲ್ ||

ಚ || ಅರುಣಮಣಿಪ್ರಭಾಪಟಲದಿಂದರುಣಾತಪಮಂತಗುಳ್ದಿಬಿ |
ತ್ತರಿಸುವಸಿಂಹಪೀಠದೊಳದೇನೆಸೆದಿರ್ದ್ದನೊರಾಹುಮಂಡಲಂ ||
ತರುಣದಿನೇಶಮಂಡಲಮನಾವರಿಸಿರ್ದ್ದವೊಲಿಂದ್ರನೀಲಭಾ |
ಸುರತರದೇಹದೀಪ್ತಿವೃದಿವಂತುದಿಶಾನನಮಂದಶಾನನಂ || 41

ಕಂ ॥ ಉರದಿಂದಗಲದಲಕ್ಷ್ಮೀಯು ।
ತರಳೇಕ್ಷಣಮಾಲೆಹಾರಲತೆದನುಜನವೇ ॥
ರುರದೊಳ್ಸೊಗಯಿಸಿದುದುಕಾ ।
ರಿರುಳೊಳ್ತಲೆದೋರ್ಪ್ಪತರಳತಾರಾವಳಿವೋಲ್ ॥ 42

ಅಂಗದಮಣಿಭೂಷಣಕಿರ ।
ಣಂಗಳ್ಜಗದೊಳಗಣರಸುಗಳಜಯವಧುವಂ ॥
ಪಿಂಗದೆನಿಲಿಕೆಟ್ಟುವವೊ ।
ಶಂಗಳಿವೆನೆಭುಜದೊಳೇಂಮನಂಗೊಳಿಸಿದುವೋ ॥ 43

ಅವತಂಸಪಾರಿಜಾತಾ ।
ನವಮಂಸವಿದಾಡಿಪಾಡುವಳಿನೀನಾದಂ ॥
ಸವಿವಡೆಯೆಸ್ವೈರಸಂಚಮು ।
ರವಿಕ್ಕುವಬಲೆಯುರಪಿಂಡುಗಂಕಣದುಲಿಯುಂ ॥ 44

ತನುಜರುಮನುಜರುಮುಚಿತಾ ।
ಸನದೊಳ್ಮಂತ್ರಿಗಳುಮಿರೆವಿಲಾಸದಿನಿರ್ದ್ದಂ ॥
ದನುಜಾಧೀಶಂಪ್ರತ್ಯಂ ।
ತನಗಂಬಳಸಿರ್ದ್ದನೀಲಕುತ್ತೀಲದವೋಲ್ ॥ 45

ಜನಕಸುತೆಮನದೊಳಿರೆಪರಿ ।
ಜನಮಿರೆನಿಯತಪ್ರದೇಶದೊಳ್ವಿರಹೋದ್ರೇ ॥
ಕನಮಂಮುಚೆಯಿಸಿದನುಜೇಂ ।
ದ್ರನಿಂದ್ರನಿಪ್ಪಂತಿರೋಲಗಂಗೊಟ್ಟಿರ್ದ್ದಂ ॥ 46

ವ ॥ ಅಂತಿರ್ಪ್ಪುದುಂ ॥

ಕಂ ॥ ಚರನೋರ್ವ್ವಂಬಂದುವಸುಂ ।
ಧರೆಯೊಳ್ಕೈಯ್ಯಿಕ್ಕಿಜಯಜಯಧ್ವನಿಪೊಣ್ಮ ॥
ತ್ತಿರೆನಿಂದುನಿಟಿಲತಟಗತ ।
ಕರಕುಟ್ಮಳನಾಗಳಸುರಪತಿಗಿಂತೆಂದಂ ॥ 47

ಚ ॥ ಭುವನದೊಳಿಂನೆಗಂಮಚಿದುಕಂಡಚಿಯೆಂದನುಜೇಂದ್ರದೇವದಾ ।
ನವಖಚರಾಧಿನಾಯಕರನಾಹವದೊಳ್ಸಿನಗುಕ್ಕಿಸೊಕ್ಕಿವಿಾ ॥
ಯುವತಲೆದೋಯುದ್ಧತರನೀಗೆಳೆದಂನೆಚಿಕಂಡೆನಾಂಮಹೋ ।
ತ್ಸವದೊಳೆಬಂದಪರ್ಮ್ಮನುಜರಾಹವಕೇಳಿಗೆರಾಮಲಕ್ಷ್ಮಣರ್ ॥ 48

ಮ || ಬಲನಾರಾಯಣರಂನೆರಂಬಡೆದುನಿಂಮೊಳ್ಕಾದುವುದ್ಯೋಗದಿಂ |
ಪಲವುಂದ್ವೀಪದಖೇಚರರ್ನ್ನೆರೆದುಹಂಸದ್ವೀಪದೊಳ್ಬಿಟ್ಟುವಮುಂ ||
ಕಲಹಕ್ಕೊಲ್ಲದನಂಮನೊಲ್ಲದವರೆಲ್ಲಂತಂಮೊಳೊಂದಾದರಾ |
ಕಲಿಗಳ್ದಾನವಚಕ್ರವರ್ತ್ತಿನಿಜದೋರ್ದ್ದಂಡಂಬರಂಗಂಡರೇ || 49

ವ || ಎಂದುಬಿಂನವಿಸಿದ ಚರನವಚನಮನವಧಾರಿಸಿ ಬೀರಸಿರಿಯುಪೆಳ್ಪಸದನದಪೆಳಗಿನಂ
ತೆದಂತಕಾಂತಿಪಸರಿಸೆ ಮಂದಸ್ಮಿತಮುಖಂ ವಿದ್ಯಾಧರವೀರಪ್ರಮುಖನಪ್ಪದಶಮು
ಖನಿಂತೆಂದಂ ||

ಶಾ || ತಂದೆಂಸೀತೆಯನಾಪರಾಭವಮನೆಂನೊಳ್ಕಾದಿನೀಗಲ್ಮನಂ |
ದಂದೇಕಾಕಿಗಳೆತ್ತಿಬರ್ಪ್ಪರವರೊಳ್ಸಂಧಾನಮಂಮಾಡಿಮುಂ ||
ನೆಂದುಂಕಪ್ಪಮನಿತ್ತುಬಾಳ್ವಖಚರಕ್ಕೈವಾರದಿಂಕಾದಿಸ |
ಲ್ಬಂದಪ್ಪರ್ಪ್ಪರಹಸ್ತದಿಂಮೊಳನಿಡಲ್ಬರ್ಪ್ಪಂತೆಕಾಳಾಹಿಯುಂ || 50

ಹ || ಎಂಬುದುಂ ||

ಕಂ || ಮೃಗರಾಜಂಗರ್ಜ್ಜಿಪುದುಂ |
ನಗದೊಳ್ಮಾರ್ದ್ದನಿಗಳುಣ್ಮುವಂತೊಡನೊಡನಿಂ ||
ದಗಿಮೇಘವಾಹನಾದಿಗ |
ಳಗುರ್ವ್ವಿಪರ್ವ್ವಿನಮಸುರನೆಂದುದನೆಂದರ್ || 51

ವ || ಅಂತವರ್ನ್ನರ್ಮ್ಮಸಚಿವನಂತಿಚ್ಛೆಯಂ ಪ್ರತಿಪಾಲಿಸಿನುಡಿವುದುಮದಂಕೇಳ್ದು ನ
ಯವಿನಯವಿದ್ಯಾವಿಭೂಷಣನಪ್ಪವಿಭೀಷಣಂದೇವಬಿಂನಪಮನವಧಾರಿಸುವುದೆಂ
ದಿಂತೆಂದಂ ||

ಕಂ || ಇಚ್ಛಾಪ್ರತಿಪಾಲನಮಂ |
ತುಚ್ಛಂನುಡಿಗುಂವಿವೇಕಿಪೊಲ್ಲಮೆಗಂಡೇ ||
ನಾಚ್ಛಾದಿಸುಗುಮೆಕಾರ್ಯ್ಯಪ |
ರಿಚ್ಛೇದಮನುಭಯಲೋಕಹಿತಮಂನುಡಿಗುಂ || 52

ಮತ್ತಕೋಕಿಲಂ || ಅಶುಚಿಲೋಭಿಶುಚಿಲೋಭಮಿಲ್ಲದಂ |
ವಿಶದಶೌಚಗುಣಮೊಂದೆಕಾರಣಂ ||
ಕುಶಲವೃತ್ತಿಗೆನೆಭೂಭುಜಂಗುಣಾ |
ತಿಶಯಸೂರಿಶುಚಿಯಾಗದಿರ್ಪ್ಪನೇ || 53

ಕಂ || ಬಗೆದೆಸೆಬಿದ್ದಂಪರಿವುದು |
ಬಗೆಯಂಬಗೆದಂತೆಪರಿಯಲೀಯದೆಪಿರಿಯಂ ||
ತೆಗೆವುದುಪಳಿಪೊರ್ದ್ದದಬ |
ಟ್ಟೆಗೆನಿಜದಿಂದಾರಬಗೆಗಳುಂನೇರಿದುವೇ || 54

ಕಂ ॥ ಅವಿರುದ್ಧವಿದೆಂಬಿನಮನು ।
ಭವಿಸುವುದಿಂದ್ರಿಯಸುಖಂಗಳಂಮಱೆವ[illegible]ಮೀ ॥
ಱವುತಂನನವೆಂಬಂನೆಗ ।
ಮವನೀಶ್ವರನಪ್ಪುಕೆಯ್ವುದಿಂದ್ರಿಯಜಯಮಂ ॥ 55

ಜಡಧಾರೆಸೋಂಕೆಸಿರಿಗಂ ।
ನಡಿಗೆಕಲುಂಪೇಱುವಂತೆಸಿರಿಯೊಡೆಯಂಗೇ ॥
ಪಡೆವಮಾತೊಪರಕಲತ್ರದ ।
ತೊಡರ್ಪ್ಪಿನೊಳ್ಕಪ್ಪುಗೊಳ್ಳದಿರ್ಪ್ಪುದೆತೇಜಂ ॥ 56

ಸಮನಿಸೆದುಶ್ಚರಿತಂಬಿಡ ।
ದಮಹೀಪಾಳಂಕಳಂಕಮಂಕಳೆಯದೆಚಂ ॥
ದ್ರುಮನುಂಬಡೆವಾಗ್ನಿಯನುಪ ।
ಶಮಿಸದಲವಣಾಂಬುರಾಶಿಯುಂಜಡನಕ್ಕುಂ ॥ 57

ಕುಲಕಾಂತಾಸಂತೋಷಂ ।
ಕುಲವರ್ದ್ಧನಹೇತುಪರವಧೂಸಂತೋಷಂ ॥
ಕುಲನಾಶಹೇತುವೆಂಬುದು ।
ಹಲಧರಗೋಪಾಲಬಾಲಕಪ್ರಖ್ಯಾತಂ ॥ 58

ಮ ॥ ವಧಮುಂಬಂಧನಮುಂಪರಾಭವಮುಮಂಗಚ್ಛೇದಮುಂಪೊರ್ದ್ದುಗುಂ ।
ವಿಧುವಿಖ್ಯಾತಿಕಲುಂಬುಗೊಳ್ಗುಮಪವಾದಾತೋದ್ಯನಾದಂದಿಶಾ ॥
ವಧಿಯಂದಾಂಟುಗುಮನ್ಯಜನ್ಮದೊಳಮಕ್ಕುಂದುರ್ಗ್ಗತಿಕ್ಲೇಶಮುಂ ।
ದಧಿರಾಜಕ್ಕೆಲರಾಲಿಸಮ್ಮಱೆದುಮನ್ಯಸ್ತ್ರೀಯಸೀವಾರ್ತ್ತೆಯಂ ॥ 59

ಯಮಪಾಶಂಪಗೆವಂಗೆಕಲ್ಪಲತೆಕಯ್ಯಾಂತಂಗೆನಲ್ಬುಂಡವಿ ।
ಕ್ರಮಮಂಬಾಗದವೇರ್ಮ್ಮೆಯಂಮೊಱೆಯದನ್ಯಸ್ತ್ರೀಕಚಾಕರ್ಷಣಂ ॥
ಶ್ರಮಸಂಭೋಗವಿಳಾಸಮಂಮೊಱೆವಬಾಹಾಸಂಗದಿಂಪಿಂಗದಿ ।
ಕ್ಕರ್ಮೆವೀರಾಂಗನೆಕಡ್ಡತೋಳ್ವಸುಗೆಯೊಳ್ನೇರ್ಪ್ಪಟ್ಟುನಿಲ್ವಂನಳೇ ॥ 60

ಕಂ ॥ ಪೂವಿನೊಳಂಪೋಕ್ಕೆಱಗಿನವ ।
ಗೇವುದೊಯುದ್ಧಂಪ್ರಧಾನಪುರುಷಕ್ಷಯಮುಂ ॥
ಬೀವಚನವಂವಿಚಾರಿಪು ।
ದೀವುದುಜಾನಕಿಯನುೞಿವುದಸದಾಗ್ರಹಮಂ ॥ 61

ಪರಿಜನಮುಮಾಪ್ತಜನಮುಂ ।
ಪುರಮುಂಬಾಂಧವರುಮಗಲದೊಂದೆಡೆಯೊಳ್ನಿಲ್ಕೆ ॥
ತಿರಲಕ್ಕುಂಜಾನಕಿಯುಂ ।
ಗರಿಹರಿಸಿದೊಡಲ್ಲದಂದಿರಲ್ಬಂದಪುದೇ ॥ 62

ವ॥ ಎಂದುನುಡಿಯಲೊಡನಿಂದಗಿವಿಷತರುಪ್ರಸವದಂತೆದಂತಕಾಂತಿಪಸರಿಸೆವಿಭೀಷಣಂ
ಸುಭಾಷಿತದೂಷಣಪರನಿಂತೆಂದಂ ॥

ಮ॥ ವನಿತಾರತ್ನಮಯತ್ನಸಾಧ್ಯಮೆನೆಕೈಸಾರ್ದತ್ತುಸೈಪಿಂದದಂ ।
ಮನುಜಂಗೀವುದುಮಂತ್ರಮಾಯದೊಡಪಾಯಂಸಾರ್ಗ್ಗಮೆಂಬೀನಯಂ ॥
ಮನದೊಳ್ಕೃಚ್ಛ್ರರಿಪಂಗೆತೋರ್ಕ್ಕಮುಱಿದಂಗೇಂತೋರ್ಕ್ಕಮೇಯುದ್ಧಸಾ ।
ಧ್ಯನೆವಿದ್ಯಾಧರಸಿದ್ಧಕಿಂನರಜನಮೂವಿದ್ರಾವಣಂರಾವಣಂ ॥ 63

ಮ।ಸ್ರ॥ ಬಗೆಯಂಶಂಕಾತಮಂತೆತ್ತಿರೆತಱಿಸಲವೆಂಕಾಣ್ಬುದೇಮೊಗ್ಗನೀರ್ಗ್ಗಾ ।
ಡಿಗೆಮುಂನೀರ್ಕ್ಕೊಂಟೆವಿದ್ಯಾತ್ಮಕಮಸುರಬಲಂಕಾಪಿನಾಳ್ತೋಳಬಲ್ಪಿಂ ॥
ನೆಗೆದಾತಾರಾದ್ರಿಯಂಚಾಳಿಸಿದದಶಮುಖಂಮುಖ್ಯನೆಂದೆಂದುಲಂಕಾ ।
ನಗರಕ್ಕಾತಂಕಮಕ್ಕುಂಮನುಜಬಲದಿನೀಕಜ್ಜಮಂನೀನೆಕಾಣ್ಬೆ ॥ 64

ಪರೆಚಕ್ರಂಚಕ್ರಮಂಮಿಱುವುದರಿಪುಬಲಂಚಂದ್ರಹಾಸಾಸಿಯಂಬೀ ।
ಕರಮಂಮಱುಂಪುದೇಮಾರ್ಪ್ಪಡೆಗೆಪಡೆಯಲಾತಂಕಮಂನಂಮವಿದ್ಯಾ ॥
ಧರಸೈನ್ಯಂಸಾಲದೇಕೆಂಮನೆಭಯರಸಮಂತಾಳ್ದುವೈಲಕ್ಷ್ಮಣಂಸಂ ।
ಗರದೊಳ್ಪೌಲಸ್ತ್ಯನಂಗೆಲ್ದಪನೆರಣರಸೋತ್ಕಂಠನಂದುಗ್ರಕಂಠಂ ॥ 65

ವ॥ ಎಂಬುದುಂವಿಭೀಷಣಂಮುಳಿಸಂಮೊಗಕ್ಕೆತಂದಿಂದಗಿಯನಿಂತೆಂದಂ ॥

ಕಂ॥ ಅಯಶಕ್ಕಂಜದೆನೀಂತಂ ।
ದೆಯರಾಜ್ಯಕ್ಕಱಿಕಲಹಮಂಬಲ್ಲಿದರೊ ॥
ಳ್ಬಯಸುವೆಗಾವಿಲರಣಭೂ ।
ಮಿಯೊಳಾರುಮನುಱಿಯಲೀಗುಮೇರಾಮಶರಂ ॥ 66

ತಂದನೆಸೀತೆಯನಱಿವಂ ।
ತಂದಂಲಂಕಾಪುರಕ್ಕೆತನಗಂನಮಗಂ ॥
ತಂದಂತವಿಲಂನಂಮರ ।
ಸಂದೆಸೆಯಂಪುದಿಯೆದುರ್ಯಶಃಪಟಹರವಂ ॥ 67

ಕಂ ॥ ವಟ್ಟಂದೆತ್ತುದುಬೆಳ್ಳಿಯ ।
ಬೆಟ್ಟಂಬಿಣ್ಪಿಂಗೆನಿಪ್ಪಕೋಟಿಕಶಿಲೆಯಂ ॥
ಬಟ್ಟಾಡಿದಬಾಹಾಬಲ ।
ನಿಟ್ಟಳವೆಂಟನೆಯಕೇಶವಂಗಿದಿರುಂಟೇ ॥ 68

ಮ ॥ ಕರವಾಳ್ಸಾಧನವಾಯ್ತುಸಾಧಿಸದೆಸೈಪಿಂಸೂರ್ಯಹಾಸಂಧನು ।
ಶ್ಶರಜಾಲಂನೆರವಾಗೆಸಂಹರಿಸಿದಂಸೇನಾನ್ವಿತಂಯುದ್ಧದೊ ॥
ಳ್ಖರನಂದೂಷಣನಂಪ್ರಸಿದ್ಧರಖಿಳದ್ವೀಪಾಧಿಪರ್ಖೇಚರ ।
ನ್ನೇರದಾಳೋಳಿಗೆವಂದರಾರ್ಗಮಧಿಕಂಸೌಮಿತ್ರಿಸಾಮರ್ಥ್ಯದೊಳ್ ॥ 69

ಉ ॥ ಸಂಧಿಯನುಂಟುಮಾಡುವುದುಸೀತೆಯನೀವುದುರಾಮಲಕ್ಷ್ಮಣ ।
ಬ್ಬಾಂಧವರಪ್ಪುದಂಬಗೆವುದೇಳಿಸುವಂತವರ್ಗಾರುಮೋಸಮ ॥
ಸ್ಕಂಧರೆಯುದ್ಧದೊಳ್ರಣಮನರ್ಥಕಮೆಂತೆನೆಕಾದಿದಂದುನಿ ।
ಲ್ಕಂಧರೆನಿಲ್ವಿನಂಪಳಿಜಯಾಪಜಯಂಗಳೊಳಂದಶಾನನಾ ॥ 70

ಶಾ ॥ ಮುಂಕೋಟ್ಟೆಟ್ಟುವುದುತ್ತಮಂರಿಪುಬಲಂವಾರಾಸಿಯಂದಾಂಟಿದಂ ।
ನಂಕಲ್ಪಾಂತಕೃತಾಂತದೂತಸದೃಶಂಗಳ್ರಾಮರೌದ್ರೇಷುಗ ॥
ಳ್ಲಂಕಾದ್ವಾರಕವಾಟಮಂಮುಱಿಯದನ್ನಂಲಕ್ಷ್ಮಣಜ್ಯಾಲತಾ ।
ಟಂಕಾರಂಕಿವಿಗೆಯ್ದದಂನಮಖಿಲಪ್ರಖ್ಯಾತೆಯಂಸೀತೆಯಂ ॥ 71

ವ ॥ ಎಂಬುದುಮಾನುಡಿಗೆಕಾರ್ಮುಗಿಲಮೊಳಗಿಂಗೆಮಸಗುವಪಂಚಾನನದಂತೆದಶಾನನಂದೆಸೆದೆಸೆಗೆಮಸಗಿ ॥

ಕಂ ॥ ಒಱೆಯಿಂದಮುರ್ಚ್ಚಿಮಿಂಚಂ ।
ಕಱೆಯುತ್ತುಮಗುರ್ವ್ವೆಪರ್ವ್ವೆವಿಳಯಾಂಬುದದಿಂ ॥
ಪೊಱಮಟ್ಟುಸಿಡಿಲಮುಸಕಮ ।
ನುಱೆಸೆಱೆವಿಡಿದತ್ತುಚಂದ್ರಹಾಸಕೃಪಾಣಂ ॥ 72

ವ ॥ ಆಗಳ್ವಿಭೀಷಣಂವಜ್ರಮಯಘನಗದಾದಂಡಮಂಕೊಂಡದಿರದಿದಿರೊಳಿರ್ಪ್ಪುದುಂ ಕುಲವೃದ್ಧರೆಡೆವೊಕ್ಕುನುಡಿದುಕೋಪಮನುಪಸಂಹರಿಸೆ ಮಂದಸ್ಮಿತಮುಖಂದಶಮುಖನಿಂತೆಂದಂ ॥

ಮಸ್ರ ॥ ಎನಗಂಬಲ್ಲಾಳ್ಗಡಂಮಾನವನಭಿನವಮಂಕೇಳಲಾಪತ್ತವಂಗಾ ।
ಳ್ತನಮಂಪೂಣ್ದಂನೊಳಂದಾಯಿಗತನಮನಿವಂತೋರ್ಕ್ಕೆದೋರ್ದ್ದಂಡಕಂಡೂ ॥
ಯನಮಂಚಂಡಾಸಿಸಂಘಟ್ಟದಿನೊಗೆವುರಿಯಿಂಮಗ್ಗಿಪೆಂಮೂಱುಕಣ್ಣಾ ।
ತನುವೆಂನಂಮಿಱಿವಱಾಂತೋಡೆಪಡೆಯದೆಸಂತ್ರಾಸಮಂಚಂದ್ರಹಾಸಂ ॥ 73

ಮ ॥ ಚಪಳಂಮೇಳದಪಂದೆಪೆಟ್ಟಿದಿದಿರೊಳ್ಮಾತಾಡೆಕೋಪಂಪೊದ ।
ಳ್ದಪವಾದಂಪರೆವಂತುಗೋತ್ರವಧೆಯಕ್ಕುಂಲಂಕೆಯಿಂದೀತನಂ ॥
ವಿಪರೀತಾತ್ಮನನೀಗಳಂತೆಕಳೆಯಿಂಶಂಕಾಕುಳಂಬಾರ್ತ್ತಯಾ ।
ದಪನೇಸಂಗರಕೇಳಿಗಿರ್ದ್ದೊಡುಪದೇಶಂಗೆಯ್ದಪಂಭೀತಿಯಂ ॥ 74

ವ ॥ ಎನಲೊಡಮಶನಿವೇಗಚಪಲವೇಗಸಂಹಾರಕವಿದ್ಯುತ್ಪ್ರಮುಖಸಾಮಂತಸಹಿತಂಮೂವತ್ತಕ್ಷೋಹಿಣೀಬಲಂಬೆರಸು ॥

ಚ ॥ ಉರಿಕೊಳಲಿರ್ದ್ದಸಾನುವನದಿಂಮದಸಿಂಧುರಯೂಥನಾಥನೋ ।
ಸರಿಸುವವಾಳ್ಕೆಯಿಂದಶರಥಾತ್ಮಜರಿಂಕಿಡಲಿರ್ದ್ದಲಂಕೆಯಿಂ ॥
ದಿರದೆವಿಭೀಷಣಂತೊಲಗಿದಂಖಚರಾನ್ವಯರಾಜ್ಯಲಕ್ಷ್ಮಿಯಂ ।
ಧರಿಯಿಸಲಿರ್ದ್ದಪುಣ್ಯನಿಧಿಯಂಸುಕೃತಂತೊಲಗಿಕ್ಕದಿರ್ಕ್ಕಮೇ ॥ 75

ಮ ॥ ದನುಜೇಂದ್ರಂಗೆನೃಗೇಂದ್ರಪೀಠವೆಮಿಗಿಲ್ಸಾಮರ್ತ್ಥ್ಯದಿಂಲಕ್ಷ್ಮಿಯಿಂ ।
ತನಗಾರುಂಮಿಗಿಲಿಲ್ಲವೆಂಬಗೆದನೇಸದ್ವೃತ್ತಮಂಬಿಟ್ಟೊಡಂ ॥
ಣನುಮಂಬಿಟ್ಟುವಿಭೀಷಣಂತೊಲಗಿಪೋದಂತಕ್ಕನುದ್ವೃತ್ತನ ।
ಪ್ಪನಸಂಸರ್ಗ್ಗದಿನಪ್ಪಸಂಪದಮುಮಂಸದ್ವೃತ್ತರೇಗೆಯ್ದಪರ್ ॥ 76

ವ ॥ ಅಂತು ವಿಭೀಷಣಂಲಂಕಾದ್ವೀಪಮಂಪೊಱಮಟ್ಟುಹಂಸದ್ವೀಪಸಮೀಪಕ್ಕೆವಂದು ನಿಜಮಹತ್ತರನಂಮುಂದಟ್ಟುವುದುಮಾತಂಪೋಗಿಪ್ರತಿಹಾರಪುರಸ್ಸರಂರಾಜಭವನಮಂಪೊಕ್ಕುದೂರಾವನತಮಸ್ತಕಂ ಸರ್ವ್ವಾಂಗಪ್ರಣತನಾಗಿ ನಿಟಿಲತಟಘಟಿತಕರಕಿಸಲಯದಮೇಲೆದಂತಕಾಂತಿಪಸರಿಸೆದೇವ ಬಿಂನಪಮನವಧಾರಿಸುವುದೆಂದಿಂತೆಂದಂ ॥

ಚ ॥ ಮದಮದಿರಾಪ್ರಮತ್ತಹೃದಯಂಹಿತಮಂತನಗೊಲ್ದುಪೇಳೆಕೇ ।
ಳದೆವಿಪರೀತಮಂಬಗೆದುಬಗ್ಗಿಸೆರಾವಣನೀದುರಾತ್ಮನೊ ॥
ಳ್ಪುದುವೆನಗೇವುದೆಂದುಬರುತಿರ್ದ್ದಪನಲ್ತೆಶರಣ್ಬುಗಲ್ಭವ ।
ತ್ಪದನಖವಜ್ರಪಂಜರಮನಾಜಿವಿಭೀಷಣನಾವಿಭೀಷಣಂ ॥ 77

ವ ॥ ಎಂದುಮತ್ತಂದಶಮುಖನಮುಖರತೆಯುಮನುದ್ವೃತ್ತತೆಯುಮಂ ನೆಱೆಯೆಬಿಂನವಿಸಿಮಾಣ್ಬುದುಮತಿಕ್ರಾಂತಪ್ರಮುಖಮಂತ್ರಿಮುಖ್ಯರೆಂದರಿವರಪ್ಪೊಡೊಡವುಟ್ಟಿದರಾಗಿಯುಮತಿಸ್ನೇಹಿತರಪ್ಪಪೂರ್ವ್ವಸಿಜಗಳಮಂಪೊಣರ್ಚ್ಚಿ ನಮಗುಪಾಯವಿನಪಾಯಮುಮಂಬಗೆದು ಬರ್ಪ್ಪರಿದಂದೇವರವಧಾರಿಸುವುದನೆ ॥

ಚ ॥ ದನುಜರಪಾಯಮಂಬಗೆವರೆಂತೆನಗಾದಶಕಂಠನುಂರಣ ।
ಕ್ಕೆನಗಿದಿರಾಗಲ್ಕೆಜನಕಾತ್ಮಜೆಯಂಕಪಟಪ್ರಪಂಚಮಂ ॥
ಜನಿಯಿಸಿಕೊಂಡುಪೋದನೆನೆಕೆಂಮನೆಪರ್ಚುವುದೇಶರಣ್ಗೆವಂ ।
ದನೊಳಭಯಪ್ರದಾನಮನೊಡರ್ಚುವುದೇವುದಿದಕ್ಕೆಮಂತಣಂ ॥ 78

ಕಂ ॥ ಎರೆದಗ್ಗಿರ್ಯದೆವಾಱಿಂ ।
ತಂನಿಕ್ಕದೆಮಱೆಗೆವಂದರಂಕಾಯದೆಬಾ ॥
ಳ್ವರಮಗನಬಾಹುದಂಡಂ ।
ನಿರರ್ಥಕಂವ್ಯರ್ಥಮನನಪಾರ್ಥಿವಜನ್ಮಂ ॥ 79

ವ ॥ ಎಂಬುದುಮಂಜನಾಸುತಂ ಜನಪ್ರವಾದದೊಳಮಿವರವಿಪ್ರತಿಯಂಕೇಳ್ದನದಲ್ಲದೆ
ಯುಂವಿಭೀಷಣಂಗುಣಾಧಿಕನೆಂಬುದು ಜಗತ್ಪ್ರಸಿದ್ಧಮಾತನೆನಗಸ್ಮಜ್ಜನನಿಯಪ್ಪ
ಸೀತಾದೇವಿಯಿರ್ದೆಡೆಯಂ ಪೇಳ್ದನ್ನಂಮಂನಿಸಿಕಳಿಪಿದನೆನೆರಘುಕುಲಾಂಬರದ್ಯು
ಮಣಿವಿಭೀಷಣಮಹತ್ತರನಂತುಷ್ಟಿದಾನಪುರಸ್ಸರಂನಿಂಮಾಳ್ದನಂತೆಂದು ಕಾಣಿ
ಸೆಂದುವಿಸರ್ಜಿಸುವುದುಮಾತಂ ವಿಭೀಷಣನಂಕಂಡುಶ್ರೀರಾಮದೇವನಕಾರುಣ್ಯ
ಮುಮಂಮಹಾಮಹಿಮೆಯುಮಂಬಿಂನಪಂಗೆಯ್ವುದುಂ ॥

ಕಂ ॥ ಪಲತೆಱದಪಱೆಯದನಿತೆರೆ ।
ಯುಲಿಯೆನೆಪೊಕ್ಕತ್ತುಕಟಕಮಂನೋೞ್ಪಂಗಕ ॥
ಣ್ಣಲಸೆವಿಭೀಷಣವಾಹಿನಿ ।
ಜಲನಿಧಿಯಂಬಂದುಪುಗುವಕುಲವಾಹಿನಿವೋಲ್ ॥ 80

ವ ॥ ಆಸಮಯದೊಳ್ ॥

ಕಂ ॥ ಇದಿರಟ್ಟಿದಿವ್ಯವಸನಾಂ ।
ಗದಾದಿಭೂಷಣಮನವನಿಪತಿಸುಗ್ರೀವಾಂ ॥
ಗದಮುಖ್ಯರನಿರದಟ್ಟಿದ ।
ನುದಾತ್ತರಾಘವನಪದಪನಾವಂಪಡೆವಂ ॥ 81

ವ ॥ ಅನಂತರಂಕತಿಪಯಪರಿಜನಪರಿವೃತಂಪ್ರಧಾನಪುರುಷಪುರಸ್ಸರಂರಾಜಮಂದಿರಮಂ
ಪೊಕ್ಕು ॥

ಚ ॥ ಮಣಿಮಯಭೂಷಣಪ್ರಭೆಮನಕ್ಕನುರಾಗಮನುಂಟುಮಾಡೆರೋ ।
ಹಣಗಿರಿವಾರ್ಧಿಯಂಮಱೆವುಗಲ್ಕೆಡೆತಂದಪುದೆಂಬಿನಂವಿಭೀ ॥
ಷಣನವನೀಶನಿರ್ದೆಡೆಗೆಬಂದುಪದಾನತನಾಗೆಭೂತಳದೊ ।
ಳ್ಪೊಳೆದನಖಾಂಶುಕಟ್ಟಿದವೊಲಿರ್ದುದುಖೇಚರರಾಜ್ಯಪಟ್ಟಮಂ ॥ 82

ವ ॥ ಆಗಳ್ ॥

ಕಂ॥ ತೆಗೆದಾದರದಿಂತಕ್ಕರ್ಗೆ ।
ಸೆಗಗನಚರನಮೃತರಸದೊಳೋಲಾಡುವವೋಲ್ ॥
ಸೊಗಯಿಸಿದಂಚಂದ್ರಿಕೆಯಂ ।
ನಗುವನರೇಂದ್ರನತನುಪ್ರಭಾಚಂದ್ರಿಕೆಯಿಂ ॥ 83

ಗುಣಮಂಕಡೆಗೊಳಿಸಿದರಾ ।
ವಣನೊಳ್ಪುದುವಿರ್ದ್ದದೋಷಹರಣಕ್ಕೆ ವಿಭೀ ॥
ಷಣನಮರನದಿಯೊಳಘಮ ।
ರ್ಷಣಮಿರ್ದ್ದಪ್ಪೊಲಿರ್ದ್ದನಧಿಪನಂಗಪ್ರಭೆಯಿಂ ॥ 84

ಜನನಾಥನಸಂಮನದಿಂ ।
ಮನದೊಳ್ಮೆಯ್ವೆರ್ಚ್ಚಿಸಂತಸಂಬಲಗೆಲದೊ ॥
ಳ್ತನಗಾಗಳೇಱಲಿಕ್ಕಿದ ।
ಕನಕಾಸನದೊಳ್ವಿಭೀಷಣಂಕುಳ್ಳಿರ್ದ್ದಂ ॥ 85

ರಾವಣನಿಂದಾದೆರ್ದೆವಳ ।
ಲಾವಗಮೋಸರಿಸೆನೃಪನದಯೆಯಿಂಖಚರಂ ॥
ದಾವಾನಳನಿಂಬೆಂದುಸು ।
ಧಾವರ್ಷದಿನಾಱಿದೆಳಮರ್ಪ್ಪಂತಿರ್ದ್ದಂ ॥ 86

ವ॥ ಅನಂತರಂರಾಮಚಂದ್ರಂವಿಭೀಷಣನನುಚಿತಸಂಭಾಷಣಸುಧಾರಸದಿಂತಣಿಪಿಬೀಡಿಂ
ಗೆಃಸಸುವುದುಮಂನೆಗಮಿತ್ತಲಪ್ರತಿಮಪ್ರಭಂಪ್ರಭಾಮಂಡಲಂತತ್ಪ್ರಪಂಚಮಂ
ಕೇಳ್ದುಸಹಸ್ರಾಕ್ಷೋಹಿಣೀಬಲಂಬೆರಸುಬಂದುಕೂಡುವುದುಂಮಱುದಿವಸಮಲ್ಲಿಂ
ತಳರ್ದ್ದುರಘುವೀರಂಸಮುದ್ರತೀರಮನೆಯ್ದೆವರ್ಪ್ಪುದುಂ ॥

ಚ॥ ಶರನಿಧಿತೇಜಮಂಜಸಮುಮಂತಲೆಯೊಳ್ನೆಲೆಪೂಣ್ದುತಾಳ್ದಿದಂ ।
ತಿರೆತುಱುಗಿರ್ದ್ದವಿದ್ರುಮಲತಾವಳಿಶಂಬರಬಳ್ಳವಳ್ಳಿಬಂ ॥
ಧುರವೆನಿಸಿರ್ದ್ದವಾರಘುತನೂಭವನೆಳ್ತರೆಸೇಸೆಯಿಕ್ಕುವಂ ।
ತಿರೆತೆರೆಗಯ್ಯೊಳಚ್ಚಳಿಸಿಸೂಸಿದುವಬ್ಧಿಯತೋಱಮುತ್ತುಗಳ್ ॥ 87

ಕಂ॥ ವಾರಿಧಿರಘುಜಂಗೆತ್ತಿದ ।
ನೀರಾಜನದೀಪಕಳಿಕೆವೊಳೆದಪುದೆಂಬಂ ॥
ತೋರೊಂದೆಡೆಯೊಳ್ಪೊಳೆದುವು ।
ರಾರಾಜಿಸಪದ್ಮರಾಗರುಚಿಮಂಜರಿಗಳ್ ॥ 88

ಕಂ ॥ ನೆಲೆಯಿಲ್ಲದೆಯುಂನೆಲನಂ ।
ಬಲವೆಂದುಂವೇಳೆಗೊಂಡುಮೆಯ್ಯಿಕ್ಕಿಯುಮಾ ॥
ಜಲನಿಧಿತರಂಗಭಂಗಾ ।
ಕುಲಿತಂನೆನೆಯಿಸಿದುದನ್ಯರಾಜನ್ಯಕಮಂ ॥ 89

ಸುಳಿಗಳ್ನೀರ್ದ್ದಿಗುರಿಯುವ್ವೋ ।
ಳ್ಸುಳಿದುವುತೆರೆತೆರೆಯನಟ್ಟಿದುವುಬೆಟ್ಟುಗಳಂ ॥
ಬಳಿಯಂಬೆಟ್ಟಿಟ್ಟುವವ್ವೋ ।
ಲ್ತುಳಿತಳ್ತವೊಲಿರ್ದ್ದುವ್ವೊಗೆದಮಣಿಕಿರಣಂಗಳ್ ॥ 90

ವ ॥ ಆಮಹಾಸಮುದ್ರಮಂಬಲಾಚ್ಯುತನೊರ್ಕ್ಕಡಿಮೆಚ್ಚುತ್ತುಮಿರ್ಪ್ಪುದುಮಾಸಮ
ಯದೊಳ್ ॥

ಚ ॥ ಜಳಧಿಯಮೇಲೆಬಂದಜಳರಾಸಿಯೊಪೇಳಿಮೆನಿಪ್ಪಪೆರ್ಮ್ಮೆಯಂ ।
ತಳೆದಬಲಂನಭೋಗಮನವಿದ್ಯೆಯಸೇತುವೆನಲ್ಕಳಂದ್ವಿಷ ॥
ದ್ಬಳವಿಲಯಾನಲಂನಡೆಯಿಸಲ್ಕಭದೊಳ್ಕಡೆದತ್ತಿಭೇಂದ್ರಸಂ ।
ಕುಳಮಕರಂಹಯಪ್ರಕರವೀಚಿವರೂಥಕುಳೀರಸಂಕುಳಂ ॥ 91

ಶಾ ॥ ಹೇತಿವ್ರಾತಮರೀಚಿರೇಚಕರಕಿರೀಟಾನರ್ಘ್ಯರತ್ನಾಂಶುಭೂ ।
ಷಾತೇಜಃಪಟಲಂವಿಮಾನಬಹುರತ್ನಚ್ಛಾಯೆತಳ್ಪೊಯ್ವಿನಂ ॥
ಜ್ಯೋತಿರ್ಮ್ಮಂಡಲಮೇಕತೆಂಕನಡೆಯುತ್ತಿರ್ದ್ದಪ್ಪುದೆಂಬಂತಸಂ ।
ಖ್ಯಾತಂತಾಂನಡೆದತ್ತುರಾಘವಮಹಾಸೈನ್ಯಂನಭೋಭಾಗದೊಳ್ ॥ 92

ವ ॥ ಮತ್ತಮಲ್ಲಿ ॥

ಉ ॥ ಪಾವನಿಜಾಂಬವಾಂಗದಸುಷೇಣವಿಭೀಷಣಚಂದ್ರರಶ್ಮಿಸು ।
ಗ್ರೀವವಿಯಚ್ಚರಪ್ರಮುಖರೇಜಿದರತ್ನವಿಮಾನಮಾಲಿಕೋ ॥
ಭಾವಹಮಾಗೆಸುತ್ತಿಬರೆತಂನವಿಮಾನಮನಂಬರಂಬಿಯು ।
ಲ್ಲಾವರೆದಾಣದಂತಿರೆಸೆದಂರಘುಜಂಕಳಹಂಸಲೀಲೆಯಿಂ ॥ 93

ಮ ॥ ಪೊಗೆಯುತ್ತುಂಬಡವಾಗ್ನಿರಾವಣಯಶೋದುಗ್ಧಾಬ್ಧಿಯ ಂಪೀರ್ವ್ವದಂ ।
ದುಗದಿಂಬಂದಪುದಕ್ಕುಮೆಂಬಬಗೆಯಂಸೌಮಿತ್ರಿಪೀತಾಂಬರಾಂ ॥
ಕುಗಳಂತನ್ನತನುಪ್ರಭಾಪಟಳಮುಂಮಾಳ್ಪಂತುಬಂದಂವಿಮಾ ।
ನಗಭಸ್ತಿಸ್ತಬಕಂಪಳಂಚಲೆವಿನಂಜ್ವಾಲಾಸಹಸ್ರಂಗಳಿಂ ॥ 94

ಚ ॥ ಗಣನೆಗಳುಂಬವಿಮಾನ್ಯಪರುಷಾರ್ಜಿತಪುಣ್ಯಮೆನಲ್ಕೆ ರಾಮಲ ।
ಕ್ಷ್ಮಣರವಿಮಾನಮಂಬಳಸಿಖೇಚರರಾಜವಿಮಾನಸಂಚಯಂ ॥
ಮಣಿಮಯಮಂಬರಸ್ಥಳಮುಮಿಟ್ಟೆಡೆಯೆಂಬಿನಮಂಬುರಾಸಿಯುಂ ।
ಕ್ಷಣದೊಳೆದಾಂಟಿಪೊರ್ದಿದುದುವೇಳೆಯರನ್ಯವನಾಂತರಾಳಮಂ ॥ 95

ಉ ॥ ಜಟ್ಟಿಮನೊಟ್ಟಿಬಟ್ಟೆನಡೆವಕ್ಕೆಗಮೇವುದೊವಾರ್ಧಿಯುಂಮುಗಿ ।
ಲ್ವಟ್ಟೆಯೆಬಟ್ಟೆಯಾಗೆನಡೆವಕ್ಕಱಿವೆತ್ತಿಯಕ್ಕರಾಧಿಪ ॥
ತ್ತೊರ್ಟ್ಟನೆದಾಂಟಿವಾರಿಧಿಯನಾತಡಿಗೆಯ್ದುವುದುಂನಭಕ್ಕೆ ತೂಂ ।
ಕಿಟ್ಟವೊಲಾಗೆದಳ್ಳಿಸಿದುದಾಪಡೆಯೊಳ್ಪುಟಪೊಣ್ಮುವುಳ್ಳೊಳಂ ॥ 96

ವ ॥ ಅಂತುಸಮುದ್ರಮಂದಾಂಟಿಲಂಕಾಭಿಮುಖರಾಗಿಪಯಣಂಪೋಗಿವಿಂಶತಿಯೋಜನ
ವಿಸ್ತಾರಮುಂತ್ರಿಂಶದ್ಯೋಜನಾಯಾಮಮುಮಪ್ಪರಣಭೂಮಿಯಂಕೈಕೊಂಡಿ
ರ್ಪ್ಪುದುಂ ॥

ಕಂ ॥ ಅವರವರ್ಗೆತಕ್ಕ ಮಣಿಮಯ ।
ಭವನಮನಧಿರಾಜರಾಜಗೃಹಮಂಕಡೆಪ ॥
ಟ್ಟವರ್ಗೊಳಗಾಗಿರೆಸಂಭ್ರಮಿಂ ।
ನವಿದ್ಯೆಯಿಂಸ್ಥಪತಿಮಾಡಿಕೊಟ್ಟಂಬೀಡಂ ॥ 97

ಗೃಹದೀರ್ಘಿಕೆಯುಂವಲ್ಲೀ ।
ಗೃಹಮುಂಗೃಹವನಮನುಪವನಂಗಳನಾಗ್ರಂ ॥
ಸ್ಪೃಹಣೀಯಮಾಗೆಪಲವುಂ ।
ಬಹುವಿದ್ಯಾಗೃಹಮಹತ್ತರರ್ಸ್ಸವೆದಿತ್ತರ್ ॥ 98

ವ ॥ ಅಂತುಬೀಡಂಬಿಟ್ಟಲ್ಲಿರಾಮಲಕ್ಷ್ಮಣರರಾಜಭವನಮಂಬಳಸಿಸುಗ್ರೀವಪ್ರಭಾಮಂ
ಡಲಪ್ರಮುಖನಿಖಿಲಖೇಚರ ಪರಿವೃಢರುಮಖಿಳಸೇನೆಯುಮನುರೂಪಭವನಂಗ
ಳೊಳೆಡೆಯಱಿದುಬೀಡಂಬಿಟ್ಟಿರ್ಪ್ಪುದುಂ ॥

ಚ ॥ ದಿವಿಜನದೀತರಂಗಧವಳಂನಿಜನಿರ್ಮ್ಮಲಕೀರ್ತಿವಲ್ಲಿಭೂ ।
ಭುವನಮನಾವಗಂಪುದಿವಿನಂವಿಬುಧಾವಳಿಗಪ್ಪಿನಂಮಹೋ ॥
ತ್ಸವಮಧಿರಾಜಪೂಜ್ಯನಭಿರಾಮತೆಯಂತಳೆದಂಸರಸ್ವತೀ ।
ಶ್ರವಣವಿಭೂಷಣಪ್ರಥಿತವಾಗ್ವಿಭವಂಕವಿತಾಮನೋಹರಂ ॥ 99

ಗದ್ಯ ॥ ಇದುಪರಮಜಿನಸಮಯಕುಮುದಿನೀಶರಚ್ಚಂದ್ರಬಾಳಚಂದ್ರಮುನೀಂದ್ರಚರಣ
ನಖಕಿರಣಚಂದ್ರಿಕಾಚಕೋರಂಭಾರತೀಕರ್ಣ್ಣಪೂರಂ ಶ್ರೀನಮದಭಿನವಪಂಪವಿರಚಿ
ತಮಪ್ಪರಾಮಚಂದ್ರಚರಿತಪುರಾಣದೊಳ್ ಶ್ರೀರಾಮಚಂದ್ರಲಂಕಾಪ್ರಯಾಣವ
ರ್ಣ್ಣನಂದ್ವಾದಶಾಶ್ವಾಸಂ ॥

ತ್ರಯೋದಶಾಶ್ವಾಸ ಪ್ರಾರಂಭಃ.

ಕಂ ॥ ಶ್ರೀಸುಕೃತಕ್ಕಾತ್ಮವಚ ।
ಶ್ರೀಸೂನೃತಸಂಪದಕ್ಕೆ ತೊಡವೆನೆಜಸವಾ ॥
ಶಾಸುದತಿಗೆಸಾಹಿತ್ಯಕ ।
ಳಾಸುಭಗಂಪೆಂಪುವೆತ್ತನಭಿನವಪಂಪಂ ॥ 1

ವ ॥ ಆಸಮಯದೊಳ್ ॥

ಮ।ಸ್ರ॥ ಜನತಾಕೋಲಾಹಲಂಕಾಹಳಬಹುವಿಧವಾದ್ಯಸ್ವನಂಶಂಖಭೇರೀ ।
ಧ್ವನಿಹೇಷಾಬೃಂಹಿತಂಗಳ್ವೆಳೆಯಜಲನಿಧಿಧ್ವಾನಮೆಂಬಂನೆಗಂಭೋಂ ॥
ಕನೆಕರ್ಣ್ಣಾಭ್ಯರ್ಣ್ಣವಂಸಾರ್ತ್ತರೆಮುನಿದಸುರಂಪೊಯ್ಸೆಪೊಣ್ಮಿತ್ತುಚಂಡಾ ।
ಶನಿಘೋಷಂಲೋಕಮಂಮೂವಳಸುವಳಸೆಸಂನಾಹಭೇರೀನಿನಾದಂ ॥ 2

ಕಂ ॥ ಎನಗೆರಣರಭಸದಿಂಗಡ ।
ಮನುಜಂಮುನಿದೆತ್ತಿಬಂದನಿಂದೋಃಕಂಡೂ ॥
ಯನವಮಂಕಳಲ್ಚುವೆಡೆಯಾ ।
ಯ್ತೆನುತ್ತುಮುತ್ತರಳತಾಮ್ರಲೋಚನನಾದಂ ॥ 3

ವ ॥ ಆಗಳಾಭೇರೀರವವಮಂಬರಮನಾವರಿಸುವುದುಮತ್ತ ಭಾಸ್ಕರಪುರದ ಪಯೋಧರ
ಪುರದ ಕಾಂಚನಪುರದ ಕಂಪನಪುರದ ವ್ಯೋಮಪುರದ ವ್ಯೋಮವಲ್ಲಭಪುರದ ಗಂಧ
ರ್ವಪುರದ ಶಶಿಮಂಡಲಪುರದ ಶಿವಮಂದಿರಪುರದ ಸಿಂಹಪುರದ ಲಕ್ಷ್ಮೀಪುರದ ಮ
ಹಾಶೈಲಪುರದ ಚಕ್ರಪುರದ ಶ್ರೀಮಂತರಪುರದ ಮಯಪುರದ ಶ್ರೀಗುಹಾಪುರದ
ಅಶ್ವಪುರದ ಚಂದ್ರಪುರದ ಶ್ರೀಮನೋಹರಪುರದ ಕಿರಿಂಜಯಪುರದ ಶಶಿಸ್ಥಾನಪುರ
ದ ಮಾರ್ತಾಂಡಪುರದ ಸಹಸ್ಥಾಪನಪುರದ ವಿಶಾಲಸ್ಥಾಪನಪುರದ ಜಯಪುರದ
ಪರೀಕ್ಷಾಪುರದ ವಿಶ್ವಪುರದ ಶ್ರೀಚಂದ್ರಪುರದ ಗಜಪುರದ ಗೋಪುರದ ಮಹಿಷೀಪು
ರದ ರತ್ನಪುರದ ವಿದ್ಯಾಧರರ್ಮೊದಲಾಗೆಪಲವುಂಪುರದ ವಿದ್ಯಾಧರಾಧಿರಾಜರೆಲ್ಲ
ರುಂತಂತಂಮಸಮರಸಾಮಗ್ರೀಸಹಿತರಾಗಿಬಂದುಕೂಡುವುದುಂದಶಗ್ರೀವನವರಂ
ಸನ್ಮಾನದಾನಪುರಸ್ಸರಂಸಂತೋಷಂಬಡಿಸಿ ಚತುಸ್ತ್ರಿಂಶತ್ಸಹಸ್ರಾಕ್ಷೋಹಿಣೀಬಲಂ
ಬೆರಸು ರಣರಸೋದ್ಗ್ರೀವನಾಗಿದ್ದರ್ನಾತ್ರಿಖಂಡಮಂಡಲಾಧಿಪತಿಯೊಳ್ ॥

ಕಂ ॥ ರಣರಭಸದಿಂದಮೂವಂ ।
ಪೊಣರ್ವ್ವಂಮೂವತ್ತುನಾಲ್ಕುಸಾಸಿರವಕ್ಷೋ ॥
ಹಿಣಿಗೊಡೆಯನಾದನಂರಾ ।
ವಣನಂವಿದ್ವಿಷ್ಟಸೈನ್ಯವಿದ್ರಾವಣನಂ ॥ 4

ವ ॥ ಮತ್ತಿತ್ತರಾಮಲಕ್ಷ್ಮಣರ್ಗ್ಗೆಸಹಸ್ರಾಕ್ಷೋಹಿಣೀಬಲಕ್ಕಧಿಪತಿಯಪ್ಪಸುಗ್ರೀವಪ್ರಭಾಮಂಡಲಸಮನ್ವಿತಸ್ಸಂಗ್ರಾಮೋತ್ಸುಕಚಿತ್ತರಾಗಿಪೆಱರುಮತಿಬಲರಪ್ಪವಿದ್ಯಾಧರರ್ವ್ವಂದುಕೂಡುವದುಮವರನೊಳಕೊಳುತ್ತುಮಿರ್ದ್ದರತ್ತದಕ್ಷೋಹಿಣೀಪ್ರಮಾಣಮೆಂತೆನೆ । ಪತ್ತಿಯೆಂದುಂಸೇನೆಯೆಂದುಂಸೇನಾಮುಖಮೆಂದುಂಗುಲ್ಮಮೆಂದುಂವಾಹಿನಿಯೆಂದುಂ ಪೃತನೆಯೆಂದುಂಚಮೂವೆಂದುಮನೀಕಿನಿಯೆಂದಿಂತುಯೆಂಟುಮತೆಱದಿಂಪಡೆಗೆಪೆಸರಕ್ಕುಮಲ್ಲಿ ॥

ಕಂ ॥ ಒಂದಾನೆಯಕಾಲ್ಗಾಪಿನೊ ।
ಳೊಂದೆರಥಂಮೂಱುತುರುಗಮಯ್ದುಂಕಾಲಾ ॥
ಳೊಂದಾಗಿಬಂದುಮೊನೆಯೊ ।
ಳ್ನಿಂದಂದದುಪತ್ತಿಯೆಂಬಪೆಸರಂಪಡೆಗುಂ ॥ 5

ತ್ರಿಗುಣಂಪಿರಿದಕ್ಕುಂಪ ।
ತ್ತಿಗೆಸೇನೆಯದಕ್ಕೆ ಮತ್ತೆ ಸೇನಾಮುಖಮುಂ ॥
ತ್ರಿಗುಣಂಪಿರಿದಕ್ಕುಮದಂ ।
ತ್ರಿಗುಣಿಸಿದೊಡೆಗುಲ್ಮಮೆಂಬಪೆಸರಂಪಡೆಗುಂ ॥ 6

ತ್ರಿಗುಣಿಸೆಗುಲ್ಮಮನದುನೆ ।
ಟ್ಟಗೆವಾಹಿನಿಯಕ್ಕುಮಂತೆತದ್ವಾಹಿನಿಯುಂ ॥
ತ್ರಿಗುಣಿಪುದುಂಪೃತನೆಯದಂ ।
ತ್ರಿಗುಣಿಸೆಪೆಱತೇನೊತಾಂಚಮೂಪೆಸರ್ವ್ವಡೆಗುಂ ॥ 7

ಈನೆಗಳ್ದಚಮೂತ್ರಿತಯಮ ।
ದಾನೀಕಿನಿಯಕ್ಕುಮದುಪದಿರ್ಮ್ಮಡಿಸಲೊಡಂ ॥
ತಾನಕ್ಷೋಹಿಣಿಯಕ್ಕುಂ ।
ಜೈನೋಕ್ತಮನನ್ಯರೆತ್ತಲಱಿವಮ್ಮರ್ಕ್ಕಳ್ ॥ 8

ವ ॥ ಇಂತೆನಿಸಿರ್ದ್ದಕ್ಷೋಹಿಣಿಯೊಳಗಣಾನೆಗಳುಮಿಪ್ಪತ್ತೊಂದುಸಾವಿರದೆಂಟುನೂಱೆಪ್ಪತ್ತಕ್ಕುಂ ೨೧೮೭೦ ರಥಂಗಳುಮನಿತೆಯಕ್ಕುಂ ೨೧೮೭೦ ಕುದುರೆಯಱುವತ್ತಯ್ದುಸಾವಿರದಱುನೂಱಪತ್ತುಮಕ್ಕುಂ ೬೫೬೧೦ ಕಾಲಾಳೊಂದುಲಕ್ಕಮುಮೊಂಭತ್ತುಸಾವಿರದಮೂನೂಱಯ್ವತ್ತಕ್ಕುಂ ೧೦೯೩೫೦ ॥

ಕಂ ॥ ಒಂದಕ್ಷೋಹಿಣಿಗಿನಿತ ।
ಕ್ಕಂದಲ್ಲಿ ತುರಂಗಸಂಖ್ಯೆಯೆನೆಪಡೆಯೆರಡುಂ ॥
ನಿಂದಿಱಿವೊಡೆನೆಲನೆಡೆಗಿಱಿ ।
ದೆಂದಿರದಾಪಡೆಯಪವಣನಱಿವವನಾವಂ ॥ 9

ಗಣಿದಿಗನಿನಿತುಂಟಕ್ಷೋ ।
ಹಿಣಿಯೆಂದೆಣಿಸಲ್ಸಮರ್ತ್ಥನಕ್ಕೆ ಮಃರಥಮಾ ॥
ರಣವಾಹಪದಾತಿಗಳಂ ।
ಗಣಿಯಿಸಲಾರ್ತ್ತಪನೆರಾಮರಾಣಬಲಮಂ ॥ 10

ಚ ॥ ಭಗಣದಲೆಕ್ಕಮಂಮಳೆಯನೀರ್ಪನಿಯಂಪರಮಾಣುಸಂಖ್ಯೆಯಂ ।
ಗಗನದಸೀಮೆಯಂಜಳಧಿವೀಚಿಗಳಂದೆಸೆಯಂತಮಂಪನ ॥
ಣ್ಬುಗಿಪನೆರಳ್ಬಲಂಗಳಮದದ್ವಿಪವಾಹವರೂಥಕಿಂಕರಾ ।
ಳಿಗಳಪವಣ್ಗಳಂಪವಣಿಸಲ್ಬಗೆದಪ್ಪನೆಗಾಂಪನಾಗನೇ ॥ 11

ವ ॥ ಇಂತತಿಪ್ರಬಲಮಪ್ಪುಭಯಬಲಮುಮಾಯುಧಂಗಳನರ್ಚ್ಚಿಸುವ ವಿಜಯವಾರ
ಣವಾಜಿಗಳಂಪೂಜಿಸುವವೀರಸನ್ನ್ಯಸನಮಿರ್ಪಸುಭಟಾಳಾಪಮನಾಲಿಸುವರವಳಿ
ಘೋಷಿಸುವದಂದುಗದಿನಂದಿನಿರುಳಂಕಳಿಪನೇಸಮೂರ್ಕ್ಷಡುವುದುಮಿಂದಗಿಪಸೆಸಿದಂದ
ದೊಳ್ ॥

ಕಂ ॥ ಆರೆಮಗಿದಿರ್ಚ್ಚುವರ್ಸ್ಸುವು ।
ರಾರಂಭಕ್ಕಾಮೆಮುಖ್ಯನಾಯಕರೆವೆನು ॥
ತ್ತಾರಿಂಮುನ್ನಂಸೆರಗಂ ।
ಪಾರದೆಹಸ್ತಪ್ರಹಸ್ತರಂದೊಡ್ಡಿರ್ದ್ದರ್ ॥ 12

ಮಾರೀಚಂಮೊದಲಾಗೆಮು ।
ಹಾರಥರೊಡನೇಱಿಸಿಂಹರಥಮಂರಥಿಗಳ್ ॥
ನೀರದಗರ್ಜ್ಜನಮಂರಣ ।
ಭೇರೀರವಮಿಳಿಸೆಲಂಕೆಯಂಪೊಱಮಟ್ಟರ್ ॥ 13

ಪುಲಿಯರಥದೊಳ್ಪಲರ್ಮ್ಮ ।
ಡ್ಗಲಿಗಳ್ವಜ್ರೋದರಾದಿವೀರಪ್ರಮುಖ ॥
ರ್ಕ್ಕಲಹಕ್ಕೆನಡೆಯೆನಡೆದ ।
ರ್ಪ್ಪಲಂಬರಂಬರಚರರ್ತ್ತರಂಗಮದಳದೊಳ್ ॥ 14

ಕಂ ॥ ಕರಿತುರಗಾರೂಢಸ್ವರ್ಗಂ ।
ಗರಕ್ಕೆ ತನಗಂಗರಕ್ಕರೆನಿಸಿದವಿದ್ಯಾ ॥
ಧರನತನಯರೇಳುಕೋಟಿಯು ।
ವರೆ ಬರೆರಣಭೂಮಿಗಿಂದ್ರಜಿತುಪೊಱಮಟ್ಟಂ ॥ 15

ಇಂದಗಿಯಕೆಲದೊಳಹಿತರ ।
ನಿಂದಗಿದುಗಿವಂತುವಮಾಳ್ಪನೆನಗಳ್ಕದರಾ ॥
ರೆಂದಂಬಂತೂಗುತ್ತುಂ ।
ಬಂದಂಜಿತಶತ್ರುಮೇಘವಾಹನವೀರಂ ॥ 16

ಶಾತತ್ರಿಶೂಲರುಚಿತೀ ।
ವ್ರಾತಪವಂಬೇಱೆಬೇಱೆ ರಿಪುಬಲವಿಲಯೋ ॥
ತ್ಪಾತಮೆನೆಕುಂಭಕರ್ಣ್ಣಂ ।
ಜ್ಯೋತಿಪ್ರಭಮಣಿವಿಮಾನದೊಳ್ಪೊಱಮಟ್ಟಂ ॥ 17

ವ ॥ ಅಂತುನಿಜವಿಜಯಸೇನೆಸಂಗ್ರಾಮಭೂಮಿಯೊಳೊಡ್ಡಿ ನಿಲ್ವುದುಂ ॥

ಮ ॥ ಪಿಡಿದುಗ್ರಾಸ್ತ್ರಮನೇಱಿಪುಷ್ಪಕಮನಾಶಾಚಕ್ರಮಂಚಕ್ರಮಂ ।
ನಡೆನೋಡುತ್ತುಮಪಾರಸೈನ್ಯಸಹಿತಂಪೊಣ್ಮೇಱಂದುವೆಂಪೋಲೆಚೆ ॥
ಳ್ಗೊಡೆಭೇರೀರವಮೇಕಶಂಖನಿನದಂತಳ್ಪೊಯ್ಯೆದಿಕ್ಚಕ್ರಮಂ ।
ನಡೆದಂದಾನವಚಕ್ರವರ್ತ್ತಿಸಮರಪ್ರಾರಂಭಸಂರಂಭದಿಂ ॥ 18

ವ ॥ ಅಂತುನಡೆವೆಡೆಯೊಳ್ ॥

ಚ ॥ ಒಡೆಯೆಸುರಾಲಯಂಕೆಡೆಯೆಪರ್ವ್ವತಸಂಕುಲಮುರ್ವ್ವರಾತಳಂ ।
ನಡುಗೆದಿಶಾನನಂಪೊಗೆಯೆಭೂಮಿರುಹಂಪ್ರತಿಕೂಲವಾಯುವಿಂ ॥
ದುಡಿಯೆಖಗಾಳಿದುಸ್ಸ್ವರದಿನೊಳೆರಣಾಗ್ರಹದುರ್ಣ್ಣಯಕ್ಕಣಂ ।
ಸೆಡೆಯದೆಸಂಗರಾವನಿಗೆಮಾನಧನಂನಡೆದಂದಶಾನನಂ ॥ 19

ಕಂ ॥ ಸಮರಾರ್ತ್ಥಿಪೊಣ್ಮುವುತ್ಪಾ ।
ತಮನಪಶಕುನಂಗಳಂದಶಾಸ್ಯಂವೀರ ॥
ಪ್ರಮುಖಂಬಗೆಯದೆಬಂದಂ ।
ಸಮರಾವನಿಗರ್ತ್ಥಿದೋಷಮಂಬಗೆದಪನೇ ॥ 20

ವ ॥ ಅಂತುಬಂದೊಡ್ಡಿನಿಲ್ವುದುಂ ॥

ಕಂ ॥ ದನುಜೇಂದ್ರನೊಡ್ಡು ಕಂಗನೆ ।
ಗನೆಯುತ್ತಿರೆನೋಡಿಕಂಡುವಾನರಬಿಪ್ನ ॥
ಮ್ಮರ್ನಿನಿಸನುವಿಸೆಕಾದುವತ ।
ಕ್ಕಿನೊಳಾಹವಭೂಮಿಗೆಕ್ಕೆಯಿಂನಡೆತಂದರ್ ॥ 21

ಪಲತೆಱದಪಜೆಯದನಿಗ ।
ಳ್ಸಲೆವೆಚ್ಚುರ್ಗವಕಡಲತೆರೆಯಂತಾಮ್ಮರ್ಗಟ್ಟನಬ ॥
ಲ್ಲಲಿಯನೆಕಲಹಕ್ಷೋಣಿಗೆ ।
ಪಲಬಸ್ಸರ್ಭಟರಕ್ಕರ್ಗಪಿಧ್ವಜನ್ನರ್ಗಡೆತಂದರ್ ॥ 22

ಪಲತೆಱದವಾಹನಂಗಳ ।
ನಲಂಘ್ಯವಿಕ್ರಮರೆನಿಪ್ಪವಿದ್ಯಾಧರವೀ ॥
ರಲಾಮರೇಱಿಸಂಗ್ರಾ ।
ಮಲೋಲುಪರ್ಸ್ಸರ್ಮರಭೂಮಿಗಂಬೆಳ್ತಂದರ್ ॥ 23

ನಳನೀಳರ್ಸ್ಸಮರೋರ್ವ್ವಿಗೆ ।
ವಿಳಯಾಗ್ನಿಗಳಂತೆಮುಂತೆನಡೆದರ್ವ್ವಿದ್ಯಾ ॥
ಬಲದಭುಜಬಲದಸೇಣಿಸಿಂ ।
ಕಲಿಗಳ್ಹಸ್ತಪ್ರಹಸ್ತರೊಳ್ತಱಿಯಲ್ ॥ 24

ಅಂಗದಕುಮಾರನಾಹವ ।
ರಂಗದೊಳಾನಿಂದ್ರಜಿತ್ತುಮಾರಂಗೀವೆಂ ॥
ಭಂಗಮನೆಂದುಪರಾಕ್ರಮ ।
ತುಂಗಂಕಡುಕೆಯ್ದುಕದನಕೇಳಿಗೆಬಂದಂ ॥ 25

ಅಮಿತಚತುರಂಗಸೇನಾ ।
ಸಮನ್ವಿತಪ್ಲವಗಕೇತುಗಳ್ಮಾರುತಮಾ ॥
ಗ್ಗರ್ಮನೆಳೆಸಿಬಳಸಿನಡೆದ ।
ರ್ಸ್ಸಮರಕ್ಷೋಣಿಗೆಸುಷೇಣನುಂಜಾಂಬವನುಂ ॥ 26

ವ ॥ ಅಂತುನಿಜನಾಮಾಂಕಿತವಿಜಯವೈಜಯಂತಿಗಳಂಬರಮನಳ್ಳಿಱಿಯೆಜಾಂಬವಾಂಗದಸುಷೇಣಪ್ರಮುಖನಿಖಿಲವಲಿಮುಖಧ್ವಜಪ್ರಧಾನರ್ರಣರಸಿಕರಾಗಿನಡೆದಮ್ಮರ್ತ್ತಂಪ್ರಭಾಮಂಡಲನುಂ ಮಹೇಂದ್ರನುಂ ಚಂದ್ರಾಭನುಂ ಮಹಾಬಲನುಂ ಸರ್ವ್ವಪ್ರಿಯನುಂ ದುರ್ಬ್ಬುದ್ಧಿ ಶರಭನುಂ ಪ್ರೀತಿಂಕರನುಂ ಅನುಂಧರನುಂ ದೃಢರಥನುಂ

ಕುಮುದಾವರ್ತ್ತನನುಂ ಸೂರ್ಯ್ಯಜ್ಯೋತಿಯುಂ ವಿಜಯಾಶ್ರಯನುಂ ವಿಮಲಸಾ
ಗರನುಂ ಸನ್ಮಾನನುಂ ರತಿವರ್ದ್ಧನನುಮೆಂಬನೆಸರನಾಯಕರುತ್ತಾಯಕರಾಗಿನ
ಡೆದರ್ಮ್ಮತ್ತಂ ॥

ಕಂ ॥ ಓರೋರ್ವ್ವರಚತುರಂಗಮ ।
ನಾರೋಹಿಸಲ್ಕೆಱಿವರೆನೆರಣಾನಕರುತಿದಿ ॥
ಗ್ವಾರೋಹಮನೆಯ್ದೆ ಖೇಚರ ।
ವೀರರಗುರ್ವ್ವರ್ವ್ವಸಂಗರೋರ್ವ್ವಿಗೆವಂದರ್ ॥ 27

ಜವನೊಳ್ತೊರೆಯೆನಿಸುವಖಚ ।
ರವೀರಭಟರೇಱಿಪುಲಿಯರಥಮಂಸಮರೋ ॥
ತ್ಸವದೊಳ್ನಡೆದರ್ದ್ದಶವದ ।
ನವರೂಥಿನಿಯುಂಜವಂಗೆಬಾಣಸುಗೆಯ್ಯಲ್ ॥ 28

ಪ್ರಸ್ತಾರಂದೋರ್ವ್ವಲಮಂ ।
ದುಸ್ತರಮಂಬೀಱಲೆಂದುರಣಭೂಮಿಗೆತೇ ॥
ಜಸ್ತ್ರಣಿನಡೆದನಹಿತತ ।
ಮಸ್ತೋಮಮನಳಱಿಮಂಡಲಾಗ್ರಮಯೂಖಂ ॥ 29

ವ ॥ ಮತ್ತಂವಿಪಕ್ಷಬಲಕುಧರಕುಲಿಶಪ್ರಹಾರನೆನಿಸಿದಪ್ರಸ್ತಾರನುಂ ಕದನಕೇಳೀಕೃ
ತಾಂತನೆನಿಸಿದಹಿಮವಂತನುಂ ರಿಪುಮನೋಭಂಗನೆನಿಸಿದಭಂಗನುಂ ಪ್ರಚಂಡಪ್ರ
ತಾಪನೆನಿಸಿದಪ್ರಿಯರೂಪನುಮಾದಿಯಾಗೆಗಗನಚರರನೇಕರನೇಕಾನೇಕಪಂಗಳನೇ
ಱಿಯಂಕುಶದಮಸೆಗಳ್ಗಗನತಳಮನಾವರಿಸೆರಣಕ್ಷೋಣಿಗೆನಡೆದರ್ಮ್ಮತ್ತಂಯು
ವಸಮುಕಕ್ಷನೆನಿಪ್ಪದುಷ್ಪ್ರೇಕ್ಷಣನುಂ ರಿಪುಗಜಘಟಾವಿಘಟನಮೃಗೇಂದ್ರನಪ್ಪ
ಪೂರ್ಣ್ಣಚಂದ್ರನುಂ ಪೃಥನರಸಪಯೋನಿಧಿಯಪ್ಪಸುವಿಧಿಯುಂರಿಪುಹೃದಯವಿದಾ
ರಣರಣಾನಕಸ್ವನನೆನಿಪ್ಪನಿಸ್ವನನುಂ ನಿರ್ಜ್ಜಿತಾನೇಕವಿಗ್ರಹನೆನಿಪ್ಪಪ್ರಿಯವಿಗ್ರಹ
ನುಂಮೊದಲಾಗೆಸಿಂಹರಥಮನೇಱಿಸಂಗರಾಂಗಣಕ್ಕೆನಡೆದರ್ಮ್ಮತ್ತಂವಿದ್ಯುತ್ಕ
ರ್ಣ್ಣಕುಲಕ್ಷಿತಿಧರತರಳಸಂಗ್ರಾಮಪ್ರಮುಖನಿಖಿಲಘೋಳಾಯಿಲರ್ಮ್ಮನೋಜವ
ಜಾತ್ಯಶ್ವಂಗಳನೇಱಿಕದನಕ್ಷೋಣಿಗೆನಡೆದರ್ಮ್ಮತ್ತಂ ॥

ಕಂ ॥ ಅನುವರಭೂಮಿಗೆಜಲವಾ ।
ಹನನುಂರವಿಹನುಮನುಂಪ್ರಚಂಡಾರಿಯುಮು ॥
ಗ್ರನುವಾದಿಯಾಗೆ ಖೇಚರ ।
ರನೇಕವಾಹನಮನೇಱಿನಡೆದರನೇಕರ್ ॥ 30

ವ ॥ ಅಂತುಸಂಗ್ರಾಮಭೂಮಿಗೆವಂದುರಘುವೀರನಬಲದಸೇನಾನಾಯಕರಪ್ಪನಳನೀಳ ರವೇಳ್ವಡೆಯೊಳೊಡ್ಡಿನಿಲ್ವುದುಂ ॥

ಉ ॥ ಆಪ್ರತಿಮಪ್ರತಾಪನಿಧಿಭೂಷಣರತ್ನಹಟತ್ಕಿರೀಟರ ।
ತ್ನಪ್ರಭೆಬೀಱೆಪೇಱೆಕುಡುಮಿಂಚಿನಗೊಂಚಲನುಗ್ರಯುದ್ಧಕೇ ॥
ೞಿಪ್ರಿಯನಪ್ರಮೇಯಬಲನುದ್ಧತಮುದ್ಗರಹಸ್ತನೇಱಿರ ।
ತ್ನಪ್ರಭಮಂವಿಮಾನಮನಗುರ್ವಿಸಿದಂನಭದೊಳ್ವಿಭೀಷಣಂ ॥ 31

ವ ॥ ಮತ್ತಮಾತನಸಮಕಕ್ಷದೊಳ್ನಿಜಾಕ್ಷೋಹಿಣಿಗಾಗಸಮೆಡೆನೆಱೆಯದೆನಿಸಿ ॥

ಮ ॥ ಬಲನಾರಾಯಣರಂನಿರೀಕ್ಷಿಸಿದಶಗ್ರೀವಂರಣಕ್ಷೋಣಿಯೊ ।
ಳ್ತಲೆಯಂತೂಗಿಪೊಡರ್ಪುದೋರ್ಪೆನೆನುತುಂಬಂದೊಡ್ಡೆ ತಾರಾಭ್ರಮಂ ॥
ಡಲಮಂಮೂವಳಸಾಗಿಮುತ್ತೆ ವಿಲಸದ್ಭೂಷಾಪ್ರಭಾಮಂಡಲಂ ।
ಬಲವಾರಾಸಿಯಮಧ್ಯದೊಳ್ವರುಣನಂತಿರ್ದಂಪ್ರಭಾಮಂಡಲಂ ॥ 32

ವ ॥ ಮತ್ತಂತತ್ಸಮೀಪದೊಳಸಂಖ್ಯಾತವಾಹಿನೀಸಹಿತನಾಗಿನಿಜಕಿರೀಟರತ್ನಪ್ರಭೆನಭ ಮನಾವರಿಸೆ ॥

ಕಂ ॥ ಸುಗ್ರೀವಂಕಡುಕೆಯ್ದುದ ।
ಶಗ್ರೀವನೊೞಱಿಯಲಾನೆಸಾಲ್ವೆನೆನುತ್ತುಂ ॥
ವಿಗ್ರಹಕಾಂಕ್ಷೆಯಿನಿರ್ದನು ।
ದಗ್ರಬಲಂರತ್ನಮಯವಿಮಾನಾರೂಢಂ ॥ 33

ವ ॥ ಮತ್ತಂವಿರೋಧಿಬಲಸಂವರ್ತನಸಮಯನೆನಿಪಯುದ್ಧಾವರ್ತನನುಂ ರಣಕ್ರೀ ಡಾನುಕೃತಕೃತಾಂತನೆನಿಪವಸಂತನುಂ ರಿಪುಕುಲಕುಮುದವನರದನಿಯೆನಿಪಕು ಮುದನುಂ ಕೀರ್ತಿಚಂದನರಸಚರ್ಚಿತದಿಗಂತನೆನಿಸಿದ ಹೇಮಾರ್ಚಿತನುಂ ವಿ ದ್ವಿಷ್ಟಕುಳಕಾಳೋರಗನೆನಿಪ್ಪುರಗನುಂಮೊದಲಾಗೆ ಪಲರಂಬರಚರಪರಿವೃಢರಂ ಬರಮನಾವರಿಸೆವಿವಿಧಾಯುಧಹಸ್ತರ್ಜ್ಯೋತಿರಮರನಾಯಕರಂತಿರ್ಪುದಾಮಾ ವಿದ್ಯಾಧರಾಧಿರಾಜಮಧ್ಯದೊಳ್ ॥

ಕಂ ॥ ಚಾಮರವನಿಕ್ಕೆಖೇಚರ ।
ಕಾಮಿನಿಯರ್ಮಣಿವಿಮಾನದೊಳ್ಮಣಿಮಯಭಂ ॥
ಟಾಮಧುರಧ್ವನಿಯೊಳ್ಕ ।
ಲ್ಪಾಮರರಿರ್ಪಂತೆರಾಮಲಕ್ಷ್ಮಣರಿರ್ದರ್ ॥ 34

ವ ॥ ಅಂತು ಭಯಬಲಮುಂನೆಲನುಮಾಗಸಮುಮೆಡೆನೆಱೆಯದಂತುಸಮರಸಮುಚಿತ ವ್ಯೂಹಪ್ರತಿವ್ಯೂಹಸ್ಥಾಪನೆಗಳಂಯಥಾವಿಧಿಯಿಂಪ್ರಯೋಗಿಸಿತಂತಮಮೊನೆಯ

ನಾಯಕರಬಿರುದಿನಬೀರವದ್ದಳಿಯಪದಿರಪಜಿಯಕಹಳೆಯಕಳಕಳಂಕಿವಿಯನೆಯ್ದೆ ಮಿಳಿರ್ದುಮಿಳ್ಳಿಸುವವೆಸರಕುರುಬಿನಸಳಯಿಗೆಗಳುಂ ಸಂದಣಿಸಿನಿಮಿರ್ದಪಲವುಂವೀರರಂದವುಮಂಕಣ್ಬೊಲಕ್ಕೆ ಬರೆಕನಲ್ದೊನಲ್ದು ಕದನಕೇಳೀಕುತೂಹಳರಾಗಿ ಕ್ಸುರ್ದುಮಿತ್ತನಳನೀಳರುಮತ್ತಹಸ್ತಪ್ರಹಸ್ತರುಮೊಡನೆಪ್ರಳಯಪ್ರಭಂಜನಂಬೀಸುವಂತೆಕಯ್ದೊಸುವುದುಂ ॥

ಚ ॥ ಎಳೆವೊಳಗಿತ್ತೊ ಭಾನುರಥಮುರ್ವಿಗೆಬಿದ್ದುದೊ ಶೇಷಕಂಠಕಂ ।
ದಳಕಱನಾಸ್ಥಿನುಗ್ಗಿದುದೊ ಗೋತ್ರನಗಂನಡುಗಿತ್ತೊ ಸಾಗರಂ ॥
ತಳರ್ದುದೊ ಮೇರೆಯಿಂದಮುಳಿದಂದಿನಿತದ್ಭುತನಾದಮಾದವು ।
ಗ್ಗಳಿಸದೆನಲ್ವಿಘೂರ್ಣಿಸಿದುದೀರ್ವ್ವಲದೊಳ್ಸಮರಾನಕಸ್ವನಂ ॥ 35

ಕಂ ॥ ಕರಿಯೊಳ್ಕರಿಹಯದೊಳ್ಹಯ ।
ಮುರುರಥದೊಳ್ರಥಗಳಾಳ್ಗಳೊಡನಾಳ್ಗಳ್ಕಾ ॥
ಯ್ದುರುವಣಿಸಿತಾಗೆತಾಗಿದು ।
ವೆರಡುಂಪಡೆನೆಲನೊಳಾಗಸಂತಾಗುವವೋಲ್ ॥ 36

ಮ॥ಸ್ರ॥ಧರೆಕಂಪಂಗೊಳ್ವಿನಂಪೇರ್ವ್ವಡೆಗಳೆರಡುಮೊಂದೊಂದಱೊಳ್ತಾಗೆತೂರ್ಯ್ಯ ।
ಸ್ವರಮುಂಕೋದಂಡಟಂಕಾರಮುಮಿಭರದಸಂಘಟ್ಟನಿರ್ಘೋಷಮುಂಜೋ ॥
ದರಬಾಣಾಸಾರಘೋರಧ್ವನಿಯುಮಸಿಖಣತ್ಕಾರಮುಂಪರ್ವ್ವಿರೋದೋಂ ।
ತರಮಂಸಂವರ್ತ್ತಕಾಲಕ್ಷುಭಿತಜಲನಿಧಿಧ್ವಾನದಂತಾದುದೆತ್ತಂ ॥ 37

ವ ॥ ಅಂತುತಾಗುವುದುಂ ॥

ಮ ॥ ಕರವಾಳೊಳ್ಕರವಾಳ್ಪೆಳಂಚೆಕಿಡಿಗಳ್ಪೇರಾನೆವೇರಾನೆಯೊ ।
ಳ್ಖರದಿಂದಂಮೊಗಮಿಕ್ಕೆ ದಂತಶಕಲಂಗಳ್ತ್ತೆಗ್ಗಳೊಳ್ತ್ತೆಗ್ಗಳು ॥
ಬ್ಬರಮೇಸಾಡೆತುರಂಗಕೇತನಚಯಂಗಳ್ಕೊಂತದೊಳ್ಕೊಂತಮಾ ।
ಸುರಮಪ್ಪಂತೊಡವೊತ್ತೆತೋಱವೇಣಗಳ್ಬೀಳ್ತಂದುವುಗ್ರಾಜಿಯೊಳ್ ॥ 38

ವ ॥ ಅಂತುಭಯಬಲಚತುರಂಗಸೇನೆಭರಂಗೆಯ್ದು ತಾಗಿತಪ್ಪುತ್ತಿ ಱಿವಸಮಯದೊಳ್॥

ಚ ॥ ನಡೆಗಿಡೆಗಾಳಿಪೂಳೆಗಗನಸ್ಥಳಿತೆಕ್ಕನೆತೀವೆದಿಗ್ಮುಖಂ ।
ನಡುವಿರುಳಂತೆಕಳ್ತಲಿಸೆಪಟ್ಟಪಗಲ್ರಣಮಂನಿರೀಕ್ಷಿಸ ॥
ಲ್ಪಡೆಯದೆದೇವರುಂದಿವಿಜಕಾಂತೆಯರುಂಬೆಱಗಾಗೆಪೂಣೆಪೊ ।
ಕ್ಕೊಡನೊಡನಾರ್ದ್ದರಳ್ಪಡೆಯಬಿಲ್ಪಡೆಬೀಱಿದುದಸ್ತ್ರವಿದ್ಯೆಯಂ ॥ 39

ಮ ॥ ದೆಸೆಯಂನಂಗಿದಿನೇಶನಂನೊಣೆದುರೋದೋಭಾಗವಂತೀವೆಸಂ ।
ಧಿಸಿಮಂದೈಸಿಧನುರ್ವ್ವಿಲಂಗಳಿಸೆಬಾಣಶ್ರೇಣಿಸೇನಾಂಗದೊ ॥
ಳ್ಬಿಸುನೆತ್ತರ್ವೊರ್ವಿಜವೊಣ್ಮೆಸಾತ್ತ್ರರೆಕರುಳ್ಕಂಪಾಲಿಗಳ್ಪೊಸೆಬಂ ।
ಡಿಸೆಕೆಯ್ಗಳ್ಕಡಿಖಂಡಮಾಗೆಕಣಕಾಲ್ಗಳ್ನಟ್ಟುವುಗ್ರಾಜಿಯೊಳ್ ॥ 40

ಕಂ ॥ ರಣಗತ್ತಲೆಕಯ್ಮಿಗೆಬಿ ।
ಲ್ಲಣಿಕಡುಕೆಯ್ದುಭಯಬಲದೊಳಂಬಿಕ್ಕುವುದುಂ ॥
ಕಣೆಕಣೆಯನೊರಸೆಕದನಾಂ ।
ಗಣದೊಳ್ಕಿಡಿಕೆದಱಿದತ್ತುಕೆಂಪದಮಳೆಯಂ ॥ 41

ಮಾರ್ಮ್ಮಲೆದುಬಿಲ್ಲಬಿತ್ತಿಗ ।
ರೋರ್ಮ್ಮದಲಿಸೆಕಣೆಗಳುಚ್ಚಿರ್ಪೋದುವುನೆರನಂ ॥
ಧರ್ಮ್ಮಗುಣಚ್ಯುತರನ್ಯರ ।
ಮರ್ಮ್ಮವಿಭೇದಿಗಳೆನಿಪ್ಪುದೊಂದಚ್ಚರಿಯೆಃ ॥ 42

ಎಡೆಗಿಡೆಗಗನಂಪವನಂ ।
ನಡೆಗಿಡೆಬಿಲ್ವಡೆಗಳೆಸುವಕಣೆಗಳ್ನಿರನಂ ॥
ಬಿಡೆನಟ್ಟುಸುಭಟರಸುವಂ ।
ನಡೆಯಿಸಿದುವುಯಮಪುರಕ್ಕೆಯಮದೂತರವೋಲ್ ॥ 43

ತುಡುವಂಬಂಬಿಡುವಂಬಂ ।
ನಡುವಂಬಂಕಾಣ್ಬದಾರ್ಗ್ಗಮರಿದೆಂಬಿನೆಗಂ ॥
ಕಡುವಿಲ್ಲರ್ಕ್ಕಡುಕೆಯ್ದಿಸೆ ।
ಕಡುವೇಗದೆಪರಿದುವರಣಜಲದಪೊನಲ್ಗಳ್ ॥ 44

ಬಾಣಾಂಧಕಾರಮುದ್ಗತ ।
ಶೋಣಿತಸಂಧ್ಯಾಭ್ರವಸ್ತಮಿತರವಿಕಿರಣ ॥
ಶ್ರೇಣಿಧನುರ್ಬ್ಬಲಸಮರ ।
ಕ್ಷೋಣಿಜಮಾಕಾಳರಾತ್ರಿಪಡೆದುದಗುರ್ವ್ವಂ ॥ 45

ಚ ॥ ರವಿಕಿರಣಂಗಳಸ್ತಮಿಸೆಕತ್ತಲೆಕಯ್ಮಿಗೆಸುತ್ತಿಮುತ್ತಿದಿ ।
ಗ್ವಿವರಮನಾಗಸಂಪೊಳೆವಪೊಂಗಱಿಯಿಂಕಮಿಲಾಗೆಭೋರೆನ ॥
ಲ್ಪವನಜವಂಗಳೇರ್ವ್ವಲದಬಿಲ್ವಡೆಪೊಕ್ಕಿಸೆಬಾಣಸಂಕುಲಂ ।
ಕವಿದುವುತೋಳವಿಂಡುಕವಿವಂತೆಲೆಯಿಕ್ಕದಕಾನನಂಗಳಂ ॥ 46

ವ ॥ ಅಂತುಮಲ್ಲದೆಯುಂ ॥

ಮ ॥ ಸೆರಗಂಪಾರದೆಪೊಣೆಪೊಕ್ಕು ಪೊಱಮುಯ್ಯಂತಾಗೆಕ್ಕೈವೇಗವ ।
ಚ್ಚರಿಯಂಪುಟ್ಟಿಸೆತೀವಿತೊಟ್ಟಿಸುವುದುಂನೇರ್ದ್ದಿಕ್ಕೆ ಸರ್ವ್ವಾಂಗಮಂ।
ಶರಜಾಳಂಬಿಸನೆತ್ತರುಣ್ಮೆನೊರೆನೆತ್ತರ್ಸ್ಸೂಸೆಕಂನೆತ್ತರಂ ।
ಬಿಱಿವಿಟ್ಟುರ್ವ್ವಿಸೆಕೋಡೆಬಿಲ್ವಡೆಪಡಲ್ವಿಟ್ಟತ್ತುಸಂಗ್ರಾಮದೊಳ್ ॥ 47

ಉ ॥ ಓವದೆಬಿಲ್ಲಬಿತ್ತಗರಳುರ್ತ್ತಿಸೆರೌದ್ರಶರಾಳಿರೋಮರೋ ।
ಮೂವಳಿದಪ್ಪದುರ್ಚ್ಚಿಬಿಸುನೆತ್ತರಸುಟ್ಟುರೆಪರ್ವ್ವಿವಹ್ನಿಜಿ ॥
ಹ್ವಾವಳಿಯಂದಮಾಗೆತೊವಲಿಕ್ಕಿದದೇರ್ವ್ವಳುಬೇಗೆಗಿಚ್ಚಿನೊ ।
ಳ್ಬೇವಪೊಲಾದುವೀರ್ವ್ವಲದಬಿಲ್ಲಣಿಗಳ್ರಣರಂಗಭೂಮಿಯೊಳ್ ॥ 48

ಚ ॥ ಸ್ತನಿತಧನುರ್ಗ್ಗುಣಧ್ವನಿಶತಹ್ರದಶಸ್ತ್ರಮರೀಚಿನಾಳಿಕಂ ।
ಗನೆಗನೆವೊಡ್ಡು ಕಾರಮುಗಿಲಂತಿರೆಭೋರನೆಕೊಂಡುದಾಗಳಂ ॥
ಬಿನಮಳೆರಕ್ತವಾರಿಬೆದೆಗೂಡಿಸೆಸಾಲಿಡೆಪೇರ್ವ್ವಣಂರಣಾ ।
ವನಿತಳಮಿರ್ದ್ದದಂಕುರಿತಮಾದವೊಲೊಕ್ಕಕರುಳ್ವಣಿಲ್ಗಳಿಂ ॥ 49

ಮ ॥ ಸತತಂಸತ್ಪಥವರ್ತ್ತಿಗಳೃಜುಗಳತ್ಯುತ್ಕೃಷ್ಟವಂಶಂಗಳ ।
ನ್ವಿತಸದ್ಧರ್ಮ್ಮಗುಣಂಗಳಸ್ತ್ರತತಿಗಳ್ನಿಸ್ತ್ರಿಂಶಧಾನುಷ್ಕಸಂ ॥
ಗತಿಯಿಂದಂಪರಮರ್ಮ್ಮಭೇದಿಗಳೆನಲ್ತೀಕ್ಷ್ಣಂಗಳುಂಮಾಂಸಲೋ ।
ಹಿತವಕ್ತ್ರಂಗಳುಮಾದುವೆಂನರುಮನೇಂದುಸ್ಸಂಗಮೇಗೆಯ್ಯದೋ ॥ 50

ಉ ॥ ಆಸುರಮಾಗೆಕಯ್ಯಕಣೆಗಳ್ತವುವಂನೆಗಮೆಚ್ಚುಬಿಟ್ಟುಬಾ ।
ಣಾಸನಮಂಕಱುತ್ತಿಱಿದುಕಟ್ಟಿದಗೇಣುಡಿವಂನವನ್ನರ ॥
ಟ್ಟಾಸುರಮಾಗೆಕೂರ್ಗ್ಗಣೆಗಳಿಂದಸೆಮುಂದಡಿಯಿಟ್ಟುವೀರಸ ।
ನ್ಯಾಸದಿನಪ್ಸರೋಗಣಮನಲ್ಲಿಕೆಲರ್ವ್ವಶಮಾಗೆಮಾಡಿದರ್ ॥ 51

ಕಂ ॥ ನೊಸಲೊಳ್ನಟ್ಟಂಬಿಂಕೆ ।
ಳ್ತುಸುಭಟನುಚ್ಚಳಿಸೆಪೊಣ್ಮೆ ಬಾಯಿಂನೆತ್ತರ್ ॥
ನೊಸಲುರಿಗಂಣುರಿಯೆನೆನ ।
ರ್ತ್ತಿಸುವಮರುಳ್ವಡೆಯನಡುವೆಮೃಡನವೊಲಿರ್ದ್ದಂ ॥ 52

ವ ॥ ಅಂತುಬಿಲ್ವಡೆಪಡಲ್ವಡೆಯೆ ॥

ಕಂ ॥ ಜವನೆರ್ದೆವಿರ್ಚ್ಚಿದತೆಱದಿಂ ।
ತವುತಪ್ಪುದುಮುಭಯಬಲಧನುರ್ದ್ಧರಸೈನ್ಯಂ ॥
ಜವನೆಂಮೆಪೋರಿಗಳ್ತ ।
ಗುವಂತೆತಾಗಿದರಡರ್ತ್ತುಕಡಿತಲೆಕಾಱರ್ ॥ 53

ಕಂ ॥ ಕೆಂಬಲಗೆಯುಪ್ಪೊಳಪಿಂಸಂ ।
ಧ್ಯಾಂಬುದವಂಪಡೆದುಜಡಿದುಕಡಿತಲೆದೊಗು ॥
ತ್ತುಂಬಿಡದೆಸಿಡಿಲಬಳಗವಿ ।
ದೆಂಬಿನೆಗಂತಾಗಿದತ್ತುಭಾರ್ಗ್ಗವಸೈನ್ಯಂ ॥ 54

ವ ॥ ಆಗಳೀರ್ವ್ವಲದಕಡಿತಲೆಕಾಱರಲಗಲಗಿನೊಳ್ ಪಳಂಚುವೆಡೆಯೊಳ್ನಿರ್ಗ್ಘಾತವುಬ್ಬರಂಕಾಳವಟ್ಟ್ಯಮವತವೃೞಿತವೆಂಬಪಲವುಂತೆಱದಿಱಿವಬಿಂನಣದೊಳ್ನಿಱಿದುತಾಳಂತಟ್ಟಿಂ ಪೊಯ್ಯೆಕಡಿಖಂಡವಾದಮೆಯ್ಯುಂ ಕುಣಿಲಾಱುವಕಯ್ಯುಂ ಕಂಡಮುಂಡುವೋದತೊಡೆಯುಂ ಮುಸುಳ್ದ್ದಕಿಬ್ಬೊಟ್ಟೆಯುಂ . ಕಣೆವೋದಕಣಕಾಲುಂ ದೋಣಿವೋದವೇಗಾಲುಂ ಪಱಿದುಪಾಱುವಪಂದಲೆಗಳುಂ ದೆಸೆದೆಸೆಗೆತಿಂಣಮಾಗಿ ಸೂಸುವಕಂಣಾಲಿಗಳುಂಮುಱಿದಮೂಳೆಗಳುಂಪಱಿದಪೊರ್ಕ್ಕಳುಗಳುಂಸೋರ್ವ್ವಕರುಳ್ಗಳುಂಕೆತ್ತುವತನಿಗಂಡಂಗಳುಂಕುಣಿವಮುರುಳ್ತುಂಡಮುಂನೆತ್ತರತೊಱೆಯುಂನೆಣದಪಳ್ಳಂಗಳುಂವೆಣದಬಣಂಪೆಗಳುಂಕೊಳ್ಮಿದುಳ್ಕೊಳ್ಗಸಱುವುಗುರ್ವ್ವವಡೆಯೆ ॥

ಕಂ ॥ ಪಱಿದತಲೆರಾಗದಿಂಬೊ ।
ಬ್ಬಿಱಿದಾರ್ವ್ವಿನವಟ್ಟೆಕಟ್ಟಿದಲಗಿಂದಂತ ॥
ಕ್ತಿಱಿವುದುಮೊಡನೊಡನೆಬಯು ।
ಲ್ದೊಱೆಪರಿದುವುರೌದ್ರರಸಮುಮದ್ಭುತರಸವುಂ ॥ 55

ತಲೆಗರೆಯುದಣ್ಮಿಸತ್ತರ ।
ತಲೆಗಳನಟ್ಟೆಯೊಳಮರ್ಚ್ಚಿಕೊಂಡುಯ್ವೆಡೆಯೊ ॥
ಳ್ತಲೆತಡಮಡಲಮರಿಯರೇಂ ।
ತಲೆಯಂತಲೆವಿಡಿದುಬಿಡದೆತಲೆವತ್ತಿದರೋ ॥ 56

ವ ॥ ಅಂತುವೇರಣಿವೇಣಿಮಯಮುಮಾಗಿಮೇರೆದಪ್ಪಿದಪೂರ್ವ್ವಾಪರಪಾರಾವಾರವೀಚೀನಿಚಯಮೆನಿಸೆ ॥

ಕಂ ॥ ಸೆರಗಂಪೆಱಗಂಬಗೆಯದೆ ।
ಪೊರೆದಾಳ್ದನಜೋೞಳವಾಳ್ನಿಲೆಘೋಳಾಯ್ಗ್ಲ ॥
ರ್ಪ್ಪರಿಯಿಪುದುಮೊಂದೆನೇಱೊ ।
ಳ್ಪರಿವಂತಿರೆಪರಿದುವುಭಯಬಲದಹಯಂಗಳ್ ॥ 57

ಆಹವಕರ್ಕ್ಕಶರಶ್ವಾ ।
ರೋಹಕರೊಟ್ಟೈಲಸೇಱಿಬಿಟ್ಟಿಕ್ಕುವುದುಂ ॥
ಲೋಹಖುರಂಗಳ್ಪರಿದುವು ।
ವಾಹಿನಿಯತರಂಗಮೆನೆತುರಂಗಚಯಂಗಳ್ ॥ 58

ಉ ॥ ಕಟ್ಟಿದಪಂಚವರ್ಣಿಗೆಯಪಟ್ಟೆಯತೋಂಗಲೊಳಿಂದ್ರಚಾಪಮಂ ।
ಪುಟ್ಟಿಸಿತೋಱ್ಪವಜ್ರಕವಚಚ್ಛವಿಯೊಳ್ತ್ತಸಲಾಕಲಾಪಮಂ ॥
ಪುಟ್ಟಿಸಿತಾಗಳಿತ್ತಲುಱಿದಾಲೋಹಿತವೃಷ್ಟಿಯನಾಸವಾರಿಗ ।
ಳ್ಪುಟ್ಟಿಸೆವೀರವಪ್ಪಿಕವಿತಂದುದುರೌದ್ರರಸಂರಣೋರ್ವ್ವಿಯೊಳ್ ॥ 59

ಚ ॥ ಒದವಿದಲೋಹಪಕ್ಕರೆಯವಾಹಕರಿಕ್ಕಿದಸೀಸಕಂಗಳ್ ।
ತ್ತಿದಕರವಾಳವಜ್ರಕವಂಚಗಳಕಾಂತಿದಿಗಂತರಾಳಮಂ ॥
ಪುದಿವಿನೆಗಂಮನಃಪವನವೇಗದನೋಱ್ಪರಕಣ್ಗಳೊಳ್ಪಿಸಿ ।
ಲ್ಕದುರೆಗಳಂದದಿಂಕುದುರೆಗಳ್ಪೊಳೆದಕ್ಕಿದವೀರ್ವ್ವಲಂಗಳೊಳ್ ॥ 60

ವ ॥ ಅಂತುಪರಿದುತಾಗುವುದುಂ ॥

ಚ ॥ ಜವನರೆವಾವುಕೊಂಡುವೆನೆಕಕ್ಕರದೆಕೊಂಡುವುಚಕ್ರಮೊಯ್ದುವಂ ।
ದುವುಲಮಕಾಲಚಕ್ರಮೆನೆನಾಳಿಯಕೋಲ್ಬವನಾಳಿಯೆಂಬಿನಂ ॥
ಕವಿದುವುತೋಮರಂಜವನಡಾಮರವಾದುವುಜಾನುವಜ್ನವೂ ।
ದುವೃತರವಾರಿಯಿಂದಿಱಿಯೆಲೋಹಿತವಾರಿಗಳಾಸವಾರಿಗಳ್ ॥ 61

ಉ ॥ ಪಾಯಿಸಿಪೊಯ್ಯೆಸೋಳಯಿಲರೋರ್ವ್ವರನೋರ್ವ್ವರಗುರ್ವ್ವಪರ್ವ್ವೆಕಾ ।
ಳಾಯಸಶಕ್ತಿಯಿಂಸಮೆದಸೀಸಕದಿಂಬಕುರಾಹುಮಂಡಲ ॥
ಪ್ರಾಯಮೆನಿಪ್ಪದಾನವರಪಂದೆಲೆಗಳ್ರವಿಮಂಡಲಂಬರಂ ।
ಪಾಯೆಬಿಸಿಲ್ಪೊಡಪುರ್ವ್ವಗಿಡೆಪಾಳಿಸಿದತ್ತುಪರಾಗಲೀಲೆಯಂ ॥ 62

ಬಾಳುಡೆಪಾಱಿಬೀಳೆಪಗಲುಳ್ಕದಪೋಲ್ರುಧಿರಂದಿಗಂತಮಂ ।
ಮೇಳಿಸಿಕೊರ್ವ್ವಿಕಲ್ಪದವಸಾನದಸಂಜೆಮುಗಿಲ್ಗಳಂದಮಂ ॥
ಪಾಳಿಸಸೂಸಿಕೊರ್ಮ್ಮದುಳತಂಡಮಿಳಾವಳಯಕ್ಕೆಬಿರ್ದ್ದತಾ ।
ರಾಳಿಗಳಂತಗುರ್ವ್ವಿಸೆಭಯಂಕರಮಾಯ್ತುತುರಂಗಸಂಗರಂ ॥ 63

ಕಂ ॥ ತಾಳುದ್ದಂಬರವುತ್ಕ ।
ಲ್ಲೋಳಮಸೃಕ್ಸಿಂಧುಕಾಳ್ವುರಂಪರಿವಿನೆಗಂ ॥
ತಾಳಂತಟ್ಟಿಂಬೊಯ್ದು ।
ಗ್ರೋರ್ವ್ವೀಳಯಿಲಸ್ರ್ವ್ವಭಟರಟ್ಟೆಗಳ್ತೀಂಕುವಿನಂ ॥ 64

ಉ ॥ ಆಹವದೋಹಳಂತವುಗೆಕಯ್ಮಿಗೆಬಾಳಜಿನ್ರೊಯ್ಗೆಪಚ್ಚದು ।
ತ್ಸಾಹಮನಪ್ಪುಕೆಯ್ದುಱಿದುಪೋಗದೆಮಂಮಳಿಯಾಗೆವಾಜಿಯುಂ ॥
ವಾಹಕರುಂಮರುಳ್ಪಡೆಯುವಾಗಳೆತಂಮೊಡನಾಡೆರಾಗದಿಂ ।
ವಾಹಕರಟ್ಟೆಯುಂತುರಗದಟ್ಟೆಯುಮಾಡಿದುವಾಜಿರಂಗಳೊಳ್ ॥ 65

ಚ ॥ ನೆರೆದನಿಶಾಟರೆಲ್ಲುಱಿಯೆತಿಂದುಗಜಂಗಳನಾವೆಯಾಗೆಪು ।
ಲ್ಮರುಳ್ಕಟುಂಬಮಂಪೆಣದಕೆಯ್ಗಳೆಪುಟ್ಟುಗಳಾಗೆರಾಗದಿಂ ॥
ತೆರೆಯನಡಂಗೆಪೊಯ್ದು ಮುಗ್ಗಿಲುದ್ದಮೆನಲ್ಪರಿಯುತ್ತುಮಿರ್ಪ್ಪನೆ ।
ತ್ತರತೊಱೆಯಂಮರುಳ್ತೊಳಲಿಪಾಯಿಸುತಿರ್ದ್ದುವುಯುದ್ಧಭೂಮಿಯೊಳ್ ॥ 66

ವ ॥ ಅಂತುಭಯಬಲದವಾಹಕವ್ಯೂಹಮೋರ್ಮ್ಮೊದಲೊಳ್ಮುಂಮುಱಿಯಾಗೆ ॥

ಮ ॥ ಕ್ಷಿತಿಚಕ್ರಂನಿಜಖುರದಿಂತೊಱೆದತ್ತೆಂಬಂನೆಗಂಚಕ್ರಚೀ ।
ತ್ಕೃತವಾಕಲ್ಪಘನಾಘನಸ್ತನಿತಮೆಂಬಂನಂಥನುದ್ವರ್ಂಡಘಟಂ ॥
ಕೃತಮುದ್ದಾಮಯಮಾಟ್ಟಹಾಸರವಮೆಂಬಂನಂಪಟಾನೀಕಚೇ ।
ಷಿತಮತ್ಯದ್ಭುತಮಾಗೆತಾಗಿದುವುತೇತ್ತೆರೊಳ್ರಣಕ್ಷೋಣಿಯೊಳ್ ॥ 67

ಕಂ ॥ ರಥಿಗಳ್ರಥಿಗಳನಿಸೆಸಾ ।
ರಥಿಗಳ್ಸಾರಥಿಗಳೊಡನೆತಳ್ತಱಿಯೆಮಱು ॥
ತ್ಪಥದೊಳ್ಮ್ರಿಳ್ಳಿಸೆಪಳಯಿಗೆ ।
ರಥಂರಥಂಗಳೊಱೆದಿಟ್ಬಿರ್ತಾಗಿದುವಾಗಳ್ ॥ 68

ಚ ॥ ಕದನದೊಳಾರ್ದ್ದಸಾರ್ದ್ದಸೆಮಹಾರಥರೆಚ್ಚುಸಿಡಿಲ್ದುದೀಸುಸೂ ।
ಸಿದುದರಕೀಲ್ಕಳಲ್ದುದುಮಡಂಕಡಿಪೋದುದುಪಾಪೆರೊಪುಗೆ ॥
ಟ್ಟುದುನೊಗನೋರೆಪೋಯ್ತುತುರಗಂಪಡಲಿಟ್ಟುವುವೈಜಯಂತಿಬಿ ।
ರ್ದ್ದುದುರಥಚೋದಕರ್ಮ್ಮಡಿದರಾಗಳಪಾರಶರಪ್ರಹಾರದಿಂ ॥ 69

ಕಂ ॥ ಸಾರಥಿಮಡಿದೊಡಮಳ್ಕದೆ ।
ತೇರಂಚೋದಿಸುತುಮಾಂತರಥಿಯೊಳ್ಸರಗಂ ॥
ಪಾರದೆತಳ್ತಿಱಿಯುತ್ತುಂ ।
ಸಾರಥಿಯುಂರಥಿಯುಮಾಗಿಕಾದಿದರರೆಬರ್ ॥ 70

ತಪ್ಪದೆರಣಮುಖದೊಳ್ಮಂ ।
ತಪ್ಪದಟರನಿಸೆಮಹಾರಥಜರ್ಜ್ಜವನಾಳಂ ॥
ತಪ್ಪಕಣೆರೋಮರೋಮಂ ।
ದಪ್ಪದೆನಾಂಟದುವುಸೀಂಟದುವುವಿಧಿಲಿಪಿಯಂ ॥ 71

ಕೃತಶಸ್ತ್ರವಿದ್ಯರಪ್ರತಿ ।
ಹತಭುಜಬಲರುಭಯಬಲದರಥಿಗಳ್ಗತಜೇ ॥
ವಿತರಾದರ್ಸ್ವರ್ಗ್ಗಗ್ರಾಮದೊ ।
ಳತಿರಥಸಮರಥಮಹಾರಥಾರ್ದ್ಧರಥರ್ಕ್ಕಳ್ ॥ 72

ತೇರೊಡ್ಡು ಗಾಳಿಗೊಡ್ಡಿದ ।
ನೀರದವೊಡ್ಡಿನವೊಲಾಗೆಕೂರಂಕುಶವಂ ॥
ಚಾರಿಸುತುಮಾನೆಗಳನಾ ।
ಘೋರರಣರಾರಣದೊಳಣೆದುನೂಂಕಿದರಾಗಳ್ ॥ 73

ಚ ॥ ಮೊಗವಡಮಂನಿಷಾದಿಕಳೆದಂಕುಶದಿಂದಣೆದಾರ್ದುನೂಂಕೆಗಾ ।
ಳಿಗೆಗಱಿಮೂಡಿದಂತೆಪರಿದಾನೆಗಳಾನೆಗಳೊಳ್ಕಡಂಗಿಕಾ ॥
ರ್ಮುಗಿಲವೊಲಟ್ಟಿಮುಟ್ಟಿಕಡುಪಿಂಬಿಡೆಪೋರ್ದುವುಕೋಡುಕೋಡೊಳ ।
ಲ್ಲುಗುತರೆಕೊರ್ಮಿದುಳ್ವಿರಸಿಮಸ್ತಕಪಿಂಡದಮೌಕ್ತಿಕೋತ್ಕರಂ ॥ 74

ನಡುಗೆಧರಾತಳಂಕದಱ್ಕಾಪರಿಘಪ್ರತಿಘಾತದಿಂಮುಗಿ ।
ಲ್ಪಡಲಿಡೆಕೋಪಮುಂಜವಮುಮೇಳ್ಗೆಯುಮಾಸುರಮಪ್ಪಿನಂಮದಂ ॥
ಬಿಡುತರೆಕೀಱಿತಾಗಿದುವೆರಳ್ಪಡೆಯಾನೆಗಳಾನೆಯೊಳ್ಸಿಡಿ ।
ಲ್ಸಿಡಿಲನೆತಾಗಿದಂತೆಕಿಡಿವೀಳ್ತರೆತಾಗೆರಥಂರಥಂಗಳೊಳ್ ॥ 75

ಮ ॥ ಉಗುವೆಂಟುಂಮದಧಾರೆಬಲ್ಸರಿಗಳಂದಂತಾಂಕುಗಳ್ಬಳ್ಳಿಯಿಂ ।
ಚುಗಳಂಬಿಚ್ಚನೆಬಿಟ್ಟದಿಟ್ಟಸಿಡಿಲಂಕೀಳ್ಮಾಡೆಬಂದೆಯ್ದೆಕಾ ॥
ರ್ಮುಗಿಲೊಡ್ಡಂಮುಗಿಲೊಡ್ಡುತಾಗುವವೊಲೆಯ್ತಂದಾನೆಯೊಡ್ಡಾನೆಯೊ ।
ಡ್ಡುಗಳೊಳ್ತಾಗಿದುವದ್ಭುತಸ್ತನಿತವೇಂಬಂನಂಬೃಹದ್ಬೃಂಹಿತಂ ॥ 76

ವ ॥ ಅಂತುದಂತಿಘಟೆದಂತಿಘಟೆಯೊಳಾಂತುಮೊಗವಿಕ್ಕೆಯುಂಜೋದಜೋರ್ಜದರೊ
ಳೇಸಾಡೆಯುಂಮಧ್ಯಮನಿಷಾದಿಗಳ್ಮಧ್ಯಮನಿಷಾದಿಗಳೊಳಡಸಿಮುಸಲಕಣಯ
ಕಂಪಣಮುಸುಂಡಿಪಿಂಡಿವಾಳವಜ್ರಮುಷ್ಟಿಮುದ್ಗರಚಕ್ರಪರಶುಶೂಲತೋಮರ
ಪಾಶಾಂಕುಶಾದಿಶಸ್ತ್ರಂಗಳೊಳಮೊಚ್ಚುಮಿಟ್ಟುಮಿಱಿದುಂಪೊಯ್ದುಮತಿಭಯಂಕ
ರಾಕಾರಮಾಗೆಕಾದುವಾಗಳ್ ॥

ಕಂ ॥ ಕೇತನದಂಡಾಹತಜೀ ।
ಮೂತಘಟಾಪಟಲದಿಂರದಾಹತಮದವ ॥
ನ್ಮಾತಂಗಕುಂಭದಿಂರಣ ।
ಭೂತಳದೊಳ್ಬಿದ್ದುವೊಡನೆಮೌಕ್ತಿಕಮಣಿಗಳ್ ॥ 77

ಚ ॥ ಕರಿಘಟೆಯಿಕ್ಕೆಲಂಬಿಡಿದುಕತ್ತಿಗೆಯಂಪಡಿಯುತ್ತುಮಂಗರ ।
ಕ್ಕರಪಡೆತಾಗಿಮಾರ್ಪಡೆಯಕತ್ತಿಗೆಯೊಳ್ಜವನೆಂಮೆಪ್ಪೋರಿಯಂ ॥
ತಿರೆತಲೆವಟ್ಟುತಳ್ತಱಿದುಮೆಯ್ವಸದಿಂಜವನುಂಡುಕಾಱಿದಂ ।
ತಿರೆಕಡಿಖಂಡಮಾಗೆಕರಮಾಸುರಮಾದುದುಸಂಗರಾಂಗಣಂ ॥ 78

ಕಂ॥ ಕಾಲ್ಗಾಪಿನಬಲ್ಲಣಿಗ ।
ಳ್ಬಲ್ಗೆಯ್ತುದಿನಿಱಿದುಮಡಿಯೆನೆತ್ತರತೊಱೆಗ ॥
ಳ್ಗಲ್ಗಲನೆಪರಿಯೆಕರುಳ್ಪಿ ।
ಣಿಲ್ಗಳ್ತಪ್ಪಂಗಣಾಗೆತೇಂಕಿದರರೆಬರ್ ॥ 79

ಮ॥ ಕಣೆಯೊೞಿಂಗೆದಿಶಾಗಜಂಪೆಳಱಿಕೋಡೇೞಿಂಗೆಮಾತ್ರಾನೆಗ ।
ಳ್ಕ್ರಣಿಮಲ್ಭ್ರೋಂಕನೆಜೋದರೆಚ್ಚಪಲವುಂನಾರಾಚದೇೞಿಂಗಬ ॥
ಲ್ಗಣಿಗಳ್ಬಂಗುಡಿಕೇತನಪ್ರಚಯದಳ್ಕೇೞಿಂಗೆಸೋಳ್ವಪ್ಪರೋ ।
ಗಣಮುಂದೇವರುಮಳ್ಕಿವಾರಣರಣಂಕಣ್ಗೇನಗುರ್ವ್ವಾದುದೋ ॥ 80

ಚ॥ ಆಗದೊಳಗಂಪೊಗಂಬುಗುವವ್ರೋಲ್ಮದದಾನೆಗಳಾನೆಯೊಳ್ಮೊಗಂ ।
ಬುಗುತರೆದಂತದಂಡಕತಿಯಿಂಬಿಸನೆತ್ತರಧಾರೆಗಳ್ಭಗಿ ॥
ಲ್ಭಗಿಲೆನೆಪಾಯ್ದುಪೊಣ್ಮಿದುವುಕೊಣ್ಮಿದುಳೊಕ್ಕುವುಬಲ್ಗರುಳ್ಗಳ್ ।
ವ್ವಗೆಯೆನೆದೋಱಿಬಿರ್ದ್ದುವುಕವರ್ದ್ದುಱಿಬಿರ್ದ್ದುದುಕುಂಭಮಂಡಲಂ ॥ 81

ಇಭಮಿದಿರಾಗಿತಂನೊಡನೆತತ್ತಿಱಿದಾಜಿಯೊಳಣ್ಮಿಸತ್ತನಂ ।
ಸುಭಟನನಾಗಸಕ್ಕೆಪಿಡಿದೆತ್ತಿಭಯಂಕರಮಾಗೆಮಾರ್ಬ್ಬಲ ॥
ಕ್ಕಭಿಮುಖವಾಗಿಕೇಱಿಪರಿದತ್ತುಸುರಪ್ರಮದಾಜನಕ್ಕೆದು ।
ರ್ಲ್ಲಭಮೆನಿಸಿರ್ದ್ದವಲ್ಲಭನನಾಪದದೊಳ್ಸದೆವೀವವಾಳ್ಕೆಯಿಂ ॥ 82

ಕಂ॥ ಕರಿಗಳಪರಿಗಳರಥಿಗಳ ।
ನರರಕಬಂಧಂಗಳೊಡನೆಭೂತಗಣಂಗ ॥
ಳ್ನೆರೆದಾಡಿಮವದ್ಭುತಮಾ ।
ಸುರವಕ್ಕರೌದ್ರಮಾಗೆರಣಮಂಡಲದೊಳ್ ॥ 83

ವ॥ ಅಂತುಮಹಾಜಂತುಕಾದಿಖಚರಚಾತುರ್ದ್ದಂತಮಂತಕಪುರಮನೆಯ್ದೆ ॥

ಕಂ॥ ಬಲವೆಬರೆವಾದವಳಿದಿರೆ ।
ವಲಿಮುಖಬಲಮಾಸೆಗೆಯ್ಯನಳನೀಳರತೋ ॥
ಳ್ವಲಮಂಪೊಗೞಿಸಿದರ್ದ್ದೋ ।
ರ್ವ್ವಲಮಂಹಸ್ತಪ್ರಹಸ್ತರೀರ್ವ್ವಲದಿಂದಂ ॥ 84

ವ॥ ಅಂತುವಾನರಬಲಮೆಲ್ಲಮೊಲ್ಲನುಲಿದೋಡಿನಳನೀಳರಮಱೆಯಂಪುಗುವುದುಂ ॥

ಕಂ ॥ ಇೞಿನಡುಗುವಿನಂರಥಮಂ ।
ನಳನವರೂಥಕ್ಕೆ ಸೈತುವರಿಯಿಸಿಕೋಪಾ ।
ನಳನುದ್ಧಮುರಿಯೆಹಸ್ತಂ ।
ಕೆಳರ್ದಂತಕನಂತೆಕಲುಷವಶಗತನಾದಂ ॥ 85

ವ ॥ ಆಗನಳನಿರೀಕ್ಷಣದಿನನ್ಯಜನ್ಮಜನಿತಕ್ರೋಧಮತ್ಯಧಿಕಮಾಗೆ ॥

ಕಂ ॥ ತ್ರಸ್ತಾರಿಧನುರ್ಜ್ಯಾನಿನ ।
ದಸ್ತನಿತಂಪೊಣ್ಮೆನಳನಮೇಲಾಕ್ಷಣದೊ ॥
ಳ್ದಸ್ತರತೇಜಂಕಱೆದಂ ।
ಹಸ್ತದಮಳೆಯೆನಿಸಿಹಸ್ತನಂಬಿನಮಳೆಯಂ ॥ 86

ವ ॥ ಆಗಳವನಶರವರ್ಷಮಂನಳಂಬಡವಾನಳನಂತೆತವಿಸಿ ॥

ಕಂ ॥ ಪೊಱಮಯ್ಯಂತಾಪನ್ನಂ ।
ಪೆಱೆಯಂಬಂತೀವಿತೊಟ್ಟುಹಸ್ತನತಲೆಯಂ ॥
ಪಱಿಯೆಚ್ಚಂಸಂಗರದೊ ।
ಳ್ಮಿಱುವಕ್ಕಂನಳನಕಣೆಗೆಮಣಿಯದದುಂಟೇ ॥ 87

ವ ॥ ಅಂತುಹಸ್ತನಸ್ತವಿಸುವುದುಂಪ್ರಹಸ್ತನತಿಕುಪಿತನಾಗಿನಿಜವರೂಥಮಂನಳನವ
ರೂಥಕ್ಕಿದಿರದಿರಂಪರಿಯಿಸುವುದುಮಾಸೆಯದೊಳ್ಕೆಳಂನೀಳಮೇಘದಂತೆಗರ್ಜ್ಜಿ
ಸಿನಳನಂಪೆಱಗಿಕ್ಕಿನಿಲ್ವುದುಂ ॥

ಕಂ ॥ ಎಂತುಪೆಱಗಿಕ್ಕಿನಳನಂ ।
ನೀಂತಱಿಸಂದಂತೆಬಲ್ಪುಗಿಡದಣ್ಮಿಕ್ಕೆಂ ॥
ದಂತಕನೆಮಸಗಿಮೇಲೆ ।
ರ್ದ್ದಂತೆವೊಲಿರ್ದ್ದಂಪ್ರಹಸ್ತನಪ್ರತಿಮಬಲಂ ॥ 88

ವ ॥ ಅಂತೊಡ್ಡಿಯಿದಿರಾಗಿನೆಱೆದುನಿಂದು ॥

ಕಂ ॥ ಪಾಱಂಬಳಿಯಿಂದಿಡೆಜವ ।
ಮಾಱದೆಕಡುವೇಗದಿಂದಮೆಯ್ತರ್ಪ್ಪದನ ॥
ಯ್ದಾಱುಕಡಿಯಾಗಲೆಚ್ಚಂ ।
ಮಾಱಾಂಪುದುಮೊಗ್ಗೆನಳನುಮಂನೀಳನುಮಂ ॥ 89

ವ ॥ ಅಂತವನನೆಚ್ಚಿನಕ್ಕೈದುವಂಕಡಿಖಂಡಮಾಗೆಚ್ಚು ॥

ಮ ॥ ಮೊನೆಯಂಬಿಂದೆಸೆಯಿಂದಮುಚ್ಚಿರ್ತಿರುವಾಯೊಳ್ಪೊಚ್ಚಿರ್ಪೇಗಂಪ್ರಹ ।
ಸ್ತನವಕ್ಷಸ್ಥಳಮಂಕಱುತ್ತಿಸುವುದಂಕಾಳಾಹಿವೋಲ್ಕೊಂಡುತೊ ॥
ಟ್ಟನೆಬೆಂನಿಂಪೊಱಮಟ್ಟುಪೋಗೆಸರಳಿಂಮುಂಪೋದುದಾಯುಃಪ್ರಭಂ ।
ಜನನೆಂದಂದಿದಿರಾಂಪರಾರ್ವಿಜಯಲಕ್ಷ್ಮೀಲೋಲನಂನೀಲನಂ ॥ 90

ವ ॥ ಅಂತುಹಸ್ತಪ್ರಹಸ್ತರಸ್ತಮಿಸೆ ॥

ಕಂ ॥ ಕಾವೆಂನಳನೀಳಕ್ಕೊರ್ಗಲೆ ।
ಸಾವದಶಾನನನಬಲಮನಿಂದಿಂಗೆಬಂ ॥
ತಾವೃತಸಾಂಧ್ಯದ್ಯುತಿರಾ ।
ಜೀವಸಖಂಪಶ್ಚಿಮಾಬ್ಧಿಯೊಳ್ಮುಯ್ಗರೆದಂ ॥ 91

ವ ॥ ಅಂತುನೇಸರ್ಪಡುವುದುಮುಭಯಬಲಮುಮುಪಸಂಹಾರತೂರ್ಯ್ಯಮಂಪೊಯಿಸಿತಂ
ತಂಮಬೀಡಿಂಗೆವೋಗಿಸಮರಪರಿಶ್ರಮಮಂನಾಱಿಸುತ್ತೋಲಗಂಗೊಟ್ಟುಪೂರ್ವದು
ಷಸಮಯದೊಳ್ ॥

ಮ ॥ ನಳನೀಳರ್ಭುಜವೀರ್ಯ್ಯಮಂಮೆಚ್ಚಿದುದಂಹಸ್ತಪ್ರಹಸ್ತರ್ದ್ವಿಷ ।
ದ್ಬಳಮೆಲ್ಲಾಡುವಿನಂಕಱುತ್ತಿಱಿದುದೇವಸ್ತ್ರೀಯರುತ್ಸಂಗಮಂ ॥
ಗಳಪೀಠಸ್ಥಿತರಾದುದಂನೆರೆದುಚಾತುರ್ದ್ದಂತಮುಂಕಾದಿಮಂ ।
ಮಳಿಯಾದಂದಮುಮಂತಗುಳ್ದುಪೊಗಳುತ್ತಿರ್ದ್ದರ್ಕ್ಕಲಕ್ಷ್ಮೀಚರರ್ ॥ 92

ವ ॥ ಅದಲ್ಲದೆಯುಂ ॥

ಚ ॥ ಕೆಲರ್ಗನುಲೇಪಮಂಕೆಲರ್ಗೆಭೂಷಣಮಂಕೆಲರ್ಗಾಯುಧಂಗಳಂ ।
ಕೆಲರ್ಗೆತನುತ್ರಮಂಕೆಲರ್ಗೆವಾಜಿಗಳಂಕೆಲರ್ಗುನ್ಮದೇಭಮಂ ॥
ಕೆಲರ್ಗೆವರೂಥಮಂತಡೆಯದಟ್ಟುವೆದಂಪುಗದಿಂದಮಂದುಕಂ ।
ಱಲೆಪೆಳಗಾದುದೀರ್ವ್ವಲದನಾಯಕರ್ಗಂಕದನಾನುರಾಗದಿಂ ॥ 93

ವ ॥ ಅನಂತರಂ ॥

ಕಂ ॥ ಕದನರಸಾಸ್ವಾದನಲೋ ।
ಭದಿನೆರಡುಂಪಡೆಯುಮೊಡನೆಪಾರ್ದ್ದಿರ್ದ್ದಪುವೆಂ ॥
ನುಡಿಯುಮನಾನಿಂತಡೆದಿ ।
ರ್ಪ್ಪುದುಪದನಲ್ತೆಂದುದಿನಪನುದಯಂಗೆಯ್ದಂ ॥ 94

ಚ ॥ ಜವನಿಕೆಯಂನಿಶಾಚರಕಬಂಧವನಾಡಿಸಲಂಧಕಾರವಂ ।
ರವಿಕಳೆದಿಕ್ಕೆ ತಂನಕರಪಲ್ಲವದಿಂದುಷೆಪಿಂಗೆಪಂಣಿಬಂ ॥
ದುವುಕರಿಣೀೞಿಬಂದುವ್ರೆಹಯಂರಣಭೂಮಿಗೆತೇರ್ತ್ತರಳ್ದುಬಂ ।
ದುವೃತಱಿಸಂದುಬಂದುವುಕಡಂಗಿಧನುರ್ಬ್ಬಲವಿಶಾರ್ವ್ವಲಂಗಳೊಳ್ ॥ 95

ವ ॥ ಅಂತುಬಂದಾಕಯಿಶ್ವಾಸುವುದುಂ ॥

ಕಂ ॥ ಅಂತುಭಯಬಲದಱಾತು ।
ರ್ದ್ದಂತಂಪೇಸೆಳೆಯಕಾದದೆಸೆವಲಿಗುಡಲೆಂ ॥
ದಂತಕನಡುಪುಗ್ಗಿಯಾನ ।
ಟ್ಟಂತಿರೆಕಡಿಖಂಡವಾಯ್ತುರಣಮಂಡಲದೊಳ್ ॥ 96

ವ ॥ ಆಸಮಯದೊಳ್ಸಂಗ್ರಾಮರಸಿಕರಾಗಿ ॥

ಕಂ ॥ ಮಾರೀಚಸಿಂಹಕಟಿಗ ।
ಳ್ವಾರಣಶುಕಮಕರವಿಘ್ನಶರಪಂಜರಗಂ ॥
ಭೀರವಮದನಾಂಕುಶಸ್ಸ್ವಾಮ ।
ರಾರಂಭದೊಳಿರ್ದ್ದರುಜದೆವಜ್ರಪ್ರಮುಖರ್ ॥ 97

ವ ॥ ಅಂತಿರ್ದ್ದಬಾಲಸ್ತ್ರ್ಯನಪದಿಂಬಸ್ವರ್ಮಂತರೊಳಂ ಪ್ರಭಾಮಂಡಲನ ಸಾಮಂತ
ಸ್ವರಂತಾಪನುಂ ಪ್ರಥಿತನುಂ ನಂದನನುಂ ಉದ್ಧತನುಂ ಮಹೋದಧಿಯುಂ ಉದ್ದಾ
ಮನುಂ ಕೀರ್ತ್ತಿಯುಂ ವಿಘಟನುಂ ಗಜನುಂ ದುರಿತಾಸ್ತ್ರನುಮೆಂಬಪದಿಂಬರು
ಮೋರೋರ್ವ್ವರಂ ಗಱಿಸಂನೆಗೆಯ್ದು ಕಾದ.ವಲ್ಲಿ ॥

ಕಂ ॥ ಸಂತಾಪನಂವಿರೋಧಿಗೆ ।
ಸಂತಾಪಮನುಂಟುಮಾಳ್ಪಬಲ್ಲಾಳಂಕ ॥
ಲ್ಪಾಂತಕೃತಾಂತನನ್ನೋಲ್ಕೊಂ ।
ದಂತಲ್ಲಣಿಪಂತುಮಾರ್ವ್ವಲಂಮಾರೀಚಂ ॥ 98

ಉ ॥ ರಾವಣಸೇನೆಬಾಜಿಸೆಜಯಾನಕಮಂರಘುರಾಮಸೇನೆಯೊ ।
ಳ್ತ್ತೀವಿಭಯಾನಕಂಗಗನಮಂಡಲಮಂನಿಜಚಾಪಟಂಕೃತಂ ॥
ಮೊವೆಳಸಾಗಿಮತ್ತೆಮಕರಂಬಡವಾಮುಖದಂನಮಷ್ಪಬಾ ।
ನಾವಳಿಯಿಂಮಹೋದಧಿಯಜೀವನವಂತವುವನ್ನವಿಶಾಂಟಿದಂ ॥ 99

ಕಂ॥ ಉದ್ದಾಮನಪಂದಲೆಪಱಿ ।
ದುದ್ಧಂಪಾಱುವಿನಮಿಸುವುದುಂಗಂಭೀರಂ ॥
ಬದ್ಧವಣಿದಪಱಿಗೆಗ್ಕಿವಿ ।
ಸದ್ದಂಗಿಡೆವೊಯ್ದುವಿಂದ್ರವೈರಿಯಪಡೆಯೊಳ್ ॥ 100

ಸಿಂಹಕಟೀರಿಪುಮದದ್ವಿಪ ।
ಸಿಂಹಂಪ್ರಥಿತನನಜೇಯಬಾಹಾಬಲನಂ ॥
ಸಂಹರಿಸಿದಂದಶಾಸ್ಯನ ।
ಸಿಂಹಾಸಂದಿಯನೆಸಂಚಳಂಮಾಡುವವೊಲ್ ॥ 101

ವ॥ ಅಂತುನಿಜವರೂಥಿನಿಯನಾಲ್ವರುಂಮಹಾಸಾಮಂತರಂತಕಜಠರಾಗ್ನಿಗಾಹುತಿಯಪ್ಪುದುಂಘೃತಾಹುತಿಪಡೆದಹುತವಹನಂತುಳಿದಸಾಮಂತರತಿಕುಪಿತರಾಗಿರಾವಣನವರೂಥಿನಿಯರಥಿಗಳಂಗೞಿಸನ್ನೆಗೆಯ್ದುಲಯಸಮಯದಭೈರವನಭೀಕರಾಕಾರಮನಪ್ಪುಕೆಯ್ದುಕಡುಕೆಯ್ದುಕಾದುವಲ್ಲಿ ॥

ಮ॥ ಎರಡುಂತೇರೊಂದನೊಂದೆಯ್ತರೆನಡುಗೆನೆಲಂನೇಮಿಸಂಘಟ್ಟದಿಂದಂ ।
ಬರದೊಳ್ಮತ್ತೇಭಸಿಂಹಧ್ವಜಮಭಿನಯಮಂಬೀಱೆಕೋದಂಡಟಂಕಾ ॥
ರರವಂಕೈಗೆಣ್ಮೆಸಾರ್ತ್ತಂದಿಸೆದಶಮುಖಸಾಮಂತನಂವಿಘ್ನನಂತೋ ।
ಮರದಿಂದುದ್ದಾಮನಿಟ್ಟಂಬಿಡೆಕಡುನೆಱನಂನಟ್ಟುತೂಗಾಡುವನ್ನಂ ॥ 102

ಕಂ॥ ಇಡೆವಜ್ರಿವಜ್ರಹತಿಯಿಂ ।
ಕೆಡೆದಕುಲಾಚಲದಮಾಳ್ಕೆಯಿಂದಂವಿಘ್ನಂ ॥
ಕೆಡೆದಂತೋಮರಹತಿಯಿಂ ।
ದೊಡನುಣ್ಮೆಜಯಾನಕಸ್ವನಂಕಪಿಬಲದೊಳ್ ॥ 103

ದನುಜೇಂದ್ರನಸೇನೆಯುವ ।
ಜ್ರನದೋರ್ದ್ದಂಡಂಗಳಂಕುಠಾರಾಯುಧದಿಂ ॥
ಮನುಜೇಂದ್ರನಸೇನೆಯುವಿಘು ।
ಟನಾಜಿಯೊಳ್ಪೋಡುಗಾಱನಂತಿರೆತಱಿದಂ ॥ 104

ಆರಣರಂಗದೊಳುನ್ಮದ ।
ವಾರಣಮಜಗರಮನಿಕ್ಕುವಂತವಯುವದಿಂ ॥
ಚಾರಣನಂಕೊಂದಿಕ್ಕಿದ ।
ನಾರಳವುದ್ಧತನಮಾರ್ಯ್ಯಬಾಹುವೀರ್ಯ್ಯಂ ॥ 105

ಶುಕನಂದುರಿತಾಸ್ತ್ರಂಕಿಂ ।
ಶುಕವಿಟಪಿಯನಳುರ್ವದಾವಪಾವಕನಂತಂ ॥
ತಕಹೋಮಕುಂಡದೊಳ್ಜ್ನಂ ।
ಕೆಕೆಂಡುಕಾಳಾಗ್ನಿಯಂತೆರಾವಣನುರಿದಂ ॥ 106

ಶರಪಂಜರನಂಯಮಕುಂ ।
ಜರಕ್ಕೆಕಡಿಕೊಂಬುಮಾಡಿಕಡಿಖಂಡಮೆನ ॥
ಲ್ಕರವಾಳಿಂನಂದನನಾ ।
ಜಿರಂಗದೊಳ್ಪ್ಪಯ್ಯೆಪೊಯ್ದುವುತ್ಸವಪಟಹಂ ॥ 107

ಗಜರಿಪುನಖರಪ್ರಕರದೆ ।
ಗಜಮಂಸೀಳ್ದೊಟ್ಟುವಂತೆಮದನಾಂಕುಶನಾ ॥
ತ್ಮಜಯಾಸಿಯಿಂದೆಕೊಂದಂ ।
ಗಜನಂರಾಘವನಸೇನೆಸುಗಿದುಗುವಿನೆಗಂ ॥ 108

ವ ॥ ಅಂತೆರಳ್ಬಲಮುಮೊಟ್ಟಜೆಗಿಡದೆತಳ್ತುಱಿದುಪಾಳಿಯನಸಕಳಿಯೆ ॥

ಉ ॥ ಚಂಡಪರಾಕ್ರಮರ್ದ್ದನುಜನಾಯಕರುಂರಣರಾಗದಿಂಪ್ರಭಾ ।
ಮಂಡಲಮುಖ್ಯನಾಯಕರುಮೋರ್ವ್ವರನೋರ್ವ್ವರಿದಿರ್ಚ್ಚಿಸಾವುದಂ ॥
ಕಂಡುಕೃಪಾಳುಮಾಣಿಸುವೆನಿಂದಿನಯುದ್ಧಮನೆಂಬಮಾಳ್ಕೆಯಿಂ ।
ಚಂಡಮರೀಚಿಪಶ್ಚಿಮಪಯೋಧಿಯೊಳೊಯ್ಯನೆಮುಯ್ಯನಿಕ್ಕಿದಂ ॥ 109

ವ ॥ ಅಂತುನೇಸರ್ಪ್ಪಡುವುದುಂ ॥

ಕಂ ॥ ಅಪಹಾರತೂರ್ಯ್ಯಮಂಪೊ ।
ಯ್ಸಿಪಡೆಗಳೆರಡುಂರಣೋರ್ವ್ವಿಯಿಂದಂತಂತ ॥
ಮ್ಮಪುರಕ್ಕೆವೋದುವಾನಕ ।
ವಿಪುಳರವಂಗಗನವಿವರಮಂತೀವುವಿನಂ ॥ 110

ವ ॥ ಅಂತುಬೀಡಿಂಗೆವೋಗಿಸಂಗ್ರಾಮಸಂರಂಭದೊಳುಭಯಬಲಮುಮಿರ್ಪ್ಪಿನಂ ॥

ಕಂ ॥ ಮತ್ಕುಲನವಿಜಯನಾಟ್ಯಕೆ ।
ಮತ್ಕೃತಿಯಂನೋಡಿಕಣ್ಗಳಂತಣಿಪುವೆನೆಂ ॥
ಬುತ್ಕಂಠತೆಯಿಂದುದಯಕು ।
ಭೃತ್ಕೂಟಮನೇಱಿದಂತಿರಿನನುದಯಿಸಿದಂ ॥ 111

ವ ॥ ಅಂತುದಿನಪೋದಯಮಪ್ಪುದುಂಪೂರ್ವ್ವಕ್ರಮದೊಳುಭಯವಾಹಿನಿಯುಂರಣಭೂ
ಮಿಗೆಬಂದೊಡ್ಡಿನಿಲ್ವುದುಂದಶಾನನಸೇನಾಪತಿಗಳಪ್ಪಕುಂಭ ನಿಕುಂಭ ಶಂಭು ಸ್ವ
ಯಂಭು ಚಂಡ ಪ್ರಚಂಡ ಕುಂಡಳ ಹಾಲಾಹಲ ಪುಷ್ಪಚೂಳ ಧೂಮರಾಕ್ಷಸ ಸಂ
ಧ್ಯಾಕ್ಷ ಬಂಧುಮಾಲಿ ಭೀಮಭೀಷಣ ಧವಳಕೀರ್ತ್ತಿ ವಿಕ್ರಮ ವಿದ್ಯುಜ್ಜಿಹ್ವ ಸೌ
ಮ್ಯಾನನ ಶಾರ್ದ್ದೂಲ ಪ್ರಮುಖರನೇಕರೊಡ್ಡಿನಿಲ್ವುದುಂ ॥

ಕಂ ॥ ಮನುವಂಶಲಲಾಮನರಾ ।
ಮನಮುಂದೆಪೊಡರ್ಪ್ಪುದೋರ್ಪ್ಪಸ್ಯೈಪಮಗಾದ ॥
ತ್ತೆನುತುಂಖೇಚರವಲ್ಲಭ ।
ರನೇಕರೊದವಿದರಣಾನುರಾಗದಿನೆರ್ದ್ದರ್ ॥ 112

ವ ॥ ಅಂತುದಾತ್ತರಾಘವನೊಳ್ಮೈತ್ರೀಭಾವದಿಂಕೂಡಿದವಿದ್ಯಾಧರವೀರರಪ್ಪಚಂದ್ರ ಚಂ
ದ್ರಾಭ ಚಂದ್ರಮಾಲಿ ರತಿವರ್ದ್ಧನ ಸಿಂಹರಥ ಮೇಘವಾಹನ ಭೀಮರವ ಕುಮು
ದಾವರ್ತ್ತ ಸುಷೇಣ ಭೂಷಣ ಜಯಮಿತ್ರ ಮಾನಾರ್ಹ ಮಹೇಂದ್ರ ಮೇಘ
ಪರ್ವ್ವತ ಸರ್ವ್ವಪ್ರಿಯ ತರಂಗತರಳ ಚಪಲಾವೇಗ ವಿದ್ಯುತ್ಕರ್ಣ್ಣ ಜಯ ವಿಜ
ಯರೆಂಬರಣಪ್ರಣಯಿಗಳ್ತಮತಮಗೆಸಮಕಕ್ಷರಪ್ಪವಿದ್ಯಾಧರಪ್ರತಿನಾಯಕರೋ
ರೋರ್ವ್ವರೊಳಗುರ್ವ್ವಮದ್ಭುತಮುಮಾಗೆಕಾದುವಲ್ಲಿ ॥

ಚ ॥ ಉಡಿವರಥಂಗಳಿಂಮಡಿವವಾಜಿಗಳಿಂಕಡಿಖಂಡಮಪ್ಪೆರ ।
ಳ್ಪಡೆಯಪದಾತಿಯಿಂಕೆಡೆವವಾರಣದಿಂಕುಣಿವಟ್ಟೆಗಾರ್ವ್ವಜೊ ॥
ಬ್ಬಿಡುವಮರುಳ್ಗಳಿಂಪರಿವಲೋಹಿತದಿಂಪರಿದಂಬರಕ್ಕೆದಿಂ ।
ಕಿಡುವಶಿರಂಗಳಿಂದತಿಭಯಂಕರವಾದುದುಸಂಗರಾಂಗಣಂ ॥ 113

ಕಂ ॥ ಪಲವುಂದಿನಮಿಂತೆರಡುಂ ।
ಬಲದಮಹಾಬಲಪರಾಕ್ರಮಕ್ಕಾದಿಮನೋ ॥
ಬಲದಭುಜಬಲದವಿದ್ಯಾ ।
ಬಲದಳವಂನೆಱೆಯೆಮೆಱೆದುಮಂಮಳಿಯಾದರ್ ॥ 114

ವ ॥ ಅಂತವರನುದಿನಮನುವರದೊಳಣ್ಮಿಕಾದುತ್ತುಮಿರ್ದ್ದೊಂದುದಿವಸಂ ॥

ಕಂ ॥ ದಾವದಹನಕ್ಕೆವನ್ಯಮೃ ।
ಗಾವಳಿಬೆಂಗುಡುವಮಾಳ್ಕೆಯಿಂಬೆಂಗುಡೆಸು ॥
ಗ್ರೀವನಪಡೆಸೆಡೆದುದಶ ।
ಗ್ರೀವನಪೇರ್ವ್ವಡೆಗಗುರ್ವ್ವವಡೆದುದುಸಮರಂ ॥ 115

ವ ॥ ಆಸಮಯದೊಳ್ಸುಗ್ರೀವಂನಿಜವರೂಥಿನಿಯುಂಪೆಱಗಿಕ್ಕಿ ॥

ಕಂ ॥ ತ್ರಿಪತಾಕೆನಿಟಿಳತಟದೊ ।
ಳ್ಕಪಿಧ್ವಜಂಗಗನತಳದೊಳುರ್ವ್ವಿಸೆಕಿಷ್ಕಿಂ ॥
ಧಪುರಾಧಿಪನುಱದಿಱಿಯ ।
ಲ್ವಿಪಕ್ಷಮಂರಥಮನೇಱಿದಂಸುಗ್ರೀವಂ ॥ 116

ವ ॥ ಅಂತುರಥಾರೂಢನಾಗಿಕಾದಲ್ಕಡಂಗಿಬರ್ಪ್ಪುದುಂ ॥

ಕಂ ॥ ಬಾರಿಸಿಸುಗ್ರೀವನನು ।
ಗ್ರಾರಾತಿಬಲಕ್ಕೆಲಯಮನೊಡರಿಪಬಗೆಯಿಂ ॥
ಮಾರುತಿಕರಿಯಿಂಪೂಡಿದ ।
ತೇರಂಜವನೇಱುವಂತಿರೇಱಿದನಾಗಳ್ ॥ 117

ವ ॥ ಅನಂತರಂ ॥

ದ್ರುತವಿಲಂಬಿತ॥ ಮಿಳಿರ್ದ್ದುಮಿಳ್ಳಿಸೆವಾನರಕೇತನಂ ।
ಪ್ರಳಯಕಾಲದಮಾರಿಯಮೂರಿಯಂ ॥
ತಳೆದುಮಾರುತಿಯೇಱಿದತೇರದೇಂ ।
ತಳರ್ದ್ದುದೋಧರೆಕಂಪಿಸುವನ್ನೆಗಂ ॥ 118

ವ ॥ ಅಂತುತಳರ್ದ್ದುಪವಮಾನತನೂಭವಂಮನಃಪವನವೇಗದಿಂಕುಂಭಕರ್ಣ್ಣನತನೂ
ಭವರಪ್ಪಮಾಲಿ ಜಂಬುಮಾಲಿಗಳಬಲಮನಳುಱೆತಾಗುವುದುಂ ॥

ಶಾ ॥ ಜ್ಯಾರಾವಕ್ಕೆಗಿದ್ಕೆಬಳ್ಕೆದಿಗಿಭಂಕೋದಂಡದೊಳ್ಪೂಡಿಕೊಂ ।
ಡಾರುತ್ತುಂನಿಶಿತಾಸ್ತ್ರದಿಂದಿಸೆಹನೂಮಂತಂವಿಪಕ್ಷಸೇನೆಯೊ ॥
ಳ್ವೀರಾಳಂತುರಗಂಗಳಂರಥಮುಮುನ್ಮತ್ತೇಭಮುಂಬಿದ್ದುವಾ ।
ವೀರಾಗ್ರೇಸರನಪ್ಪಮಾರುತಿಯದಿವ್ಯಾಸ್ತ್ರಕ್ಕೆಮೆಯ್ಯಾಸ್ಸಟ್ಟುರ್ವರ್॥ 119

ಮ ॥ ಪವಮಾನಪ್ರಿಯನಂದನಂಚರಮದೇಹಂದೇಹಮಂಕಯ್ದುವು ।
ಚ್ಚರ್ವುವಿದ್ಯಾಪರಮೇಶ್ವರಂಗೆಜರಥಾರೂಢಂಮಹಾಧನ್ವಿಕಾ ॥
ಧುವರಾರಾತನನಂತವೀರ್ಯ್ಯನಿದಿರೊಳ್ಮಾಱಾಂಪುದುಂಕೊಂದನಾ ।
ಹವದೊಳ್ಮಾಲಿಯಜಂಬುಮಾಲಿಯಮಹಾಸಾಮಂತಸಂದೋಹಮಂ ॥ 120

ಕಂ ॥ ಜವನೆರ್ದೆಬಿರ್ಚ್ಚಿದುದೆನೆದಾ ।
ನವಸೇನೆಗೆವಿಲಯಸಮಯಮೀಸಮಯದೊಳ್ಸಂ ॥
ಭವಿಸಿದುದೆನೆತವೆಕೊಂದಂ ।
ಪವಮಾನಸುತಂಗೆಸಂಗರಕ್ಕಿದಿರುಂಟೇ ॥ 121

ವ ॥ ಅಂತುಜಯಜಾಯಾರಮಣನಪ್ಪಮಾರುತಿನಿಜನಿಶಾತಶರಾಸಾರದಿಂತನ್ನ ಸೇನಾಕೃಶಾ
ನುಜ್ವಾಲಾಕಳಾಪಮಂನಂದಿಸೆವಿಳಯಸಮಯಜ್ವಾಲೆಯಂತೆಮಾಲಿತಿಂಣಮುಱಿದು
ನಿಜವರೂಥಮಂಮಾರುತಿಯರಥಕ್ಕೆ ಸೈತುಪರಿಯಿಸಿ ॥

ಕಂ ॥ ಬಿಸಿಲೆಸಕಂಗಿಡೆಕತ್ತಲೆ ।
ಪಸರಿಸೆಮಾರುತಿಯತೇರಗಜಮಸ್ತಕದಿಂ ॥
ಪೊಸಮುತ್ತುಗಳುಗೆಕೈಮಿಗೆ ।
ಬಿಸುನೆತ್ತರವರ್ಮ್ಮಲಿಕಱೆದನಂಬಿನಮೞೆಯಂ ॥ 122

ವ ॥ ಅಂತುಮಾರುತಿಯರಥಮಂಮಿಸುಕಲೀಯದಿಸುವುದುಂ ॥

ಕಂ ॥ ಸ್ಯಂದನಬಂಧನಮಂಮಾ ।
ಳ್ಪಂದಮಿವಂನಮಗಮೆಂದುಮಾರುತಿಮುಳಿದಾ ॥
ಗೊಂದಂಬಿಂಬಂಡಿಸಿಪೆಱ ।
ತೊಂದಂಬಿಂದವನತಲೆಯುಮಂಪಱಿಯೆಚ್ಚಂ ॥ 123

ವ ॥ ಅಂತುಮಾಲಿಯತಲೆಪಱಿದುನೆಲಕ್ಕೆ ಬೀೞ್ವುದುಂ ॥

ಪೃಥ್ವಿ॥ ನಿಜಾಗ್ರಜನಸಾವುಪೇವಸಮನಗ್ಗಳಂಮಾೞ್ಪುದುಂ ।
ಗಜಾರಿಘನಗರ್ಜ್ಜನಕ್ಕೆ ಕಡುಕೆಯ್ದುಮೇಲ್ವಾಯ್ವವೋ ॥
ಲಜೇಯಬಲಜಂಬುಮಾಲಿಗದೆಗೊಂಡುಮೇಲ್ವಾಯ್ವುದುಂ ।
ಭುಜಾಸಿಯೊಳೆಕೊಂಡನಂದವನುಮಂಮರುನ್ನಂದನಂ ॥ 124

ವ ॥ ಅಂತುಮಾಲಿಜಂಬುಮಾಲಿಗಳಂಕೊಂದುಮುಂದೆಧವಳಚ್ಛತ್ರಚಾಮರಪಾಳಿಧ್ವಜ
ಶಂಖಕಾಹಳಪ್ರಮುಖರಾಜಚಿಹ್ನಂಗಳ್ವೆರಸುಹಸ್ತ್ಯಶ್ವರಥಪದಾತಿಬಲದಿಂವಿದ್ಯಾಧ
ರಾಧಿರಾಜರಿಂಪರಿವೃತನಾಗಿರ್ದ್ದದಶಮುಖನಂವಲಿಮುಖಧ್ವಜಂಕಂಡು ॥

ಕಂ ॥ ದೊರೆವೆತ್ತಸಮರವಿಾಗ ।
ಳ್ದೊರೆಕೊಂಡತ್ತೆಂದುತಂನರಥಮಂಲಂಕೇ ॥
ಶ್ವರನಿದಿರ್ಗ್ಗಡ್ಡಣದತ್ತ ।
ಲ್ಪರಿಯಿಸಿದನಿದೇಂಪ್ರತಾಪಿಯೋಪವನಸುತಂ ॥ 125

ವ ॥ ಅಂತುಪರಿಯಿಸಿರಕ್ಕಸವಡೆತಕ್ಕುಗೆಟ್ಟುತಲ್ಲಣಿಸುವಂತೊಟ್ಟೈಸಿಕಾದುತ್ತುಂಬರ್ಪ್ಪ
ವಲಿಮುಖಧ್ವಜನಂದಶಮುಖಂಕಂಡುಕಡುಮುಳಿದುಕಾದಲ್ಬಗೆಯೆಮಹಾತನೂಜ
ರಪ್ಪಮಹೋದರವಜ್ರೋದರರದ್ದಶಾಸ್ಯನಸ್ಯಂದನಕ್ಕಡ್ಡಂಬಂದುಕಾಳಗಮಂಕ

ಯ್ಕೊಂಡುಮಹೋದರನಂಗದನೊಳಂವಜ್ರೋದರಂಹನುಮಂತನೊಳಂಸಾಮಾ
ನ್ಯಾಸ್ತ್ರದೊಳಂದಿವ್ಯಾಸ್ತ್ರದೊಳಂಪಿರಿದುಪೊಳ್ತುಕಾದೆ ॥

ಕಂ॥ ಅಂಗದನಕಣೆಮಹೋದರ ।
ನಂಗದಲೋಹಿತಮನೀಂಟೆಪಿಂಗೆದಶಪ್ರಾ ॥
ಣಂಗಳುಮೇಂಪಡೆದನೊದಿವಿ ।
ಜಾಂಗನೆಯರಪೀವರಸ್ತನಾಲಿಂಗನಮಂ ॥ 126

ವ॥ ಅಂತುಮಹೋದರನಂಯಮೋದರಮನಂಗದಂಪುಗಿಸೆತಾನುಮತಿಕುಪಿತನಾಗಿ ॥

ಮ।ಸ್ರ॥ ತಿರುವಾಯೊಳ್ತೊಟ್ಟುದಿವ್ಯಾಸ್ತ್ರಮನಿಸೆಹನುಮಂಸಾಯಕಂನಾಂಟೆವಜ್ರೋ ।
ದರವಕ್ಷೋಭಾಗಮಂಬೆಂಗಲಗುಬಳೆಯೆಕಂನೆತ್ತರುಂಮೆಯ್ಯೊಳಂಪಾ ॥
ಯ್ತರೆಜೀವಂಬಿಟ್ಟುಬಾಯಂನಯನಯುಗಳಮಂಬಿಟ್ಟುಕರ್ಬ್ಬಿಟ್ಟುಬೀಳ್ವಂ ।
ತಿರೆಬಿರ್ದ್ದಂಭೂಮಿಯೊಳ್ರಾವಣಭುಜವಿಜಯಶ್ರೀಯುಮಲ್ಲಾಡುವಂನಂ ॥ 127

ವ॥ ಅಂತುವಜ್ರೋದರಂಸುರಸುಂದರೀವಿಮಾನೋದರಮನಲಂಕರಿಸೆ ॥

ಕಂ॥ ದವದಹನಂಕಾನನಮಂ ।
ತವಿಪಂತಿರೆಬಾಡವಾನಳಂವಾರಿಧಿಯಂ ॥
ತವಿಪಂತಿರೆಪವನಸುತಂ ।
ತವಿಸಿದನಗಣಿತಮೆನಿಪ್ಪರಾವಣಬಲಮಂ ॥ 128

ಅಣುವನಕೂರ್ಗ್ಗಣೆಗಳ್ನಡೆ ।
ಪೆಣಮುಯುಮಾದತ್ತುಮೇರೆಪವಣಿಲ್ಲದರಾ ॥
ವಣಪಡೆಪರ್ವ್ವಿದಮುರ್ವ್ವಾ ।
ಕ್ಷಣದೊಳ್ಕಿಡುವಂತೆಚಂಡಕರಕರಹತಿಯಿಂ ॥ 129

ದಿವ್ಯಾಯುಧಂಗಳಂಗೆಲೆ ।
ದಿವ್ಯಾಯುಧವಸುರಪಡೆಯನನಿಲತನೂಜಂ ॥
ಸವ್ಯಾಪಸವ್ಯಮೊಚ್ಚರ ।
ಣವ್ಯಸನಿಪಿಶಾಚಪಡೆಗೆಬೋಣಸುಗೆಯ್ದಂ ॥ 130

ವ॥ ಆಮಹಾಸಮರದೊಳ್ ॥

ಉ॥ ಮಾಲಿಗೆಜಂಬುಮಾಲಿಗೆಮರುತ್ತನಯಂಕುಡೆಯುದ್ಧದೊಳ್ಕೃತಾಂ ।
ತಾಲಯಮಂನಿಜಾತ್ಮಜರಸಾವಿನೊಳುತ್ಕಟಮಾಗೆಶೋಕಮು ॥
ನ್ಮೀಲಿಸೆಕೋಪಮಾಪ್ರಳಯಭೈರವನಂತಿರೆಕುಂಭಕರ್ಣ್ಣನಾ ।
ಭೀಲಮನೆತ್ತಿಪೊತ್ತುನಡೆದಂಕದನಕ್ಕಿದಿರಂತ್ರಿಶೂಲಮಂ ॥ 131

ವ ॥ ಅಂತುಕಡಂಗಿಬರ್ಪ್ಪಕುಂಭಕರ್ಣ್ಣನಂಕಂಡುಮಾರುತಿಯುಂಪೆಱಗಿಕ್ಕಿರಘುವೀರನ ಬಲದಮಹಾಸಾಮಂತರ್ಚ್ಚಂಡನುಂಪ್ರಚಂಡನುಂಶಶಿಮಂಡಲನುಂಬಲಿಯುಂಮೊ ದಲಾಗೆಪಲರುಮಡ್ಡಂಬಂದುತನ್ನಬಲಮನಳಱಿಕಾದುತ್ತುಮಿರೆಕುಂಭಕರ್ಣ್ಣನತಿ ಕುಪಿತನಾಗಿವೇಗಂಪ್ರಸ್ವಾಪನವಿದ್ಯಾಶರದಿಂಕಪಿಧ್ವಜರಧ್ವಜಿನಿಯಂಮೆಯ್ಯಱಿ ಯದೊಱಗುವಂತುಮಾಳ್ಪುದುಂ ನಿದ್ರಾಪ್ರಬೋಧಿನಿಯೆಂಬದಿವ್ಯಬಾಣದಿಂಸುಗ್ರೀ ವಂಹನುಮಂಮೊದಲಾಗೆ ಮಿಕ್ಕನಾಯಕರನಿದ್ರಾಮುದ್ರೆಯುಂ ಕಳೆವುದುಮನಿಬ ರುಂರಕ್ತಸಪಡೆಬೆಂಗುಡೆಕಾದುತ್ತುಮಿರೆಕಂಡುಕಡುಮುಳಿದು ॥

ಕಂ ॥ ಚಳಿಯಿಸಲಮರಾಚಳಮಂ ।
ತುಳುಂಕಲಂಭೋನಿಧಾನಮಂದಿನಕೃನ್ಮಂ ॥
ಡಳಮನೆಳೆಗಿಳಿಪಲೆಂದಾ ।
ಬಿಳಂಪಟುಂದೆಸೆಗೆಮಸಗಿದಂದನುಜೇಂದ್ರಂ ॥ 132

ವ ॥ ಅಂತುದಶಗ್ರೀವಂಸುಗ್ರೀವನಕಂಠಕಂದಳಮಂ ಚಂಡಪರಶುವಿಂಖಂಡಿಸಲುಂಪವ ಮಾನತನೂಭವಪ್ರಾಣಪವಮಾನನಂಬಾಹುರಾಹುಗ್ರಾಹಾರಮನಿಕ್ಕಲುಂಪ್ರಭಾವಮಂ ಡಲನಮಂಡಲಾಗ್ರಮಂಚಂದ್ರಹಾಸಪ್ರಭಾಮಂಡಲದಿಂಹತಪ್ರಭಂಮಾಡಲುಂನಳನ ಕೋಪಾನಳನಂಬಳ್ಗಧಾರಾಜಲದಿಂನಂದಿಸಲುಂನೀಳನನೀಲಲೋಹಿತದಿಂಭೂತಗಣ ಮಂತಣಿಪಲುಮುತ್ಕಂಠನಾಗಿನಿಜವರೂಥಮಂ ರಿಪುವರೂಥಿನಿಗಿದಿರಂಪರಿಯಿಸಲೊ ಡರಿಸುವುದುಮಾಸಮಯದೊಳ್ಮಂಡೋದರೀಜಾರಜಾಕ್ಷನ್ನೀವಿಕಸಿತಾರವಿಂದನಿಂದ್ರ ಜಿತ್ಕುಮಾರಂತಂದೆಯಮುಖಾರವಿಂದಮಂನೋಡಿ ನಿಟಿಲತಟಘಟಿತಮುಕುಳಿತಾಂ ಜಲಿಪುಟನಿಂತೆಂದಂ ॥

ಕಂ ॥ ತ್ರಿಪತಾಕೆನಿಟಿಲತಟದೊಳ್ ।
ಮಷಾಂಗದೊಳ್ಕೆಂಪುಸಮನಿಪಂನೆವರಂಸ್ಯೈ ॥
ರಿಪುದೆವಲವೆನಗೆಬಂನಂ ।
ನೃಪೇಂದ್ರಬನ್ನಕ್ಕೆ ಬೇಱೆಕೋಡೆರಡೊಳವೇ ॥ 133

ಉ ॥ ನೀಂಬರೆಗಂಕಪಿಧ್ವಜರಸಾಧ್ಯರೆನಿಂನೊಳೆದಿರ್ಚ್ಚುವಂನನಾ ।
ವಂಪೆಸಸೆಂನನಂಜಿದೊಡವಂದಿರಬಾಳ್ದಲೆದಂದಪೆಂರಣಾ ॥
ಡಂಬರದಿಂದಮಂಜದೊಡೆಪಂದಲೆದಂದಪೆನೆಂದುಪ್ರೌಢಶೌ ।
ಯ್ಯಾರ್ಣಂಬುಧಿಬೇಡಿದಂಪೆಸನನಿಂದ್ರಜಿದಾನವಚಕ್ರವರ್ತ್ತಿಯುಂ ॥ 134

ವ ॥ ಅಂತುತಂದೆಯನಿಂದ್ರಜಿಪೆಸನಂಬೇಡಿಕೊಂಡು ॥

ಕಂ ॥ ಗಿರಿಗಳ್ಪರಮಾಣುಗಳೆನೆ ।
ಸರೋಜಭವನೀಕರೀಂದ್ರಮಂಮಾಡಿದನೆಂ ॥
ದಿರದದಱಕಾಯಬಲಮಂ ।
ನಿರೂಪಿಸಲ್ನಾಗರಾಜನುಮಂನೆಱೆದಪನೇ ॥ 135

ವ ॥ ಎಂಬಿನಮುಗುರ್ವ್ವಾವೆತ್ತುದಂತ್ರೈಲೋಕ್ಯಕಂಟಕಮೆಂಬಾನೆಯನೇಱಿಪ್ರಳ
ಯಪ್ರಕ್ಷೋಭಮಾದಂತೆಮುಳಿದುಬರೆ ವಾನರಬಲಂದೋರ್ವ್ವಾಲಮನುಳಿದುಪೆಳಱೆ
ಸುಗ್ರೀವನುಂಪ್ರಭಾಮಂಡಲನುಮಿದಿರ್ಚ್ಚಲ್ನೆರೆದುನಿಲ್ವುದುಮವರನಿಂದ್ರಜಿತ್ಕು
ಮಾರನಿಂತೆಂದಂ ॥

ಕಂ ॥ ಕಪಿವಂಶ್ಯರ್ಗ್ಗೆನಿಸರ್ಗ್ಗಂ ।
ಚಪಳತೆಖಚರೇಂದ್ರನಪ್ಪದಶಕಂಠನಪಾ ॥
ದಪಯೋಜಸೇವೆಯಂಬಿ ।
ಟ್ಟುಪಶುವೆನಿಂಭೂಚರಂಗೆಕಿಂಕರನಾದೈ ॥ 136

ನಿನ್ನಿಂಬನಱಿಯದಾಜಿಯೊ ।
ಳೆನ್ನೊಡನೆಪೋರ್ಕ್ಕೆಗಿಂತುಬಂದಪೆಮುಳಿದಾಂ ॥
ನಿನ್ನಂಕೊಲ್ವೆಡೆಯೊಳ್ಕಾ ।
ವನ್ನರ್ಕ್ಕೈಕೊಂಡುಭೂಮಿಗೋಚರರೊಳರೇ ॥ 137

ವ ॥ ಎನೆಮುಳಿದು ॥

ಕಂ ॥ ಕಾಳಗಮನುಳಿದುಪೆಂಡಿ ।
ರ್ಗ್ಗಾಳಗಮಂಮೊಳ್ಸೆಗಂಡುಮಾತುಳ್ಳೊಡೆಕೂ ॥
ರ್ವ್ವಾಳಮಸೆದೋರ್ಪ್ಪುದೆನಗೆಂ ।
ದೇಳಿಸಿದಂದನುಜತನುಜನಂಸುಗ್ರೀವಂ ॥ 138

ವ ॥ ಅಂತವರೀರ್ವ್ವರುಮೋರೋರ್ವ್ವರಂಮೂದಲಿಸಿಕಾದುತ್ತಿರ್ದ್ದರಂನೆಗಮಿತ್ತಲ್ ॥

ಕಂ ॥ ಜನಕಾತ್ಮಜನೊಳ್ದಶಮುಖ ।
ತನೂಭವಂಮೇಘವಾಹನಂಬಿಲ್ವೊಯ್ದಂ ॥
ಬಿನಮಳೆಯಂಲಯಸಮಯದ ।
ಘನಾಘನಂಕಱೆವಮಾಳ್ಕೆಯಿಂದಂಕಱೆದಂ ॥ 139

ಕಂ ॥ ಅವನೆಚ್ಚಂಬುಗಳಂಚಂ ।
ಡವಿಕ್ರಮಂಮಂಡಳಾಗ್ರದಿಂಖಂಡಿಸಿದಂ ॥
ಬವರದೊಳಿದಿರಾಂಪವರಾ ।
ರವಾರ್ಯ್ಯಭುಜವೀರ್ಯ್ಯನಂಪ್ರಭಾಮಂಡಲನಂ ॥ 140

ವ ॥ ಅಂತುನಿಜನಿಶಾತಶರಸಂಘಾತಮಂಖಂಡಿಸೆಮೇಘವಾಹನನಗ್ನಿಬಾಣದಿಂದಿಸುವುದು ಮದಂಪ್ರಭಾಮಂಡಲಂವಾರುಣಾಸ್ತ್ರದಿಂಕಡಿಯೆಕಡುಮುಳಿದು ॥

ಚ ॥ ತಿರುವಿನೊಳಿಟ್ಟುಕೂರ್ಗ್ಗಣೆಗಳಂದನುಜಂಪೊಱಮುಯ್ಯನೆಯ್ದುವಂ ।
ತಿರೆತೆಗೆದಸ್ತ್ರವಿದ್ಯೆಗಿವನೊಳ್ದೊರೆಯಾರೆನೆಮೇಘವಾಹನಂ ॥
ತುರಗಮನೆಚ್ಚುಸಾರಥಿಯನೆಚ್ಚುಪತಾಕೆಯನೆಚ್ಚುಬಿಲ್ಲನೆ ।
ಚ್ಚುರಥಮನೆಚ್ಚುಪಚ್ಚಪಱಿಮಾಡಿದನಾಜನಕಾತ್ಮಜಾತನಂ ॥ 141

ವ ॥ ಅಂತುವಿರಥನಂಮಾಡಿ ॥

ಕಂ ॥ ದನುಜಸುತಂಪಂನಗಶರ ।
ದಿನಿಸುವುದುಂಜನಕಸುತನನದಮೇಣದಹಿಬಂ ॥
ಧನದಿಂಪೊಡರ್ಪ್ಪುಗುಂದಿಸೆ ।
ತನುವಂಮಱೆದಿಳೆಗೆಬಿದ್ದುಮೂರ್ಚ್ಛೆಗೆಸಂದಂ ॥ 142

ವ ॥ ಅಂತತಿಪ್ರಚಂಡಬಲಂ ಪ್ರಭಾಮಂಡಲಂಮೂರ್ಚ್ಛಿತನಪ್ಪುದುಮಿತ್ತಲಿಂದ್ರಜಿತ್ಕು ಮಾರಂ ಸುಗ್ರೀವನಂ ವಿರಥನಂಮಾಡಿ ಪನ್ನಗಾಸ್ತ್ರದಿಂದಿಸುವುದುಂ ॥

ಉ ॥ ಕಾಲಡಿಯಿಂಕೊರಲ್ವರೆಗಮಿಂದಗಿಯೆಚ್ಚಫಣೀಂದ್ರಸಾಯಕಂ ।
ಕೀಲಿಸಿದಂತೆಪೋಲ್ಬಿಗಿಯೆಸುತ್ತುವುದುಂಬಸವುತ್ತುಮುಚ್ಚಿಕಂ ॥
ಜಾಲಿಗೆಚ್ಚೆಗೆಟ್ಟುಕಪಿಕೇತನನಾಗಳೆಮೂರ್ಚ್ಛೆವೋಗೆಶ ।
ಕ್ರಾಲಯಮಂ ಪಳಂಚಿದುದು ದಾನವಸೈನ್ಯಜಯಾನಕಸ್ವನಂ ॥ 143

ವ ॥ ಮತ್ತಿತ್ತಲೊಂದುಮೊನೆಯೊಳ್ ॥

ಕಂ ॥ ಮಾಯಾಯುದ್ಧದೊಳಂದಿ ।
ವ್ಯಾಯುಧಯುದ್ಧದೊಳಮಧಿಕಬಲರುಭಯಬಲಂ ॥
ಜೇಯೆಂಬಿನೆಗಂಕಾದಿದ ।
ರಾಯತಿನಿಲೆಕುಂಭಕರ್ಣ್ನನುಂಮಾರುತಿಯುಂ ॥ 144

ವ ॥ ಅಂತುಕಾದುವಲ್ಲಿ ॥

ಕಂ ॥ ರಣಕರ್ಕಶನಸುರಕುಲಾ ।
ಗ್ರಣಿವಿರಥಂಮಾಡಿವೀರನಂಖಚರಕುಲಾ ॥
ಗ್ರಣಿಯನವೆಯುವದೊಳಣುವನ ।
ನಣುವಂಪಿಡಿವಂತೆಕುಂಭಕರ್ಣಂಪಿಡಿದಂ ॥ 145

ಚ ॥ ಅಮಿತಪರಾಕ್ರಮಃಪ್ರಥಿತರಪ್ಪಕಪಿಧ್ವಜರಂವಿಯಚ್ಚರ ।
ಪ್ರಮುಖರುಮೆಯ್ದಿದರ್ನೆರೆದುರಾವಣಸೇನೆಯೊಳಣ್ಮಿಕಾದಿಭಂ ॥
ಗಮನಿದುತಕ್ಕುದನ್ಯರಪೆಸರ್ದಶಕಂಧರನಂದಶಾಸ್ಯಸೈ ।
ನ್ಯಮನುಜದಿಕ್ಕಿಗೆಲ್ವೆಡೆಗೆಲಕ್ಷ್ಮಣನೆಂಬುದೊರಾಮನೆಂಬುದೋ ॥ 146

ವ ॥ ಅಂತಿಂದಗಿಮೇಘವಾಹನ ಕುಂಭಕರ್ಣರಿಂ ಸುಗ್ರೀವಪ್ರಭಾಮಂಡಲಹನುಮತ್ಪ್ರ
ಮುಖಮುಖ್ಯನಾಯಕರ್ಕಳ್ನಾಗಪಾಶವಿದ್ಯೆಯಿಂಕಟ್ಟುವಡೆದಿರ್ಪುದಂ ॥

ಕಂ ॥ ಅವರಭಿಪಟ್ಟಿರವಂತಿರೆ ।
ದುವಿಭೀಷಣನಱಿಪಿರಾಮಲಕ್ಷ್ಮೀಧರರ್ಗಂ ॥
ನವರೂಥಿನಿಯುಂಕೊಂಡಂ ।
ನೆವರಂನೀಮಿರ್ಪುದವರನೀಗಳೆತರ್ಪ್ಪಂ ॥ 147

ವ ॥ ಎಂದುಬಿಂನಪಂಗೆಯ್ದುವಿಭೀಷಣಂರಣರಸಿಕನಾಗಿಪೋಪುದುಮಂಗದಂತಾನುಮೊ
ಡನೆಸಂಗ್ರಾಮಸಂರಂಭಮನಪ್ಪುಕೆಯ್ದುಕುಂಭಕರ್ಣನಂಮುಟ್ಟೆವಂದು ॥

ಕಂ ॥ ಸಂಗರದೊಳ್ಪಡೆವೆಂದೋ ।
ರ್ಭಂಗಮನಾವಂಗವೆಂದುಕಲುಷಾನಳನಿಂ ॥
ದಂಗದನಂಗೀಕರಿಸಿದ ।
ನಂಗಾರಮನುಗುಳ್ವಕಾರಸಿಡಿಲಪೊಡರ್ಪ್ಪಂ ॥ 148

ವ ॥ ಅಂತುಮಸಗಿಮಾಮಸಕಂಗೊಂಡಕೃತಾಂತನಂತೆ ಸಾಧಾರಣಾಸ್ತ್ರದೊಳಂದಿವ್ಯಾ
ಸ್ತ್ರದೊಳಮಸಾಧಾರಣಮಾಗೆಕಾದಿ ॥

ಕಂ ॥ ಶರಭಂಪಿಡಿದಮೃಗಾಧೀ ।
ಶ್ವರನಂಭೇರುಂಡನೆಳೆದುಕೊಳ್ವಂತೆನಿಶಾ ॥
ಚರಕರದಿನಂಗದಂಸಂ ।
ಗರರಂಗದೊಳೆಳೆದುಕೊಂಡನನಿಲಾತ್ಮಜನಂ ॥ 149

ಗೆಲೆಕಾದಿಕುಂಭಕರ್ಣನ ।
ನಲಂಘ್ಯಬಲನಂಗದಂಜಯಶ್ರೀನಿಳಯಂ ॥
ಜಲದಪಥಕ್ಕೊಗೆಧಾಕ್ಷಣ ।
ದೊಳೆಮಾರುತಿವೆರಸುರಘುಜನಲ್ಲಿಗೆವಂದಂ ॥ 150

ವ ॥ ಇತ್ತಲಾವಿಭೀಷಣನಿಂದಗಿಮೇಘವಾಹನರೊಳಾಹವಕ್ಕೊಡರ್ಚ್ಚುವುದುಮವರೆಮ್ಮ ಕಿಱಿಯಂಮನೊಳ್ಕಾದುವುದುತಕ್ಕುದಲ್ತು ಪಿಂಗೆಭಂಗವಲ್ತೆಂದುಕಯ್ದುಗೆಯ್ದಾದು ವೇಕ್ಷೆಗೆಯ್ದುತೊಲಗಿಪೋಗೆಮುಟ್ಟಿವೋಗಿವಿಭೀಷಣಂಪಂನಗಶರವೇಷ್ಟಿತರಾಗಿರ್ದ್ದ ಸುಗ್ರೀವಪ್ರಭಾಮಂಡಲರಂಕಂಡೇನುಂಗಯ್ಯಲಱಿಯದೆಸಂಭ್ರಮಚಿತ್ತನಾಗಿನೊ ಡುತ್ತುಮಿರೆ ॥

ಕಂ ॥ ಏನುಚಿತಮೆರಘುಕುಲಬಲ ।
ಹಾನಿಯನೀಕ್ಷಿಸುವುದೆಂದುಕಡುವೇಗದಿನು ॥
ತ್ತಾನಪದಂಪೋಪಂತಿರೆ ।
ಭಾನುಬಿಸಿಲ್ಮಸುಳಿವೊಕ್ಕನಪರಾರ್ಣ್ಣವಮಂ ॥ 151

ವ ॥ ಅಂತುಮೇಸರ್ಪ್ಪಡುವುದುಂ ದಶಾಸ್ಯನಪಹಾರತೂರ್ಯ್ಯಮಂಪೊಯಿಸಿಬೀಡಿಂಗೆಪೋ ಪುದುಮಿತ್ತಲ್ ॥

ಕಂ ॥ ಸೌಮಿತ್ರಿಮುಕುಳಿತಾಂಜಳಿ ।
ರಾಮಂಗಿಂತೆಂದನಿವರ್ಗೆಪಂನಗಶರಮೂ ॥
ರ್ಚ್ಛಾಮುದ್ರಾಚ್ಛೇದನದಿಂ ।
ಕ್ಷೇಮಮನೊಡರಿಸುವುಪಾಯವಾವುದೊಪೆಸಸಿಂ ॥ 152

ವ ॥ ಎನೆದಾಶರಥಿದಶನಕಾಂತಿನಿರ್ವ್ವಿಷೀಕರಣಮಣಿಮಯೂಖದಂತೆನಿಮಿರ್ವ್ವಿನೆಗಮಿಂ ತೆಂದಂ ॥

ದ್ರುತವಿಲಂಬಿತ ॥ ಇವರುಪದ್ರವಮಂಕ್ಷಣಮಾತ್ರದಿಂ ।
ತವಿಸುಗುಂನೆನೆಮುಂಬರವಿತ್ತನಂ ॥
ದಿವಿಜನಂಪೆಱತೇನೆನೆಲಕ್ಷ್ಮಣಂ ।
ಸವಿನಯಂನೆನೆದಂಬರವಿತ್ತನಂ ॥ 153

ಕಂ ॥ ನೆನೆವುದುಮಾಸನಕಂಪಂ ।
ಜನಿಯಿಸಿದತ್ತಾಗಳಾಮಹಾಲೋಚನನೆಂ ॥
ಬನಿಳಿಂಪಂಗೆನೆರಘುವೀ ।
ರನಲಕ್ಷ್ಮೀಧರನಸ್ಯೆವುಸಾಧಾರಣಮೇ ॥ 154

ತನಗಾಸನಕಂಪಂತೊ ।
ಟ್ಟನೆವುಟ್ಟಿರಣಪ್ರಪಂಚದೊಳ್ರಘುವೀರಂ ॥
ನನೆದಪನೆಂದುಮಹಾಲೋ ।
ಚನನೋರ್ವ್ವಮೊದಲಱಿದನವಧಿಲೋಚನದಿಂದಂ ॥ 155

ವ ॥ ಅಂತರಂಗರುಡಾಧಿಪನಪ್ಪ ಮಹಾಲೋಚನನಱಿದು ಬಹುವಿದ್ಯಾಪರಿವಾರಮನುಳ್ಳ
ಸಿಂಹವಾಹಿನಿಯುಂ ಗರುಡವಾಹಿನಿಯುಮೆಂಬೆರಡು ವಾಹನವಿದ್ಯೆಗಳುಮಂದಿವ್ಯಾ
ಸ್ತ್ರಂಗಳುಮನುಯ್ದುಕುಡೆಂದುನಿಜಾನುಚರನಪ್ಪಚಿಂತಾವೇಗನೆಂಬದೇವಂಗೆಬೆಸ
ಸುವುದುಮಾತಂಬಂದುಸಿಂಹವಾಹಿನಿಯಂಶ್ರೀರಾಮಂಗೆಗರುಡವಾಹಿನಿಯಂಲಕ್ಷ್ಮೀ
ಧರಂಗೆ ಸದ್ಭಾವದಿನೀವುದುಂ ॥

ಕಂ ॥ ಮನ್ನಿಸಿಚಿಂತಾವೇಗಮ ।
ಹೋಂನತನಂಜೈನಪೂಜೆಗೆಯ್ದತಿಹರ್ಷೋ ॥
ತ್ಪಂನರ್ಪ್ಪುಳಕಾವಳಿಸಂ ।
ಛಂನಶರೀರರ್ಬ್ಬಲಾಚ್ಯುತರ್ಬ್ಬಗೆಗೊಂಡರ್ ॥ 156

ಚ ॥ ಪ್ರಣತಜಗಜ್ಜನಂತ್ರಿಭುವನಪ್ರಭುಕಾವ್ಯಕಳಾವಿಳಾಸಿನೀ ।
ಪ್ರಣಯಿಪರಾರ್ತ್ಥಕಲ್ಪತರುತಂಮಮನೋರಥಸಿದ್ಧಿದೇಶಭೂ ॥
ಷಣಕುಲಭೂಷಣವ್ರತಿಪದಾಂಬುಜಸೇವೆಯಿನಾದುದೆಂದುಸ ।
ದ್ಗುಣಮಣಿಭೂಷಣಂಪುಳಕಮಂತಳೆದಂಕವಿತಾಮನೋಹರಂ ॥ 157

ಗದ್ಯ ॥ ಇದುಪರಮಜಿನಸಮಯಕುಮುದಿನೀಶರಚ್ಚಂದ್ರಬಾಳಚಂದ್ರಮುನೀಂದ್ರಚರಣನ
ಖಕಿರಣಚಂದ್ರಿಕಾಚಕೋರಂಭಾರತೀಕರ್ಣ್ಣಪೂರಂ ಶ್ರೀಮದಭಿನವಪಂಪವಿರಚಿತ
ಮಪ್ಪರಾಮಚಂದ್ರಚರಿತಪುರಾಣದೊಳ್ಬಲಾಚ್ಯುತಪುಣ್ಯಪ್ರಭಾವೋದಯವರ್ಣ್ಣ
ನಂತ್ರಯೋದಶಾಶ್ವಾಸಂ.

ಚತುರ್ದಶಾಶ್ವಾಸ ಪ್ರಾರಂಭಃ.

ಕಂ ॥ ಶ್ರೀರಮಣೀನಿಷ್ಟಸಿದ್ಧಿಗೆ ।
ಚಾರಣಮುನಿಪಾದಕಲ್ಪಪಾದಪಮೆವಲಂ ॥
ಕಾರಣಮಾದುದೆನುತ್ತುಂ ।
ಚಾರಿತ್ರಪವಿತ್ರನೊಸೆದನಭಿನವಪಂಪಂ ॥ 1

ಅಲಘುಮಹಿಮಾಪ್ರಭಾವಂ ।
ನೆಲೆವೆಟ್ಟಿರ್ದುದೆನಗೆಯೋಗನಿಷ್ಠಾಪರನಿ ॥
ಷ್ಟಲರೆನಿಪದೇಶಭೂಷಣ ।
ಕುಲಭೂಷಣದಿವ್ಯಯೋಗಿದರ್ಶನದಿಂದಂ ॥ 2

ವ ॥ ಎಂದವರಂನಿರ್ಭರಭಕ್ತಿಯಿಂ ಸ್ತುತಿಗೆಯ್ದುಹರ್ಷಭರವಿನಮ್ರನಾಗಿವರುಷವಾರುಣಕೃಶಾನುಬಾಣಂಮೊದಲಾಗೊಡೆಯಪಲವುಂದಿವ್ಯಬಾಣಂಗಳುಮಂಧವಳಚ್ಛತ್ರಚಾಮರಂಗಳುಮಂಸಿಂಹಗರುಡಧ್ವಜಂಗಳುಮನಭೇದ್ಯಕವಚಂಗಳುಮನನರ್ಘ್ಯರತ್ನಭೂಷಣಂಗಳುಮಂ ರಾಮಲಕ್ಷ್ಮಣರ್ಗ್ಗೆಕೊಟ್ಟು ಚಿಂತಾವೇಗಂಮನಃಪವನವೇಗದಿಂನಿಜನಿವಾಸಕ್ಕೆ ಪೋಪುದುಮಿತ್ತಲ್ ॥

ಕಂ ॥ ಜಿನಧರ್ಮ್ಮದಸಾಮರ್ತ್ಥ್ಯದಿ ।
ನಿನಿತುಮಹಾಮಹಿಮೆರಾಮಲಕ್ಷ್ಮೀಧರರೊ ॥
ಳ್ಜನಿಯಿಸೆವಿಸ್ಮಯಮಾದುದು ।
ಹನುಮಂತಪ್ರಮುಖನಿಖಿಲವಿದ್ಯಾಧರರೊಳ್ ॥ 3

ವ ॥ ಅನಂತರಮಾಗರುಡವಾಹಿನಿಯತನುಪ್ರಭೆತಮಮನಭಿಭವಿಸೆತತ್ಪಕ್ಷಪಾತಜಾತವಾತಘಾತದಿಂ ನಾಗಪಾಶವಿದ್ಯೆಸಡಿಲ್ದುಪೋಗೆ ಸುಗ್ರೀವಪ್ರಭಾಮಂಡಲರಪಗತಮೂರ್ಚ್ಛಾಪ್ರಪಂಚರ್ಸಿಂಹಗರುಡವಾಹನಾರೂಢರಾಗಿರ್ದ್ದರಾಮಲಕ್ಷ್ಮಣರಲ್ಲಿಗೆಬಂದವರಪುಣ್ಯಪ್ರಭಾವಕ್ಕೆ ಸಂತೋಷಂಬಟ್ಟುನಿಮಗೀಮಹಾಮಹಿಮೆಯಾದವೃತ್ತಾಂತಮಂಬೆಸಸಿಮೆನೆ ಶ್ರೀರಾಮದೇವರದೆಲ್ಲಮಂ ನೆಱೆಯೆಬೆಸಸುತ್ತುಂ ಬೀಡಿಂಗೆಬಿಜಯಂಗೆಯ್ದುಂದಿನಿರುಳಾಮಹೋತ್ಸವ ವ್ಯಾಪಾರದೊಳಿರ್ಪ್ಪುದುಂ ॥

ಕಂ ॥ ಇಂದಿನನುವರದೊಳಪಜಯ ।
ಮಂದನುಜಂಗುಂಟುಮಾಳ್ಕೆಯಿನವಂಶಜನೆಂ ॥
ದಂದಧಿಕರಾಗಮಂತಳೆ ।
ದಂದದಿನಿನನುದಯಶಿಖರಿಶೇಖರನಾದಂ ॥ 4

ವ ॥ ಅಂತು ನೇಸರ್ಮೂಡುವುದುಂ ದಶವದನನೆಂದಿನಂದದಿಂ ರಣಭೂಮಿಗೆವಂದೊಡ್ಡಿ ನಿಲ್ವುದು ಮಿತ್ತ ರಾಮಲಕ್ಷ್ಮಣರ್ನಿರ್ವ್ವರ್ತ್ತಿತ ನಿತ್ಯನಿಯಮರ್ದ್ದೇವನಿತ್ತ ದಿವ್ಯಕವಚಮಂತೊಟ್ಟು ದಿವ್ಯಾಭರಣಭೂಷಿತರಾಗಿರ್ಪ್ಪುದುಂ ॥

ತರಳ॥ ದನುಸುತಂಕೆಳೆತಂನನಾಮುಳಿಸಿಂಮೃಡಾದ್ರಿಯಸಿಂಹವಾ ।
ಹಿನಿಯರೂಪಿನೊಳಾಹವಕ್ಕೆ ಸಹಾಯಮಾಯ್ತು ರಘೂದ್ವಹಂ ॥
ಗೆನಿಸಿಕಾಯಬಳಂಕನತ್ಕನಕೋಪಳಾಕ್ಷಿಬೃಹದ್ಗುಹಾ ।
ನನಮಗುರ್ವ್ವಿಸೆತುಂಗಶೃಂಗಮೆಕೋಱೆದಾಡೆಗಳಾದವೋಲ್ ॥ 5

ಚ ॥ ವಿಳಯಘನಾಘನಂಗಳೆನೆ ಪಕ್ಷಯುಗಂನಡೆತರ್ಪ್ಪರೋಹಣಾ ।
ಚಳಮೆನೆ ಪಂಚವರ್ಣ್ಣವಿಳಸತ್ತನುಬಿಚ್ಚನೆಬಿಟ್ಟದಿಟ್ಟಿಗೆ ॥
ಳೆವ್ವಳೆವುರಿತಾರ್ಕ್ಕಬಿಂಬಮೆನೆಚಂಚುಮರೀಚಿಶತಪ್ರದಪ್ರಭೋ ।
ಜ್ಜ್ವಳಮೆನೆ ಭೀಕರಂಗರುಡವಾಹಿನಿವಿದ್ಯೆಯವಿಕ್ರಿಯಾಕ್ರಮಂ ॥ 6

ವ ॥ ಅಂತೆಗುರ್ವ್ವಾಗೆವಿಗುರ್ವ್ವಿಸಿಬಂದಸಿಂಹಗರುಡವಾಹಿನಿಗಳನೇಱಿ ಸಿಂಹಗರುಡಧ್ವಜಂಗಳನೆತ್ತಿಸಿ ದೇವನಿರ್ಮ್ಮಿತಂಗಳಪ್ಪ ಸಿತಾತಪತ್ರಂಗಳಂ ಪಿಡಿಯಿಸಿ ಸುಗ್ರೀವಪ್ರಭಾಮಂಡಲಮರುತ್ಸುತವಿಭೀಷಣಪ್ರಮುಖನಿಖಿಲವಿದ್ಯಾಧರರ್ಬ್ಬಳಸಿಬರೆ ಸಂಗ್ರಾಮಭೂಮಿಗೆ ಬಂದೆಂದಿನಂದದಿನೊಡ್ಡಿ ನಿಲ್ವುದುಂ ॥

ಕಂ ॥ ಎರಡೊಡ್ಡುಂತಾಗಿಭಯಂ ।
ಕರಮೆನೆಕಾದಿದುವುಪಱಿದತಲೆನೆತ್ತರಸು ॥
ಟ್ಟುರೆಖಂಡದಿಂಡೆಕೊಳ್ಕಿದು ।
ಳರಾಣೆನೊದುರ್ವ್ವಿಪರ್ವ್ವಿಸಮರಾವನಿಯೊಳ್ ॥ 7

ವಾರಣಘಟೆಯುಂಜೋದರು ।
ಮಾರೋಹಕರುಂತುರಂಗದಳಮುಂರಥಿಯುಂ ॥
ತೇರುಮೊಡನೞಿಯೆಪೋಲ್ತ ।
ತ್ತೀರೊಡ್ಡುಂಪವನಹತಘನಾಘನದೊಡ್ಡಂ ॥ 8

ಚ ॥ ಪಲವುಗಜಂಗಳುಂಪಲವುವಾಜಿಗಳುಂಪಲವುಂರಥಂಗಳುಂ ।
ಪಲರುಮುದಗ್ರವೀರಭಟರುಂಪಲವುಂತೆಱದಾಯುಧಂಗಳುಂ ॥
ಪಲವುವಿಧಂಗಳಿಂಪಲವುಮೊಡ್ಡಣದಿಂಪಲರುಂಪೊಗಳ್ವಿನಂ ।
ತೊಲಗದೆತಾಗಿತಳ್ತಿಱಿಯೆನಾಡೆಯುಮದ್ಭುತಮಾದುದಾಹವಂ ॥ 9

ವ ॥ ಅಮಹಾಹವದೊಳ್ ॥

ಉ ॥ ವಾನರಸೇನೆದಾನವರಸೇನೆಯನಳ್ಕುಱಿಕಾದೆಕಂಡುಪಂ ।
ಚಾನನದಂತೆಗರ್ಜ್ಜಿಸಿ ದಶಾನನನೆಯ್ತರೆಬೆರ್ಚ್ಚಿಪೋಗದೇ ॥
ನಾನನವಾಕಪಿಧ್ವಜನಿಜೇಗಮದಂಪೆಱಗಿಕ್ಕಿತಾಗಿದಂ ।
ದಾನವರಾಜನಂಜವನುಮೆಂಬಿವನೆಂಬಿನೆಗಂವಿಭೀಷಣಂ ॥ 10

ವ ॥ ಅಂತುತಾಗುವುದುಂಕಡುಮುಳಿದುರಾವಣಂವಿಭೀಷಣನಿಗಿಂತೆಂದಂ ॥

ಕಂ ॥ ಎಂನೊಡನೆಪುಟ್ಟಿಖಚರಕು ।
ಲೋನ್ನತಿಕೀಳ್ಪಟ್ಟಿತಕ್ಕುಗಿಡೆಕಿಂಕರಭಾ ॥
ವಂನಿನಗೆಸಮನಿಸಿತ್ತುಕೆ ।
ಲಂನಗುವಿನವೊಲಪೊಸೀಚಭೂಗೋಚರರೊಳ್ ॥ 11

ಅಕ್ಷೋಣಿಮಪ್ಪಸಿರಿಯಂ ।
ದಕ್ಷಿಣಭರತತ್ರಿಖಂಡಧರೆಯಂ ಯುವರಾ ॥
ಜಚ್ಛತ್ರಚಾಮರಮನುೞ ।
ದಕ್ಷಮದೊರೆಗೆಟ್ಟಮಾನವಂಗಾಳಾದೈ ॥ 12

ವ ॥ ಎಂದುಮೂದಲಿಸಿ ॥

ಕಂ ॥ ತನಗಧಿಕವಾಗೆಮನದೊ ।
ಳ್ಮನಿಸುವಿಭೀಷಣನನೆಂದನಸುರೇಂದ್ರನದೆಂ ॥
ತನುಜನೊಡನಾಂತೊಡೆಚ್ಚರ್ವೆ ।
ನನುವರಮಂಗೋತ್ರವಧಮಹಾಪಾತಕಮಂ ॥ 13

ವ ॥ ಅದಱಿಂನೀನೆಂನಮುಂತಣಿಂತೊಲಗಿಪೋಗೆಂದ ದಶಮುಖನದುರುಕ್ತಿಗೆವಿಭೀಷಣಂ ಕೋಪಗ್ರಹಾವೇಶಮನಪ್ಪುಕೆಯ್ದುಹಿತಮನಱಿಪಿದೊಡೆನ್ನಂಪೊಱಮಡಿಸಿಕಳೆದಂದೇನಿಂನಸಹಧರ್ಮ್ಮಕೆಯುಂ ತತ್ಕೂರ್ಮ್ಮಯುಂಪಱಿಪಟ್ಟುಪೋದುದಿಂನಾದೊಡಂತ್ರಿಭುವನಸ್ತವನೀಯಮಪ್ಪನಂಮತೋಯದವಾಹನಾನ್ವಯಕ್ಕೆ ಬಂನಮಪ್ಪಂತುಪರಪ್ರೇಯಸಿಗೞಪಂತೆಂದ ದುರ್ಬ್ಬುದ್ಧಿಯನುೞದು ನಿನಗಂನಿಂನವಂಶಕ್ಕಮಕಾಳಮೃತ್ಯುವೆಂತಾರದೆ ರಾಮಸ್ವಾಮಿಗೆ ಜಗನ್ಮಾತೆಯಂಸೀತಾದೇವಿಯನೊಪ್ಪಿಸಿ ನಿನ್ನಸಾಮ್ರಾಜ್ಯಪದವಿಯೊಳ್ಪದುಳಂನಿಲ್ವುದೆನೆ ಮುಳಿದು ತಿರುವಾಯೊಳಂಬಂ ತೋರ್ಪುಮುಟ್ಟಿವರೆ ॥

ಕಂ ॥ ತ್ರಿಪತಾಕಾಭೀಷಣತರ ।
ಉಪನಂತೆಗೆದಿಸೆವಿಭೀಷಣಂರಾವಣನಿಕೇ ॥
ತ್ರಿಪತಾಕಾದಂಡಂಬೆರ ।
ಸುಪತಾಕಾದಂಡಮುಡಿದುಕೆಡೆದತ್ತಾಗಳ್ ॥ 14

ವ ॥ ಅಂತು ವಿಭೀಷಣನೇಸಾಡೆ ತಾನುಮೊಡನೆ ॥

ಕಂ ॥ ಸೋದರನಧನುರ್ಗ್ಗುಣಮಂ ।
ಛೇದಿಸಿದಂರೋಷಿರಾವಣಂಮದವದಿರೋ ॥
ನ್ಮಾದವಶಂಧರ್ಮ್ಮಗುಣ ।
ಚ್ಛೇದನಮಂಮಾಳ್ಪದೆಂಬುದೇಂದಚ್ಚರಿಯೇ ॥ 15

ವ ॥ ಅಂತು ದಶಾನನಂನಿಜಶರಾಸನಮಂಖಂಡಿಸೆ ॥

ಕಂ ॥ ದಶವದನಶರಾಸನಮಂ ।
ನಿಶಾತಶರದಿಂವಿಭೀಷಣಂಖಂಡಿಸಿದಂ ॥
ದಶವದನನುಂವಿಭೀಷಣ ।
ನಶರಾಸನಮಂನಿಶಾತಶರದಿಂಕಡಿದಂ ॥ 16

ವ ॥ ಅಂತು ಕಲುಷವಶಗತರಾಗಿ ॥

ಕಂ ॥ ಪಿತೃವುಂಪಿತೃವ್ಯನುಂಕಾ ।
ದೆತಂನೊಳಿಂದಗೆಪಕ್ಷಮಾದುದುಲಂಕಾ ॥
ಪತಿಯೊಡನೆತಕ್ಕುದೋರ್ಮ್ಮರ ।
ನತಿಗುಡುಮತ್ತೊಂದುಮರನನೇಂಪತ್ತುಗುಮೇ ॥ 17

ವ ॥ ಅಂತುಇಂದ್ರಜಿತ್ಕುಮಾರನೆಡೆವೊಕ್ಕುವಿಭೀಷಣನೊಳ್ಕಾದಲೊಡರಿಸೆಲಕ್ಷ್ಮಣಂನಿಜ
ವರೂಥಮನಾತನರಥಕಡ್ಡಂನೂಂಕಿ ॥

ಕಂ ॥ ಇತ್ತಿತ್ತಮಗುಳ್ಕಗುಳೆಂ ।
ದತ್ತಲ್ಲಾಮಾನುಜನ್ಮನಿಂದಗಿಯೊಳ್ಕಾ ॥
ದುತ್ತುಮಿರೆರಾಘವಂಸುಭ ।
ಟೋತ್ತಮನೊಳ್ಕುಂಭಕರ್ಣ್ಣನೊಳ್ಬಲ್ಯೊಯ್ದಂ ॥ 18

ವ ॥ ಆಸಮಯದೊಳಸಮವಿಳಯಸಮಯಸಮುತ್ಪಾದನಸಮರ್ತ್ಥನಪ್ಪಕೃತಾಂತನಂ
ತೆ ಹನುಮಂ ಕುಂಭಕರ್ಣ್ಣನೊಳ್ಕಿಷ್ಕಿಂಧಂ ಕೇತುವಿನೊಳ್ಪ್ರಭಾಮಂಡಲಂ

ಮೇಘವಾಹನನೊಳ್ವಿರಾಧಿತಂ ಮಯನೊಳೂರ್ಜಿತಂ ದೃಢರಥನೊಳ್ವಿಱುಮಾಂಕೆ
ಯಕಪಿಧ್ವಜಬಲದನಾಯಕರನೇಕರುಂರಾಕ್ಷಸಬಲದನಾಯಕರೊಳ್ವಿಲ್ವೊಯ್ದು
ಬಹುಕಬಂಧನರ್ತನಪ್ರಬಂಧಮತ್ಯದ್ಭುತಮಾಗೆಮಹಾಯುದ್ಧಂಗೆಯ್ಯುತ್ತುಮಿ
ರ್ಪಿನಮಿತ್ತಲ್ ॥

ಕಂ ॥ ಇಂದಗಿಸಾಧಾರಣಶರ ।
ಸಂದೋಹದಿನೆಚ್ಚುಕಾದಲಣಮಾಱದೆಶ ॥
ತ್ರುಂದಮನೊಳ್ಲಕ್ಷ್ಮಣನೊ ।
ಳ್ತಂದಂದಿವ್ಯಾಸ್ತ್ರಗರ್ಭಶರಧಿಗೆಕಯ್ಯಂ ॥ 19

ವ ॥ ಅಂತುದಿವ್ಯಬಾಣಮಂ ಬಾಣಾಸನದೊಳ್ತೊಡಿಕೊಂಡುಸೇಂದ್ರನಿಂದ್ರಜಿತ್ತುಮಾ
ರನಿಸುವುದುಂ ॥

ಮ ॥ ಗಗನಾಭೋಗದೊಳಿರ್ದ್ದನೋಳ್ಸುರಸಂದೋಹಂಮಹೋತ್ಸಾಹದಿಂ ।
ಪೊಗಳ್ವಂನಂತಮದಂಬನರ್ಕ್ಕಶರದಿಂದಾಶೀವಿಷೋಗ್ರಾಸ್ತ್ರಮಂ ॥
ಖಗರಾಜಾಸ್ತ್ರನಿಪಾತದಿಂಕಿಡಿಸಿದಿವ್ಯಾಸ್ತ್ರಂಗಳಿಂಗೆಲ್ದನಿಂ ।
ದಗಿಯುಂಸಂಸೃತಿಕಾಲಸಾಂಧ್ಯಜಲದಾರಕ್ತೇಕ್ಷಣಂಲಕ್ಷ್ಮಣಂ ॥ 20

ಕಂ ॥ ತ್ರಿದಶೇಂದ್ರವಿಜಯಿಯಂದಶ ।
ವದನನನಾಹವದೊಳಿಕ್ಕಲಿರ್ದ್ದಮಹಾವೀ ॥
ರ್ಯ್ಯದಕಡೆಗೆಲಕ್ಷ್ಮಣಂಗಾ ।
ಮೃದುಗಹನಮೊಗೆಲ್ವುದುೞಿದರಣಬಾಲಕರಂ ॥ 21

ವ ॥ ಅಂತುಗೆಲ್ದಿಂದಗಿಯುಂವಿರಥಂಮಾಡಿ ನೆಲಕ್ಕಿಕ್ಕಿನಾಗಪಾಶದೊಳ್ಕಟ್ಟಿವಿರಾಧಿತನಕ
ಯ್ಯೊಳ್ಬೀಡಿಂಗೆಕಳಿಪುವುದುಮಿತ್ತಲ್ ॥

ಕಂ ॥ ಪೆಱರಳವೆರಾಮನೊಳ್ತ ।
ಳ್ತೆಱಿಯಲಿಪಂರಾವಣಂಗೆಶೌರ್ಯ್ಯದೊಳಂನೇ ॥
ರ್ಗ್ಗಱಿಯನೆನೆಕುಂಭಕರ್ಣ್ಣಂ ।
ಮುಳಿದಂಕೋದಂಡಬಾಹುದಂಡಗನೆಱವಂ ॥ 22

ವ ॥ ಅಂತು ಕದನಕರ್ಕ್ಕಶನಾಗಿಕಾದುತ್ತುಮಿರೆ ರಾಘವನವನನೇಳಿದಂಬಗೆದುದಿವ್ಯಬಾ
ಣತೂಣೀರಕ್ಕೆ ಕಯ್ಯನುಯ್ಯದ ॥

ಶಾ ॥ ಸಾಮಾನ್ಯಾಸ್ತ್ರಂಗಳಿಂಭಂಗಮನೊಡರಿಸಿದಂ ಕುಂಭಕರ್ಣ್ಣಂಗೆನಲ್ಕಂ ।
ಗ್ರಾಮಾವಷ್ಟಂಭಸಂರಂಭದಿನತುಳಬಲಂಮೀಱಿಮಾಱಾಂಪನಾವಂ ॥
ರಾಮಂದಿವ್ಯಾಸ್ತ್ರಮಂತೊಟ್ಟೊಡೆಕುಲನಗಮಲ್ಲಾಡುಗುಂದಿಕ್ಕರೀಂದ್ರ ।
ಸ್ತೋಮಂಬಾಯ್ವಿಟ್ಟುಪಿಮ್ಮೆಟ್ಟುಗುಮಿಳೆಗಿಳಿಗುಂವ್ಯೋಮದಿಂಭಾನುಬಿಂಬಂ ॥ 23

ವ ॥ ಅಂತವನಶಸ್ತ್ರಾಸ್ತ್ರತನುತ್ರಕೋದಂಡಪತಾಕಾದಂಡಂಗಳಂಖಂಡಿಸುವುದುಂ ॥

ಉ ॥ ಮಿಕ್ಕ ಮಹಾರಥಂವಿರಥನಾದನಧೋಕ್ಷಜನಂತೆನಾಗಪಾ ।
ಶಕ್ಕೊಳಗಾದನೀಶ್ವರಕಿರೀಟಮೆನಲ್ಪಥದಿಂನೆಲಕ್ಕೆವಾ ॥
ಯ್ದಿಕ್ಕಟಬ್ರಹ್ಮನಂತಿರೆರಜೋಮಯನಾದನಿದಿರ್ಚ್ಚಿರಾಮನೊ ।
ಳ್ತಿಕ್ಕಿನಕುಂಭಕರ್ಣ್ಣನೆನೆಮಿಕ್ಕಮರಾಂತುಬರ್ದುಂಕುವಂನರಾರ್ ॥ 24

ವ ॥ ಅಂತು ಬಂಧನಕ್ಕೆ ಬಂದ ಕುಂಭಕರ್ಣ್ಣನಂ ಪ್ರಭಾಮಂಡಲಂಗೊಪ್ಪಿಸುವುದುಂ ಪ್ರಭಾಮಂಡಲಂ ಮೇಘವಾಹನನಂನಾಗಪಾಶದೊಳ್ಕಟ್ಟಿಕುಂಭಕರ್ಣ್ಣಂಬೆರಸು ಬೀಡಿಂಗೆವೋದನಿತ್ತಪಿರಿದುಪೊತ್ತುಭರಂಗೆಯ್ದುಕಾದುತ್ತುಮಿರ್ದ್ದವಿಭೀಷಣನಂರಾವಣಂನೋಡಿಕೊಲಲ್ವೇಡಿ ॥

ಕಂ ॥ ಶೂಲಾಯುಧದಿಂದಿಡೆಲಯ ।
ಕಾಲೋರಗನಂತೆಬರ್ಪ್ಪುದಂಜಯಲಕ್ಷ್ಮೀ ॥
ಲೋಲಂಲಕ್ಷ್ಮೀಧರನ ।
ಸ್ತ್ರಾಳಿಗಳಿಂಖಂಡಖಂಡಮಾಗಿರೆಕಡಿದಂ ॥ 25

ವ ॥ ಅಂತು ಕಡಿದುವಿಭೀಷಣನಂಪೆಱಗಿಕ್ಕಿಲಕ್ಷ್ಮಣನೆಡೆಗುಡದಳಱಿರಾವಣನೊಳ್ತಾಗುವುದುಂ ॥

ಕಂ ॥ ನೀಂಕಾದೆವಿಭೀಷಣನಂ ।
ಮುಂಕೊಲಲೆಂದಿಟ್ಟಶೂಲಮಂಖಂಡಿಸಿನಿಂ ॥
ನಂಕಾವವನಾವನೆಸು ।
ತ್ತಂಕೊಂಡಂದಿವ್ಯಶಕ್ತಿಯಂದಶಕಂಠಂ ॥ 26

ವ ॥ ಅಂತುಕೊಂಡಭಿಮಂತ್ರಿಸಿದಿವ್ಯಶಕ್ತಿಯಿಂದಿಡುವುದುಂ ॥

ಚ ॥ ಕುಳಿಕನದಾಡೆಯೋಜವನದಾಡೆಯೊಮೇಣ್ಪ್ರಳಯಾಗ್ನಿಜಿಹ್ವೆಯೋ ।
ಜಳಧಿಯನೀಂಟುವೌರ್ವ್ವದಹನಾರ್ಚ್ಚಿಯೊಪೇಳೆನೆರೌದ್ರರೂಪಮಂ ॥
ತಳೆದುಕಪಿಧ್ವಜರ್ನ್ನಡುಗುವಂತುದಶಾನನನಿಟ್ಟಶಕ್ತಿನಿ ।
ಟ್ಟಳಮೆನೆನಟ್ಟುದಪ್ರತಿಮಶಕ್ತಿಜನಾರ್ದ್ದನನೀರವಕ್ಷಮಂ ॥ 27

ವ ॥ ಅಂತಾ ದಿವ್ಯಶಕ್ತಿನಿಶ್ಶಕ್ತಿಯಪ್ಪಂತುನಟ್ಟುನಿಲೆ ॥

ಕಂ ॥ ಸಮರವಿಜಯಾಂಗನಾಸಂ ।
ಗಮಜನಿತಶ್ರಮದೊಳಾದನಿದ್ರೆಯವೋಲ್ಕ ॥
ಣ್ಮೆಮುಚ್ಚಿಮೂರ್ಛೆವೋದಂ ।
ಕಮಳಾಕ್ಷಂದನುಜದಿವ್ಯಶಸ್ತ್ರಪ್ರಹತಂ ॥ 28

ಅನುವರದೊಳ್ಸಮಬಲನೀ ।
ತನೆದೋರ್ವ್ವಲದೃಪ್ತನೆಂಬಬಗೆದಾರದೆಬಿ ॥
ರ್ದ್ದನನಿಱಿಯಲೊಲ್ದನಿಲ್ಲಾ ।
ವನೊರಾವಣನಂತುಪಾಳಿಯುಂಪಾಳಿಸುವಂ ॥ 29

ವ ॥ ಅಂತುಮೂರ್ಛೆಗತನಪ್ಪುದುಂದಾನವರಸೇನೆಯೊಳ್ಪೊಣ್ಮಿರ್ಸುವ ಜಯಾನಕರವಂ
ಶ್ರವಣವಿವರಮಂಸಾರ್ತ್ತರೆ ತದ್ವೃತ್ತಾಂತಮಂತಿಳಿದು ॥

ಚ ॥ ಅನುಜನಮೂರ್ಛೆವೋದಳಲಿಕೋಪಮನಗ್ಗಳಮುಂಟುಮಾಡೆಕೀ ।
ಳ್ವನೊಕುಲಶೈಲಮಂಕುಡಿವೆನೋಕಡಲಂವಸುಧಾತಳಕ್ಕೆತ ॥
ರ್ಪ್ಪೆನೊಶಶಿಸೂರ್ಯ್ಯಮಂಡಲಮನೆತ್ತುವೆನೋನೆಲನಂವಿಯತ್ತಳ ।
ಕ್ಕೆನಗಿದಿರಾವನೆಂದೊದಱಿರಾವಣನೊಳ್ಪೊಣರ್ದ್ದಂರಘೂದ್ವಹಂ ॥ 30

ವ ॥ ಅಂತು ಪೊಣರ್ದ್ದು ॥

ಮ ॥ ತಿರುವಿಲ್ಲಂಬುಪತಾಕೆವಜ್ರಕವಚಂಸೂತಂವರೂಥಂಜಯೋ ।
ತ್ತರಮೆಂಬಿಂತಿವನಾಗಳೆಚ್ಚುಕಡಿಖಂಡಂಮಾಡಿದಿವ್ಯಾಸ್ತ್ರದಿಂ ॥
ವಿರಥಂಮಾಡಿದನೇಳುಸೂಳ್ವರೆಗಮಾವಂರಾಮಬಾಣಕ್ಕೆನಿ ।
ತ್ತರಿಪಂತಂನನೆಸಂತವಿಟ್ಟನಸುರಂಮುಂತಾಗಲೇನಾರ್ತ್ತನೇ ॥ 31

ವ ॥ ಅಂತುರಾವಣಂಪಲವುಸೂಳ್ವಿರಥನಾಗಿಯುಮವಿಚ್ಛಿನ್ನಕವಚನುಮವ್ರಣಕಾಯ
ನುಮಪ್ಪುದುಂ ॥

ಕಂ ॥ ಭೇದಿಪುವುಕುಲಾದ್ರಿಯನೆಂ ।
ಬೀದಿವ್ಯಶರಂಗಳೀವನದೇಹಮನಿನಿಸಂ ॥
ಭೇದಿಸಿದುವಿಲ್ಲವಿಸ್ಮಯ ।
ಮಾದಪುದಲ್ಲಾಯುಮಲ್ಲನಕ್ಕುಂದನುಜಂ ॥ 32

ವ ॥ ಎಂದುಬಗೆಯುತ್ತಿರ್ಪ್ಪಿನಂ ॥

ಮ ॥ ಇನವಂಶೋದ್ಭವನಪ್ಪಲಕ್ಷ್ಮಣನಮೂರ್ಛಾವೇಗಮಂಪೆಂಗಿಸ ।
ಲ್ಕನುವಂಶಂಗೆಡೆವೊಳ್ಪನಿಂದಿನಿರುಳೊಳ್ಲಕ್ಷ್ಮೀಧರಂಗೆಲ್ಗ ವಿಾ ॥
ದನುಜಾಧೀಶ್ವರನಿಟ್ಟಶಕ್ತಿಯಪೊಡರ್ಪಂತಕ್ಕುದಲ್ಲಿರ್ಪುದಿಂ ।
ನೆನೆಗೆಂಬಂತೆದಿನಾಧನಾಥನಪರಾಂಭೋರಾಶಿಯಂಪೊರ್ದಿದಂ ॥ 33

ವ ॥ ಅಂತುನೇಸರ್ಪಡುವುದುಮೆರಡುಪಡೆಗಳಪಹಾರತೂರ್ಯಮೊಂಪೊಯ್ಸಿತಂತಂಮ
ಬೀಡಿಂಗೆ ಪೋಪುದು ಮಾಸಮಯದೊಳ್ ॥

ಮ ॥ ಮನದೊಳ್ಪುಟ್ಟಿಪರ್ವವಿಷಾದವಾದುವುದಶಾಸ್ಯಂಗೋರ್ವನಂವೈರಿಯಂ ।
ಮೊನೆಯೊಳ್ಸಾಧಿಸಿದೆಂಮಹಾಬಲನನೆಂಬುತ್ಸಾಹದಿಂದಾತ್ಮನಂ ॥
ದನರಪ್ಪಿಂದಗಿಮೇಘವಾಹನರುಮಂಮತ್ತೋದರಂಕುಂಭಕ ।
ರ್ಣನುಮಂಬಾಳ್ದಲೆಗೊಂಡರೆಂದಸದಳಂಮೆಯ್ವೆಟ್ಟಿರ್ದುದ್ವೇಗದಿಂ ॥ 34

ವ ॥ ಅಂತುಬಗೆಬೆದಱಿ ರಾವಣಂ ಲಂಕೆಗೆಪೋದನಿತ್ತ ದಾಶರಥಿಮೂರ್ಛಿತನಾಗಿರ್ದ ಲ
ಕ್ಷ್ಮಣನಂ ಕಂಡು ತಾನುಂಮೂರ್ಛೆವೋಗಿನೀಡಿರದೆಚ್ಚತ್ತುಮತಿವಿಹ್ವಳಚಿತ್ತನಾ
ಗಿ ತಂಮನನೆಯ್ದೆವಪ್ಪುದುಂ ಜಾಂಬವಸುಷೇಣ ಪ್ರಮುಖಮಂತ್ರಿಗಳಿಂತೆಂದ
ರ್ದೇವದಿವ ಶಸ್ತ್ರಪ್ರಹರಣದೊಳಾದವೇದನೆನಿಮ್ಮಕರಸ್ಪರ್ಶನದಿನಧಿಕಮಕ್ಕುಂ
ಮುಟ್ಟಬೇಡೆಂದುಬಾರಿಸಿ ನೀವೇಕೆವಿಹ್ವಳರಪ್ಪಿರೀಸೌಮಿತ್ರಿಯಪ್ಪೊಡೆಂಟನೆಯಕೇ
ಶವನಾತನಕಯ್ಯೊಳ್ರಾವಣಂಗಮಪಾಯಮಕ್ಕುಮಲ್ಲದೀತಂಗಪಾಯಮಪ್ಪುದೆ
ಲ್ತು ದಿವ್ಯಶಸ್ತ್ರಪ್ರಹರಣಭರಮನಪಹರಿಸುವಭೇಷಜ ಪ್ರಯೋಗಮನೊಡರಿಸುವ
ಮೆಂದುಶೋಕೋದ್ರೇಕಮನುಪಶಮಿಸುವುದುಮನಂತರಂ ॥

ಕಂ ॥ ಸೌಮಿತ್ರಿಯರುಸುತ್ತಣರಣ ।
ಭೂಮಿಯನಿಂಬಾಗಿಸಮಱಿಕಪಿಕೇತುಕುಲ ॥
ಗ್ರಾಮಣಿಸುಗ್ರೀವಂವಿ ।
ದ್ಯಾಮಯಮಂಸಪ್ತಗುಪ್ತಿಯಂನಿರ್ಮಿಸಿದಂ ॥ 35

ವ ॥ ಅಂತು ನಿರ್ಮಿಸಿದ ವಿದ್ಯಾಪ್ರಾಕಾರಂಗಳಬಹಿರಂತಃಪ್ರದೇಶಂಗಳೊಳ್ಪಲಬರಂವಿ
ದ್ಯಾಧರರಂ ಕಾಪುವೇಳ್ವುದುಂ ॥

ಕಂ ॥ ಚಲಿಯಿಸೆನೆಂದಾದಿಯಬಾ ।
ಗಿಲಕಾಪಿನೊಳಸಮಸೈನ್ಯನೆಂಟನೆಯಕುಲಾ ॥
ಚಲಮೆಂಬಿನಂಪ್ರಭಾವಂ ।
ಹಲನಿರ್ದಂಮಂಡಲಾಗ್ರಮಂಜಡಿಯುತ್ತುಂ ॥ 36

ಕಂ ॥ ಎರಡನೆಯಬಾಗಿಲೊಳ್ಸಂ ।
ಗರಕ್ಕೆ ತಾನಂಗರಕ್ಕೆ ರಘುಜಂಗೆಂಬಂ ॥
ತೆರಡನೆಯ ದಂಡಧರನಂ ।
ತಿರಿದ್ದರ್ನುಜದಂಗದಂಗದಾದಂಡಧರಂ ॥ 37

ಮೂಱನೆಯನೊಸಲಕಣ್ಣಂ ।
ತೋಱುವೆನಾನಸುರಸೇನೆಗೆಂಬಂತಾಗ ॥
ಳ್ನಾಱನೆಯಬಾಗಿಲೊಳ್ಕ್ರೌ ।
ರ್ಯಱದೆಶೂಲಾಯುಧಂವಿಭೀಷಣನಿರ್ದ್ದಂ ॥ 38

ಸಮದಂಬಾಪಧರಂತ ।
ನ್ನ ವಿತಬಲಂಬೆರಸುವೊಱುತಂಗಂಪುಗಲಿಂ ॥
ದುಮರೀಚಿಗಮೆಣಮರಿದನೆ ।
ಕುಮುದಂನಾಲ್ಕನೆಯಬಾಗಿಲೊಳ್ನಿಱಿದಿರ್ದ್ದಂ ॥ 39

ಪರಚಕ್ರವಿಳಯಕೇತುವು ।
ಲಿರೆಕೊಂತಂತಂನಹಸ್ತದೊಳ್ತಾನಬಲಂ ॥
ಬೆರಸುಸುಷೇಣಂಖೇಚರ ।
ಪರಿವೃಢನಯ್ದನೆಯಬಾಗಿಲೊಳ್ಬಂದಿರ್ದ್ದಂ ॥ 40

ಅಪರಿಮಿತಸೈನಿಕಂಪಿಡಿ ।
ದುಪಿಂಡಿವಾಳಮನಖರ್ವಬಾಹಾಗರ್ವಂ ॥
ಕ್ಷಪಿತರಿಪುಸೈನ್ಯನಿರ್ದ್ದಂ ।
ಕಪಿಕುಲನಾಱನೆಯಬಾಗಿಲೊಳ್ಸುಗ್ರೀವಂ ॥ 41

ಎನ್ನನತಿಕ್ರಮಿಸಲ್ನೆಱೆ ।
ವನ್ನಂಬೆಱನಾವನಿರುಳಕಾಳಗದೊಳೆನು ॥
ತ್ತುನ್ನೀಲಂರಣಲೋಲಂ ।
ತನ್ನಬಲಂಬೆರಸುಕಡೆಯಬಾಗಿಲೊಳಿರ್ದ್ದಂ ॥ 42

ವ ॥ ಅಂತವರಸಂಖ್ಯಾತಬಲಸಮೇತರಾಗಿರ್ಪ್ಪುದುಮಾವಜ್ರಪ್ರಾಕಾರದೊಳಗಣಮ
ಣಿಮಂಟಪದಪೂರ್ವ್ವದ್ವಾರದೊಳ್ಶರಭನುಂ ಪಶ್ಚಿಮದ್ವಾರದೊಳ್ಚಂದ್ರಮರೀಚಿ
ಯುಮುತ್ತರದ್ವಾರದೊಳ್ಜಾಂಬವನುಂ ದಕ್ಷಿಣದ್ವಾರದೊಳ್ಮಹೇಂದ್ರನುಮಪಾರವೀ
ರಭಟಸೇನಾಸಮನ್ವಿತರಾಗಿ ಲಕ್ಷ್ಮಣನಂಕಾಯ್ದುಕೊಂಡಿರ್ಪ್ಪುದುಮಿತ್ತ ರಾವಣನಂ
ತಾಂತರಂಗದೊಳ್ ॥

ಕಂ ॥ ಸಾಯದೆಮೋಱಂಲಕ್ಷ್ಮಣ ।
ನೀಯಿರುಳೊಳ್ಪಾಯ್ದುಸೆಱೆಗಳಂಕೊಲ್ಲದೆಕ ॥
ಯಗ್ಗಯರವರೆಮಗೆಪಿರಿದುಮ ।
ಪಾಯಂಸಮನಿಸಿದುದೆಂದುಚಿಂತಿಸುತಿರ್ದ್ದಂ ॥ 43

ವ ॥ ಅಂತಿರ್ಪ್ಪುದುಮತ್ತ ಸೀತಾದೇವಿಶಕ್ತಿಪ್ರಹಾರದಿಂಲಕ್ಷ್ಮೀಧರಂಮೂರ್ಚ್ಛಿತನಾಗಿರ್ದ್ದನೆಂಬುದಂಕೇಳ್ದುಸಸ್ಯಶೋಕಾನಳದಂದಹ್ಯಮಾನಮಾನಸೆಯಾಗಿ ॥

ಕಂ ॥ ಈದಿವ್ಯಾಯುಧಹತಿಯಿಂ ।
ದಾದತ್ತುವಿಪತ್ತಿನಿನಗೆಲಕ್ಷ್ಮೀಧರಧಾ ॥
ತ್ರೀದಯಿತನಪ್ಪನೀನೆಂ ।
ಬಾದೇಶಮದೆತ್ತವೋಯಿತ್ತುಮನುಕುಲತಿಲಕಾ ॥ 44

ಸಾವಂರಾವಣನೆಂದ ।
ಕ್ಕೇವಲಿಗಳ್ಸಿದ್ಧಸಿಲೆಯನುದ್ಧರಿಸಿದಕೌ ॥
ಯ್ಯಾವಷ್ಟಂಭದಿನದುಪುಸಿ ।
ಸಾವಾದುದುನಿನಗೆವೈರಿಶಸ್ತ್ರಹತಿಯಿಂ ॥ 45

ವ ॥ ಎಂದುಪಲತ್ತೆಱವಿಂಪ್ರಳಾಪಂಗೆಯ್ವಸೀತೆಯಂವಿನೀತೆಖಚರಕಾಂತೆಸಂತೈಸಿನಿನಗಿನಿತುದುಃಖಮೇಕೆವುದೊನಿಂಮಮೈದುನಂವಾಸುದೇವನಪ್ಪುದಱಿಂಪ್ರತಿವಾಸುದೇವನಿಂಸಾವನೆಯ್ದುವನಲ್ಲನೆಂದಳಲನಾಱಿಸುತ್ತಿರ್ಪ್ಪಿನಮಿತ್ತಲ್ ॥

ಕಂ ॥ ಗಗನಚರಂಲಕ್ಷ್ಮೀಧರ ।
ನಗಣ್ಯಪುಣ್ಯಪ್ರಭಾವದಿಂಮತ್ತೋರ್ವ್ವಂ ॥
ಗಗನತಳಂನಿಜಭೂಷಾಂ ।
ಶುಗಳಿಂಪ್ರಜ್ವಳಿಸುವಂತುವೇಗಂಬಂದಂ ॥ 46

ವ ॥ ಅಂತುವೇಗಂಬಂದುಬೀಡಂಪುಗುವಲ್ಲಿಕಾಪಿನವರ್ಪ್ಪುಗಲೀಯದಿರ್ಪ್ಪುದುಮವಾತಂರಥನೂಪುರಚಕ್ರವಾಳಪುರದಿಂ ಕಾಳಗದಸುದ್ದಿಯಂಜನಕನಾರಯ್ಯಲಟ್ಟಿದೊಡೆಬಂದೆನೆಂದವರನುಮತದಿಂಪ್ರಭಾಮಂಡಲನಂಬಂದುಕಂಡುತಂನಬರವನಱಿಪಿ ಸಾಮಿತ್ರಿಯಮೂರ್ಚ್ಛಾಪ್ರಪಂಚಮನವರದೆಸೆಯಿನಱಿದಾನೀದಿವ್ಯಶಕ್ತಿಯಿಂದಾದಪಾಯಮನಪಹರಿಸುವುಪಾಯಮುಂಬಲ್ಲೆನೆಂಬುದುಂಪ್ರಭಾಮಂಡಲಂಪ್ರಮೋದಮುದಿತಹೃದಯನಾತನಂರಾಮಸ್ವಾಮಿಯಲ್ಲಿಗುಯ್ವುದುಮಾತಂ ಸರ್ವ್ವಾಂಗಪ್ರಣತನಾಗಿದೇವಭವತ್ಪ್ರಭಾವದಿಂಲಕ್ಷ್ಮೀಧರಂಗೆಸರ್ವ್ವಕ್ಷೇಮಮಕ್ಕುಮಾದೆಸೆಗುಂಮಳಿಸದೆಂನಬಿಂನಪಮನವಧರಿಸುವುದೆಂದಿಂತೆಂದಂ ॥

ಚ ॥ ನಿರುಪಮದೇವಗೀತಪುರವೆಮ್ಮ ಪುರಂ ಪುರವಲ್ಲಭಂ ಕಲಾ ।
ಪಱಿಣತನೆಂಮತಂದೆಕೋಶಮಂಡಲನಾನತಿಚಂದ್ರನೆಂಬಖೇ ॥
ಚರನೆನಗೊರ್ಮ್ಮೆವಾಯುಪಥದೊಳ್ಪರಮೋತ್ಸವದಿಂ ವಿಹಾರಿಸು ।
ತ್ತಿರೆಪಗೆವಂ ಸಹಸ್ರವಿಜಯಾಂಕಮುಳಿಯ್ದು ವಿರಾಗಿತಾಗಿದಂ ॥ 47

ವ ॥ ಅಂತುತಾಗೆಪಿರಿದುಪೊತ್ತಿರ್ವ್ವರುಂ ಭರಂಗೆಯ್ದು ಕಾದುತ್ತಿರ್ದ್ದರ್ ॥

ಕಂ ॥ ಅವನಿಟ್ಟಶಕ್ತಿಯಿಂದಾಂ ।
ಜವವೞಿದುನಭೋವಿಭಾಗದಿಂಸಾಕೇತ ॥
ಕ್ಕವತರಿಸಿಮಹೇಂದ್ರೋದ್ಯಾ ।
ನವನದತಣ್ಬುೞಿಲತಾಣದೊಳ್ಬಿರ್ದ್ದೆಂ ॥ 48

ವ ॥ ಅಂತುಮಿರ್ಪ್ಪುದುಂ ॥

ಚ ॥ ಭರತನುಮೆಂನಪುಣ್ಯವಶದಿಂದಿರವಲ್ಲಿಗೆವಂದು ಮೂರ್ಚ್ಛೆವೊ ।
ಗಿರೆಕೃಪೆಯಿಂದಮೆಂನನವಲೋಕಿಸಿದಿವ್ಯಸುಗಂಧತೋಯಮಂ ॥
ತರಿಸಿಮದಂಗದೊಳ್ತಳಿಯೆಶಕ್ತಿಯದತ್ತಪೊಡರ್ಪ್ಪುಗೆಟ್ಟುಚೆ ।
ಚ್ಚರಮದಪಿಂಗೆಮೂರ್ಚ್ಛೆತಿಳಿದೆಂಮಱುವಟ್ಟವಲೀಳ್ವವಾಳ್ಕೆಯಿಂ ॥ 49

ವ ॥ ಅಂತುಮತ್ತೆ ಮೂರ್ಚ್ಛೆಯಿಂದೆೞ್ಚೆತ್ತುಕತಿಪಯಪರಿಜನಂಬೆರಸಿಪರ್ದ್ದಭರತನಂಕಂಡುಕಾ
ರಣಬಂಧುವಪ್ಪನಿಂನದೂಸಱಿಂದೆನಗೆಪುನರ್ಜ್ಜನ್ಮಮಾದುದೀಗಂಧಸಲಿಲಕ್ಕೆನಿತು
ಸಾಮರ್ತ್ಥ್ಯವಾದಕಾರಣಮಂಪೇೞ್ವುದೆನೆಭರತನಿಂತೆಂದನೆಂಮಪುರಕ್ಕಂದೇಶ
ಕ್ಕಂಪರಿಗುತ್ತಮೊದಲಾಗೆಪಲವುಮಾಗಂತುಕಪೀಡೆಗಳಪ್ಪುದುಮಾನವಕ್ಕೆ
ಸಂಗೆಯ್ಯಲಱಿಯದುಮೞ್ಕುತ್ತಿರ್ಪ್ಪುದುಮಾಬ್ಯತಿಕರಮನೆಂಮಮಾವಂ
ದ್ರೋಣಮೇಘಂಕೇಳ್ದುಬಂದುಗಂಧೋದಕಮಂತಂದು ॥

ಕಂ ॥ ಪುರಮಂದೇಶಮುಮಂವ್ಯಾ ।
ಧಿರಹಿತಮಪ್ಪಂತುಮಾೞ್ಪುದುಂಪಿರಿದಪ್ಪ ॥
ಚ್ಚರಿತಂಮಚಿತ್ತದೊಳ್ಪೆ ।
ರ್ಚ್ಚಿರೆಭರತಂದ್ರೋಣಮೇಘನಂಬೆಸಗೊಂಡಂ ॥ 50

ವ ॥ ಅಂತುಬೆಸಗೊಳ್ವುದುಂದ್ರೋಣಮೇಘನಿಂತೆಂದಂ ॥

ಕಂ ॥ ಪಲವುಂವ್ಯಾಧಿಗಳಿಂಮ ।
ತ್ತಲವಧುನಮೆಯ್ಯುತ್ತುಮಿರ್ದ್ದುಬಸುಱಾಗಲೊಡಂ ॥
ತೊಲಗೆರುಜಾಹೃತ್ಸ್ವಲ್ಯಾಂ ।
ಲಲನಾರತ್ನಮೆನಿಪೊಂದುಕೂಸಂಪೆತ್ತಳ್ ॥ 51

ವ ॥ ಆಕೂಸಿಂಗದುಕಾರಣದಿಂವಿಶಲ್ಯಾಸುಂದರಿಯೆಂಬಪೆಸರಾದುದಾಕೆಯಮಜ್ಜನಜಲ
ದಿಂದೆಂಮನಾಡುಂಬೀಡುಂವ್ಯಾಧಿರಹಿತಮಾದುದೆಂದಾದ್ರೋಣಮೇಘಂಪೇಳ್ದನೆಂ
ದಾಭರತಂಪೇಳ್ವುದುಂ ॥

ಕಂ ॥ ಎನಗಧಿಕಮವಾಗೆಕೌತುಕ ।
ಮಿನಿತತಿಶಯಮಾಕೆಗಾದಕಾರಣಮುಂಪೇ ॥
ಳೆನಗೆಂದುಮತ್ತೆಯುಂಭರ ।
ತನನಾಂಬೆಸಗೊಂಡೆನಪರಿಮಿತಶುಭರತನಂ ॥ 52

ವ ॥ ಬೆಸಗೊಳ್ವುದುಂಭರತನಿಂತೆಂದನೀಪೂರ್ವ್ವವಿದೇಹದಪುಂಡರೀಕಿಣೀಪುರಮನಾಳ್ವಂ
ತ್ರಿಭುವನಾನಂದಚಕ್ರವರ್ತ್ತಿಯೆಂಬನಾತನಮಗಳನಂಗಶರೆಯೆಂಬಳ್ತ್ತರುಣಿಂಬ
ದರ್ಗಿದನಂಗಶರದಂತೆಕೇಳೀವನದೊಳಗೆಸುಳಿಯುತ್ತಿರ್ಪ್ಪುದುಮಾಸಮಯದೊ
ಳ್ಪುಷ್ಕಳಾವತೀವಿಷಯದವಿಜಯಾರ್ದ್ಧಗಿರಿಯಸುಪ್ರತಿಷ್ಠಪುರಮನಾಳ್ವಂಪುನ
ರ್ವ್ವಸುವೆಂಬವಿದ್ಯಾಧರನಾಕೆಯಂಕಂಡು ಮದನಶರಶಲಾಕಾಕೀಲಿತಹೃದಯನಾಗಿ
ನಿಜವಿಮಾನದೊಳ್ನಭಕ್ಕೆನೆಗೆದುಪೋಪುದುಂತ್ರಿಭುವನಾನಂದಚಕ್ರವರ್ತ್ತಿ
ಕೋಪರಸವರ್ತ್ತಿಯಾಗಿಪಲರುಂವಿದ್ಯಾಧರಚಕ್ರಮುಖರನಾತನಮೇಲೆವೇಳ್ವುದು
ಮವರೊಳ್ಪುನರ್ವ್ವಸುಕಾದಿಬಸವಳಿದನಂಗಶರೆಯುಂಪರ್ಣ್ನಲಘುವಿದ್ಯೆಯಿಂನೆಲ
ಕ್ಕಿಳಿಪುವಂತುಮಾಡಿಪೋಪುದುಂ ॥

ಕಂ ॥ ಆವಿದ್ಯೆಗಗನತಳದಿಂ ।
ದಾವಧುವಂಮೆಲ್ಲನಿಳಿಪಿರೌದ್ರಮೃಗಂಗ ॥
ಳ್ಗಾವಾಸವೆನಿಪದೊಂದುಮ ।
ಹಾವಿಷಮಾಟವಿಯೊಳಿರಿಸಿಪೋದತ್ತಾಗಳ್ ॥ 53

ಆಕೆಯುಮಾಕಾಂತಾರನ ।
ದೀಕೂಲದೊಳಿರ್ದ್ದನೆನೆದುಪಿತೃಮಾತೃಗಳಂ ॥
ಶೋಕಾಕುಲೆದುಷ್ಕರ್ಮ್ಮವಿ ।
ಪಾಕಮಿದೆಂದಂತರಂಗದೊಳ್ಚಿಂತಿಸಿದಳ್ ॥ 54

ಧರಣೀಶ್ವರಸುತೆಯಾಗಿಯು ।
ಮರಣ್ಯದೊಳ್ಬಿರ್ದ್ದಿಸಾವದುಷ್ಕರ್ಮ್ಮಫಲಂ ॥
ದೊರೆಕೊಂಡಿತ್ತೆನಗಿದನಪ ।
ಹರಿಸಲ್ಕೆಜಿತೇಂಜಿನೇಂದ್ರಚರಣಮೆಶರಣಂ ॥ 55

ಕಂ ॥ ಎಂದಾತಜಿಸೆಂದಾತಪದೊ ।
ಳ್ಕಿಂದುಮಹಾನೋಂಪಿಯನಿತುಮಂಪಲಕಾಲಂ ॥
ಸಂದಿಸಿನೋಂತಾತನೂದರಿ ।
ಪಿಂದಿಕ್ಕಿದಳಬ್ದಮಂಸಹಸ್ರತ್ರಯಮಂ ॥ 56

ವ ॥ ಅಂತಾತನುತ್ತಾಜಿತಪಂಗೆಯ್ದನಶನದೀಕ್ಷೆಯೊಳಿರ್ದೊರ್ಂದುದಿವಸಂ ॥

ಕಂ ॥ ನುಂಗಿಪವರದಜಾಗರತ ।
ಸ್ವಾಂಗಿತಪಸ್ವಿನಿಸಮಾಧಿಸಮನಿಸೆಮನದೊ ॥
ಳ್ಪಾಂಗವೆನೆಲಸಿರೆಪಂಚಪ ।
ದಂಗಳ್ನಾಲಗೆಯೊಳಜುಮಮೆಪ್ಪಾಗಿರ್ದ್ದಾಳ್ ॥ 57

ವ ॥ ಅಂತಿರ್ದ್ದುಶರೀರಭಾರಮನಿಳಿಪಿಸನತ್ಕುಮಾರಕಲ್ಪದೊಳ್ಪುಟ್ಟಿಸುರಲೋಕಸುಖ
ಮನನುಭವಿಸಿಬಂದೀಗಳೀದ್ರೋಣಮೇಘಂಗೆಸರ್ವ್ವೌಷಧಿಪ್ರಾಪ್ತಿಯಪ್ಪಸುತೆಯಾ
ದಳ್ಃಪುನರ್ವ್ವಸುವುಂಮಗುಳ್ದುಬಂದುಮಾನೆತಂನಿರಿಸಿಪೋದಪೇರಡವಿಯೆಡೆಗಳನಂ
ಗಶರೆಯುಂಕಾಣದೆತನಗದುವೆನಿರ್ವ್ವೇಗಕಾರಣಮಾಗೆತಪಂಬಟ್ಟು ॥

ಕಂ ॥ ತನುಮಂತಪಿಯಿಸಿತಪದೊ ।
ಳ್ಮನಿಯದೆಮುನಿಯಿಸದೆನಡೆದುಮುನಿಪತಿಸನ್ನ್ಯಾ ॥
ಸನದಿಂಸಮಾಧಿಸಮನಿಸೆ ।
ಸನತ್ಕುಮಾರದೊಳಪಾರಸುಖದೊಳ್ತಣಿದಂ ॥ 58

ನಿರತಿಶಯಸುಖಸುಧಾಸಾ ।
ಗರದೊಳ್ಮನಮಾಜಿಮೂಡಿಮುಳ್ಕಾಡುತ್ತುಂ ॥
ಪರಮಾಯುಮಂಪುನರ್ವ್ವಸು ।
ಚರಾಮರಂತೀರ್ಚ್ಚಿಬಂದುಲಕ್ಷ್ಮಣನಾದಂ ॥ 59

ವ ॥ ಎಂದುಮನಃಪರ್ಯ್ಯಯಜ್ಞಾನಿಗಳಪ್ಪಸರ್ವ್ವಭೂತಹಿತಭಟ್ಟಾರಕರ್ತ್ತನಗೆಸೇಳ್ದು
ದನೆನಗಂಭರತಂಪೇಳ್ದನೆಂದತಿಚಂದ್ರವಿಯಚ್ಚರಂಬಿಂನವಿಸೆ ರಾಮಚಂದ್ರಂಮೆ
ಚ್ಚಿಮೆಚ್ಚುಗೊಟ್ಟುಹನೂಮದಂಗದಪ್ರಭಾಮಂಡಲರನಾಗಂಧೋದಕಮಂಭರತ
ನಂಪೇಡಿತಂನಿಮೆಂದಟ್ಟುವುದುಮಾವಮ್ಮರ್ನೋವೇಗದಿಂದಿವ್ಯವಿಮಾನಂಗಳನೇಱಿ
ವಿಯನ್ಮಾರ್ಗ್ಗದಿಂಪೋಗಿಸಾಕೇತಪುರಮಂಪೊಕ್ಕುಭರತನಂಕಂಡು ॥

ಕಂ ॥ ಕಿಱಿದಱೊಳೆರಣದವಾರ್ತೆಯ ।
ನಱಿಪಿದಣಾನನಶಕ್ತಿ ನೆಱೆಗೊಳೆತನುವಂ ॥
ಮಱೆದಿರ್ದ್ದಂಲಕ್ಷ್ಮಣನೆಂ ।
ದಱಿಪಿದರಂಗದಮರುತ್ತನೂಜಪ್ರಮುಖರ್ ॥ 60

ಪ್ರಶಮಿಸುಗುಂಲಕ್ಷ್ಮೀಧರ ।
ನಶಕ್ತಿಯಿಂದಾದಬಾಧೆತಡೆಯದೆನೀವೀ ॥
ನ್ನೀಯೊಳೆತಂದೆಮಗೀವುದು ।
ವಿಶಲ್ಯಾಸುಂದರಿಯಮಿಂಬಗಂಧೋದಕಮಂ ॥ 61

ವ ॥ ಆದಲ್ಲದಂದುನೇಸಮೂರ್ಡುವುದುಂಲಕ್ಷ್ಮಣಂಗೆತಪ್ರಾಣನಕ್ಕುಮೆನೆಭರತಶತ್ರು
ಘ್ನರ್ಕ್ಕೆಳ್ದುರಾವಣನಮೇಲೆನಡೆಯಲೊಡರಿಸಿ ॥

ಕಂ ॥ ವಿಸಸನದೊಳ್ದಶಮುಖನಂ ।
ದೆಸೆವಲಿಗುಡಲೆಂದುಭರತಶತ್ರುಘ್ನರ್ಸಾರ್ ॥
ಹಸಧನರಾಜಿಕ್ರೀಡಾ ।
ವಸಥರ್ಸ್ನಂನಾಶಭೇರಿಯಂಪೊಯ್ಸುವುದುಂ ॥ 62

ವ ॥ ಅದಂಪ್ರಭಾಮಂಡಲಂಬಾರಿಸಿರಘುವೀರನಬೆಸನಿಲ್ಲದೆನಿಂಮನುಮುಯ್ವುದುಚಿತಮಲ್ತುನಿ
ಮಗುಂಲಂಕೆದೂರಮಪ್ಪುದಱಿಂಬೇಗಂಬರಲ್ಬಾರದೆನೆಭರತನಿಂನೆಮಗೆಕಜ್ಜಮಾವು
ದೆಂಬುದುಂಗಂಧೋದಕಮಂತರಿಸಿಕೊಟ್ಟೊಡದನುಯ್ದುಲಕ್ಷ್ಮಣನಶಸ್ತ್ರಪೀಡೆಯಂ
ಕಳೆವಮೆನೆಭರತನಿಂತೆಂದಂ ॥

ಕಂ ॥ ಸುರಭಿಜಲದಿಂದಮೇನಾ ।
ತರುಣಿಯನೊಡಗೊಂಡುಪೋಪುದಾಕೆಗೆಲಕ್ಷ್ಮೀ ॥
ಧರನೆವರನೆಂಬುದಂಶುಭ ।
ಚರಿತರ್ಮ್ಮಂನೆನಗೆದಿವ್ಯಮುನಿಪರ್ಪೇಳ್ದರ್ ॥ 63

ಅಂತುಂಸ್ತ್ರೀರತ್ನಕ್ಕಾ ।
ತಂತಕ್ಕಂಮಿಕ್ಕರನಧಿಕಾರಿಗಳೆಂದೆ ॥
ತ್ಯಂತಹಿತರಂಪ್ರಧಾನರ ।
ನಂತವರೊಡಗೂಡಿಕೂಸನೆರೆದಟ್ಟುವುದುಂ ॥ 64

ಕಂ ॥ ಮುಂನಿಸಿ ಭರತನ ಮಾತಂ ।
ತಂನ ತನೂಭವೆ ವಿಶಲ್ಯಾಸುಂದರಿ ವೆರಸಿ ॥
ತ್ತಂನೂರ್ವ್ವರ್ಕ್ಕಂನೆರುರಂ ।
ಚೆಂನೆಯುರಂದ್ರೋಣಮೇಘನತ್ಯುತ್ಸವದಿಂ ॥ 65

ವ ॥ ಆಕನ್ಯಾರತ್ನಂಗಳಂ ಪ್ರಭಾಮಂಡಲಂ ವಿಮಾನಾರೂಢೆಯುಮ್ಮಾಡಿ ನಕ್ಷತ್ರವೀಥಿಯಿಂ ಕ್ಷಣಮಾತ್ರದೊಳ್ ರಣಭೂಮಿಯುನೆಯ್ದಿ ವಿಮಾನಂಗಳಿನವನೀತಳಕ್ಕವತರಿಸಿ ಬಪ್ಪನ್ನಲ್ಲಿ ವಿಶಲ್ಯಾಸುಂದರಿ ಲಕ್ಷ್ಮಣನನೆನಿತೆನಿತು ಸಾರೆವಪ್ಪುದುಮನಿತನಿತು ಶಕ್ತಿ ಶಕ್ತಿಗೆಟ್ಟು ॥

ಮ ॥ ಗಗನಾಭೋಗಮನಾವಗಂ ಬೆಳಗುತುಂ ಜ್ವಾಲಾಸಹಸ್ರಂಗಳಿಂ ।
ದುಗುಳುತ್ತುಂ ಕಿಡಿಯುಂ ಜನಾರ್ದ್ದನನ ವಕ್ಷೋಭಾಗಮಂ ಬಿಟ್ಟುಮೇ ॥
ಗೊಗೆವಾಗಳ್ ಪವನಾತ್ಮಜಂ ಪಿಡಿಯೆ ದಿವ್ಯಸ್ತ್ರೀಯ ರೂಪಾಗಿ ಕೈ ।
ಮುಗಿದೆಂನಂ ಬಿಡಿ ಮುಂದುತಲ್ಲಣಿಸಿ ಸಂಕಾತಂಕಮಂ ತಾಳ್ದಿದಳ್ ॥ 66

ವ ॥ ಅಂತು ನಡನಡಗುತ್ತುಂ ನಾಂ ವಿಜಯಿಯೆಂಬಂ ಪ್ರಜ್ಞಪ್ತಿ ವಿದ್ಯೆಯಿಂ ಕಿಱಿಯಳೆಂ ಬಾಲಿ ಭಟ್ಟಾರಕರ್ಕಾರಣಮಾಗೆ ರಾವಣಂ ಕೈಲಾಸಮನೆತ್ತಿ ಬಳಿಕ್ಕಂ ಬೀಣೆಯುಂ ಬಾಜಿಸಿ ಜಿನಗುಣಸ್ತವನಂಗಳಂ ಹಪ್ಷ(ಹರ್ಷ)ಚಿತ್ತದಿಂ ಪಾಡುತುತ್ತಮಿರೆ ಧರಣೇಂದ್ರಂಗಾಸನಕಂಪಮಾಗೆ ಬಂದು ॥

ಕಂ ॥ ಕರಮೊಸೆದು ನೋಡಿ ದಶಕಂ ।
ಧರನಂ ಹಪ್ಷ(ಹರ್ಷ)ಪ್ರಕಪ್ಷ(ಕರ್ಷ)ದಿಂದೆನ್ನಂ ಶರೇ ॥
ಚರಪತಿಗೆ ಕೊಟ್ಟ ನಾಂ ದಶ ।
ಶಿರನ ಪೆಸಂ ಬಡೆದು ತಾಗಿದೆಂ ಲಕ್ಷ್ಮಣನಂ ॥ 67

ವ ॥ ನಾನುಮಿಂ ಸರ್ವ್ವೌಷಧಿಪ್ರಾಪ್ತಿಯಪ್ಪ ವಿಶಲ್ಯಾಸುಂದರಿಯಿಂದಲ್ಲದೆ ಪೋಪೆನಲ್ಲೆ ನೆನ್ನಂ ಪೋಗಲೀಯಿಮೆನೆ ವಿದ್ಯಾಧರರ್ಗ್ಗೆಲ್ಲಂ ಚೋದ್ಯಮಾಗೆ ವಿದ್ಯಾದೇವತೆಯನಣುಮಂ ಬಿಟ್ಟು ಕಳೆವುದುಮಿತ್ತಲ್ ॥

ಕಂ ॥ ಚಲದಲಕ ಚಯಂ ರಘುಕುಲ ।
ತಿಲಕನ ಚರಣಾರವಿಂದಮಂ ಮಧುಕರಮಂ ॥
ಡಲದಂತೆ ಮುಸುರೆ ವನಿತಾ ।
ತಿಲಕಂ ನಡೆತಂದು ವಿನಯವಿನಮಿತೆಯಾದಳ್ ॥ 68

ವ ॥ ತದನಂತರಂ ॥

ಕಂ ‖ ದನುಜೇಂದ್ರನವಿಜಯಶ್ರೀ ।
ವನಿತೆಯೊಲಕ್ಷ್ಮಣನಪುಣ್ಯದೇವತೆಯೋಸೇ ‖
ಳೆನೆಕೆಲದೊಳ್ಬಂದಿರ್ದ್ದ ।
ಳ್ತನುರುಚಿಮೂವಳಸುವಳಸೆಪರಿಷಜ್ಜನಮಂ ‖ 69

ವ ‖ ಆಗಳಾಕನ್ಯಾರತ್ನದಕರಸ್ಪರ್ಶನಮಾತ್ರದಿಂಪವಿತ್ರಮಾದಸುರಭಿಸಲಿಲಸೇಚನದಿಂ
ಕುಂಭಕರ್ಣ್ಣಪ್ರಭೃತಿಗಳಪನ್ನಗಶರೋತ್ಪನ್ನಮನೋವೈಕಲ್ಯಮಂಕಳೆವುದುಂ ‖

ಕಂ ‖ ಪತ್ತುವಿಡೆಮೂರ್ಚ್ಛೆಮುನಿಸ ।
ಚ್ಚೊತ್ತಿದವೋಲ್ಮನದಿನಗಲದಿರೆಕಣ್ಗೆಂಪಂ ‖
ಬಿತ್ತರಿಸೆಮಸಗಿರಾವಣ ।
ನೆತ್ತಣನೆನುತುಂಜನಾರ್ದ್ದನಂಕುಳ್ಳಿರ್ದ್ದಂ ‖ 70

ವ ‖ ಅಂತಿರ್ಪ್ಪುದುಂ ‖

ಕಂ ‖ ಅಲರ್ವಂತೆದಿನೋದಯದೊ ।
ಳ್ಜಲಜವನಂರಾಘವಂಗಮಖಿಲಜನಕ್ಕಂ ‖
ನೆಲೆವೆಚ್ಚಿರ್ದುದನುರಾಗಂ ।
ಜಲರುಹನಾಭಂಗೆಪಿಂಗೆಮೂರ್ಚ್ಛಾವೇಗಂ ‖ 71

ಆಽನ್ನಿರ್ನಾದವಾಶಾ ।
ದೇಶಮನೆಯ್ದಿದುದುಮಂಗಳಾನಕರವಮಾ ‖
ಕಾಶಮನಡರ್ದುದುಮೂರ್ಚ್ಛಾ ।
ವೇಶಂಲಕ್ಷ್ಮೀಧರಂಗೆಪೆಱಪಿಂಗಲೊಡಂ ‖ 72

ನಾರಾಯಣನಂಮಣಿಮಯ ।
ನೀರಾಜನದೀಪಮಾಲೆಬಳಸಿದುವಾಗ ‖
ಳ್ಮೇರುವನೊಲ್ಲದೆಪಲವುಂ ।
ತಾರಾವಳಿಬಳಸುವಂತೆನೀಲಾಚಲಮಂ ‖ 73

ವ ‖ ಆಸಮಯದೊಳ್ಲಕ್ಷ್ಮಣನಸಮಕ್ಷದೊಳಿರ್ದ್ದವಿಶಲ್ಯಾಸುಂದರಿ ‖

ಕಂ ‖ ಅಪಹರಿಸಿಶಕ್ತಿಬಾಧೆಯ ।
ನುಪಕಾರಮನುಂಟುಮಾಡಿಲಕ್ಷ್ಮಣನೊಳ್ಪೇ ‖
ನಪಯೋಧರೆಕಡುಗಾಡಿಯೊ ।
ಳಪಕಾರಮನತನುಬಾಧೆಯಂಪುಟ್ಟಿಸಿದಳ್ ‖ 74

ವ॥ ಆಗಳಾಕನ್ಯಾರತ್ನಂ ಬೆರಸುತಂಮತಂದನೂರ್ವ್ವರ್ಕ್ಕಾಂನೆಯರುಮಂಮರುನ್ನಂದನಾದಿಗಳ್ವಿವಾಹವಿಧಿಯಿಂಕೈಕೊಳ್ವುದೆನೆರಾವಣವಿಜಯಾನಂತರಂಸಕಲಭುವನಾಂಬಿಕೆಯಂಸೀತಾದೇವಿಯಂತಂದುರಾಮಸ್ವಾಮಿಗೊಪ್ಪಿಸಿದೊಡಲ್ಲದೆಮದುವೆನಿಲ್ಲೆನೆನೆತಂಮಪೋದಬಂದವೃತ್ತಾಂತಮುಮಂವಿಶಲ್ಯಾಸುಂದರಿಯಂತಂದತೆಱನುಮಂತಿಳಿಪಿನಿಂಮಪುಣ್ಯಪ್ರಭಾವಕ್ಕದಾವುದುಗಹನಮೆಂದೊಡಂಬಡಿಸೆಶುಭದಿನಮುಹೂರ್ತ್ತದೊಳ್ಲಕ್ಷ್ಮಣನನಿಬರುಮಂಮದುವೆನಿಲ್ವುದುಮಿತ್ತಲ್ ॥

ಕಂ॥ ಚರನಱಿಪೆತಮಗೆದಶಕಂ ।
ಧರನವ್ಯಗಾಂಕಾದಿಮಂತ್ರಿಮುಖ್ಯರ್ಲ್ಲಕ್ಷ್ಮೀ ॥
ಧರಪುಣ್ಯಶಕ್ತಿಯಂದಕ ।
ಳಿರಂಗದಂಪೇಳಲೆಂದುಬೇಗಂಬಂದರ್ ॥ 75

ವ॥ ಅಂತುಬಂದುಸಮುಚಿತಾಸನದೊಳ್ಕುಳ್ಳಿರ್ದ್ದುಮುಕುಳಿತಾಂಜಲಿಗಳಾಗಿ ॥

ಕಂ॥ ಇರುಳೆವಿಶಲ್ಯಾಸುಂದರಿ ।
ಬರೆಶಕ್ತಿಪೊಡವ್ರ್ಗೆಟ್ಟುಪೋದುದುಮತತ್ಸಂ ॥
ದರಿವೆರಸುನೂರ್ವ್ವರಂನೃಪ ।
ತರುಣಿಯರಂದೇವಮದುವೆನಿಂದನುಪೇಂದ್ರಂ ॥ 76

ವ॥ ಎಂದುಬಿಂನವಿಸಿ ॥

ಕಂ॥ ಸೀತೆಯನೊಪ್ಪಿಸುವೃದುರಘು ।
ಜಾತನೊಳೊಡರಿಪುದುಸಂಧಿಯಂಸಂಗ್ರಾಮಂ ॥
ಪೋತಕ್ಕದಲ್ಲನವಗವ ।
ರೇತಜದೊಳಮಧಿಕರವರನಾರ್ಗ್ಗೆಲ್ದಪರೋ ॥ 77

ಎತ್ತಾನುಂಗೆಲ್ದೊಡಮಾ ।
ಪತ್ತಂಪಿಡಿಪೆತ್ತಕುಂಭಕರ್ಣ್ನಾದಿಗಳೊ ॥
ಳ್ಮತ್ತೆನ್ನದೊಡರಿಪರ್ದ್ದನು ।
ಜೋತ್ತಂಸಬಳಿಕ್ಕೆಗೆಲ್ದೊಡಂಫಲಮುಂಟೇ ॥ 78

ವ॥ ಎನೆಘನಾಘನನಿನದಮನಾಲಿಸಿದ ಪಂಚಾನನದಂತೆ ದಶಾನನಂಕನಲ್ದು

ಕಂ॥ ಇಂದ್ರನುಮಂಗೆಲ್ದೆಂನನು ।
ಪೇಂದ್ರಂಗೆಲ್ವಪನೆಗೆಲ್ದೊಡಂಜೀವನಮಾ ॥
ಚಂದ್ರಾರ್ಕ್ಕಮೆವಿಶದಯಶ ।
ಶ್ಚಂದ್ರಿಕೆಗೆಕಳಂಕಮಾಗದಂತಿರೆನೆಗಳ್ವೆಂ ॥ 79

ವ ॥ ಅದಱಿಂನಿಂಮಮಂತಣಕ್ಕವಸರಮಲ್ತುಸಿರದಿರಿಮೆಂದುಮಂತ್ರಿಗಳಂಜಡಿಯೆರಾವ
ಣನಕಟ್ಟಾಯಕ್ಕೆಮಯಂವಿಸ್ಮಯಂಬಟ್ಟುದೇವಸಂಮಸೆಱೆಗಪಾಯಮಾಗದಂ
ತುಕಾದಿಗೆಲ್ವುದೆನೆ ॥

ಕಂ ॥ ಮಯನೆಂದುದನೇಕೆಕೊಂಡಂ ।
ನಯನಿಪುಣಪ್ಪೇೞ್ದಂದುರಾಗ್ರಹದಿಂಸಂ ॥
ಧಿಯಮಾತಂಕೈಕೊಳ್ಳನೆ ।
ಭಯಮಱಿಯಂಕರದನಮದವಶಂದಶವದನಂ ॥ 80

ವ ॥ ಅಂತಾನುಡಿಗೊಡಂಬಟ್ಟನಂತರಂರಾಮಲಕ್ಷ್ಮಣರಪುಣ್ಯಪ್ರಭಾವಕ್ಕೆವಿಸ್ಮಯಂಬ
ಟ್ಟುಸಿಂಹಗರುಡವಾಹನಂಗಳಂಪಡೆದುಸುಗ್ರೀವಪ್ರಭಾಮಂಡಲಮರುನ್ನಂದನಾದಿ
ಗಳ್ಗೆಪಂನಗಶರಪ್ರಹಾರದಿಂಸಮನಿಸಿದಾಸನ್ನಮೃತ್ಯುವನಪಹರಿಸಿ ॥

ಚ ॥ ಅವಯವದಿಂದಮೆಂನತನುಜಾನುಜರಂಪಿಡಿದೊಯ್ದರೆಂನಕೈ ।
ದುವನುರಗೇಂದ್ರನೊಳ್ಪಡೆದಶಕ್ತಿಯನಶ್ರಮದಿಂದೆಗೆಲ್ದರಾ ॥
ನವರನಶಲ್ಯರೆಂದುಱಿದೆಕಾದಿದೆನಪ್ಪೊಡೆಕಾರ್ಯ್ಯಹಾನಿಸಂ ।
ಭವಿಸುಗುಮೆಂದುತನ್ನಮನದೊಳ್ಪರಿಭಾವಿಸಿದಂದಶಾನನಂ ॥ 81

ವ ॥ ಅಂತುಮನದೊಳ್ಮಂತಣಮಿರ್ದ್ದುಕಾರ್ಯ್ಯನಿಶ್ಚಯಂಗೆಯ್ದು ॥

ಕಂ ॥ ಸಾಧಾರಣರಿವರೆನಿಪವಿ ।
ರೋಧಿಗಳುಮನುಱಿದೆನೆಗಳ್ವದನುಚಿತಮದಱಿಂ ॥
ಸಾಧಿಸಿಬಹುರೂಪಿಣಿಯಂ ।
ಸಾಧಿಸುವೆಂಪಗೆಯನೆಂಬಬಗೆಯಂಬಗೆದಂ ॥ 82

ವ ॥ ಅಂತುಬಗೆದುಲಂಕಾನಗರದೊಳಂನಾಡೊಳಂ ಹಿಂಸೆಪೇಡೆಂದುಘೋಷಣೆಗಳೆದುಜಿನ
ಪೂಜೆಯಂಪ್ರತಿದಿನಂಮಾಳ್ಪಂತುನಿಯಮಿಸಿಮಂಡೋದರಿಗಂಪೊಳಲ್ಗಮೆನಗಮೆನಿ
ತುಪಸರ್ಗ್ಗಮನಾರ್ಮಾಳ್ಪೊಡಂನಂಮಪಡೆಯೊಳ್ಮಾರ್ಕ್ಕೊಳ್ಳದಂತುಮಾಳ್ಪುದೆಂ
ದುಪೇೞ್ದು ॥

ಕಂ ॥ ಅರಮನೆಯೊಳಗಣಜಿನಮಂ ।
ದಿರಕ್ಕೆನಡೆತಂದುಮಂಗಳದ್ರವ್ಯಪುರ ॥
ಸ್ಸರಮೊಳಗೆಪೊಕ್ಕುಶಾಂತೀ ।
ಶ್ವರಂಗೆಪದಪೊದವೆಮಾಡಿಸವನೋತ್ಸವಮಂ ॥ 83

ವ ॥ ತದನಂತರಂದಿವ್ಯಾರ್ಚ್ಚನೆಗಳಿಂದರ್ಚ್ಚಿಸಿಪದ್ಮಾಸನಸ್ಥಿತಂಸ್ಫಟಿಕಾಕ್ಷಮಾಲೆಯಂಪಿಡಿ
ದುದಿವ್ಯಮಂತ್ರಂಗಳಂಜಪಿಸುತ್ತುಮಿರಲಂತೆಫಾಲ್ಗುಣನಂದೀಶ್ವರಮುಮಾದು
ದಾಗಳುಭಯಬಲಮುಮಭಯಘೋಷಣೆಯಂಪೊಯ್ಯಿಸಿಕಾಳಗಮನುೞಿದಿರ್ಪ್ಪುದುಂ ॥

ಕಂ ॥ ಅಱಿದುವಿಭೀಷಣನಸುರನ ।
ತೆಱನಂಚರವಚನದಿಂದದಂರಘುವೀರಂ ॥
ಗಱಿಪುವಬಗೆಯಿಂಬಂದಂ ।
ವೆಱಸೀತೆಱದಿಂದೆಕೂಡೆತಿೞಿವವನಾವಂ ॥ 84

ವ ॥ ಅಂತುಬಂದುವಿಭೀಷಣನಿಂತೆಂದಂ ॥

ಚ ॥ ಭುಜಬಲಮಂಪವರ್ಣ್ಬಡಿಸೊಡಪ್ರತಿಮಂತವಿಲ್ಲದಾನವ ।
ಧ್ವಜಿನಿಗೆಚಂದ್ರಹಾಸದೊಳಿದಿರ್ಚ್ಚುವಚಕ್ರಮನಾಂಕೆಗೊಳ್ವಭೂ ॥
ಭುಜಸುರಖೇಚರಪ್ರಮುಖರಿಲ್ಲೆನೆರಾಘವದೇವದುರ್ಜ್ಜಯಂ ।
ನಿಜದೊಳೆಮತ್ತೆಸಾಧಿಸಿದಪಂಬಹುರೂಪಿಣಿಯಂದಶಾನನಂ ॥ 85

ಕಂ ॥ ರಾವಣನೋರ್ವ್ವನುಮಂಧರ ।
ಣೀವಲ್ಲಭಗೆಲ್ವುದರಿದುಸಾಧಿಸಿವಿದ್ಯಾ ॥
ದೇವತೆಯನವಂಪಡೆವಂ ।
ರಾವಣಕೋಟಿಯನಿದಿರ್ಚ್ಚುವವರಾರ್ಬ್ಬೞಿಯಂ ॥ 86

ವ ॥ ಅದಱಿಂವಿದ್ಯಾಸಾಧನೆಪೊಗದಮುನ್ನಂರಾವಣಂಗುಪಸರ್ಗ್ಗಮನೊಡರ್ಚ್ಚಿಲಂಕಾ
ನಗರಮಂಕೈಕೊಳ್ಳಲಿದವಸರಮೆನೆರಘುವೀರನಿಂತೆಂದಂ ॥

ಚ ॥ ವನಿತೆಗೆಕೈದುಮಂಬಿಸುಟವಂಗಿದಿರಾಗದವಂಗೆಭೂಭುಜಂ ।
ಮುನಿವುದುಪಾೞಿಯಲ್ತುನಿಯಮಸ್ಥಿತನಾಗಿದಶಾನನಂಜಿನೇಂ ॥
ದ್ರನಮಱೆವೊಕ್ಕುಸಾಧಿಸಿದಪಂಗಡವಿದ್ಯೆಯನೆಂತೊಬಾಧೆಯಂ ।
ಜನಿಯಿಪುದಾತನೊರ್ಬ್ಬನುಡತಕ್ಕುದನಿಂತುಸಿರಲ್ಕೆತಕ್ಕುದೇ ॥ 87

ವ ॥ ಎನೆವಿಭೀಷಣಾಂಗದಾದಿಗಳ್ಮಹಾಸತ್ವನಪ್ಪರಘುವೀರನನಾಚಾರಮನೆಂತುಮೊಲ್ವ
ನಲ್ಲನದುಕಾರಣದಿನಧಿರಾಜನಱಿಯದಂತುವಿದ್ಯಾಸಾಧನೆಗೆವಿಘ್ನಮಂಮಾಳ್ಪಮೆಂ
ದುನಂದೀಶ್ವರಮಂಕಳಿಪಿವಿಭೀಷಣಂಬೆರಸು ॥

ಕಂ ॥ ಮಕರಧ್ವಜಮುಖ್ಯಕ್ಕರ್ಚ ।
ರಕುಮಾರರ್ಗ್ಗಗನಮಾರ್ಗ್ಗದಿಂಬಂದುಬಲಾ ॥
ಧಿಕರಸಮಸ್ತೈನಿಕವರ್ಗ್ಗಸ ।
ಗಿಕಪಿಧ್ವಜರುಱಿದೆಲಂಕೆಯಂಪುಗುತಂದರ್ ॥ 88

ಒಡೆಯುತ್ತುಂ ಮಾಡಂಗಳ ।
ನುಡಿಯುತ್ತುಂ ನಂದನಂಗಳಂ ನೀರ್ನೆಲನಂ ॥
ಕಿಡಿಸುತ್ತುಂ ಲಂಕೆಗವ ।
ರ್ಪ್ಪಡೆದನ್ನಿಶ್ಶಂಕರಳವಿಗಳಿದದವಳಲಂ ॥ 89

ವ ॥ ಅಂತುವಾನರಸೇನೆಲಂಕೆಯಂಕದಡಿಕಲಂಕೆಮುಱಂ ಮುಳಿದುಕಾಳಗಕ್ಕೊಡರಿಸೆ ಮಂಡೋದರಿತಂದೆಯಂಬೀರಿಸುವುದುಮಾತಂ ಶುಭಪರಿಣಾಮದಿಂನಿಜಭವನಮಂ ಪೊಕ್ಕಿರೆವಾನರಸೇನೆಯರಮನೆಯಂಪೊಕ್ಕು ॥

ಕಂ ॥ ಮುನಿದೆಳೆದುತಂದುನಿಜಕುಲ ।
ವನಿತೆಯರಂಬಿಡದೆಮೋದಿಯುಂಹಾಹಾಕ್ರಂ ॥
ದನಮಂಪುಟ್ಟಿಸೆಕೇಳ್ದಂ ।
ದನುಜಂಜಪಿಸುತ್ತುಮಿರ್ದ್ದನವ್ಯಗ್ರಮನಂ ॥ 90

ವ ॥ ಅಂತಿರ್ಪ್ಪುದುಮಾಜಿನಭವನದೊಳ್ವಸಿಯಿಸುವದೇವತೆಗಳೆಲ್ಲಮಿವರೆಲ್ಲದುದಂನೆಗಳ್ದಪರೆಂದಗುರ್ವ್ವಾಗೆಭೇತಾಳರೂಪುಗಳಂಮಿಗುವಿರ್ಸಿಪರಿತಂದುಮೂಕ್ಕೊಂಡು ಮರ್ಕ್ಕಟಧ್ವಜಬಲಕ್ಕೆಭಂಗಮಂಪಡೆಯೆ ಪೆಱವುಂಜಿನಾವಾಸನಿವಾಸಿಗಳಪ್ಪದೇವತೆಗಳುಬಲಮಂಪೆಜಗಿಕ್ಕಾದಿಮುಂನಿನದೇವತೆಗಳನೋಡಿಸುವುದುಮವ್ವಪರಿತಂದುನಿಜಸ್ವಾಮಿಯಪ್ಪಪೂರ್ಣ್ನಭದ್ರನೆಂಬಯಕ್ಷಾಧಿಪಂಗೆಪೇಳ್ವುದುಂ ॥

ಕಂ ॥ ಮುನಿಪತಿಗಳತೆಜದಿಂದನ ।
ಶನಮಂಕಯ್ಕೊಂಡುಕೈದುವಂಬಿಸುಟುದಶಾ ॥
ನನನಿರೆಯುಂಕಾದುವುದ ।
ಕ್ಕೊನಲ್ದವಂಮಾಣಿಭದ್ರನಲ್ಲಿಗೆಪೋದಂ ॥ 91

ವ ॥ ಅಂತುಪೋಗಿತತ್ಸ್ವರೂಪಮಂಪೇಳ್ದುತಾನುಮಾತನುಮತಿಕುಪಿತರಾಗಿಬಂದುದೇವತೆಗಳಂತೂಳ್ದಿ ॥

ಕಂ ॥ ಅಭಿಭವಿಸಿಕಪಿಧ್ವಜನಿಯ ।
ನಭಯರ್ಪ್ಪರಿತಂದುರಾಮಲಕ್ಷ್ಮಣರಂಕಂ ॥
ಡುಭಯಾಕುಲಚಿತ್ತರ್ಪ್ಪೂ ।
ರ್ಣ್ನಭದ್ರನುಂಮಾಣಿಭದ್ರನುಂಸ್ತುತಿಯಿಸಿದರ್ ॥ 92

ವ ॥ ಅಂತುಪೊಗಳ್ದುನಿಂಮಸಾಮಂತರುಪಶಾಂತನಾಗಿರ್ದ್ದರಾವಣನಪೊಳಲನಳಿಯೆನಿಂಮಪುರುಷಾಕಾರಮಳಿಗುಮೆನೆಲಕ್ಷ್ಮಣನಿಂತೆಂದಂ ॥

ಕಂ ॥ ಸೀತಾದೇವಿಯನೀರಘು ।
ಜಾತನಕಾಲವಧುವನಱಿಪಿಕೈತವದಿಂತಂ ॥
ದಾತಂಗೆಹಿಂತಂಗೆಯ್ವುದು ।
ಪೋತಕ್ಕುದೊತಗದೊಬಗೆದುನೋಡೀನಿಂಮೊಳ್ ॥ 93

ನಿಮಗೆಂಮುಮಾಡಿದಪಕಾ ।
ರಮಱಪುದಕ್ರಮಬಿನಿಂತುಮೇಲೆವರಲ್ತು ॥
ಕ್ಕುಮೆಪೇೞೆಮೆಂದಲಕ್ಷ್ಮಣ ।
ನಮಾತುಕಿವಿಗೆಯ್ದುಚಿತ್ತವಿತ್ತಿಂತೆಂದರ್ ॥ 94

ವ ॥ ಲಂಕಾಪುರಪ್ರಾಸಾದಂಗಳ್ಗಂಚೈತ್ಯಾಲಯಂಗಳ್ಗಂನಿಯಾಮಸ್ಥನಾಗಿರ್ದ್ದರಶಾಸನಂ ಗಮಿಾಗಳೞಿವಂಮಾಡದೆವಿದ್ಯಾಸಾಧನೆಗೆವಿಘ್ನಮಂಮಾಡಿಮೆಂದುರಾಮಲಕ್ಷ್ಮಣರಂ ಪರಸಿ ॥

ಕಂ ॥ ಜಕ್ಕರ್ಪ್ಪೂಜೆಸಿಪೋದಬ ।
ೞಿಕ್ಕಂಗದನೇಱಿಬೀಱಿಸುತ್ತಂಕಾಶಮಂ ॥
ದಿಕ್ಕರಿಯುನಧಃಕರಿಸುವ ।
ತಕ್ಕಿನಕಿಷ್ಕಿಂಧಮೆಂಬ ನಿಜವಾರಣಮಂ ॥ 95

ವ ॥ ಅಂತುವಾರಣಾರೂಢಂಪುರಗೋಪುರಮಂಪೊಕ್ಕು ॥

ಕಂ ॥ ಲಂಕೆಯಂಬೆಲ್ವಂನೋಡು ।
ತ್ತುಕಿಷ್ಕಿಂಧಾಧಿರಾಜನರಮನೆಯಂಪೊ ॥
ಕ್ಕಂಕಣ್ಗೆತೊಡವೆನಿಪ್ಪುದ ।
ನಂಕುಶದಾಭರಣದಂಕುಕೀಲಿಸೆನಭಮಂ ॥ 96

ವ ॥ ಅಂತರಮನೆಯಂಪೊಕ್ಕುಸುಂದರನುಮಿಂದ್ರನುಂಮೊದಲಾಗೆಪಲಂಬರಂಬರಚರ ಕುಮಾರರ್ಕಳಂಬಲಸಹಿತರಾಗಿ ಶೈಲಗಿರಿಸಿತಾಂಶಾಂತಿಜಿನಭವನಮಂಬಲಗೊಂ ಡೊಳಗಂಪೊಕ್ಕುದರುಶನಸ್ತುತಿಗೆಯ್ದುನೀಳನಗದಂತೆ ನಿಶ್ಚಲನಾಗಿರ್ದ್ದರಾವಣನಂ ನೋಡಿ ॥

ಕಂ ॥ ಅಂಗದನೆಂದಂರಾವಣ ।
ರಂಗಳಕೊೞ್ಗಿದುಸುಗಿದುದಶವದನಮನೋ ॥
ಭಂಗಮನೊಳಕೊಂಡೇಕೆಜ ।
ಪಂಗೆಯ್ದಪೆನೆನೆಯನಿಂನದುರ್ವಿಳಸಿತಮಂ ॥ 97

ಮ ॥ ದುರಭಿಪ್ರಾಯನೆನೀಚರಾನ್ವಯದಶುದ್ಧಾಚಾರಮಂಬಿಟ್ಟುಕಾ ।
ಪುರುಷಂಕಾತರನೆಂದುಸತ್ಪುರುಷರೆಲ್ಲಂದೂಷಿಸುತ್ತಿರ್ಪಿನಂ ॥
ಪರದಾರಪ್ರಿಯನಾದಪಾತಕನೆಯುದ್ಧಕ್ಕಳ್ಕಿಶುದ್ಧಾತ್ಮನಂ ।
ತಿರೆಶಾಂತೀಶನಮುಂದೆಮೆಯ್ಗರೆದಿದೇನಂಜಾನಿಸುತ್ತಿರ್ದಪೈ ॥ 98

ಕಂ ॥ ಬಲವೆಳೆಯೆನಿಂನಬಾಹಾ ।
ಬಲಮಂಪೆಜಿಗಿಕ್ಕಿವಿದ್ಯೆಯಂಸಾಧಿಸಿನೀಂ ॥
ಗೆಲಲೇನಾರ್ತ್ತಪೆನಿಂನಂ ।
ಕೊಲಲ್ಕೆಜನಿಯಿಸಿದರಾಮಲಕ್ಷ್ಮೀಧರರಂ ॥ 99

ಕಿಚ್ಚೆದ್ದಬಳಿಕೆನಂದಿಸ ।
ಲಚ್ಚಿಗದಿಂಬಾವಿದೋಡುವಂತಿರೆಕಣ್ಣಾಂ ॥
ಮುಚ್ಚಿಜಪಿಯಿಸುವೆರಾಘವ ।
ನೆಚ್ಚಂಬಿಂಕಾಯಲಾಪ್ಪುವೇದೇವತೆಗಳ್ ॥ 100

ವ ॥ ಎಂದುಪಲತೆಱದಿಂನೆಱನೆತ್ತಿನುಡಿಯುತ್ತುಮುತ್ತರೀಯವಸನಾಂಚಲದಿಂಮೋದುತ್ತುಮಾತನಕಯ್ಯಪಳುಕಿನಕ್ಷಮಾಲೆಯುಂಪಱಿದೀಡಾಡುತ್ತುಮಿಂತುಬಹುಪ್ರಕಾರದಿಂಪರಿಭವಿಸಿಮತ್ತಮಾತನಪೆಂಡಿರಭೂಷಣಂಗಳಂಕಳೆದುಬಿಸುಟುತ್ತುಮಲ್ಲದುದಂನುಡಿಯುತ್ತುಂ ॥

ಕಂ ॥ ಯುವತಿಯುರೋರೋರ್ವ್ವರತಲೆ ।
ನವಿರಂತಲೆನವಿರೊಳಪಸಿಕಟ್ಟುತ್ತುಂಮೋ ॥
ದುವುದುಂದ್ವಿಗುಣಿಸಿದುದುದುಹಾ ।
ರವಂಪ್ರತಿದ್ವಾರದಿಂಜಿನೇಂದ್ರಾಲಯದೊಳ್ ॥ 101

ಅಳಿಯೊಳಿಜಾನಕಿಯಂತಂ ।
ದಳಿಗಂಡನೆನಿಂನಪೆಂಡಿರಂನೀಂನೋಳ್ಪಂ ॥
ತೆಳದೊಯ್ಪೆನೆಣ್ಣುಪೊಡುಳಿ ।
ದಳಿಜಪಮೆಂದನುಜತೋರ್ಪ್ಪುದೆಂನೊಳ್ಕೃಪ್ಪಂ ॥ 102

ವ ॥ ಎಂದುಮಾಣದೆ ॥

ಉ ॥ ರೋದನಮುಣ್ಮೆಪೊಣ್ಮೆಕುಟಿಲಾಲಕಮಂಪಿಡಿದೆಳ್ದತಂದುಮಂ ।
ಡೋದರಿಯಂಮದೀಯಪಿತೃಗಿಕ್ಕುವಚಾಮರಮಿಕ್ಕಲುಯ್ದಪೆಂ ॥
ಕಾದುಕೊಳಲ್ಕೊಡರ್ಪ್ಪನಿನಗುಳ್ಳೊಡೆಚೇತರಿಸೆಂದುದುಃಖಸಂ ।
ಪಾದನಮಂತದಂಗನೆಯುರೊಳ್ಪಡೆದಂರಣತುಂಗನಂಗದಂ ॥ 103

ವ ॥ ಅಂತಾತಂಪರಿಭವಿಸುವುದುಂಮಂಡೋದರಿಮೊದಲಾಗೆಪಲವರಂತಃಪುರಕಾಂತೆಯರಿಂ
ತೆಂದರ್ ॥

ಉ ॥ ಸಾಧಿಸಿವಿದ್ಯೆಯಂಪಡೆವುದೇಂನಿಜಪಾರ್ಶ್ವದೊಳೆಂಮನಿಂತಿವ ।
ರ್ಬ್ಬಾಧಿಸಲೆಂತುನೀಂಮಿಡುಕದಿರ್ದ್ದಪೆಮೊರ್ಕ್ಕೆಗೆಸೆಂದರಂತೆವಿ ॥
ದ್ಯಾಧರಚಕ್ರವರ್ತ್ತಿಶರಣಾರೆಮಗೆಂದುಶರೀರತಾಪತ ।
ಪ್ತಾಧರಮಳ್ತ್ತುದುಚ್ಚರವದಿಂದವರೋಧವಧೂಕದಂಬಕಂ ॥ 104

ವ ॥ ಅಂತತಿಪ್ರಳಾಪಮಪ್ಪಂತವರ್ಗ್ಗದವಳಲನಂಗದಂಪಡೆವುದುಂರಾವಣಂಧೈರ್ಯಮಂಸಡ
ಲದಂತೆಚಲಿಯಿಸದೆಚಿತ್ತನಿರೋಧಂಗೆಯ್ದುದಿವ್ಯಮಂತ್ರದಿಂವಿದ್ಯೆಯಂಸಾಧಿಸುವು
ದುಂ ॥

ಕಂ ॥ ಪೊಸಗಾರಸಿಡಿಲಮಸಕಮ ।
ನಸಕಳ್ದುಕೃತಾಂತಜಿಹ್ವೆಪೊಡಕರಿಸುವವೋ ॥
ಲ್ಬೆಸಸುಬೆಸನೆಂದುಕರಮು ।
ರ್ವ್ವಿಸಿಸಂನಿದವಾಯ್ತುವಿದ್ಯೆರಾವಣನಿದಿರೊಳ್ ॥ 105

ವ ॥ ಅಂತುಸಂನಿಹಿತೆಯಾಗಿಚಕ್ರಧರನಪ್ಪಲಕ್ಷ್ಮೀಧರನುಂಚರಮದೇಹಧಾರಿಯಪ್ಪರಾ
ಮಸ್ವಾಮಿಯುಮುೞಿಯಲುೞಿದವರನುೞಿಯಲೀಯೆನೆನೆರಾವಣನುೞಿದರೞ್ವೆನಗೇ
ವುದೆಂದುವಿದ್ಯಾದೇವತೆಗೆಪೊಡವಟ್ಟುಶಾಂತಿಜಿನಭವನಮಂಮೂಱುಸೂಳ್ಬಲಗೊಂ
ಡುಬರ್ಪ್ಪಂನೆಗಮಂಗದಾದಿಗಳ್ಪೊಱಮಟ್ಟುಪೋಗಿತಂಮಬೀಡಂಪುಗುವುದುಂ ॥

ಉ ॥ ಇತ್ತದಶಾನನಂನಿಜವಧೂಜನಮಂಕೊಱಬಾಡಿಕಾದಿದು ।
ದ್ವೃತ್ತರನಿಕ್ಕಲುಮ್ಮೞಿಸಿಬಲ್ಮೞಿಸಿಂಜಮರುಣ್ಮಿಪೊಣ್ಮಿಪೊ ॥
ಯ್ಗುತ್ತಿಭವೈರಿಯಂತೊದಱಿಕೆಂಗೞಿಮೂಡಿದಭೃಂಗಮಾಳನೀ ।
ಳ್ದತ್ತೆನೆನೋಡಿದಂಮಯತನೂಜೆಯಬಾಡಿದವಕ್ತ್ರಪದ್ಮಮಂ ॥ 106

ವ ॥ ಅಂತಾಕೆವೆರಸುಸಮಸ್ತಾಂತಃಪುರಮುಮಂ ನೋಡಿನಿಮಗಿನಿತುಭಂಗಮಂಮಾಡಿ
ದಂಗದಾದಿಗಳಂಭ್ರೂಭಂಗಮಾತ್ರದೊಳೆಸೆಱೆಗೆಯ್ದುತಂದುನಿಂಮಮುಂದೆಬಹು
ಪ್ರಕಾರದಿಂ ಪರಿಭವಿಸುವೆನೆಂದುಸಂತೈಸಿಶಾಂತಿಜಿನಭವನದೊಳ್ಮಹಾಪೂಜೆಯುಂ
ಮಾಡಿಸಿನಿರ್ವ್ವರ್ತ್ತಿತನಿತ್ಯನಿಯಮನಮೃತಾಹಾರಮನಾರೋಗಿಸಿತದನಂತರಂಬ
ಹುರೂಪಿಣೀವಿದ್ಯಾಪ್ರಭಾವಮಂಪರೀಕ್ಷಿಸಿಪ್ರಮೋದಮುದಿತಹೃದಯನಾಗಿ ॥

ಚ ॥ ಸಮಧಿಕರಾಜ್ಯಜಗತ್ರಯದೊಳಿಂನೆನಗಿಂನೊಳದಿರ್ಪ್ಪವಂನರಾ ।
ಸ್ವರಮರದೊಳೆಂದುತಂನಭುಜದಂಡಮನೀಕ್ಷಿಸಿಜಾನಕೀಮುಖಾ ॥
ಬ್ಜಮನವಳೋಕಿಸಲ್ಕರಮೆಕಾತರನಾಗಿವಿಯಚ್ಚರಾಧಿಪಂ ।
ಪ್ರಮದವನಕ್ಕೆಬಂದನರಲಂಬುಗಳೆಲ್ಲದಕಾಮನೆಂಬಿನಂ ॥ 107

ವ ॥ ಅಂತುಭೋಂಕನೆಬರ್ಪ್ಪರಾವಣನಗಂಡಗಾಡಿಯಂಕೆಲದಲಿರ್ದ್ದಖೇಚರಕಾಂತೆಸೀತಾ
ದೇವಿಗೆತೋರ್ಪ್ಪುದುಂ ॥

ಕಂ ॥ ರಾವಣನರೂಪುಸೀತಾ ।
ದೇವಿಗೆತೃಣಕಲ್ಪಮಾಯ್ತುಪತಿಭಕ್ತಿಯೊಳಾ ॥
ರೀವನಿತೆಯತೆಱದಿಂಸ ।
ದ್ಭಾವಮನೊಳಕೊಂಡಪುಣ್ಯವತಿಯರ್ಸ್ವತಿಯರ್ ॥ 108
ಏನಂಕೇಳ್ದಪೆನೋರಘು ।
ಸೂನುವಲಕ್ಷ್ಮಣನಪೊಲ್ಲವಾರ್ತೆಯನಿಂನೆಂ ॥
ದಾನಳಿನಾನನೆಬರ್ಪ್ಪದೆ ।
ಶಾನನನಂಕಂಡುತಾಳ್ದಿದಳ್ತಲ್ಲಣಮಂ ॥ 109

ವ ॥ ಅಂತಾತಲ್ಲಣಿಸುತ್ತಿರ್ದ್ದಮಾನಿನಿಯನೆಯ್ದೆವಂದುದಶಾನನನಿಂತೆಂದನೆನಗೆಬಹುರೂ
ಪಿಣೀವಿದ್ಯೆಸಾಧ್ಯಮಾದುದಿಂನೆನಗಸಾಧ್ಯಮಪ್ಪಮಾಱುವಕ್ಕಮಿಲ್ಲನಿಂನನನಟ್ಟಿರಾಮ
ನಾಸೆಯಂಬಿಟ್ಟೆನಗೊಡಂಬಟ್ಟುಸಾಮ್ರಾಜ್ಯಸುಖಮನನುಭವಿಸೆನೆಸೀತೆವಿಹ್ವಳೀ
ಭೂತಚಿತ್ತೆಯಾಗಿ ॥

ಕಂ ॥ ಕರುಣಿಸುವೊಡೆನಗೆದಶಕಂ ।
ಧರಧುರದೊಳ್ರಘುತನೂಜನಾಯುಃಪ್ರಾಣಂ ॥
ಬರೆಗಂಬಾರದಿರೆನುತಂ ।
ಧರಿತ್ರಿಯೊಳ್ಮೆಯ್ಯನೊಕ್ಕುಮೂರ್ಛೆಗೆಸಂದಳ್ ॥ 110
ಜಾನಕಿಮೂರ್ಛಿತೆಯಾಗೆದ ।
ಶಾನನನನುಕಂಪೆವುಟ್ಟೆಕರುಣಿಸಿತಂನಂ ॥
ತಾನೆಪಳಿದುಳಿದುಕರ್ಮ್ಮಾ ।
ಧೀನಸಮುತ್ಪಂನದುರಘದುಷ್ಪರಿಣತಿಯಂ ॥ 111
ಕದಡಿದಸಲಿಲಂತಿಳಿವಂ ।
ದದೆತಂನಿಂತಾನೆತಿಳಿದುದಶವದನಂಗಾ ॥
ದುದುವೈರಾಗ್ಯಂಸೀತೆಯೊ ।
ಳುದಾತ್ತನೊಳ್ಪುಟ್ಟದಲ್ತೆನೀಲೀರಾಗಂ ॥ 112

ಕಂ॥ ಪತ್ತುವಿಡದಿರ್ದ್ದನೇರವಿ ।
ಪತ್ತಿದಸಂಧ್ಯಾನುರಾಗಮಂಮನದೞಿಪಿಂ ॥
ದೆತ್ತಾನುಂಪೊಲ್ಲೆನಿಪುದ ।
ನುತ್ತಮನಾಚರಿಸಿಪತ್ತುವಿಡದಿರ್ದ್ದಪನೇ ॥ 113

ವ॥ ಅಂತುಮನದೊಳೊಗೆದಕಾರುಣ್ಯರಸಮೆಸೀತೆಯೊಳಾದನುರಕ್ತತೆಯುಮಂಕರ್ಚ್ಚಿಕಳೆ
ವುದುಂಸ್ವಭಾವಪರಿಣತಿಯೊಳ್ನಿಂದುಸ್ವಕೀಯಾಪ್ತಪುರುಷಪರಿಷಜ್ಜನಕ್ಕಿಂತೆಂದಂ ॥

ಚ॥ ಗುಣಪರಿಪಾಲನಾರ್ತ್ಥಮೆನಗಂಬಗೆದೋಱಿದುದಿಲ್ಲದಿವ್ಯಭೂ ।
ಷಣವಸನಾಂಗರಾಗಮುಮನೊಲ್ಲದೆಖೇಚರರಾಜ್ಯಲಕ್ಷ್ಮಿಯುಂ ॥
ತೃಣಸಮನಾಗಿಭಾವಿಸಿದೞೀಸತಿಯುಂಮೊದಲಾಗೆಪೌರುಷ ।
ಪ್ರಣಯಿಯುಮಿಂತಪೇಕ್ಷಿಸುವೆನೇಗುಣಹಾನಿಯನೆಂನಪಾಪದಿಂ ॥ 114

ಕಂ॥ ಇವರಂಪ್ರಾಣಪ್ರಿಯರಂ ।
ನೆವಮಿಲ್ಲದೆಕರ್ಮ್ಮವಶಮೆನೆವಮೆನೆಕಂದ ॥
ರ್ಪ್ಪವಿಮೋಹದಿಂದಗಲ್ಚಿದೆ ।
ನವಿವೇಕಿಯೆನೆಂನಕಾಲದಪೆಂಪೞಿವಿನೆಗಂ ॥ 115

ರಾಮನನಗಲ್ಚಿಸೀತಂ ।
ದೀವಾನಿನಿಗಿನಿತುದುಃಖಮಂಪುಟ್ಟಿಸಿದೆಂ ॥
ಕಾಮವ್ಯಾಮೋಹದಿನಾ ।
ತಾಮುಖಮಂಪುದಿಯೆದುರ್ಯ್ಯಶಃಪಟಹರವಂ ॥ 116

ಚ॥ ಎನಗೆವಿಭೀಷಣಂಹಿತಮನಾದರದಿಂದಮೆಪೇೞೆಕೇಳದಾ ।
ತನನವಿನೀತನೆಂಗಜಱಿಗರ್ಜ್ಜಿಸಿಬಯ್ದನುಜಾತನಂವಿನೀ ॥
ತನನಱಿಯಟ್ಟಿದುರ್ವ್ಯಸನಿಯೆಂಕೞೆದೆಂವ್ಯಸನಾಭಿಭೂತನಾ ।
ವನುಮನುರಾಗವೇಗದೆಹಿತಾಹಿತಚಿಂತೆಯನೇಕೆಮಾಡುವಂ ॥ 117

ಜಸದೞಿವಂಪರಾಭವದಪತ್ತುಗೆಯುಂದೊರೆಕೆತ್ತತಂನವಾ ।
ನಸಿಕೆಯುಕೇಡನುಂನತಿಯಬುಂನೆಮನನ್ಯಭವಾನುಬದ್ಧಮು ॥
ಪ್ಪಸುಗತಿಯುಂಸುಹೃಜ್ಜನದಪೇವಸಮಂಜನತಾಪವಾದಮಂ ।
ವ್ಯಸನಿಗಳಾರುಮೆತ್ತಲಱಿವರ್ವಿಷಯಾತುರಮತ್ತಚೇತಸರ್ ॥ 118

ವ॥ ಎಂದುದ್ವೇಗಪರನಾಗಿನುಡಿದಾತ್ಮಗತದೊೞಿಂತೆಂದಂ ॥

ಮ ॥ ಇರದಾಯ್ದಾಗಳೆಕೊಟ್ಟೊಡೆಂನಕಡುಪುಂಕಟ್ಟಾಯುಮುಂಬೀರಮುಂ ।
ಪಿರಿದುಂಬೇಸಱಿಮುಕ್ಕಮೋಸರಿಸಿದಂತಾಗಿರ್ಕ್ಕಮುಂತಾಗದಂ ॥
ತಿರೆದೋರ್ಗ್ಗರ್ವಮನೀರ್ವ್ವಲಂಪೊಗಳ್ವೆನಂಸೌಮಿತ್ರಿಯುಂರಾಮನಂ ।
ವಿರಥಂಮಾಡಿರಣಾಗ್ರದೊಳ್ಪಿಡಿದುತಂದೀಂಸೀತೆಯಂಕೊಟ್ಟಪೆಂ ॥ 119

ವ ॥ ಎಂದುನಿಶ್ಚಯಿಸಿನಿಜನಿವಾಸಕ್ಕೆಪೋದಂಗದಪ್ರಭಾಮಂಡಲಸುಗ್ರೀವಹನುಮದಾದಿಗ
ಳದುರಾಚಾರಕ್ಕೆಮುಳಿದವಂದಿರಂರಾಮನುಳಿಯಿಕೊಳ್ವೆನೆಂದುಭರವಸಂಗೆಯೆ.ರ್ದ
ನಾಸಮಯದೊಳ್ ॥

ಕಂ ॥ ಪರಿವೇಷಂನಾಡೆಭಯಂ ।
ಕರಮಪ್ಪುದುನರ್ಕಬಿಂಬದೊಳ್ಕಟ್ಟಿರುಳೊ ॥
ಳ್ಸುರಚಾಪಂಮೂಡುವುದುಂ ।
ಗಿರಿಶಿಖರಂಬಿರಿವುದುಂನೆಲಂಮೊಳಗುವುದುಂ ॥ 120

ಪಿಡಿಗೆಮದಮಪ್ಪುದುಂಮದ ।
ಮುಡುಗುವುದುಂಮದಗಜಕ್ಕೆಗೃಹದೇವತೆಗ ॥
ಳ್ಗಡಣದಿನಳ್ವುದುನಾಗಸ ।
ವೆಡೆಗೆಟ್ಟಿರೆಧೂಮಕೇತುಗಳ್ಮೂಡುವುದುಂ ॥ 121

ಮ ॥ ಸ್ರಪಗಲುಳ್ಕಂಬೀಳ್ವುದುಂಧಾರಿಣಿನಡಗುವುದುಂಘೋಳೈನಲ್ದೀಪ್ತದೊಳ್ಪ ।
ಕ್ಷುಗಳೊಳಾತ್ತಿರ್ಪ್ಪುದುಂಕೈದುಗಳ್ಮಿಡಿವುದುಮಾದಿತ್ಯನುಂಚಂದ್ರನುಂಮೇ ॥
ಗೊಗೆದಂತಾಗಿರ್ಪ್ಪುದುಂಮಾಡದಮಣಿಕಳಶಂಬೀಳ್ವುದುಂಕಂಡುತಂಮೊ ।
ಳ್ಬಗೆದನ್ನೈರ್ಮಿತ್ತಿಕರ್ನಾಳಿನಸಮರದೊಳಕ್ಕುಂದಶಾಸ್ಯಂಗಪಾಯಂ ॥ 122

ವ ॥ ಎಂದುನಿಶ್ಚಯಿಸಿನುಡಿಯುತ್ತಿರ್ದ್ದರಾಗಳಸುರಪತಿನಿಜಾಸ್ಥಾನಮಂಡಪಮಧ್ಯಸ್ಥಿತ
ಸಿಂಹಾಸನದೊಳಿರ್ದ್ದುಸಜ್ಜೆಯೊಳಿರ್ದ್ದತನುಜಾನುಜರಂನೆನೆದುಮುಳಿದುಕಾಳಗ
ಕ್ಕೆನಡೆಯಲೊಡರಿಸಿಶಸ್ತ್ರಶಾಲೆಯಂಪುಗುವುದುಮದಂಮಂಡೋದರಿಕಂಡುಮಂ
ತ್ರಿಗಳಂಕರೆದೀರಣಮಂ ರಾವಣಂಮಾಣ್ಬಂತುಮಾಳ್ಪುದೆಂದುಪೇಳ್ವುದುಮವರಿಂ
ತೆಂದರಾವಿದಂಪಲವುಪರಿಯಾಯದಿಂಪೇಳ್ದೊಡಂಕೇಳ್ದನಿಲ್ಲಿಲ್ಲಿಗೆತಕ್ಕುದಂನುಡಿದುದೇ
ವಿಯರೆಂತಾನುಮೊಡಂಬಡಿಸುವುದೆನೆ ಮಂಡೋದರಿರಾವಣನಲ್ಲಿಗೆಬಂದೆಱಗಿಪೊಡ
ಮಟ್ಟು ॥

ಶಾ ॥ ಆನೀಜಾನಕಿಯಂರಘುಪ್ರಿಯತನೂಜಂಗಿತ್ತುತರ್ಪ್ಪೆಂಭವ ।
ತ್ಸೂನುಭ್ರಾತೃಗಳಂರಣವ್ಯಸನದಿಂಸಾವೆಯ್ದುಗುಂಬಂಧುಸಂ ॥
ತಾನಂಕಾಳಗಮಂಬಿಸುಳ್ವುದೆನೆರೋಷಾವೇಶದಿಂರಾವಣಂ ।
ನೀನಿಲ್ಲಿಂತೊಲಗೆಂದುಚಪ್ಪರಿಸಿದಂಮಂಡೋದರೀದೇವಿಯಂ ॥ 123

ವ ॥ ಅಂತುಚಪ್ಪರಿಸೆಯುಂಮಾಣದೆಮತ್ತಮಿಂತೆಂದಳ್ ॥

ಕಂ ॥ ಪರವನಿತೆಗೞಿಪಿರ್ದು ।
ರ್ಧರನೆನಿಸಿರ್ದಱಿನಿವೇಗನೞಿದುದನಸುರೇ ॥
ಶ್ವರನೀನೇನಱಿಯದನ್ನೈ ।
ಪರಿಹರಿಸಲ್ವೇಳ್ಕುದದಱಿನಸದಾಗ್ರಹಮಂ ॥ 124

ವ ॥ ಎಂತುಮೀತಂಗಳೞ್ಟನೆಯರ್ಧಚಕ್ರವರ್ತಿಗಳ್ಗಂ ನಶತ್ರುಗಳದಱಿನೀನವರಬ
ವರಮನುೞಿದುಸಂಧಿಗೊಡಂಬಟ್ಟುವಿದ್ಯಾಧರರಾಜ್ಯಸುಖಮನನುಭವಿಸುವುದೆನೆ
ರಾವಣನೆಂದನಿವಂದಿರೆನಗೆಕಾಳಗದೊಳ್ಗೆಲ್ವಗಂಡರಲ್ಲರದಕ್ಕೆನೀನಂಜುವಿರೆಂದುನುಡಿ
ದುಸನ್ನಾಹಭೇರಿಯುಂಪೊಯಿಸುವುದುಂ ॥

ಕಂ ॥ ಹಿತಮಂಹಿತರೞಿಪಿದೊಡಂ ।
ಮತಿಗೆಟ್ಟೞಿಕೆಯ್ದನೆಂದುದಶಮುಖಕುಲದೇ ॥
ವತೆಪುಯ್ಯಲಿಡುವವೋಲ್ದಿ ।
ಗ್ವಿತತಿಯುಮಾವರಿಸಿದತ್ತುಭೇರೀನಾದಂ ॥ 125

ವ ॥ ಆಸಮಯದೊಳ್ಸಿಂಹಾಸನಾರೋಹಣಕ್ಕಿದುವೆಚರಮಸಮಯಮೆಂದಱಿವವಂತೆ॥

ಉ ॥ ತಾರಗೆಯಂತಮಂಸೆಱಗೆತಂದವೊಲುರ್ವಿಸದೇಹದೀಪ್ತಿಯೊ ।
ಳ್ಪಾರಮರೀಚಿಮಾಣಿಕದಪೆರ್ದೊಡವಿಂಪೊಱಪೊಣ್ಮೆಮಂಶುಗ ॥
ಳ್ದಾರುಣಕೋಪಪಾವಕನೆತನ್ನೊಡಲಂಸುಡುವಂದಮಾಗೆಕೋ ।
ಪಾರುಣನೇತ್ರನೆರ್ದನೊಡನೇಳ್ವೆಸೆಗಂಖಚರೇಂದ್ರಮಂಡಲಂ ॥ 126

ಚ ॥ ಅವಯವಶೋಭೆಯಂಪಡೆವುದಲ್ಲದೆಭೂಷಣವೆಂಸಮಾಳ್ಕೆಯಿಂ ।
ದವಯವಮಾಗೆವರ್ತಿಸವುವೋಪೆಱವೆಂದವನೇೞಪಂತೆವೋ ॥
ಲ್ನವಮುಖಭೂಷಣಂದಶಮುಖವ್ಯವಹಾರಮನಿತ್ತುರಾವಣಂ ।
ಗವಿರಳಕಾಂತಿಯಿಂಪೞಗಿದತ್ತುಸಮಸ್ತದಿಶಾಮುಖಂಗಳಂ। 127

ವ ॥ ಅಂತು ಸಿಂಹಾಸನದಿನೆರ್ದ್ದು ॥

ಕಂ ॥ ಚಮರಜಮನಿಕ್ಕೆಖೇಚರ ।
ಪ್ರಮದಾಜನಮುತ್ತಮಾಂಗದೊಳ್ಬೆಳ್ಗೊಡೆಚಂ ॥
ದ್ರಮನಂಗೆಲೆನಡೆದಂವಿ ।
ಕ್ರಮಧವಳಚಂದ್ರಹಾಸಮಂಜಡಿಯುತ್ತುಂ ॥ 128

ವ ॥ ಆಗಳಸಮಸಮರಕೇಳೀಕುತೂಹಳಖಚರಪರಿವೃಢರುಭಯಪಾರ್ಶ್ವದೊಳಂಮಣಿಮಕುಟಕಾಂತಿಪೊದಳ್ದುನೀಳ್ದುಮಿಗೆಪರ್ವಿಶಕ್ರಧನುವನನುವಿಸೆಕೆಳರ್ದ್ದಕೇಸರಿಗಳಂತೆನಡೆಯೆಯುಮಪಾರಚತುರಂಗಸೇನೆ ಚರಣಸಂಚಾರಣಕ್ಕೆ ನೆಲಂನೆಱೆಯುದೆಂಬಂತೆನಡೆಯೆಯುಂ ಕರಿವೃಷಭಸಿಂಹಗರುಡಹಂಸಾದಿಮಹಾಧ್ವಜಂಗಳಿಡಿಗಿಱಿದುನಡೆಯೆಯುಂ ವಿವಿಧರತ್ನಖಚಿತಕನಕದಂಡಮಂಡಿತವಿಚಿತ್ರರಾಜಚಿಹ್ನಂಗಳ್ಮುಂದೆಸಂದಣಿಸಿನಡೆಯೆಯುಂ ನಡೆವಸಮಯದೊಳೊಡನೆನೆಲಂಮೊಳಗೆಮೊಳಗುವಪಱೆಯಧ್ವನಿಗಳಿಂದುಮಾಕಸ್ಮಿಕಮುದಯಿಪಧರಾಕಂಪಮಂಸೇನಾಭರದಿನಾದಧರಾಕಂಪಮೆಂದುಂಪಸರಿಸುವದಿಗ್ದಾಹಮನಂಬರಚರಕಿರೀಟಮಾಣಿಕ್ಯಮಯೂಖಲೇಖೆಗಳಿಂದುಮವಿರಳಮಾಗೆ ಕವಿದಕಾವುಳಮಂಸೇನಾರಜೋಜಾಳಮೆಂದುಂಪೂಜಾಮಾಜಿವಿಲೋಚನವಿಗಳದಶ್ರುಬಿಂದುಗಳನಾನಂದಾಶ್ರುಬಿಂದುಗಳೆಂದುಂಪೊಱೆಯಿಮುಚ್ಚಿರ್ದಕೈದುಗಳನಿದಿರ್ಚಿರ್ದರನಿಱಿಯಲುಚ್ಚಿರ್ದುವೆಂದುಂಕಣ್ಬೊಲದೊಳ್ಪಳಿವಶಾಖಾಯಸ ಕಾಲಪುರುಷನಂಕಾಳಗಕ್ಕೆ ಜವನೆನೆರಂಬಂದಪ್ಪನೆಂದುಮಾಗಳೊಗೆದಧೂಮಕೇತುಗಳಂವಿಜಯಕೇತುಗಳೆಂದುಂಕಂಡೊಳುಳ್ಕುವುಳ್ಕಾಪಾತಮಂನಿಜಪ್ರತಾಪಾನಲವಿಸ್ಫುಲಿಂಗಂಗಳೆಂದುಮಭೂತಪೂರ್ವ್ವಮಪ್ಪುತ್ಪಾತಂಗಳನೇನುಮಂಬಗೆಯದೆಕೋಪಮಂಬಗೆದು ॥

ಮ॥ಸ್ರ॥ ರದನಂಗಳ್ನಾಲ್ಕುಱಿಂದದ್ಭುತಮೆನಿಪಸಹಸ್ರದ್ವಿಪಸ್ಕಂಧದೊಳ್ಪೊ ।
ಡಿದವಿದ್ಯಾದೇವತಾನಿರ್ಮ್ಮಿತರಥಮನತಿಕ್ಷೋಭದಿಂದೇಱಿಬಂದಂ ॥
ಕದನಕ್ಷೋಣೀತಳಕ್ಕುನ್ನಮಿತಬಹುಪತಾಕಾಪಟಚ್ಛನ್ನಮೇಘಾ ।
ಸ್ಪದಮಂಸಂಗ್ರಾಮಭೇರೀರವಬಧಿರಿತನಾನಾದಿಶಾಸ್ಯಂದಶಾಸ್ಯಂ ॥ 129

ವ ॥ ಅಂತುಬಂದುಸಂಗ್ರಾಮಭೂಮಿಯೊಳೊಡ್ಡಿನಿಲ್ವುದುಂ ॥

ಕಂ ॥ ಈತೋರ್ವ್ವದಚಲಮೋಜೀ ।
ಮಾತಮೊಪೇಳಿಂದುಪೊಳವುದಂಜಾಂಬವನಂ ॥
ಕೌತುಕದಿಂಪಸಗೊಂಡಂ ।
ಸೀತಾರಮಣಂದಶಾಸ್ಯನೇಱಿದರಥಮಂ ॥ 130

ವ ॥ ಅಂತುಪಸಗೊಳ್ವುದುಂಜಾಂಬವನದುರಾವಣನಬಹುರೂಪಿಣೀವಿದ್ಯಾದೇವತಾವಿನಿರ್ಮ್ಮಿತವರೂಥಮೆಂಬುದುಮದಂಲಕ್ಷ್ಮಣಂಕೇಳ್ದುಸಂನಾಹಭೇರಿಯಂಪೊಯಿಸೆ ॥

ಕಂ ॥ ಆರಾಧಿಸಿಪಡೆದಂಗಡ ।
ತೇರಂದೋಸ್ಸಾರನಲ್ಲದಂಗೇವುದೊಪೇ ॥
ಳ್ತೇರೆಂದುಸಿಂಹರಥಮಂ ।
ವೀರಶ್ರೀರಮಣನೇಱಿದಂರಘುವೀರಂ ॥ 131

ಕಂ ॥ ವಿಗ್ರಹಭೂಮಿಯೊಳಿಂದುದ ।
ಸುಗ್ರೀವನನಿಕ್ಕಿ ವಿಜಯಲಕ್ಷ್ಮಿಯೊಳಾಂಪಾ ॥
ನಿಗ್ರಹಣಮನೊಡರಿಸೆನಂ ।
ಬಾಗ್ರಹದಿಂಕೃಷ್ಣನೇಱಿದಂಸ್ಯಂದನಮಂ ॥ 132

ವ ॥ ಅಂತುಸಿಂಹಗರುಡವಾಹಿನಿರಥಂಗಳಂರಾಮಲಕ್ಷ್ಮಣರೇಱಿವಿದ್ಯಾಪರಮೇಶ್ವರರಪ ವಿದ್ಯಾಧರರಿಂಪರಿವೃತರಾಗಿಚತುರಂಗಬಲಸಮನ್ವಿತರ್ಶುಭಶಕುನಂಗಳನಿದಿರ್ಗೊಳುತ್ತುಂಸಂಗ್ರಾಮಭೂಮಿಗೆಬಂದೊಡ್ಡಿನಿಲ್ವುದುಂರಾವಣಂಕಂಡುಕೈವೀಸುವುದುಮುಭಯಬಲಮುಂತಳ್ತುಕಾದುವಲ್ಲಿವಾನರಬಲದ ನಳನುಂ ನೀಳನುಂ ಕುಮುದನುಂ ಯೂಥನಾಥನುಮೆಂಬನಾಯಕರೊಟ್ಟೈಸಿತಳ್ತಿಱಿದುದನುಜಬಲಮಂ ತವೆಕೊಲ್ವುದಂಕಂಡುಮಾರ್ಕೊಂಡುರಾಕ್ಷಸಬಲದ ಮುಖ್ಯನಾಯಕರ್ಕ್ಕಂಭನುಂ ವಿಕ್ರಮನುಂ ಮಾಲಿಯುಂ ವೀರನುಂ ಸೂರ್ಯ್ಯರಥನುಂ ಮೊದಲಾಗೆಪಲಂಬರೆಯ್ತಂದುತಮ್ಮಪಡೆಗಭಯಮಪ್ಪಂತುಕಾದುತ್ತುಮಿರ್ದ್ದರತ್ತಮತ್ತೊಂದುಮೊನೆಯೊಳ್ರಾವಣನಬಲದಭೂತನುಂ ಸಂಭೂತನುಂ ಕುಟಿಲನುಂ ಕಾಳದಂಡನುಮೂರ್ಮ್ಮಿಯುಂ ತರಂಗನುಂ ವಾನರಬಲದೊಳ್ತಲೆವಟ್ಟುಮಲೆದುಕಾದುವಲ್ಲಿ ॥

ಚ ॥ ವನಗಜಯೂಥಸಂಭ್ರಮದಿನಟ್ಟುವಕೇಸರಿಯಂತೆದೈತ್ಯರು ।
ಳ್ಳನಿಬರುಮಂಮಹಾರಣದೊಳದ್ಭುತಮಾಗೆಕಱುತ್ತುಕಾದಿಪಾ ॥
ವನಿಬರುತೋಡುವಂತುಪೆದಱಟ್ಟುವುದಂನಡೆನೋಡಿಕಂಡುಕಾ ।
ಯ್ವನುವಿಸೆಮುಟ್ಟೆಮೂದಲಿಸಿತಾಗಿದನಾಹವದುರ್ಜ್ಜಯಂಮಯಂ ॥ 133

ವ ॥ ಅಂತುತಾಗಿ ॥

ಕಂ ॥ ಅಯಮಯನಯನತಿವೇಗದೆ ।
ಮಯನಿಸೆದುರ್ಜ್ಜಯನೆನಿಪ್ಪಮಾರುತಿಗಂಪಿ ॥
ಸ್ಮಯಮಗ್ಗಳಮಾದುದುಶರ ।
ಮಯಮಾಡುದುನೋಡೆಕೂಡೆದಿಗವನಿವಳಯಂ ॥ 134

ವ ॥ ಅಂತುಪುಂಖಾನುಪುಂಖಮಿಸುವುದುಂ ॥

ಕಂ ॥ ಅವನೆಚ್ಚಬಾಣಜಾಲಮ ।
ನವಯವದಿಂದೆಚ್ಚುತವಿಪುದುಂಮಾರುತಿಭೈ ॥
ರವನಂದದಿಂತ್ರಿಕೂಟದಿ ।
ನವನಿಟ್ಟಂದನುಜಸೇನೆಬೊಬ್ಬಿಡುವಿನೆಗಂ ॥ 135

ವ ॥ ಅಂತಿಡುವುದುಂ ॥

ಕಂ ॥ ಶೂಲಾಯುಧಮಂನಿಶಿತಶ ।
ರಾಳಿಗಳಿಂಪವನಸೂನುಕಡಿದಿಕ್ಕೆ ಮಯಂ ॥
ಡೋಳಾಯಮಾನಚಿತ್ತಂ ।
ಕಾಳಗದಪೊಡರ್ಪುಗೆಟ್ಟುಮಱವಟ್ಟಿರ್ದ್ದಂ ॥ 136

ವ ॥ ಅದಂಕಂಡುದಶವದನಂಪ್ರಜ್ವಲಿತಮೆಂಬದಿವ್ಯರಥಮನಟ್ಟುವುದುಮದನೇಱಿಮ
ಯಂಮಹಾಯುದ್ಧಂಗೆಯ್ದುವಿಜಯಶ್ರೀಯನಪ್ಪುಕೆಯ್ದು ॥

ಕಂ ॥ ಕರಮೆಱಿದುಮಯನಬಾಹಾ ।
ಪರಿಘಕ್ಕಿದಿರಿಡುವುದಾಗ್ರಮಾಹವದೊಳ್ದು ॥
ರ್ದ್ಧರನೆನಿಸಿದತುಳಬಲನಂ ।
ನಿರಾಯುಧಂಮಾಡಿದಂಮರುನ್ನಂದನನಂ ॥ 137

ವ ॥ ಅಂತುಹನುಮನಂನಿರಾಯುಧಂಮಾಳ್ಪುದುಂ ಪ್ರಭಾಮಂಡಲಂಬಂದೆಡೆಗೊಂಡುತಾ
ಗುವುದುಂ ॥

ಕಂ ॥ ಧುರದೊಳ್ಮಯನಾತನುಮಂ ।
ವಿರಥಂಮಾಳ್ಪುದುಮದಕ್ಕೆ ಸುಗ್ರೀವಂಚೆ ॥
ಚ್ಚರಮೊದಗಿಬಂದುತಾಗಿದ ।
ನರಾತಿಬಲಮೆಲ್ಲಮೊಲ್ಲನುಲಿದೋಡುವಿನಂ ॥ 138

ವ ॥ ಅಂತುತಾಗುವುದುಮಾತನುಮಂತಾಗಿದಬೇಗದೊಳ್ನಿರಸ್ತ್ರಂಮಾಳ್ಪುದುಮಾತನಂ
ಪೆಱಗಿಕ್ಕಿ ॥

ಕಂ ॥ ಉರವಣಿಸಿವಿಭೀಷಣನತಿ ।
ಭರದಿಂತಾಗುವುದುಮಾಮಹಾಬಳನಭುಜಾ ॥
ಪರಿಘಕ್ಕೆಕುಂದನಿನಿಸಂ ।
ದೊರೆಕೊಳಿಸಿದನೆಂದೊಡೇಂಮಯಂದುರ್ಜ್ಜಯನೋ ॥ 139

ವ ॥ ಆಗಳಾಮಯನಮುಸಕಮಂಸಿಂಹರಥಾರೂಢಂದಾಶರಥಿಕಂಡುಕಡುಮುಳಿದು ॥

ಕಂ ॥ ಇದುರಕ್ಕಸರುಸಿರಂಪೀ ।
ರ್ವ್ವದುಗ್ರಕಾಳಾಹಿಯೆನಿಪಬಿಲ್ಲಂರಾಮಂ ॥
ಪದುಳಂತಂದಂಗುಷ್ಠದ ।
ಮೊದಲಿಂಕೊಪ್ಪಿಂಗೆನೂಂಕಿದಂಜ್ಯಾಲತೆಯಂ ॥ 140

ವ ॥ ಅಂತುನಿಜವಿಜಯಧನುರ್ಲ್ಲತೆಯನೇಱಿಸಿನೀವಿಜೇವೊಡೆವುದುಂ ॥

ಕಂ ॥ ರಾವಣನರಥದದಿವ್ಯಗ ।
ಜಾವಳಿವೆಪ್ಪಳಿಸೆಬೆರ್ಚ್ಚಿರವಿಯಹಯಂಗ ॥
ಳ್ತಿರ್ವಿದುದುಗಗನಮಂವ ।
ಜ್ರಾವರ್ತ್ತಧನುರ್ಲ್ಲತಾಘನಜ್ಯಾರಾವಂ ॥ 141

ವ ॥ ಅನಂತರಂಸಂವರ್ತ್ತಸಮಯದತಿವರ್ತ್ತಿಯಪ್ಪದಂಡಧರನಪೊಡರ್ಪ್ಪನಪ್ಪುಕೆಯ್ದು ಮಾರ್ಪ್ಪಡೆಯುಂಪಡಲ್ವಡಿಸುತ್ತುಂಬರ್ಪ್ಪುದಾತ್ತರಾಘವನಬಲಂಬಡೆದುವಿಭೀಷಣ ಪ್ರಭಾಮಂಡಲಮರುನ್ನಂದನಸುಗ್ರೀವಾದಿಗಳ್ಮಗುಳ್ದುಕಾದಲ್ಮನಂಗೆಯ್ದುಬರೆಪ ದ್ಮದೇವನವರಂಪಿಂತಿಕ್ಕಿಮಯನಂಮುಟ್ಟೆವಂದುಮಹಾಯುದ್ಧಂಗೆಯ್ದು ॥

ಕಂ ॥ ಜನಕಸುತನಂಮರುನ್ನಂ ।
ದನನಂಸುಗ್ರೀವನಂವಿಭೀಷಣನಂಗೆ ॥
ಲ್ದನನಂಜೆಸಿರಾಮಂಜಯ ।
ವನಿತೆಯಕಯ್ಪಿಡಿವತೆಱದೆಮಯನಂಪಿಡಿದಂ ॥ 142

ಚ ॥ ಪಿಡಿಯೆರಘೂದ್ವಹಂಮಯನನೀಕ್ಷಿಸಿರಾಕ್ಷಸಚಕ್ರವರ್ತ್ತಿಕಾ ।
ಯ್ದೊಡರಿಸೆಕೇಱಿತಂನರಥಮಂಪರಿಚೋದಿಸವೇಳ್ದುರಾಮನೊ ॥
ಳ್ತೊಡರಲೊಡರ್ಚ್ಚಿಬರ್ಪ್ಪಪದದೊಳ್ಮಗುಳ್ತ್ತಲೆನುತ್ತುಮೆಯ್ದಿದಂ ।
ಸಿಡಿಲಪೊಡರ್ಪ್ಪುಮಂಜವನಕೂರ್ಪ್ಪುಮನಿರ್ಕ್ಕೆಳಿಗೊಂಡುಲಕ್ಷ್ಮಣಂ ॥ 143

ವ ॥ ಅಂತುರಘುನಂದನನಸ್ಯಂದನಮಂಪೆಱಗಿಕ್ಕಿ ॥

ಶಾ ॥ ಎಂತಾನುಂದೊರೆಕೊಂಡೆರಾಘವನಮೋಘಾಸ್ತ್ರಕ್ಕೆಮಾಱಾಂಪವಿ ।
ಕ್ರಾಂತಂಕಾಮುಕನಿಂನೊಳಂಟೆಕದನಕ್ಕಂಣಂಬರಂಗಂಡರಾ ॥
ರ್ಮ್ಮಾಂತಾಗೆಂನೊಳಿದಿರ್ಚ್ಚುಕೊರ್ಗ್ಗಣೆಯಕೂರ್ಪ್ಪಂತೋರ್ಪ್ಪೆನಣ್ಮೆಂದುಕ ।
ಲ್ಪಾಂತೋಗ್ರಾಂತಕನಂತೆಗರ್ಜ್ಜಿಸಿದನಾರಕ್ತೇಕ್ಷಣಂಲಕ್ಷ್ಮಣಂ ॥ 144

ವ ॥ ಅಂತುಗಜಱಿಗರ್ಜ್ಜಿಸುವುದುಂಘನಗರ್ಜ್ಜನೆಗೇಳ್ದಕೇಸರಿಯಂತೆಕೆಳಳ್ದು ॥

ಕಂ ॥ ಕರಿಗಳ್ಸಾಸಿರದೊಳ್ಪೊ ।
ಡಿರಥಂಜಂಗಮಕುಲಾದ್ರಿಬರ್ಪ್ಪಂತೆಭಯಂ ॥
ಕರಮಾಗೆಬಂದುದಶಕಂ ।
ಧರನಾಸುರಮಾಗೆತಾಗಿದಂಲಕ್ಷ್ಮಣನೊಳ್ ॥ 145

ಆಗಳೆಱಂಕೆಯಪೆಟ್ಟಿಂ ।
ಪೇಗೆಂಬಪ್ಪಂತುಬಂದುಲಕ್ಷ್ಮಣನರಥಂ ॥
ತಾಗಿದುದಂಗರುಡವಾಹಿನಿ ।
ಸಾಗರಮುಚ್ಚಳಿಸೆಪಕ್ಷಪವನಾಹತಿಯಿಂ ॥ 146

ವ ॥ ಅಂತವರ್ತ್ತಂತಂಮರಥಂಗಳಮನತಿದೂರದೊಳಿರಿಸಿ ॥

ಕಂ ॥ ಇವುದೃಷ್ಟಿವಿಷಾಹಿಯುಗರ ।
ಳವಹ್ನಿಜಿಹ್ವಾವಿಭಾಸಮೆನೆಕಣ್ಗಳಕೆಂ ॥
ಪವರೋರ್ವ್ವರೋರ್ವ್ವರಂಪ್ರಾ ।
ಣವಾಯುವಂನುಂಗುವಂತೆನೋಡಿದರಾಗಳ್ ॥ 147

ವ ॥ ಅಂತವರೋರ್ವ್ವರುಮೋರೋರ್ವ್ವರಂ ಜನ್ಮಾಂತರಜನಿತಕಲುಷವಶಗತರಾಗಿನೀ
ಡುಂನೋಡೆತದನಂತರಂಲಕ್ಷ್ಮೀಧರಂದಶಕಂಧರನನಿಂತೆಂದಂ ॥

ಕಂ ॥ ಪಲದಿವಸಕ್ಕಂತಾನುಂ ।
ಕಲಹಕ್ಕೊಳಗಾದೆನಿಂನಬಾಳ್ವಾಸೆಯುಮಂ ॥
ಬಲನಿಂನುಳಿರಘುವೀರನ ।
ಚಲಣಾಬ್ಜಕ್ಕೆಱಗಿಪಡೆಯಮೃತ್ಯುಂಜಯಮಂ ॥ 148

ವ ॥ ಎನೆದಶಮುಖಂಮುನಿದಿಂತೆಂದಂ ॥

ಕಂ ॥ ತ್ರಿಜಗದೊಳಾಳ್ಗೆಱಿಕೆಯಾಭೂ ।
ಭುಜರಂಭುಜಬಲದಿನೆಂನಕಾಲ್ಗೆಱಗಿಸಿದೆಂ ॥
ನಿಜತನುಗೆಱಗಿಸುವೆನಧೋ ।
ಕ್ಷಜನಿಮಿಷಾರ್ದ್ಧದೊಳೆಪರ್ದ್ದುಮಂಕಾಗೆಯುಮಂ ॥ 149

ವ ॥ ಎಂದುಬಿಡೆನುಡಿದು ಕೈದುಗೆಯ್ಯೆಂದು ಮೂದಲಿಸಿನಿಜವಿಜಯಚಾಪಂಗಳನೇಱಿಸಿ
ನೀವಿಜೇವೊಡೆವುದುಂ ॥

ಮ ॥ ದಿನಕೃನ್ಮಂಡಲಮಂಪಳಂಚಿಕುಲಭೂಭೃತ್ಕೂಟದೊಳ್ಬೇಱಿಮಾ ।
ರ್ದ್ದನಿಯಂಪುಟ್ಟಿಸಿಲೋಕಪಾಲರಮನಕ್ಕಾತಂಕಮಂತಂದುಕೂ ॥
ಡೆನಭೋಮಂಡಲಮಂದಿಶಾವಲಯಮಂತಳ್ವಿಯುದ್ಘೋರ್ಣ್ಮಿತ್ತುಪೇಂ ।
ದ್ರನದೈತ್ಯೇಂದ್ರನದಿವ್ಯಚಾಪವಿಪುಲಜ್ಯಾಘಾತಘೋರಸ್ವನಂ ॥ 150

ವ ॥ ಅಂತುಸಮರಸನ್ನದ್ಧರಾಗಿ ॥

ಕಂ ॥ ಅಯ್ದುಂಸ್ಥಾನದೊಳಂನಿಂ ।
ದಯ್ದುಂತೆಱದೇಸಿನೋಜೆವೆತ್ತಪ್ರತಿಮ ॥
ರ್ಕ್ಕಾಯ್ದಿಸದೆಸೆಮಸುಳ್ವಿನೆಗಂ ।
ಪಾಯ್ದುವುಪುಂಖಾನುಪುಂಖಶಸ್ತ್ರಾವಳಿಗಳ್ ॥ 151

ದನುಜೇಂದ್ರನಗಜರಥಮುಂ ।
ಮನುಜೇಂದ್ರನಗರುಡರಥಮುಮೆಲೆಮಿಡುಕದೆನಿ ॥
ಲ್ವಿನಮವರೆಚ್ಚಂಬುಗಳಂ ।
ದನುವರದೊಳ್ಪಡೆದುವೊಡನೆಶರಪಂಜರಮಂ ॥ 152

ಓರೋರ್ವ್ವರೆಚ್ಚಕಣೆಗಳ ।
ನೋರೋರ್ವ್ವರ್ಕ್ಕಡಿದುಮೊಣದಿಸೆವಕಾರ್ಮ್ಮುಗಿಲಿಂ ॥
ದೋರಂತೆಪಾಯ್ವಪುಷ್ಕರ ।
ಧಾರಾಸಂದೋಹದಂತೆಪಾಯ್ದುವುಕಣೆಗಳ್ ॥ 153

ಪುರುಷೋತ್ತಮನಿಸೆದಶಕಂ ।
ಧರನಂಕೊರ್ಗ್ಗಣೆಗಳುರ್ಚ್ಚಲಾಱವುದಶಕಂ ॥
ಧರನೆಸೆನಿಶಿತಾಸ್ತ್ರಂಗ ।
ಳ್ಪುರುಷೋತ್ತಮತನುವನುರ್ಚ್ಚಲಾಱವುಧುರದೊಳ್ ॥ 154

ನೆಱೆದವುನಿಂನನಿಷೇಕಂ ।
ನೆಱೆಗೊಳ್ಳದೆಮಾಣವೆಂನಬಾಣಾವಳಿಗ ॥
ಳ್ಗಱಿಸೋಂಕದೆಪೋಗೆನುತುಂ ।
ಗಱಿಗಱಿಯಂಸೋಂಕಿಪಱಿಯೆಲಕ್ಷ್ಮಣನೆಚ್ಚಂ ॥ 155

ಚ ॥ ಸಮಧಿಕರಸ್ತ್ರಶಸ್ತ್ರಬಲದೊಳ್ದೃಢಕಾಯದೊಳತ್ಯುದಗ್ರವಿ ।
ಕ್ರಮದೊಳನಂತವೀರ್ಯ್ಯದೊಳನೇಕವಿಧಪ್ರಥನಂಗಳೊಳ್ಧನು ॥
ಶ್ರಮದೊಳಪಾರಪಾರುಷದೊಳಾದೊಡಮೇಂಪ್ರತಿವಾಸುದೇವನೊ ।
ಳ್ಸಮನಿಸಿದಾಯುರಂತಮೆಜಯಪ್ರದಮಾದುದುವಾಸುದೇವನೊಳ್ ॥ 156

ಕಂ ॥ ರಾವಣಲಕ್ಷ್ಮಣರತಿರೋ ।
ಷಾವೇಶದಿನೆಚ್ಚುಮಿಟ್ಟುಮಿಱಿದುಂಪೊಯ್ದುಂ ॥
ನೋವಂಸಾವಂಬಗೆಯದೆ ।
ದೇವರ್ಕ್ಕಳನೆರವಿನೋಡೆಕಾದುತ್ತಿರ್ದ್ದರ್ ॥ 157

ಸಾಧಾರಣಾಸ್ತ್ರದಿಂದಮ |
ಸಾಧಾರಣಮೆ ನಿಪಯುದ್ಧಮಂಮಾಡಿಯುಮೇಂ ||
ಸಾಧಿಸಲಣಮಾಱಿನೆಲ |
ಕ್ಷ್ಮಾಧರನಂಕದನಕರ್ಕ್ಕಶಂದಶವದನಂ || 158

ವ || ಅಂತಚಿಂತ್ಯಯುದ್ಧಂಗೆಯ್ದು ಲಕ್ಷ್ಮಣನಂಗೆಲಲಾಱದೆವಿದ್ಯಾಯುದ್ಧಮಂಪೊಣರ್ಚ್ಚೆ ದಿವ್ಯಾಸ್ತ್ರಮನಭಿಮಂತ್ರಿಸಿಕೊಂಡಿಸುವುದುಂ ||

ಚ || ಪೊಗೆಪೊಱಪೊಣ್ಮೆ ಸೂಸೆಕಿಡಿಗಳ್ಗರಳಾನಳನೀಜಗಂಗಳಂ |
ಬಗೆಯದೆನುಂಗಲೆಂದುಪರಿತಂದುಪುದಂತಕನಾಜ್ಞೆಯಿಂದಮಿಂ ||
ಪಗೆವಡೆಗಿಲ್ಲಜೀವನಮೆನಲ್ದಶಕಂಧರನೆಚ್ಚರೌದ್ರಪ |
ನ್ನಗಶರಮಂಗರುತ್ಮಶರದಿಂಬಿಱುತೋಡಿಸಿದಂಜನಾರ್ದ್ದನಂ || 159

ಲಯಸಮಯಂಜಗಕ್ಕೆ ವೆಱತಾವುದೊರಾವಣನುಗ್ರಕೋಪವ |
ಹ್ನಿಯೆವಿಳಯಾನಳಂಮುಳಿಸೆಕಲ್ಪವಿರಾಮಮೆನಲ್ಸಹಸ್ರಜಿ ||
ಹ್ವೆಯೊಳಮಜಾಂಡಮಂಪುದಿದುಬರ್ಪ್ಪದಶಾಸ್ಯನವಹ್ನಿಬಾಣಮಂ ||
ಜಯರಮಣೀವರಂತವಿಸಿದಂಹರಿವಾರುಣದಿವ್ಯಬಾಣದಿಂ || 160

ಇಸೆತಮದಂಬಿನಿಂದಶಮುಖಂತಪನಾಸ್ತ್ರದಿನದ್ರಿಬಾಣದಿಂ |
ದಿಸೆದನುಜಾಧಿಪಂಕುಲಿಶಸಾಯಕದಿಂತರುದಿವ್ಯಬಾಣದಿಂ ||
ದಿಸೆಖಚರಂಕುಠಾರಶರದಿಂದಭಿಮಂತ್ರಿಸಿಮೇಘಬಾಣದಿಂ |
ದಿಸೆದಶಕಂಧರಂಪವನಸಾಯಕದಿಂತಱಿದಂಗದಾಯುಧಂ || 161

ಕಂ || ಇವುಮೊದಲಾಗಿರೆನಿಜದಿ |
ವ್ಯವಿಶಿಖಮಂಮತ್ತಮಾಜಿಯೊಳ್ಪಲವಂದಾ ||
ನವರಿಪುಭಂಜಿಸೆನಿಜದಿ |
ವ್ಯವಿಶಿಖದಿಂದೆಸೆಗೆಮಸಗಿದಂದಶವದನಂ || 162

ವ || ಅಂತುಮುಳಿದುದಿವ್ಯಬಾಣದಿಂಲಕ್ಷ್ಮಣನಂಗೆಲಲ್ನೆಱೆಯದೆ ||

ಚ || ಸಿಡಿಮಿಡಿಗೊಂಡುತಂನಕಲುಷೋಗ್ರಕೃಶಾನುವೆತಂನದೇಹಮಂ |
ಸುಡೆನಿಲಲಾಱದುಂಮುಳಿಸಿಲಕ್ಷ್ಮಣದೇವನದಿವ್ಯಬಾಣದಿಂ ||
ಕಿಡೆನಿಜದಿವ್ಯಬಾಣದೆಸಕಂಮಸಕಂಗಿಡದಿಂದ್ರವಿದ್ವಿಷಂ |
ಪಡೆದನಪಾರಮಂತನುಗಳಂಬಹುರೂಪಿಣಿಯೆಂಬವಿದ್ಯೆಯಿಂ || 163

ಕಂ ॥ ಆವಿದ್ಯೆಯಸಾಮರ್ತ್ಥ್ಯಮ ।
ನೇವಣ್ಣಿಸುವೆಂಜನಾರ್ದ್ದನಂಗಾಕ್ಷಣದೊ ॥
ಳ್ರಾವಣಮಯಮಾಯ್ತಖಿಲಧ ।
ರಾವಲಯಂಗಗನವಲಯಮಾಶಾವಲಯಂ ॥ 164

ರಾವಣರನೇಕರುಂಯು ।
ದ್ಧಾವಷ್ಟಂಭಪ್ರಚಂಡದೋರ್ದ್ದಂಡರಗು ॥
ರ್ವ್ವಾವರಿಸೆಸುತ್ತಿಮುತ್ತೆ ಜ ।
ಯಾವಸಥಂಲಕ್ಷ್ಮಣಂರಣೋತ್ಸುಕನಾದಂ ॥ 165

ವ ॥ ಅಂತುಸಾಮಿತ್ರಿಯಂಸುತ್ತಿಮುತ್ತಿ ॥

ಕಂ ॥ ಇಟ್ಟರ್ಕ್ಕೆಲರಿಱಿದರ್ಕ್ಕೆಲ ।
ರೊಟ್ಟಜೆಯೆಂಬಂದಮಾಗಿದರ್ಕ್ಕೆಲರಂಬಂ ॥
ತೊಟ್ಟರ್ಕ್ಕೆಲರಳ್ಕಱಿಬೊ ।
ಬ್ಬಿಟ್ಟರ್ಕ್ಕೆಲರಾಜಿರಂಗದೊಳ್ಪೌಲಸ್ತ್ಯರ್ ॥ 166

ವ ॥ ಅಂತಗುರ್ವ್ವಾಗೆವಿಗುರ್ವ್ವಿಸಿಕಾದುವಲ್ಲಿ ॥

ಮ ॥ ಅನಿತುಂರಾವಣಕೋಟಿಕೋಟಿತೆಱದಿಂದಿವ್ಯಾಸ್ತ್ರಶಸ್ತ್ರಂಗಳಿಂ ।
ಮುನಿದೆಯ್ತಂದಿಸೆಪೊಯ್ಯೆತತ್ತಱಿಯೆತಳ್ತೇಸಾಡಿದಂಕೋಟಿಗೋ ॥
ರ್ವ್ವನೆಬಿಲ್ಗೊಂಡುಪುನರ್ಭವಂಗಳವುಕೋಟಾಕೋಟಿಗಳ್ಪಾಱಿಬೀ ।
ೞ್ವನೆಗಂಪಂದಲೆಗಳ್ಧನುರ್ದ್ಧರಧುರೀಣಂದುರ್ದ್ಧರಂಲಕ್ಷ್ಮಣಂ ॥ 167

ಶರಸಂಧಾನದವೇಗಮಂಪೊಗಳಲಾವಂಸಾಲ್ದಂಕೋಟಿದೈ ।
ತ್ಯರನಾಂತೋರ್ವ್ವನೆದೀಪಮಾಳಿಕೆಗಳಂಚಂಡಾನಿಲಂನಂದಿಪಂ ॥
ತಿರೆಮೊಯ್ಯರ್ಚ್ಛಿದವಂತುಷಾರಕಣಮಂಚಂಡಾಂಶುನಿರ್ಮ್ಮೂಲಿಪಂ ।
ತಿರೆನಿರ್ಮ್ಮೂಲಿಸಿದಂನಿಶಾತಶರಸಂಘಾತಂಗಳಿಂಲಕ್ಷ್ಮಣಂ ॥ 168

ಕಂ ॥ ರಾವಣಕೋಟಿಯತಲೆಕೆಂ ।
ದಾವರೆಯಂಕೆದಱಿದಂತೆರಣಮಂಡಲಮಂ ॥
ತೀವೆತೆಗೆದೆಚ್ಚಲಕ್ಷ್ಮಣ ।
ದೇವನವೋಲ್ಕೋಟಿಭಟನೆನಿಪ್ಪವನಾವಂ ॥ 169

ಮ ॥ ಸಮರಕ್ಷೋಣಿಯನೆಯ್ದಿರಾವಣಶಿರಂಗಳ್ತೀವೆತಳ್ಪೊಯ್ದನು ।
ಕ್ರಮದಿಂಪುಂಜಿಸೆರೌದ್ರವಾದುವುಸುಮಿತ್ರಾಪುತ್ರಬಾಣಾಸನಾ ॥
ಶ್ರಮದೊಳ್ವಿಶ್ರಮಿಸಿರ್ಪಯೋಗಿವಿಜಯಶ್ರೀವಿಶ್ರುತಾಕಾಶಲಿಂ ।
ಗಮನಾರಕ್ತಸರೋಜಸಂತತಿಗಳಿಂದಭ್ಯರ್ಚನಂಗೆಯ್ದವೋಲ್ ॥ 170

ವ ॥ ಅಂತುಅಗುರ್ವಾಗೆವಿಗುರ್ವಿಸಿಕಾದುವಲ್ಲಿರಾವಣನತಲೆಗೆನೆಲನುಮಾಗಸಮುಮೆ
ಡೆನೆಱೆಯದೆನಿಸಿತಱಿದೊಟ್ಟೆರಾವಣಂ ಬಹುರೂಪಿಣೀವಿದ್ಯೆಯನುಳಿದುಮುಳಿಸನು
ಳಿಯದೆಚಂದ್ರಹಾಸದಿನಿಱಿಯೆಲಕ್ಷ್ಮಣಂ ಸೂರ್ಯ್ಯಹಾಸದಿನದಕ್ಕೆ ಭಂಗಮನೊ
ಡರ್ಚ್ಚೆಕೆರ್ಚ್ಚೆಱಿದಿರ್ದ್ದಕೋಪದಿಂಮನಂಬೆರ್ಚ್ಚಿ ॥

ಮ ॥ ದೊಣೆಯಿಂದಂತೆಗೆಯಲ್ಕೆಮರ್ತ್ಯನಭಮಂಪರ್ವಿತ್ತುದಿವ್ಯಾಸ್ತ್ರಮಂ ।
ಗೊಣೆಯಕ್ಕೊಯ್ಯಲೊಡಂದಿನಾಧಿಪನತೇಜಂಪಿಂಗಿಪೋದತ್ತುರಾ ॥
ವಣನೇಸಾಡಿದೊಡಾಯ್ತುರಾತ್ರಿಸಮಯಂಸಂಮೋಹನಾಸ್ತ್ರಕ್ಕೆಲ ।
ಕ್ಷ್ಮಣವೀರಂಪ್ರತಿಕಾರಮಂತ್ರವಿಕಲಂವಿಭ್ರಾಂತನಾಗಿರ್ಪ್ಪದುಂ ॥ 171

ವ ॥ ಅಂನೆಗಮಿತ್ತಂಚಂದ್ರವರ್ದ್ಧನವಿಯಚ್ಚರೇಂದ್ರನ ಮಕ್ಕಳೆಣ್ಬರ್ಕನ್ನೆಯರ್ಮ್ಮ
ಣಿಮಯವಿತಾನವಿರಾಜಮಾನವಿಮಾನಾರೂಢೆಯರ್ವಿಯನ್ಮಾರ್ಗ್ಗದಿಂಬಂದು ಲ
ಕ್ಷ್ಮಣನಂನೋಡುತ್ತುಮಿರೆದೇವಾಪ್ಸರೋಗಣಿಕೆಯರಾಕೆಗಳಂನೀಮಾರ್ಗ್ಗೇನಿಮಿ
ತ್ತಂಬಂದಿರೆಂದುಬೆಸಗೊಳ್ವುದುಮವರಿಂತೆಂದರ್ಸ್ಸೀತಾಸ್ವಯಂಬರಕ್ಕೆ ಮದೀಯಜ
ನಕನೊಡಗೊಂಡುಪೋಗಿಲಕ್ಷ್ಮಣನಂಕಂಡು ಮನದೆಗೊಂಡೆಮ್ಮನೀತಂಗೆಕೊಟ್ಟ
ನೆಂಬುದುಮೆಮಗೀತನೆಪುರುಷನಪ್ಪುದಱಿನೀತನನುವರದ ಕಾರ್ಯ್ಯವೆಂತಾದಪು
ದೆಂದದಂನೋಡಲ್ಬಂದೆವೆನೆಲಕ್ಷ್ಮಣನಾಮಾತಂಕೇಳ್ದುಕೆಗಳನಕ್ಕತ್ತರ್ನೋಳ್ಪ
ದುಮವರ್ಸ್ಸಮಯೋಚಿತಮನಱಿದುಸಂಮೋಹನಶರಶಕ್ತಿಯನೀಮಂತ್ರದಿಂಕಿಡಿ
ಸೆಂದುಚ್ಚರಿಸುವುದುಮಾಮಂತ್ರದಿನಭಿಮಂತ್ರಿಸಿ ॥

ಚ ॥ ಶರಧಿಯಿನುರ್ಚ್ಚಿಪಿಂಗಿದುದುಘೋಂಕನೆಕಳ್ತಲೆದಿವ್ಯಬಾಣಮಂ ।
ತರೆತಿರುವಿಂಗೆತೀವ್ರಕಿರಣಂತಲೆದೋಱಿದುದಾರ್ದ್ರಪಂಕಜೋ ॥
ದರನಿಸೆರಾತ್ರಿಪಿಂಗಿಪಗಲಪ್ಪುದುಮಾದುದುಸಂತಸಂಸುರಾ ।
ಸುರರ್ಗ್ಗವಳೋಕಿಸಲ್ಪಡೆದೆವೆಂದವರೀರ್ವ್ವರದೋರ್ವ್ವಲಂಗಳಂ ॥ 172

ವ ॥ ಅಂತುಸಂಮೋಹನಾಸ್ತ್ರದಕೂರ್ಪ್ಪುಗಿಡೆಪೊಡರ್ಪ್ಪುಗಿಡದೆರಾವಣಂವಿಘ್ನವಿನಾಯ
ಕಾಸ್ತ್ರದಿಂದಿಸುವುದುಮದಂಲಕ್ಷ್ಮಣಂಸಿದ್ಧಾರ್ತ್ಥವಿದ್ಯಾಶೀಮುಖದಿಂಪರಾಙ್ಮುಖಂ
ಮಾಳ್ಪುದುಂ ॥

ಕಂ ॥ ಎನಿತಂಕೊಂಡಾಡುವೆನೀ ।
ತನನೆಸಕಮನೀಗಳಿಂತೆನೆರೆ ಪುವೆನೆಂದಾ ॥
ದನುಜೇಂದ್ರಂಕೋಪಹುತಾ ।
ಶನನೆರ್ದೆಯೊಳ್ತ್ತಣ್ಣನುರಿಯೆಕಿಡಿಕಿಡಿವೋದಂ ॥ 173

ವ ॥ ಅಂತತಿಪ್ರಬಳಕಲುಷವಶಗತಚಿತ್ತನಾಗಿ ॥

ಮ ॥ ಪರಚಕ್ರಕ್ಷಯಕಾಲಚಕ್ರಮೆನಿಸಿರ್ದ್ದಾತ್ಮೀಯಚಕ್ರಕ್ಕೆ ಖೇ ।
ಚರಚಕ್ರೇಶ್ವರನೊಯ್ಯೆಕಯ್ಯನದುತೇಜಶ್ಚಕ್ರದಿಂಕೋಟಿಭಾ ॥
ಸ್ಕರಚಕ್ರಪ್ರಭೆಯಂಪಳಂಚಲೆದುಕಯ್ಗೆಯ್ತಂದುಲೋಕೈಕಭೀ ।
ಕರವಾಯ್ತಂದದುನೀಳಮೇಘವಿಕಟಪ್ರಸ್ಫಾರದಂಭೋಳಿವೋಲ್ ॥ 174

ವ ॥ ಅಂತುವೀರಪುರುಷರತ್ನಮೆನಿಪರಾವಣನಕಯ್ಗೆಚಕ್ರರತ್ನಂಬಪ್ಪುದುಮದಂಲ
ಕ್ಷ್ಮಣಂಕೋಪವರಚಕ್ರಮಂಬಗೆವಂತೆಬಗೆದು ॥

ಉ ॥ ಭೇದಿಪೆನೀದಶಾನನನಚಕ್ರಮನೀತನಕಂಠನಾಳಮಂ ।
ಭೇದಿಸಿತೋರ್ಪೆನೆಂನಭುಜವೀರ್ಯ್ಯಮನೆಂದುಕಡಂಗಿವಿಕ್ರಮಾ ॥
ಸಾದಿತವಿಶ್ವಲೋಕವಿಜಯಂಕುಲಿಶಾಸ್ತ್ರದಪಿಳ್ಕನಾರಿಯೊ ।
ಳ್ಕೋದುಕದಂಪನೆಯ್ದೆಧನುವಂತೆಗೆದುರ್ವ್ವಿಸಿದಂಜನಾರ್ದ್ದನಂ ॥ 175

ಮ॥ಸ್ರ॥ಕಡಿಖಂಡಂಮಾಡುವೆಂಚಕ್ರಮನೆಡೆಯೊಳೆನುತ್ತುಂಧನುರ್ದ್ದಂಡಮಂಜೇ ।
ವೊಡೆಗೆಯ್ದುಗ್ರಾಸ್ತ್ರಮಂಸಂಧಿಸಿತಿರುವಿನೊಳಾಲೀಢಹೊಂನಿಂದುಕೋಲುಂ ॥
ಕಡೆಗಣ್ಣಂಕಯ್ಯುಮಿಂಬಾಗಿರೆತೆಗೆನೆಱೆದವ್ಯಗ್ರನೇಕಾಗ್ರಚಿತ್ತಂ ।
ಬಡೆದಿರ್ದ್ದಂಚಂದ್ರಚೂಡಂತ್ರಿಪುರಮನಿಸಲೆಂದಿರ್ದ್ದವೋಲ್ರಾಮಚಂದ್ರಂ ॥ 176

ಉ ॥ ದಂಡಧರಂಪೊಲಿರ್ದ್ದನಭಿವೀಕ್ಷಿಸುತುಂಶತಖಂಡಮಪ್ಪಿನಂ ।
ಖಂಡಿಸುವೆಂವಿಯಚ್ಚರನನಚ್ಚಿನಚಕ್ರಮನೆಂದುಭೀಮ್ಮರ್ವಾ ॥
ರ್ತ್ತಂಡಳಿಗಂಡಮಂಡಲದೊಳಲ್ಲಾಗೆಲೋಹಿತಲೋಚನಂಪ್ರಭಾ ।
ಮಂಡಲನೆತ್ತಿಚಂಡಭುಜದಂಡವಿಮಂಡಿತಮಂಡಲಾಗ್ರಮಂ ॥ 177

ಕಂ ॥ ಇಡೆದಶವದನಂಚಕ್ರದ ।
ಪೊಡರ್ಪ್ಪನಾಂಕಿಡಿಪೆನೆಂದುಶೂಲಾಯುಧಮಂ ॥
ಪಿಡಿದೆತ್ತಿಸೂಸುತುಂಕ ।
ಣ್ಗಿಡಿಯಂಭೈರವನವೋಲ್ವಿಭೀಷಣನಿರ್ದ್ದಂ ॥ 178

ಪುಡಿಪುಡಿಮಾೞ್ಪೆಂಚಕ್ರಮು ।
ನೆಡೆಯೊಳ್ಲಕ್ಷ್ಮಣನನೆಯ್ದಲೀಯೆನೆನುತ್ತುಂ ॥
ಪಿಡಿದೆತ್ತಿಗದೆಯನಿರ್ದ್ದಂ ।
ಕಡೆಗಾಲದಪೊಡೆವಸಿಡಿಲವೋಲ್ಸುಗ್ರೀವಂ ॥ 179

ಇರೆವಾಮಹಸ್ತದೊಳ್ಬಿ ।
ಲ್ತಿರುವಂಗೊಲೆಗೊತ್ತಿಚಕ್ರಮಂಚಲ್ಲಿಸುವೆಂ ॥
ಬರಲೀಯೆನೆಂದುಲಾಂಗಲ ।
ಕರಂಗಳಂಪಿಡಿದುಪವನನಂದನನಿರ್ದ್ದಂ ॥ 180

ವಿಕ್ರಮಕರ್ಕ್ಕಶನೀತನೆ ।
ಶಕ್ರನೆನಲ್ಪಿಂಗೆದಂಗದಂವಜ್ರದರು ॥
ಕ್ಷಕ್ರಂದೆಸೆಯಂದಳ್ಳಿಸೆ ।
ಚಕ್ರಮನಾಕ್ರಮಿಸಲೆಂದುತಱಿಸಂದಿರ್ದ್ದಂ ॥ 181

ವ ॥ ಅಂತವರ್ಸ್ಸಹಸ್ರಯಕ್ಷರಕ್ಷಿತಮಪ್ಪ ಸುದರ್ಶ್ಶನಚಕ್ರದ ಬರವನಭಿವೀಕ್ಷಿಸುತ್ತಿ
ರ್ಪ್ಪುದುಮತ್ತದಶಮುಖಂಲಕ್ಷ್ಮಣಂಗಭಿಮುಖನಾಗಿ ॥

ಕಂ ॥ ಅೞಿಗಂಡಿನೊಳೇಂಕೈದುವ ।
ನುೞಿಕಕ್ತಿಯೊಳಾದಸಾವನೆಂತಾನುಂವಮುಂ ॥
ಕಳಿದಿಂಸಾಯದಿರಾಂತರ ।
ನುಳಿವೆಂತಾಡುಗುಮೀಚಕ್ರಧಾರಾಚಕ್ರಂ ॥ 182

ವ ॥ ಎಂದುಮೂದಲಿಸಿ ॥

ಕಂ ॥ ತಿರುಪೆಧರಾಚಕ್ರಂಕೋಃ ।
ವರಚಕ್ರದತೇಜದೆತಿಱಿದುದೆಂಟುಂದೆಸೆತ ॥
ಳ್ತುರಿದುವುಚಕ್ರದಬಿಸುಪಿಂ ।
ಸುರಸಂಕುಳಮಗಿದುತೆಗೆದುದಿರ್ದ್ದೆಡೆಯಿಂದಂ ॥ 183

ವ ॥ ಆಗಳದಂಕಂಡು ॥

ಉ ॥ ಕಾವವರಾರೊಲಕ್ಷ್ಮಣನನಕ್ಕಟಸೀತೆಯಬೇವಸಕ್ಕೆ ಕಾ ।
ಲಾವಧಿಯಾದುದಿಲ್ಲೆನೆಸುರಾಸುರಮಂಡಳವಾರೆಹರ್ಷ್ಷದಿಂ ॥
ರಾವಣಸೈನಿಕಂಕಪಿಬಲಂಬಿೞ್ತೋಡುವಿನಂತ್ರಿಲೋಕವಿ ।
ದ್ರಾವಣನಿಟ್ಟನಾಖಚರಚಕ್ರಿಸುದರ್ಶ್ಶನಚಕ್ರರತ್ನದಿಂ ॥ 184

ವ ॥ ಅಂತಿಡುವುದು ಮಾಱಚಕ್ರರತ್ನಂ ತಂನನಾಕ್ರಮಿಸಲಿರ್ದ್ದಹನುಮದಾದಿಗಳದಿವ್ಯಾ
ಯುಧಂಗಳನೊಟ್ಟಯಿಸ್ಸಲಕ್ಷ್ಮೀಧರನಂಮುಟ್ಟೆವೆಂದುಮೂಱುಸೂಳ್ಬಲಗೊಂಡಾತ
ನಬಲದಮುಯ್ಯನಕೆಲದೊಳಿರ್ಪ್ಪುದುಮದಂಲಕ್ಷ್ಮೀಧರನವಳೋಕಿಸುತ್ತುಮಿರೆ
ರಾಮಸ್ವಾಮಿಲಕ್ಷ್ಮಣನಿನಗೆ ಚಕ್ರರತ್ನಂದೊರೆಕೊಂಡುದದನೆಕೊಂಡಿಡೆಂದುಪೆಸ
ಸುವುದುಮದಕ್ಕೆಲಕ್ಷ್ಮಣಂದಕ್ಷಿಣಭರತಧಾತ್ರಿಗಭಯಹಸ್ತಮೆನಿಪ್ಪತಂನದಕ್ಷಿಣ
ಹಸ್ತಮಂನೀಡೆ ॥

ಕಂ ॥ ಲಂಕಾಧೀಶನಜಯವಧು ।
ಪಂಕಜನಾಭಂಗೆಕೂರ್ತ್ತುರಣಮುಖದೆಡೆಯೊ ॥
ಳ್ಮಂಕೊಟ್ಟಟ್ಟಿದರತ್ನದೆ ।
ಕಂಕಣಮೆಂಬಂತೆಕಯ್ಗೆವಂದುದುಚಕ್ರಂ ॥ 185

ವ ॥ ಆಗಳ್ಚಕ್ರಪಾಣಿಖೇಚರಚಕ್ರವರ್ತ್ತಿಯನಿಂತೆಂದಂ ॥

ಮಲ್ಲಿಕಾಮಾಲೆ ॥ ನಿಂನನಟ್ಟಿದಚಕ್ರಮುಂಬೆಸಕೆಯ್ಯಲೊಲ್ಲದೆಬಿಟ್ಟುಬಂ ।
ದೆಂನನಾಶ್ರಯಿಸಿತ್ತುಕೆಂಮನೆಕಾದಿಸಾಯದೆಲಂಕೆಯೊ ॥
ಳ್ನಿಂನಪುತ್ರಕಳತ್ರಮಿತ್ರರೊಳೊಂದಿರಾಜ್ಯವಿಭೂತಿಯೊ ।
ಳ್ಮಂನಿನಂತಿರುಬೇಡಿಕೊಂಡಭಯಪ್ರದಾನಮನಣ್ಣನೊಳ್ ॥ 186

ಕಂ ॥ ಅಸದಾಗ್ರಹಮಂಬಿಟ್ಟೊ ।
ಪ್ಪಿಸುಸೀತಾದೇವಿಯಂಜಗಜ್ಜನನಿಯನ ॥
ರ್ಚ್ಚಿಸುರಾಮಸ್ವಾಮಿಯಚರ ।
ಣಸರೋರುಹಮಂಕಿರೀಟಮಣಿಮಂಜರಿಯಿಂ ॥ 187

ವ ॥ ಎನೆದಶಮುಖಂಕೋಪಶಿಖಿಯಿಂನಂದುವಸೊಡರಿನಂತುದ್ಧುರಿದು ॥

ಮ ॥ ಎಲೆಪಾಱುಂಬಳಿಪೋಗೆಪೋದುದೆಸುಮಿತ್ರಾಪುತ್ರಮತ್ಪೌರುಷಂ ।
ಪಲವಂನೀಂಗೆಲಿಯುಂದದಿಂಗಳಪದಿಕ್ಕೈರ್ಲ್ಲಾಸಮಂತೂಗಿದೀ ॥
ತೊಲೆಯೊಳ್ದಕ್ಷಿಣಬಾಹುದಂಡದೊಳಿದಿಕ್ಕೆರ್ಗ್ಗಲ್ಗಂಡರಾರೆಂದುಮೆ ।
ಯ್ಗಲಿಪಾಯ್ದಂರಥದಿಂನೆಲಕ್ಕೆಜಡಿಯುತ್ತುಂಚಂದ್ರಹಾಸಾಸಿಯಂ ॥ 188

ವ ॥ ಅಂತುಪೊಡರ್ಪ್ಪುಗಿಡದತಿಭರದಿನಿೞಿಯಲನುಗೆಯ್ದುಬರ್ಪ್ಪದಂಕಂಡುಕೋಟಿಕ
ಸಿಲೆಯನೆತ್ತಿದಮಹಾಸತ್ವಂಸುದರ್ಶನಚಕ್ರದಿಂದಿಡುವುದುಂ ॥

ಮಾಸ್ರ ॥ ಹೃದಯಂಸೀತಾನಿಮಿತ್ತಂಮನಸಿಜನಿಸೆಪಂಚೇಷುವಿಂಭಿಂನಮಾಗಿ ।
ರ್ದ್ದುದಱಿಂಲಕ್ಷ್ಮೀಧರಂಕೋಪದಿನಿಡಿಪೆಜಿತೇಂಚಕ್ರರತ್ನಕ್ಕೆಪಾಡಾ ॥
ದುದೆನಲ್ಕಟ್ಟುಚ್ಚಿರ್ಜಂನಿಂಪೊೞಮಡೆವಿಗತಪ್ರಾಣನಾದಾನವೇಂದ್ರಂ ।
ತ್ರಿದಶೇಂದ್ರಂವಜ್ರದಿಂದಿಟ್ಟೊಡೆನಡುಗೆನೆಲಂಬಟ್ಟುಬೀೞ್ವಂತೆಬಿರ್ದ್ದಂ ॥ 189

ವ ॥ ಅಂತು ಚಕ್ರಹತಿಯಿಂಧರಾಚಕ್ರದೊಳ್ಬಿರ್ದ್ದ ॥

ಚ ॥ ಅಸುರನನರ್ಘ್ಯಕೋಣಮಣಿಭೂಷಣದೀಧಿತಿಯೊಳ್ಕಿಱಿಟದೊ ।
ಳ್ಮಸುಗುವಪದ್ಮರಾಗರುಚಿಯೊಳ್ಪ್ರಾಜಿಪೊಣ್ಮುವರಕ್ತವಾರಿಯೊ ॥
ಳ್ಮಸುಕೆರಣಾವಲೋಕನಕುತೂಹಲದಿಂನೆರೆದಪ್ಸರೋಗಣ ।
ಕ್ಕಸುರಕುಲಾಧಿದೇವತೆಚಿತಾನಲನಿಂಸುಡುವಂತೆತೋಱಿದಂ ॥ 190

ಮಾಸ್ರ॥ ಅಸಿರತ್ನಂಚಕ್ರರತ್ನಂಬಡೆದನಮಿತಶಸ್ತ್ರಾದಿದೈವಂಗಳಂಸಾ ।
ಧಿಸಿದಂಕೈಲಾಸಮಂಚಾಳಿಸಿದನಖಿಲದಿಕ್ಪಾಲರಂಗೆಲ್ದನಂತ ॥
ಪ್ಪಸುರೇಂದ್ರಂತಂನಶಸ್ತ್ರಾನನದೊಳ್ಮರಣಪ್ರಾಪ್ತನಾದಂದಲೆಂದಂ ।
ದಸತೀಸಂಭೋಗಕೇಳೀರತರುೞಿದವರ್ಗಳ್ಸಾವುದೇನಾವಚೋದ್ಯಂ ॥ 191

ವ ॥ ಅಂತುದಶಾನನಂಯಮಾನನಮಂಪುಗುವುದುಂ ॥

ಚ ॥ ಸುರಿದುದುಪುಷ್ಪವೃಷ್ಟಿಸುರದುಂದುಭಿಘೂರ್ಣಿಸಿದತ್ತುಪೇಂದ್ರನಂ ।
ಪರಸಿದುದಳ್ಕಱಿಂಸುರಗಣಂನಿಮಿರ್ದತ್ತುಜಯಧ್ವಜಂನಿಶಾ ॥
ಚರಬಲಮೋಡಿದತ್ತುಭಯಘೋಷಣಮುಣ್ಮಿದುದಬ್ಧಿಘೋಷಮಂ ।
ಪರಿಭವಿಸಿತ್ತುವಾನರಪತಾಕಿನಿಯೊಳ್ಜಯಯಾನಕಸ್ವನಂ ॥ 192

ವ ॥ ಆಗಳವನೀತಳದೊಳ್ಬಿರ್ದ್ದಿರ್ದ್ದರಾವಣನಂ ವಿಭೀಷಣಂಕಂಡು ಸಹೋದರಸ್ನೇಹಕಾರಣಮಾಗೆ ಮೂರ್ಛೆವೋಗಿ ಶೀತಳಕ್ರಿಯೆಗಳಿಂದೆಂತಾನುಮೆೞ್ಚತ್ತು ಮತ್ತಮತಿಪ್ರಳಾಪಂಗೆಯ್ದು ಶೋಕವಿಕಳನಾಗಿರ್ದ್ದಸಿತ್ತ ರಾವಣಂಗೆಮರಣಮಾದುದನಱಿದು ರಂಭೆಯುಂ ಚಂದ್ರಾನನೆಯುಂ ಚಂದ್ರಿಕೆಯುಂ ಪ್ರವರೆಯುಂ ಊರ್ವ್ವಸಿಯುಂ ಮಂಡೋದರಿಯುಂ ಕಮಳೆಯುಂ ಕಮಳಾನನೆಯುಂ ರುಕುಮಿಣಿಯುಂ ರತ್ನಮಾಲೆಯುಂ ಶ್ರೀಮತಿಯುಂ ಶ್ರೀಮಾಲೆಯುಂ ಶ್ರೀಕಾಂತೆಯುಂ ಸಂಧ್ಯಾಮಾಲೆಯುಂ ತಟಿನ್ಮಾಲೆಯುಂ ಚಂದ್ರೆಯುಂ ಅನಂಗಸುಂದರಿಯುಂ ವಾನಂಧರೆಯುಂ ವಸುಂಧರೆಯುಂ ಪ್ರಭಾವತಿಯುಂ ಪದ್ಮಾವತಿಯುಂ ಭಾನುಮತಿಯುಂ ಪ್ರೀತಿಯುಂ ಮನೋವೇಗೆಯುಂ ರತಿಕಾಂತೆಯುಮೆಂಬಿವರ್ಮೊದಲಾಗೆ ನಾಲ್ವತ್ತೆಣ್ಟಾಸಿರಮಂತಃಪುರ ಪುರಂಧ್ರಿಯರ್ಪ್ಪೆರ್ವ್ವಗಂ ಬಂದಾತನಕಳೇವರಮಂಕಂಡು ತಕ್ಕೈಸಿಕೊಂಡು ಮೂರ್ಛೆವೋಗಿ ಬಿರ್ದ್ದರ್ಕಿಱಿದುಂಬೇಗದಿಂದೆೞ್ಚತ್ತು ವಿಷಾದವಹ್ನಿಗಾಜ್ಯಾಹುತಿಗಳಾಗಿ ॥

ಕಂ ॥ ನಿಂನಂತಪ್ಪುರದಕಾಂತೆಯ ।
ರಂನೋಡದೆನುಡಿಯದಿಂಬುಕೆಯ್ಯದೆಪದಪಿಂ ॥
ಮಂನಿಸದೆಮುಳಿದತೆಱದಿಂ ।
ನಿಂನಿರ್ದ್ದಿರವಾವಕಾರಣಂಖಚರಪತೀ ॥ 193

ಚ ॥ ಕರಿಹರಿಹಂಸಮೀನಮಕರಾದಿಮಹಾಧ್ವಜವಾರಮುಂಪೆವೇ ।
ಳ್ಪರಿವೃಪ್ರೊನಿಂನಬೆಳ್ಗೊಡೆಯತಣ್ಣೆಳಲೊಳ್ಕಿಲಲಾರ್ತ್ತಯೋಗ್ಯರಾ ॥
ರ್ಸ್ಸುರನರಕಿಂನರೋರಗರನಾಳ್ವೆಸಕೆಯ್ಸುವುದಾತ್ತರಿಂನದಾ ।
ರ್ಭ್ಭರತವಸುಂಧರಾವಳಯಮಂಪರಿರಕ್ಷಿಪರಾರ್ದ್ದಶಾನನಾ ॥ 194

ಉ ॥ ದುರ್ಮ್ಮತಿದಾತ್ರನೀಂನಿನಗೆದುಸ್ಥಿತಿಸಾರ್ದ್ದುದುನಿಂನಪೆಂಡಿರಿಂ ।
ನಾರ್ಮ್ಮಧುಮಾಸದೊಳ್ನಿಜವಿನೋದವನಂಗಳಪಾದಪಂಗಳೊ ॥
ಳ್ಪೆರ್ಮ್ಮೆಲೆಯೊತ್ತಿನಿಂಕುರವಕಕ್ಕೆವಿಕಾಸಮನುಂಟುಮಾಳ್ಪರಿಂ ।
ನಾರ್ಮ್ಮುಖಸೀಧುಸೇಕದೊಳೆಕೇಸರದೊಳ್ಪಡೆವರ್ವ್ವಿಕಾಸಮಂ ॥ 195

ಮ ॥ ದಿವಮಂನೀಂಪುಗೆಖೇಚರೇಂದ್ರತರಳಾಪಾಂಗಪ್ರಭಾಪಾತದಿಂ ।
ದವರೋಧಾಂಗನೆಯರ್ಕ್ಕಳಾರ್ತ್ತಿಳಕದೊಳ್ಪೂಗೊಂಚಲಂಮಾಳ್ಪರಿಂ ॥
ನವನೀವಲ್ಲಭನಿಂನನಂದನದಶೋಕಾನೋಕಹಕ್ಕಾರೊಪ ।
ಲ್ಲವಮಂಪುಟ್ಟಿಸುವರ್ವ್ವಿಳಾಸವತಿಯರ್ಪ್ಪಾದಪ್ರಹಾರಂಗಳಿಂ ॥ 196

ಉ ॥ ಇಂಕಡುಕೆಯ್ದುದಿಕ್ಪತಿಗಳಳ್ಕೆವಿನಂತ್ರಿಜಗದ್ವಿಭೂಷಣ ।
ಕ್ಕಂಕುಶಮಿಕ್ಕಿದಿಗ್ಗಜಮನೋಡಿಸಲುಂವಿಜಯಾರ್ದ್ಧಶೈಲದಿಂ ॥
ತೆಂಕಣಧಾತ್ರಿಯಂತನಗೆಕಂಕಣದಂತಿರೆಕಯ್ಗೆಮಾಡಲುಂ ।
ಲಂಕೆಯನಾಳಲುಂನೆಱೆವದಾನವವಲ್ಲಭರಾರ್ದ್ದಶಾನನಾ ॥ 197

ಕಂ ॥ ಬಾಲಿಯನಂಜಿಸಿಭುಜಬಲ ।
ಶಾಲಿಯನೋಡಿಸಿಸಹಸ್ರಬಾಹುವನಿಂನಾ ॥
ಬಾಳಮಸೆಯಿಂದಶಾನನ ।
ಕೀಳ್ಮಾಡುವರಾರೊನೆಲದೊಳಾಳ್ದರಸುಗಳಂ ॥ 198

ದಿವಿಜಭವನಕ್ಕೆಹಾದಾ ।
ನವೇಂದ್ರನೀನತಿಥಿಯಾದೆತುಡುವವರಿಂನಾ ॥
ರ್ನ್ನವಮುಖಭೂಷಣಮಂಸ್ವೈ ।
ರವಿಹಾರದಿನೇಱುವನ್ನರಾರ್ಪ್ಪುಷ್ಪಕಮಂ ॥ 199

ಉ ॥ ಅತ್ತಸುರಾಸುರರ್ನ್ನೆರೆದುಬೊಬ್ಬಿಡೆನೀಂಕಿಱುಗುಂಡನೆತ್ತುವಂ ।
ತೆತ್ತಿದಬಂನಮಂಬಗೆಗೆತಂದುಕುಬೇರಗಿರೀಂದ್ರವಿಶಾರ್ಷ್ಟಮೆ ॥
ಯ್ವೆತ್ತಿರೆನಿರ್ಝ್ಝರೋದಕದಿನೋಕುಳಿಯಾಡುವಿನಂದಶಾಸ್ಯದೇ ।
ವ್ರೋತ್ತಮಕಾಮಿನೀಜನದತೋಳ್ವಲೆಯೊಳ್ತೊಡರಲ್ಕೆತಕ್ಕುದೇ ॥ 200

ಎತ್ತುವಿನಂಮಹೋತ್ಸವಪತಾಕೆಗಳುತ್ಸವತೂರ್ಯನಿಸ್ವನಂ ।
ಬಿತ್ತರಿಪಂನವಂತಕನಬಾರಿಗೆಸೋವತವಾದೆದೇವದು ॥
ವ್ಯರ್ಲತ್ತವಿರೋಧಿಸಿದ್ಧರ್ಗಳನಕಾಳಗದೊಳ್ಪಡಿಪೆತ್ತಸತ್ತಪಂ ।
ನಿತ್ತವಿರೋಧಿಭೂಭುಜರಖೇಚರರಾಜರರಾಜಧಾನಿಯೊಳ್ ॥ 201

ವ ॥ ಎಂದತಿಪ್ರಳಾಪಂಗೆಯ್ಯುತ್ತುಂ ರಾವಣನಚರಣೋಪಾಂತದೊಳ್ಮೆಯ್ಯನೀಡಾಡಿಹಾ
ಹಾದಶಾಸ್ಯಕೀರ್ತಿವಲ್ಲರೀವಳಯಿತದಿಶಾಸ್ಯ ಹಾಹಾವಿಳಾಸಮಕರಧ್ವಜ ಖೇಚರ
ಕುಲಧ್ವಜ ಹಾಹಾತ್ರಿಲೋಕವಿಜಯಿಾಜಯಶ್ರೀಸಾಲಭಂಜಿಕಾರಂಜಿತಭುಜಸ್ತಂ
ಭನಿಂನಂತಃಪುರದಕಾಂತಾಜನದಕದಂಪಿನೊಳ್ಮೃಗಮದಪತ್ರಲೇಖೆಯುಂಬರೆಯ
ಲುಂಬಾಹುಲತೆಯೊಳ್ಪಿಂಡುಗಂಕಣಮನೇಱಿಸಲುಂ ಘನಸ್ತನಮಂಡಲದೊಳ್ಮಲ
ಯರುಹ ಚರ್ಚೆಯನೊಡರ್ಚಲುಂ ನಿತಂಬಬಿಂಬದೊಳ್ನಲತೊಂಗಲಂತೊಡ
ರ್ಚಲುಂ ಪದಪಯೋಜದೊಳ್ಮಣಿನೂಪುರಮನಳವಡಿಸಲು ವತಿಪರಿಚಯದಿನಲ
ಸಿದಂತೆ ದಿವಿಜಕಾಂತಾಸಂಭೋಗಸುಖಲೋಲನಾಗಿ ॥

ಕಂ ॥ ದಿಗಿಭಕ್ಕೆ ಕುಲಾದ್ರಿಗೆಪ ।
ನ್ನಗಪತಿಗತಿಭಾರವಾಗೆಭೂಭಾರಮನೇ ॥
ಕೆಗಡಂನೀನೊಪ್ಪಿಸಿದ ।
ಜ್ಜೆಗೆತಲ್ಲಣವಾಗೆದಿವಕೆಧಾಳಿಯನಿಟ್ಟೈ ॥ 202

ವ ॥ ಎಂದುಪಲತೆಱದಿಂಪಳಯಿಸುವ ಪೌಲಸ್ತ್ಯನಕುಲಸ್ತ್ರೀಯರಂಕಂಡು ರಾಮಸ್ವಾ
ಮಿಕರುಣಿಸಿ ರಾವಣಂಗೀಮರಣಮಾತನದುರ್ವ್ವಿಳಸದಿಂದಾದುದಲ್ಲದೆನಂಮಿಂದಾದು
ದಲ್ಲೆಂದೆಲ್ಲಗರ್ಗಂಸಂಸಾರಸ್ವರೂಪಮಿಂತುಟುವೆಲವಾರಜೀವನಮುಂ ಜವ್ವನ
ಮುಂ ಧನಧಾನ್ಯಮುಮಿಷ್ಟಸಂಯೋಗಮುಂ ಕ್ಷಣದೆನಶ್ವರಂಗಳದಱಿಂದದಕ್ಕೆ
ಳಲದಲಸದೆಸ್ಥೈರಿಸುವುದೆಂದವರುಮಂವಿಭೀಷಣನುಮಂ ಸಂತಯಿಸಿ ॥

ಕಂ ॥ ಬವರಂಗೆಯ್ದಾತಂಗಾ ।
ಯ್ತುವಸಾನಂತಕ್ಕುದಲ್ತುಪಗೆಗೊಳ್ವುದುಮಿ ॥
ಕ್ಕವರೊಳ್ನಮಗೆಂದಂರಾ ।
ಘವಂಗೆಸೆರ್ಚ್ಚರಿತದೆಸಕವೊಂದಚ್ಚರಿಯೇ ॥ 203

ವ ॥ ಎಂದು ತಾನುಂ ಲಕ್ಷ್ಮಣನುಮಾನೆಯನೇಱಿಪಲಸಾರ್ವಮಂತ್ರಬ್ಬರ್ಗಳಸಿ ಬರೆ
ಮಂಡೋದರಿಯಸಮಿಾಪಕ್ಕೆ ಬಂದಾಕೆಯಶೋಕಮಂ ಸಂಸಾರಸ್ವರೂಪಮಂಪೇ
ಳ್ದುಪಿಂಗಿಸಿಬಳಿಯಂಕರ್ಪೂರದಾಗರುಗೋಶೀರ್ಷಚಂದನಾದೀಂಧನಂಗಳಿಂ ದಾವ

ಣನಂ ಯಥಾವಿಧಿಯಿಂಸಂಸ್ಕರಿಸಿ ತದನಂತರಮಿಂದಗಿಮೇಘವಾಹನಕುಂಭಕರ್ಣ
ಮಯಮಾರೀಚಾದಿಗಳಂ ಬರಿಸಿಸೆಱೆಯಂ ಬಿಡಿಸಿಪಲತೆಱದಿನವರಶೋಕಮನುಪ
ಶಮಿಯಿಸಿ ॥

ಕಂ ॥ ರಾವಣನೋರ್ವನೆಕಳೆದಂ ।
ನೀವಿನಿಬರುಮಳ್ಕಱಿಂವಿಭೀಷಣನೊಳ್ಸ ॥
ದ್ಭಾವಮನೆಮೆಱೆದುಖೇಚರ ।
ಶ್ರೀವಿಭವಮನೆಂದಿನಂದದಿಂದನುಭವಿಸಿಂ ॥ 204

ವ ॥ ಎಂಬುದುಂಕುಂಭಕರ್ಣಾದಿಗಳ್ರಾಮಲಕ್ಷ್ಮಣರ ನಿಷ್ಕಷಾಯತ್ವಮುಮಂಸಂ
ಸಾರಭೀರುತ್ವಮುಮಂಧೈರ್ಯ್ಯಮುಮಂಬಾಹುವೀರ್ಯ್ಯಮುಮಂಮೆಚ್ಚಿಪೊಗ
ೞ್ದುಂನೆಮಗೆಸಂಸಾರಸುಖಂಸಾಲ್ಗುಮೆಂದುಭೋಗನಿರ್ವೇಗಪರಾಯಣರಾಗಿನುಡಿ
ದುರಾಮಲಕ್ಷ್ಮಣರ್ವೆರಸುಪದ್ಮಸರೋವರದೊಳ್ಜಲದಾನಕ್ರಿಯೆಯಂನಿರ್ವ
ರ್ತ್ತಿಸಿದಿಂಬೞಿಯಂನೇಸರ್ಪಡುವಸಮಯದೊಳ್ ॥

ಕಂ ॥ ಅನುಪಮರಱುಸಾಸಿರ್ವ ।
ರ್ಮ್ಮುನಿಗಳ್ವೆರಸಪ್ರಮೇಯಮುನಿನಾಥರ್ವ್ವಂ ॥
ದಿನಪಥದಿಂಲಂಕೆಯನಂ ।
ದನವನಮಧ್ಯದೊಳ್ನಿಯಮನಿಯಮಿತರಿರ್ದ್ದರ್ ॥ 205

ವ ॥ ಅಂತಿರ್ಪ್ಪುದುಂ ॥

ಕಂ ॥ ಪ್ರಕಟಿಸಿದುದುಶುಕ್ಲಧ್ಯಾ ।
ನಕೃಶಾನುಜ್ವಾಲೆಯಿಂದವರ್ಸ್ಸುಡೆಮೂಲ ॥
ಪ್ರಕೃತಿಗಳೊಳ್ಘಾತಿಗಳಂ ।
ಸಕಲಪದಾರ್ತ್ಥಾವಭಾಸಿಕೇವಲಬೋಧಂ ॥ 206

ವ ॥ ಇತ್ತಧಾತಕೀಷಂಡದೊಳ್ತೀರ್ತ್ಥಂಕರಕುಮಾರಜನ್ಮೋತ್ಸವಮಪ್ಪುದುಂಚತುರ್ನ್ನಿ
ಕಾಯದೇವನಿಕಾಯಂ ಭಗವಜ್ಜನ್ಮಾಭಿಷವಣಮಂತೀರ್ಚ್ಚಿಲಂಕೆಯಮೇಲೆಬ
ರುತ್ತುಂ ಕುಸುಮಾಯುಧೋದ್ಯಾನದೊಳ್ಸರ್ವ್ವಜ್ಞತ್ವಮಂ ಪೆತ್ತಿರ್ದ್ದಪ್ರಮೇ
ಯಭಟ್ಟಾರಕರಂಕಂಡು ಬಲಗೊಂಡುಪೊಡವಟ್ಟು ಪೂಜಿಸುವಸಮಯದೊ
ಳ್ಘಂಕನೆಪಸರಿಸುವಶಂಖಪಟಹಾದಿವಿವಿಧವಾದ್ಯರವಂಗಳಂ ರಾಮಲಕ್ಷ್ಮಣ
ರುಂವಾನರಧ್ವಜರುಂಕೇಳ್ದುಜಿನಪೂಜೋತ್ಸವಪಟಹರವಂಗಳೆಂದಱಿದಿಂದ್ರಜಿತು
ಮೇಘವಾಹನಕುಂಭಕರ್ಣಾದಿಗಳಿಂಪರಿವೃತರಾಗಿ ಭಟ್ಟಾರಕರಿರ್ದ್ದೆಡೆಗೆವೋಗಿ ॥

ಉ ॥ ಆರಘುವಂಶಕೇತುಬಲಗೊಂಡುಲಲಾಟದೊಳೊಪ್ಪೆಹಸ್ತಪಂ ।
ಕೇರುಹಕುಟ್ಮಲಂವಿನಮಿತಂವಿವಿಧಾರ್ಚ್ಚನೆಯಿಂದಘೌಘಸಂ ॥
ಹಾರಕರಂಭವಾಂಬುನಿಧಿತಾರಕರಂನೆಗಳ್ದಪ್ರಮೇಯಭ ।
ಟ್ಟಾರಕರಂರಘುಪ್ರವರನರ್ಚ್ಚಿಸಿದಂಕವಿತಾಮನೋಹರಂ ॥ 207

ಗದ್ಯ ॥ ಇದುಪರಮಜಿನಸಮಯಕುಮುದಿನೀಶರಚ್ಚಂದ್ರಬಾಳಚಂದ್ರಮುನೀಂದ್ರಚರಣ ನಖಕಿರಣಚಂದ್ರಿಕಾಚಕೋರಂಭಾರತೀಕರ್ಣಪೂರಂ ಶ್ರೀಮದಭಿನವಪಂಪವಿರಚಿ ತಮಪ್ಪರಾಮಚಂದ್ರಚರಿತಪುರಾಣದೊಳ್ರಘುವೀರವಿಜಯವರ್ಣನಂಚತುರ್ದ ಶಾಶ್ವಾಸಂ ॥

ಪಂಚದಶಾಶ್ವಾಸ ಪ್ರಾರಂಭಃ.

ಕಂ ॥ ಶ್ರೀರಾಮಾರಮಣಂವಾ ।
ಕ್ಷ್ಮೀರಮಣೀವಲ್ಲಭಂಯಶಶ್ರೀಕಾಂತಂ ॥
ವೀರಶ್ರೀಪತಿಮುನಿವೃಂ ।
ದಾರಕಪದವಿನತನಾದನಭಿನವಪಂಪಂ ॥ 1

ವ ॥ ಅಂತುನಿರ್ಭರಭಕ್ತಿಯಿಂವಂದಿಸಿಸಂಸಾರಕ್ಷಯಕಾರಣಮಪ್ಪಧರ್ಮಮುಮನಾಪ್ತಗುಣಂಗಳುಮಂಜೀವಾದಿತತ್ವಭೇದಂಗಳುಮಂಭಟ್ಟಾರಕರ್ಬೆಸಸೆಕೇಳ್ದುಸಂತುಷ್ಟಚಿತ್ತರಾದನಂತರಮಿಂದ್ರಜಿತುಮೇಘವಾಹನಕುಂಭಕರ್ಣ್ಣಮಯಮಾರೀಚಾದಿಗಳ್ತಂತಮ್ಮಭವಾಂತರಮನವರ್ಬೆಸಸೆಕೇಳ್ದಲ್ಲಿಯೇದೀಕ್ಷೆಗೊಂಡರ್ಮ್ಮಂಡೋದರಿಯುಂನಾಲ್ವತ್ತೆಣ್ಛಾಸಿರವಿದ್ಯಾಧರಿಯರ್ವೆರಸುಶಶಿಕಾಂತಾಯಿರ್ಕೆಯಾಸಮಕ್ಷದೊಳ್ದೀಕ್ಷೆಗೊಂಡುಶುಭಧ್ಯಾನತಾತ್ಪರ್ಯದಿನಿರ್ದ್ದಳಿತ್ತಲ್ರಾಮಲಕ್ಷ್ಮಣರ್ಪ್ಪನನ್ನಮಸ್ಕಾರಂಗೆಯ್ದುಮಗುಳ್ದುಸುಗ್ರೀವಾಂಗದಪ್ರಭಾಮಂಡಲಮರುತ್ಸವಿರಾಧಿತಪ್ರಮುಖವಿದ್ಯಾಧರಪರಿವೃತರ್ತ್ರಿಜಗದ್ಭೂಷಣಗಜಾರೂಢರಾಗಿ ॥

ಮಸ್ರ॥ ಗುಡಿಯುಂಬಿಂದಂಗಳುಂಮುಂದುರುವರಿಯೆದಿನಾಧೀಶಬಿಂಬಂಬರಂದಿಂ ।
ಕಿಡೆಶಂಖಧ್ವಾನಮಾಶಾವಿವರಮನಿತುಮಂತೀವೆಭೇರೀರವಂಬೆ ॥
ಳ್ಗೊಡೆಯುಂಚಿತ್ರಾತಪತ್ರಂಗಳುಮಜನಿಸೆಚಂಡಾಂಶುಮಂಮುಟ್ಟೆವಂದ ।
ರ್ಕ್ಕಡುಚೆಲ್ವಂಪೆತ್ತಲಂಕಾಪುರದುಪವನಮಂರಾಮಲಕ್ಷ್ಮೀಧರರ್ಕ್ಕಳ್ ॥ 2

ವ ॥ ಅಂತುಬಂದು ॥

ಉ ॥ ಐಕ್ಕರಕಾಪಿನೊಳ್ನಡೆಯೆಮುಂದೆಸುದರ್ಶನಚಕ್ರರತ್ನಮಿ ।
ರ್ಪ್ಪಕ್ಕದೊಳಂಪಿಯಕ್ಷರಕುಲಪ್ರಭುಗಳ್ಬರೆಭೂಷಣಾಂಕುಗ ॥
ಳ್ತಿಕ್ಕನೆತೀವೃವಂತುನಭಮಂದನುಜಾಧಿಪರಾಜಧಾನಿಯಂ ।
ಪೊಕ್ಕರಯೋಧ್ಯೆಯಂಪುಗುವವೋಲಸಮಾನಬಲರ್ಬಲಾಚ್ಯುತರ್ ॥ 3

ವ ॥ ಅಂತುಪುರಮಂಪೊಕ್ಕುರಾಜವೀಧಿಯೊಳಗನೆಸೀತಾದರ್ಶನೋತ್ಸುಕನಾಗಿಬರ್ಪ್ಪರಾಮಸ್ವಾಮಿಯುಮನವನೆಱಿದುಜಾಮರಗ್ರಾಹಿಣಿಯರ್ದ್ದೇವಸೀತಾದೇವಿಯರಿತ್ತಲೀಪುಷ್ಪಕಪ್ರಕೀರ್ಣ್ಣಕಮೆಂಬನಗದನಂದನದೊಳಿರ್ಪ್ಪರೆಂದುಬಿಂನವಿಸುವುದುಮಾದೆಸೆಗೆವಿಜಯವಾರಣಮನನೆಡುನೂಂಕಿರಾಘವಂಬಪ್ಪಸಮಯದೊಳ್ಸೀತಾದೇವಿಯುಕೆಲದೊಳಿರ್ದ್ದ ಖೇಚರಿಯತ್ತಂನಬರವನಱಿವುವುದುಮಂನೆಗಮೆಯ್ದನಂದು ॥

ಕಂ ॥ ಬಂಬಲನೆಬಾಡಿವಂಜೆಱ ।
ದಂಬುಜಲತೆಯಂತಿರಿರ್ದ್ದಜಾನಕಿಯಂಸೀ ॥
ಲಾಂಬರನೀಕ್ಷಿಸಿವಿಜಯ ।
ಸ್ತಂಬೇರಮದಿಂಸಮುತ್ಸುಕಂಧರೆಗಿಳಿದಂ ॥ 4

ವ ॥ ಅಂತಾನೆಯಿಂದಿಳಿದುಬರ್ಪ್ಪವಲ್ಲಭನವಿಲೋಕನಜನಿತಸಂಭ್ರಮದಿನಾಕಂಪಮಾನ
ಪ್ಪುಕೆಯ್ದು ॥

ಕಂ ॥ ಇದಿರ್ವಂದುಕೈಗಳಂಮುಗಿ ।
ದುದಯಿಸೆಪುಳಕಂಗಳುಣ್ಮೆಘರ್ಮ್ಮಜಲಂಗೆ ॥
ಳ್ಪದಪದ್ಮಕ್ಕೆಱಗಿರ್ದ್ದ ।
ಳ್ಕೆದಱಿದಕುರುಳ್ಗಳೊಳೆನುಱಸೆಮಱಿದುಂಬಿಗಳಂ ॥ 5

ವ ॥ ಆಸಮಯದೊಳ್ ॥

ಚ ॥ ಸತಿಯಪತಿವ್ರತಾಗುಣಸಮೃದ್ಧಿಗೆದರ್ಶನಶುದ್ಧಿಗಳ್ಕೆಱಿಂ ।
ಸ್ತುತಿಯಿಸಿನಿರ್ಜ್ಜರರ್ಕ್ಕಱೆದುಪೂಮಳೆಯಂವಸನಾಂಗರಾಗದಿಂ ॥
ದತಿಶಯದಿವ್ಯಭೂಷಣಗಣಂಗಳನರ್ಚ್ಚಿಸೆನೋಡಿನಾಡೆವಿ ।
ಸ್ಮಿತವದನರಾಗಿಜಾನಕಿಗೆಕ್ಕೈಮುಗಿದರ್ಖ್ಖಚರಾಧಿನಾಯಕರ್ ॥ 6

ಕಂ ॥ ಜಾನಕಿಯಶೀಲಮಂದಿವಿ ।
ಜಾನೀಕಮೆಮೆಚ್ಚಿಪೊಗಳ್ದುಪೂಜಿಸೆರಾಮಂ ॥
ಗಾನಂದಪುಳಕಮಾದುವು ।
ಮಾನಿನಿಯರ್ಮ್ಮಹಿಮೆಗಿಂತುನೋಂತರುಮೊಳರೇ ॥ 7

ವ ॥ ಅನಂತರಂ ಸೀತಾದೇವಿಲಕ್ಷ್ಮೀಧರಂತನಗೆಱಗಿಪೊಡಮಟ್ಟೊಡಾತನಂಪರಸಿನೀಂನಿ
ರ್ನ್ನಿಮಿತ್ತಂಕರಂಸೇದೆವಟ್ಟೆರೆಂದುಮನ್ಯುಮಿಕ್ಕುಶೋಕಿಸುತ್ತಿರ್ದ್ದಲಕ್ಷ್ಮಣನಂರಾ
ಮಂಸಂತಯಿಸಿದಿಂಬಳಿಯಂಪ್ರಭಾಮಂಡಲನಂಕಂಡುಪೊಡಮಟ್ಟೊಡಾತನತಿಪ್ರೀತಿ
ಯಿಂಪರಸೆಮತ್ತಂಸೀತಾದೇವಿಗೆ ಸುಗ್ರೀವನಳನೀಳಾಂಗದಮರುತ್ಸುತಚಂದ್ರಾಭ
ಸುಷೇಣಜಾಂಬವಾದಿಗಳಂಪೆಸರ್ವೆಸರೊಳ್ಪೇಳ್ದುತೋಱಿಸಂತೋಷಮಂಮಾಡಿ॥

ಮ।ಸ್ರ॥ ಸತಿಯುಂತಾನುಂಮದಾಂಧದ್ವಿಪಮನೊಡನೆಬಂದೇಱಿವಿದ್ಯಾಧರಾಧೀ ।
ಶತನೂಜರ್ಸ್ಸುತ್ತಲುಂಮಂಡಳಿಸಿನಡೆಯೆಪೇೞೊಂದುಪೂರ್ಣ್ಣೇಂದುಬಿಂಬಾ ॥
ಕೃತಿಯಿಂಶ್ವೇತಾತಪತ್ರಂಸೊಗಯಿಸೆದೆಸೆಯಂತೀವೆತೂರ್ಯ್ಯಪ್ರಣಾದಂ ।
ಜಿತಶಕ್ರಾವಾಸಮಂರಾವಣನರಮನೆಯಂರಾಘವಂಬಂದುಪೊಕ್ಕಂ ॥ 8

ಕಂ ॥ ತ್ರಿಜಗದ್ಭೂಷಣವರೂದ್ಯ ।
ದ್ಗಜಮಂಕಾಲೋಗ್ರದುಪೊಳಯಿಸುತ್ತಂಕಾಕಮಂ ॥
ವಿಜಿಗೀಷುಲಕ್ಷ್ಮಣಂಮದ ।
ಗಜದಡಿಕಿಲಿದೆನಿಸಿಪೊಕ್ಕನೊಡನರಮನೆಯಂ ॥ 9

ವ ॥ ಅಂತರಮನೆಯಂಪೊಕ್ಕಲ್ಲಿಯಶಾಂತಿಜಿನಭವನಮಂರಾಮಲಕ್ಷ್ಮಣರ್ಸ್ಸಕಲವಿದ್ಯಾಧರರ್ಸ್ಸಹಿತಂಬಲಗೊಂಡುಜಿನಪತಿಯಂಸ್ತುತಿಶತಂಗಳಿಂಸ್ತುತಿಯಿಸಿದಿವ್ಯಾರ್ಚ್ಚನೆಗಳಿಂದರ್ಚ್ಚಿಸಿದಿಂಬಳಿಕ್ಕೆ ಸಹಸ್ರಾಂತಃಪುರಪ್ರಧಾನೆಯುಪ್ಪವಿದಗ್ಧೆ ವೆಸರತಂನಮಹಾದೇವಿಯುಂವಿಭೀಷಣಂರಾಮಸ್ವಾಮಿಯಲ್ಲಿಗಟ್ಟುವುದುಮಾಮಹಾನುಭಾವೆಬಂದುರಾಮಲಕ್ಷ್ಮಣರ್ಗ್ಗಂ ಸೀತಾದೇವಿಗಮೆಱಗಿಪೊಡವಟ್ಟಂಮರಮನೆಗೆಬಿಜಯಂಗೆಯ್ವುದೆಂಬಸಮಯದೊಳ್ವಿಭೀಷಣಂ ಬಂದುಬಿಜಯಂಗೆಯ್ಯಮೆಂದುಸಿಂಹಗರುಡವಾಹನಾರೂಢರಂಮಹಾವಿಭೂತಿಯಿಂನಿಜರಾಜಭವನಕುಯ್ದು ಸಿಂಹಾಸನದೊಳಿರಿಸಿಮಣಿಮಯಭಾಜನದೊಳಗ್ಘ್ರ್ಯಪಾದ್ಯಮಂಕೊಟ್ಟು ॥

ಕಂ ॥ ಅವರ್ಗೆವಿಭೀಷಣನತ್ಯಾ ।
ತ್ಸವದಿಂಬಿದ್ದಿರ್ಕ್ಕಿಮಣಿವಿಭೂಷಣದಿವ್ಯಾ ॥
ನುವಿಲೇಪನದಿವ್ಯಾಂಬರ ।
ನಿವಹಮನೋಲಗಿಸಿವಿನಯಮಂಪ್ರಕಟಿಸಿದಂ ॥ 10

ವ ॥ ಅಂತುನಿರಂತರೋತ್ಸವದಿಂಕತಿಪಯದಿನಂಗಳ್ಪೋಗಿಂಬಳಿಯಮೊಂದು ಶುಭದಿನಮುಹೂರ್ತ್ತದೊಳ್ ॥

ಮ ॥ ಬೆಸಕೆಯ್ವುವುದುಚಕ್ರರತ್ನಮಖಿಲೋರ್ವ್ವೀಚಕ್ರಮಂನೀಮೆಪಾ ।
ಲಿಸಿಮಾಳೋಳಿಯೊಳಿಕ್ಕೆರಾಜಕುಲಮಂಬುತ್ಪಾಹತೂರ್ಯ್ಯಸ್ವನಂ ॥
ದೆಸೆಯಂತೀವೆವಿಭೀಷಣಂಬೆರಸುಸುಗ್ರೀವಾದಿಗಳ್ರಾಘವಂ ।
ಗೆಸುಮಿತ್ರಾತನಯಂಗೆರಾಜ್ಯಸವನೋತ್ಸಾಹಂಗಳಂಮಾಡಿದರ್ ॥ 11

ವ ॥ ಅಂತುಪೂರ್ವ್ವಜನ್ಮಸಂಚಿತಸುಕೃತದಿಂದಿವ್ಯಾಯುಧವಸ್ತುವಾಹನಂಗಳುಮಂದಿವ್ಯಸ್ತ್ರೀಯರುಮಂಸ್ವೀಕರಿಸಿಮುಂನೆತಂಮಬಪ್ಪ್ರಸಮಯದೊಳ್ಮದುವನಿಂದರಸಿಯರಂಕರಸಿತದನಂತರಂಶುಭಮುಹೂರ್ತ್ತದೊಳ್ ॥

ಕಂ ॥ ಅನತಿಶಯರೂಪವಿದ್ಯಾ ।
ವಿನಯಸಮನ್ವಿತೆಯರಂಮಹೋತ್ಸವಪಟಹ ॥
ಧ್ವನಿಪೂರ್ಣ್ಣಂಚಂದ್ರವರ್ದ್ಧನ ।
ತನುಜೆಯರಂಪದೆದುಮದುವೆನಿಂದನುಪೇಂದ್ರಂ ॥ 12

ವ ‖ ಅಂತುರಾಮಲಕ್ಷ್ಮಣರ್ಸ್ಸುಖದಿನಲ್ಲಿಕೆಲವುಕಾಲಮಿರ್ದ್ದರಿತ್ತಲಿಂದ್ರಜಿತುಮೇಘವಾಹನರ್ಕ್ಕೇವಲಜ್ಞಾನಮಂಪಡೆದುನರ್ಮ್ಮದೆಯತಡಿಯೊಳ್ಮುಕ್ತಿಪ್ರಾಪ್ತರಾದರಾತಡಿಯುಪೊಳಲ್ಗೆಮೇಘರವೆಯೆಂಬಪೆಸರತೀರ್ತ್ಥಮಾದುದುತೂರ್ಣ್ಣವತಿಯೆಂಬನಗನಿತಂಬದೊಳ್ಜಂಬುಮಾಲಿತಪಂಗೆಯ್ದಹಮಿಂದ್ರಸ್ಥಾನದೊಳ್ಪುಟ್ಟಿದಂಕುಂಭಕರ್ಣ್ಣಂನರ್ಮ್ಮದೆಯತಡಿಯೊಳ್ಕೇವಲಜ್ಞಾನಪ್ರಾಪ್ತನಾಗಿಮೋಕ್ಷಕ್ಕೆಸಂದುದಱಿನಾಪೊಳಲ್ಗೆಪೀಠರವೆಯೆಂಬಪೆಸರಾಯ್ತುಮಾರೀಚನುಂಕಲ್ಪಗತನಾದಂಮಯನುಮಂಬರಚರಚಾರಣತ್ವಮುಮಂಸರ್ವ್ವೌಷಧಿವೇದಿತ್ವಮುಮನವಧಿಜ್ಞಾನಮುಮಂಪೆತ್ತುಮಲರಹಿತನಾಗಿನೆಗಳ್ದುಜೀವಿತಾವಧಿಯೊಳೀಶಾನಕಲ್ಪಕ್ಕೆಪೋದಂಮಂಡೋದರೀಗಣಿನಿಯರುಮನೇಕಕಾಲಂದುರ್ದ್ಧರಕಾಯಕ್ಲೇಶತಪದಿಂನೋಂಪಿಗಳಂನೋಂತುವಿಹರಿಸುತ್ತುಂವೈತರಣಿನಗನಿತಂಬದಶಾರ್ದ್ದೂಳಗುಹೆಯೊಳಿರ್ದ್ದುಧರ್ಮ್ಮಧ್ಯಾನದಿಂಮುಡಿಪಿಂಬಳಿಯಮೀಶಾನಕಲ್ಪಗತೆಯಾದಳುಳಿದರಸಿಯರುಗ್ರೋಗ್ರತಪಂಗೆಯ್ದುಶುಭಧ್ಯಾನದಿಂಮುಡಿಪಿತಂತಂಮಸ್ಥಾನದೊಳ್ಪುಟ್ಟಿದರ್ಮ್ಮತ್ತಿತ್ತಲಂಕೆಯೊಳ್ರಾಮಲಕ್ಷ್ಮಣರ್ಚ್ಚಕ್ರವರ್ತ್ತಿಗಳಾಗಿಸುಖದಿನಿರ್ಪ್ಪುದುಮಿತ್ತಲ್ ‖

ಕಂ ‖ ನೆನೆದಪರಾಜಿತೆರಘುರಾ ।
ಮನನತಿಶೋಕಪ್ರಬಂಧದಿಂದಿರ್ಪ್ಪುದುಮಾ ‖
ವನಿತೆಯರಮನೆಗೆಬಂದಂ ।
ಘನಪಥದಿಂಭೋಂಕನಿಳಿದುನಾರದಮುನಿಪಂ ‖ 13

ವ ‖ ಅಂತುಬರ್ಪ್ಪದನಪರಾಜಿತಾಮಹಾದೇವಿಕಂಡಿದಿರೆರ್ದ್ದುಬಗೇಱಲಿಕ್ಕಿಬಳಿಯಮಿಚ್ಛಾಕಾರಮಂಗೆಯ್ವುದುಂ ‖

ಕಂ ‖ ನಿಮಗನಿತುಶೋಕಮೇಕಾ ।
ಯ್ತೆಮಗನಿತುಮನಱಿಯೆಪೇಳಿಮೆನೆನಾರದದಿ ‖
ವ್ಯಮುನೀಶ್ವರನನಿತುಮನಾ ।
ಕಮಳಾನನೆನೆಱೆಯೆತೆಱೆಯೆಬಿಂನವಿಸುವುದುಂ ‖ 14

ವ ‖ ಅದಂನಾರದನವಧಾರಿಸಿರಾಮಲಕ್ಷ್ಮಣರ ಕ್ಷೇಮವಾರ್ತ್ತೆಯಂನಿಮಗಿಂದೇತಂದಪೆನೆಂದಪರಾಜಿತಾಮಹಾದೇವಿಯಮನೋವಿಷಾದಮಂಕಳೆದು ‖

ಕಂ ‖ ನೀರದಪಥಕ್ಕೆಭೋಂಕನೆ ।
ನಾರದನೊಗೆದೆಯ್ದಿಲಂಕೆಯಂತನುರುಚಿನೀ ‖
ಹಾರಮನಂದರ್ಪ್ಪಿಸೆಬಲ ।
ನಾರಾಯಣದೇವರಿರ್ದ್ದಸಭೆಯಂಪೊಕ್ಕಂ ‖ 15

ವ॥ ಅಂತುಪುಗುವುದುಂರಾಮಸ್ವಾಮಿನಾರದನಪ್ಪುದನರಿದುಬೇಗಮಿದಿರೆದ್ದುಮಣಿಮಯಾಸನದೊಳಿರಿಸಿಕನಕಪಾತ್ರದೊಳರ್ಘ್ಯಮಂಕೊಟ್ಟುನೀವೀರಣನಿರೀಕ್ಷಣಂಮಾಡದೆತ್ತಲಿರ್ದ್ದಿರೆಲ್ಲಿಂಬಂದಿರೆಂಬುದುಂನಾರದನಿಂತೆಂದನಾನೀದೇಶದಿಂಪೋಗಿಧಾತಕೀಷಂಡದಪರವಿದೇಹದಸುರೇಂದ್ರರಮಣಪುರದೊಳ್ತೀರ್ತ್ಥಕರಜ್ಜನಿಯಿಸಿದೊಡವರ್ಗ್ಗೆಜನ್ಮಾಭಿಷೇಕಮಂಸಕಲಸುರವರರುಸ್ವರಗಿರಿಮಸ್ತಕದೊಳ್ಮಾಳ್ಪುದುಂನೋಡುತ್ತುಮಿರ್ದ್ದೀಗಳಯೋಧ್ಯೆಯಂಪೊಕ್ಕಪರಾಜಿತಾಮಹಾದೇವಿಯರುಮಂಸುಮಿತ್ರಾದೇವಿಯರುಮಂ ಕಂಡೆವವರ್ನಿಮ್ಮನೀಸಮಯದೊಳ್ಕಾಣದಿರ್ದ್ದೊಡೆನಿಶ್ಚಯಂಶರೀರತ್ಯಾಗಂಗೆಯ್ವರೆಂದರಿಪುವುದುಂ ॥

ಕಂ॥ ಅವಮಾತುಮುಟ್ಟೆಕಿವಿಯಂ ।
ರಾಮಂಗಂಲಕ್ಷ್ಮಣಂಗಮುದ್ವೇಗಂನಿ ॥
ಸ್ಸೀಮಂಸಮನಿಸೆತಂಮಂ ।
ತಾಮೆಕ್ಕೃಪಾಶೂನ್ಯರೆಂದುನಿಂದಿಸಿಕೊಂಡರ್ ॥ 16

ವ॥ ಅಂತುನಿಜಜನನಿಯರನಗಲ್ದುಬಹುಕಾಲಮತಿಕ್ರಾಂತಮಾದುದೆಂದುಕಟ್ಟುಕಡೆದು॥

ಕಂ॥ ನಂಮಲ್ಪವಿಭವಮಂಸುಖ ।
ಮಂಮನದೊಳ್ಬಗೆದುಬಗೆದರಿಲ್ಲುಳಿದುವನೆಂ ॥
ದಂಮಳಿಸಿವಿಭೀಷಣನಂ ।
ತಂಮಲ್ಲಿಗೆಬರಿಸಿರಾಮಲಕ್ಷ್ಮಣರೆಂದರ್ ॥ 17

ಅವಧಿಯವರ್ಷಂಗಳ್ತೀ ।
ರ್ದ್ದುವಯೋಧ್ಯೆಗೆಪೋಗದೆಂದುಜನನಿಯರುಂಬಾಂ ॥
ಧವರುಂಖೇದಿಸುವರ್ಪ್ಪೋ ।
ಗವೇಳ್ಪುದೆಂದಱಿಪಿತಂಮಗಮನೋದ್ಯಮನಂ ॥ 18

ಪವಣಿಲ್ಲದಲಂಕೆಯಜಿನ ।
ಭವನಂಗಳೊಳಿಲ್ಲಮರ್ಚ್ಚನಾದ್ರವ್ಯಕ್ಕಂ ॥
ಪವಣಿಲ್ಲೆನೆರಾಮಂಜಿನ ।
ಸವನೋತ್ಸವದೊಳ್ಸುರೇಂದ್ರನಂಗೆಲೆವಂದಂ ॥ 19

ಮಂಗಳಪರಿಕರಮಂಬಿಚ ।
ರಾಂಗನೆಯರ್ಪ್ಪಿಡಿದುಮುಂದೆಬರೆಮಂಗಳವೃ ॥
ತ್ತಂಗಳನೋದುತ್ತುಂಬರೆ ।
ಮಂಗಳಪಾಠಕನಿಕಾಯಮೆರಡುಂಕೆಲದೊಳ್ ॥ 20

ವ॥ ಅಂತುಬಂದು॥

ಕಂ ॥ ನಾನಾನಕರುತಿಸಕಲದಿ ।
ಶಾನನಮಂತೀವೆರಾಜ್ಯಚಿಹ್ನಬ್ರಜಮು ॥
ತ್ತಾನಿತಮೆಸೆದಿರೆದಿವ್ಯವಿ ।
ಮಾನಮನುತ್ಸವದಿನೇಱಿದಂಪುಷ್ಪಕಮಂ ॥ 21

ಬಲದೊಳ್ಲಕ್ಷ್ಮೀಧರನೆಡ ।
ಗೆಲದೊಳ್ಜಾನಕಿಬೆಡಂಗುವೆತ್ತೆಸೆದಿರೆಸು ॥
ತ್ತಲುಮಿರೆಖೇಚರವಿಮಾನಾ ।
ವಳಿರಾಮಂಮಣಿವಿಮಾನದೊಳ್ಕಣ್ಗೆಸೆದಂ ॥ 22

ವ ॥ ಅಂತುರಾಮಲಕ್ಷ್ಮಣಸ್ಪರ್ಧಿತದಕ್ಷಿಣದಿಗ್ವಿಜಯಪ್ರಯಾಣಭೇರಿಯಂಪೊಯಿ
ಸಿ ॥

ಕಂ ॥ ಜಂಗಮಸರೋವರಂಗಳ ।
ಭಂಗಿಯನದಟಲೆವಖೇಚರಪರಿವೃಢರವಿಮಾ ॥
ನಂಗಳ್ಗೆಡೆನೆಱೆಯದಾಗಗ ।
ನಾಂಗಣಮೆಂಬಂತಯೋಧ್ಯೆಗಭಿಮುಖರಾದರ್ ॥ 23

ವ ॥ ಅಂತುತಳರ್ದುಜಲಧಿಯಂದಾಂಟಿದಂಡಕಾರಣ್ಯಮನೆಯ್ದೆವಂದು ॥

ಕಂ ॥ ಚಾರಣಮುನಿಯುಗಳಕ್ಕಾ ।
ಹಾರಮನಿತ್ತೆಡೆಯನಲ್ಲಿತಮ್ಮಾರ್ದ್ರಲತಾ ॥
ಗಾರದಪೊೞಲೆಡೆಯಂಸೀ ।
ತಾರಮಣಿಗೆಸುಟ್ಟಿತೋಱಿದಂರಘುವೀರಂ ॥ 24

ಜಲಜಾಕ್ಷಿಗೆಸೀತೆಗೆರಘು ।
ಕುಲತಿಲಕಂಸುಟ್ಟಿತೋಱಿದಂಮುಂನಂಕೇ ॥
ವಲಲಬ್ಧಿದೇಶಭೂಷಣ ।
ಕುಲಭೂಷಣಸಾಧುಗಳ್ಗೆಸಮನಿಸಿದೆಡೆಯಂ ॥ 25

ವ ॥ ಅಂತುಪವನಪಥದೊಳ್ಮನಃಪವನವೇಗದಿಂಬರ್ಪ್ಪಸಮಯದೊಳ್ ॥

ಕಂ ॥ ಕನಕಪ್ರಾಕಾರದೊಳಂ ।
ವನಮಾಲೆಯೊಳಂಮನಕ್ಕೆವಂದೀಪುರಮಾ ॥
ವನದೆಂದುರಘೂದ್ವಹನಂ ।
ಜನಕಜೆಗೆಸಗೊಂಡಳಂದಯೋಧ್ಯಾಪುರಮಂ ॥ 26

ವ ॥ ಅಂತುಬೆಸಗೊಳ್ವುದುಂ ಶ್ರೀರಾಮದೇವರಿದೆಂಮನ್ವಯಾಗತಮಪ್ಪಯೋಧ್ಯಾಪುರ
ಮೆಂದುಪೇಳುತ್ತುಂಪುರಬಹಿಃಪುರಮನೆಯ್ದೆ ಬರ್ಪ್ಪಸಮಯದೊಳ್ನಾನಾವಿಧವಿಮಾ
ನಂಗಳನೇಱಿಬರ್ಪ್ಪವಿದ್ಯಾಧರಪರಿವೃಢರಿಂಪರಿವೃತನಾಗಿಪುಷ್ಪಕವಿಮಾನಮನೇ
ಱಿಬರ್ಪ್ಪರಾಮಸ್ವಾಮಿಯುಬರವನಱಿದುಮಹಾವಿಭೂತಿಯಿಂಪ್ರಮೋದಮುದಿತ
ಹೃದಯನಾಗಿ ॥

ಕಂ ॥ ಇಭಮಂನೀಳಾಚಳಸಂ ।
ನಿಭಮಂಶತ್ರುಘ್ನಸಹಿತನೇಱಿವಿಭೂಷಾ ॥
ಪ್ರಭೆನಭಮನಡರೆಭರತಂ ।
ಶುಭರತನಿದಿರ್ಗೊಳಲಯೋಧ್ಯೆಯಂಪೊಱಮಟ್ಟಂ ॥ 27

ವ ॥ ಅಂತುಮಹಾವಿಭೂತಿಯಿಂಬರ್ಪ್ಪಭರತಶತ್ರುಘ್ನರಂರಾಮಸ್ವಾಮಿಗೆಂಟನೊಳ್ಕಂ
ಡುಪುಷ್ಪಕವಿಮಾನದಿನವನಿಗವತರಿಸೆಭರತಶತ್ರುಘ್ನರುಮಾನೆಯಿಂದಿಳಿದುಬಂದು
ಪಾದಪ್ರಾಂತದೊಳ್ಸರ್ವಾಂಗಪ್ರಣತರಾಗಿರ್ಪ್ಪುದುಂರಾಮಸ್ವಾಮಿತೆಗೆದಪ್ಪಿಕೊಂ
ಡುಪರಸಿದಿಂಬಳಿಕ್ಕೆಸೀತಾದೇವಿಗಂಲಕ್ಷ್ಮೀಧರಂಗಮನುಕ್ರಮದಿಂಪೊಡಮಟ್ಟುಪರ
ಕೆಯಂಕೈಕೊಂಡೋರೋರ್ವ್ವರಕುಶಲವಾರ್ತ್ತೆಯಂಬೆಸಗೊಂಡುಸಂತುಷ್ಟಚಿತ್ತ
ರಾದನಂತರಂಸುಗ್ರೀವಪ್ರಭಾಮಂಡಲಮರುತ್ಸುತಾದಿಗಳಿಂಪರಿವೃತರಾಗಿ ॥

ಮ ॥ ಮಣಿಘಂಟಾಮಣಿಕಿಂಕಿಣೀಮಣಿವಿತಾನಭ್ರಾಜಿಯಂನೇತ್ರಭೂ ।
ಷಣಮಂಲೀಲೆಯಿನೇಱಿಪುಷ್ಪಕಮನುದ್ಯತ್ಕೇತನಾನೀಕತೋ ॥
ರಣಮಾಂಗಲ್ಯಸಮೃದ್ಧಮಂಭರತಶತ್ರುಘ್ನರ್ಕ್ಕಳುಂರಾಮಲ ।
ಕ್ಷ್ಮಣರುಂಪೊಕ್ಕರಯೋಧ್ಯೆಯಂಪುಗುವಿನಂಗಂಭೀರಬಂಭಾರವಂ ॥ 28

ವ ॥ ಅಂತುಪುರಮಂಪೊಕ್ಕಪರಾಜಿತಾಮಹಾದೇವಿಯುಮಂಸುಮಿತ್ರಾಮಹಾದೇವಿಯು
ಮಂಕೈಕಾಮಹಾದೇವಿಯುಮಂಸುಪ್ರಭಾಮಹಾದೇವಿಯುಮಂ ರಾಮಲಕ್ಷ್ಮಣ
ರ್ಕ್ಕಂಡೆಱಗಿಪೊಡಮಟ್ಟೊಡವರಂಪರಮಾಶೀರ್ವಾದಪಾರಿಜಾತಕರ್ಣಪೂರದಿನ
ಳಂಕರಿಸಿದಿಂಬಳಿಕ್ಕೆಸೀತೆಪೊಡೆವಡೆಪರಸಿತಕ್ಕೈಸಿಕೊಂಡೋರೋರ್ವ್ವರಕುಶಲ
ವಾರ್ತ್ತೆಯಂ ನುಡಿದಿಷ್ಟ ಸಂಯೋಗದಿಂಮನೋರಾಗಮನಪ್ಪುಕೆಯ್ದಿರ್ಪ್ಪಿನಂ ॥

ಕಂ ॥ ಬಳನಾರಾಯಣರುಂಭೂ ।
ತಳಮಂಭರತತ್ರಿಖಂಡಮಂನಿಜಬಾಹಾ ॥
ಬಳದಿಂರಕ್ಷಿಸಿನಿಜನಿ ।
ರ್ಮ್ಮಳಯಶದಿಂಭುವನಮೆಲ್ಲಮಂಧವಳಿಸಿದರ್ ॥ 29

ವ ॥ ಅಂತವರ್ಸ್ಸುಖದಿನೋಲಗಂಗೊಟ್ಟಿರ್ದ್ದೊಂದು ಶುಭದಿನಮುಹೂರ್ತ್ತದೊಳ್ರಾಮಸ್ವಾಮಿರಾಕ್ಷಸದ್ವೀಪಸಹಿತಮಂ ಲಂಕೆಯುಮಂ ವಿಭೀಷಣಂಗೆ ದೇವೋಪನೀತಪುರಮಂ ರತ್ನಜಟಿಗೆ ಕಿಷ್ಕಿಂಧನಗರಮಂ ಸುಗ್ರೀವಂಗೆ ಶ್ರೀಪರ್ವ್ವತನಗರಮಂ ಹನುಮಂಗೆ ಪಾತಾಳಲಂಕೆಯುಮಂ ವಿರಾಧಿತಂಗೆ ರಥನೂಪುರಚಕ್ರವಾಳಪುರಮಂ ಪ್ರಭಾಮಂಡಲಂಗೆ ರಾಜ್ಯಾಭಿಷೇಕಂಗೆಯ್ದು ಕೊಟ್ಟು ಮತ್ತಂ ಪೆಱರುಪಕಾರಂಗೆಯ್ದವರ್ಗ್ಗಂ ಪ್ರಾರ್ತ್ಥಿಸಿ ಬಂದ ವಿದ್ಯಾಧರರ್ಗ್ಗಂ ನಾಡುಂಬೀಡುಮಂ ಕೊಟ್ಟು ಲಕ್ಷ್ಮಣನಂ ತ್ರಿಖಂಡಮಂಡಲಕ್ಕಧಿರಾಜನಂ ಮಾಡಿ ಭರತನನಯೋಧ್ಯೆಯುಮಂ ಮುಂನಿನಂದದಿಂದಾಳ್ವುದೆಂದು ಬೆಸಸೆ ॥

ಮ॥ಸ್ರ॥ ಭರತಂ ನಿಮ್ಮಾಜ್ಞೆಯುಂ ಮೀಱದೆ ವಸುಮತಿಯಂ ಕಾದುಕೊಂಡಿರ್ದ್ದೆನಿಂನಾ ।
ನರಸಂಕ್ಕೈಕೊಳ್ವನಲ್ಲೆಂ ವಿಷಯಸುಖಮನಾನೊಲ್ಲೆ ನಾಂ ಮೋಕ್ಷಲಕ್ಷ್ಮೀ ॥
ಪರಿರಂಭೋತ್ಕಂಠನೆಂ ಸಂಸ್ಕೃತಿಯ ದೆಸೆಗೆ ಬಳ್ಕುತ್ತೆನೆಂದೆಂದು ವೈರಾ ।
ಗ್ಯರತಂ ರಾಮಂಗೆ ಕಯ್ಯಂ ಮುಗಿದೆಱಗಿದನಂನಂ ಮಹಾಸತ್ವನಾವಂ ॥ 30

ವ ॥ ಅಂತು ತಪಕ್ಕೆ ತಱಿಸಂದು ನುಡಿಯೆ ಶ್ರೀರಾಮದೇವರೆಂದನ್ನರ್ವ್ವಾಗೆಮುಂನಂ ಭೂಚರರ್ಬೆಸಕೆಯ್ವರೀಗಳ್ ಖೇಚರರುಂ ಬೆಸಕೆಯ್ವರಿಂನುಂ ಕೆಲವು ಕಾಲಂ ರಾಜ್ಯಸುಖಮನನುಭವಿಸಿ ನಾಮೆಲ್ಲಮೊಡನೆ ತಪಂಗೆಯ್ವಮೆನೆ ನಿಂಮಡಿ ನೀಮೆನಗೆ ಕಾರುಣ್ಯಂಗೆಯ್ವೊಡೆನ್ನಂ ಪೋಗಲೀವುದೆನಗೆ ಮೆಂತುಂ ತಪಮೇ ಕಾರ್ಯ್ಯಂ ನೀವಿದಂ ಮಾಕೊರ್ಕ್ಕಳೆದಿರಿಮೆಂದು ಮಱುಮಾತಿಂಗೆಡೆಯಿಲ್ಲದಂತೆ ತಿಪ್ರತಿಜ್ಞೆಗೆಯ್ದು ಬಿಂನವಿಸಿ ರಾಜಭವನಮಂ ಪೊಱಮಟ್ಟು ಪೋಗೆ ಸಂಭ್ರಮದಿಂ ಲಕ್ಷ್ಮೀಧರನುಂ ಕೈಕಾಮಹಾದೇವಿಯುಂ ವೈದೇಹಿಯುಂ ವಿಶಲ್ಯಾಸುಂದರಿಯುಂ ಪಲರುಮಂತಃಪುರಪುರಂಧ್ರಿಯರುಂ ಬಳಿಯನೆ ಪೋಗುತ ಪೋ ವಿಘ್ನಹೇತುಗಳಪ್ಪ ಮಾತುಗಳಂ ನುಡಿಯುತ್ತಿರ್ಪ್ಪನ ಮತ್ತಂ ಲಯ್ದನೆಯಕ್ರೋಧಿನಿಯೆಂಬ ಮದದೊಳತಿವರ್ತ್ತಿಯಾಗಿ ॥

ಮ ॥ ತ್ರಿಜಗದ್ಭೂಷಣವಾರಣಂ ಮುಱಿಯೆ ಪಾಯ್ದಾಲಾನಮಂ ತ್ವಗ್ಗಜಲೋ ।
ಹಜಬಂಧಂಗಳನೆಲ್ಲಮಂ ಪಱಿವಿನಂ ಪೊಯ್ಗುತ್ತಿ ಮೊತ್ತಕ್ಕೆ ಕೊಂ ॥
ದಾಪಮಂ ಕೊಲ್ವವೊಲೆಯ್ದೆ ಬಂದು ಜವದಿಂ ಗಂಧಾಂಧನಾಭೀಮಸಾ ।
ಮಜಮುಂ ವಿಸ್ಮಯಮಪ್ಪಿನಂ ಭರತನಂ ಕಂಡಾಯ್ತು ಜಾತಿಸ್ಮರಂ ॥ 31

ವ ॥ ಅಂತು ಜಾತಿಸ್ಮರನಾಗಿ ಮದದೋದ್ರೇಕಮಂ ಬಿಟ್ಟು ಕಯ್ಯನೆಳಲೆವಿಟ್ಟು ಪೊಡಮಟ್ಟಿರ್ಪ್ಪುದಂ ಭರತನಾಗಜಮಂ ವೈದೇಹಿಯುಂ ವಿಶಲ್ಯಾಸುಂದರಿಯುಂ ಬೆರಸೇಱಿ ಮಹಾವಿಭವದಿಂ ರಾಜಭವನಮಂ ಪೊಕ್ಕಾನೆಯಿಂದಿಳಿದೆಲ್ಲರುಮೊಡನಾರೋಗಿಸಿ ಸುಖದಿನೋಡ್ಡೋಲಗಂಗೊಟ್ಟಿರೆ ॥

ಕಂ ॥ ನಿರುಪಂತ್ರಿಜಗದ್ಭೂಷಣ ।
ಕರಿಕವಳಂಗೊಳ್ಳದೆಂದುಸಾಹಣಿಧನುಪ ॥
ತ್ತರನಱಿಪೆರಾಮಲಕ್ಷ್ಮೀ ।
ಧರರ್ಕ್ಕಳಾನುಡಿಗೆನಾಡೆವಿಸ್ಮಿತರಾದರ್ ॥ 32

ವ ॥ ಆಸಮಯದೊಳೃಷಿನಿವೇದಕನತಿತ್ವರಿತಗತಿಯಿಂಬಂದುಸರ್ವ್ವಾಂಗಪ್ರಣತನಾಗಿ ದೇವಮಹೇಂದ್ರೋದ್ಯಾನಕ್ಕೆ ದೇಶಭೂಷಣಭಟ್ಟಾರಕರ್ಬ್ಬಿಜಯಂಗೆಯ್ದರೆಂದುಬಿನ್ನವಿಸೆಸಿಂಹಾಸನದಿನೆರ್ದ್ದಾದೆಸೆಗೇಳಡಿಯಂನಡೆದುಸಾಷ್ಟಾಂಗಪ್ರಣತನಾಗಿ ॥

ಕಂ ॥ ಅವನೀವಲ್ಲಭರಾರ್ದ್ಧ ।
ರ್ಮ್ಮವತ್ಸಲರ್ತ್ತಂನಶೆಱದಿನೆಂಬನ್ನಂರಾ ॥
ಘವದೇವನರ್ಕ್ಕಱಿಂಋಷಿ ।
ನಿವೇದಕಂಗಮರಧೇನುವೀವಂತಿತ್ತಂ ॥ 33

ವ ॥ ಅಂತು ಮೆಚ್ಚಿತ್ತು ರಾಮಲಕ್ಷ್ಮಣಭರತಶತ್ರುಘ್ನರ್ತ್ರಿಜಗದ್ಭೂಷಣಗಜಾರೂಢರಾಗಪರಾಜಿತಾಮಹಾದೇವಿಯುಮೊದಲಾಗೆ ನಾಲ್ವರ್ಜ್ಜನನಿಯರುಂ ಜಾನಕಿಮೊದಲಾಗೆ ಸಮಸ್ತಾಂತಃಪುರಮುಂ ಸುಗ್ರೀವಂಮೊದಲಾಗೆ ಸಕಲವಿದ್ಯಾಧರವಲ್ಲಭರುಂ ವಂದನಾಭಕ್ತಿಯಿಂದೊಡನೆಬರೆ ಬಂದುವಾಹನದಿಂದಿಳಿದುಗೆಂಟಿನೊಳೆರಾಜಚಿಹ್ನಂಗಳನುಳಿದು ಭಟ್ಟಾರಕರಂಮೂಱುಸೂಳ್ಬಲಗೊಂಡುದಿವ್ಯಾರ್ಚ್ಚನೆಗಳಿಂದರ್ಚ್ಚಿಸಿ ಸರ್ವ್ವಾಂಗಪ್ರಣತರಾಗಿ ನಿಜನಿಯಮಸ್ಥಾನದೊಳ್ಕುಳ್ಳಿರ್ದ್ದು ಧರ್ಮ್ಮಶ್ರವಣಾನಂತರಂ ನಾರಾಯಣನೆಂದನೀತ್ರಿಜಗದ್ಭೂಷಣದ್ವಿರದಂ ಚತುರ್ದ್ದಿನಮೇಕಾರಣಂಕವಳಂಗೊಳ್ಳದೆಂಬುದಂಬೆಸಸಿಮೆನೆ ॥

ಕಂ ॥ ಅಪವರ್ಗ್ಗಶ್ರೀಯಕಟಾ ।
ಕ್ಷಪಾತವೆಂಬಂತುದಂತರುಚಿನಿಮಿರ್ವ್ವಿನಮೀ ॥
ದ್ವಿಪವನ್ಯಜನ್ಮಮಂತಿಳಿ ।
ದುಪಶಮಮಂತಳೆದುಕವಳಮಂಕೊಳ್ಳದೆನಲ್ ॥ 34

ಮುಗಿದಕರಕಿಸಲಯಂಗ ।
ಳೊಪ್ಪಗಯಿಸೆಮತ್ತಂಮುನೀಂದ್ರವೃಂದಾರಕರಂ ॥
ಜಗದಧಿಪಂಗಜದಭವಾ ।
ಳಿಗಳಂವಿನಮಿತಶಿರೋಧರಂಬೆಸಗೊಂಡಂ ॥ 35

ವ ॥ ಅಂತುಬೆಸಗೊಳ್ವುದುಂ ದೇಶಭೂಷಣಕೇವಳಿಗಳಿಂತೆಂದುಬೆಸಸಿದರೀವಿನೀತಾನಗರದೊಳ್ಸುಪ್ರಭಂಗಮಾತನರಸಿಪ್ರಹ್ಲಾದಿಗಂ ಸೂರ್ಯೋದಯನುಂಚಂದ್ರೋದಯನುಮೆಂಬತನೂಜರಾಗಿ ವೃಷಭಸ್ವಾಮಿಗಳೊಡನೆ ಪೋಗಿತಪಸ್ಥರಾಗಿಸ್ವೈರಿಸಲಾರದೆಪರೀಷಹಭಗ್ನಮನರಾಗಿಮರೀಚಿಯೊಡನೆಕೂಡಿ ॥

ಕಂ ॥ ತಾಪಸರಾಗಿಕುಧರ್ಮ್ಮ ।
ವ್ಯಾಪಾರದೊಳೆಸಗಿಘೋರಸಂಸಾರಮಹಾ ॥
ಕೂಪದೊಳಗಾಳ್ದುಪಿರಿದ ।
ಪ್ಪಾಪತ್ತುಂಪೆತ್ತನೇಕಭವಮಂಬಂದರ್ ॥ 36

ವ ॥ ಅಂತುಬಾರದಭವಮಂಬಂದೆಂತಾನುಂಕುರುಜಾಂಗಣವಿಷಯದಗಜಪುರಮನಾಳ್ವಹರಿಪತಿಗಮಾತನರಸಿ ಚಂದ್ರೋದಯೆಗಂಮುಂಪೇಳ್ದ ಚಂದ್ರೋದಯನುಂ ಕುಲಂಕರನೆಂಬನಂದನನಾಗಿರಾಜ್ಯದೊಳ್ನಿಂದನಾಪುರದೊಳ್ಸೂರ್ಯೋದಯನುಂವಿಶ್ವಾವಸುವೆಂಬ ಪಾರ್ವಂಗೆಮೂಢಶ್ರುತಿಯೆಂಬಪುತ್ರನಾಗಿಕುಲಂಕರನೃಪತಿಗೆಪುರೋಹಿತನಾಗಿಕುಲಂಕರನಿಂಹಿಂಸಾಹೇತುಗಳಪ್ಪ ಯಜನಂಗಳಂಮಾಡಿಸಿತಾಪಸರೂಪಧಾರಿಗಳೆಗುರುಗಳೆಂಬನಂಬುಗೆಯುಂಮಾಡಿ ನಡೆಯಿಸುತ್ತಿರ್ಪನಂಕುಲಂಕರನರಸಿದುಶ್ಶೀಲೆಶ್ರೀಮಾಲೆಯೆಂಬಳಾಣ್ಮೆಮೆಚ್ಚಿದರೊಡನೆಮೆಚ್ಚಿದವಿಷಯಸುಖಮನನುಭವಿಸಲೆಂದು ॥

ಕಂ ॥ ಜಾತಿಯನೀತಿಯಸ್ನೈಪಿನ ।
ಮಾತಡಿಗಿಡೆಪತಿಯುಮಂಪುರೋಹಿತನುಮನಾ ॥
ಪಾತಕಿವಿಷದಿಂಕೊಂದ ।
ಳ್ಘಾತುಕಮೆವಿವೇಕವಿಕಲರೇನಂಮಾಡರ್ ॥ 37

ವ ॥ ಅಂತುಕುಲಂಕರನುಂಮೂಢಶ್ರುತಿಯುಂಸತ್ತನುಕ್ರಮದಿಂಮೊಲನುಂಮುಂಗುರಿಯುಮಾಗಿಸತ್ತುಬಳಿಯುಂಮೂಢಶ್ರುತಿಶುಂಡಾಲನಾಗೆಕುಲಂಕರಂದರ್ದುರನಾಗಿಪುಟ್ಟಿತಂನನಾಶುಂಡಾಲಂಮೆಟ್ಟಿಸತ್ತುಯೇಸಡಾಗಿಪುಟ್ಟಲಾಶುಂಡಾಲಂಸತ್ತುಕಾಗೆಯಾಗಿತಂನಂತಿನೆಸತ್ತೇಸಡಿಕುಕ್ಕುಟನಾಯತ್ತುಕಾಗೆಸತ್ತುಬಿಡಾಲನಾದುದಾಬಿಡಾಲಂಮುಂನಿನಕುಕ್ಕುಟನಂತಿಂದುದೀತೆಱದಿಂಕುಲಂಕರಂಮೂಱುಸೂಳ್ಕುಕ್ಕುಟನಾಗಿಪುಟ್ಟೆಮೂಢಶ್ರುತಿಯುಂಬಿಡಾಲನಾಗಿಮೂಱುಸೂಳ್ಪುಟ್ಟಿತಿನೆಸತ್ತುಕುಲಂಕರಂಮೀನಾದಂಮೂಢಶ್ರುತಿಸತ್ತುಮೊಸಳೆಯಾದಂ ॥

ಕಂ ॥ ಅರೆತ್ತುಱಿವಕ್ಕರ್ಮ್ಮದ ।
ಪ್ರೇರಣೆಯುಂಪಗೆಯುಕೆಳೆಯನಕ್ಕುಂಕೆಳೆಯಂ ॥
ಕ್ರೂರರಿಪುವೆನಿಸಿಬುಕ್ಕರ್ಗಂ ।
ಬಾರದಭವಮಂವಿಚಿತ್ರಮೀಸಂಸಾರಂ ॥ 38

ವ ॥ ಅಂತುಮೊಸಳೆಯಾದಮೃದುಮತಿಯುಮಂಮೀನಾದಕುಲಂಕರನುಮಂ ವಿಹಂಗು ಲಿಕೊಲೆಸತ್ತು ರಾಜಗೃಹದೊಳ್ಜ್ವಳೂಕೆಯೆಂಬ ಪಾರ್ವಂತಿಗೆಂಬಹ್ಯಾಸನೆಂಬಪಾರ್ವಂಗಂಮೂಢಶ್ರುತಿವಿನೋದನೆಂಬಮಗನಾದನಾಮೀನಾಗಿಸತ್ತ ಕುಲಂಕರನುಮವರ್ಗ್ಗೆ ರಮಣನೆಂಬನಂದನನಾಗಿಬಳೆದುದೇಶಾಂತರಕ್ಕೆ ಪೋಗಿವೇದವಿದನಾಗಿಮಗುಳ್ದು ಬರುತ್ತುಂನಿಜಗ್ರಾಮಮಪ್ಪ ರಾಜಗೃಹದಪೊಱವೊಳಲನೆಯ್ದಿ ಪರ್ವಾಸಮಯದೊಳ್ಕೆಸರ್ಪಡುವುದುಮಂಧಕಾರಮತಿಪ್ರಬಲಮಾಗೆಬರಲಱಿಯದೊಂದು ಯಕ್ಷಗೃಹದೊಳ್ಪೆಸಿಯಿಸಿರ್ಪ್ಪುದುಂ ॥

ಕಂ ॥ ಆರಮಣನಗ್ರಜಾತಮ ।
ನೋರಮೆಸಮಿತಾಭಿಧಾನೆಪಾಣ್ಬನಬರಮಂ ॥
ಪಾರುತ್ತಡಂಗಿಯಕ್ಷಾ ।
ಗಾರಮನವಳಂಧಕಾರಮಂಪೊಕ್ಕಿರ್ದ್ದಳ್ ॥ 39

ವ ॥ ಅಂತಿರ್ಪ್ಪುದುಮಾಕೆಯಲ್ಲಿಗೆ ಬರುತ್ತಿರ್ದ್ದಶೋಕದತ್ತನೆಂಬಪಾಣ್ಬನಂತಳಾಱಿರ್ಪ್ಪಿಡಿದುಕೊಲ್ವುದುಂವಿನೋದಂತಂನಪಾರ್ವಂತಿಯದುಶ್ಚರಿತ್ರಮನಱಿವನಪ್ಪುದಱಿನಾಕೆಯಬೞಿಯನೆಬಂ ದುೞಿದಿರ್ದ್ದಾಯಕ್ಷಾಗಾರದೊೞಿರ್ದ್ದಾಕೆಯೊಳ್ನುಡಿಯುತ್ತಿರ್ದ್ದತಂನತಮ್ಮನಪ್ಪರಮಣನಂಪಾಣ್ಬನೆಂದುಬಗೆದುಕೊಂದಾಕೆಯಂಮನೆಗೆತಂದ್ಪಾಳುತ್ತಿರ್ದ್ದತಾನುಮಾಕೆಯುಕಯ್ಯೊಳ್ಸತ್ತುಸಂಸಾರದೊಳ್ತೊಳಲ್ದು ಮಹಾಗಹನದೊಳೀರ್ವ್ವರುಂಮಹಿಷಂಗಳಾಗಿಕಾದಿಸತ್ತು ಮತ್ತಂಕರಡಿಗಳಾಗಿಪುಟ್ಟಿಬೇಗೆಗಿಚ್ಚೊಳ್ಸತ್ತು॥

ಕಂ ॥ ಗಿರಿದರಿಗಳವನದೊಳ್ಬೇ ।
ಡರಬಸಿಱೊಳ್ಬಂದುಪಾಪಮಂಸಾಲ್ವನಿತಂ ॥
ನೆರೆಪಿಕಡೆಗಾಲದೊಳ್ವನ ।
ಚರರೀರ್ವ್ವರುಸ್ಸತ್ತುಮೊಡನೆಪುಲ್ಲೆಗಳಾದರ್ ॥ 40

ಮತ್ಸರಮಂಜಿನಮತದೊ ।
ಳ್ವತ್ಸಲತೆಯನುಂಟುಮಾಡಿಕುಮತದೊಳಮುವ ॥
ರ್ಕ್ಕತ್ತಿತಯೋನಿಗಳೊಳ್ಬೇ ।
ಛತ್ಸುಶರೀರಂಗಳಾಗಿತಿಱಿತರುತಿರ್ದ್ದರ್ ॥ 41

ವ ॥ ಅಂತುಪುಲ್ಲೆಗಳಾಗಿಪುಟ್ಟುವುದುಮವಂಬೇಡನೋರ್ವ್ವಂಪಿಡಿದುನಡಪುತ್ತು ಮಿರ್ದ್ದನಂನೆಗಮಿತ್ತ ಸ್ವಯಂಭೂತಿರಥನೆಂಬಮಹೀನಾಥಂವಿಮಲಜಿನನಾಥರಂವಂದಿಸಿಬರುತ್ತುಮಾಪುಲ್ಲೆಗಳಂಬೇಡನಿಂಬೇಡಿಕೊಂಡುನಿಜರಾಜಭವನದೊಳಗಣಜಿನಾ

ಲಯದೊಳಿಂಸಿನಡಪುತ್ತುಮಿಪ್ಪೂರ್ವದುಮಲ್ಲಿರಮಣನಪ್ಪಪುಲ್ಲಿ ಋಷಿಯರಸಂಯೋಗದಿಂದುಪಶಮಚಿತ್ತನಾಗಿಸತ್ತುದೇವಲೋಕಕ್ಕೆಪೋಯ್ತು ಮತ್ತಂವಿನೋದನಪ್ಪಪುಲ್ಲಿಸತ್ತುತಿರ್ಯಗ್ಗತಿಯೊಳ್ತಿರ್ರನೆತಿರಿತಂದೆಂತಾನುಂಕರ್ಮೋಪಶಮಮನಪ್ಪುಕೆಯ್ದುಸತ್ತುಕಾಂಪಿಲ್ಯನಗರದೊಳ್ಧನದತ್ತನೆಂಬಪರದನಾಗಿಪುಟ್ಟಿಮೂವತ್ತೆರಡುಕೋಟಿಧನಕ್ಕಧಿನಾಥನಾಗಿರ್ದ್ದನಾಧನದತ್ತಂಗಮಾತನಕುಲಶ್ರೀವಾರುಣಿಗಂರಮಣನಪ್ಪದೇವಂದಿವದಿಂಬಂದುಭೂಷಣನೆಂಬಮಗನಾಗೆನ್ನೈಮಿತ್ತಿಕರೀತನವಸ್ಯಂಜಿನಮುನಿಗಳಂಕಂಡಾಗಳೆತಪಂಬಡುವನೆನೆಧನದತ್ತನಾಮಾತಂಕೇಳ್ದು ॥

ಕಂ ॥ ತನುಜಸ್ನೇಹದಿನವನಂ ।
ಮುನಿಪತಿಗಳ್ಕಾಣದಂತುಮಾಡದಮೇಗಂ ॥
ಗನೆವೆರಸುಸುಖದಿನಿರಿಸಿದ ।
ನೆನೆಚಿತ್ರಮೆಸಹಜಮಲ್ತೆ ಪುತ್ರಸ್ನೇಹಂ ॥ 42

ವ ॥ ಅಂತುಸುಖದಿನಿರ್ದ್ದೊಂದುದಿವಸಮಾಭೂಷಣಂಶ್ರೀಧರಭಟ್ಟಾರಕರಂವಂದಿಸಲೆಂದುಪೋಪದೇವರ್ಕಳನಾಕಾಶದೊಳ್ಕಂಡುಜಾತಿಸ್ಮರನಾಗಿಭಟ್ಟಾರಕರಂವಂದಿಸಲೆಂದುಮಾಡದಿಂದಿಳಿದುಬರುತ್ತುಂಸರ್ಪ್ಪದಷ್ಟನಾಗಿಸತ್ತುಮಾಹೇಂದ್ರಕಲ್ಪಕ್ಕೆವೋಗಿಮಗುಳ್ದುಬಂದುಪುಷ್ಕರದ್ವೀಪದಚಂದ್ರಾದಿತ್ಯಪುರಮನಾಳ್ವಪ್ರಕಾಶಯಶಂಗಮಾತನಮನೋಹಾರಿಯುಪ್ಪದಿತೆಗಂಗಜದ್ಯುತಿವೆಸರಸುತನಾಗಿರಾಜ್ಯಂಗೆಯ್ಯುತ್ತುಂ ॥

ಕಂ ॥ ಜಿನಗದಿತಮಾರ್ಗ್ಗದಿಂಜಿನ ।
ಮುನಿಗನ್ನಮನಿತ್ತುದೇವಕುರುಭೂತಳಸಂ ॥
ಜನಿತಂತತ್ಸುಖದೊಳ್ತುಂ ।
ಣನೆತಣಿದೀಶಾನಕಲ್ಪದೊಳ್ಜನಿಯಿಸಿದಂ ॥ 43

ಕಿಡದಪವರ್ಗ್ಗದಸುಖಮಂ ।
ಕುಡುವಮಹಾಮಹಿಮೆವಡೆದಸಾಧುಪದಂಗ ॥
ಳ್ಕಿಡುವಸುರಲೋಕಸುಖಮಂ ।
ಕುಡುವೊಡದೇಗಹನಮೆನಿಸಿಕಲ್ಪಜನಾದಂ । 44

ವ ॥ ಅಂತೀಶಾನಕಲ್ಪದೊಳನಲ್ಪಸುಖಮನನುಭವಿಸಿಬಂದುಜಂಬೂದ್ವೀಪದಪರವಿದೇಹದನಂದ್ಯಾವರ್ತ್ತಪುರಮನಾಳ್ವಚಲನೆಂಬ ಚಕ್ರವರ್ತ್ತಿಗಮಾತನಮಹಾದೇವಿಬಾಲಹರಿಣಿಗಮಭಿರಾಮನೆಂಬಮಗನಾಗಿ ॥

ಕಂ ॥ ಅಱಿದಾತಂಸಂಸಾರದ ।
ತೆಱನಂತೊಱೆಯಲ್ಕೆಬಗೆಯೆಬಲ್ಲಾಳ್ತನದಿಂ ॥
ತುಱುಗೆವೆಗಂಕೊಳ್ವಂಡಿ ।
ಸ್ವರ್ಱಿಗೊಂಡಸ್ಫೂರ್ತ್ತಿಮುತ್ತಿಮೂಸಾಸಿರ್ಪ್ಪರ್ ॥ 45

ವ ॥ ಅಂತುತಂನಂತಂಮಯ್ಯನಪ್ಪಚಕ್ರವರ್ತ್ತಿಯಪೆಸರಿಂಬಳಸಿಕೊಂಡಿರ್ದ್ದಕಂನೆ
ಯರಂಪುಲ್ಗೆಱೆಯಾಗಿಬಗೆದು ॥

ಕಂ ॥ ಜಿನಧರ್ಮ್ಮದಪೇರ್ಮ್ಮೆಯನಿಲಿ ।
ಮನದೊಳ್ಬಾಲಿಯರ್ಗೆಧರ್ಮ್ಮಮಂಪೇಳುತ್ತುಂ ॥
ಮನೆಯೊಳ್ಮುನಿಯವೊಲಿರ್ದ್ದಂ ।
ತನಗಳವಡೆಯಷ್ಟಗುಣಂಗಳನಿತೊಳವನಿತುಂ ॥ 46

ವ ॥ ಅಂತುಸಮ್ಯಕ್ತ್ವಶುದ್ಧನಾಗಿಸನ್ಯಸನಂಗೆಯ್ದುಪಂಚನಮಸ್ಕಾರಪರಿಣತಂಶರೀರಭಾ
ರಮನಿೞಿಪಿಬ್ರಹ್ಮೋತ್ತರಕಲ್ಪದೊಳ್ದೇವನಾಗಿಪುಟ್ಟುವುದುಂ ॥

ಕಂ ॥ ಇತ್ತಲ್ಮುಂಪೇಳ್ದಾಧನ ।
ದತ್ತಂಸತ್ತಾಜವಂಜವೀಜಳಧಿಯೊಳಾ ॥
ೞುತ್ತೇೞುತ್ತಿರ್ದ್ದಂದು ।
ವ್ಯರ್ತ್ತಂಗೇಂದೊರಿತದುಃಖಮಪ್ಪುದುಪಿರಿದೇ ॥ 47

ವ ॥ ಅಂತಾತಂಸಂಸಾರದೊಳ್ತೊೞಲ್ದುಬಂದು ಪಾದನಪುರದೊಳಗ್ನಿಮುಖನೆಂಬಪರ
ದಂಗಮಾತನಪೆಂಡತಿಶಕುನಿಗಂಮೃದುಮತಿವೆಸರಸುತನಾಗಿಕೈತವದಿಂನಡೆಯೆತಂ
ದೆಪೊಱಮಡಿಸಿಕಳೆಯೆಪೋಗಿಋಷಿಯರಂಸಾರ್ದ್ದಸಾಕ್ಷರಿಕನಾಗಿ ಮಗುಳ್ದುಬಂ
ದುಮಾತಾಪಿತೃಗಳೊಳ್ಕೂಡಿಸಂತೋಷದಿನಿರ್ದ್ದವಸಂತೆಯುಂ ರಮಣಿಯು
ಮೆಂಬೀರ್ವ್ವರ್ಗ್ಗಣಿಕೆಯರ್ಗ್ಗಾಸಕ್ತನಾಗಿಧನಮಂನಿಧುವನಕ್ಕೆಸಲಿಸಿವಿಕಳಮತಿ
ಯಾದಮೃದುಮತಿತನಗೆಸ್ತೇಯಮೇಜೀವನೋಪಾಯಮಾಗೆ ನೆಗಳುತ್ತುಮಿ
ರ್ದ್ದೊಂದುದಿವಸಂಶಶಾಂಕಪುರಮನಾಳ್ವನಂದಿವರ್ದ್ಧನನರಮನೆಯಂಪೊಕ್ಕು
ಕಳಲೆಂದುೞಿದಿರ್ಪ್ಪುದುಮಾಸಮಯದೊಳ್ನಂದಿವರ್ದ್ಧನಂಶಶಾಂಕಮುಖಭಟ್ಟಾರ
ಕರ್ಪ್ಪೇಸಸೆಧರ್ಮ್ಮಮಂಕೇಳ್ದುನಿರ್ವ್ವೇಗಪರನಾಗಿಮನೆಗೆವಂದುತಂನರಸಿಗಾಂತ
ಪಸ್ಥನಪ್ಪೆಂನೀನುಪ್ಪೆಗಂಬಡದಿರೆಂದುನುಡಿವುದುಂಕೇಳ್ದುಮೃದುಮತಿವೆಸರನ್ವರ್ತ್ಥ
ಮಾಗೆಸಂಸಾರಭೀರುವಾಗಿತತ್ತಪೋನಿಧಿಯಸಂನಿಧಿಯೊಳ್ತಱಿದು ತಪಂಗೆಯ್ಯು
ತ್ತುಮಿಪ್ಪುದುಮಿತ್ತಲವಲೋಕನಪುರದಪರಿಸರಪ್ರದೇಶಪರ್ವ್ವತದಮೇಲೆ ॥

ಕಂ ॥ ಗುಣನಿಧಿಗಳ್ನಾಮದೊಳಂ ।
ಗುಣನಿಧಿಗಳ್ಗಗನಚಾರಣರ್ಶ್ರೀಲಲಿತರೋ ॥
ಮಣಿಯನೆಕ್ಕೈಯೆತ್ತದೆಮುನಿ ।
ಗಣಪೂಜ್ಯರ್ಪ್ಪೂರ್ಣಬುದ್ಧಿನಾಲ್ಕುತಿಂಗಳ್ನಿಂದರ್ ॥ 48

ವ ॥ ಅಂತಿರ್ಪ್ಪುದುಂ ॥

ಕಂ ॥ ಅವರಂಪೂಜಿಸಿಪೋದ ।
ರ್ದ್ದಿವಕ್ಕೆದಿವಿಜರ್ಕ್ಕಳವರುಮಾಪರ್ವ್ವತದಿಂ ॥
ಪವನಪಥಾತಿಥಿಯಾದ ।
ರ್ದ್ದಿವಸಾವಧಿಪಿಂಗಿಪೋಗೆಪರಮಾತಿಥಿಗಳ್ ॥ 49

ವ ॥ ಮತ್ತಿತ್ತಮೃದುಮತಿಗಳುಗ್ರೋಗ್ರತಪಂಗೆಯ್ದತಿಕ್ಷಪಿತಕಾಯರವಲೋಕನನಗ
ರಕ್ಕೆಚರಿಗೆಗೆವೋದೊಡಾಪೊಳಲನಾಳ್ವರಸಂಮೊದಲಾಗೆಪಲಬರುಮಾಹಾರಣೆಗೆ
ತ್ತುವಿಱಿಯುಷಿದರ್ನ್ನಾಲ್ಕುತಿಂಗಳ್ವರಂಕಯ್ಯಿಕ್ಕಿನಿಂದರವರತಪದಪೇರ್ಮ್ಮೆಗೆದೇವ
ರ್ಕ್ಕಳ್ಪೂಜಿಸಿಪೋದಗ್ಗಳವೆಂದುಪೊಗಳ್ದುತಂಮಂಪೂಜಿಸಿಕೊಂಡಾಡೆಮಾಯೆ
ಯಿಂಪೂಜಿಸಿದಪೂಜೆಗೆಮೊಯ್ವಾಂತು ॥

ಕಂ ॥ ಅಱಿಬಿಲ್ಲದಜಿನಧರ್ಮ್ಮದ ।
ಫಳದಿಂದಾಹಾರಕಾಂಕ್ಷೆಯಿಂಮಾಯೆಯುಮಂ ॥
ಬಳಿಸಂದಾತಪಂಗೆಯ್ದೊಡ ।
ಲೞವಿನೊಳಭಿರಾಮನಿರ್ದ್ದದಿವಮಂಪೊಕ್ಕಂ ॥ 50

ವ ॥ ಅಂತುಪುಗುವುದುಂಮೃದುಮತಿಯನಭಿರಾಮಚರಂಕಂಡತಿಸ್ನೇಹಿತನಾಗಿಸುಖದಿ
ನಿರ್ದ್ದರ್ ॥

ಕಂ ॥ ದಿವದಿಂಪರಮಾಯುಷ್ಯಂ ।
ತವೆಮಾಯಾತಪದಫಲದೆಮೃದುಮತಿವೆಸರಾ ॥
ದಿವಿಜಂಕುಂಜರಗಿರಿಸಾ ।
ನುವಿನನಿಕುಂಜಕ್ಕೆವಂದುಕುಂಜರನಾದಂ ॥ 51

ವ ॥ ಅನಂತರಮಭಿರಾಮಚರಂಬ್ರಹ್ಮೋತ್ತರಕಲ್ಪದಿಂಬಂದುದಶರಥಮಹೀನಾಥಂಗಂ
ಕೈಕಾಮಹಾದೇವಿಗಂಭರತನೆಂಬಮಗನಾದನೀತನಂತ್ರಿಜಗದ್ಭೂಷಣಗಜಂಕಂಡು
ಜಾತಿಸ್ಮರಂಸಂಸಾರಭೀರುವಾದುದಱಿಂವ್ರತಂಗೊಂಡುಮುಕ್ತಿಗೆವೋಗಲಿರ್ದ್ದ
ದೆಂದು ॥

ಕಂ ॥ ಆನೆಯಭರತನಭವಸಂ ।
ತಾನಂಗಳನಱಿಪೆದೇಶಭೂಷಣದಿವ್ಯ ॥
ಜ್ಞಾನಿಗಳಾಲಿಸಿವಿಸ್ಮಿತ ।
ಮಾನಸರಾದರ್ಬ್ಬಲಾಚ್ಯುತಪ್ರಮುಖರ್ಕ್ಕಳ್ ॥ 52

ವ ॥ ಆಸಮಯದೊಳ್ ॥

ಉ ॥ ಹಸ್ತಿಯತಂನಮುನ್ನಿನಭವಾವಳಿಯೆಲ್ಲಮನೆಯ್ದೆಪೇಳೆಲೋ ।
ಕಸ್ತುತದೇಶಭೂಷಣಮಹಾಮುನಿಪುಂಗವರಾಜಮಂಜವ ॥
ತ್ರಸ್ತಮನಂತಪಕ್ಷ್ಟರಣಲೋಭರತಂಭರತಂಭವಾಬ್ಧಿಯಂ ।
ದುಸ್ತರಮಂಸಮುತ್ತರಿಸಲುತ್ಸುಕವೃತ್ತಿಯನುಂಟುಮಾಡಿದಂ ॥ 53

ಕಂ ॥ ಬಾರದಭವಮೊಂದಿಲ್ಲೆನೆ ।
ನಾರಕತಿರ್ಯ್ಯಗ್ಮನುಷ್ಯಗತಿಯೊಳ್ಬಂದೆಂ ॥
ಸಾರದೆಜಿನಚರಣಮನಿಂ ।
ನಾರಾಧಿಸಿಪಡೆವೆನಮೃತಸುಖಸಂಪದಮಂ ॥ 54

ವ ॥ ಎಂದುತಱಿಸಂದುಭರತಂಸಹಸ್ರತ್ರಯರಾಜಪುತ್ರರ್ಸ್ಸಹಿತಂತಪಸ್ಥನಾದಂಕೈಕೆ
ಯುಮಯ್ನೂರ್ವ್ವರ್ಸ್ತ್ರೀಯರ್ವೆರಸುಪೋಗಿಪೃಥುಮತಿಗಂತಿಯರಪಕ್ಕದೆಸ
ವ್ಯಕ್ತಾವ್ಯಪೂರ್ವ್ವಕಂತಪಂಗೊಂಡಳಾತ್ರಿಜಗದ್ಭೂಷಣಗಜಂಸವ್ಯಕ್ತಾವ್ಯಪೂರ್ವ್ವ
ಕಮಣುವ್ರತಮನಲ್ಲಿಯೆಕೈಕೊಂಡುಪಲವುನೋಂಪಿಗಳಂನೋಂತುಸನ್ಯಸನದಿಂ
ಮುಡಿಪಿಬ್ರಹ್ಮೋತ್ತರಕಲ್ಪಗತನಾಯ್ತುಭರತಮುನಿಗಳುಂಚತುರಂಗುಲಚಾರಣ
ಋದ್ಧಿಪ್ರಾಪ್ತರಾಗಿವಿಹಾರಿಸಿಕೇವಲಜ್ಞಾನಪ್ರಾಪ್ತರಾಗಿಮೋಕ್ಷಕ್ಕೆವೋದರಿತ್ತಲ್ಸಿ
ದ್ಧಾರ್ತ್ಥನುಂರತಿವರ್ದ್ಧನನುಂ ಮೊದಲಾಗೆಭರತನೊಡನೆತಪಂಗೊಂಡಮೂಸಾಸಿ
ರ್ವ್ವರುಂತಂತಮಗೆತಕ್ಕಸ್ಥಾನದೊಳ್ಪುಟ್ಟಿಸುಖದಿನಿರ್ಪ್ಪುದುಮಿತ್ತಕೈಕಾಗಣಿನಿ
ಯರುಮನಶನಾದಿತಪದೊಳ್ನಿಗಳ್ದುಜೀವಿತಾಂತದೊಳ್ಸೌಧರ್ಮ್ಮಕಲ್ಪದೊಳ್ಪುಟ್ಟಿ
ದರಿತ್ತಲ್ ॥

ಕಂ ॥ ಪರಿಪಾಲಿಸಿಧರೆಯಂಖೇ ।
ಚರಭೂಚರಭೂಪರಾಳ್ವೆಸಂಗೆಯ್ದಿನಿರಂ ॥
ತರಸುಖದಿನಿತ್ತಲಮರೇ ।
ಶ್ವರವಿಭವಂಬಡೆದುರಾಮಲಕ್ಷ್ಮಣರಿರ್ದ್ದರ್ ॥ 55

ವ ॥ ಅಂತುಸುಖದಿನಿರ್ದ್ದೊಂದುದಿವಸಂರಾಘವಂಶತ್ರುಘ್ನಂಗೆಸಾಕೇತಪುರಾರ್ದ್ಧಮನಕ್ಕೆ
ಪೌದನಪುರಾರ್ದ್ಧಮನಕ್ಕೆ ಪುಂಡರೀಕಕಿಣಿ ಪುರಮನಕ್ಕೆ ರಾಜಗೃಹಪುರಮನಕ್ಕೆ ನಿಂ
ನಮೆಚ್ಚಿದುದಂಬೇಡಿಕೊಳ್ಳೆಂಬುದುಮಾವುದುಮನಾನೊಲ್ಲೆನೆನಗುತ್ತರಮಧುರ

ಯಂದಯೆಗೆಯ್ಯಿಪೆಂದುಬಿನ್ನವಿಸೆರಾಮದೇವರೆಂದರುತ್ತರಮಥುರೆಯನಾಳ್ವಮ
ಧುವಿಂಗಮರೇಂದ್ರನಿತ್ತಶೂಲಾಯುಧಂಮಾಱುವಕ್ಕದಮೇಲೆಬಿಟ್ಟಿಕ್ಕಿದೊಡೆಸಾಸಿ
ರ್ವ್ವರಂಕೊಂದುಮಗುಳ್ದುಕಯ್ಗೆಬರ್ಪ್ಪುದದಲ್ಲದೆಯುಮಾತನತನೂಭವಂಲವ
ಣಾರ್ಣ್ಣವನೆಂಬವಂರಾವಣನಮೊಮ್ಮನವನನಾರುಂಗೆಲಲ್ಬಾರದುನೀನಾಪೊಳಲೊ
ಳೆಂತಿರ್ದ್ದಪೆಯೆನೆಶತ್ರುಘ್ನನಾಗ್ರಹದಿನದನಬೇಡಿಕೊಳ್ವುದುಂಲಕ್ಷ್ಮೀಧರಂತಂನವ
ಜ್ರಕವಚಮುಮಂ ಸಾಗರಾವರ್ತ್ತಶರಾಸನಮು ಮನಗ್ನಿಮುಖಶಿಲೀಮುಖಂಗ
ಳುಮಂಕೊಟ್ಟುಕಳಿಪುವುದುಂಮಹಾಬಲಸಮೇತನಾಗಿಪೋಗಿಪುಣ್ಯಭಾಗೆಯೆಂಬ
ತೊಱೆಯನೆಯ್ದಿತನ್ನದೀತೀರದೊಳ್ಬೀಡಂಬಿಟ್ಟಿರ್ಪ್ಪುದುಂಗುಪ್ತಚರನೋರ್ವ್ವನತಿ
ತ್ವರಿತಗತಿಯಿಂಬಂದುದೂತಾವನತಮಸ್ತಕಂ ॥

ಕಂ ॥ ಮಧುಮಥುರೆಯೊಳಿರೆಶೂಲಾ ।
ಯುಧವಾಪುರವರದಪೂರ್ವ್ವನಂದನವನದೊ ॥
ಳ್ಮಧುವುಂತಾನುಂರತಿಸುಖ ।
ಮಧುಸೇವಾಮತ್ತರತ್ತಮೆಯ್ಮಱೆದಿರ್ದ್ದರ್ ॥ 56

ವ ॥ ಎಂದುಬಿನ್ನವಿಸೆಶತ್ರುಘ್ನಂಮನದೆಗೊಂಡೊಂದುಲಕ್ಕಕುದುರೆವೆರಸುಧಾಳಿಯಿಟ್ಟು
ಮಧುವಿರ್ದ್ದಬನಮಂಮೂವಳಸಾಗಿಮುತ್ತಿಪೊಱವೊಳಲೊಳದಿರ್ಚ್ಚದರಂಪೇಸೆ
ಕೊಲ್ವುದುಂಮಧುಕೇಳ್ದುವನದಿಂಪೊಱಮಟ್ಟುಯುದ್ಧಂಗೆಯ್ವಸಮಯದೊ
ಳ್ಸೇನಾಪತಿಕೃತಾಂತವಕ್ತ್ರಂಮಧುತನೂಭವನಪ್ಪಲವಣಾರ್ಣ್ಣವನಜೀವನಮಂ
ಬಡವಾನಳನಂತೆತವಿಸಿಕೃತಾಂತವಕ್ತ್ರಕ್ಕೆಸೋವತಂಮಾಳ್ಪುದುಮದಂಕಂಡು
ಮಧುಮುಳಿದುಬರೆಶತ್ರುಘ್ನಂಕಾದಲೆಯುತ್ತಿರ್ಪ್ಪುದುಂತನ್ನಶೂಲಾಯುಧಮತ್ತಲಿ
ರ್ದ್ದುದುಮಂತನ್ನಸುತಂಸತ್ತುದುಮಂಬಗೆದುತಂನಸಾವಂನಿಶ್ಚಯಿಸಿಕೈದುವಿಂಗೆ
ಕಯ್ಯನುದ್ಯದೆವಿರೋಧಿಬಲದಾಯುಧಕ್ಕೆಮೆಯ್ಯನೊಪ್ಪಿಸಿತಂನಕುಂತಲಮಂ
ಪಂಚಮುಷ್ಟಿಯಿಂಪಱಿದುಕೊಂಡುಬಾಹ್ಯಾಭ್ಯಂತರಪರಿಗ್ರಹಪರಿತ್ಯಾಗಂಗೆಯ್ದು
ಮಹಾವ್ರತಮನೇಱಿಸಿಕೊಂಡುಸನ್ಯಸನದಿಂಪ್ರಾಣಪರಿತ್ಯಾಗಂಗೆಯ್ದುಸನತ್ಕುಮಾ
ರಕಲ್ಪಕ್ಕೆಸಂದನಿತ್ತಲ್ ॥

ಕಂ ॥ ಪಗೆಯಂಸಾಧಿಸಿರಿಪುವನಿ ।
ತೆಗಿತ್ತುವೈಧವ್ಯದೀಕ್ಷೆಯಂಶತ್ರುಘ್ನಂ ॥
ಬಗೆದಬಗೆಕೂಡೆಜಯಲ ।
ಕ್ಷ್ಮಿಗೆವಲ್ಲಭನಾಗಿಮಥುರೆಯೊಳ್ಸುಖಮಿರ್ದ್ದಂ ॥ 57

ವ ॥ ಇತ್ತವಿಜಯಾರ್ದ್ಧಪರ್ವ್ವತದದಕ್ಷಿಣಶ್ರೇಣಿಯರತ್ನಪುರಮನಾಳ್ವರತ್ನರಥಂಗಂ
ಚಂದ್ರಾನನೆಗಂಪುಟ್ಟಿದಕನ್ಯಾರತ್ನಮಂಮನೋರಮೆಯನಾರ್ಗ್ಗೆಕುಡುವಮೆಂದು

ನಾರದನೆಂಬೆಸಗೊಳ್ವುದುಂತ್ರಿಖಂಡಮಂಡಲಾಧಿಪತಿಯಪ್ಪಲಕ್ಷ್ಮೀಧರಂಗೆಕುಡುವು
ದೆನೆರತ್ನರಥನಮಕ್ಕಳಪ್ಪಹರಿಯುಂ ಮನೋವೇಗನುಂಮೊದಲಾಗೆಲ್ಲರುಂಕೇಳ್ದು
ಕಲುಷವಶಗತರಾಗಿ ॥

ಕಂ ॥ ಕೆಳೆಯಪಗೆಯೊಡನೆಪಗೆಯಂ ।
ಕಳೆದುೞಿವುದುಗೆಟ್ಟುಕೂಸುಗೊಟ್ಟನುನೆಯಮಂ ॥
ಬೞಯಿಸುವುದೆಂದುನುಡಿದೀ ।
ಗಳಪಂನಂಮಳವನೞಿಯಲೊಡರಿಸಿನುಡಿದಂ ॥ 58

ವ ॥ ಎಂದುಕಿಡೆನುಡಿದುಪೊಱಮಡಿಸಿಕಳೆಯೆ ಕಡುಮುೞಿದುನಾರದಂಮನೋರಮೆಯ
ರೂಪುಮಂಪಟದೊಳ್ಬರೆದುಲಕ್ಷ್ಮಣಂಗೆತೋಱಿತಂನಂಪರಿಭವಿಸಿದುದುಮಂಪೇೞೆ
ಕೇಳ್ದು ॥

ಕಂ ॥ ನೆಲನೆಡೆನೆಱೆಯದುಭೂಚರ ।
ಬಲಕ್ಕೆಖೇಚರಬಲಕ್ಕೆನಭಮೆಯ್ದದೆನೆ ॥
ಬ್ಬಲಭದ್ರಯುತಂಲಕ್ಷ್ಮಣಂ ।
ನಲಂಪ್ಪೈಬಲನೆತ್ತಿಮುತ್ತಿದಂತತ್ಪುರಮಂ ॥ 59

ವ ॥ ಅಂತುರತ್ನಪುರಮಂಮುತ್ತುವುದುಂರತ್ನರಥಂತಂನಮಕ್ಕಳ್ವೆರಸುಮಹಾಯು
ದ್ಧಂಗೆಯ್ದುವಿರಥನಾಗಿಪೆಂಸೀಯೆಂಬಂನನೆಪರಿತಂದು ॥

ಕಂ ॥ ಕಡುಗಲಿತನದಿಂದೆನ್ನಂ ।
ಬಿಡೆನುಡಿದಪೊಡರ್ಪ್ಪನುೞಿದುಬೆಳ್ಳೆರಳೆಯವೋ ॥
ಲ್ಕಡುಗಲಿಗಳಾದಿರೆನುತುಂ ।
ತೊಡೆಯಂಪೊಯ್ದಾರ್ದ್ದುನಾರದಂನರ್ತ್ತಿಸಿದಂ ॥ 60

ವ ॥ ಅಂತುಮುಟ್ಟೆಮೂದಲಿಸೆಪೋಗಲಡೆಗೆಟ್ಟುಮಗಳ್ದುಬಂದುಲಕ್ಷ್ಮಣಂಗೆಪೊಡಮ
ಟ್ಟುಮನೋರಮೆಯಂಕೊಟ್ಟುರಾಮಂಗೆಶ್ರೀಕಾಂತೆಯಂಕೊಟ್ಟಾಳ್ವೆಸನನಪ್ಪ
ಕೆಯ್ವುದುಮಾತಂವೆರಸುದಕ್ಷಿಣಶ್ರೇಣಿಯೆಲ್ಲಮಂಬಾಯ್ಕೆೞಿಸಿನಿಖಿಲತ್ರಿಖಂಡವಲ್ಲ
ಭನಾಗಿವಿಶಲ್ಯಾಸುಂದರಿಯುಂ ರೂಪವತಿಯುಂ ವನಮಾಲೆಯುಂ ಕಲ್ಯಾಣಮಾಲೆ
ಯುಂ ರತ್ನಮಾಲೆಯುಂ ಜಿತಪದ್ಮೆಯುಂ ಅಭಯಮತಿಯುಂ ಮನೋರಮೆಯು
ಮೆಂಬೆಣ್ಬರ್ಕ್ಕಂನೆಯರ್ಗ್ಗಂಮಹಾದೇವಿಪಟ್ಟಂಗಟ್ಟಿ ॥

ಕಂ ॥ ಇವರಾದಿಯಾಗೆಲಕ್ಷ್ಮಣ ।
ನವಾರ್ಯ್ಯಶೌರ್ಯ್ಯಂವಿವಾಹಮಾಂಗಲ್ಯಮಹೋ ॥
ತ್ಸವದಿಂಪದಿನಾಱ್ಸಾಸಿರ ।
ಮವರೋಧವಧೂಜನಕ್ಕೆವಲ್ಲಭನಾದಂ ॥ 61

ವ ॥ ಆಮಹಾಬಲಪರಾಕ್ರಮನಪ್ಪರಾಘವದೇವನುಂಜನಕಸುತೆಯುಂ ಪ್ರಭಾವತಿಯುಂ
ರತಿಯುಂ ಶ್ರೀಕಾಂತೆಯುಮೆಂಬೀನಾಲ್ವರ್ಮಹಾದೇವಿಯರ್ಮೊದಲಾಗೆಣ್ಛಾಸಿ
ರಮಂತಃಪುರಕ್ಕಧಿಪನಾದನಿಂತುರಾಮಲಕ್ಷ್ಮಣರ್ಪಲಕಾಲಂರಾಜ್ಯಸುಖಮನನು
ಭವಿಸುತ್ತುಮಿರೆಲಕ್ಷ್ಮಣನಮನೋವಲ್ಲಭೆವಿಶಲ್ಯಾಸುಂದರಿಗೆಶ್ರೀವರಂ ರೂಪವತಿಗೆ
ಪೃಥ್ವೀತಿಲಕಂ ವನಮಾಲೆಗರ್ಜ್ಜುನಂ ಕಲ್ಯಾಣಮಾಲೆಗೆಮಂಗಳಂ ರತ್ನಮಾಲೆಗೆ
ಶ್ರೀಕೇಶಿ ಜಿತಪದ್ಮೆಗೆವಿಮಲಪ್ರಭಂ ಅಭಯಮತಿಗೆಸತ್ಯಕೀರ್ತ್ತಿ ಮನೋರಮೆಗೆ
ಸುಪಾರ್ಶ್ವನೆಂಬಮಕ್ಕಳಾದರಿಂತರ್ಧಚಕ್ರವರ್ತ್ತಿಯಮಕ್ಕಳೆಣ್ಬರುಮನುದಿನಪ್ರ
ವರ್ಧಮಾನಮನೋಹರಾಕಾರರಾಗಿಬಳೆಯುತ್ತುಮಿರೆಮತ್ತಿತ್ತಲ್ ॥

ಕಂ ॥ ಜನಕಸುತೆನಾಲ್ಕುನೀರ್ಮ್ಮಂ ।
ದುನಾಡೆಬೆಳ್ವಸದನಂವಿರಾಜಿಸೆಕಾಂಚೀ ॥
ನಿನದಂಕ್ಕೈಮಿಗೆಲಕ್ಷ್ಮೀ ।
ವನಿತೆಯವೋಲ್ಸಜ್ಜೆವನೆಗೆಬಿಜಯಂಗೆಯ್ದಳ್ ॥ 62

ವ ॥ ಅಂತುಸೊಳ್ಗೆವಂದುನಿಶಾವಸಾನಸಮಯದೊಳ್ ॥

ಕಂ ॥ ಶರಭದ್ವಿತಯಂನಿಜಮುಖ ।
ಸರೋಜಮಂಬಂದುಪುಗುವುದಂಪುಷ್ಪಕದಿಂ ॥
ಧರಣಿಗೆಬಿಳ್ತ್ತುಪೂರ್ವದನಾ ।
ಹರಿಣೇಕ್ಷಣೆಸೀತೆಕಂಡಳೆರಡುಂಕನಸಂ ॥ 63

ವ ॥ ಅಂತುಕಂಡಾಸ್ವಪ್ನಂಗಳಂರಾಮಸ್ವಾಮಿಗೆಪೇಳ್ವುದುಂ ॥

ಕಂ ॥ ಅಮಿತಪರಾಕ್ರಮರಿವರೆನಿ ।
ಪಮಳ್ಗಳ್ಪಡೆವೆಶರಭಯುಗದರ್ಶನದಿಂ ॥
ಕಮಳಾನನೆಮತ್ತಿನಕನ ।
ಸುಮನೋಹರಮಲ್ತುಖೇದಮಂಪುಟ್ಟಿಸುಗುಂ ॥ 64

ವ ॥ ಎಂದುಕನಸಿನಫಲಮಂಪೇಳೆಕೇಳ್ದಿರ್ವ್ವರುಂಮೆಯ್ವೆರ್ಚ್ಚಿಸುಖಿಸುತ್ತುಮಿರೆಕೆಲವು
ದಿವಸಕ್ಕೆಸೀತೆಗೆಗರ್ಭಚಿಹ್ನಂಗಳ್ತೋಱುವುದುಮಾಮಹಾನುಭಾವೆಗೆಜಿನಪೂಜೋ
ತ್ಸವಮಂಮಾಳ್ಪಬಯಕೆಸಮನಿಸಿಜಿನಮಹಾಮಹಮಂಮಹೇಂದ್ರೋದ್ಯಾನದಜಿ
ನಾಲಯಂಗಳೊಳೆಲ್ಲಮನುದಿನಂಮಾಡುತ್ತುಮಿರಲೊಂದುದಿವಸಂ ॥

ಕಂ ॥ ಕಟ್ಟಿದುದಂಕಳಿವವರಾ ।
ರ್ನ್ನೆಟ್ಟನೆಸತ್ಪಥದೊಳೊಸಗೆಯುಂಪೇವಸವೇ ॥
ರ್ಬ್ಬೆಟ್ಟಿವುದಂಸೂಚಿಪವ್ರೋ ।
ಲ್ಪುಟ್ಟಿದುದಾಸತಿಗೆದಕ್ಷಿಣಾಕ್ಷಿಸ್ಪಂದಂ ॥ 65

ವ ॥ ಆಗಳಾದುನ್ನರ್ಯಯಕ್ಕೆ ಸೀತೆಭಯುಸ್ಥೆಯಾಗಿಗೃಹಮಹತ್ತರನಂಕರೆದಾರೇನಂಪೇಡಿ ದೊಡವಗ್ಗಿರ್ಬೇಡಿದುದಂಕುಡೆಂದುಪೇಳ್ದು ತಾನುಮನುದಿನಂಜಿನಾಭಿಷೇಕಮುಮಂ ಜಿನಪೂಜೆಗಳುಮಂಮಾಡುತ್ತುಮಿರಲನ್ನೆಗಮಿತ್ತಲ್ ॥

ಮಸ್ರ ॥ ಉಜಿದಂಡಾಧ್ಯಕ್ಷಕಂಪಾಮರಕುಲದೊಳಗೋರ್ವ್ವಂಬಿಸುಟ್ಟೋಪಳಂಮ ।
ತ್ತುಬದಿಂಗಳ್ವೀಗೆಕೂಡಿದ್ದಿರವನಜಿದುದಂಡಕ್ಕೆ ಸರ್ವ್ವಸ್ವಮಂಬ ॥
ಳ್ಕುಬುವಂನಂಪೇಡಲಂದೊಕ್ಕಲಿಗರಬಳಗಂತಂಮೊಳೊಂದಾಗಿಲೋಕ ।
ಕ್ಕೆಬೆಯುಂರಾಮಂಗೆನಾಮಿಂಮೊರೆಯಿಡುವವೆನುತ್ತುಂದಯೋಧ್ಯಕ್ಕೆ ಬಂದರ್ ॥ 66

ವ ॥ ಅಂತುಜನಪದಜನಂಬಂದವಸರಂಬಡೆದರಮನೆಯಂ ಪೊಕ್ಕು ರಾಮಂಗೆತಂಮ ಬಂ ದಕಾಯರ್ಯಮಂಬಿನ್ನವಿಪುದುಮದಂವಿಚಾರಿಸಿನ್ಯಾಯದಿಂಸಂತೋಷಮಪ್ಪಂತವ ರ್ಗೆನುಡಿಯಲನಿತರೊಳ್ಮಾಣದೆಮತ್ತಮೊಕ್ಕಲಿಗನತಲೆಯೊಳ್ಮರುಳಂಟೆಂಬುದಂ ನಂಬಿವಿಮಾಡಿರಾಘವಂಗಿಂತೆಂದರ್ ॥

ಚ ॥ ವ್ಯಸನಿದುರಾತ್ಮನಪ್ಪದನುಜಂಕರವೆಡ್ಡವೆನಿಪ್ಪಸೀತೆಗಾ ।
ಟಿಸಿಪಿಡಿದುಯ್ದುನಾಬಳಸಿವಾಸದೊಳಿಂನೆಗಮಿರ್ದ್ದಳಂವಿಚಾ ॥
ರಿಸದೊಡಗೂಡಿಮುಂನಿನವೊಲಿಪ್ಪುದುತಕ್ಕುದೆಲೋಕಸೀಮೆಯುಂ ।
ವಸುಧೆಗಧೀಶನೇಳಿಸುವುದುಂಪ್ರತಿಪಾಳಿಪರಾರೊಧರ್ಮ್ಮಮಂ ॥ 67

ವ ॥ ಅಂತುಮಲ್ಲದೆದುರಾಚಾರನಪ್ಪರಾವಣನಕೆಲದೊಳಿರ್ದ್ದಜಾನಕಿಯುಂತಂದುಮಹಾ ದೇವಿಪಟ್ಟಂಗಟ್ಟಿಕೈಕೊಂಡಿದ್ದಿರಂತಪ್ಪೊಡದುವುಂದೋಷಮಾಗಲೆವೇಳ್ಕುಮೆನ ಲದಂರಾಮಂಕೇಳ್ದು ॥

ಕಂ ॥ ಜನಮೆಂದಂತುಟೆಭಾವಿಸ ।
ದನಯಮನಾಂನೆಗಳ್ದೆನೆಂದುಪಶ್ಚಾತ್ತಾಪಂ ॥
ತನಗಧಿಕಮಾಗೆರಘುನಂ ।
ದನನುಬ್ಬರಮೆನಿಸಿತಳೆದನಂದುಬ್ಬೆಗಮಂ ॥ 68

ಜಸಮುಂಧರ್ಮ್ಮಮುಮಳಿವಂ ।
ತೆಸಗುವುದಿಳೆಕೆಯ್ವೆನೆಂದುವೈದೇಹಿಯುಮಂ ॥
ಬಿಸುಡಲಗೆದಂಮನುಮಂ ।
ಕಸಮುದ್ಭವರಾರುಮುಚಿತಮಂವಿಚಾರುವರೇ ॥ 69

ವ ॥ ಅಂತುರಾಮಸ್ವಾಮಿಸೀತಾದೇವಿಗತಿಸ್ನೇಹಿತನಾಗಿಯುಂಜನಾಪವಾದಕ್ಕೆಸೆಡೆದುಪ
ರಿಹರಿಸಲೊಡರಿಸಿಲಕ್ಷ್ಮಣನಂಬರಿಸಿಕಟ್ಟೇಕಾಂತದೊಳಾವ್ಯತಿಕರಮನಱಿಪೆಸಾ
ಮಿತ್ರಿಕೇಳ್ದು ಕಡುಮುಳಿದುನಿಂಮಡಿಗಳವಿವೇಕಿಗಳಂತರ್ತ್ಥನಾಶಾದಿವಚನಪಂಚ
ಕಮಂನುಡಿಯಲಾಗದಿದನಿಂತೇಕೆನುಡಿವಿರೆಂದುಮತ್ತಮಿಂತೆಂದಂ ॥

ಕಂ ॥ ಸತಿಸೀತಾದೇವಿಪತಿ ।
ವ್ರತಾದಿಗುಣರತ್ನಭೂಷಣಾಲಂಕೃತೆತ ॥
ತ್ವತಿಯೊಳವಗುಣಮನೂರ್ಜ್ಜಿತ ।
ಮತಿಗಳ್ನಿಂಮನ್ನರುಸಿರ್ವುದನುಚಿತಮಲ್ತೇ ॥ 70

ವ ॥ ಎನೆಲಕ್ಷ್ಮಣಂಗೆರಾಮಸ್ವಾಮಿಯಿಂತೆಂದಂ ॥

ಕಂ ॥ ಪುರುದೇವಂಮೊದಲಾಗಿರೆ ।
ದೊರೆವೆತ್ತಿಕ್ಷ್ವಾಕುವಂಶದವನೀಶರೊಳಾಂ ॥
ಬರವಿಲ್ಲದುಶ್ಚರಿತ್ರಂ ।
ದೊರೆಕೊಂಡಂದೆಂನಪೌರುಷಂದೊರೆಗಿಡದೇ ॥ 71

ವ ॥ ಅದಱಿಂನೀನಿದಂಮಾರ್ಕ್ಕೊಳ್ಳದಿರೆಂಬುದುಂಲಕ್ಷ್ಮೀಧರನಿಂತೆಂದಂ ॥

ಕಂ ॥ ಸೀತೆಗುಣಂಗಿಡೆಸಕಲಧ ।
ರಾತಳಮೊಡನೞಿಗುಮಲ್ಲದಂದಾಸತಿಯುಂ ॥
ಪ್ರೀತಿಯಿನರ್ಚ್ಚಿಸಿದಿವಿಜ ।
ವ್ರಾತಂಕಱಿಗುಮೆನರೇಂದ್ರಪೂವಿನಮಳೆಯಂ ॥ 72

ವ ॥ ಎಂದೆನಿತಾನುಂರಾಮಸ್ವಾಮಿಗೆ ನುಡಿದೀಪೊಲ್ಲಮಾತಂಪರೆಪಿದೊಕ್ಕಲಿಗರ ನಾಲಗೆ
ಯಂಕಿೞ್ತಿಕ್ಕುವೆನೆಂಬುದುಂಲಕ್ಷ್ಮಣನಕಯ್ಯಂಪಿಡಿದಿನ್ನೊಂದುಮಂಮಾರ್ಕ್ಕೊಳ್ಳ
ದಿರೆಂದುತಂನಮೇಲೆಸೂರುಳ್ವಮಾನ್ನುಡಿಯದಂತುಮಾಡಿಕೃತಾಂತವಕ್ತ್ರನಂ
ಕರೆದುಸೀತೆಯ:ನೋರ್ವ್ವಳನೆಬೇಗಮುಯ್ದುಭೀಮಾಟವಿಯೊಳಿಕ್ಕಿಬಾಪೋಗೆಂದು
ವೇಳ್ವುದುಮಾಮಾತಂಲಕ್ಷ್ಮಣಂಕೇಳ್ದುತಲ್ಲಣಿಸಿರಾಮಸ್ವಾಮಿಯುಪಾದಾರವಿಂದ
ಕ್ಕೆವಿನತನಾಗಿಮತ್ತಮಿಂತೆಂದಂ ॥

ಚ ॥ ಜನಕತನೂಜೆನೆಟ್ಟನೆಮಹಾಸತಿಗರ್ಭಿಣಿಪಾಪಭೀರುಕಾ ।
ನನಮತಿರೌದ್ರಮಲ್ಲಪಃಗಂಜದೆಪಾತಕಮಕ್ಕುಮೆಂಬುದಂ ॥
ನೆನೆಯದೆಬಾಯ್ಗೆವಂದತೆಱದಿಂನೆಱರೆಂದೊಡೆಕೇಳ್ದುಪಟ್ಟವೆ ।
ಟ್ಟನೆಬಿಸುಡೆಂದುನಿಷ್ಕರುಣವೃತ್ತಿಯಿನಿಂತುಸಿರಲ್ಕೆತಕ್ಕುದೇ ॥ 73

ವ ॥ ಎಂದುನುಡಿದಳಲ್ಲದೆಸೀತಾದೇವಿಯುಂ ಪತಿವ್ರತಾಗುಣಮಣಿಮಂಡನೆಯುನಟ್ಟಿಕಳಿ
ಯದೆನಗೆಕರುಣಿಸಿ ಕ್ಷಮಿಯಿಸುವುದೆನೆ ರಾಘವನಿಂತೆಂದಂ ॥

ಕಂ ॥ ಪೞಿಯಕ್ಕೆ ಪಾಪಮಕ್ಕೆ ಮ ।
ಪೞಂಗೞಿವುವೆನೆನಗೆಕೊರ್ಪ್ಪನುಸಿರದಿರಿಂನೆಂ ॥
ದೞಲದೆಸೀತೆಯುಮಂಬಲ ।
ನುೞಿದಂಲೋಕಾಪವಾದಭೀರುವೊರಾಮಂ ॥ 74

ವ ॥ ಅಂತುಸಾಮಿತ್ರಿಯನುಪ್ಪೆಗಂಬಡದಿರೆಂದುಬಾರಿಸಲೊಡಂ ಸಭೆಯಿನೆರ್ದ್ದುಪೋಪು
ದುಮನಂತರಂ ಕೃತಾಂತವಕ್ತ್ರಂಗೆ ರಾಮಸ್ವಾಮಿಯೆಂದನಯೋಧ್ಯಾನಗರದಸಂ
ಮೇದಪರ್ವ್ವತದಸಮಿಪದೆಡೆಯಜಿನಾಲಯಂಗಳಂವಂದಿಸಿ ನಿಂಮಬಯಕೆಯಂ
ತೀರ್ಚ್ಚಿಬರ್ಪ್ಪಂಬನ್ನಿಮೆಂದು ಸೀತೆಯನೊಡಗೊಂಡುಪೋಗಿ ಭೀಮಾಟವಿಯೊಳ್ನಿ
ರ್ಜ್ಜಂತುಕಪ್ರದೇಶದೊಳ್ಬಿಟ್ಟುಬರ್ಪ್ಪುದೆನೆ ॥

ಕಂ ॥ ಸೇವೆಯೆಕಷ್ಟಂಸೀತಾ ।
ದೇವಿಯನೀಡಾಡಿಬರ್ಪ್ಪುದಡವಿಯೊಳೆನೆದೋ ॥
ಪಾವಿಳಮನಕ್ಕೆ ರಾಘವ ।
ದೇವಂಗೆಕೃತಾಂತವಕ್ತ್ರನದನೇಗೊಂಡಂ ॥ 75

ವ ॥ ಅಂತುಬೆಸನಂಕೈಕೊಂಡುಸೀತಾದೇವಿಯಕೆಲಕ್ಕೆವಂದು ॥

ಕಂ ॥ ರಾಮಂಕಲಿಸಿದತೆಱದಿಂ ।
ರಾಮೆಗೆಪುಸಿನುಡಿದುರಥಮನೇಱಿಸಿಕೊಂಡಾ ॥
ಭೀಮಾಟವಿಯಂಕರಿಪಱಿ ।
ಭೀಮಾಟವನಮಂಕೃತಾಂತಮುಖನೆಯ್ತಂದಂ ॥ 76

ವ ॥ ಆಗಳಾಮಹಾಗಹನಮಂ ಪೊಕ್ಕು ತನ್ಮಧ್ಯನಿರ್ಜ್ಝರವಾರಿಧಾರಾಪರಿಕಲಿತಗಿರಿದರೀಪ್ರ
ದೇಶದೊಳ್ಮಹಾಸತಿಯಂರಥದಿಂದಿೞಿಪಿಮನ್ಯೂದ್ಗತಕಂಠನಾಗಿ ಕಣ್ಣನೀರ್ಗ್ಗಳೆಂನೆಗ
ಪುವಕೃತಾಂತವಕ್ತ್ರನಂಸೀತಾದೇವಿಕಂಡಿದೇಕೆಶೋಕಂಗೆಯ್ವೆ ಪೇಳೆಂದೊಡಾತ
ನೆಂದನಬ್ಬಾನಿಂಮಮೇಲೆಲೋಕವೆಲ್ಲಮಪವಾದಮನಿಟ್ಟೊಡರಸಂನಿಂಮನಡವಿ
ಯೊಳ್ಬಿಟ್ಟುಬರವೇೞ್ದೊಡಿಲ್ಲಿಗೆತಂದೆನೆನೆಸೀತಾದೇವಿಕೇಳ್ದುಮೂರ್ಛೆವೋಗಿಕಿಱಿ
ದಂ ಬೇಗದಿಂಚೇತರಿಸಿಕೃತಾಂತವಕ್ತ್ರಂಗಿಂತೆಂದಳಾರಾಮದೇವಸ್ಸಕಲವಸು
ಧಾತಳಮಂ ನ್ಯಾಯದಿಂ ಪ್ರತಿಪಾಲಿಸುವುದುಮಂದೇವಗುರುಪೂಜೆಯುಮಂಮಱೆ
ಯದಿರ್ಪ್ಪುದುಮಂಜನಾಪವಾದದಿಂದೆಂನಂಬಿಸುಟಂತೆಮಿಥ್ಯಾದೃಷ್ಟಿಗಳನುಡಿ

ಯುಂಕೇಳ್ದರ್ಹತ್ಪರಮೇಶ್ವರ ಶ್ರೀಧರ್ಮ್ಮಮಂಬಿಸುಡದಿರ್ಪ್ಪುದುಮನೆನಗೆದಯೆ
ಗೆಯ್ವುದೆಂಬುದಂಮಱೆಯದೆಪೇಳೆಂದುಬಾಷ್ಪಜಲಲುಳಿತಲೋಚನೆತಲೆಯಂಬಾಗಿ
ಸಿನೆಲನಂಬರೆಯುತ್ತುಮಿರ್ದ್ದಳಂಕೃತಾಂತವಕ್ತ್ರಂನೋಡಿ ॥

ಕಂ ॥ ತರುಣಿಯನಂತರ್ವ್ವ್ಯಾರ್ತ್ತಿಯ ।
ನರಣ್ಯದೊಳ್ಬಿಸುಡವೇಳ್ದೊಡೀಪೆಸನಂಕಾ ॥
ಪುರುಷನನೇಗೊಂಡೆಂಕಿಂ ।
ಕರಭಾವದಿನಪ್ರಶಸ್ತಮಾವುದುಮುಂಟೇ ॥ 77

ವ ॥ ಎಂದು ತಂನಂತಾನೆನಿಂದಿಸಿಕೊಂಡು ಕಂಣನೀರ್ಗ್ಗಳಂಸುರಿಯುತ್ತುಂ ಸೀತಾದೇವಿ
ಗೆಕ್ಷಮಿಯಿಸುವುದೆಂದು ಪೊಡವಟ್ಟುಕೃತಾಂತವಕ್ತ್ರಂಬೀಳ್ಕೊಂಡಯೋಧ್ಯೆಗೆಪೋ
ದನಿತ್ತಲ್ ॥

ಕಂ ॥ ಗುಣವತಿರಾಘವನಂಲ ।
ಕ್ಷ್ಮಣನಂನೆನೆನೆನೆದುಶೋಕಪಾವಕನೆರ್ದೆಯೊ ॥
ಳ್ಮಣಿಯದೆದಳ್ಳಿಸೆಕಣ್ಗಳ ।
ಪೊಣರಿಂಕಣ್ಬನಿಗಳಂಸ್ಮರೆದೆಸೆಗೆಟ್ಟಿರ್ದ್ದಳ್ ॥ 78

ವ ॥ ಅಂತಿಷ್ಟವಿಯೋಗವಿಕಳೆಯಾದಸೀತೆದಶದಿಶಾಮುಖದತ್ತದೃಷ್ಟಿ ಪೆಱರಾರುಮಂ
ಕಾಣದೆ ॥

ಕಂ ॥ ಜಿನಮುನಿಯಂಪೆಱವುಂಪ್ರಾ ।
ಣಿನಿಕಾಯಮನಕ್ಕೆನಾಡೆನೋಯಿಸಿದೆಂಮು ॥
ನ್ನಿನಜನ್ಮದೊಳಂತಲ್ಲದೊ ।
ಡೆನಗಿನಿಪಿರಿದೊಂದವಸ್ಥೆಬಱಿದಾದಪುದೇ ॥ 79

ವ ॥ ಎಂದು ಜಿನಾಗಮಕುಶಲೆಯಪ್ಪುದಱಿಂತಂನಂತಾನೆನಿಂದಿಸಿಕೊಂಡುಸಂತೈಸಿ ॥

ಚ ॥ ಅಡವಿಯೊಳೂರೊಳಾವೆಡೆಯೊಳಾದೊಡಮೆಂನರುವಪ್ಪಕಾಲದೊ ।
ಳ್ಕಿಡುವರೆಕೇಡುಮೂಡಿದವರಪ್ಪೊಡೆನಿರ್ಮ್ಮಲಜೈನಧರ್ಮ್ಮಮಂ ॥
ಪಿಡಿದುಪಸರ್ಗ್ಗಮಂಬಗೆಯದಾಗಮದಿಷ್ಟದಿನೆಂನಜೀವಮಂ ।
ಬಿಡುವೆನವೋಘಮೆಂದುತೊಱೆದಳ್ಜನಕಾತ್ಮಜೆಶೋಕವೇಗಮಂ ॥ 80

ವ ॥ ಅಂತುವಿಗತಶೋಕವೇಗೆಯಾಗಿಮಹಾಋಷಿಮುಖ್ಯರ್ಗ್ಗಳುಂಮಹಾಗಹನದೊಳ್ತಪಂ
ಗೆಯ್ದಪವರ್ಗ್ಗಮಂ ಸಾಧಿಸುವರದಱಿಂದಮೆನಗಮೀಪ್ರದೇಶದೊಳಿರ್ತ್ತುತ್ತಮ
ನಿಸಿತ್ತನೋಂತುತಪಸಿದ್ಧಿಮಂತ್ಯದೊಳ್ಸನ್ಯಸನದಿಂಪರತ್ರೆಯಂಸಾಧಿಸುವೆನೆಂ
ದುಪರಮಾಗಮಭಾವನೆಯಿಂದಿರ್ಪ್ಪಿನಂನೆಗಮಾಪ್ರಸ್ತಾವದೊಳ್ ॥

ಕಂ ॥ ಜನಕತನೂಜೆಯಸುಕೃತಮೆ ।
ಮನುಷ್ಯರೂಪಾಗಿಬರ್ಪ್ಪತೆಱದಿಂನೃಪನಂ ॥
ದನಸೋರ್ವ್ವನಾಮಹಾಕಾ ।
ನನಕ್ಕೆ ಬಲಸಹಿತಮಾನೆವೇಂಟೆಗೆಬಂದಂ ॥ 81

ವ ॥ ಅಂತು ಬಂದನತಿದೂರದೊಳ್ಕಂಡು ॥

ಕಂ ॥ ವನದೇವತೆಯೋಲಕ್ಷ್ಮೀ ।
ವನಿತೆಯೊದಿವದಿಂದಮಿೞಿದಮೇನಕೆಯೋಮೇ ॥
ಳೆನುತುಂಜಾನಕಿಯಂಲೋ ।
ಚನಪಥದೊಳ್ಮುಂದೆವಜ್ರಜಂಘಂಕಂಡಂ ॥ 82

ವ ॥ ಅಂತುಕಂಡೆಯ್ದೆವಂದುವಿಸ್ಮಯಸ್ತಿಮಿತಲೋಚನನಬ್ಬಾನೀಮಾರ್ಗ್ಗೆನಿಮಿತ್ತಮೀ
ಕಾನನದೊಳಿರ್ದ್ದಿರೆಂಬುದುಮನವದ್ಯಚರಿತನೆಂದಱಿದುಮಿಂತೆಂದಳಾಂ ಜನಕತ
ನೂಜೆಯೆಂಪ್ರಭಾಮಂಡಲನನುಜೆಗೆಂರಾಮಸ್ವಾಮಿಯಭಾರ್ಯ್ಯೆಯೆಂಸೀತಾದೇ
ವಿಯೆಂಬೆನೆಂನಮೇಲೆ ಜನಪದಜನಂಪೊಲ್ಲನಪ್ಪರಾವಣನುಯ್ದುಳೆಂತೆಂದುವಿಚಾರಿಸ
ದೆಮಹಾದೇವಿಪಟ್ಟಂಗಟ್ಟುವುದಾವವುಚಿತಮೆಂದಿಟ್ಟಳಮಿಟ್ಟನುಡಿಯೆ ಲೋಕಾಪ
ವಾದಕ್ಕೆ ರಾಮಸ್ವಾಮಿನಾಣ್ಚಿ ಕೃತಾಂತವಕ್ತ್ರನೆಂಬಪಡೆವಳನಂಕರೆದುಸಂಮೇದಂ
ಮೊದಲಾಗೆತೀರ್ತ್ಥಸ್ಥಾನಂಗಳಜಿನಾಲಯಂಗಳಂವಂದಿಸಿಬರ್ಪ್ಪಮೆಂದುನಂಬೆನುಡಿ
ದೊಡಗೊಂಡುಯ್ದು ಬಿಸುಟುಬರ್ಪ್ಪುದೆಂದೊಡಾತನೆಂನಂನಿರಪರಾಧಿಯನಿಲ್ಲಿಬಿಸು
ಟುಪೋದನೆಂದು ಮಹಾದೇವಿಕಂಣೀರ್ಗ್ಗಳೆಂನೆಗಪೆ ॥

ಕಂ ॥ ಪವಣಿಲ್ಲದಸೀತೆಯಶೋ ।
ಕವಹ್ನಿಯಂಸೂಕ್ತಸಲಿಲದಿಂನಂದಿಸಿದಂ ॥
ಭವವಿಭವದಚಪಳತೆಯಂ ।
ಸವಿಸ್ತರಂತಿಳಿಪಿವಜ್ರಜಂಘನರೇಂದ್ರಂ ॥ 83

ವ ॥ ಅನಂತರಮಿಂತೆಂದನಾಂ ಸೋಮವಂಶದರಸಂದ್ವಿರದವಾಹನಂಗಂಸುಬಂಧುಮಹಾ
ದೇವಿಗಂಪುಟ್ಟಿದೆಂ ವಜ್ರಜಂಘನೆಂಬೆಂಪುಂಡರೀಕಿಣೀಪುರಮನಾಳ್ವೆಂ ಜಿನಧರ್ಮ್ಮ
ದದೆಸೆಯಿಂ ನೀಮೆನಗೆತಂಗೆಯಿರಪ್ಪಿರ್ಬ್ಬಿಜಯಂಗೆಯ್ಯಿಮೆಂದು ಸಿವಿಗೆಯನೇಱಿ
ಸಿಕೊಂಡು ಪೋಗಿಕಾಂತಾರಮಂಕಳೆದನುಕ್ರಮದಿಂಪುಂಡರೀಕಿಣೀಪುರಮನೆಯ್ದಿನಿ
ಜರಾಜಭವನಮಂಪೊಕ್ಕುಶೀಲವತಿವೆಸರನಿಜಾಗ್ರಜೆಯುಮಾಡಕೊಯ್ದು ರಾಮ
ದೇವರಭಾರ್ಯ್ಯೆಸೀತಾದೇವಿಜನಕತನೂಜೆಪ್ರಭಾಮಂಡಲನತಂಗೆನಗಂಜಿನಧ

ರ್ಮ್ಮದದೆಸೆಯಿಂದೊಡಹುಟ್ಟಿದಳೆಂದು ಸಮರ್ಪ್ಪಿಸಿಸೀತಾದೇವಿಯುಂನಿಮಗೆಪ್ರಭಾ
ಮಂಡಲನಿಂದಗ್ಗಳವರ್ಗೆಬೆಸಕೆಯ್ವೆನೆಂದುಸಂತೋಷಂಬಡೆನುಡಿದುವಜ್ರಜಂಘಂತ
ನ್ನಮಾಡಕ್ಕೆಪೋದನಿತ್ತಲ್ ॥

ಕಂ ॥ ಜಿನಮುನಿಗಾಹಾರಮನನು ।
ದಿನಮಿತ್ತುಜಿನೇಂದ್ರಪೂಜೆಯುಮಂಮಾಡುತ್ತುಂ ॥
ಮನವೊಸೆದುಶೀಲವತಿಯುಂ ।
ಜನಕಜೆಯುಂಕೂಡಿದಿವಸಮಂನಡೆಯಿಸಿದರ್ ॥ 84

ವ ॥ ಮತ್ತಿತ್ತಕೃತಾಂತವಕ್ತ್ರಂಪೋಗಿ ರಾಘವನಂಕಂಡುಸೀತೆಕಲಿಸಿದಮಾತೆಲ್ಲಮಂಪೇ
ಳೆಕೇಳ್ದುಮೂರ್ಛೆವೋಗಿನೀಡಱಿನೆಚ್ಚತ್ತುಮತಿಪ್ರಳಾಪಂಗೆಯ್ಯೆ ಲಕ್ಷ್ಮಣನುಂ
ಶೋಕವಿಕಲನಾಗೆಕೃತಾಂತವಕ್ತ್ರನವರಶೋಕಮನುಪಶಮಿಸುವುದುಂ ರಾಮಚಂ
ದ್ರಂಚಂದ್ರಕಳಶನೆಂಬಸೀತಾಮಹತ್ತರನಂಕರೆದು ॥

ಚ ॥ ಜಿನಪತಿಪೂಜೆಯುಂಮುನಿಜನಕ್ಕೆಚತುರ್ವ್ವಿಧಮಪ್ಪದಾನಮುಂ ।
ಜನಕತನೂಜೆಪೇಳ್ದತೆಱದಿಂನೆಗಳೆಂದುಪುರೋಹಿತಂಗೆಸ ॥
ಜ್ಜನಮಹಿತಂಗೆಪೇಳ್ದನಭಿರಾಮನಶೇಷಕಳಾಕಳಾಪಕೋ ।
ಕನದಭವಂಪರಾರ್ತ್ಥಚರಿತಂಪ್ರಥಿತಂಕವಿತಾಮನೋಹರಂ ॥ 85

ಗದ್ಯ ॥ ಇದುಪರಮಜಿನಸಮಯಕುಮುದಿನೀಶರಚ್ಚಂದ್ರಬಾಳಚಂದ್ರ ಮುನೀಂದ್ರಚರ
ಣನಖಕಿರಣಚಂದ್ರಿಕಾಚಕೋರಂಭಾರತೀಕರ್ಣ್ಣಪೂರಂ ಶ್ರೀಮದಭಿನವಪಂಪವಿರ
ಚಿತಮಪ್ಪರಾಮಚಂದ್ರಚರಿತಪುರಾಣದೊಳ್ಸೀತಾಪರಿತ್ಯಾಗವರ್ಣ್ಣನಂ ಪಂಚದಶಾ
ಶ್ವಾಸಂ ॥

ಷೋಡಶಾಶ್ವಾಸ ಪ್ರಾರಂಭಃ.

ಕಂ ॥ ಶ್ರೀಕಾಂತಂವಿಶದಯಶಃ ।
ಶ್ರೀಕಾಂತಂಚಂದ್ರಕಳಶನಂನಿಯಮಿಸಿದಂ ॥
ಸ್ವೀಕೃತಸತ್ವಂಗಂದೂ ।
ರೀಕೃತದೋಷಾನುಷಂಗನಭಿನವಪಂಪಂ ॥ 1

ವ ॥ ಅಂತುನಿಯಮಿಸುವುದುಂಪುರೋಹಿತಂಚಂದ್ರಕಳಶನನುದಿನಮಾಮಾರ್ಗ್ಗದಿಂನೆಗ
ಳುತ್ತುಮಿರ್ಪ್ಪುದಮಿತ್ತಲ್ ॥

ಕಂ ॥ ಆಸೀತೆಪೂರ್ಣ್ಣಮೆನೆನವ ।
ಮಾಸಂಶ್ರವಣಪ್ರಸಕ್ತನೆನೆತುಹಿನಕರಂ ॥
ಮಾಸವನಿಭರಂಶ್ರಾವಣ ।
ಮಾಸದಪುಣ್ಣಿಮೆಯುಪಗಲೊಳಮಳಂಪೆತ್ತಳ್ ॥ 2

ವ ॥ ಅಂತಮಳಂಪೆತ್ತುಮಹಾವಿಭೂತಿಯಿಂ ಜಾತಕರ್ಮ್ಮೋತ್ಸವಮಂಮಾಡಿಶುಭದಿನ
ಮುಹೂರ್ತ್ತದೊಳಿರ್ವ್ವರ್ತ್ತನೂಭವರ್ಗ್ಗಂಲವನುಮಂಕುಶನುಮೆಂದು ಪೆಸರನಿ
ಟ್ಟುಶುಕ್ಲಪಕ್ಷದಚಂದ್ರನಂತನುದಿನೋಪಚಯಮನಪ್ಪುಕೆಯ್ದುಶೈಶವಮನಧಿಕ
ರಿಸಿದಿಂಬಳಿಕ್ಕೆ ॥

ಕಂ ॥ ಅವರಂಸಿದ್ಧಾರ್ತ್ಥಂಕಲಿ ।
ಸುವುದುಂಕಲ್ತರ್ನ್ನಿರಂಕುಶರ್ತ್ತಮನ್ನ ॥
ರ್ಬ್ಭುವನದೊಳೆಲ್ಲೆಂಟಿನೆಗಂ ।
ಲವಾಂಕುಶರ್ಕ್ಕಲೆಗಳಂಚತುಷ್ಷಷ್ಟಿಗಳಂ ॥ 3

ವ ॥ ಮತ್ತಂಶಸ್ತ್ರಾಸ್ತ್ರವಿದ್ಯೆಗಳೆಲ್ಲಮಂನೆಱೆಯೆಕಲ್ತುನವಯೌವನಪ್ರಾಪ್ತರಪ್ಪುದುಂ
ವಜ್ರಜಂಘಂಶಶಿಮಾಲೆಯೆಂಬ ತನ್ನ ಮಗಳ್ವೆರಸುಮೂವತ್ತಿರ್ವ್ವರ್ಕ್ಕನೆಯರಂ
ಲವಂಗೆಕಲ್ಯಾಣೋತ್ಸವದಿಂಮದುವೆಯಂ ಮಾಡಿದಿಂಬಳಿಯಮಂಕುಶಂಗೆಪೃಥ್ವೀ
ಪುರಮನಾಳ್ವಪೃಥುಗಮಾತನರಸಿಯಪ್ಪಮೃತಮತಿಗಂಪುಟ್ಟಿದಕನಕಮಾಲೆಯುಂ
ಪೇಳಿಪೆರ್ಗ್ಗಡೆಗಳನಟ್ಟುವುದುಮಾತನಿಂತೆಂದಂ ॥

ಕಂ ॥ ಎನ್ನಮಗಳಂಮದೀಯಕು ।
ಲೋನ್ನತಿಪೆಱಪಿಂಗುವಂನವಜ್ಞಾತಕುಲಂ ॥
ಗೆನ್ನನೆರೆದಟ್ಟಿದಂಗಡ ।
ತನ್ನಳವಂವಜ್ರಜಂಘನೇಂನಚ್ಚಿದನೋ ॥ 4

ವ ॥ ಎಂದುಬಂದವೆರ್ಗ್ಗಡೆಗಳಂವಿಸರ್ಜ್ಜಿಸುವುದುಮವರ್ವ್ವಂದವನದುರ್ವ್ವಿನಯವಚನ
ಮಂಬಿನ್ನವಿಸೆವಜ್ರಜಂಘನತಿಕುಪಿತನಾಗಿಮೇಲೆತ್ತಿಬರ್ಪ್ಪುದುಂವ್ಯಾಘ್ರರಥನೆಂಬ
ಪೃಥುವಿನಪರಮಬಂಧುಮುಳಿದುಪೋರ್ಕ್ಕೆಗೆಬರ್ಪ್ಪುದುಮವನನವಯವದೊಳೆ
ಕಾದಿಪಿಡಿದುಕಡುಕೆಯ್ದುವಿಱಿವೇಲೆತ್ತಿರ್ಪ್ಪುದುಂಪೃಥುಕೇಳ್ದುತಾನುಮಿದಿರೆ
